ಗಂಟೆಗೆ ಉತ್ತರ ಕೊಡಬೇಕು ಎನ್ನುವ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆ limitation ನಲ್ಲಿ ಮುಗಿಸಬೇಕು ಎನ್ನುವುದು ನನ್ನ ವಿನಂತಿಯಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ರೂಲಿಂಗ್ ಪಾರ್ಟಿ ಸದಸ್ಯರಲ್ಲಿ ಯಾರಾದರೂ ಒಬ್ಬಿಬ್ಬರು ಮಾತನಾಡಲು ತೀರಾ ಅಪೇಕ್ಷೆಪಟ್ಟರೆ 5–10 ನಿಮಿಷ ಮಾತ್ರ ಮಾತನಾಡುತ್ತಾರೆ. ಅದನ್ನು ನಾನು request ಮಾಡಿಕೊಳ್ಳುತ್ತೇನೆ. ವಿರೋಧ ಪಕ್ಷದಲ್ಲಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

ಶ್ರಿ ಸಿದ್ದರಾಮಯ್ಯ : ಇನ್ನೂ ಕೆಲವರು ಹೊಸ M.L.A ಗಳು ಬಹಳ ಆಸಕ್ತಿಯಿಂದ ಈ debate ನಲ್ಲಿ ಭಾಗವಹಿಸಬೇಕು ಎಂದು ಇದ್ದಾರೆ. ಅದಕ್ಕಾಗಿ ಹೆಸರುಗಳನ್ನು ಕೊಟ್ಟಿದ್ದಾರೆ. ಎಷ್ಟು ಜನರು ಮಾತನಾಡುವುದಕ್ಕೆ ಎಷ್ಟು ಟೈಂ ಕೊಡಬೇಕು ಎನ್ನುವುದನ್ನು ನಿಮಗೆ ಬಿಡುತ್ತೇನೆ. ಆದರೆ ಅವರಿಗೆ ಅವಕಾಶ ಮಾಡಿಕೊಡುವುದು ಒಳ್ಳೆಯದು ಎಂದು ಅನ್ನಿಸುತ್ತದೆ. ಅವರೆಲ್ಲರೂ ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : 10–10 ನಿಮಿಷಗಳ ಅವಧಿಯಲ್ಲಿ ಮಾತನಾಡಿದರೆ ಮಾತನಾಡಲಿಕ್ಕೆ ಅವಕಾಶ ಕೊಡಬಹುದು. ಆದರೆ ಆ limitation ಅನ್ನು ಅವರು ದಾಟಬಾರದು ಅಷ್ಟೇ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಚರ್ಚ್ ಮೇಲೆ ದಾಳಿ ನಡೆದ ಬಗ್ಗೆ ಸರ್ಕಾರದ ಪರವಾಗಿ ಒಂದು statement ಕೊಡುತ್ತೇವೆ ಎಂದು ಹೇಳಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಸದನ ಮುಗಿಯುವುದ ರೊಳಗಾಗಿ ನಾನು statement ಮಾಡುತ್ತೇನೆ. ಅದನ್ನು ಸಿ.ಒ.ಡಿ.ಗೆ refer ಮಾಡುತ್ತಿದ್ದೇನೆ. ಉಳಿದೆಲ್ಲ ವಿವರವನ್ನು ನಾನು ಉತ್ತರ ಕೊಡುವ ಸಮಯದಲ್ಲಿ ಕೊಡುತ್ತೇನೆ.

ಅಧ್ಯಕ್ಷರು : ಈಗ ವಿರೂಪಾಕ್ಷಪ್ಪನವರು ಪ್ರಾರಂಭ ಮಾಡಲಿ.

1. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮುಂದುವರೆದ ಚರ್ಚೆ :

ಶ್ರೀ ಕೆ.ಎಂ.ವಿರೂಪಾಕ್ಷಪ್ಪ (ಚನ್ನಗಿರಿ) : ಸನ್ಮಾನ್ಯ ಸಭಾಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ವಿಶೇಷ ಕಾಳಜಿಯನ್ನು ಹೊಂದಿ, ಸರ್ಕಾರದವರು ವಿಶೇಷ ಅಧಿವೇಶನವನ್ನು ಕರೆದು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ವಿರೋಧ ಪಕ್ಷದವರು ಅದಕ್ಕೆ ಸಹಕಾರವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಮೊದಲಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನಮ್ಮ ರಾಜ್ಯದಲ್ಲಿ ಅತಿ ಹೆಚ್ಚು ಜನ ಗ್ರಾಮೀಣ ಪ್ರದೇಶಗಳಲ್ಲಿ ವಾಸ ಮಾಡುತ್ತಾರೆ. ರಾಜ್ಯದಲ್ಲಿ ಸುಮಾರು 59, 630 ಜನವಸತಿಗಳಿದ್ದು, ಬಡತನದ ರೇಖೆಗಿಂತ ಕೆಳಗಿರತಕ್ಕಂಥ ಜನರ ಸಂಖ್ಯೆ ಬಹಳಷ್ಟಿದೆ. ಅವರು ಆರ್ಥಿಕವಾಗಿ ಸಬಲರಾದಾಗ ಮಾತ್ರ ಗ್ರಾಮೀಣ ಪ್ರದೇಶದಲ್ಲಿ ನಾವು ಅಭಿವೃದ್ಧಿಯನ್ನು ಕಾಣುವುದಕ್ಕೆ ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ ರಾಜ್ಯ ಸರ್ಕಾರ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವುದರ ಮೂಲಕ ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಎನ್ನುವ ಮೂರು ವ್ಯವಸ್ಥೆಗಳನ್ನು ತಂದಿದೆ. ಆದರೆ ಅಲ್ಲಿ ಬಹಳಷ್ಟು ಕಾಮಗಾರಿಗಳು overlap ಆಗತಕ್ಕಂಥ ಸಂದರ್ಭ ಇದೆ. ಈಗ ಅಲ್ಲಿ ಒಂದೇ ರೀತಿಯಾದಂಥ ಕೆಲವು ಯೋಜನೆಗಳನ್ನು ಕೊಡುತ್ತಿದ್ದಾರೆ. ಆದರೆ, ಜಿಲ್ಲಾ ಪಂಚಾಯಿತಿಗಳಿಗೆ ಬೇರೆ ಯೋಜನೆಗಳನ್ನು ಕೊಡಬೇಕು, ತಾಲ್ಲೂಕು ಪಂಚಾಯಿತಿಗಳಿಗೆ ಬೇರೆ ಯೋಜನೆಗಳನ್ನು ಕೊಡಬೇಕು, ಗ್ರಾಮ ಪಂಚಾಯಿತಿಗಳಿಗೆ ಬೇರೆ ಯೋಜನೆಗಳನ್ನು ಕೊಡಬೇಕು. ಈ ರೀತಿಯಾದಂಥ ನಿಯಮಾವಳಿಗಳನ್ನು ರೂಪಿಸದೇ ಹೋದರೆ, ಒಂದೇ ರೀತಿಯಾದಂಥ ಕಾಮಗಾರಿಗಳು ಎಲ್ಲ ಕಡೆಯೂ ನಡೆಯುವುದರಿಂದ ಬಹಳಷ್ಟು ಅವ್ಯವಹಾರಗಳು ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಒಟ್ಟಾಗಿ ಸಹಿ ಮಾಡತಕ್ಕಂಥ ವ್ಯವಸ್ಥೆ ಇದೆ. ಈ ವ್ಯವಸ್ಥೆಯನ್ನು ತಪ್ಪಿಸಬೇಕು. ಈಗ ಅಲ್ಲಿ ಏನಾಗುತ್ತಿದೆ ಎಂದರೆ, ಅಧ್ಯಕ್ಷ ಅವಿದ್ಯಾವಂತನಾಗಿದ್ದರೆ ಅಲ್ಲಿ ಕಾರ್ಯದರ್ಶಿಯೇ ಎಲ್ಲ ರೀತಿಯಾದಂಥ ಅಧಿಕಾರವನ್ನು ಚಲಾಯಿಸುತ್ತಾನೆ. ಆದ್ದರಿಂದ ಇಬ್ಬರ ಸಹಿ ಬೇಕೆಂದರೆ, E.O. ಅಥವಾ Assistant Executive Engineer ಗಳಿಗೆ ಸಹಿಯನ್ನು ಮಾಡತಕ್ಕಂಥ ಅಧಿಕಾರವನ್ನು ಕೊಟ್ಟು, ಅಧ್ಯಕ್ಷ ಮತ್ತು ಕಾರ್ಯದರ್ಶಿ ಸಹಿಯನ್ನು ಮಾಡುವಂಥ ಪದ್ಧತಿಯನ್ನು ತಪ್ಪಿಸಬೇಕು

ಎಂದು ಹೇಳುತ್ತೇನೆ. ಈಗ ನಾವು ಗ್ರಾಮೀಣ ಪ್ರದೇಶಗಳ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ. ಮಾಡಿದ ಮೇಲೆ ಇದಕ್ಕೆ ನಾವು ಏನಾದರೂ ಒಂದು ರೂಪವನ್ನು ಕೊಡಬೇಕು. ಅದಕ್ಕಾಗಿ ಗ್ರಾಮಗಳನ್ನು ಸಂಪೂರ್ಣ ಅಭಿವೃದ್ಧಿ ಮಾಡಲು micro level planning ಮತ್ತು prospective planning ಮಾಡಿಕೊಂಡು World Bank ನಿಂದ ಸಾಲವನ್ನು ಪಡೆದು, ಕೇಂದ್ರ ಸರ್ಕಾರದ ಸಹಕಾರವನ್ನು ಪಡೆದು ನಾವು ಅಭಿವೃದ್ಧಿಯನ್ನು ಪಡಿಸಿದಾಗ ಮಾತ್ರ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು, ಶೌಚಾಲಯಗಳ ಬಗ್ಗೆ ಹೇಳುವುದಾದರೆ, ಇವತ್ತು ಕರ್ನಾಟಕ ಸರ್ಕಾರ ಶೌಚಾಲಯಗಳ ನಿರ್ಮಾಣಕ್ಕಾಗಿ ಸುಮಾರು 729 ಕೋಟಿ ರೂಪಾಯಿಗಳನ್ನು ಕೊಡುತ್ತಿದೆ. ಆದರೆ, B.P.L. card ಹೊಂದಿರುವವರಿಗೆ ಮಾತ್ರ ಸಹಾಯಧನವನ್ನು ಕೊಡುತ್ತಿದ್ದಾರೆ, ಬಾಕಿಯವರಿಗೆ ಕೊಡುತ್ತಿಲ್ಲ. ಅದರಿಂದಾಗಿ ಆ ಕಾರ್ಯಕ್ರಮ ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳುತ್ತಿಲ್ಲ. ಆ ಕಾರ್ಯಕ್ರಮ ಸರಿಯಾಗಿ ಅನುಷ್ಠಾನಗೊಳ್ಳಬೇಕಾದರೆ ಪ್ರತಿಯೊಬ್ಬರಿಗೂ ಶೌಚಾಲಯಗಳನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರದವರು ಸಹಾಯಧನವನ್ನು ಕೊಡಬೇಕು ಮತ್ತು ಗುಂಡಿ ಕೆಲಸಗಳನ್ನು ಮಾಡಿಕೊಳ್ಳುವುದಕ್ಕೆ N.R.E.G.S. ಅನ್ನು ಉಪಯೋಗಿಸಿಕೊಳ್ಳಬೇಕು. ಕೇಂದ್ರ ಸರ್ಕಾರ ಸಾಕಷ್ಟು ಹಣವನ್ನು N.R.E.G.S. ಯೋಜನೆಯಲ್ಲಿ ಕೊಟ್ಟಿದೆ. ಆ ಹಣವನ್ನು ಉಪಯೋಗಿಸಿಕೊಂಡು, ರಾಜ್ಯ ಸರ್ಕಾರ ಶೌಚಾಲಯಗಳ ನಿರ್ಮಾಣಕ್ಕೆ ಸಹಾಯಧನವನ್ನು ಕೊಡಬೇಕು. ಈ ರೀತಿ ಎಲ್ಲರೂ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಳ್ಳುವುದರ ಮೂಲಕ ನಿರ್ಮಲ ಕರ್ನಾಟಕವನ್ನು ರೂಪಿಸುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಸರ್ಕಾರ ಮನಸ್ಸು ಮಾಡಿದರೆ ಈ ರಾಜ್ಯದಲ್ಲಿ ಒಂದೇ ವರ್ಷದಲ್ಲಿ ಎಲ್ಲಾ ಗ್ರಾಮಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎನ್ನುವುದನ್ನು ಹೇಳುತ್ತೇನೆ.

ಇನ್ನು, ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧವಾದ ಕುಡಿಯುವ ನೀರನ್ನು ಕೊಡಬೇಕಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 20,586 B.W.S., 28,359 ಕಿರು ನೀರು ಸರಬರಾಜು. 2.6 ಲಕ್ಷ ಕೈ ಪಂಪುಗಳಿದ್ದು, 40.55 L.P.C.D. ಪ್ರಮಾಣದಲ್ಲಿ 39,125 ಗ್ರಾಮಗಳಿಗೆ ನೀರನ್ನು ಕೊಡುತ್ತಿದ್ದಾರೆ, 20,505 ಗ್ರಾಮಗಳಿಗೆ

20.40 L.P.C.D. ಪ್ರಮಾಣದಲ್ಲಿ ನೀರನ್ನು ಕೊಡುತ್ತಿದ್ದಾರೆ. ಜನವಸತಿ ಗಳಲ್ಲಿನ ನೀರು ಸರಬರಾಜು ಪ್ರಮಾಣವನ್ನು ಕನಿಷ್ಟ 40.55 L.P.C.D. ಗೆ ಏರಿಸಬೇಕಾದಂಥ ಅವಶ್ಯಕತೆ ಇದೆ. ಅದಕ್ಕಾಗಿ ಅಂತರ್ಜಲದ ಕೊಳವೆ ಬಾವಿಗಳನ್ನು ಕೊರೆಯುವುದರ ಬದಲು surface water ಅನ್ನು ಕೊಡತಕ್ಕಂಥದ್ದು ಸೂಕ್ತ. surface water ಇರತಕ್ಕಂಥ ಒಂದು ಕೆರೆಯನ್ನೋ ಅಥವಾ ಬೇರೆ ಮೂಲವನ್ನು ಗುರುತಿಸಿ, ಗುಡ್ಡದ ಮೇಲೆ ಅದನ್ನು ತೆಗೆದುಕೊಂಡು ಹೋಗಿ ಆ ಗುಡ್ಡದಿಂದ direct ಆಗಿ ಕೊಡುವುದರಿಂದ ವಿದ್ಯುಚ್ಛಕ್ತಿ ಉಳಿತಾಯವಾಗುತ್ತದೆ ಮತ್ತು ಶುದ್ಧವಾದ ನೀರನ್ನು ಹಳ್ಳಿಗಳಿಗೆ ಕೊಡುವುದಕ್ಕೆ ಅವಕಾಶವಾಗುತ್ತದೆ. ಆ ದಿಸೆಯಲ್ಲಿ ಸರ್ಕಾರ ಚಿಂತನೆ ಮಾಡಬೇಕು ಎಂದು ಹೇಳುತ್ತೇನೆ.

ಮತ್ತೊಂದು ವಿಚಾರವೆಂದರೆ, ಬೋರ್‌ವೆಲ್‌ಗಳನ್ನು ರೈತರೂ ಕೊರೆಸುತ್ತಾರೆ ಮತ್ತು ಸರ್ಕಾರದಿಂದಲೂ ಕೊರೆಸುತ್ತಾರೆ. ಹೀಗೆ ಕೊರೆಸಿದಂಥ ನೀರು ಬಾರದೇ ಇರುವಂಥ ಕೊಳವೆ ಬಾವಿಗಳನ್ನು ಬಹಳಷ್ಟು ಜನ ಮುಚ್ಚುವುದೇ ಇಲ್ಲ. ಅದಕ್ಕೆ ಹಾಕುವ ಕೇಸಿಂಗ್‌ನ ವ್ಯಾಸ 6 ಇಂಚುಗಳಿದ್ದು, ಅದರ ಕೇಸಿಂಗ್ ಅನ್ನು ತೆಗೆದಂಥ ಸಂದರ್ಭದಲ್ಲಿ 8 ಇಂಚು ವ್ಯಾಸದ ಗುಂಡಿ ಆಗುತ್ತದೆ. ಮಕ್ಕಳು ಆಟವಾಡುತ್ತಾ ಹೋಗಿ ಆ ಗುಂಡಿಗಳಲ್ಲಿ ಬೀಳತಕ್ಕಂಥ ಸಂದರ್ಭಗಳು ಬಹಳಷ್ಟು ಇವೆ. ಆದ್ದರಿಂದ ಆ ಗುಂಡಿಗಳನ್ನು ಕಡ್ಡಾಯವಾಗಿ ಮುಚ್ಚಬೇಕು. ಅದು ಸರ್ಕಾರದಿಂದ ತೆಗೆದಂಥ ಕೊಳವೆ ಬಾವಿಯಾಗಲೀ ಅಥವಾ ರೈತರು ತಮ್ಮ ಹೊಲಗಳಲ್ಲಿ ತೆಗೆಸಿದಂಥ ಕೊಳವೆ ಬಾವಿಯಾಗಲೀ, ಅವುಗಳನ್ನು ಕಡ್ಡಾಯವಾಗಿ ಮುಚ್ಚಬೇಕು ಎನ್ನುವ ನಿಯಮವನ್ನು ಸರ್ಕಾರ ಜಾರಿಗೆ ತರಬೇಕು. ಮುಚ್ಚದೇ ಇರತಕ್ಕಂಥವರಿಗೆ ಸರ್ಕಾರ ಯಾವುದಾದರೂ ಒಂದು ರೀತಿಯಾದಂಥ ಕಠಿಣ ಶಿಕ್ಷೆಯನ್ನಾಗಲೀ ಅಥವಾ fine ಅನ್ನು ಹಾಕತಕ್ಕಂಥ ವ್ಯವಸ್ಥೆಯನ್ನು ಜಾರಿಗೆ ತಂದಾಗ ಮಾತ್ರ ಗುಂಡಿಗಳನ್ನು ಮುಚ್ಚದೇ ಬಿಡುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು, ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ, ಇವತ್ತು ಹಳ್ಳಿಗಳಲ್ಲಿ ವಿದುಚ್ಛಕ್ತಿ ಕಣ್ಣಾಮುಚ್ಚಾಲೆಯಾಡುತ್ತಿದೆ. ಹಳ್ಳಿಗಳಲ್ಲಿ ಬಹಳಷ್ಟು ಜನ ವಿದ್ಯುಚ್ಛಕ್ತಿಯಿಂದ ವಂಚಿತರಾಗಿದ್ದಾರೆ. ಈಗ ದೇವರ ದಯದಿಂದ ಎಲ್ಲ ಡ್ಯಾಂಗಳು ತುಂಬಿವೆ. ಆದ್ದರಿಂದ, ಕನಿಷ್ಟ ಪಕ್ಷ ರಾತ್ರಿ 6 ರಿಂದ ಬೆಳಿಗ್ಗೆ 6 ರವರೆಗೆ single phase ವಿದ್ಯುತ್ತನ್ನು ಕೊಡಲೇಬೇಕು. ಬೆಳಗಿನ ಹೊತ್ತು 5

ಗಂಟೆಗಳ ಕಾಲ three phase ವಿದ್ಯುತ್ತನ್ನು ಕೊಡಬೇಕು. ಆ ರೀತಿ three phase ವಿದ್ಯುತ್ತನ್ನು ಕೊಡುವುದರಿಂದ ಕುಡಿಯುವ ನೀರಿಗೆ, ಪಂಪುಸೆಟ್ಟು ಗಳಿಗೆ, ಹಿಟ್ಟಿನ ಗಿರಣಿಗಳಿಗೆ, ಹಳ್ಳಿಗಳಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಅನುಕೂಲವಾಗುತ್ತದೆ. ವಿದ್ಯುಚ್ಛಕ್ತಿಯನ್ನು ಉಳಿಸುವುದಕ್ಕೆ ಬೀದಿ ದೀಪಗಳಿಗೆ ಸೋಲಾರ್ ದೀಪಗಳನ್ನು ಅಳವಡಿಸತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಜಾರಿಗೆ ತರಬೇಕು. ರೈತರು ಕಳಪೆ ಗುಣಮಟ್ಟದ ಮೋಟಾರ್‌ಗಳನ್ನು ಉಪಯೋಗಿಸು ವುದರಿಂದ ಹೆಚ್ಚು ಕರೆಂಟ್ ವ್ಯಯವಾಗುತ್ತದೆ. ಆದ್ದರಿಂದ ಗುಣಮಟ್ಟದ ಮೋಟಾರ್‌ಗಳನ್ನು ಉಪಯೋಗಿಸುವುದಕ್ಕೆ ಅನುಕೂಲವಾಗುವಂತೆ ಸಾಧ್ಯ ವಾದರೆ ಸರ್ಕಾರ ಅವರಿಗೆ ಸಹಾಯಧನವನ್ನು ಕೊಡಬೇಕು, ಸಹಾಯಧನ ವನ್ನು ಕೊಡಲು ಸಾಧ್ಯವಾಗದೇ ಹೋದರೆ, ರೈತರು ಗುಣಮಟ್ಟದ ಮೋಟಾರ್‌ಗಳನ್ನು ಹಾಕಲು ಸೂಚನೆಯನ್ನಾದರೂ ಕೊಡಬೇಕು. ಸರ್ಕಾರದ ಯೋಜನೆಗಳಾದ ಗಂಗಾ ಕಲ್ಯಾಣ ಯೋಜನೆ, ಕುಡಿಯುವ ನೀರಿನ ಯೋಜನೆ ಇವುಗಳಿಗೆ ಕಡ್ಡಾಯವಾಗಿ ಗುಣಮಟ್ಟದ ಮೋಟಾರ್‌ಗಳನ್ನು ಅಳವಡಿಸುವುದಕ್ಕೆ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕು ಮತ್ತು ಪಟ್ಟಣ ಪ್ರದೇಶಗಳಲ್ಲಿ ಬೀದಿ ದೀಪಗಳಿಗಾಗಿ ಬಹಳಷ್ಟು ವಿದ್ಯುತ್ ಉಪಯೋಗ ವಾಗುತ್ತಿದೆ. ರಾತ್ರಿ 11 ರ ನಂತರ ಬೆಳಕಿನ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಪಟ್ಟಣದ ಬೀದಿ ದೀಪಗಳಿಗೆ L.E.D. control ಗಳನ್ನು ಹಾಕುವುದರ ಮೂಲಕ ಬಹಳಷ್ಟು ವಿದ್ಯುತ್ತನ್ನು ಉಳಿಸುವುದಕ್ಕೆ ಸಾಧ್ಯವಿದೆ. ಆದ್ದರಿಂದ L.E.D. control ಗಳನ್ನು ಎಲ್ಲ ಪಟ್ಟಣಗಳಲ್ಲಿ ಬೀದಿ ದೀಪಗಳಿಗೆ ಅಳವಡಿಸುವುದರಿಂದ ಬಹಳಷ್ಟು ವಿದ್ಯುತ್ತನ್ನು ಉಳಿಸುವುದಕ್ಕೆ ಸಾಧ್ಯವಿದೆ. ಹೀಗೆ ವಿದ್ಯುತ್ತನ್ನು ಉಳಿಸುವುದರ ಮುಖಾಂತರ ಆ ಎಲ್ಲಾ ವಿದ್ಯುತ್ತನ್ನು ಗ್ರಾಮೀಣ ಭಾಗಗಳಿಗೆ ಕೊಡಬೇಕು ಎಂದು ಮನವಿಯನ್ನು ಮಾಡುತ್ತೇನೆ.

ಇವತ್ತು ಕರ್ನಾಟಕ ಸರ್ಕಾರ ಆರೋಗ್ಯದ ವಿಚಾರದಲ್ಲಿ infrastructure ಒದಗಿಸಬೇಕು. ಯಾವುದೇ ಹಳ್ಳಿಗಳಿಗೆ ಹೋದರೆ ಒಳ್ಳೆಒಳ್ಳೆಯ ದೊಡ್ಡ ಆಸ್ಪತ್ರೆಗಳಿವೆ. ಉದಾಹರಣೆಗೆ, ನಮ್ಮ ಸಂತೆಬೆನ್ನೂರಿನಲ್ಲಿ ದೊಡ್ಡ ಆಸ್ಪತ್ರೆ ಎಂದರೆ ಸುಮಾರು 100 ಜನ ರೋಗಿಗಳು ಅಲ್ಲಿಗೆ ಬಂದರೂ ಅಲ್ಲಿ ಮಲಗಿಸಿ ಚಿಕಿತ್ಸೆ ಕೊಡತಕ್ಕಂಥ ವ್ಯವಸ್ಥೆ ಇದೆ. ಆದರೆ, ದೇವರಗುಡಿ ಏನೋ ಕಟ್ಟಿದ್ದೇವೆ, ಆದರೆ, ಕಟ್ಟಿರುವ ದೇವರಗುಡಿಯಲ್ಲಿ ದೇವರೇ ಇಲ್ಲದಿದ್ದರೆ ಹೇಗೆ? ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಲು ಡಾಕ್ಟರುಗಳ ಕೊರತೆ ಇದೆ.

ಡಾಕ್ಟರ್‌ಗಳ ಕೊರತೆ ಏನಾಗಿದೆ ಎಂದರೆ, ಯಾವ ಡಾಕ್ಟರ್‌ಗಳೂ ಸಹ ಗ್ರಾಮೀಣ ಪ್ರದೇಶಕ್ಕೆ ಹೋಗಿ ಕೆಲಸ ಮಾಡಲಿಕ್ಕೆ ಮುಂದೆ ಬರುತ್ತಿಲ್ಲ. ಅದಕ್ಕಾಗಿ ಈ ಸರ್ಕಾರ ಏನು ಮಾಡಬೇಕೆಂದರೆ, ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು ನೇಮಿಸಿಕೊಂಡಂಥ ಡಾಕ್ಟರ್‌ಗಳನ್ನು ಖಾಯಂ ಗೊಳಿಸಿ, ಅವರಿಗೆ ಸಂಬಳವನ್ನೂ ಸಹ ಹೆಚ್ಚಿಗೆ ಮಾಡಬೇಕು. ಇಂಜಿನಿಯರ್‌ಗೆ ಜಾಸ್ತಿ ಸಂಬಳ ಕೊಡುತ್ತೀರಿ, ಡಾಕ್ಟರ್‌ಗೇಕೆ ಹೆಚ್ಚು ಸಂಬಳ ಕೊಡುವುದಿಲ್ಲ? ಒಬ್ಬ ಡಾಕ್ಟರ್ ತನ್ನ ಓದನ್ನು ಸಂಪೂರ್ಣಗೊಳಿಸಿ ಹೊರಗೆ ಬರಲು ಅವನು ಸುಮಾರು ಒಂದೂಕಾಲು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾನೆ. ಇವತ್ತು ಅವನಿಗೆ ಸರ್ಕಾರದಿಂದ 13–14,000 ರೂಪಾಯಿಗಳ ಸಂಬಳ ಕೊಟ್ಟರೆ ಯಾವ ಡಾಕ್ಟರ್ ಸಹ ಸರ್ಕಾರದ ಆಸ್ಪತ್ರೆಗಳಲ್ಲಿ ಕೆಲಸ ಮಾಡಲಿಕ್ಕೆ ಮುಂದೆ ಬರುವುದಿಲ್ಲ. ಆದ್ದರಿಂದ, ಅವನಿಗೆ ಸಂಬಳ ಹೆಚ್ಚು ಮಾಡುವ ಮೂಲಕ ಜಿಲ್ಲಾಧಿಕಾರಿಗಳಿಗೆ ಡಾಕ್ಟರ್‌ಗಳನ್ನು ನೇಮಕ ಮಾಡುವುದಕ್ಕೆ ಅಧಿಕಾರ ಕೊಡುವ ಮೂಲಕ ನೇಮಕ ಮಾಡಿಕೊಂಡ ಡಾಕ್ಟರ್‌ಗಳನ್ನು ಖಾಯಂಗೊಳಿಸುವ ಮೂಲಕ ಹಳ್ಳಿಗಾಡಿನ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬುವ ವ್ಯವಸ್ಥೆಯನ್ನು ಸರ್ಕಾರ ಆದಷ್ಟು ಜಾಗ್ರತೆಯಾಗಿ ಮಾಡಬೇಕೆಂದು ಹೇಳುತ್ತೇನೆ. ಇನ್ನು, ಮನೆಗಳನ್ನು ಬಡವರಿಗೆ ಹಂಚುವುದರ ಬಗ್ಗೆ ಹೇಳುವುದಾದರೆ, ಈ ಬಗ್ಗೆ ನಿನ್ನೆ ಮಾನ್ಯ ಸದಸ್ಯರಾದ ಸಿ.ಎಸ್. ನಾಡಗೌಡರು ಮತ್ತು ಮಹಾದೇವ ಪ್ರಸಾದ್‌ರವರು ಮಾತನಾಡುತ್ತಾ, ಮನೆಗಳನ್ನು ಬಡವರಿಗೆ ಹಂಚುವುದರಲ್ಲಿ ಅವ್ಯವಹಾರವಾಗುತ್ತಿದೆ ಎಂದು ಹೇಳಿದರು. ಕರ್ನಾಟಕದಲ್ಲಿ ಯಡಿಯೂರಪ್ಪ ನವರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಒಂದು ಸಮೀಕ್ಷೆ ಮಾಡಿಸಿದ್ದಾರೆ. ಆ ಸಮೀಕ್ಷೆ ಪ್ರಕಾರ ಅಧಿಕಾರಕ್ಕೆ ಬಂದ ಮೇಲೆ ಒಂದು ಸಮೀಕ್ಷೆ ಮಾಡಿಸಿದ್ದಾರೆ. ಆ ಸಮೀಕ್ಷೆ ಪ್ರಕಾರ ಉದಾಹರಣೆಗೆ, ನನ್ನ ಚನ್ನಗಿರಿ ತಾಲ್ಲೂಕಿನ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ 1800 ನಿವೇಶನರಹಿತರಿದ್ದು 1800 ಗುಡಿಸಲುಗಳಿವೆ ಎಂಬುದು ಆ ಸಮೀಕ್ಷೆಯ ವರದಿ ಇದೆ. ಕಳೆದ ವರ್ಷ ಇದೇ ನಮ್ಮ ತಾಲ್ಲೂಕಿಗೆ ಸುಮಾರು 1800 ಮನೆಗಳನ್ನು ಕೊಟ್ಟಿದ್ದಾರೆ. ಹಾಗಾದರೆ, ಆ ಮನೆಗಳು ಎಲ್ಲಿ ಹೋದವು? ಇವತ್ತೇನಾಗುತ್ತಿದೆ ಎಂದರೆ, ಗ್ರಾಮ ಪಂಚಾಯಿತಿಯ ಸದಸ್ಯರುಗಳು ಆ ಮನೆಗಳನ್ನು ಹಂಚಿಕೊಳ್ಳುತ್ತಾರೆ, ಅವರ ಹಿಂದೆ ಓಡಾಡುವವರಿಗೆ ಹಾಗೆಯೇ ಅವರ ಮನೆಯ ಹಿಂದುಗಡೆ ಒಂದು ಮನೆ, ದನಗಳನ್ನು ಕಟ್ಟಿಕೊಳ್ಳುವುದಕ್ಕೆ ಒಂದು ಮನೆ ಈ ರೀತಿ

ಮನೆಗಳನ್ನು ಹಂಚಿಕೊಳ್ಳುತ್ತಿರುವುದರಿಂದ ಇವತ್ತು ಎಷ್ಟೇ ಮನೆಗಳನ್ನು ಕೊಟ್ಟರೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ, ಸಮೀಕ್ಷೆ ಮಾಡಿದ ಪ್ರಕಾರ ಕಡ್ಡಾಯವಾಗಿ ನಿವೇಶನ ರಹಿತರಿಗೆ ಮತ್ತು ಗುಡಿಸಲಿನಲ್ಲಿ ವಾಸ ಮಾಡುತ್ತಿರುವವರಿಗೆ, ಆ ಪಟ್ಟಿಯಲ್ಲಿರುವವರಿಗೆ ಮನೆ ಕೊಡಬೇಕೆಂದು ಸರ್ಕಾರ ಆದೇಶ ಹೊರಡಿಸಬೇಕು ಮತ್ತು ಕಟ್ಟುನಿಟ್ಟಾದ ಕ್ರಮ ತೆಗೆದು ಕೊಳ್ಳಬೇಕು. ಎಸ್.ಎಂ. ಕೃಷ್ಣರವರು ಈ ರಾಜ್ಯದ ಮುಖ್ಯಮಂತ್ರಿಯಾ ಗಿದ್ದಾಗ ಒಂದು ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದರು. ಏನೆಂದರೆ, ಮನೆಗಳನ್ನು ಈ ರೀತಿಯಾಗಿ ಹಂಚಿದರೆ ದುರುಪಯೋಗವಾಗುತ್ತದೆ, ಆದ್ದರಿಂದ, ಹೊಸದಾಗಿ ಸೈಟ್‌ಗಳನ್ನು ಖರೀದಿಸಿ, ಗುಂಪು ಮನೆಗಳನ್ನು ಮಾಡಿದಾಗ ಈ ಹಣ ದುರುಪಯೋಗವಾಗದೆ ಸದ್ವಿನಿಯೋಗವಾಗುತ್ತದೆಂದು ಮಾಡಿದ್ದರು. ಆ ದಿಸೆಯಲ್ಲಿ ಸರ್ಕಾರ ಕರ್ನಾಟಕ ರಾಜ್ಯವನ್ನು ಗುಡಿಸಲು ರಹಿತ ರಾಜ್ಯವನ್ನಾಗಿ ಮಾಡಬೇಕು. ಅದಕ್ಕಾಗಿ ನಿವೇಶನರಹಿತರಿಗೆ, ಏನು ಗುರುತು ಮಾಡಿದ್ದಾರೆ, ಅಂಥವರಿಗೆ ಕಡ್ಡಾಯವಾಗಿ ಮನೆಗಳನ್ನು ಕೊಡುವ ವ್ಯವಸ್ಥೆಯಾಗಬೇಕು. ಅವರಿಗೆ ಕೊಡುವುದು ಮುಗಿದಮೇಲೆ, ನಮ್ಮ ದೇಶದಲ್ಲಿ ವಿಭಕ್ತ ಕುಟುಂಬಗಳು ಅವಿಭಕ್ತ ಕುಟುಂಬಗಳಾಗುತ್ತವೆ, ಆದ್ದರಿಂದ, ಅಂಥ ವಿಭಕ್ತ ಕುಟುಂಬಗಳಿಗೆ ಹೊಸದಾಗಿ ನಿವೇಶನ ಖರೀದಿಸಿ ಗುಂಪು ಮನೆಗಳನ್ನು ನಿರ್ಮಿಸಿ ಅದನ್ನು ಹಂಚುವುದರ ಮೂಲಕ ಆಗತಕ್ಕ ದುರುಪಯೋಗವನ್ನು ತಪ್ಪಿಸಬೇಕು. ಇನ್ನು, ಗ್ರಾಮೀಣ ರಸ್ತೆಗಳ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ 1 ಲಕ್ಷದ 47 ಸಾವಿರದ 212 ಕಿ.ಮೀ. ರಸ್ತೆ ಇದ್ದು, 39 ಸಾವಿರದ 394 ಕಿ.ಮೀ. ಡಾಂಬರೀಕರಣ ರಸ್ತೆ ಇದೆ. 24 ಸಾವಿರದ 700 ಕಿ.ಮೀ. ಮಣ್ಣಿನ ರಸ್ತೆ ಇದೆ. 83 ಸಾವಿರದ 88 ಕಿ.ಮೀ. ಮಣ್ಣಿನ ರಸ್ತೆ ಇದೆ. ಈಗ ರೈತರು ತಮ್ಮ ಹೊಲಗಳಿಗೆ ಹೋಗುವುದಕ್ಕೆ ರಸ್ತೆಗಳಿಲ್ಲದೆ ಬಹಳಷ್ಟು ತೊಂದರೆ ಇದೆ. APMC ಗಳಲ್ಲಿ ಸಾಕಷ್ಟು ಹಣವಿದೆ. ರೈತರ ಹೊಲಗಳಿಗೆ ಹೋಗುವ ರಸ್ತೆಗಳಿಗೆ 10% ಹಣವನ್ನು APMC ಗಳಿಂದ ಭರಿಸುವುದಕ್ಕೆ ಮಾತ್ರ ಅವಕಾಶವಿದೆ. ದಯಮಾಡಿ ಈ ಸರ್ಕಾರ APMC ಯಲ್ಲಿರುವ 50% ಹಣವನ್ನು ರೈತರು ಹೊಲಗಳಿಗೆ ಹೋಗುವ ರಸ್ತೆಗಳಿಗೆ ಉಪಯೋಗ ಮಾಡುವುದಕ್ಕೆ ಒಂದು ಆದೇಶ ಕೊಟ್ಟರೆ ರೈತರು ಹೋಗುವ ಬಹಳಷ್ಟು ಹೊಲಗಳಿಗೆ ರಸ್ತೆಗಳಾಗುತ್ತದೆ. ಅದರಿಂದ ಗ್ರಾಮೀಣ ಜನರ ಬದುಕು ಹಸನಾಗುತ್ತದೆ. ರೈತರ ಉಪಕಸುಬುಗಳಾದ ಹೈನುಗಾರಿಕೆ, ಕುರಿ

ಕೋಳಿ ಸಾಕಾಣಿಕೆಯನ್ನು ಮಾಡುವುದಕ್ಕೆ ಬಹಳಷ್ಟು ಉತ್ತೇಜನವನ್ನು ರೈತರಿಗೆ ಕೊಡಬೇಕು. ಆ ರೀತಿ ಉತ್ತೇಜನ ಕೊಡುವುದರಿಂದ ರೈತರು ತಮ್ಮ ಹೊಲಗಳಿಗೆ ಗೊಬ್ಬರವನ್ನು ಉತ್ಪತ್ತಿ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇನ್ನು, ಮಾರುಕಟ್ಟೆ ಬಗ್ಗೆ ಹೇಳುವುದಾದರೆ, ರೈತ ಬೆಳೆದಂಥ ಬೆಳೆಗಳಿಗೆ ಸರಿಯಾದ ರೀತಿಯಲ್ಲಿ ಬೆಲೆ ಸಿಗುತ್ತಿಲ್ಲ. ಅದಕ್ಕಾಗಿ ಅವನು ಬೆಳೆದ ಬೆಳೆಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ. ಆದ್ದರಿಂದ, ಅದಕ್ಕಾಗಿ Cold storage ಮಾಡಬೇಕು. ಪ್ರತಿಯೊಂದು ಹೋಬಳಿಗೆ ಒಂದು Cold storage ಮಾಡಬೇಕು ಮತ್ತು ಉಗ್ರಾಣಗಳನ್ನು ನಿರ್ಮಾಣ ಮಾಡಬೇಕು. ಉಗ್ರಾಣಗಳನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರವೇನೂ ಹಣ ಕೊಡಬೇಕಾಗಿಲ್ಲ. ಇವತ್ತು ಎಲ್ಲಾ APMC ಗಳೂ ಸದೃಢವಾಗಿವೆ. APMC ಗಳಲ್ಲಿ ಸಾಕಷ್ಟು ಹಣವಿದೆ. ಉದಾಹರಣೆಗೆ, ಚನ್ನಗಿರಿ ತಾಲ್ಲೂಕಿನಲ್ಲಿ ಉಗ್ರಾಣ ನಿರ್ಮಾಣಕ್ಕಾಗಿ APMC ಯಲ್ಲಿರುವ ಹಣವನ್ನು ಬಳಸಿಕೊಂಡು 27 ಉಗ್ರಾಣಗಳನ್ನು ಕಟ್ಟಿಸುತ್ತಿದ್ದೇವೆ. ಆ ರೀತಿ ಹೋಬಳಿಗೊಂಡು ದೊಡ್ಡ ದೊಡ್ಡ ಉಗ್ರಾಣಗಳನ್ನು ಕಟ್ಟುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು, ನೀರಾವರಿ ಸಲುವಾಗಿ ಸಣ್ಣ ಮತ್ತು ಬೃಹತ್ ಯೋಜನೆಗಳನ್ನು ರೂಪಿಸಿ ರೈತರ ಒಣ ಭೂಮಿಗೆ ನೀರನ್ನು ಕೊಡುವ ಮೂಲಕ ರೈತನ ಬಾಳನ್ನು ಹಸನು ಮಾಡಬೇಕು. ಗ್ರಾಮೀಣ ಪ್ರದೇಶದಿಂದ ನಗರಕ್ಕೆ ವಲಸೆ ಬರುವವರನ್ನು ತಪ್ಪಿಸಬೇಕಾದರೆ ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ವೃತ್ತಿಪರ ಯೋಜನೆಗಳನ್ನು ಪ್ರಾರಂಭಿಸಬೇಕೆಂದು ಹೇಳುತ್ತೇನೆ. ಸರ್ಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ವಿಧಾನ ಸಭೆಯಲ್ಲಿ ಚರ್ಚಿಸಿ, ಅಭಿಪ್ರಾಯ ಪಡೆದು ಅನುಷ್ಠಾನಗೊಳಿಸುವ ಮನಸ್ಸಿದೆ. ಆದರೆ, ಇವುಗಳನ್ನೆಲ್ಲ ಅನುಷ್ಠಾನಗೊಳಿಸಲು ಹಣದ ಅವಶ್ಯಕತೆ ಇದೆ. ಅದಕ್ಕಾಗಿ ಸರ್ಕಾರ ಯೋಜನೆಗಳನ್ನು ರೂಪಿಸಿ ವಿಶ್ವಬ್ಯಾಂಕ್‌ನಿಂದ ಸಾಲ ಪಡೆದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಮಾಡಬೇಕೆಂದು ಸಲಹೆ ಮಾಡುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ(ಜಮಖಂಡಿ) : ಮಾನ್ಯ ಅಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕುರಿತು ವಿಶೇಷವಾದ ಅಧಿವೇಶನದ ಮೂಲಕ ಇಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿರುವ ಸನ್ಮಾನ್ಯ

ಮುಖ್ಯಮಂತ್ರಿಯವರಿಗೆ, ಸಮಯದ ಅಭಾವವಿದ್ದರೂ ಕೂಡ 10 ನಿಮಿಷಗಳಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಿರುವ ತಮಗೂ ಸಹ ಹಾರ್ದಿಕ ಅಭಿನಂದನೆ ಸಲ್ಲಿಸುತ್ತೇನೆ. ಗ್ರಾಮೀಣಾಭಿವೃದ್ಧಿಯಾಗದಿದ್ದರೆ ದೊಡ್ಡ ಪ್ರಮಾಣದಲ್ಲಿ ನಮ್ಮ ದೇಶದ ಮುಂದಿನ ಭವಿಷ್ಯ ಹಾಳಾಗುತ್ತದೆನ್ನುವುದನ್ನು ಅನೇಕ ಚಿಂತಕರು ಅನೇಕ ಸಂದರ್ಭಗಳಲ್ಲಿ ವ್ಯಕ್ತಪಡಿಸಿದ್ದಾರೆ. ಬಹುಶಃ ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಪೂರ್ವದಲ್ಲಿ,

"ಜಬ್ ಕಿಸಾನ್ ಉಠೇಗ ತಬ್ ಗಾಂವ್ ಉಠೇಗ
ಜಬ್ ಗಾಂವ್ ಉಠೇಗ ತಬ್ ದೇಶ್ ಉಠೇಗ"

ಎನ್ನುವ ಮಾತನ್ನು ಹೇಳಿದ್ದರು. ಆದರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಪಂಚವಾರ್ಷಿಕ ಯೋಜನೆಗಳಲ್ಲಿ ಗ್ರಾಮೀಣ ಭಾಗವನ್ನು ಮರೆತರು. ಅದೇ ರೀತಿ, ಕೃಷಿಗೆ ಸಿಗಬೇಕಾದ ಆದ್ಯತೆ ಸಿಗದಿರುವುದರಿಂದ ನಮ್ಮ ದೇಶ ಈ ಸ್ಥಿತಿಗೆ ಬಂದಿದೆ ಎಂದೆನಿಸುತ್ತದೆ. ದೊಡ್ಡ ಪ್ರಮಾಣದಲ್ಲಿ ಹಳ್ಳಿಗಳಿಂದ ಜನ ಇವತ್ತು ನಗರಗಳಿಗೆ ಆಕರ್ಷಿತರಾಗಿ ಬರುತ್ತಿದ್ದು, ಸಂಪೂರ್ಣವಾಗಿ ಕೃಷಿ ಉದ್ಯೋಗವನ್ನು ಬಿಡುವಂಥ ಪರಿಸ್ಥಿತಿ ಬಂದಿದೆ. ತಮಗೆಲ್ಲ ಗೊತ್ತಿರುವ ಹಾಗೆ, ಈ ದೇಶ ಕೃಷಿ ಪ್ರಧಾನವಾದ ರಾಷ್ಟ್ರವಾಗಿದೆ. ನಮ್ಮ ದೇಶದ ಬೆನ್ನೆಲುಬು ರೈತ ಎಂದು ಹೇಳುತ್ತೇವೆ. ಸುಮಾರು 100 ಕ್ಕೆ 70 ರಷ್ಟು ಜನ ಕೃಷಿ ಮಾಡಿಕೊಂಡು ಒಕ್ಕಲುತನ ಮಾಡಿಕೊಂಡು ಹಳ್ಳಿಯಲ್ಲಿ ವಾಸವಿದ್ದರೂ ಗ್ರಾಮೀಣ ಭಾಗದಲ್ಲಿ ಆ ಜನರಿಗೆ ಕೃಷಿಗೆ ಸಿಗಬೇಕಾದ ಆದ್ಯತೆ, ಸೌಲಭ್ಯಗಳು ಸಿಗದೆ ಮತ್ತು ಮೂಲಭೂತವಾದ ಸೌಕರ್ಯಗಳ ಕೊರತೆಯಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಜನರು ಗ್ರಾಮಾಂತರ ಪ್ರದೇಶವನ್ನು ತೊರೆದು ನಗರಗಳಲ್ಲಿ ವಾಸ ಮಾಡುವ ಪರಿಸ್ಥಿತಿ ಉಂಟಾಗಿದೆ. ಸಂಪನ್ಮೂಲಗಳ ಕೊರತೆಯ ಬಗ್ಗೆ ಈಗಾಗಲೇ ಹಿರಿಯ ಸದಸ್ಯರು ಹೇಳಿದ ಹಾಗೆ, ಶುದ್ಧವಾದ ಕುಡಿಯುವ ನೀರಿಗೆ ಮೊದಲನೇ ಆದ್ಯತೆ ಕೊಟ್ಟು, ನೀರನ್ನು ಕೊಡಬೇಕಾಗುತ್ತದೆ. ಸ್ವಾತಂತ್ರ್ಯ ಬಂದು 63 ವರ್ಷಗಳಾದರೂ ಕೂಡ ಜನರಿಗೆ ಶುದ್ಧವಾದ ಕುಡಿಯುವ ನೀರು ಕೊಡುವ ವ್ಯವಸ್ಥೆಯಾಗಿಲ್ಲ. ಅನೇಕ ಗ್ರಾಮಾಂತರ ಭಾಗಗಳಲ್ಲಿ ಇವತ್ತು ಬೋರ್‌ವೆಲ್‌ಗಳ ಮೂಲಕ ನೀರು ಕೊಡುವ ಪರಿಸ್ಥಿತಿ ಇದೆ. ಎಲ್ಲಿ ಬೋರ್‌ವೆಲ್‌ಗಳಿವೆ, ಎಲ್ಲಿ ವಿಶೇಷವಾಗಿ ರಾಸಾಯನಿಕವನ್ನು ಬಳಸಿ ನೀರಿನ ಮಿತ ಬಳಕೆ ಇಲ್ಲದೆ ಆ

ನೀರು ಈಗ floride ಯುಕ್ತವಾಗಿ, ದೊಡ್ಡ ಪ್ರಮಾಣದಲ್ಲಿ ಜನರ ಆರೋಗ್ಯ ಕೂಡ ಈಗ ಹದಗೆಡುತ್ತಿದೆ. ಮನುಷ್ಯನಿಗೆ ಬರುವ ಅನೇಕ ರೋಗಗಳಲ್ಲಿ 100ಕ್ಕೆ 80ರಷ್ಟು ಈ ರೀತಿಯ ಅಶುದ್ಧವಾದ ನೀರಿನಿಂದಲೇ ಆ ರೋಗಗಳು ಬರುತ್ತವೆ. ಅದನ್ನು ಹೋಗಲಾಡಿಸುವುದು ಬಹಳ ಅಗತ್ಯವಿದೆ.

ನಿನ್ನೆ ನಮ್ಮ ಹಿರಿಯ ಅನೇಕ ಶಾಸಕರು ಹೇಳಿದ ಹಾಗೆ ಕೆರೆ ಮತ್ತು ನದಿಗಳಿಂದ ನೀರನ್ನು ಶುದ್ಧಿಗೊಳಿಸಿ ದೊಡ್ಡ ಪ್ರಮಾಣದಲ್ಲಿ ಯೋಜನೆ ಸಿದ್ಧಪಡಿಸಿದರೆ, ಹತ್ತಾರು ಹಳ್ಳಿಗಳಿಗೆ ಒಂದೇ ಯೋಜನೆ ಮೂಲಕ ನೀರು ಕೊಡುವ ವ್ಯವಸ್ಥೆ ಜಾರಿಗೆ ಬಂದರೆ ಸಣ್ಣಪುಟ್ಟ ಸಮಸ್ಯೆಗಳನ್ನೇನು ಗ್ರಾಮಪಂಚಾಯತಿಗಳು ಎದುರಿಸುತ್ತಿವೆ, ಅವು ಬೋರ್‌ವೆಲ್ ರಿಪೇರಿ ಇರಬಹುದು, ನೀರು ಹೋಗುವುದು ಇರಬಹುದು, ವಿದ್ಯುತ್ ಬಿಲ್ ಕಟ್ಟದೆ ನೀರು ಸರಿಯಾಗಿ ಸಿಗದೆ ಜನರಿಗೆ ತೊಂದರೆಯಾಗುವುದು ಇರಬಹುದು, ಇವೆಲ್ಲ ಪರಿಹಾರವಾಗುತ್ತವೆ. ಹೀಗಾಗಿ ಅನೇಕ ಹಿರಿಯ ಅಧಿಕಾರಿಗಳ ಚಿಂತನೆ ಇದೆ, ಏನೆಂದರೆ, ಹೊಳೆಯುವ ಅಥವಾ ಕೆರೆಯಿಂದ ದೊಡ್ಡ ಪ್ರಮಾಣದಲ್ಲಿ ನೀರನ್ನು lift ಮಾಡಿ ಶುದ್ಧೀಕರಿಸಿ ಶುದ್ಧ ನೀರನ್ನು ಎಲ್ಲಾ ಗ್ರಾಮಾಂತರ ಪ್ರದೇಶದ ಮನೆ ಮನೆಗೆ ಕೊಡಬೇಕು, 24 ಗಂಟೆಯೂ ನೀರು ಕೊಡುವ ವ್ಯವಸ್ಥೆಯಾಗಬೇಕೆನ್ನುವ ಕಲ್ಪನೆ ಇದೆ. ಆ ಬಗ್ಗೆ ಹಿರಿಯ ಅಧಿಕಾರಿಗಳು ಚಿಂತನೆ ಮಾಡಿ ಕರ್ನಾಟಕದಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತಂದರೆ ಆ ನೀರು ಉಪಯೋಗಿಸುವ ಜನರಿಗೆ ಮೀಟರ್ ಅಳವಡಿಸಿಕೊಟ್ಟರೆ ಅವರು ಎಷ್ಟು ಬೇಕೋ ಅಷ್ಟು ಮಾತ್ರ ನೀರನ್ನು ಉಪಯೋಗ ಮಾಡಿಕೊಳ್ಳುತ್ತಾರೆ. ಅದರಿಂದ ಅದರ ಸದುಪಯೋಗವಾಗುತ್ತದೆ. ಅವಶ್ಯಕತೆ ಬಿದ್ದರೆ ಶಾಸಕರ ಅನುದಾನ ಏನಿದೆ, ಅದರಲ್ಲಿ 50% ಹಣವನ್ನು ಈ ಯೋಜನೆಗೆ ಬಿಟ್ಟುಕೊಟ್ಟರೆ ಆ ಅಧಿಕಾರಿಗಳು ಕ್ರಿಯಾಶೀಲರಾಗಿ ಕೆಲಸ ಮಾಡಿದರೆ ಶುದ್ಧವಾದ ಕುಡಿಯುವ ನೀರು ಕೊಡಲಿಕ್ಕೆ ಸಾಧ್ಯವಿದೆ ಎಂಬುದು ನನ್ನ ನಂಬಿಕೆ. ಗ್ರಾಮಾಂತರ ಭಾಗದಲ್ಲಿ ವಾಸ ಮಾಡುವ ಜನರ ಆರೋಗ್ಯ ರಕ್ಷಣೆಯೂ ಕೂಡ ಅಷ್ಟೇ ಅಗತ್ಯವಿದೆ. ಬಹಳ ಜನ ನನ್ನ ಸ್ನೇಹಿತರು ಉಲ್ಲೇಖಿಸಿದ ಹಾಗೆ ಗ್ರಾಮದಲ್ಲಿ ಸ್ವಚ್ಛತೆ ಕಾಪಾಡುವುದು ಬಹಳ ಅಗತ್ಯವಿದೆ. ಆ ಸ್ವಚ್ಛತೆಯನ್ನು ಕಾಪಾಡಬೇಕಾದರೆ ಗ್ರಾಮಾಂತರ ಭಾಗಗಳಲ್ಲಿ ಶೌಚಾಲಯಗಳ ನಿರ್ಮಾಣದ ಅಗತ್ಯವಿದೆ. ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡಿದರೆ ಒಳ್ಳೆಯದು. ಸರಿಯಾಗಿ ವ್ಯವಸ್ಥಿತವಾಗಿ ನೀರನ್ನು

ಬಳಸದಿದ್ದರೆ ಮುಂದೆ ಕಷ್ಟವಾಗಬಹುದು ಮತ್ತು ಅದು ಉಪಯೋಗಕ್ಕೆ ಅನಾನುಕೂಲ ಕೂಡ ಆಗಬಹುದು. ಹೀಗಾಗಿ, ಪ್ರತಿಯೊಬ್ಬ ವ್ಯಕ್ತಿಯಲ್ಲಿ ಜಾಗೃತಿ ಉಂಟುಮಾಡಿ ಗ್ರಾಮಪಂಚಾಯತಿಯಲ್ಲಿ ವಾಸ ಮಾಡುವ ಪ್ರತಿಯೊಬ್ಬರಿಗೂ ಕೂಡ toilet ಅನ್ನು ಕಟ್ಟಿಸುವ ವ್ಯವಸ್ಥೆಯಾಗಬೇಕು. ವಿಶೇಷವಾಗಿ ನಮ್ಮ ಜಿಲ್ಲೆಯ ಅಥಣಿಯಲ್ಲಿ ಕೃಷ್ಣಾ ನದಿ ಹರಿದ ಸಂದರ್ಬದಲ್ಲಿ ನದಿ ತೀರದ ಹಳ್ಳಿಗಳಲ್ಲಿ ಬಯಲಿಗೆ ಹೋಗಲಿಕ್ಕೂ ಕೂಡ ಸ್ಥಳವೇ ಇಲ್ಲದಾಗಿದೆ. ಅನೇಕ ಮಹಿಳೆಯರು ಮರ್ಯಾದೆಯಿಂದ ಜೀವನ ಮಾಡುವುದು ಕಷ್ಟವಾಗಿದೆ. ವಿಶೇಷವಾದ ಚಿಂತನೆಯಾಗಿ ಸರ್ಕಾರದಿಂದ ಗ್ರಾಮಪಂಚಾಯತಿ ಮೂಲಕ ಅಥವಾ ಬೇರೆ ಬೇರೆ ಯೋಜನೆ ಮೂಲಕ ಪ್ರತಿ ಮನೆಗೂ toilet ಕಟ್ಟಿಸುವ ವ್ಯವಸ್ಥೆಯಾಗಬೇಕು. ಅದರ ಜೊತೆಗೆ ಪ್ರತಿ ಹಳ್ಳಿಯಲ್ಲೂ ಆಸ್ಪತ್ರೆ ಪ್ರಾರಂಭಿಸಿ ವೈದ್ಯರನ್ನು ನೇಮಿಸುವುದು ಕಷ್ಟವಿದೆ. ಮೂಲಭೂತವಾದ ನಮ್ಮದೇ ಆದ ಆಯುರ್ವೇದ ವ್ಯವಸ್ಥೆಯಿದ್ದು ಅದರ ಬಗ್ಗೆ ಚಿಂತನೆ ಮಾಡಿ ಆಯುರ್ವೇದಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡಬೇಕು. ನಮ್ಮ ಭಾರತ ದೇಶದ ಜನರ ಮನಸ್ಸು ಇನ್ನೊಂದು ವಿಷಯದ ಕಡೆಗೆ ಆಕರ್ಷಿತವಾದರೆ ವಿದೇಶದಲ್ಲಿ ನಮ್ಮ ಆಯುರ್ವೇದದ ಬಗ್ಗೆ ಪ್ರಾಚೀನ ವ್ಯವಸ್ಥೆ ಬಗ್ಗೆ ನಮ್ಮ ಋಷಿ ಮುನಿಗಳು ಕಂಡುಹಿಡಿದ ಗಿಡಮೂಲಿಕೆಗಳ ಬಗ್ಗೆ ವಿದೇಶಗಳಲ್ಲಿ ಚಿಂತನೆ ನಡೆದು ಭಾರತದ ಕಡೆಗೆ ಒಳ್ಳೆಯ ಆಶಯದಿಂದ ನೋಡುತ್ತಿರುವಾಗ ನಾವು ಆಯುರ್ವೇದಕ್ಕೆ ಹೆಚ್ಚು ಆದ್ಯತೆ ಕೊಡಬೇಕು. ಮೊದಲನೆಯದಾಗಿ, ವಿದ್ಯುತ್ ಬೇಕು. ಕರ್ನಾಟಕದಲ್ಲಿ ವಿದ್ಯುತ್ ಅಭಾವವಿದೆ. ನಮ್ಮ ಸರ್ಕಾರ, ಇಂಧನ ಸಚಿವರು, ಮುಖ್ಯಮಂತ್ರಿಯವರು ವಿಶೇಷ ಸಾಹಸ ಮಾಡಿ ಜನರಿಗೆ ವಿದ್ಯುತ್ ಒದಗಿಸುವ ಕೆಲಸ ಮಾಡುತ್ತಿದ್ದಾರೆ. 'ನಿರಂತರ ಜ್ಯೋತಿ' ಎನ್ನುವ ಯೋಜನೆಯನ್ನು ಜಾರಿಗೆ ತಂದು ಗ್ರಾಮಾಂತರ ಭಾಗದಲ್ಲಿ 24 ಗಂಟೆಯವರೆಗೂ ಯಾವ ರೀತಿ ಗುಜರಾತ್‌ನಲ್ಲಿ ನರೇಂದ್ರ ಮೋದಿಯವರು ಗ್ರಾಮಾಂತರ ಪ್ರದೇಶಕ್ಕೆ ವಿದ್ಯುತ್ ಕೊಡುತ್ತಿದ್ದಾರೆ, ಅದೇ ರೀತಿ ಇಲ್ಲಿಯೂ ಕೂಡ ವಿದ್ಯುತ್ ಕೊಡಬೇಕೆನ್ನುವ ಕಲ್ಪನೆ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಮೊದಲನೇ ಹಂತದಲ್ಲಿ 20 ತಾಲ್ಲೂಕುಗಳನ್ನು ಈಗಾಗಲೇ ಆಯ್ಕೆ ಮಾಡಿಕೊಂಡಿದ್ದಾರೆ. ಜಮಖಂಡಿ ತಾಲ್ಲೂಕನ್ನೂ ಆಯ್ಕೆ ಮಾಡಿಕೊಂಡಿದ್ದಕ್ಕೆ ಸನ್ಮಾನ್ಯ ಯಡಿಯೂರಪ್ಪನವರಿಗೆ, ಈಶ್ವರಪ್ಪನವರಿಗೆ ನಮ್ಮ ತಾಲ್ಲೂಕಿನ ಪರವಾಗಿ ಹಾರ್ದಿಕ ಅಭಿನಂದನೆ ಸಲ್ಲಿಸುತ್ತೇನೆ. ಭಾರತ

ದೇಶದಲ್ಲಿ ಹುಟ್ಟಿದ ನಾವು ಸುದೈವಿಗಳೆಂದು ಹೇಳಬೇಕಾಗುತ್ತದೆ. ಅನೇಕ ದೇಶಗಳಲ್ಲಿ 12 ತಿಂಗಳು ಬಿಸಿಲು ಇರುವುದಿಲ್ಲ. ಆದರೆ, 12 ತಿಂಗಳಲ್ಲಿ 10 ತಿಂಗಳು ಪ್ರಖರವಾದ ಸೂರ್ಯ ಪ್ರಕಾಶ ಭಾರತ ದೇಶಕ್ಕೆ ಮಾತ್ರ ಸಿಗುತ್ತದೆ. ಹೀಗಾಗಿ ಭಾರತ ದೇಶದಲ್ಲಿರುವ ಸಂಪತ್ತಾದ ಈ ಪ್ರಕಾಶವನ್ನು ಬಿಸಿಲನ್ನು ಉಪಯೋಗಿಸಿ ನಾವು ಆರೋಗ್ಯ ಸುಧಾರಣೆ ಮಾಡಿಕೊಳ್ಳಬಹುದು, ಜ್ಞಾನವನ್ನು ಹೆಚ್ಚು ಮಾಡಿಕೊಳ್ಳಬಹುದು, ಸರ್ವ ರೀತಿಯಿಂದಲೂ ಇಲ್ಲಿ ವ್ಯವಸ್ಥೆ ಮಾಡಿಕೊಳ್ಳಲಿಕ್ಕೆ ಆ ಭಗವಂತ ನಮಗೆ ಅವಕಾಶ ಕೊಟ್ಟಿದ್ದಾನೆ. ಹೀಗಾಗಿ 10 ತಿಂಗಳು ಇರುವ ಬಿಸಿಲನ್ನು ಉಪಯೋಗಿಸಿ ಸೌರಶಕ್ತಿ ಮೂಲಕ ವಿದ್ಯುತ್ ತಯಾರು ಮಾಡಿ ಗ್ರಾಮಾಂತರ ಭಾಗಕ್ಕೆ ಒದಗಿಸುವ ಕಾರ್ಯಕ್ರಮ ವನ್ನು ಸರ್ಕಾರವೇನಾದರೂ ಜಾರಿಗೆ ತಂದರೆ ನಮ್ಮ ಸಮಸ್ಯೆಗೆ ಪರಿಹಾರ ಸಿಗಬಹುದು. ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಹುಡುಕಿದರೆ ಗ್ರಾಮಾಂತರ ಭಾಗದಲ್ಲಿ ವಾಸ ಮಾಡುತ್ತಿದ್ದು ಪಟ್ಟಣಕ್ಕೆ ಹೋದವರು ಪುನಃ ಆಕರ್ಷಿತರಾಗಿ ತಮ್ಮ ಗ್ರಾಮಗಳಿಗೆ ಹೋಗಿ ತಮ್ಮ ಮೂಲ ವೃತ್ತಿ ಕೃಷಿಯನ್ನು ನಂಬಿಕೊಂಡು ಉಪ ಕಸುಬುಗಳನ್ನು ಮಾಡುತ್ತಾ ಜೀವನ ಮಾಡಬಹುದು. ಆದರೆ, ಭಾರತ ದೇಶದಲ್ಲಿ ಕೃಷಿ ಎಷ್ಟು ವರ್ಷಗಳಿಂದ ನಡೆದಿದೆ ಎಂದು ಇತಿಹಾಸ ನೋಡಿದರೆ ಎಷ್ಟು ವರ್ಷ ಎಂಬುದು ಗೊತ್ತಿಲ್ಲ. ಹತ್ತಾರು ಸಾವಿರ ವರ್ಷಗಳಿಂದ ಇಲ್ಲಿ ಕೃಷಿ ನಡೆದಿದೆ, ಒಕ್ಕಲುತನ ಗೊತ್ತಿದೆ ಎಂಬುದು ನಮ್ಮ ಕಲ್ಪನೆಗೆ ಬರುತ್ತದೆ. ಆದರೆ, ಜಗತ್ತಿನಲ್ಲಿ ಮುಂದುವರಿದ ದೇಶವಾದ ಹಿರಿಯಣ್ಣ ಎಂದು ಹೇಳುವ ಅಮೇರಿಕಾ ದೇಶಕ್ಕೆ ನೀವು ಎಷ್ಟು ವರ್ಷದಿಂದ ಕೃಷಿ ಮಾಡುತ್ತಿದ್ದೀರಿ ಎಂದು ಕೇಳಿದರೆ 300–350 ವರ್ಷದಿಂದ ಎಂದು ಹೇಳುತ್ತಾರೆ. ಆದರೆ, ಹತ್ತಾರು ವರ್ಷಗಳಿಂದ ಈ ದೇಶದಲ್ಲಿ ಕೃಷಿ ಆಗುತ್ತಿದ್ದರೂ ಆ ಕೃಷಿಯಿಂದ ನಾವೆಂದೂ ಹಾಳಾಗಿಲ್ಲ. ಆದರೆ, ಅಮೇರಿಕಾ ದೇಶ ತನ್ನ ಉತ್ಪಾದನೆ ಕುಂಠಿತ ಮಾಡಿಕೊಂಡಿರುವುದರಿಂದ ಭೀಕರವಾದ ಪರಿಸ್ಥಿತಿ ಮುಂದಿನ ದಿನಗಳಲ್ಲಿ ಬರುತ್ತದೆ. ನಮ್ಮ ಕೃಷಿಯ ಮೂಲ ಎಂದರೆ ಗೋವು ಆಧಾರಿತ ಕೃಷಿಯಾಗಿದೆ. ಅದನ್ನು ನಾವು ಮರೆತಿದ್ದೇವೆ. ಹಸಿರು ಕ್ರಾಂತಿ ಹೆಸರಿನಲ್ಲಿ ಅನೇಕ ತರಹದ ರಾಸಾಯನಿಕ ವಸ್ತುಗಳನ್ನು ಬಳಸುವ ಪದ್ಧತಿಯನ್ನು ಜಾರಿಗೆ ತಂದು ಉತ್ಪಾದನೆ ಹೆಚ್ಚು ಪಡೆಯಬೇಕೆನ್ನುವ ಉದ್ದೇಶವಿಟ್ಟುಕೊಂಡು ವಿಶೇಷವಾಗಿ ರಾಸಾಯನಿಕ ಗೊಬ್ಬರ ಬಳಸಿದ್ದರ ಪರಿಣಾಮ ಗೋವು ಆಧಾರಿತ ಕೃಷಿ ಹೋಗಿ ಯೂರಿಯಾ ಆಧಾರಿತ ಕೃಷಿಗೆ ಬಂದಿದೆ. ಇದನ್ನು ಸಂಪೂರ್ಣ ನಿಲ್ಲಿಸಬೇಕು. ಜಮೀನಿನ ಫಲವತ್ತತೆ

ದೇಶದಲ್ಲಿ ಉಳಿಯಬೇಕಾದರೆ, ಹಿಂದೆ ಜಮೀನಿನಲ್ಲಿ ಯಾವ ರೀತಿ ಬೆಳೆ ಬೆಳೆಯಲಾಗುತ್ತಿತ್ತೋ ಪುನಃ ಶಕ್ತಿಯುತ ಮಣ್ಣು ನಿರ್ಮಾಣವಾಗಬೇಕಾದರೆ ನಾವು ನಿಶ್ಚಿತವಾಗಿಯೂ ರಾಸಾಯನಿಕ ವಸ್ತುಗಳನ್ನು ಉಪಯೋಗಿಸುವುದನ್ನು ಕಡಿಮೆ ಮಾಡುವ ದೃಷ್ಟಿಯಿಂದ ಜನರಲ್ಲಿ ಜಾಗೃತಿ ಮೂಡಿಸುವುದು ಕೂಡ ಅನಿವಾರ್ಯವಾಗಿದೆ. ಸರ್ಕಾರ ಈ ಬಗ್ಗೆ ವಿಶೇಷ ಚಿಂತನೆ ಮಾಡಿ ಕೃಷಿ mission ಅನ್ನು ಸ್ಥಾಪನೆ ಮಾಡಿ ಸುಮಾರು 100 ಕೋಟಿ ರೂಪಾಯಿ ಅದಕ್ಕಾಗಿ ಮೀಸಲಿಟ್ಟು ವಿಶೇಷವಾಗಿ ಕರ್ನಾಟಕ ರಾಜ್ಯದ ತುಂಬಾ ವ್ಯವಸ್ಥೆ ಮಾಡಿ ಸಾವಯವ ಮತ್ತು ನೈಸರ್ಗಿಕ ಕೃಷಿ ಬಗ್ಗೆ ಜನರಲ್ಲಿ ಜಾಗೃತಿ ತರಲು ಪ್ರಯತ್ನ ಮಾಡಿದ್ದು ನೋಡಿದರೆ ಬಹಳ ಸಂತೋಷವಾಗುತ್ತದೆ. ನಮ್ಮ ಸಕಾರ ಬಹಳ ಒಳ್ಳೆಯ ಕಾರ್ಯವನ್ನು ಪ್ರಾರಂಭ ಮಾಡಿದೆ. ಗೋಹತ್ಯೆ ನಿಲ್ಲಬೇಕು. ಗೋವು ಆಧಾರಿತ ಗೋವಿನ ಸಗಣಿ ಮತ್ತು ಮೂತ್ರ ಬಳಸಿ ಸಾವಯವ ಮತ್ತು ನೈಸರ್ಗಿಕ ಕೃಷಿ ಯಾವ ರೀತಿ ಮಾಡಬೇಕೆನ್ನುವ ಬಗ್ಗೆ ಸುಭಾಷ್ ಪಾಲೇಕಾರ್‌ರವರಂಥ ಚಿಂತಕರು ಹೇಳಿದಂಥ ವಿಷಯಗಳನ್ನು ಕರ್ನಾಟಕದ ರೈತರ ಗಮನಕ್ಕೆ ತಂದು ಜಾಗೃತಿ ಉಂಟುಮಾಡಿದರೆ ಇದು ನೂರಕ್ಕೆ ನೂರು ಯಶಸ್ವಿಯಾಗುತ್ತದೆ. ನಮ್ಮ ದೇಶದಲ್ಲಿರುವ ದೇಶೀಯ ಆಕಳುಗಳ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿವೆ. 1947 ರಿಂದ ಇಲ್ಲಿಯವರೆಗಿನ ಅಂಕಿಸಂಖ್ಯೆ ನೋಡಿದರೆ 80% ಗೋಹತ್ಯೆ ಆಗಿದೆ. ಅವುಗಳ ಸಂಖ್ಯೆ ಬಹಳ ಕಡಿಮೆಯಾಗುತ್ತಿದೆ. 70 ಸ್ವದೇಸಿ ಗೋತಳಿಗಳು ಕಡಿಮೆಯಾಗಿ ಕೇವಲ 30 ತಳಿಗಳು ಉಳಿದಿವೆ. ಇದನ್ನು ತಡೆಯದಿದ್ದರೆ ಮುಂದಿನ ದಿನಗಳಲ್ಲಿ ಗೋವುಗಳ ಸಂತತಿ ಅಳಿಸಿ ಹೋದರೆ ಮುಂದಿನ ಪೀಳಿಗೆಗೆ ಗೋವು ಎಂದರೆ ಏನೆಂದು ಕ್ಯಾಲೆಂಡರ್‌ನಲ್ಲಿರುವ ಚಿತ್ರ ತೋರಿಸಿ ಹೇಳುವ ಸ್ಥಿತಿ ಬರಬಹುದು. ಅದಕ್ಕಾಗಿ ಗೋಹತ್ಯೆ ನಿಲ್ಲಿಸುವುದು ಬಹಳ ಅವಶ್ಯವಿದೆ. ಈ ಬಗ್ಗೆ ಕೇಂದ್ರ ಮತ್ತು ರಾಜ್ಯಸರ್ಕಾರ ಬಹಳ ಜಾಗೃತರಾಗಿ ಅದನ್ನು ನೂರಕ್ಕೆ ನೂರರಷ್ಟು ಜಾರಿಗೆ ತರದಿದ್ದರೆ ಇದೊಂದು ದೊಡ್ಡ ಸಮಸ್ಯೆಯಾಗಬಹುದು. ಹೀಗಾಗಿ ಕೇಂದ್ರ ಸರ್ಕಾರ ಜಾರಿಗೆ ತಂದ ಕಾನೂನನ್ನು ಇನ್ನಷ್ಟು ಗಟ್ಟಿಯಾಗಿ implement ಮಾಡಬೇಕು. ಕರ್ನಾಟಕ ಸರ್ಕಾರ ಕೂಡ ಅದರ ಬಗ್ಗೆ ಹೆಚ್ಚಿನ ಚಿಂತನೆ ಮಾಡಬೇಕಾಗುತ್ತದೆ ಎಂದು ನನಗನ್ನಿಸುತ್ತದೆ. ನಮ್ಮ ಸಂಸ್ಕೃತಿ, ಪರಂಪರೆ, ಮೂರು ಮಾತೆಯರು ಎಂದರೆ "ಘರ್ ಕಿ ಮಾತಾ, ಗೋ ಮಾತಾ, ಭಾರತ ಮಾತಾ" ಇದರಲ್ಲಿ ಶ್ರದ್ಧೆ ಮತ್ತು ವಿಶ್ವಾಸ ವ್ಯಕ್ತ ಪಡಿಸಿದೆ.

ಈ ಮೂರು ಮಾತೆಯರ ಬಗ್ಗೆ ನಾವು ಹೋರಾಟ ಮಾಡಿದ್ದು ನಮ್ಮ ಪರಂಪರೆ ಮತ್ತು ಇತಿಹಾಸವಿದೆ. ಹೀಗಾಗಿ, ಗೋಮಾತೆಯನ್ನು ಉಳಿಸಿ ನಮ್ಮ ದೇಶದ ಕೃಷಿಯನ್ನು ಮತ್ತೊಮ್ಮೆ ಉತ್ತಮವಾಗಿ ಅಭಿವೃದ್ಧಿಪಡಿಸ ಬೇಕೆಂದರೆ ಇದರ ಉಪಯೋಗವಾಗಬೇಕಾಗುತ್ತದೆ. ರೈತರಿಗೆ ಕೃಷಿಗೆ ಯೋಗ್ಯತೆ ಸಿಗಬೇಕು, ಆದ್ಯತೆ ಸಿಗಬೇಕೆಂದರೆ ಸಾಲ ಸುಲಭವಾಗಿ ಸಿಗುವ ವ್ಯವಸ್ಥೆಯಾಗಬೇಕು. ನೀರಾವರಿಗೆ ಆದ್ಯತೆ ಕೊಡಬೇಕು, ಅದರಲ್ಲಿಯೂ, ಸಣ್ಣ ನೀರಾವರಿಗೆ ವಿಶೇಷ ಆದ್ಯತೆ ಕೊಡಬೇಕು. ಈ ದೇಶದ ಅತ್ಯಂತ ದೊಡ್ಡ ಆರ್ಥಿಕ ತಜ್ಞರಾಗಿದ್ದ ದಿವಂಗತ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ರವರು ಹೇಳಿದಂತೆ ದೊಡ್ಡ ಯೋಜನೆಗಳ ಬಗ್ಗೆ ಚಿಂತನೆ ಮಾಡದೇ ಸಣ್ಣ ಸಣ್ಣ ಯೋಜನೆಗಳನ್ನು ಜಾರಿಗೆ ತಂದರೆ ಒಂದು ವರ್ಷದಲ್ಲಿ, ಆರು ತಿಂಗಳಲ್ಲಿ ಪ್ರತಿಫಲ ಸಿಕ್ಕಿ ಜನರಿಗೆ ನೀರಾವರಿ ಸೌಲಭ್ಯ ಸಿಕ್ಕಿದರೆ ಅವರು ಉದ್ಧಾರವಾಗುತ್ತಾರೆ. ಆದರೆ, ದೊಡ್ಡ ದೊಡ್ಡ ಯೋಜನೆಗಳಿಗೆ ನಾವು ಕೈಹಾಕಿ ಹತ್ತಾರು ವರ್ಷಗಳಲ್ಲಿ ಹತ್ತಾರು ಸಾವಿರ ಕೋಟಿ ರೂಪಾಯಿಗಳನ್ನು ಹೂಡಿ 20–30 ವರ್ಷಗಳ ನಂತರ ನೀರು ಸಿಕ್ಕಾಗ ಯೋಗ್ಯವಾದ ಪ್ರತಿಫಲ ಸಿಗುವುದಿಲ್ಲ.

(11-00 AM)

ಹೀಗಾಗಿ ಸಣ್ಣ ಸಣ್ಣ ನೀರಾವರಿ ಯೋಜನೆಗಳಿಗೆ ಆದ್ಯತೆ ಕೊಟ್ಟು ಕೆರೆ, ನದಿಯ ನೀರನ್ನು ಏತ ನೀರಾವರಿ ಮೂಲಕ ರೈತರಿಗೆ ಕೊಟ್ಟರೆ ಉಪಯೋಗವಾಗುತ್ತದೆ. ಅದೇ ರೀತಿಯಾಗಿ ಬೆಳೆ ವಿಮೆ ಯೋಜನೆಯಲ್ಲಿ ಒಂದು ತಾಲ್ಲೂಕನ್ನು ಘಟಕವನ್ನಾಗಿ ಮಾಡಿರುವುದನ್ನು ತೆಗೆದು ಗ್ರಾಮ ಒಂದು ಘಟಕವಾಗುವಂತೆ ಮಾಡಬೇಕು. ಅದು ಕೇಂದ್ರ ಸರ್ಕಾರದ ಜವಾಬ್ದಾರಿ, ಆ ಬಗ್ಗೆ ನಾವು ಒತ್ತಾಯ ಮಾಡಬೇಕು. ಅತಿಯಾದ ನೀರು ಮತ್ತು ರಾಸಾಯನಿಕ ಬಳಸಿರುವುದರಿಂದ ಕರ್ನಾಟಕದಲ್ಲಿ ವಿಶೇಷವಾಗಿ ಸವಳು–ಜವಳು ಸಮಸ್ಯೆ ಬಹಳ ಇದೆ. ಈ ಸವಳು–ಜವಳು ಕಡಿಮೆ ಮಾಡುವ ಪ್ರಯತ್ನ ನಡೆಯಬೇಕು. ಕೃಷಿ ಇವತ್ತು ಲಾಭದಾಯಕವಾಗ ಬೇಕಾದರೆ ಅನೇಕ ಔಷಧಿ ಸಸ್ಯಗಳು ಏನು ಇವೆ, ಅವುಗಳನ್ನು ಮಳೆಯಾಧಾರದ ಮೇಲೆ ಬೆಳೆಯಲಿಕ್ಕೆ ಸಾಧ್ಯವಿದೆ, ಕಡಿಮೆ ನೀರಿನಲ್ಲಿ ಬೆಳೆಯಲಿಕ್ಕೆ ಸಾಧ್ಯವಿದೆ ಮತ್ತು ಯಾವ ಸಸ್ಯಗಳಿಗೆ ಜಗತ್ತಿನಲ್ಲಿ ಬೇಡಿಕೆಯಿದೆ, ಅಂಥ ಔಷಧಿ ಸಸ್ಯಗಳನ್ನು ಬೆಳೆಸುವುದರ ಬಗ್ಗೆ ಚಿಂತನೆ ಮಾಡಿ ಅದನ್ನು ಜಾರಿಗೆ ತರಬೇಕೆನ್ನುವ ಮಾತನ್ನು ಹೇಳುತ್ತಾ, ಗೋವು ಇದು ಒಂದು

ರಾಷ್ಟ್ರೀಯ ಪ್ರಾಣಿಯಾಗಿ ಘೋಷಣೆಯಾಗಬೇಕು. ವಿದೇಶಿ ತಳಿಯಿಂದ ಈ ಒಂದು ಸ್ವದೇಶಿ ಆಕಳುಗಳ ಮೇಲೆ ವಂಶಾಭಿವೃದ್ಧಿ ಮಾಡಿಸುವುದು ನಿಲ್ಲಬೇಕು ಮತ್ತು ಗೋಹತ್ಯೆಯನ್ನು ಸರ್ಕಾರ ತಡೆಯಬೇಕು ಎನ್ನುವ ಮೂರು ಅಂಶಗಳನ್ನು ಕಡಿಮೆ ಸಮಯದಲ್ಲಿ ತಮ್ಮ ಮುಂದೆ ವ್ಯಕ್ತ ಮಾಡಿ, ನನಗೆ ಮಾತನಾಡಲಿಕ್ಕೆ ಅವಕಶ ಕೊಟ್ಟಿದ್ದಕ್ಕೆ ಸನ್ಮಾನ್ಯ ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಎ.ಎಸ್.ಪಾಟೀಲ್‌ರವರೆ, ನಾನು ನಿಮಗೆ ಮೊದಲೇ ಹೇಳಿ ಬಿಡುತ್ತೇನೆ. ಟೈಂ ಲಿಮಿಟ್ ಇದೆ, ನೀವು ಅಷ್ಟರಲ್ಲಿ ನಿಮ್ಮ ಭಾಷಣ ಮುಗಿಸಬೇಕು.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) (ದೇವರ ಹಿಪ್ಪರಗಿ) : ಸನ್ಮಾನ್ಯ ಸಭಾಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದಿಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಇನ್ನೊಂದು ದಿವಸ ಎಕ್ಸ್‌ಟೆಂಡ್ ಮಾಡಿ ಸ್ವಾಮಿ, ರೈತರ ಬಗ್ಗೆ ಚರ್ಚೆಯಾಗುತ್ತದೆ, ಎಲ್ಲರೂ ಬಹಳ ಚೆನ್ನಾಗಿ ಚರ್ಚೆಯಲ್ಲಿ ಭಾಗವಹಿಸುತ್ತಿದ್ದಾರೆ, ಹೀಗಾಗಿ ಸೋಮವಾರ ಉತ್ತರ ಕೊಡಿಸಿ. ಎಲ್ಲಾ ಮಾನ್ಯ ಸದಸ್ಯರು ಎರಡು ಭಾಗದಿಂದಲೂ ಒಳ್ಳೆಯ ಸಲಹೆ ಸೂಚನೆಗಳನ್ನು ಕೊಡುತ್ತಿದ್ದಾರೆ. ಸರ್ಕಾರಕ್ಕೆ ಇದರಿಂದ ಅನುಕೂಲವಾಗ ಬಹುದು ಎಂದು ನಾವು ಭಾವಿಸಿದ್ದೇವೆ, ದಯಮಾಡಿ ತಾವು ದೊಡ್ಡ ಮನಸ್ಸು ಮಾಡಿ ಕೊಡಿ. ಏಕೆಂದರೆ, ವಿಶೇಷವಾದ ಅಧಿವೇಶನ ಕರೆದಿರುವುದರಿಂದ, ರೈತರ ಬಗ್ಗೆ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡಲಿಕ್ಕೆ ಕರೆದಿರುವುದು. ತಾವು ಸ್ವಲ್ಪ ದೊಡ್ಡ ಮನಸ್ಸು ಮಾಡಿ.

ಅಧ್ಯಕ್ಷರು : ಬಾಲಕೃಷ್ಣರವರೆ, ಸೋಮವಾರ ಬರಗಾಲದ ಬಗ್ಗೆ ಚರ್ಚೆ ಇದೆಯಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಇರಲಿ ಪರವಾಗಿಲ್ಲ, ಇದಾದ ಮೇಲೆ ಬರಗಾಲದ ಬಗ್ಗೆ ಚರ್ಚೆ ಮಾಡಲಿ.

ಅಧ್ಯಕ್ಷರು : ಕಾನೂನು ಸಚಿವರೇ ನೀವು ಈ ಬಗ್ಗೆ ಮಾತನಾಡಿ ನಮಗೆ ಹೇಳಿ. ಈಗ ಕಾನೂನು ಸಚಿವರು ಈ ಬಗ್ಗೆ ವಿಚಾರ ಮಾಡಿ ಅವರು ಹೇಳಲಿ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಸನ್ಮಾನ್ಯ ಸಭಾಧ್ಯಕ್ಷರೆ, ಈ ಸರ್ಕಾರ ಬಂದು ಸುಮಾರು 15 ತಿಂಗಳು ಮುಗಿದಿದೆ. ಹಿಂದೆ 20 ತಿಂಗಳು

ಅಧಿಕಾರದಲ್ಲಿ ಇತ್ತು. ಆದರೆ ಏಕೊ ಏನೋ ಒಂದು ಹಂತದಲ್ಲಿ ಈ ಸರ್ಕಾರ ಬಂದಾಗ ನೋಡಿದರೆ, ಇವರು ನಾಲ್ಕು ಬಜೆಟ್‌ಗಳನ್ನು ಮಂಡಿಸಿದ್ದಾರೆ.

ಶ್ರೀ ಬಿ.ರಮಾನಾಥ ರೈ : ಗ್ರಾಮೀಣಾಭಿವೃದ್ಧಿ ಮತ್ತು ಕೃಷಿಯ ಬಗ್ಗೆ ಚರ್ಚೆ ಮಾಡುವಾಗ ಬರಗಾಲದ ಬಗ್ಗೆಯೂ ಮಾತನಾಡಬಹುದು.

ಅಧ್ಯಕ್ಷರು : ನಾನು ಮೊನ್ನೆ ಕೂಡ ಇದನ್ನೇ ಹೇಳಿದ್ದು. ಸಿದ್ದರಾಮಯ್ಯನವರೆ, ಇದರಲ್ಲಿ ಬರಗಾಲದ ಬಗ್ಗೆಯೂ ಮಾತನಾಡಬಹುದು ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಇಲ್ಲ ಇಲ್ಲ, ನಾವು ಆ ಬಗ್ಗೆ ನಿಲುವಳಿ ಸೂಚನೆ ಕೊಟ್ಟು ಚರ್ಚೆಗೆ ಅವಕಾಶ ಕೊಡಿ ಎಂದು ಕೇಳಿದ್ದಕ್ಕೆ ಅವರು ಸೋಮವಾರ ಚರ್ಚೆಗೆ ಕೊಟ್ಟಿದ್ದಾರೆ. ಆ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಬೇಕು. ಏಕೆಂದರೆ ಅದಕ್ಕೆ ನಿರ್ದಿಷ್ಟವಾದ ಉತ್ತರ ಬೇಕು.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬಂದು 15 ತಿಂಗಳಾಗಿವೆ. ಅದರ ಹಿಂದೆಯೂ ಕೂಡ ಇವರು 20 ತಿಂಗಳು ಆಡಳಿತವನ್ನು ನಡೆಸಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಬೇಕಾದರೆ ಸೋಮವಾರ ಬೆಳಿಗ್ಗೆ ಕೊಡಲಿ. ನಾನು ಆಮೇಲೆ ಬರಗಾಲದ ಬಗ್ಗೆ ಪ್ರಾರಂಭಿಸುತ್ತೇನೆ.

ಅಧ್ಯಕ್ಷರು : ಆಯಿತು, ಅವರು ತಿಳಿದುಕೊಂಡು ಏನು ಹೇಳುತ್ತಾರೆ ಕೇಳೋಣ.

ಶ್ರೀ ಸಿದ್ದರಾಮಯ್ಯ : ನಾನು ಮೂರು ಗಂಟೆಯ ನಂತರ ಬೇಕಾದರೆ ಮಾತನಾಡುತ್ತೇನೆ.

ಅಧ್ಯಕ್ಷರು : ಮೂರು ಗಂಟೆಯ ಮೇಲೆ ಎಂದರೆ, ಸುರೇಶ್‌ರವರೆ,

ಶ್ರೀ ಸಿದ್ದರಾಮಯ್ಯ : ಇನ್ನೂ ಮಾತನಾಡುವವರು ಬಹಳ ಜನ ಇದ್ದಾರೆ.

ಅಧ್ಯಕ್ಷರು : ಮಾತನಾಡಲಿ, ಮಾತನಾಡುವುದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ. ಆದರೆ ಇವತ್ತು ಶುಕ್ರವಾರ ಎರಡೂವರೆಗೆ ಮುಗಿಸಿ ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಎಲ್ಲಾ ಶಾಸಕರು ಇರಬೇಕು, ಮಂತ್ರಿಗಳು ಇರುತ್ತಾರೆ, ಆದರೆ ಎಲ್ಲಾ ಶಾಸಕರು ಇರಬೇಕು.

ಶ್ರೀ ವೆಂಕಟರಾವ್ ನಾಡಗೌಡ : ಎಲ್ಲರಿಗೂ ಅವಕಾಶ ಕೊಡಬೇಕು ಎನ್ನುವುದು ನಿಮ್ಮ ಉದ್ದೇಶ. ಹೀಗಾಗಿ ಇದಕ್ಕೆ ಇನ್ನೊಂದೆರಡು ದಿವಸ ಕೊಡಿ ಎಂದು ಕೇಳಿದ್ದು.

ಅಧ್ಯಕ್ಷರು : ಆಯಿತು ಬಿಡಿ. ಸರ್ಕಾರದವರು ಏನು ಹೇಳುತ್ತಾರೆ ನೋಡೋಣ.

ಶ್ರೀ ವೆಂಕಟರಾವ್ ನಾಡಗೌಡ : ನಮ್ಮವರಿಗೆ ಮೂರು ಜನಕ್ಕೆ ಮಾತ್ರ ಅವಕಾಶ ಕೊಟ್ಟಿದ್ದೀರಿ.

ಶ್ರೀ ಸಿದ್ದರಾಮಯ್ಯ : ಶಾಸಕರು ಏನು ಹೇಳುತ್ತಾರೋ ಗೊತ್ತಿಲ್ಲ. ಇಲ್ಲಿ ಯಾರೂ ಮುಂದುಗಡೆ ಮಂತ್ರಿಗಳು ಇಲ್ಲ. ಮಾನ್ಯ ಉದಾಸಿಯವರು ಏನು ಹೇಳುತ್ತೀರಿ? ನೀವು ಮುಂದುಗಡೆ ಕುಳಿತುಕೊಂಡು ಏನು ಹೇಳುತ್ತೀರಿ?

ಅಧ್ಯಕ್ಷರು : ತಿಳಿದುಕೊಂಡು ಹೇಳುತ್ತಾರೆ ಬಿಡಿ. ನಂತರ ಅವರನ್ನು ಕೇಳೋಣ. ಪಾಟೀಲ್‌ರವರೆ ತಾವು ಮುಂದುವರಿಸಿ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ಇವತ್ತು ನಮ್ಮ ಸಭಾನಾಯಕರು ಹಿಂದೆ ಹಣಕಾಸಿನ ಸಚಿವರಾಗಿದ್ದರು. ಏಕೊ ಏನೋ ಗೊತ್ತಿಲ್ಲ, 35 ತಿಂಗಳ ನಂತರ ಚೈನಾದಲ್ಲಿ ಹೋದ ತಕ್ಷಣ ನಮ್ಮ ಸಭಾನಾಯಕರಿಗೆ ಜ್ಞಾನೋದಯ ವಾಗಿದೆ. ಸರಕಾರದ ಮಂತ್ರಿಗಳಿಗೆ ಜ್ಞಾನೋದಯವಾಗಿದೆ. ನಾವು ಹಿಂದಿನ ಇತಿಹಾಸದಲ್ಲಿ ಓದಿ ತಿಳಿದ ಹಾಗೆ, ಗೌತಮ್‌ಬುದ್ಧ ಗಿಡದ ಕೆಳಗೆ ಧ್ಯಾನ ಮಾಡುವಂಥ ಸಂದರ್ಭದಲ್ಲಿ ಅವರಿಗೆ ಜ್ಞಾನೋದಯ ವಾಯಿತು ಎಂದು ಓದುತ್ತೇವೆ. ನಮ್ಮ ಸಭಾನಾಯಕರು ಬಹುಶಃ ನಲವತ್ತು ವರ್ಷಗಳ ಕಾಲ ಈ ರಾಜ್ಯದ ಪ್ರತಿಯೊಂದು ಹಳ್ಳಿಯನ್ನು ತಿರುಗಿರತಕ್ಕಂಥವರು, ಆದರೆ ಇವರಿಗೆ ಜ್ಞಾನೋದಯವಾಗಿದ್ದು ಎಲ್ಲಿ ಎಂದರೆ ಚೈನಾದಲ್ಲಿ. ಸ್ವಾಮಿ, ಈ ಸರ್ಕಾರ ಬಂದ ಮೇಲೆ ಹಳ್ಳಿಗಳ ಬಗ್ಗೆ ಚಿಂತನೆಯಿರಲಿಲ್ಲ, ಅವರು ಈಗ ಗ್ರಾಮೀಣಾಭಿವೃದ್ಧಿ ಬಗ್ಗೆ ಪ್ರಸ್ತಾವನೆ ಮಾಡಿದ್ದಾರೆ. ಗ್ರಾಮದ ಶಾಲೆಗಳ ಬಗ್ಗೆ ಇವರಿಗೆ ಚಿಂತನೆಯಿರಲಿಲ್ಲ. ಇವರಿಗೆ ಚಿಂತನೆ ಇದ್ದದ್ದು ಮಠಗಳ ಬಗ್ಗೆ. ನೂರಾರು ಕೋಟಿ ರೂಪಾಯಿಗಳನ್ನು ಹೋದ ಕಡೆಗೆಲ್ಲಾ ದಾನ ಮಾಡುವುದರ ಬದಲು, ಆವತ್ತೇ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಸದಸ್ಯರು ಸಭಾನಾಯಕರಿಗೆ ಸಲಹೆ ನೀಡಿದ್ದೆವು. ಸ್ವಾಮಿ ಹಳ್ಳಿಗಳ ಕಡೆಗೆ ನೋಡಿ, ನೂರಾರು ಕೋಟಿ ರೂಪಾಯಿಗಳನ್ನು ಮಠಕ್ಕೇನು ಕೊಟ್ಟಿರಿ, ಅದನ್ನು ಕರ್ನಾಟಕ ರಾಜ್ಯದ ಸುಮಾರು ಇಪ್ಪತ್ತೈದು ಸಾವಿರ ಹಳ್ಳಿಗಳ ಶಾಲೆಗಳಿಗೆ ಕೊಟ್ಟಿದ್ದರೆ ಅವರು ಇವತ್ತು ತಮ್ಮ ತಮ್ಮ ಶಾಲೆಗಳಿಗೆ

ಕಾಂಪೌಂಡ್ ಹಾಕುತ್ತಿದ್ದರು. ಇನ್ನೊಂದು ಕಡೆಗೆ ಜನರಿಗೆ ನೀವು ಮೋಸ ಮಾಡುವುದಕ್ಕೆ ಆಗುವುದಿಲ್ಲ. ತಾವೇನು ಇವತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತೇನೆಂದು ಒಂದು ಗಿಮಿಕ್ ಅನ್ನು ಈ ರಾಜ್ಯದಲ್ಲಿ ಕ್ರಿಯೇಟ್ ಮಾಡಲಿಕ್ಕೆ ನೀವು ಏನು ಅಧಿವೇಶನದಲ್ಲಿ ಸರಕಾರದ ಕಲಾಪವನ್ನು ಇಟ್ಟಿದ್ದೀರಿ, ಇದರ ಔಚಿತ್ಯವನ್ನು ನಾನು ಪ್ರಶ್ನಿಸುತ್ತೇನೆ. ಕಳೆದ ನಾಲ್ಕು ಬಜೆಟ್‌ನ್ನು ಈ ವಿಧಾನ ಸಭೆಯ ಸಭಾನಾಯಕರು ಏನು ಇದ್ದಾರೆ, ಅವರು ನಾಲ್ಕು ಬಜೆಟ್‌ನ್ನು ಮಂಡನೆ ಮಾಡಿದ್ದಾರೆ. ನಾಲ್ಕು ಬಜೆಟ್‌ಗಳಲ್ಲಿ ನೀವು ಗ್ರಾಮೀಣಾಭಿವೃದ್ಧಿಗೆ ಇಟ್ಟಂಥ ಹಣ ಎಷ್ಟು? ಖರ್ಚು ಮಾಡಿರುವುದು ಎಷ್ಟು? ಇದರ ಬಗ್ಗೆ ಚರ್ಚೆಯಾಗಲಿ. ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿಗೆ ಎಷ್ಟು ಹಣ ಕೊಟ್ಟಿದ್ದೀರಿ? ಎಷ್ಟು ಖರ್ಚು ಮಾಡಿದಿರಿ? 2004–05 ರಲ್ಲಿ ಗ್ರಾಮಪಂಚಾಯಿತಿಗಳಿಂದ ಸ್ವೀಕೃತಿ ಮತ್ತು ವೆಚ್ಚದ ಬಗ್ಗೆ ಹೇಳುವುದಾದರೆ, ಮೊನ್ನೆ ಸಭಾನಾಯಕರು ಅಧಿವೇಶನದಲ್ಲಿ ಲೆಕ್ಕ ಪರಿಶೋಧಕರ ವರದಿಯನ್ನು ಮಂಡಿಸಿದರು. ಅದನ್ನು ತೆಗೆದು ಓದಿದರೆ ಇವರ ಹಣೆಬರಹ ಏನು ಇದೆ, ಇವರ ಇತಿಹಾಸ ಏನು ಇದೆ, ಎನ್ನುವುದು ಹೇಳುತ್ತದೆ. 2004–05 ರಲ್ಲಿ ನಮ್ಮ ನಾಯಕರಾದ ಸನ್ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಈ ರಾಜ್ಯದ ಗ್ರಾಮಪಂಚಾಯಿತಿಗಳ ಹಣಕಾಸು ಸ್ವೀಕೃತಿ ಮತ್ತು ವೆಚ್ಚ ಅತಿ ಹೆಚ್ಚಿನ ಮಟ್ಟದಲ್ಲಿತ್ತು. ತದನಂತರವೂ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿಯೂ ಇನ್ನೂ ಏರಿಕೆ ಮಟ್ಟವನ್ನು ಕಾಣಿತು. ಯಾವಾಗ 2006–07 ರಲ್ಲಿ ನೀವು ಅಧಿಕಾರಕ್ಕೆ ಬಂದಿರೋ ಪ್ರಾರಂಭವಾಯಿತು ಗ್ರಾಮ ಪಂಚಾಯಿತಿಗಳ ಅಧೋಗತಿ. ಏತಕ್ಕೆ ಖರ್ಚು ಮಾಡಿದಿರಿ?

(ಗೊಂದಲ)

ಶ್ರೀ ಸಿದ್ದು ಸವದಿ : ಹಣೆಬರಹ ಎಂದು ಏಕೆ ಹೇಳುತ್ತೀರಿ? ವಿಷಯ ಡೈವರ್ಟ್ ಮಾಡಬೇಡಿ. ಕೃಷಿಯ ಬಗ್ಗೆ ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಿ, ಸಲಹೆ ಕೊಡಿ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ನಾನು ಏನು ಮಾತನಾಡಬೇಕೆಂದು ಹೇಳುವುದಕ್ಕೆ ನಿಮಗೆ ಅಧಿಕಾರವಿಲ್ಲ. ನಾನೇನು ಮಾತನಾಡಬೇಕೆಂದು ನನಗೆ ಗೊತ್ತಿದೆ. ಈ ಜಿಲ್ಲೆಯ ರೈತರನ್ನು ನೀವು ವಂಚಿಸುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದು ಸವದಿ : ಗ್ರಾಮೀಣಾಭಿವೃದ್ಧಿ ಬಗ್ಗೆ ಸಲಹೆ ಕೊಡಲಿ, ಹಿಂದೆ ಮಾಡಿದ್ದು ಅವರು ಏನು ಹೇಳುತ್ತಾರೆ?

(ಗೊಂದಲ)

ಡಾ: ಶರಣ ಪ್ರಕಾಶ್‌ರುದ್ರಪ್ಪ ಪಾಟೀಲ್ : ಹಾಗಾದರೆ ಹೇಗೆ ಮಾತನಾಡಬೇಕೆಂದು ಅವರು ಹೇಳಲಿ.

(ಗೊಂದಲ)

ನಾವೇನು ಸರ್ಕಾರ ಬರೆದು ಕೊಟ್ಟಿರುವುದನ್ನು ಓದುವುದಕ್ಕೆ ಬಂದಿದ್ದೇವೆಯೆ?

(ಗೊಂದಲ)

ಶ್ರೀ ಸಿದ್ದು ಸವದಿ : 55 ವರ್ಷದಲ್ಲಿ ಏನೇನು ಆಗಿದೆ ಎಲ್ಲಾ ಚರ್ಚೆ ಮಾಡೋಣ. ಅದರ ಬಗ್ಗೆ ಚರ್ಚೆಗೆ ಕೊಡಲಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಶ್ರೀಕಾಂತ ಕುಲಕರ್ಣಿಯವರೆ ಕುಳಿತುಕೊಳ್ಳಿ.

ಶ್ರೀ ಬಿ.ರಮಾನಾಥ ರೈ : ಈ ರಾಜ್ಯದ ರೈತರನ್ನು ಈ ರಾಜ್ಯದ ಜನರನ್ನು ವಂಚಿಸಿದ್ದೀರಿ.

ಅಧ್ಯಕ್ಷರು : ರಮಾನಾಥ ರೈ ರವರೆ, ದಯಮಾಡಿ ನೀವು ಕುಳಿತುಕೊಳ್ಳಿ. ಎಲ್ಲರೂ ಕುಳಿತುಕೊಳ್ಳಿ. ಪ್ಲೀಸ್ ರಮಾನಾಥ ರೈ ರವರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) : ನಾನೇನು ಮಾತನಾಡಬೇಕೆಂದು ನಿಮ್ಮಿಂದ ಕಲಿಯಬೇಕಾಗಿಲ್ಲ.

ಅಧ್ಯಕ್ಷರು : ನೋಡಿ ಸಿದ್ದು ಸವದಿಯವರೆ, ಪ್ಲೀಸ್ ಇಲ್ಲಿ ಕೇಳೀ, ಯಾರ್‍ಯಾರೋ ಪರಸ್ಪರ ಈ ರೀತಿಯಾಗಿ ನಿಮ್ಮಲ್ಲಿ ಮಾತನಾಡಬೇಡಿ. ನೋಡಿ ಸಿದ್ದು ಸವದಿಯವರೆ, ನಿಮ್ಮದೇನಾದರೂ ಪಾಯಿಂಟ್ ಆಫ್ ಅರ್ಡರ್ ಇದ್ದರೆ ನನಗೆ ಹೇಳಿ. ಈಗ ತಾವು ಹೇಳಿ. ತಮ್ಮದೇನು ಅಬ್ಜೆಕ್ಷನ್ ಇದೆ ಅದನ್ನು ಹೇಳಿ. ಎಲ್ಲರೂ ಒಟ್ಟಿಗೆ ಹತ್ತು ಜನ ಎದ್ದು ನಿಲ್ಲಬೇಡಿ.

ಅಧ್ಯಕ್ಷರು : ಮಾನ್ಯ ರಮಾನಾಥ್ ರೈರವರೆ, ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ : ನಾನು ಏನು ಮಾತನಾಡಬೇಕೆಂಬುದನ್ನು ನಿಮ್ಮಿಂದ ಕಲಿಯಬೇಕಾಗಿಲ್ಲ.

ಅಧ್ಯಕ್ಷರು : ಯಾರು ಪರಸ್ಪರ ಮಾತನಾಡುವುದಕ್ಕೆ ಹೋಗಬೇಡಿ. ಮಾನ್ಯ ಸಿದ್ದು ಸವದಿಯವರೆ ನಾನು ನಿಮಗೆ ಹೇಳುವುದೇನೆಂದರೆ, ಏನಾದರೂ Point of Order ಇದ್ದರೆ ನನಗೆ ಹೇಳಿ. ನಿಮ್ಮದು ಏನು ಅಬ್ಜೆಕ್ಷನ್ ಇದೆ ಹೇಳಿ? ಇಂದೇ ಸಾರಿ 10 ಜನ ಎದ್ದು ನಿಂತುಕೊಳ್ಳುವುದಕ್ಕೆ ಹೋಗಬೇಡಿ. **(ಗೊಂದಲ)** ಬೇರೆ ಯಾರು ಮಾತನಾಡಬೇಡಿ. ಯಾರಾದರೂ ಒಬ್ಬರು ಮಾತನಾಡಿ. ಇಲ್ಲಿ ಪರಸ್ಪರ ಆರ್ಗ್ಯುಮೆಂಟ್ ಮಾಡಬೇಡಿ. ಮಾತನಾಡುವುದಕ್ಕೆ ನಾನು ಒಬ್ಬರಿಗೆ ಹೇಳಿದ್ದೇನೆ. ಅವರು ಮಾತನಾಡಿದ ಬಳಿಕ ನೀವೂ ಕೂಡ ಮಾತನಾಡಿ. ಒಂದೇ ಸಾರಿ 10 ಜನ ಎದ್ದು ನಿಂತುಕೊಂಡು ಮಾತನಾಡಿದರೆ ಯಾರಿಗೆ ಕೇಳಿಸುತ್ತದೆ?

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಮಾಣ್ಯ ಸಿದ್ದರಾಮಯ್ಯನವರು ಹಣಕಾಸಿನ ಮಂತ್ರಿಯಾಗಿದ್ದಾಗ ಅವರು ಕಾಂಗ್ರೆಸ್ ಪಕ್ಷದಲ್ಲಿರಲಿಲ್ಲ. ಆಗ ಅವರು ಜೆಡಿಎಸ್ ಪಕ್ಷದಲ್ಲಿದ್ದರು. ಆದ್ದರಿಂದ, ಏನಾದರೂ ಕೀರ್ತಿ ಸಲ್ಲಬೇಕಾದರೆ ಅವರ ಪಕ್ಷಕ್ಕೆ ಸಲ್ಲಬೇಕು. ಆದ್ದರಿಂದ, ಇವರು ಸಮರ್ಥನೆ ಮಾಡಿಕೊಳ್ಳುವುದು ಸರಿಯಲ್ಲ. ಈ ವಿಷಯ ಬಿಟ್ಟು ಬೇರೆ ಬೇರೆ ಆಪಾದನೆ ಗಳನ್ನು ಮಾಡುವುದಕ್ಕೋಸ್ಕರ ಈ ಅಧಿವೇಶನ ಕರೆದಿಲ್ಲ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಒಳ್ಳೆಯ ಸಲಹೆ ಕೊಡಬೇಕೆಂಬ ಉದ್ದೇಶದಿಂದ ಸಭೆ ಕರೆಯಲಾಗಿದೆ. ಅಂದರೆ, ರಾಜ್ಯದಲ್ಲಿ ರೈತರ ವಿಚಾರದಲ್ಲಿ ಮತ್ತು ಗ್ರಾಮೀಣ ಪ್ರದೇಶದ ಬಗ್ಗೆ ಏನು ಆಗಿದೆ, ಮತ್ತೆ ಏನು ಆಗಬೇಕೆಂಬುದರ ಬಗ್ಗೆ ಸಲಹೆ ಕೊಡಬೇಕೆಂದು ಸಭೆ ಕರೆಯಲಾಗಿದೆ. ಅದನ್ನು ಬಿಟ್ಟು ಕೇವಲ ಆಪಾದನೆ ಮಾಡುವುದು ಸರಿಯಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ಇದು point of order ಆಗುವುದಿಲ್ಲ.

ಅಧ್ಯಕ್ಷರು : point of order ಎಂದು ಅಲ್ಲ. ನಾನು ಅವರಿಗೆ ಏನೆಂದು ಹೇಳಲಿ?

ಶ್ರೀ ಸಿದ್ದು ಸವದಿ : ಈ ದೇಶವನ್ನು 50 ವರ್ಷಗಳ ಕಾಲ ಕಾಂಗ್ರೆಸ್ ನವರು ಆಳಿದ್ದಾರೆ. ಅವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದ್ದರೆ ನಮ್ಮ

ರಾಜ್ಯಕ್ಕೆ ಈ ಸಮಸ್ಯೆ ಏಕೆ ಬರುತ್ತಿತ್ತು? ಅವರು ಮಾಡಿದ್ದರೆ ಈ ಸಮಸ್ಯೆ ಇರುತ್ತಿರಲಿಲ್ಲ. ಆದ್ದರಿಂದ, ಇದರ ಬಗ್ಗೆ ಅವರು ಮೊದಲು ಗಮನಿಸಬೇಕು.

ಅಧ್ಯಕ್ಷರು : ಎಲ್ಲರೂ ಎದ್ದು ನಿಂತುಕೊಂಡು ಮಾತನಾಡುವುದಕ್ಕೆ ಹೋಗಬೇಡಿ. ಮಾನ್ಯ ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರೆ, ನಿಮ್ಮ ನಾಯಕರಾದ ಮಾನ್ಯ ಜಯಚಂದ್ರರವರು ಮಾತನಾಡುವುದಕ್ಕೆ ಎದ್ದು ನಿಂತುಕೊಂಡಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಿರ್ದಿಷ್ಟವಾದಂಥ ವಿಚಾರವನ್ನು ಚರ್ಚೆ ಮಾಡುವುದಕ್ಕೋಸ್ಕರ ವಿಶೇಷವಾಗಿ ಸದನವನ್ನು ಕರೆಯಲಾಗಿದೆ. ಇದರ ವ್ಯಾಪ್ತಿ ಎಷ್ಟೆಂದು ಹೇಳುವುದಕ್ಕೆ ಆಗುವುದಿಲ್ಲ. ಭೂಮಿಯಿಂದ ಆಕಾಶದವರೆಗೆ ಇದರ ವ್ಯಾಪ್ತಿ ಇದೆ. ಇಂಥದ್ದರಲ್ಲಿ ಅನೇಕ ರೀತಿಯ ಸಲಹೆಗಳನ್ನು ಇದರ ಬಗ್ಗೆ ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಕೇಳಿದ್ದಾರೆ. ಅಂದರೆ, ಸಲಹೆಗಳನ್ನು ಯಾವ ರೀತಿಯಾಗಿ ಪಡೆಯಬೇಕೆಂಬುದನ್ನು ಕೇಳಿದ್ದಾರೆ. ಯಾವ ಯಾವ ಅಂಶಗಳ ಬಗ್ಗೆ ಹೇಳಿದ್ದಾರೆಂಬುದನ್ನು ತಾವು ದಯಮಾಡಿ ಓದಬೇಕು. ನಾವು ಯೋಚಿಸ ಬೇಕಾದ ಕೆಲವು ಅಂಶಗಳೆಂದು ಕೆಲವು ವಿಷಯಗಳನ್ನು ಹೇಳಿದ್ದಾರೆ. ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ಪುಸ್ತಕ ನನಗೆ ಸಿಕ್ಕಿರಲಿಲ್ಲ. ನಾನು ಮಾತನಾಡಿದ ನಂತರ ಈ ಪುಸ್ತಕ ನನಗೆ ಸಿಕ್ಕಿದೆ. ಇದರಲ್ಲಿ ಏನು ಹೇಳಿದ್ದಾರೆಂದರೆ, "ಸುಖ ಶಾಂತಿಗಳ ಬಗ್ಗೆ ನಮ್ಮ ಜೀವನ ದೃಷ್ಟಿ, ಮಾನಸಿಕತೆ ಇದಕ್ಕೆ ಅಗತ್ಯವಾದ ತಯಾರಿ, ತರಬೇತಿ ತರಬೇತಿ–ಚಿಂತನೆ. ಈ ದಿಕ್ಕಿನಲ್ಲಿ ನಮಗೆ ಸಾಮಾಜಿಕ, ಧಾರ್ಮಿಕ ಸಂಘಟನೆಗಳ ಮಾರ್ಗದರ್ಶನ ಸಹಭಾಗಿತ್ವ ಅವಶ್ಯಕ" ಎಂದು ಹೇಳಿದ್ದಾರೆ. ಇದು ನಿಜವಾಗಿಯೂ ಕೂಡ ಬಹಳ ದೊಡ್ಡ ಸಬ್ಜೆಕ್ಟ್ ಆಗಿರುವುದರಿಂದ ಇದರ ಬಗ್ಗೆ ವ್ಯಾಖ್ಯಾನ ಮಾಡಬೇಕಾಗುತ್ತದೆ. ಮತ್ತೆ ಟೀಕಾತ್ಮಕವಾಗಿಯೂ ಕೂಡ ನಾವು ತೆಗೆದುಕೊಳ್ಳಬೇಕಾಗುತ್ತದೆ. ಮತ್ತೆ ಇದರಲ್ಲಿ ಏನು ಹೇಳಿದ್ದಾರೆಂದರೆ, "ಆರ್ಥಿಕವಾಗಿ ಬಹುಪಾಲು ಸ್ವಾವಲಂಬಿಯಾಗಬಲ್ಲ ಹಳ್ಳಿಗಳ ಗುಂಪುಗಳನ್ನು ಗುರುತಿಸುವುದು. ಪರಿಸರದ ವೈಶಿಷ್ಟ್ಯಗಳಿಗೆ ಅನುಗುಣವಾಗಿ ಆರ್ಥಿಕ ಚಟುವಟಿಕೆಗಳನ್ನು ಯೋಜಿಸಿ ಯಶಸ್ವಿಗೊಳಿಸುವುದು. ಅಲ್ಲಿನ ಜನರ ಕೌಶಲ್ಯ ಅಭಿವೃದ್ಧಿಗೊಳಿಸಿ ಹೊರಗಿನ ಮಾರುಕಟ್ಟೆಗಳಿಗೆ ಮಾರಬಹುದಾದ ಸೇವೆ ಮತ್ತು ಉತ್ಪನ್ನಗಳನ್ನು ತಯಾರಿಸುವುದು. ಅದಕ್ಕೆ ಮಾರುಕಟ್ಟೆ ಒದಗಿಸುವುದು". ಇದೇನು ಕಡಿಮೆ ವ್ಯಾಪ್ತಿಯೇ? "ಇವುಗಳ ಬಗ್ಗೆ ಚರ್ಚಿಸಿ

ಸೂಕ್ತವಾದ ಯೋಜನೆಗಳನ್ನು ರೂಪಿಸಿ ಪ್ರಾಯೋಗಿಕವಾಗಿ ರಾಜ್ಯದ ಕೆಲವು ಕಡೆ ಅನುಷ್ಠಾನಗೊಳಿಸಬಹುದು. ಆನಂತರ ಹಂತ ಹಂತವಾಗಿ ಅದರಿಂದ ಕಲಿತ ಪಾಠಗಳಿಂದ ಈ ಯೋಜನೆಗಳನ್ನು ಮಾರ್ಪಡಿಸಿ, ರಾಜ್ಯದಲ್ಲಿ ಇನ್ನೂ ಹೆಚ್ಚಿನ ಕಡೆ ಈ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು. ಈ ದಿಕ್ಕಿನಲ್ಲಿ ನುರಿತ ಸೇವಾ ಸಂಸ್ಥೆಗಳು ಮತ್ತು ತಜ್ಞರಿಂದ ಮಾರ್ಗದರ್ಶನ ಪಡೆಯಬಹುದು". ಕೊನೆಯಲ್ಲಿ ಏನು ಹೇಳಿದ್ದಾರೆಂದರೆ, "ಈ ಅಧಿವೇಶನದ ಕೊನೆಯಲ್ಲಿ ಹತ್ತು ಹಲವು ಉಪಯುಕ್ತ ಯೋಜನೆಗಳು, ವಿಚಾರಗಳು ಸಲಹೆಗಳು ಹೊರಬರಲಿ". ಅಂದರೆ, ಸರ್ವಸ್ವತಂತ್ರವಾಗಿ ಎಲ್ಲರ ಅಭಿಪ್ರಾಯ ಕೂಡ ಬೇಕಾಗುತ್ತದೆ. ಇದನ್ನು ಹೀಗೆ ಎಂದು ನಿರ್ದಿಷ್ಟ ಮಾಡುವುದಕ್ಕೆ ಆಗುವುದಿಲ್ಲ. "ಹೆಚ್ಚು ಜನ ಶಾಸಕರು ಈ ವಿಶೇಷ ಚರ್ಚೆಯಲ್ಲಿ ಭಾಗವಹಿಸುವಂತಾಗಲಿ. ಕೇವಲ ನಮ್ಮ-ನಮ್ಮ ಶಾಸನ ಸಭಾಕ್ಷೇತ್ರಕ್ಕೆ ಮಾತ್ರ ಈ ಚರ್ಚೆ ಸೀಮಿತವಾಗಿರದೆ, ರಾಜ್ಯದ ಸಮಗ್ರ ಕೃಷಿ ಮತ್ತು ಗ್ರಾಮೀಣ ಕ್ಷೇತ್ರಗಳ ಅಭಿವೃದ್ಧಿಗೆ ಪೂರಕವಾಗಿರಲೆಂದು ಹೇಳಿದ್ದಾರೆ. ಮತ್ತೆ ನಿಮ್ಮೆಲ್ಲರ ಸಲಹೆ ಅಂದರೆ, ನಿಮ್ಮ ವೈಯಕ್ತಿಕ ಸಲಹೆಗಳು. ಸೂಚನೆಗಳನ್ನು ಸರ್ಕಾರ ತೆರೆದ ಮನಸ್ಸಿನಿಂದ ಸ್ವೀಕರಿಸುತ್ತದೆಂದು ಹೇಳಿದ್ದಾರೆ". ಮಾನ್ಯ ಮುಖ್ಯ ಮಂತ್ರಿಯವರು ತೆರೆದ ಮನಸ್ಸಿನಿಂದ ಸಲಹೆಗಳನ್ನು ಸವೀಕರಣ ಮಾಡುವಾಗ ಮಾನ್ಯ ಸಿದ್ದು ಸವದಿಯವರೆ, ತಾವೇಕೆ ಅಡ್ಡಿಪಡಿಸುತ್ತಿದ್ದೀರಿ? ಮತ್ತೆ ಇದರಲ್ಲಿ ಏನು ಹೇಳಿದ್ದಾರೆ" ಇಲ್ಲಿ ಹೊರ ಮೂಡಿ ಬರುವ ಯೋಚನೆಗಳನ್ನು ಯೋಜನೆಗಳನ್ನಾಗಿ ಮಾರ್ಪಡಿಸಿ ಮುಂದಿನ ವರ್ಷದ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು." ಆದ್ದರಿಂದ ಮುಂದಿನ ವರ್ಷ ಏನೇನು ಆಗುತ್ತದೆಂಬುದರ ಬಗ್ಗೆ ನಾವು ಕಲ್ಪನೆ ಮಾಡಿಕೊಂಡು ಮಾತನಾಡುವಾಗ ಇದೆಲ್ಲಾ ಬರುತ್ತದೆ. ಮತ್ತೆ ಏನು ಹೇಳಿದ್ದಾರೆಂದರೆ," ಆಯವ್ಯಯ ಪೂರ್ವ ಚರ್ಚೆಯ ಸಮಯದಲ್ಲಿ ಈ ಎಲ್ಲ ವಿಚಾರಗಳನ್ನು ಪರಿಗಣಿಸಿ, ಪರಿಶೀಲಿಸಿ, ಸಂಪನ್ಮೂಲ ಲಭ್ಯತೆಗೆ ಒಳಪಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದ್ದಾರೆ." ಈ ಭಾಷಣದ ಒಟ್ಟಾರೆ ಸಾರಾಂಶ ಕೊನೆಗೆ ಏನೆಂಬುದು ಗೊತ್ತಾಗಿದೆಯಲ್ಲವೆ? ಸಲಹೆಗಳು ಏನೆಂಬುದು ಕೊನೇಪಕ್ಷ ಕಡತದಲ್ಲಿಯಾದರೂ ಉಳಿಯಲಿ. ನಿಮ್ಮ ಮಾರ್ಗ ದರ್ಶನಬೇಡ, ನಮ್ಮ ಅಭಿಪ್ರಾಯಗಳನ್ನು ಅವರು ಕೊಡುತ್ತಾರೆ. ಏಕೆಂದರೆ, ಇದು ಭೂಮಿಯಿಂದ ಆಕಾಶದವರೆಗೆ ಇರತಕ್ಕಂಥದ್ದು. ಮತ್ತೆ ಇದು ಮಾನ್ಯ ಮುಖ್ಯ ಮಂತ್ರಿಯವರ ಚಿಂತನೆ ಕೂಡ ಆಗಿದೆ. Rome cannot be build

in a day. ಒಂದೇ ದಿವಸದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಆದರೆ, ಈ ಎಲ್ಲಾ ವಿಚಾರಗಳನ್ನು ಇಟ್ಟುಕೊಂಡು ಆಯವ್ಯಯವನ್ನು ಹೇಗೆ ಮಾಡಬಹುದೆಂದು ಯೋಚನೆ ಮಾಡುವುದಕ್ಕೆ ಆಗುತ್ತದೆ.? ಅಂದರೆ, ನನ್ನ ಜೇಬಿನಲ್ಲಿ ದುಡ್ಡು ಎಷ್ಟಿದೆ ಎಂಬುದು ಅವಲಂಬಿಸಲಾಗುತ್ತದೆಂಬ ಮಾತನ್ನು ಸಹ ಹೇಳಿದ್ದಾರೆ. ಸಲಹೆ ಕೊಡಬೇಕೆಂದು ಕೇಳಿದ್ದಾರೆ. ಆದ್ದರಿಂದ, ನಾವು ಸಲಹೆ ಕೊಡುತ್ತಿದ್ದೇವೆ.

ಶ್ರೀ ವಿ.ಸಿ. ಚರಂತಿ ಮಠ್ : ಚರ್ಚೆ ಮಾಡಲಿ ಬೇಡವೆಂದು ಯಾರೂ ಹೇಳಿಲ್ಲ. ಆದರೆ, ಹಣೆಬರಹ ವಿಷಯ ಏಕೆ? ಮೊದಲು ನಿಮ್ಮ ಹಣೆಬರಹ ನೋಡಿಕೊಳ್ಳಬೇಕು, ಇದಕ್ಕೆ ಯಾರು ಏನು ಮಾಡುವುದಕ್ಕೆ ಆಗುತ್ತದೆ?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಚರಂತಿ ಮಠ್‌ರವರೆ, ಚರ್ಚೆಯ ಸೀಮಿತ ಇಷ್ಟೆಂದು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಅವರು ಹೇಳಲಿ ಬಿಡಿ, ನೀವೇಕೆ ಹೇಳುವುದಕ್ಕೆ ಹೋಗುತ್ತೀರಿ?

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ಜಯಚಂದ್ರರವರೆ, ನೀವು ಹೇಳಿರುವುದು ನಿಜ. ಆದರೆ, ಹೇಳುವ ರೀತಿ ಬಹಳ ಮುಖ್ಯ.

ಶ್ರೀ ಟಿ.ಬಿ.ಜಯಚಂದ್ರ : ತಾವು ತೆರೆದ ಮನಸ್ಸಿನಿಂದ ನೋಡಬೇಕಾಗುತ್ತದೆ.

ಶ್ರೀ ಎಸ್. ಸುರೇಶ್‌ಕುಮಾರ್ : ತೆರೆದ ಮನಸ್ಸಿನಿಂದಲೇ ಹೇಳುತ್ತಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ : ನಿಮ್ಮಷ್ಟು ಸಂಸ್ಕೃತಿ ನಮಗೆ ಇಲ್ಲದೆ ಇರಬಹುದು. ..

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ನಿಮ್ಮ ಮಾರ್ಗದರ್ಶನ ನಮಗೆ ಬೇಕಾಗಿಲ್ಲವೆಂದು ತಾವು ಹೇಳಿದ್ದೀರಿ. ಆದರೆ, ನೀವಾದರೂ ಒಳ್ಳೆಯ ಮಾರ್ಗದರ್ಶನ ಕೊಡಿ.

ಶ್ರೀ ಟಿ.ಬಿ.ಜಯಚಂದ್ರ : ಇಡೀ ಹೌಸ್‌ನಲ್ಲಿರುವವರೆಲ್ಲ ಎದ್ದು ನಿಂತರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಎಲ್ಲರೂ ಎದ್ದು ನಿಂತು ಪರಸ್ಪರ ಮಾತನಾಡಬೇಡಿ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ನಿಮ್ಮ ಟೇಸ್ಟ್‌ಗೆ ತಕ್ಕಂತೆ ಮಾತನಾಡುವುದಕ್ಕೆ ಆಗುವುದಿಲ್ಲ. ತೆರೆದ ಮನಸ್ಸಿನಿಂದ ಮಾತನಾಡಿ ಎಂದು ಹೇಳಿದ ಮೇಲೆ ಮತ್ತೇಕೆ ಇದಕ್ಕೆಲ್ಲಾ interfere ಆಗುತ್ತಿದ್ದೀರಿ? ಅವರು ಮಾತನಾಡಲಿ ಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಆಡಳಿತ ಪಕ್ಷದ ಸದಸ್ಯರಲ್ಲಿ ನಾನು ಒಂದು ವಿನಂತಿಯನ್ನು ಮಾಡುತ್ತೇನೆ. ಇವತ್ತಿನದಿವಸ ರೈತನ ಬದಕು ಹದಗೆಡುತ್ತಿರುವ ವಿಚಾರ ನಾನು ಹೇಳುತ್ತಿಲ್ಲ. ಯೋಜನಾ ಆಯೋಗದ ವರದಿ ಪ್ರಕಾರವೇ ನಿಮಗೆಲ್ಲಾ ಗೊತ್ತಿದೆ. ಮಾನ್ಯ ಜಯಚಂದ್ರರವರೆ, ತಮಗೆ ಗೊತ್ತಿರುವ ಹಾಗೆ ಕೃಷಿ ಅವಲಂಬನೆ ಇವತ್ತಿನದಿವಸ ಕಡಿಮೆಯಾಗುತ್ತಿದ್ದು, ಮುಂದೆ ಆಹಾರದ ಭದ್ರತೆಗೆ ಧಕ್ಕೆ ಬರುತ್ತದೆಂಬ ಮಾತುಗಳು ಕೇಳಿ ಬರುತ್ತಿವೆ. ಅದಕ್ಕೋಸ್ಕರ ಯಾವುದೇ ರಾಜಕೀಯ ಬೆರೆಸದೆ ನಿಮ್ಮ ಮನಸ್ಸಿನಲ್ಲಿರುವ ಭಾವನೆಗಳು ಮತ್ತು ಸಲಹೆ ಸೂಚನೆಗಳು ಬೇಕೆಂದು ನಾನು ಈ ಚರ್ಚೆಯನ್ನು ಮೂರು ದಿವಸ ಇಟ್ಟುಕೊಂಡಿದ್ದೇನೆ. ಅವರು ಮಾತನಾಡುವುದಕ್ಕೆ ಸಂಪೂರ್ಣ ಅವಕಾಶ ಇದೆ. ಆದ್ದರಿಂದ, ಅವರು ಮಾತನಾಡಲಿ. ಆದರೆ, ಪ್ರಶ್ನೆ ಏನೆಂದರೆ ಯಾವುದೇ ಸಂದರ್ಭದಲ್ಲಿ ನಾವು ನಿಮಗೆ ಬೆಟ್ಟು ತೋರಿಸುವುದಕ್ಕೆ ಹೋಗಿಲ್ಲ. ವಾಸ್ತವಿಕ ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ನಾವು ನೀವು ಏನು ಮಾಡಬಹುದೆಂಬುದರ ಬಗ್ಗೆ ಇವತ್ತಿನ ಚಿಂತನೆಯಾಗಿದೆ. ಯಾವುದನ್ನು ಈಗ ಮತ್ತು ಯಾವುದನ್ನು ಆಮೇಲೆ ಮಾಡಬೇಕೆಂಬುದರ ಬಗ್ಗೆ ನಾವೆಲ್ಲ ಕುಳಿತು ಚರ್ಚೆ ಮಾಡೋಣ. ಮತ್ತೆ ಹಣಕಾಸಿನ ಇತಿಮಿತಿ ಯೊಳಗೆ ಸರ್ಕಾರಕ್ಕೆ ಏನು ಸ್ವಾತಂತ್ರ್ಯ ಇದೆಯೋ ಆ ಇತಿಮಿತಿ ಒಳಗೆ ನಾನು ಮಾಡುತ್ತೇನೆ. ಆದರೆ, ಈ ಸಂದರ್ಭದಲ್ಲಿ ನಾನು ಭರವಸೆ ಕೊಡುವುದೇ ನೆಂದರೆ, ಇವತ್ತು ಹೊಸ ದಿಕ್ಕಿನಲ್ಲಿ ಚರ್ಚೆಯಾಗುತ್ತಿದ್ದು, ನೀವುಗಳು ಬಹಳ ಒಳ್ಳೆಯ ರೀತಿಯಲ್ಲಿ ಸಹಕಾರವನ್ನು ಕೊಡುತ್ತಿದ್ದೀರಿ. ಅನೇಕ ಪ್ರಮುಖ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಸಣ್ಣ ಪುಟ್ಟ ವಿಷಯಗಳಲ್ಲಿ ಎಷ್ಟೇ ನೋವಾಗಿದ್ದರೂ ಕೂಡ ಈ ವ್ಯವಸ್ಥೆಯಲ್ಲಿ ಸ್ವಲ್ಪ ತಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ, ಅವರು ಮಾತನಾಡುವುದನ್ನು ತಾವುಗಳು ಶಾಂತವಾಗಿ ಕೇಳಿ.

ನೀವು ಮಾತನಾಡುವಾಗ ಏನು ಬೇಕಾದರೂ ಹೇಳಿ. ಅಥವಾ ಪೂರ್ಣವಾಗಿ ಅವರೇ ಬೇಕಾದರೆ ಮಾತನಾಡಲಿ. ನೀವು ಕೇವಲ ಕೇಳಿ ಸಾಕು. ಅವರು ಏನು ಸಲಹೆ ಕೊಡುತ್ತಾರೆಯೋ ಅದನ್ನು ಮಾಡುವುದಕ್ಕೆ ನಾವು ಇಲ್ಲಿ ಕುಳಿತುಕೊಂಡಿದ್ದೇವೆ. ನೀವು ನನ್ನ ಹತ್ತಿರ ಬಂದು ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು. ಮಾನ್ಯ ಸಿದ್ಧರಾಮಯ್ಯನವರು ಒಪ್ಪುವುದಾದರೆ, ಈ ಅಧಿವೇಶನವನ್ನು ನಾನು ಹೊಸ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುತ್ತೇನೆ. 60 ದಿವಸ ಅಧಿವೇಶನ ನಡೆಯಬೇಕೆಂದು ನಾನು ಈಗಾಗಲೇ ಹೇಳಿದ್ದೇನೆ. 60 ದಿವಸ ಯಾವ್ಯಾವ ಅವಧಿಯಲ್ಲಿ ನಡೆಯಬೇಕೆಂಬುದನ್ನು ಪಾರ್ಲಿಮೆಂಟ್ ಸಿಸ್ಟಮ್ ಪ್ರಕಾರ ಮಾನ್ಯ ಸಭಾಧ್ಯಕ್ಷರು ಏನು ಸೂಚನೆ ಕೊಡುತ್ತಾರೆಯೋ ಆಯಾ ತಿಂಗಳು ದಿನಾಂಕವನ್ನು ನಿಗದಿ ಮಾಡಿ ಅಧಿವೇಶನ ನಡೆಸೋಣ. 60 ದಿನ ಅಧಿವೇಶನ ನಡೆಯುತ್ತಿಲ್ಲವೆಂದು ಆರೋಪ ಇದೆ. ಹಿಂದೆ ಏಕೆ ನಡೆಯಲಿಲ್ಲವೆಂಬ ವಿಚಾರವನ್ನು ಕೇಳುವುದಕ್ಕೆ ನಾನು ತಯಾರಿಲ್ಲ. ಆದರೆ, ನಾನಂತೂ 60 ದಿವಸ ಅಧಿವೇಶನ ನಡೆಸುವುದಕ್ಕೆ ಬದ್ಧನಾಗಿದ್ದೇನೆ. ಈಗಾಗಲೇ 29 ದಿವಸ ಆಗಿದೆ, ಮತ್ತೆ ಈಗ 6 ದಿವಸ ಆಗುತ್ತಿದೆ. ಒಟ್ಟು 35 ದಿವಸ ಆಯಿತು. ಮತ್ತೆ ಮಳೆಗಾಲದ ಅಧಿವೇಶನ 20 ದಿವಸ ಮಾಡುತ್ತೇನೆಂದು ಹೇಳಿದ್ದೇನೆ. ಆಗ ಒಟ್ಟು 55 ದಿವಸ ಆಗುತ್ತದೆ. ಇನ್ನು ಮುಂದೆ 60 ದಿವಸಕ್ಕಿಂತ ಜಾಸ್ತಿಯಾಗಬೇಕೇ ಹೊರತು ಕಡಿಮೆಯಾಗಬಾರದೆಂಬುದು ನನ್ನ ಉದ್ದೇಶ ಇದೆ. ಒಟ್ಟಿನಲ್ಲಿ ವ್ಯಾಪಕ ಚರ್ಚೆಯಾಗಬೇಕು. ಇವತ್ತು ಗ್ರಾಮೀಣ ಪ್ರದೇಶ ಮತ್ತು ರೈತನ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. 20 ದಿವಸ ಅಧಿವೇಶನ ನಡೆಯುವಂಥ ಸಂದರ್ಭದಲ್ಲಿ ಎರಡು ದಿವಸ ವಿದ್ಯುತ್ ಸಮಸ್ಯೆಗಳ ಬಗ್ಗೆ ಮತ್ತು ಎರಡು ದಿವಸ ನೀರಾವರಿ ಸಮಸ್ಯೆ ಬಗ್ಗೆ ಚರ್ಚೆ ಮಾಡೋಣ. ನಿಮ್ಮ ಆಳವಾದ ಅಭ್ಯಾಸ, ಅಧ್ಯಯನ ಹಾಗೂ ನೀವುಗಳು ಅಧಿಕಾರದಲ್ಲಿದ್ದಾಗ ನಿಮ್ಮ ಅನುಭವಗಳನ್ನು ನಮಗೆ ಹೇಳಿ. ನಾವೇನಾದರೂ ತಪ್ಪು ಹೆಜ್ಜೆ ಇಟ್ಟಿದ್ದರೆ ರಾಜ್ಯದ ಜನತೆಯ ದೃಷ್ಟಿಯಿಂದ ಸರಿಪಡಿಸಿಕೊಂಡು ಮುಂದೆ ಹೋಗೋಣ. ಈ ಒಂದು ದೃಷ್ಟಿಯಿಂದ ಅಧಿವೇಶನದಲ್ಲಿ ಚರ್ಚೆ ಪ್ರಾರಂಭವಾಗುತ್ತಿದೆ. ಆದ್ದರಿಂದ, ಕಂಡಿತಾ ಅವರು ಮಾತನಾಡಲಿ. ನನ್ನ ಆಸೆ ಏನು ಇತ್ತೆಂದರೆ, ನಾನು ಪ್ರಾರಂಭದಲ್ಲಿ ರಾಜಕೀಯ ಬೆರೆಸದೆ ನನ್ನ ಚಿಂತನೆಯ ಹೊಸ ದಿಕ್ಕನ್ನು ತಮ್ಮ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡಿದೆ. ಮಾನ್ಯ ಸಿದ್ಧರಾಮಯ್ಯನವರು ಪ್ರತಿಪಕ್ಷ ನಾಯಕರಾಗಿ ಈ ವಿಚಾರಗಳನ್ನು ಇಟ್ಟಿದ್ದರೆ

ಅದರ ಆಧಾರದ ಮೇಲೆ ಹೊಸದಾಗಿ ಆಯ್ಕೆಯಾಗಿ ಬಂದಿರುವ ಶಾಸಕರು ಸಹ ಇವರ ಮಾರ್ಗದರ್ಶನದ ಮೇರೆಗೆ ಮಾತನಾಡುವುದಕ್ಕೆ ಅವರಿಗೆ ಅನುಕೂಲವಾಗುತ್ತದೆಂಬ ಉದ್ದೇಶದಿಂದ ಮೊದಲು ಅವರು ಮಾತನಾಡಲೆಂದು ನಾನು ವಿನಂತಿ ಮಾಡಿದೆಯಷ್ಟೆ. ಮಾತನಾಡುವುದಕ್ಕೆ ನಿಮಗೆ ಸ್ವಾತಂತ್ರ್ಯ ಇದೆ. ಆದ್ದರಿಂದ, ನಿಮಗೆ ಹೇಳುವುದಕ್ಕೆ ನಾನ್ಯಾರು? ಆದ್ದರಿಂದ, ನಮ್ಮವರ್‍ಯಾರು ಕೂಡ ಅವರಿಗೆ ಅಡ್ಡಿ ಮಾಡಬೇಡಿ. ಅವರ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲಿ. ಅದರ ಬಗ್ಗೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾವು ಬಹಳ ಮುಖ್ಯವಾಗಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ನಾವು ಏಕೆ ಗುರಿ ತಲುಪುವುದಕ್ಕೆ ಆಗಲಿಲ್ಲವೆಂದು ಮತ್ತು ಗ್ರಾಮೀಣ ಬದುಕಿನಲ್ಲಿ ಹಸನು ಮಾಡುವುದಕ್ಕೆ ಏಕೆ ಆಗಿಲ್ಲವೆಂದು ಹಾಗೂ ಹಳ್ಳಿಯಲ್ಲಿ ಜನರು ಉಳಿದು ಕೊಳ್ಳುವುದಕ್ಕೆ ಅವರಿಗೆ ಬೇಕಾದಂಥ ವಾತಾವರಣವನ್ನು ಹಳ್ಳಿಯಲ್ಲಿ ಏಕೆ ನಿರ್ಮಾಣ ಮಾಡುವುದಕ್ಕೆ ಆಗಲಿಲ್ಲ ಎಂದು ಹೇಳುವಾಗ ಕೆಲವು ಅಭಿಪ್ರಾಯಗಳನ್ನು ಅವರು ಹೇಳುತ್ತಾರೆ. ಅದನ್ನು ಮುಕ್ತವಾಗಿ ಸ್ವೀಕಾರ ಮಾಡಬೇಕು. ನೀವು ಮುಂದೆ ಬಹಳ ದೊಡ್ಡ ಗುರಿಯನ್ನು ಇಟ್ಟುಕೊಂಡು ಆಶಾಭಾವನೆ ಇಟ್ಟುಕೊಂಡು ರೈತರಲ್ಲಿ ಒಂದು ಹೊಸ ಚೈತನ್ಯ ರೈತರ ಬದುಕಿನಲ್ಲಿ ಒಂದು ಹೊಸ ಮಾರ್ಪಾಡು, ಹಳ್ಳಿಗಾಡಿನಲ್ಲಿ ಒಂದು ಹೊಸ ಬದಲಾವಣೆ ತರಬೇಕೆಂದು ಹೇಳಿ ಅಧಿವೇಶನ ಕರೆದಿದ್ದೀರೆಂದು ನಾನು ಅಂದುಕೊಂಡಿದ್ದೇನೆ. ಅಂದಾಗ ಅವರು ಅವರ ಅಭಿಪ್ರಾಯಗಳನ್ನು ಹೇಳಲಿ. ಮಾನ್ಯ ಸವದಿಯವರೆ ನೀವು ಹೇಳಿದ್ದೀರಿ, ನಿಮ್ಮ ಅಭಿಪ್ರಾಯವನ್ನು ನಾವೆಲ್ಲಾ ಕೇಳಿದ್ದೇವೆ. ಪತ್ರಿಕೆಯಲ್ಲಿ ಓದಿದ್ದೇವೆ, ನಿಮಗೆ ಶಹಾಭಾಷ್ ಗಿರಿಯೂ ಬಂದಿದೆ. ಸ್ವಲ್ಪ ಅವರು ಹೇಳುವುದನ್ನು ನೀವು ಕೇಳಿ. ಅವರು ನಿಮ್ಮ ಜಿಲ್ಲೆಯವರು ಎಂದ ತಕ್ಷಣ ನೀವು ಎದ್ದು ಬಿಡುವುದೆ? ಅದನ್ನು ಕೂಡ ನೀವು ತಿಳಿದುಕೊಳ್ಳಬೇಕು. ಪ್ರಜಾಪ್ರಭುತ್ವದಲ್ಲಿ ಟೀಕೆಗಳನ್ನು ಮಾಡುವುದು ಬೇಡವೆಂದರೆ, ಪ್ರಜಾಪ್ರಭುತ್ವ ಉಳಿಯಬೇಕಲ್ಲವೇ? ಸ್ವಲ್ಪ ಸಾವಧಾನದಿಂದ ಸಹನೆಯಿಂದ ತಾಳ್ಮೆಯಿಂದ ನೀವು ಅವರು ಹೇಳುವ ಮಾತನ್ನು ಕೇಳಿ.

ಅಧ್ಯಕ್ಷರು : ಈಗ ಒಂದು ವಿಷಯ, ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಈಗ ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮಾನ್ಯ ಎ.ಎಸ್.ಪಾಟೀಲ್ ರವರಿಗೆ ನನ್ನ ಒಂದು ಸಲಹೆ. ಇಲ್ಲಿ ಶಾಸಕರು ಯಾವ ರೀತಿಯಾಗಿ ಮಾತನಾಡಿದ್ದಾರೆ, ಅವರು

ಗಮನವನ್ನು ಹರಿಸಿದ್ದಾರೆ. ಮಾನ್ಯ ಸಿ.ಟಿ.ರವಿಯವರು ಇಲ್ಲಿಯವರೆಗೆ ಯಾವ ರೀತಿ ಮಾತನಾಡುತ್ತಿದ್ದರು, ಅವರು ನಿನ್ನೆ ಮಾತನಾಡಿರುವ ಸ್ಟೈಲ್‌ನ್ನು ನೀವು ನೋಡಿದ್ದೀರಿ. ಇವತ್ತು ನಾವು ಏನು ವಿಶೇಷ ಅಧಿವೇಶನವನ್ನು ಕರೆದಿದ್ದೇವೆ. ಅದಕ್ಕೆ ಮಹತ್ವ ಬರಬೇಕು. ರಚನಾತ್ಮಕವಾದ ಸಲಹೆಗಳು. ಇವತ್ತು ಪ್ರತಿಪಕ್ಷದವರಿಗೆ ಎಲ್ಲಾ ರೀತಿಯ ಟೀಕೆ ಟಿಪ್ಪಣೆಗಳನ್ನು ಮಾಡುವುದಕ್ಕೆ ಹಕ್ಕು ಇದೆ. ಅದನ್ನು ಅಡೆತಡೆ ಮಾಡುವುದಕ್ಕೆ ನಮಗೆ ಯಾರಿಗೂ ಹಕ್ಕಿಲ್ಲ. ಅವರು ಟೀಕೆ ಮಾಡಿದರೂ ಆಡಳಿತ ಪಕ್ಷದವರು ಸಹಿಸಿಕೊಳ್ಳಬೇಕಾಗುತ್ತದೆ. ರಾಜಕೀಯವಾಗಿ ಮಾತನಾಡಬೇಕಾದರೆ ಯಾವಾಗ ಮಾತನಾಡಬೇಕು, ವಿಶೇಷವಾದ ಪ್ರಸಂಗದಲ್ಲಿ ನಾವು ಯಾವ ರೀತಿ ಮಾತನಾಡಬೇಕು ಎನ್ನುವುದರ ಬಗ್ಗೆ ನಾವೇ ತಿಳಿದುಕೊಳ್ಳಬೇಕಾಗುತ್ತದೆ. ಈಗ ಅವರು ರಾಜಕೀಯವಾಗಿ ಮಾತನಾಡಿದರೂ ಅವರಿಗೆ ಅಡೆತಡೆ ಮಾಡುವುದಕ್ಕೆ ನನಗೆ ಹಕ್ಕಿಲ್ಲ. ಅವರಿಗೆ ಮಾತನಾಡಲಿಕ್ಕೆ ಹಕ್ಕಿದೆ, ಆದರೆ ಯಾವ ಸಂದರ್ಭದಲ್ಲಿ ಅದನ್ನು ಮಾತನಾಡಬೇಕು, ಯಾವ ಸಂದರ್ಭದಲ್ಲಿ ಟೀಕೆ ಮಾಡಬೇಕು ಎನ್ನುವುದರ ಬಗ್ಗೆ ನಾವೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅದನ್ನು ಅರ್ಥಮಾಡಿಕೊಳ್ಳಿ ಎಂದು ಮಾನ್ಯ ಎ.ಎಸ್.ಪಾಟೀಲರಿಗೆ ಮೇಲಿಂದ ಮೇಲೆ ಹೇಳುತ್ತಿರುತ್ತೇನೆ. ಯಾವಾಗಲೂ ರಾಜಕೀಯವಾಗಿ ಮಾತನಾಡುವ ಅವಶ್ಯಕತೆ ಇಲ್ಲವೆಂದು ಹೇಳುತ್ತಾ ತಾವು ರಚನಾತ್ಮಕವಾಗಿ ಸಲಹೆಯನ್ನು ಕೊಡಿ. ಒಂದು ಒಳ್ಳೆಯ ಸಂಪ್ರದಾಯವಾಗಲಿ.

ಶ್ರೀ ಟಿ.ಬಿ.ಜಯಚಂದ್ರ : ತಾವು ಆ ಪೀಠದಲ್ಲಿ ಕುಳಿತು ಸಿ.ಟಿ.ರವಿಯವರು ಬದಲಾವಣೆ ಆಗಿದ್ದಾರೆ, ನೀವು ಬದಲಾವಣೆ ಆಗಬೇಕೆಂದು ಹೇಳಿದ ಮೇಲೆ ನಾನು ಕೂಡ ಸಲಹೆ ಕೊಡುತ್ತೇನೆ, ನೀವೂ ಕೂಡ ಬದಲಾವಣೆ ಆಗಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಒಂದು ಅಥವಾ ಒಂದೂವರೆ ಗಂಟೆಗೆ ರಿಪ್ಲೈ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಯಾವುದನ್ನು ಒಪ್ಪಿಕೊಳ್ಳುವ ಹಾಗಿಲ್ಲ, ಅದಕ್ಕಾಗಿ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಮಾನ್ಯ ಎ.ಎಸ್.ಪಾಟೀಲರವರೆ, ನೀವು 10 ನಿಮಿಷದಲ್ಲಿ ಮುಗಿಸಿ. ಇನ್ನು ಒಬ್ಬಿಬ್ಬರು ಮಾತನಾಡಿದ ನಂತರ ಮುಗಿಸೋಣ. ಆಮೇಲೆ ಮಾನ್ಯ ಸಿದ್ಧರಾಮಯ್ಯನವರು ಮಾತನಾಡಲಿ. ಎಲ್ಲರಿಗೂ ಐದೈದು ನಿಮಿಷ ಕೊಡಿ ಎಂದು ಕೇಳಿದರೆ ಆಗುವುದಿಲ್ಲ.

(ಗೊಂದಲ)

ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಬಗ್ಗೆ ನಿರ್ಣಯವಾಗಿತ್ತು.

ಒಬ್ಬ ಮಾನ್ಯ ಸದಸ್ಯರು : ಸಮಯ ನಿಗದಿ ಮಾಡಿ ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡಿ. ನಾಲ್ಕೈದು ಸಲ ಗೆದ್ದು ಬಂದಿರುವವರು ಆಗಲೇ ಸಲಹೆಯನ್ನು ಕೊಟ್ಟಿದ್ದಾರೆ. ಹೊಸ ಶಾಸಕರಿಗೆ ಸಲಹೆ ಕೊಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವ ಸಂದರ್ಭದಲ್ಲಿ ಹೇಳಿದರು. 60 ದಿವಸ ಸದನ ನಡೆಸುತ್ತೇವೆ ಎಂದು ಇನ್ನು ಒಂದು ದಿವಸ ಅದರಲ್ಲಿ extra ಸೇರಿಕೊಂಡು ಬಿಡಲಿ. ಏಕೆಂದರೆ ಇದು ವಿಶೇಷವಾದಂಥ ಚರ್ಚೆ, ಅವರೇ ಮಂಡಿಸಿರ ತಕ್ಕಂಥದ್ದು. ಅವರೆ ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ಕರೆದಿರುವಂಥದ್ದು. ಇದರಲ್ಲಿ ದಯಮಾಡಿ ಒಂದು ದಿವಸ ಮುಂದುವರೆಸಿ ಕೊಟ್ಟರೆ ಇನ್ನು ಹೊಸದಾಗಿ ಬಂದಿರುವ ಶಾಸಕರು ಮಾತನಾಡಬೇಕೆಂದು ಬಯಸುತ್ತಿದ್ದಾರೆ. ಬರೀ ಎರಡು–ಮೂರು ಸಲ ಬಂದಿರುವವರಿಗೆ ಅವಕಾಶವನ್ನು ಕೊಟ್ಟಿದ್ದೀರಾ? ಹೊಸದಾಗಿ ಬಂದಿರುವವರಿಗೂ ಅವಕಾಶವನ್ನು ಕೊಡಿ, ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿ. ಬಹುಶಃ ಅವರಲ್ಲಿಯೂ ಹೊಸ ಹೊಸ ಚಿಂತನೆಗಳು ಬಂದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಒಳ್ಳೆಯದು ಆಗಬಹುದೆಂದು ನನ್ನ ಭಾವನೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ಸಮಸ್ಯೆಗಳು ಇವೆ. ಬರಗಾಲ ಇನ್ನಿತರ ವಿಷಯಗಳ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೀರಿ. ಅದೇ ರೀತಿ ನಗರ ಪ್ರದೇಶದಲ್ಲಿಯೂ ಸಹಿತ ನಮ್ಮ ರಾಜ್ಯದಲ್ಲಿ 1/3 ಭಾಗದಷ್ಟು ಜನರು ಬೆಂಗಳೂರು ಮತ್ತು ಮೈಸೂರು ನಗರದಲ್ಲಿ ಇದ್ದಾರೆ. ದಯವಿಟ್ಟು ಸಾಕಷ್ಟು ಸಮಸ್ಯೆಗಳು ಅಲ್ಲಿ ಕೂಡ ಇವೆ. ದಯವಿಟ್ಟು ತಾವು ಅದಕ್ಕೂ ಸಮೇತ ಒಂದು ಅವಕಾಶವನ್ನು ಮಾಡಿ ಕೊಡಬೇಕು. ಆದ್ದರಿಂದ ಅದರಲ್ಲಿ ಚರ್ಚೆ ಮಾಡುವುದಕ್ಕೆ ನಮಗೂ ಕೂಡ ಅವಕಾಶವಾಗುತ್ತದೆ.

ಅಧ್ಯಕ್ಷರು : ಮಾನ್ಯ ಪಾಟೀಲರೆ, ನೀವು ಕಂಟಿನ್ಯೂ ಮಾಡಿ, 10 ನಿಮಿಷದಲ್ಲಿ ಮುಗಿಸಿ.

ಶ್ರೀ ಎ.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಹುಶಃ ನನ್ನ ಉದ್ದೇಶ ಅವರಿಗೆ ಅರ್ಥವಾಗಲಿಲ್ಲವೆಂದು ಕಾಣುತ್ತದೆ. ಏಕೆಂದರೆ, ನಾನು ಹೇಳಿರ ತಕ್ಕಂಥದ್ದು ಸರ್ಕಾರದ ಆಡಿಟ್ ರಿಪೋರ್ಟ್‌ನಲ್ಲಿ ಇರತಕ್ಕಂಥದ್ದನ್ನು ಹೇಳಿದೆ ಅಷ್ಟೆ. ಆದರೆ ಯಾಕೋ ನಾನು ಹೇಳಿದ ರೀತಿ ಸ್ವಲ್ಪ ಹಿಡಿಸಲಿಲ್ಲವೆಂದು ಕಾಣುತ್ತದೆ. ತಮ್ಮ, ವಿರೋಧ ಪಕ್ಷದ ನಾಯಕರ, ಮಾನ್ಯ ಸಭಾನಾಯಕರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತೇನೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಬಹುಶಃ ನಾವೆಲ್ಲರೂ ರಾಮರಾಜ್ಯ ಮಾಡಬೇಕು. ಗಾಂಧೀಜಿಯವರು ಕಂಡಂಥ ಗ್ರಾಮ ಭಾರತದ ಕನಸನ್ನು ನನಸು ಮಾಡಬೇಕು. ಬಸವಣ್ಣನವರ ಕಲ್ಯಾಣ ರಾಜ್ಯವನ್ನು ಮತ್ತೆ ಸ್ಥಾಪನೆ ಮಾಡಬೇಕೆಂದು ನಾನು ಮಾತನಾಡುತ್ತಿದ್ದೇವೆ. ಆದರೆ ಮಾತಿಗೂ ಕೃತಿಗೂ ವ್ಯತ್ಯಾಸವಾಗಬಾರದು ಎನ್ನುವುದಕ್ಕೆ ನಾನು ಉದಾಹರಣೆಯನ್ನು ಕೊಟ್ಟೆ ಅಷ್ಟೆ. ಏಕೆಂದರೆ ಸರ್ಕಾರದಲ್ಲಿರತಕ್ಕಂಥವರಿಗೆ ಸಂಪೂರ್ಣವಾದಂಥ ಅಧಿಕಾರವಿದೆ. ತಾವು ಈ ರಾಜ್ಯದ ರೈತನ ಬಡವನ ಜೀವನವನ್ನು ಹಸನು ಮಾಡುವುದಕ್ಕೆ ವಿಧಾನಸಭೆಯಲ್ಲಿ ವಿಶೇಷ ಅಧಿವೇಶನವನ್ನು ಕರೆದಾಗ ಬಹಳ ವ್ಯವಸ್ಥಿತವಾಗಿ ತಾವು ಸದಸ್ಯರುಗಳಿಗೆ ವಿಷಯವನ್ನು ಮಂಡನೆ ಮಾಡುವುದಕ್ಕೆ ಒಂದು action plan ಕೊಡಬೇಕಾಗಿತ್ತು, ನಾನು ತಮ್ಮ ಹೇಳಿಕೆಗಳನ್ನು ನೋಡಿದ್ದೇನೆ. ಮೂರು ದಿವಸ ವಿಶೇಷ ಅಧಿವೇಶನವನ್ನು ಕರೆದಿದ್ದೇವೆ. ಅದಕ್ಕೆ ಗ್ರಾಮೀಣ ಅಭಿವೃದ್ಧಿ ಮತ್ತು ಕೃಷಿಯ ಬಗ್ಗೆ ವ್ಯವಸ್ಥಿತವಾಗಿ ಒಂದು ಚರ್ಚೆಯಾಗ ಬೇಕೆಂದು ಹೇಳಿ ವಿಜಯ ಕರ್ನಾಟಕದಲ್ಲಿ ತಾವು ಕೊಟ್ಟಿರತಕ್ಕಂಥ advertisement ನಲ್ಲಿ ತಮ್ಮ ಕಳಕಳಿಯನ್ನು ನೋಡಿದಾಗ ಬಹಳ ಸಂತೋಷ ವಾಗಿತ್ತು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ Where is the action plan. Where is the finance. ಅದಕ್ಕೆ ಹಣ ಎಲ್ಲಿದೆ.? ಮಾನ್ಯ ಅಬ್ದುಲ್ ಕಲಾಂರವರು ಕಂಡಿರತಕ್ಕಂಥ ಪುರ ಯೋಜನೆಯನ್ನು ಜಾರಿಗೊಳಿ ಸುತ್ತೇವೆಂದು ಹೇಳಿದ್ದೀರಿ. ಏಕೆಂದರೆ ಇದೊಂದು constitution body ತಾವು ಕರೆದು ಸಲಹೆಗಳನ್ನು ಕೇಳಬೇಕಾಗಿದ್ದರೆ, ತಜ್ಞರ ಸಲಹೆಗಳನ್ನು, ಶಾಸಕರ ಸಲಹೆಗಳನ್ನು, ರೈತರ ಸಲಹೆಗಳನ್ನು ತಾವು conference hall ನಲ್ಲೋ ಅಥವಾ ಇನ್ನೆಲ್ಲೋ ಕೇಳಿದ್ದರೆ ಇಡೀ ರಾಜ್ಯದ ಜನ ಕೂಡ ಸಲಹೆಯನ್ನು ಕೊಡುತ್ತಾರೆ. ಅದು ಸ್ವಾಗತಾರ್ಹವಾಗಿರತಕ್ಕಂಥದ್ದು ತಾವು ಮಾಡತಕ್ಕಂಥ ಒಂದು ವಿಚಾರವನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ

ಸಂವಿಧಾನ ಬದ್ಧವಾಗಿರತಕ್ಕಂಥ ಅಧಿವೇಶನದಲ್ಲಿ ಮಾತನಾಡುವಂಥ ಸಂದರ್ಭದಲ್ಲಿ ಜವಾಬ್ದಾರಿ ಸ್ಥಾನದಲ್ಲಿ ಕುಳಿತಿರತಕ್ಕಂಥ ಸರ್ಕಾರ ಒಂದು action plan ಅನ್ನು ಕೊಡಬೇಕಾಗುತ್ತದೆ. ಆ action plan ಇಲ್ಲ. ಅದಕ್ಕೆ ಹಣ ಎಲ್ಲಿಂದ ತರುತ್ತೀರಿ ಎನ್ನತಕ್ಕಂಥ ವಿಚಾರವಿಲ್ಲ. ಏಕೆ ನಾನು ಹೇಳಿದ್ದು ಅಂದರೆ, ತಾವು ಈಗಾಗಲೇ ಗ್ರಾಮೀಣಾಭಿವೃದ್ಧಿಗೋಸ್ಕರ ಮತ್ತು ಕೃಷಿ ಗೋಸ್ಕರ ಸಾವಿರಾರು ಕೋಟಿ ರೂ.ಗಳನ್ನು ಎರಡು ಬಜೆಟ್‌ನಲ್ಲಿ ಮಂಡನೆ ಮಾಡಿರುವುದನ್ನು ನಾನು ಶಾಸಕನಾಗಿ ಬಂದ ಮೇಲೆ ನೋಡಿದ್ದೇನೆ. ಕನಿಷ್ಟ ಪಕ್ಷ ಅದನ್ನಾದರೂ ಕೂಡ ವ್ಯವಸ್ಥಿತವಾಗಿ ಪ್ರಾಮಾಣಿಕವಾಗಿ ಅನುಷ್ಠಾನ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಈ ರಾಜ್ಯದಲ್ಲಿ ಆಗಿದ್ದರೆ ಖಂಡಿತವಾಗಿ ಐದು ವರ್ಷದಲ್ಲಿ ರೈತನ ಬದುಕು ಗ್ರಾಮೀಣ ಪ್ರದೇಶದ ಜನತೆಯ ಬದುಕು ಹಸನಾಗುತ್ತಿತ್ತು ಎನ್ನುವುದಕ್ಕೆ ನಾನು ಉದಾಹರಣೆಯಾಗಿ ಅದು ಸರ್ಕಾರ ಕೊಟ್ಟಿರತಕ್ಕಂಥ ಆಡಿಟ್ ರಿಪೋರ್ಟ್‌ದಲ್ಲಿರುವಂಥದ್ದನ್ನು ನಾನು ಹೇಳಿದ್ದೇನೆ. ನಾನು ಕೂಡ ರೈತನ ಮಗನಾಗಿ ಹುಟ್ಟಿ ಬೆಳೆದು ಬಂದಿದ್ದೇನೆ. 15 ತಿಂಗಳಲ್ಲಿ ನಾನು ನೋಡಿದ್ದೇನೆ. ಈ ವ್ಯವಸ್ಥೆ ಯಾವ ರೀತಿಯಾಗಿ ಮುಂದುವರೆ ಯುತ್ತಿದೆ. ಉದಾಹರಣೆಗೆ, ಉದ್ಯೋಗ ಖಾತ್ರಿ ಯೋಜನೆ, ಇವತ್ತು ಒಂದು ಮಾತನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಏನಾದರೂ ಇವತ್ತು ಗ್ರಾಮೀಣ ಪ್ರದೇಶದಲ್ಲಿ ರೈತರು ಬಡವರು ಬದುಕುತ್ತಿದ್ದರೆ UPA ಸರ್ಕಾರದ ಯೋಜನೆಗಳಿಂದ ಬಂದಿರತಕ್ಕಂಥ ಹಣ ಏನಿದೆ, ಅದರಿಂದ ಸ್ವಲ್ಪ ಅವರು ಉಸಿರಾಡುತ್ತಿದ್ದಾರೆ ವಿನಹಃ ಇವತ್ತು ನಿಮ್ಮ ಯೋಜನೆಗಳು ಯಾವುದು ಕೂಡ ಬಡವರಿಗೆ ತಲುಪುತ್ತಿಲ್ಲ. ಅದಕ್ಕೆ ಏನು ಬೇಕಾಗಿದೆ ಎಂದರೆ, ದಕ್ಷತೆ ಮತ್ತು ಪ್ರಾಮಾಣಿಕತೆ ಬೇಕಾಗಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ತಾವು ಹೇಳಿದಿರಿ. ಹಗರಣಗಳ ಬಗ್ಗೆ ನಾವು ಚರ್ಚೆ ಮಾಡೋಣ. ನಾವು ಅಂದುಕೊಂಡಿದ್ದೆವು, ಈ ಸರ್ಕಾರ ಮಾಡಿರುವ ವೈಫಲ್ಯಗಳು ಏನಿವೆ, ತಪ್ಪುಗಳು ಏನಿದೆ, ಅದನ್ನು ಚೆಲ್ಲತಕ್ಕಂಥ ಒಂದು ಪ್ರಯತ್ನವನ್ನು ನಾವು ಮಾಡಬೇಕು ಎನ್ನುವ ಒಂದು ಆಸೆಯನ್ನು ನಾವು ಇಟ್ಟುಕೊಂಡಿದ್ದೆವು. ಆದರೆ ರಾತ್ರೋರಾತ್ರಿ ತಾವು ಬದಲಾವಣೆ ಮಾಡಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಚರ್ಚೆ ಇಟ್ಟಿರುತ್ತೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನಿಮ್ಮ ವೈಫಲ್ಯಗಳನ್ನು ಕೂಡ ನಾವು ಹೇಳಬೇಕಾಗುತ್ತದೆ. ನೀವು 2006-07 ರಲ್ಲಿ ಸುವರ್ಣ ಗ್ರಾಮಗಳನ್ನು

ಮಾಡುತ್ತೇವೆಂದು ಹೇಳಿ, ಮಾನ್ಯ ಅಬ್ದುಲ್ ಕಲಾಂರವರು ಇಲ್ಲಿಗೆ ಬಂದಾಗ ಗುಲ್ಬರ್ಗಾದಲ್ಲಿ ದೊಡ್ಡದಾಗಿ ತಾವು ಘೋಷಣೆ ಮಾಡಿದಿರಿ. 200 ಗ್ರಾಮಗಳಿಗೆ ಒಂದು ಸಾವಿರ ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತೇನೆಂದು ಹೇಳಿ ಬಿಡುಗಡೆ ಮಾಡಿದಿರಿ. ಸ್ವಾಮಿ, ಇವತ್ತಿನವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದಿರಿ? ಕೇವಲ 458 ಕೋಟಿ ರೂ.ಗಳು 2006–07ನೇ ಸಾಲಿನಿಂದ 2009 ರವರೆಗೆ ಒಂದು ಸಾವಿರ ಗ್ರಾಮಗಳನ್ನು ನೀವು ಏನು ಮಾಡಿದಿರಿ, ಅದಕ್ಕೆ 200 ಗ್ರಾಮಗಳನ್ನು ಹೆಚ್ಚುವರಿಯಾಗಿ ಮಾಡಿದಿರಿ. ಅದಕ್ಕೂ ಕೂಡ ಟೆಕ್ನಿಕಲ್ ಅಪ್ರೂವಲ್ ತೆಗೆದುಕೊಂಡಿಲ್ಲ. ಅಂದರೆ ತಾವು ಈ ರೀತಿಯಾಗಿ ಸರ್ಕಾರವನ್ನು ನಡೆಸಿ ರೈತರಿಗೆ ಬಹಳ ಒಳ್ಳೆಯದು ಆಗಬೇಕು. ಗ್ರಾಮೀಣ ಪ್ರದೇಶದಲ್ಲಿ ನೈರ್ಮಲ್ಯ ಸಂಪೂರ್ಣ ಆಗಬೇಕು ಅಂದರೆ ಹೇಗಾಗುತ್ತದೆ. ಭ್ರಷ್ಟಾಚಾರದ ಬಗ್ಗೆ ನಾವು ಅನೇಕ ಜನ ಮಾತನಾಡಿದ್ದೇವೆ. ಖಂಡಿತವಾಗಿ ಕರ್ನಾಟಕ ರಾಜ್ಯದ 5.5 ಕೋಟಿ ಜನರಲ್ಲಿ 224 ಜನರನ್ನು ಆರಿಸಿದ್ದಾರೆ. ನಿಮ್ಮ ಅಧ್ಯಕ್ಷತೆಯಲ್ಲಿ ಇವತ್ತು ನಾವೆಲ್ಲರೂ ಪ್ರಮಾಣ ಮಾಡೋಣ. ಬಸವಣ್ಣನ ಮೇಲೆ ಆವತ್ತು ಅರೋಪ ಬಂದಿತ್ತು. ಬಸವಣ್ಣನವರು ಒಂದು ಮಾತು ಹೇಳುತ್ತಾರೆ.

"ಅನ್ನದೊಳಗೊಂದಗುಳ, ಹೊನ್ನದೊಳಗೊಂದೊರೆಯ, ವಸ್ತ್ರದೊಳಗೊಂದೆಳೆಯ ಎನಗೆ ಮತ್ತು ಎನ್ನ ಹೆಂಡತಿ ಮಕ್ಕಳಿಗೆ ಬೇಕೆಂದೆತ್ತಿಕೊಂಡನಾದೊಡೆ ತಲೆದಂಡ ತಲೆದಂಡ ಕೂಡಲ ಸಂಗಮದೇವ" ಎಂದು ಪ್ರಮಾಣ ಮಾಡುತ್ತಾನೆ. ಈ ಸರ್ಕಾರ ಪ್ರಮಾಣ ಮಾಡಲಿ, ಎಲ್ಲಿ ನಡೆಯುತ್ತದೆ ನೋಡೋಣ ಭ್ರಷ್ಟಾಚಾರ. ಭ್ರಷ್ಟಾಚಾರವನ್ನು ತಡೆಯತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರದಲ್ಲಿ ಇದ್ದವರು ಯಾರೂ ಮಾಡುತ್ತಿಲ್ಲ. ಇನ್ನೊಬ್ಬರ ಮೇಲೆ ಇನ್ನೊಬ್ಬರು ಗೂಬೆ ಕೂಡಿಸುತ್ತೇವೆ. ಲಕ್ಷಾಂತರ, ಕೋಟ್ಯಾಂತರ ರೂ.ಗಳ ಲೂಟಿಯಾಗುತ್ತಿದೆ.

(11-30 PM)

ಇದಕ್ಕೊಂದು ಪ್ರಾಮಾಣಿಕವಾದಂತಹ ಪ್ರಯತ್ನ ಆಗಬೇಕಾಗಿದೆ. ನಾನು ಮೊದಲ ಬಾರಿಗೆ ಶಾಸಕನಾಗಿ ವಿಧಾನಸಭೆಯ ಒಳಗಡೆ ಬರಬೇಕಾದರೆ ನಾನು ಅನೇಕ ಕನಸುಗಳನ್ನು ಕಂಡು ಬಂದಿದ್ದೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ, ನನ್ನ ದೇವರಹಿಪ್ಪರಗಿ ಮತಕ್ಷೇತ್ರವನ್ನು ಭ್ರಷ್ಟಾಚಾರರಹಿತ ಮತಕ್ಷೇತ್ರವಾಗಿ ಈ ಕರ್ನಾಟಕ ರಾಜ್ಯವು ಘೋಷಣೆಯನ್ನು ಮಾಡಲಿ, ಈ ಸರ್ಕಾರವು ಘೋಷಣೆಯನ್ನು ಮಾಡಲಿ.

ಅದಕ್ಕೆ ನಾನು ತಯಾರಿದ್ದೇನೆ. ಉದ್ಯೋಗ ಖಾತ್ರಿ ಯೋಜನೆಯನ್ನು implement ಮಾಡಿ. ಸರ್ವಶಿಕ್ಷಣ ಅಭಿಯಾನ ಒಂದೊಂದು ಶಾಲೆಯನ್ನು ಕಟ್ಟುವುದಕ್ಕೆ 3 ರಿಂದ 4 ಲಕ್ಷ ರೂಪಾಯಿಗಳು ಸರ್ಕಾರದಿಂದ ಬರುತ್ತದೆ, ಅದರಲ್ಲಿ ಲೂಟಿಯು ನಡೆಯುತ್ತದೆ. ಯಾರಿಗೆ ಹೇಳಬೇಕು. ಇನ್ನೊಂದು ಕಡೆಯಲ್ಲಿ ಬಸವಣ್ಣ ವಚನದಲ್ಲಿ ಹೇಳುತ್ತಾರೆ.

ಅದೇನೆಂದರೆ...

"ತಾಯಿಯ ಮೊಲೆಹಾಲು ನಂಜಾಗಿ ಕೊಲುವಡೆ,
ಬೇಲಿ ಎದ್ದು ಹೊಲವನ್ನು ಮೇಯುವಡೆ,
ಇನ್ಯಾರಿಗೆ ದೂರುವನಯ್ಯ, ಕೂಡಲಸಂಗಮದೇವ"

ನಾನು ಯಾರಿಗೆ ದೂರನ್ನು ಹೇಳಬೇಕು. ನಾವು ಯಾರನ್ನು ಕೇಳಬೇಕು. ನಮ್ಮ ಪರಿಸ್ಥಿತಿಯೇ ಹೀಗಿರಬೇಕಾದರೆ ಇನ್ನು ರೈತರ ಪರಿಸ್ಥಿತಿ ಹಾಗೂ ಗ್ರಾಮೀಣ ಜನರ ಪರಿಸ್ಥಿತಿ ಏನಿದೆ, ನಾನು ಈ ಬಗ್ಗೆ ಮುಕ್ತವಾಗಿ ಮಾತನಾಡುತ್ತಿದ್ದೇನೆ. ನಾನು ಸಿದ್ಧಗಂಗಾಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಪ್ರಸಾದವನ್ನು ಉಂಡು ಬೆಳೆದಂತಹವನಾಗಿದ್ದೇನೆ. ಇವತ್ತು ಇಲ್ಲಿರುವಂತಹ ಭ್ರಷ್ಟಾಚಾರವನ್ನು ನೋಡಿದಾಗ ನನಗೆ ತುಂಬಾ ನೋವಾಗುತ್ತದೆ. ಶಾಸಕರಾಗಿ ನಾವು ಎಷ್ಟು ಅನರ್ಹರಾಗಿದ್ದೇವೆ, ಏನು ಈ ವ್ಯವಸ್ಥೆಯನ್ನು ಬದಲಾವಣೆಯನ್ನು ಮಾಡುವುದರ ಬಗ್ಗೆ ಈ ಸರ್ಕಾರವು ಒಂದು ದಿಟ್ಟವಾದಂತಹ ಹೆಜ್ಜೆಯನ್ನು ತೆಗೆದುಕೊಳ್ಳಬೇಕು. ಏಕೆಂದರೆ, ನಮ್ಮ ಸಭಾನಾಯಕರು ಬಹಳ ಅನುಭವಸ್ಥರು ಇದ್ದಾರೆ. ಅವರು ವಿಧಾನಸಭೆಯಲ್ಲಿ 40 ವರ್ಷಗಳ ಕಾಲ ಸತತವಾಗಿ ಈ ರಾಜ್ಯದ ಆಗುಹೋಗುಗಳನ್ನು ನೋಡಿದ್ದಾರೆ. ಅವರ ಬಗ್ಗೆ ನನಗೆ ವೈಯಕ್ತಿಕವಾಗಿ ತುಂಬಾ ಗೌರವವಿದೆ ಮತ್ತು ವಿಶ್ವಾಸವೂ ಕೂಡ ಇದೆ. ಈ ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಏಕೆಂದರೆ ಇದರ ಬಗ್ಗೆ ಎಲ್ಲರೂ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಇದನ್ನು ಕಾರ್ಯಗತ ಮಾಡುವವರು ಯಾರು? ಒಂದು ಕಥೆಯನ್ನು ಹೇಳುತ್ತಾರೆ. ಒಂದು ಇಲಿಗಳ ರಾಜ್ಯ ಇತ್ತಂತೆ, ಇಲಿಗಳ ರಾಜ್ಯದಲ್ಲಿ ಒಂದು ಕಾಡಿನ ಬೆಕ್ಕು ಬಂದು ಹೊಕ್ಕಿತಂತೆ, ಆ ಕಾಡಿನ ಬೆಕ್ಕು ಬಂದು ಇಲಿಗಳನ್ನು ತಿನ್ನುತ್ತಾ ಇತ್ತು. ಆಗ ಎಲ್ಲಾ ಇಲಿಗಳು ಹೋಗಿ ಇಲಿರಾಜನ ಹತ್ತಿರ ಹೋಗಿ complaint ಮಾಡಿದವಂತೆ. ಏನಾದರೂ ಮಾಡಿ ಕಾಡಿನ ಬೆಕ್ಕು ಒಳಗಡೆ

ಬಾರದ ಹಾಗೆ ಹೇಗೆ ತಡೆಯುವುದು, ಅದು ಬರುವುದು ಗೊತ್ತಾಗಬೇಕಲ್ಲ ಎಂದು ಹೇಳಿದಾಗ ಆ ಕಾಡು ಬೆಕ್ಕಿಗೆ ಒಂದು ಗಂಟೆಯನ್ನು ಕಟ್ಟಬೇಕೆಂದು ತೀರ್ಮಾನವಾಯಿತು. ಹಾಗಾದರೆ ಗಂಟೆಯನ್ನು ಕಟ್ಟುವವರು ಯಾರು ಎನ್ನುವಂತಹ ಪ್ರಶ್ನೆ ಬಂತು. ಇಲ್ಲಿ ಆಗಿರುವುದು ಹೀಗೆ. ಅಧಿಕಾರ ವ್ಯವಸ್ಥೆಯಲ್ಲಿರುವಂತಹ ಕಾಡು ಬೆಕ್ಕುಗಳು ಜನತೆಗೆ ಬಂದಿರುವಂತಹ ಲಕ್ಷಾಂತರ ರೂಪಾಯಿಗಳು, ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡುವವರನ್ನು ಗಂಟೆಯನ್ನು ಕಟ್ಟುವವರು ಯಾರು ಎನ್ನುವಂತಹ ಪ್ರಶ್ನೆ. ಇದನ್ನು ಈ ರಾಜ್ಯದ ಜನತೆ ಕೇಳುತ್ತಿರುವುದು. ಈ ಕೆಲಸವನ್ನು ಸರ್ಕಾರದವರು ಪ್ರಾಮಾಣಿಕವಾಗಿ ಮಾಡಿದ್ದೇ ಆದರೆ, ಖಂಡಿತವಾಗಿಯೂ ಈ ರಾಜ್ಯದಲ್ಲಿ ಒಂದು ಹೊಸ ಯುಗ ಪ್ರಾರಂಭವಾಗುತ್ತದೆ. ಅದಕ್ಕಾಗಿ ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಂಡಿದ್ದೇನೆ. ಮೊದಲು ಪ್ರಾರಂಭವಾಗಿ ಕರ್ನಾಟಕ ರಾಜ್ಯದ 224 ಮತಕ್ಷೇತ್ರಗಳಲ್ಲಿ ಮೊದಲನೆಯದಾಗಿ ನನ್ನ ಮತಕ್ಷೇತ್ರವನ್ನು ಭ್ರಷ್ಟಾಚಾರರಹಿತ ಮತಕ್ಷೇತ್ರವನ್ನಾಗಿ ಸರ್ಕಾರವು ಘೋಷಣೆ ಯನ್ನು ಮಾಡಲಿ. ಅಲ್ಲಿಗೆ ಪ್ರಾಮಾಣಿಕವಾದಂತಹ ಅಧಿಕಾರಿಗಳನ್ನು ಹಾಕಿ. 365 ದಿನಗಳ ಕಾಲ ನಾವು ಅವರ ಜೊತೆಯಲ್ಲಿದ್ದು ನಿಮಗೆ ಸಹಕಾರವನ್ನು ಕೊಟ್ಟು ಕೆಲಸವನ್ನು ಮಾಡುವುದಕ್ಕೆ ಸಿದ್ಧರಿದ್ದೇವೆ. ಆದರೆ ವ್ಯವಸ್ಥೆಯಲ್ಲಿ ಬದಲಾವಣೆಗಳು ಆಗುತ್ತಿಲ್ಲ. ಸರ್ಕಾರಗಳು ಬದಲಾವಣೆಯಾಗಿರಬಹುದು. ಕಾಂಗ್ರೆಸ್, ಜೆಡಿಎಸ್ ಅಥವಾ ಬಿಜೆಪಿ ಸರ್ಕಾರವು ಬಂದಿರಬಹುದು. ನಾನು ಕೇವಲ ನೀವಷ್ಟೇ ತಪ್ಪು ಮಾಡಿದ್ದೀರೆಂದು ಹೇಳುತ್ತಿಲ್ಲ. ಈ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಕಾಣುವುದಕ್ಕೋಸ್ಕರವಾಗಿ ಸುಮಾರು 110 ಜನ ನಾವು ಯುವ ಶಾಸಕರು ಆಯ್ಕೆಯಾಗಿ ಇಲ್ಲಿಗೆ ಬಂದಿದ್ದೇವೆ. ನಮಗೆ ನೀವು ಮಾರ್ಗದರ್ಶನವನ್ನು ಮಾಡಬೇಕು. ಈ ಭ್ರಷ್ಟಾಚಾರವನ್ನು ತಡೆಯುವಂತಹ ಕೆಲಸ ಆಗಬೇಕೆಂದು ಒಂದು ಮನವಿಯನ್ನು ನಾನು ಮಾಡುತ್ತೇನೆ. ಇನ್ನು ಕೊನೆಯದಾಗಿ ಹೇಳುವುದಾದರೆ, ಉದ್ಯೋಗಖಾತ್ರಿ ಯೋಜನೆ ಇರಬಹುದು. ಇನ್ನು ಗ್ರಾಮೀಣ ಪ್ರದೇಶದಲ್ಲಿರುವಂತಹ ಎಲ್ಲಾ ಯೋಜನೆಗಳನ್ನು ಪ್ರಾಮಾಣಿ ಕವಾಗಿ implement ಮಾಡುವಂತಹ ಕೆಲಸವನ್ನು ನಾವು ಮಾಡಿದ್ದೇ ಆದರೆ ಈ ರಾಜ್ಯದಲ್ಲಿ ಖಂಡಿತವಾಗಿ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯ ಆಗುತ್ತದೆ. ಯೋಜನೆಗಳ ಹೆಸರುಗಳು ಬದಲಾವಣೆಯಾಗಬಹುದು, ಮೊದಲು ಏನು ಅನೇಕ ಹೆಸರಿನಲ್ಲಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಇನ್ನು ಮತ್ತೆ ಪುರ ಎಂದು ಹೇಳಿ ನೀವು ತರಬಹುದು. ಇಲ್ಲವೆಂದು ಅಲ್ಲ.

ಆದರೆ ಹೆಸರು ಬದಲಾವಣೆಯಾಗುತ್ತದೆಯೇ ವಿನಃ ವ್ಯವಸ್ಥೆಯಲ್ಲಿ ಬದಲಾವಣೆಗಳು ಆಗುವುದಿಲ್ಲ. ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕಾಗಿದ್ದರೆ ಒಂದು ಇಚ್ಛಾಶಕ್ತಿಯು ಬೇಕಾಗುತ್ತದೆ. ಅದಕ್ಕಾಗಿ ಸ್ವಾಮಿವಿವೇಕಾನಂದರು ಒಂದು ಕಡೆಯಲ್ಲಿ ಹೇಳುತ್ತಾರೆ. "Give me few men and women, who are pure and selfless, I shall shake the world" ಎಂದು ಹೇಳುತ್ತಾರೆ. ಅಂದರೆ ಈ ದೇಶವನ್ನು ಅಭಿವೃದ್ಧಿ ಮಾಡಬೇಕಾಗಿದ್ದರೆ, ಈ ರಾಜ್ಯವನ್ನು ಅಭಿವೃದ್ಧಿ ಮಾಡಬೇಕಾಗಿದ್ದರೆ ಕೆಲವೇ ಕೆಲವು ಜನರು ಪ್ರಾಮಾಣಿಕವಾದಂತಹ ಅಧಿಕಾರಿಗಳನ್ನು, ಪ್ರಾಮಾಣಿಕ ರಾಜಕಾರಣಿಗಳ ಒಂದು ದಂಡಿನ ಅವಶ್ಯಕತೆ ಇದೆ. ಅವರಿಗೆ ಸರಿಯಾದ ಒಂದು ಗೌರವವನ್ನು ಕೊಟ್ಟು ಜವಾಬ್ದಾರಿಗಳನ್ನು ಕೊಟ್ಟು ರಾಜ್ಯದ ಪ್ರತಿಯೊಂದು ಜಿಲ್ಲೆಗಳನ್ನು ಅಭಿವೃದ್ಧಿ ಮಾಡುವತ್ತಾ ಈ ಸರ್ಕಾರ ಖಂಡಿತವಾಗಿಯೂ ಮುನ್ನೋಟದಲ್ಲಿದ್ದರೆ ಮಾತ್ರ ನೀವು ಏನು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಏನು ಇಷ್ಟೆಲ್ಲಾ ಚರ್ಚೆಯನ್ನು ಮಾಡಿದ್ದೀರಿ, ಇಷ್ಟೆಲ್ಲಾ ಸಲಹೆಗಳನ್ನು ಕೊಟ್ಟಿದ್ದಾರೆ, ಅದಕ್ಕೊಂದು ಅರ್ಥ ಬರುತ್ತದೆ. ಇಲ್ಲದೆ ಹೋದರೆ ಇದು ಕೂಡ ಒಂದು ರೀತಿಯಾದಂತಹ ಗಿಮಿಕ್ ಆಗುತ್ತದೆ. ಇದು ಒಂದು ತರಹ ಗಿಮಿಕ್, ನಾವು ಸದನವನ್ನು ಕರೆದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಇಷ್ಟೆಲ್ಲಾ ಚರ್ಚೆಯನ್ನು ಮಾಡಿದ್ದೇವೆ. ಬಡವರ ಮತ್ತು ರೈತರ ಬಗ್ಗೆ ಬಹಳಷ್ಟು ಕಾಳಜಿಯನ್ನು ಹೊಂದಿದ್ದೇವೆ ಎನ್ನುವುದನ್ನು ಹೇಳಿಕೊಳ್ಳುವಂತಹ ಒಂದು ನಾಟಕವಾಗಬಹುದು ಅಥವಾ ಡಾಂಭಿಕತೆಯಾಗಬಹುದೇ ವಿನಃ ಇದು ಪ್ರಾಮಾಣಿವಾದಂತಹ ಪ್ರಯತ್ನವಾಗುವುದಿಲ್ಲ. ಅದಕ್ಕೆ ನಾನು ಪ್ರಶ್ನೆಯನ್ನು ಮಾಡಿರುವುದು. ನೀವು ಒಂದು action planನ್ನು ಮಾಡಿ. Think, Plan and Act. ಮೊದಲು Think ಮಾಡಬೇಕು, ಆಮೇಲೆ plan ಮಾಡಬೇಕು, ಆಮೇಲೆ Act ಮಾಡಬೇಕು. ಅಲ್ಲಿ ತಪ್ಪುಗಳು ಆದಾಗ ಯಾರು ತಪ್ಪುಗಳನ್ನು ಮಾಡುತ್ತಾರೆ, ಅವರನ್ನು ಶಿಕ್ಷಿಸುವಂತಹ ಕೆಲಸಗಳು ಆಗಬೇಕು. ಉದಾಹರಣೆಗೆ ನಾನು ಹೇಳುತ್ತೇನೆ. ಏಕೆ ನಾನು ಆರೋಪ ಮಾಡಬೇಕೆಂದು ಹೇಳುತ್ತಿಲ್ಲ. ಈ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಎಲ್ಲೆಲ್ಲಿ ಏನು ಬಜೆಟ್‌ನಲ್ಲಿ ಘೋಷಣೆಯನ್ನು ಮಾಡಿದ್ದಾರೆ, ಅದನ್ನು implement ಮಾಡುವುದಕ್ಕಾಗಲಿಲ್ಲವೆಂದ ಮೇಲೆ ಹೇಗೆ? ಕೊಟ್ಟ ಕುದುರೆಯನ್ನು ಏರುವುದಕ್ಕೆ ಆಗಲಿಲ್ಲವೆಂದ ಮೇಲೆ ಮತ್ತೆ ಇನ್ನೊಂದು ಕುದುರೆಯನ್ನು

ಬಯಸುವುದರಲ್ಲಿ ಏನಿದೆ? ಈ ವಿಚಾರವನ್ನು ತಮ್ಮ ಮುಂದೆ ಮಂಡನೆ ಮಾಡುತ್ತಿದ್ದೇನೆ. ನಾನು ಇವತ್ತು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಈ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಗ್ರಾಮೀಣ ಪ್ರದೇಶಗಳನ್ನು ಮರೆತಿದ್ದೀರಿ, ಅಲ್ಲಿ ಅಭಿವೃದ್ಧಿಯೂ ಕಡಿಮೆಯಾಗಿದೆ ಎಂಬುವುದಕ್ಕೆ ಏನು ಲೆಕ್ಕ ನಿಯಂತ್ರಕರು ಮತ್ತು ಲೆಕ್ಕ ಪರಿಶೋಧಕರು ವರದಿಯನ್ನು ಕೊಟ್ಟಿದ್ದಾರೆ, ಅದು ಆ ವರದಿಯಲ್ಲಿ ಇದೆ. ಏಕೆಂದರೆ ತಾವು ನನಗೆ ಮಾತನಾಡುವುದಕ್ಕೆ ಸ್ವಲ್ಪ ಸಮಯವನ್ನು ಕೊಟ್ಟಿರುವುದರಿಂದ, ನಾವು ಓದಿಕೊಂಡು ಬಂದಿರುತ್ತೇವೆ, ಯಾರು ಅಂಕಿ ಸಮೇತವಾಗಿ ಸುಳ್ಳು ಭಾಷಣವನ್ನು ಮಾಡಿದರೆ ಅವನ್ನು suspend ಮಾಡಿ. ನಾನು ಹೊರಗಡೆ ಹೋಗುವುದಕ್ಕೆ ಸಿದ್ಧನಿದ್ದೇನೆ. ಅಂಕಿಸಂಖ್ಯೆಗಳ ಸಮೇತವಾಗಿ ನಾನು ಇಲ್ಲಿ ಇಡುವುದಕ್ಕೆ ಸಿದ್ಧನಿದ್ದೇನೆ. ನನಗೆ ಈ ಅಧಿವೇಶನದಲ್ಲಿ ಅಲ್ಲದೇ ಇದ್ದರೂ ಮುಂದಿನ ಅಧಿವೇಶನದಲ್ಲಿ 2 ಗಂಟೆಗಳ ಕಾಲ time ಕೊಡಿ. ನನಗೆ ಎರಡು ಗಂಟೆಗಳ ಕಾಲ ಟೈಮ್ ಕೊಡಿ, ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಏನು ಮಾಡಿದೆ ಎಂದು ಅವರು ಏನು ಹೇಳುತ್ತಾರೆ, ಅದನ್ನು ಸಹ ನಾನು ಸದನದ ಗಮನಕ್ಕೆ ತರುತ್ತೇನೆ. ನೀವು 4 ಬಜೆಟ್ ಮಂಡನೆ ಮಾಡಿದಾಗ ಏನು ಮಾಡಿದ್ದೀರಿ, ಅದನ್ನು ಸಹ ನಾನು ತರುತ್ತೇನೆ. ಅದರ ಬಗ್ಗೆ ನಾವುಗಳು ಚರ್ಚೆಯನ್ನು ಮಾಡೋಣ. ಅದನ್ನು ಬಿಟ್ಟು ಕೇವಲ ಸಲಹೆಗಳನ್ನು ಕೊಡಿ ಎಂದು ಕೇಳಿದ್ದಾರೆ. ನಾವು ಕೊಟ್ಟಂತಹ ಸಲಹೆಗಳು implement ಆಗುತ್ತದೆಯೇ? ಅದರ ಮೇಲೆ ನನಗೆ ನಂಬಿಕೆಯಿಲ್ಲ. ನನಗೆ ಈ ಸರ್ಕಾರ ಮೇಲೆ ನಂಬಿಕೆ ಇಲ್ಲ. ನಾವು ಕೊಟ್ಟಿರುವಂತಹ ಸಲಹೆಗಳನ್ನು ಪ್ರಾಮಾಣಿಕವಾಗಿ ಈ ಸರ್ಕಾರ ಅನುಷ್ಠಾನ ಮಾಡುತ್ತದೆ ಎಂಬ ವಿಶ್ವಾಸ ನನಗೆ ಇಲ್ಲ. ಏಕೆಂದರೆ ನಾವು ಕಳೆದ 15 ತಿಂಗಳಿಂದ ಏನು ಸಲಹೆಗಳನ್ನು ಕೊಟ್ಟಿದ್ದೇವೆ ಅದನ್ನು ಇವರು ಎಷ್ಟರಮಟ್ಟಿಗೆ ಅನುಷ್ಠಾನ ಮಾಡಿದ್ದಾರೆಂದು ನಮಗೆ ಗೊತ್ತಿದೆ. ನಾನು ನೋವಿನಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ. ಜನರ ನೋವನ್ನು ನನ್ನ ಕ್ಷೇತ್ರದಲ್ಲಿ ಊರಿಗೆ ಒಂದು ಕೆರೆ ಇದೆ. ಅದನ್ನು ನಾವು ಮತ್ತು ನೀವುಗಳು ಕಟ್ಟಿಲ್ಲ. ಹಿಂದೆ ಮಹಾರಾಜರ ಕಾಲದಲ್ಲಿಯೇ ಕೆರೆಗಳನ್ನು ಕಟ್ಟಿದ್ದಾರೆ. ಅದರ ಹೂಳು ತೆಗೆಯುವುದಕ್ಕೆ ಒಂದೊಂದು ಕೆರೆಗೆ 10–10 ಲಕ್ಷ ಹಣವನ್ನು ಕೊಡಿ ಎಂದು ಕೇಳಿದರೆ ಹೊಸ ಕೆರೆಗಳನ್ನು ನಿರ್ಮಾಣ ಮಾಡುವುದಕ್ಕೆ ಹಣವನ್ನು ಕೊಡುತ್ತೇವೆ ಎಂದು ಹೇಳುತ್ತಾರೆ.

ಎಲ್ಲಿ ಹೊಸ ಕೆರೆಗಳನ್ನು ನಿರ್ಮಾಣ ಮಾಡಿದ್ದಾರಾ? ಎಲ್ಲಾ ಕಡೆಯಲ್ಲಿಯೂ ಹಣವು ಲೂಟಿಯಾಗಿದೆ. ಇದು ಕಣ್ಣೆದುರಿಗೆ ಕಾಣುತ್ತಿದೆ, ಏನು ಕೆರೆಗಳು ಇವೆ, ಅಲ್ಲಿ ಹೂಳೆತ್ತುವಂತಹ ಪ್ರಾಮಾಣಿಕವಾದಂತಹ ಒಂದು ಕೆಲಸವನ್ನಾದರೂ ಸರ್ಕಾರ ಮಾಡಿದರೆ ಅದು ಮುಗಿದುಹೋಗುತ್ತದೆ. ಅಲ್ಲಿ ಸಂಪೂರ್ಣವಾಗಿ ಕುಡಿಯುವ ನೀರಿನ ಸಮಸ್ಯೆಯು ಬಗೆಹರಿಯುತ್ತದೆ. ನೀರಾವರಿಯ ಬಗ್ಗೆ ನನ್ನ ಆತ್ಮೀಯ ಸ್ನೇಹಿತರಾದಂತಹ ಶ್ರೀ ಬಸವರಾಜ ಬೊಮ್ಮಾಯಿಯವರು, ನಮ್ಮ ಅಣ್ಣನವರು last time ಎರಡು ಸಾರಿ ನನ್ನನ್ನು ಕರೆದು ನನಗೆ ಬಹಳ ಚೆನ್ನಾಗಿ ಹೇಳಿದರು. ಇಲ್ಲಾ ದೋಣಿಗೆ ಬಂದು ನೋಡಿಬಿಡುತ್ತೇನೆ. ದೋಣಿಯಲ್ಲಿರತಕ್ಕಂತಹ ಹೂಳೆತ್ತುವುದಕ್ಕೆ ಆದೇಶವನ್ನು ಕೊಟ್ಟುಬಿಡುತ್ತೇನೆ. ಇವತ್ತಿಗೂ ಆ ದೋಣಿ ಬಂದು 2006ರಲ್ಲಿ ಅದು ಬಂದು 35 ರಿಂದ 40 ಜನರು ಇವತ್ತಿಗೂ ಕೂಡ ಶೆಡ್‌ನಲ್ಲಿ ಬದುಕುತ್ತಿದ್ದಾರೆ. ಅವರಿಗೆ ಇವತ್ತು ಒಂದು ಮನೆಯನ್ನು ಕೊಡುವುದಕ್ಕೂ ಕೂಡ ಆಗುತ್ತಿಲ್ಲ. ನೀರಾವರಿ ಯೋಜನೆಗಳನ್ನು ತಾವು ಘೋಷಣೆಯನ್ನು ಮಾಡಿದ್ದೀರಿ, ಎಲ್ಲಿದೆ ಸ್ವಾಮಿ. ರಾತ್ರೋರಾತ್ರಿ ಚುನಾವಣೆಗಿಂತ ಮುಂಚಿತವಾಗಿ ತಾವು ಅಡಿಗಲ್ಲನ್ನು ಹಾಕಿದ್ದೀರಿ ಈಗ ಅದನ್ನು ಮರೆತಿದ್ದೀರಿ.

ಅಧ್ಯಕ್ಷರು : ತಾವು ಮುಗಿಸಿ, ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ) : ಚಿಮ್ಮಲಗಿ ಏತ ನೀರಾವರಿಗೆ ಅಡಿಗಲ್ಲನ್ನು ಹಾಕಿರುವುದನ್ನು ಮರೆತಿದ್ದೀರಿ. ಮುಳುವಾಡ ಏತ ನೀರಾವರಿಯನ್ನು ಮರೆತಿದ್ದೀರಿ. ಈ ರೀತಿಯಾದರೆ ಗ್ರಾಮೀಣಾಭಿವೃದ್ಧಿ ಮತ್ತು ರೈತರ ಅಭಿವೃದ್ಧಿಯಾಗಬೇಕೆಂದರೆ ಹೇಗೆ ಆಗುತ್ತದೆ?

ಅಧ್ಯಕ್ಷರು : ಒಬ್ಬೊಬ್ಬರೇ ಇಷ್ಟೊಂದು ಸಮಯವನ್ನು ಮಾತನಾಡುವುದಕ್ಕೆ ತೆಗೆದುಕೊಂಡು ಬಿಟ್ಟರೆ ಏನು ಮಾಡುವುದಕ್ಕಾಗುತ್ತದೆ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ದಯಮಾಡಿ ಈ ಸರ್ಕಾರಕ್ಕೆ ಏನು ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ತಾವು ಸರಿಯಾಗಿ implement ಮಾಡದೇಹೋದರೆ ಈ ಸರ್ಕಾರ ಕೇವಲ ನಾಟಕೀಯವಾಗಿ ರೈತರಿಗೆ ಮತ್ತು ಹಳ್ಳಿಗಾಡಿನ ಜನರಿಗೆ ಇನ್ನೊಂದು ರೀತಿಯಾದಂತಹ ಮೋಸವನ್ನು ಮಾಡತಕ್ಕಂತಹ ಕೆಲಸವನ್ನು ಮಾಡುತ್ತೀರಿ ಎಂಬ ಅಭಿಪ್ರಾಯವು ಮುಂದಿನ ದಿನಗಳಲ್ಲಿ ಬರಬಾರದು ಎನ್ನುವುದಕ್ಕೆ ತಮಗೆ ಎಚ್ಚರಿಕೆ ಹಾಗೂ

ಸಲಹೆಯನ್ನು ಕೊಟ್ಟಿದ್ದೇನೆ ಎನ್ನುವಂತಹ ಮಾತನ್ನು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ, ಜೈ ಹಿಂದ್, ಜೈ ಕರ್ನಾಟಕ.

ಅಧ್ಯಕ್ಷರು : ಮಾನ್ಯ ಬಾಲಕೃಷ್ಣರವರೇ, ಜೆಡಿಎಸ್‌ನಿಂದ ನೀವು ಒಬ್ಬರು ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮುಖ್ಯಾಂಶಗಳು ಎಂದು ಐದೈದು ಮಾತುಗಳನ್ನು ಆಡುತ್ತೇವೆ. ಇನ್ನೇನು ಮಾತನಾಡುವುದಿಲ್ಲ. ಒಬ್ಬೊಬ್ಬರು 5 ನಿಮಿಷಗಳ ಕಾಲ ನಾವು ಮಾತನಾಡುತ್ತೇವೆ.

ಅಧ್ಯಕ್ಷರು : ನೀವು ಮತ್ತು ನಿಮ್ಮ ಪಕ್ಷದ ಒಬ್ಬರು ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ತಾವು ಟೈಮ್ ಲಿಮಿಟ್‌ನ್ನು ಮಾಡಿದರೆ ನಾವು ಬೇಕಾದರೆ 10 ನಿಮಿಷದಲ್ಲಿ ಕುಳಿತುಕೊಂಡು ಬಿಡುತ್ತೇವೆ.

ಅಧ್ಯಕ್ಷರು : ನಿಮ್ಮ ಪಕ್ಷದ ಪರವಾಗಿ ನೀವು ಮತ್ತು ಮತ್ತೊಬ್ಬರು ಮಾತನಾಡಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ನಿನ್ನೆ ನನಗೆ ಅವಕಾಶ ಸಿಕ್ಕಿದರೂ ಆಗಲಿಲ್ಲ.

ಅಧ್ಯಕ್ಷರು : ನಿಮ್ಮ ಬಸ್ಸು ಮಿಸ್ಸಾಗಿಬಿಟ್ಟಿತು. ನೀವು ಬಸ್‌ಮಿಸ್ ಮಾಡಿಕೊಂಡು ಬಿಟ್ಟಿರಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ : ನಾನು ಐದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು : ಆಮೇಲೆ ಟೈಮ್ ಸಿಕ್ಕಿದರೆ ನೋಡೋಣ. 12 ಗಂಟೆಗೆ ಪ್ರತಿಪಕ್ಷದ ನಾಯಕರು ಮಾತನಾಡಲಿ. 12 ಗಂಟೆಯವರೆಗೆ ನಾನು ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ. 12 ಗಂಟೆಗೆ ಪ್ರತಿಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಪ್ರಾರಂಭ ಮಾಡಲಿ. ಆಮೇಲೆ ಸರ್ಕಾರದಿಂದ ಉತ್ತರವನ್ನು ಕೊಡುತ್ತಾರೆ.

ಶ್ರೀ ಮಾಲೀಕಯ್ಯ ಗುತ್ತೇದಾರ್ : ನನಗೆ ಐದು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ನಾನು ಸದ್ಯದ ಸಮಯವನ್ನು ದುರುಪಯೋಗ ಮಾಡುವುದಿಲ್ಲ.

ಅಧ್ಯಕ್ಷರು : ಆಮೇಲೆ ಟೈಮ್ ಸಿಕ್ಕಿದ ಮೇಲೆ ನೋಡೋಣ. ಮಾನ್ಯ ಬಾಲಕೃಷ್ಣರವರೆ, ತಾವು ಮಾತನಾಡಿ. ತಾವು ಹತ್ತು ನಿಮಿಷದಲ್ಲಿ ಮುಗಿಸಿ.

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೆ, ಸರ್ಕಾರದ ಒಂದೂವರೆ ವರ್ಷಗಳ ಕಾಲ ನಂತರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ನಾನು ಸ್ವಾಗತ ಬಯಸಿ ಕೆಲವೊಂದು ಸಲಹೆ ಸೂಚನೆಗಳನ್ನು ಏಕೆಂದರೆ ಸರ್ಕಾರ, ಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಮಾಡುವಂಥ ಸಮಯದಲ್ಲಿ ಒಂದು ಮಾತನ್ನು ಹೇಳಿದ್ದಾರೆ. "ಅನ್ನದಾತನ ಮೇಲೆ ಆಣೆ ಇಟ್ಟು ಅಧಿಕಾರಕ್ಕೆ ಬಂದ ನಾವು ಅವರ ಸಂಕಷ್ಟಗಳಿಗೆ ಸ್ಪಂದಿಸಲು ಬದ್ಧರಾಗಿದ್ದೇವೆ, ರೈತರ ಸಂಕಷ್ಟಗಳನ್ನು ತಿಳಿದು ನೇರವಾಗಿ ತಿಳಿದು ಪರಿಹಾರೋಪಾಯಗಳನ್ನು ರೂಪಿಸಲು ರಾಜಧಾನಿಯಿಂದ ಹಿಡಿದು ರಾಜ್ಯದ ಉದ್ದಗಲಕ್ಕೂ ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ರೈತರೊಡನೆ ಸಂವಾದ ನಡೆಸಿದ್ದೇವೆ" ಈ ಒಂದೂವರೆ ವರ್ಷದ ಅವಧಿಯಲ್ಲಿ ಈ ಸಂವಾದಗಳು ಎಲ್ಲೆಲ್ಲಿ ನಡೆದವು, ಎಲ್ಲಿಗೆ ಮುಟ್ಟಿದವು. ಇದರಿಂದ ರೈತರಿಗೆ ಪ್ರಯೋಜನ ಆಗಿದೆಯೋ ಇಲ್ಲವೋ? ಎಲ್ಲೋ ಒಂದು ಕಡೆ ನಾನು ರೈತರನ್ನು, ಗ್ರಾಮೀಣ ಭಾಗದ ಜನರನ್ನು ಮರೆತಿದ್ದೇನೆಂದು ಮುಖ್ಯಮಂತ್ರಿಗಳಿಗೆ ಮನದಟ್ಟಾದ ಮೇಲೆ ಬಹುಶಃ ಇದಕ್ಕೆ ರೈತರನ್ನು, ಗ್ರಾಮೀಣ ಭಾಗದ ಜನಗಳ ಕಡೆಗೆ ದೃಷ್ಟಿ ಕೇಂದ್ರೀಕರಿಸಲಿಕ್ಕೆ ಈ ಅಧಿವೇಶನವನ್ನು ಕರೆದಿದ್ದಾರೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನೇ ಕೇಳುತ್ತೇನೆ, ಈ ಅಧಿವೇಶನದ ಅವಶ್ಯಕತೆ ಇತ್ತೇ? ಈ ಚರ್ಚೆಯ ಅವಶ್ಯಕತೆ ಇತ್ತೇ? ಏಕೆಂದರೆ ನಾವೆಲ್ಲಾ ರೈತರ ಮಕ್ಕಳು ಇರಬಹುದು. ಆದರೆ ನಾವೇನು ಕೃಷಿಯಲ್ಲಿ ಪಾಲ್ಗೊಂಡಿಲ್ಲ. ಇಲ್ಲಿರತಕ್ಕಂಥ ಬಹುತೇಕ ಜನರು ರೈತರ ಮಕ್ಕಳೇ. ನಾವೆಲ್ಲಾ ಜಮೀನು ಹೊಂದಿರ ತಕ್ಕಂಥವರೇ. ನಾವು ಎಲ್ಲಿಯೂ ಕೂಡ ಕೃಷಿಯನ್ನು ಮಾಡುತ್ತಿಲ್ಲ. ಯಾರ ಕೈಯಲ್ಲೋ ಕೃಷಿಯನ್ನು ಮಾಡಿಸುತ್ತಿದ್ದೇವೆ. ಬಹುಶಃ ಮುಖ್ಯಮಂತ್ರಿಗಳನ್ನೇ ಕೇಳುತ್ತೇನೆ, ಈ ರೈತರ ಜಮೀನಿಗೆ ಯೂರಿಯಾವನ್ನು ಯಾವಾಗ ಹಾಕಬೇಕು? DAP ಯಾವಾಗ ಹಾಕಬೇಕು? ಎಷ್ಟೋ ಜನಕ್ಕೆ ಗೊತ್ತಿಲ್ಲ, ನನಗೂ ಸರಿಯಾಗಿ ಗೊತ್ತಿಲ್ಲ. ಯಾವ ಬಿತ್ತನೆ ಬೀಜವನ್ನು ಉಪಯೋಗಿಸಬೇಕು, ಅದಕ್ಕೆ ತಜ್ಞರು ಇದ್ದಾರೆ, ಮುಖ್ಯಮಂತ್ರಿಗಳು ಒಂದು ಮಾತನ್ನು ಇದರಲ್ಲಿ ಹೇಳಿದ್ದಾರೆ. ಕೃಷಿ ಮಿಷನ್‌ನ ಬಗ್ಗೆ ಅವರೊಂದು ಮಾತನ್ನು ಹೇಳಿದ್ದಾರೆ. ಈ ದೇಶದಲ್ಲೇ ಪ್ರಪ್ರಥಮ ಬಾರಿಗೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟು ಕೃಷಿ ವಿಜ್ಞಾನಿಗಳನ್ನು ರೈತ ಪರ ಪ್ರಗತಿ ಪರ ರೈತರನ್ನು ಅಧಿಕಾರಿಗಳನ್ನು, ಸಚಿವರನ್ನು ಎಲ್ಲರನ್ನು ಒಟ್ಟಿಗೆ

ಸೇರಿಸಿ ಕೃಷಿ ಮಿಷನ್ ಅನ್ನು ಸ್ಥಾಪನೆ ಮಾಡಿ ರೈತರಿಗೆ ಅನುಕೂಲ ಮಾಡುತ್ತೇವೆಂದು ಹೇಳಿದ್ದಾರೆ. ಬಹುಶಃ ಇಷ್ಟು ಮಾಡಿದರೆ ರೈತರಿಗೆ ಆಗಬೇಕಾದ ಕೆಲಸ ಕಾರ್ಯಗಳು, ಅವರಿಗೆ ಅನುಕೂಲ ಮಾಡಿಕೊಡ ಬೇಕಾಗಿರುವ ಎಲ್ಲಾ ವಿಚಾರಗಳು ತಿಳಿಯುತ್ತವೆ. ಅದನ್ನು ಮಾಡುವುದನ್ನು ಬಿಟ್ಟು ಈ ಅಧಿವೇಶನವನ್ನು ಏತಕ್ಕೆ ನಡೆಸುತ್ತಿದ್ದಾರೆಂದು ಕೇಳಬಯಸುತ್ತೇನೆ. ಇನ್ನೊಂದು ಮಾತನ್ನು ಮುಖ್ಯಮಂತ್ರಿಗಳು ಹೇಳಿದರು, "ನಾಡಿನ ಸಮಗ್ರ ಅಭಿವೃದ್ಧಿಗಾಗಿ ರಾಜ್ಯದ ಸಂಪೂರ್ಣ ಸಾಮರ್ಥ್ಯವನ್ನು ಸದ್ಬಳಕೆ ಮಾಡುವ ಕನಸನ್ನು ನನಸು ಮಾಡುವ ಉದ್ದೇಶ ನೀಲಿ ನಕ್ಷೆ ಕರ್ನಾಟಕದ 20–20." ಅದು ಎಲ್ಲಿದೆ, ಎಲ್ಲಿ ಮಾಡಿದ್ದಾರೆ? ಅದು ಎಲ್ಲಿ ನಿಂತಿದೆ? ಅದನ್ನು ಮುಂದುವರೆಸುತ್ತಾರೆಂದು ದಯಮಾಡಿ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ನಮಗೆ ತಿಳಿಸಬೇಕೆಂದು ಅವರಲ್ಲಿ ಮನವಿ ಮಾಡುತ್ತೇನೆ. ಅಧ್ಯಕ್ಷರೆ, ಏತಕ್ಕೋಸ್ಕರ ರೈತರ ಬಗ್ಗೆ ಚರ್ಚೆ ಪ್ರಾರಂಭ ವಾಯಿತು? ರೈತನ ಬಗ್ಗೆ ಜಾಸ್ತಿ ಸರ್ಕಾರಗಳಾಗಲಿ, ಅಧಿಕಾರಿಗಳಾಗಲಿ, ರಾಜಕಾರಣಿಗಳಾಗಲಿ ಗಮನಹರಿಸಲಿಕ್ಕೆ ಶುರು ಮಾಡಿದ್ದು ಹತ್ತು ವರ್ಷಗಳಿಂದೀಚೆಗೆ. ಎಲ್ಲಿ ರೈತರ ಆತ್ಮಹತ್ಯೆಗಳು ಪ್ರಾರಂಭವಾದವು, ರೈತರು ಸಾಯುವಂತ ಸ್ಥಿತಿಗೆ ಬಂದರು, ಅವತ್ತು ಈ ಚರ್ಚೆಗಳು ಪ್ರಾರಂಭವಾದವು, ಅಂದು ನಾವು ರೈತನ ಕಡೆಗೆ ತಿರುಗಿ ನೋಡುವಂಥ ವ್ಯವಸ್ಥೆಯನ್ನು ನಾವು ಕಲ್ಪಿಸಿಕೊಂಡೆವು. 2004–2007 ರವರೆಗೆ ಎರಡು ಸಮ್ಮಿಶ್ರ ಸರ್ಕಾರಗಳು ಇದ್ದಂಥ ಸಂದರ್ಭದಲ್ಲಿ ಸುಮಾರು 1700 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಅಲ್ಲಿಂದೀಚೆಗೆ ಅಂಕಿಅಂಶಗಳು ಗೊತ್ತಿಲ್ಲ. ಪ್ರಮುಖವಾಗಿ ಹಿಂದುಳಿದ ಪ್ರದೇಶಗಳಾದ ಗುಲಬರ್ಗಾ, ಬೀದರ್ ಇರಬಹುದು.

ಶ್ರೀ ಟಿ.ಬಿ.ಜಯಚಂದ್ರ : ನೀವು ಯೂರಿಯಾ ಗೊಬ್ಬರ ಹಾಕುವುದು ಗೊತ್ತಿಲ್ಲ ಎಂದರೆ ಮಾಗಡಿಯಲ್ಲಿ ರೆಸಾರ್ಟ್ಸ್‌ಗಳು ಬಂದ ಮೇಲೆ ಇನ್ನೆಲ್ಲಿ ಗೊಬ್ಬರ ಹಾಕುತ್ತೀರಿ?

ಶ್ರೀ ಹೆಚ್.ಸಿ.ಬಾಲಕೃಷ್ಣ : ಅದಕ್ಕೆ ಬೆಂಬಲ ಕೊಟ್ಟರೆ atleast ಉದ್ಯೋಗ ಸೃಷ್ಟಿಯಾಗುತ್ತದೆ?

ಶ್ರೀ ಟಿ.ಬಿ.ಜಯಚಂದ್ರ : ನೀವು ಒಂದು ಸಲಹೆಯನ್ನು ಕೊಟ್ಟಿರಿ, ನೀವು ನಿಮ್ಮ ಪಕ್ಷದ ಶಿವಕುಮಾರ್‌ರವರು ಶಾಸಕರಾಗಿ ಅವರ ಅಧ್ಯಕ್ಷತೆಯಲ್ಲಿ ಜಂಟಿ ಸದನ ಸಮಿತಿ ನಿರ್ಮಾಣವಾಗಿತ್ತು. ಆ ಸಮಿತಿಯ ನಿರ್ದೇಶನದ ಹಿನ್ನೆಲೆಯಲ್ಲಿ ಇವತ್ತು ರೈತರ ಆತ್ಮಹತ್ಯೆ ಜಾಸ್ತಿಯಾಗುತ್ತಿದೆ ಎನ್ನುವ

ಕಾರಣಕ್ಕೋಸ್ಕರ ನನ್ನ ಕಾಲದಲ್ಲಿ ವೀರೇಶ್‌ರವರನ್ನು ನೇಮಿಸಿ ಒಂದು ಸಮಿತಿಯ ವರದಿ ಬಂದಿದೆ. ಬಹುಶಃ ಶಿವಕುಮಾರ್‌ರವರು ಕೊಟ್ಟಂಥ ವರದಿ, ವೀರೇಶ್‌ರವರು ಕೊಟ್ಟಂಥ ವರದಿಯನ್ನು ಅಧ್ಯಯನ ಮಾಡಿ ಅನುಷ್ಠಾನ ಮಾಡುವುದಕ್ಕೆ ಪ್ರಯತ್ನ ಪಟ್ಟರೆ ಬಹುಶಃ ರೈತರಿಗೆ ಉಪಯೋಗವಾಗಬಹುದು. ಇದನ್ನು ಮುಖ್ಯಮಂತ್ರಿಯವರಿಗೆ ಬೊಮ್ಮಾಯಿ ಯವರು ಕಿವಿಮಾತು ಹೇಳಲಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನಾನು ಅಲ್ಲಿಗೆ ಬರುತ್ತೇನೆ. ಈಗ ಅನೇಕ ಸಮಿತಿಗಳು ವರದಿಯನ್ನು ಕೊಟ್ಟಿದ್ದಾರೆ. ನಮಗಿಂತ ತಜ್ಞರಾಗಿರುವವರು..

ಶ್ರೀ ಬಸವರಾಜ ಬೊಮ್ಮಾಯಿ : ಜಯಚಂದ್ರರವರಿಗೆ ಎಲ್ಲಾ ಗೊತ್ತಿದ್ದೂ ನನ್ನ ಹೆಸರನ್ನು ಹೇಳುತ್ತಿದ್ದಾರೆ. ಸಭಾಧ್ಯಕ್ಷರೆ, ರೈತರ ಆತ್ಮಹತ್ಯೆ ಜಯಚಂದ್ರರವರು ಕೃಷಿ ಮಂತ್ರಿಯಾಗುವ ಮೊದಲಿನಿಂದ ಆಗಿರುವ ಘಟನೆಗಳ ವರದಿ ಇದ್ದು ಅವರ ಕಾಲದಲ್ಲಿ ಏನು ಕ್ರಮ ತೆಗೆದು ಕೊಳ್ಳಬೇಕೆಂಬ ವರದಿಯನ್ನು ಜಾರಿ ಮಾಡುವುದರ ಬದಲು ಇನ್ನೊಂದು ಸಮಿತಿಯನ್ನು ನೇಮಿಸಿದರು. ಅಂದರೆ ಅವರ ದೃಷ್ಟಿಯಲ್ಲಿ ಏನಾದರೂ ಸಮಸ್ಯೆಯಾದರೆ ಪರಿಹಾರಕ್ಕೆ ಸಮಿತಿಗೆ ಇನ್ನೊಂದು ಸಮಿತಿಯನ್ನು ನೇಮಿಸುವುದು ಎಂದು. ವೀರೇಶ್ ಸಮಿತಿಯನ್ನು ನೇಮಿಸಿದೆವು ಎಂದು ಅವರೇ ಹೇಳಿದರು. ಅದಕ್ಕೆ ಆ ರೀತಿ ಆಗುವುದು ಬೇಡವೆಂದು ಈಗ ಇಷ್ಟು ವಿಸ್ತೃತವಾಗಿ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಸನ್ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಈ ಒಂದು ರೈತರ ಜೊತೆ, ಅಧಿಕಾರಿಗಳು ಮತ್ತೆ ಮಂತ್ರಿಗಳೊರಿದಿಗೆ 24 ಗಂಟೆಗಳ ಕಾಲ ಅಥವಾ 10 ಗಂಟೆಗಳ ಕಾಲ ಸಂವಾದವನ್ನು ಏರ್ಪಡಿಸಿದ್ದರು. ಅಂದಿನ ಹಣಕಾಸಿನ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳಾಗಿದ್ದ ಯಡಿಯೂರಪ್ಪನವರು ಆ ಸಂವಾದದಲ್ಲಿ ಭಾಗವಹಿಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆ ಸಂವಾದದ ನಂತರ ರೈತರು ಕೊಟ್ಟಂಥ ಅಭಿಪ್ರಾಯಗಳನ್ನೆಲ್ಲಾ ಸಂಗ್ರಹಣೆ ಮಾಡಿ ಅವತ್ತಿನ ಹಣಕಾಸಿನ ಕಾರ್ಯದರ್ಶಿಯವರಾಗಿರುವ ಶ್ರೀನಿವಾಸಮೂರ್ತಿಯವರ ಅಧ್ಯಕ್ಷತೆಯಲ್ಲಿ ಕೋ-ಆಪರೇಟಿವ್ ಸೆಕ್ರೆಟರಿಯಾಗಿದ್ದ ರವಿಕುಮಾರ್ ಆಗಿದ್ದರು, ಕೆ.ಪಿ.ಟಿ.ಸಿ.ಎಲ್ ಕಾರ್ಯದರ್ಶಿಯಾಗಿರತಕ್ಕಂಥ ಜೈರಾಜ್ ಇರಬಹುದು, ಅನೇಕ ಜನ ಅಧಿಕಾರಿಗಳು, ರೈತರು, ಯೂನಿವರ್ಸಿಟಿ ವಿಜ್ಞಾನಿಗಳು ಎಲ್ಲರೂ ಸೇರಿ ಒಂದು ಸಮಿತಿಯನ್ನು ಮಾಡಿ ಒಂದು

ವರದಿಯನ್ನು ಕೊಟ್ಟಿದ್ದಾರೆ. ಬಹುಶಃ ಈ ವರದಿಯನ್ನು ನೋಡಿದರೆ, "Improving the economic conditions of the farmers" ಇದನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನ ಮಾಡಿದರೆ ರೈತರನ್ನು ನಾವು ಸ್ವಲ್ಪ ಈ ಪರಿಸ್ಥಿತಿಯಿಂದ ಸ್ವಲ್ಪಮಟ್ಟಿಗೆ ಉಳಿಸುವಂಥ ಕೆಲಸವನ್ನು ಮಾಡಬಹುದು. ಇನ್ನೊಂದು ಮಾತನ್ನು ಹೇಳಬಯಸುತ್ತೇನೆ. ರೈತರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಅಂದಿನ ಮಾಜಿ ಮುಖ್ಯಮಂತ್ರಿಗಳಾಗಿದ್ದ ಕುಮಾರಸ್ವಾಮಿ ಯವರು, ಯಡಿಯೂರಪ್ಪನವರು ಹಣಕಾಸಿನ ಸಚಿವರಾದ ಸಂದರ್ಭದಲ್ಲಿ ಸುಮಾರು 25,000–00 ರೂ.ಗಳವರೆಗೆ ಸಾಲವನ್ನು ಮನ್ನಾ ಮಾಡುವಂಥ ದಿಟ್ಟ ನಿರ್ಧಾರವನ್ನು ಈ ದೇಶದಲ್ಲೇ ಪ್ರಪ್ರಥಮಬಾರಿಗೆ ಅನುಷ್ಠಾನಕ್ಕೆ ತಂದರು. ಇವತ್ತು ರೈತರಿಗೆ ಬೇಕಾಗಿರುವುದು ಅದು. ಬರದಲ್ಲಿ ಸಾಯುತ್ತಿರು ವಂಥ ರೈತ. ನಾವೇನೋ ನಾಲ್ಕು ಮಾತನಾಡಿ ಸಬ್ಸಿಡಿ ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಬರದಲ್ಲಿ ಸಾಯುತ್ತಿರುವ ರೈತನ ಸಹಾಯಕ್ಕೆ ಧಾವಿಸಿದಾಗ ಮಾತ್ರ ನಮಗೆ ನೆಮ್ಮದಿ ಬರುತ್ತದೆ. ಅಧ್ಯಕ್ಷರೆ, 2006 ರಲ್ಲಿ ಈ ದೇಶದಲ್ಲಿ ಪ್ರಧಾನ ಮಂತ್ರಿಗಳು ರೈತರ ಆತ್ಮಹತ್ಯೆಯನ್ನು ತಡೆಯಬೇಕೆಂದು ಹೇಳಿ ವಿದರ್ಭ ಎಂಬ ಒಂದು ಪ್ಯಾಕೇಜ್ ಅನ್ನು ಘೋಷಣೆ ಮಾಡಿದರು. ಅದರಲ್ಲಿ ನಮ್ಮ ಆರು ಜಿಲ್ಲೆಗಳು, ಬೆಳಗಾಂ, ಶಿವಮೊಗ್ಗ, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ಕೊಡಗು ಇಲ್ಲಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳುವಂಥ ಜಿಲ್ಲೆಗಳೆಂದು ಹೇಳಿ ಆ ವಿದರ್ಭ ಪ್ಯಾಕೇಜ್ ಅಲ್ಲದೆ "Rescheduling of Agriculture loan with provision of interest, subsidy to increase the public investment in the agriculture and allied sectors." ಎಂದು ರೈತರಿಗೆ ಅನುಕೂಲವಾಗುವಂಥ ರೀತಿಯಲ್ಲಿ ವಿದರ್ಭ ಪ್ಯಾಕೇಜನ್ನು ಆವತ್ತು ಘೋಷಣೆ ಮಾಡಿದರು. ಅಂದರೆ ಕೇಂದ್ರ ಸರ್ಕಾರಕ್ಕೂ ಕೂಡ ಈ ರೈತನ ಆತ್ಮಹತ್ಯೆ ಬಿಸಿ ಮುಟ್ಟಿದೆಯೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ರೈತರ ಆತ್ಮಹತ್ಯೆಗೆ ಕಾರಣಗಳೇನು? ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ? ಅಧ್ಯಕ್ಷರೆ, ರೈತ ರಾಗಿ, ಜೋಳ, ಭತ್ತ ಬೆಳೆಯುವಂತಹ ಪ್ರದೇಶಗಳಲ್ಲಿ ಜಾಸ್ತಿ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಈ ಆಲೂಗೆಡ್ಡೆ, ಈರುಳ್ಳಿ, ಹತ್ತಿ, ತೊಗರಿ ಇಂಥ ಬೆಳೆಗಳನ್ನು ಬೆಳೆಯುವಂಥ ರೈತ ಜಾಸ್ತಿ ಆತ್ಮಹತ್ಯೆಗೆ ಶರಣಾಗುತ್ತಾನೆ.

ಕಾರಣವೇನೆಂದರೆ investment ಜಾಸ್ತಿ. ಅವನಿಗೆ ಸಕಾಲದಲ್ಲಿ ನಾವು ಸಾಲವನ್ನು ಕೊಡುವುದಿಲ್ಲ.

ದೊಡ್ಡ money lenders ಇರುತ್ತಾರಲ್ಲಾ ಅವರ ಹತ್ತಿರ ಹೋಗಿ ಹೆಚ್ಚಿನ interest ದರದಲ್ಲಿ ರೈತರು ಸಾಲ ತರುತ್ತಾರೆ. ಉತ್ತಮವಾದ ಬಿತ್ತನೆ ಬೀಜ, ಗೊಬ್ಬರ ಹಾಗೂ pesticides ಅನ್ನು ಕೊಂಡುಕೊಂಡು ಬರುತ್ತಾರೆ. ಆದರೆ ನಮ್ಮ monsoon ವೈಪರೀತ್ಯದಿಂದ ಎಲ್ಲೋ ಒಂದು ಕಡೆ ರೈತನ ಬೆಳೆ ಹಾಳಾಗುತ್ತದೆ ಅಥವಾ ಕೀಟಗಳಿಂದ ನಾಶವಾಗತಕ್ಕಂಥ ಸಂದರ್ಭದಲ್ಲಿ ರೈತರು ಹೊರಗಡೆಯಿಂದ ಯಾರಿಂದಲೋ ಸಾಲ ತಂದು ನಂತರ ಹಾಕಿರತಕ್ಕಂಥ ಬೆಳೆ ನಷ್ಟವಾದಂಥ ಸಂದರ್ಭದಲ್ಲಿ ಆತ್ಮಹತ್ಯೆಗೆ ಶರಣಾಗುತ್ತಿರುವುದನ್ನು ನಾವು ಹೆಚ್ಚಿಗೆ ನೋಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೆ, ರೈತ ಇನ್ನೂ ಬೇರೆ ಬೇರೆ ಕಂಡೀಷನ್‌ಗಳಲ್ಲಿ ಸಾಲ ಮಾಡುತ್ತಾನೆ, ಅವನಿಗೆ ಶಕ್ತಿಯಿಲ್ಲ. ಇವತ್ತು 2–3 ಎಕರೆಗಳನ್ನು ಇಟ್ಟುಕೊಂಡಿರುವಂಥ ರೈತ ಖಾಯಿಲೆ ಬಿದ್ದಂಥ ಸಂದರ್ಭದಲ್ಲಿ ಅವನಿಗೆ ಆಪರೇಷನ್‌ಗಾಗಿ ಒಂದು ಲಕ್ಷ ಅಥವಾ ಎರಡು ಲಕ್ಷ ರೂಪಾಯಿಗಳ ಅವಶ್ಯಕತೆ ಇರುವಂಥ ಸಂದರ್ಭದಲ್ಲಿ ಇರಬಹುದು, ಅವನ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ಸಂದರ್ಭದಲ್ಲಿ ಇರಬಹುದು ಅಥವಾ ಅವನ ಮಗಳ ಮದುವೆ ಮಾಡಬೇಕೆಂದರೆ ಜಮೀನನ್ನು ಮಾರಾಟ ಮಾಡತಕ್ಕಂಥ ಪರಿಸ್ಥಿತಿಯನ್ನು ಇವತ್ತು ನಾವು ನೋಡುತ್ತಿದ್ದೇವೆ. ನಮ್ಮ ದೇಶದಲ್ಲಿ ಸುಮಾರು 70% ರೈತರು small and medium scale ರೈತರು ಅಂದರೆ 3–4 ಎಕರೆಯನ್ನು ಹೊಂದಿರುವಂಥ ರೈತರು ನಮ್ಮ ರಾಜ್ಯದಲ್ಲಿ ಜಾಸ್ತಿ ಇದ್ದಾರೆ. ಅದರಲ್ಲೂ ಕೂಡ ನಮ್ಮ ವ್ಯವಸಾಯದ ಪದ್ಧತಿ ಏನಿದೆ ಎಂದರೆ ನಮ್ಮ ರಾಜ್ಯದಲ್ಲಿ 30% ಮಾತ್ರ irrigation ಆಗುತ್ತಿದೆ. ನಾವು 70% ಮಳೆಯನ್ನು ಅವಲಂಬಿಸಿ ವ್ಯವಸಾಯ ಮಾಡುತ್ತೇವೆ. ಮಳೆ ಹೆಚ್ಚು-ಕಡಿಮೆಯಾದರೆ 70% ಜನ ಬೀದಿಗೆ ಬರತಕ್ಕಂಥ ಒಂದು ವಾತಾವರಣ ಇದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಅವರ ನೆರವಿಗೆ ಧಾವಿಸುವಂಥ ಕೆಲಸವನ್ನು ಕೇವಲ ರಾಜ್ಯ ಸರ್ಕಾರವಲ್ಲ, ಕೇಂದ್ರ ಸರ್ಕಾರ ಕೂಡ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದ ಜವಾಬ್ದಾರಿ ಕೂಡ ಇದರಲ್ಲಿದೆ. ರಾಜ್ಯ ಸರ್ಕಾರದಲ್ಲಿ ಸಾಕಷ್ಟು ಹಣ ಇಲ್ಲದೇ ಇರುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಸಹಾಯಕ್ಕೆ ಹೋಗಬಹುದು. ಉದಾಹರಣೆಗೆ ಹೇಳುವುದಾದರೆ ಆಂಧ್ರ ಪ್ರದೇಶ ಹಾಗೂ ತಮಿಳುನಾಡಿನಲ್ಲಿ

ನೋಡಿ, ಅಲ್ಲಿ ಯಾವ ರೀತಿ ಹಣ ಸಿಗುತ್ತದೆ, ಯಾವ ರೀತಿ ರೈತರು ಖುಷಿಯಾಗಿದ್ದಾರೆ. ಕಾರಣವೇನೆಂದರೆ ಅವರಿಗೆ ಕೇಂದ್ರ ಸರ್ಕಾರದ ಬೆಂಬಲವಿದೆ. ಮಾನ್ಯ ಅಧ್ಯಕ್ಷರೆ, ಈಗಲೇ ನೀವು ಬೆಲ್ ಮಾಡುತ್ತಿದ್ದೀರಿ, ಹೀಗಾದರೆ ಹೇಗೆ? ನಾನು ಇನ್ನೂ ಮಾತನಾಡುವುದಕ್ಕೆ ಶುರು ಮಾಡಿಲ್ಲ.

ಅಧ್ಯಕ್ಷರು : ಬೇರೆಯವರಿಗೂ ಅವಕಾಶ ಕೊಡಬೇಕು. Already time fix ಆಗಿದೆ. ಏನೂ ಮಾಡುವುದಕ್ಕೂ ಆಗುವುದಿಲ್ಲ. ಸಲಹೆ ಕೊಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ರೈತರಿಗೆ educate ಮಾಡುವಂಥ ಕೆಲಸ ಸರ್ಕಾರ ಮಾಡಬೇಕು. ರೈತನ ಬೆನ್ನ ಹಿಂದೆ ನಾನು ಇದ್ದೇನೆ ಎನ್ನುವ ಆಶ್ವಾಸನೆ ಮೂಡುವ ರೀತಿಯಲ್ಲಿ ರೈತನಿಗೆ ಆತ್ಮವಿಶ್ವಾಸ ತುಂಬುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಅದನ್ನು ಯಾವ ರೀತಿ ಮಾಡಬೇಕು? ಇವತ್ತು Crop Insurance ಇದೆ. ಎಲ್ಲೋ ಕೆಲವು ಬೆಳೆಗಳಿಗೆ ಮಾತ್ರ Crop insurance ಸೀಮಿತವಾಗಿದೆ. ಎಲ್ಲಾ ಬೆಳೆಗಳಿಗೂ Crop insurance ಸೀಮಿತವಾಗಿಲ್ಲ. ಎಲ್ಲಾ ಬೆಳೆಗಳಿಗೂ ಕಡ್ಡಾಯವಾಗಿ crop insurance ಮಾಡುವಂಥ ಕಾರ್ಯಕ್ರಮವನ್ನು ಸರ್ಕಾರ ಒತ್ತಾಯ ಪೂರ್ವಕವಾಗಿ ರೈತರ ಮೇಲೆ ಏರಬೇಕು ಹಾಗೂ ಕಡ್ಡಾಯವಾಗಿ ಮಾಡಲೇಬೇಕಾಗುತ್ತದೆ. ಇವತ್ತು ಯಾವುದೋ ಒಂದು ಉತ್ತಮವಾದ ಬೆಳೆಗಳಾದ ರಾಗಿ ಅಥವಾ ಬೇರೆ ಬೇರೆ ಬೆಳೆಗಳಿಗೆ ಮಾತ್ರ insurance ಕೊಡುವುದು ಸರಿಯಲ್ಲ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಮಾನ್ಯ ಅಧ್ಯಕ್ಷರೆ, ಇವತ್ತು insurance policy ಏನಿದೆ, ಅದರಲ್ಲಿ ಒಂದು ಸಾವಿರ ರೂಪಾಯಿಗಳನ್ನು ರೈತರಿಗೆ ಕೊಡುವ ಹಣ ಏನಿದೆ, ಈಗ 500 ಕೋಟಿ ರೂಪಾಯಿಗಳನ್ನು ಇಟ್ಟು ರೈತರಿಗೆ ಕೊಡುವ ಬದಲು ರೈತರು ಏನು ಬೆಳೆ ಬೆಳೆಯುತ್ತಾರೆ, ಅದಕ್ಕೆ insurance policy ಯ ಮೂಲಕ premium amount ಅನ್ನು ಸರ್ಕಾರವೇ ಕಟ್ಟುವಂಥ ವ್ಯವಸ್ಥೆ ಮಾಡಿದರೆ ರೈತರಿಗೆ ಸಾಕಷ್ಟು ಅನುಕೂಲವಾಗುತ್ತದೆ.

ಶ್ರಿ ಹೆಚ್.ಸಿ.ಬಾಲಕೃಷ್ಣ : multiple source ಬರತಕ್ಕಂಥ farming ಕೆಲಸಕ್ಕೆ ರೈತರನ್ನು ತೊಡಗಿಸಬೇಕು. ರೈತ ಕೇವಲ ರಾಗಿ ಅಥವಾ ಜೋಳವನ್ನು ಬೆಳೆದುಕೊಂಡರೆ ಈ ಹವಾಮಾನ ವೈಪರೀತ್ಯದಿಂದ ಕಷ್ಟವಾಗುತ್ತದೆ. ರೈತ horticulture ನಲ್ಲಿಯೂ ಕೂಡ ತೊಡಗಿಸಿಕೊಳ್ಳಬೇಕು. Horticulture ನಲ್ಲಿಯೂ ಕೂಡ ಆಸಕ್ತಿ ಮೂಡುವ ರೀತಿಯಲ್ಲಿ ಸರ್ಕಾರ

ರೈತನಿಗೆ ಸಹಾಯ ಮಾಡಬೇಕು. ರೈತರಿಗೆ drip irrigation ಮುಖಾಂತರ, subsidy ಕೊಡುವಂಥ ವಿಚಾರವಿರಬಹುದು ಅಥವಾ ಕಡಿಮೆ ದರದಲ್ಲಿ ರೈತರಿಗೆ ಸಸಿಗಳನ್ನು ವಿತರಣೆ ಮಾಡತಕ್ಕಂಥದ್ದು ಇರಬಹುದು, Horticulture ಜೊತೆಗೆ ಹೈನುಗಾರಿಕೆ, ಹಸುಗಳನ್ನು ಸಾಕುವುದು, ಕುರಿಗಳನ್ನು ಸಾಕುವುದು, ಹಂದಿ ಸಾಕಾಣಿಕೆ, ಜೇನು ಸಾಕಾಣಿಕೆ, ಮೀನುಗಾರಿಕೆ ಹೀಗೆ ಎಲ್ಲದಕ್ಕಿಂತ ಮುಖ್ಯವಾದುದು forestry. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ನಾವು ಚೀನಾ ದೇಶದ ಬಗ್ಗೆ ಆಗಾಗ್ಗೆ ಮಾತನಾಡುತ್ತೇವೆ. ಚೀನಾ ದೇಶ ಕಮ್ಯೂನಿಸ್ಟ್ ದೇಶ, ಅಲ್ಲಿ ಕೆಲಸ ಮಾಡಲೇಬೇಕು. ಅಲ್ಲಿ ಕೆಲಸ ಮಾಡಿದರೆ ಮಾತ್ರ ಬದುಕುವುದಕ್ಕೆ ಸಾಧ್ಯ. ನಮ್ಮದು democracy ಇರತಕ್ಕಂಥ ದೇಶ. ನಾವು ಕೆಲಸ ಮಾಡದೇ ಸೋಂಬೇರಿಗಳಾದರೂ ಸಹ ಎಲ್ಲೋ ಒಂದು ಕಡೆ ಸುಳ್ಳು ಹೇಳಿ ಅನ್ನ ಹುಟ್ಟಿಸಿಕೊಂಡು ತಿನ್ನಬಹುದು. ಆದರೆ, ಚೀನಾದಲ್ಲಿ ಈ ರೀತಿ ಇಲ್ಲ. ಪ್ರತಿಯೊಬ್ಬ ಪ್ರಜೆಯೂ ಕೂಡ ಕೆಲಸ ಮಾಡತಕ್ಕಂಥ ವ್ಯವಸ್ಥೆ ಇದೆ. ಆ ವ್ಯವಸ್ಥೆಯನ್ನು ನಮ್ಮ ದೇಶದಲ್ಲಿ ತಿಳುವಳಿಕೆ ಮೂಡಿಸುವುದರ ಮುಖಾಂತರ ಮಾಡಬಹುದೇ ವಿನಃ ಕಾನೂನಿನಿಂದ ಜಾರಿಗೆ ತರುವುದಕ್ಕೆ ಆಗುವುದಿಲ್ಲ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಚೀನಾದಲ್ಲಿ Crop production ಬರೀ 50%. ಹೈನುಗಾರಿಕೆ, fisheries ಈ ರೀತಿ ಬೇರೆ ಬೇರೆ ಇತರೆ ಮೂಲಗಳಿಂದ ಬರುವುದು ಅಂದರೆ horticulture ನಿಂದ ಬರುವುದು 50%. ನಮ್ಮ ದೇಶದಲ್ಲಿ 65% ನಾವು crop ಮೇಲೆ depend ಆಗಿದ್ದೇವೆ. ಬಾಕಿ ಇರುವ ಕೇವಲ 35% ಮಾತ್ರ ನಾವು ಹೈನುಗಾರಿಕೆ, fisheries ಹೀಗೆ ಬೇರೆ ಬೇರೆ ರೀತಿಯ horticulture ಮೇಲೆ depend ಆಗಿರತಕ್ಕಂಥ ವಾತಾವರಣ ಇದೆ. ಇದರಿಂದ ರೈತನನ್ನು ಎರಡು ರೀತಿಯ crop ಬೆಳೆಯುವ ರೀತಿಯಲ್ಲಿ ತಯಾರು ಮಾಡಬೇಕಾಗುತ್ತದೆ. ಒಂದು ಕಡೆ ರಾಗಿ ಬೆಳೆದರೆ, ಒಂದು ಕಡೆ horticulture ಬೆಳೆಗಳಾದ mango ಬೆಳೆಯುವುದು, ಸಪೋಟ ಬೆಳೆಯುವುದು, ಜೇನು ಸಾಕಾಣೆ ಮಾಡುವುದು ಅಥವಾ ಹಸು ಸಾಕಣೆ ಮಾಡುವುದು ಇದಕ್ಕೆ ತರಬೇತಿಯನ್ನು ಕೊಡಬೇಕು. ಅದಕ್ಕೆ ತಕ್ಕಂತೆ ಸರ್ಕಾರ ರೈತನಿಗೆ ಸಬ್ಸಿಡಿ ದರದಲ್ಲಿ ಕೊಡಬೇಕು. ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಮಾತನಾಡಲು ಸರಿಯಾಗಿ ಶುರು ಮಾಡಿಲ್ಲ.

ಅಧ್ಯಕ್ಷರು : ಇದುವರೆಗೆ ಬರೀ ಪೀಠಿಕೆ ಮಾಡಿದಿರಿ ಏನು?

ಶ್ರೀ ಹೆಚ್.ಸಿ.ಬಾಲಕೃಷ್ಣ : ಇನ್ನು ಮಣ್ಣಿನ ಗುಣಮಟ್ಟದ ಬಗ್ಗೆ ಹೇಳುವುದಾದರೆ ರೈತನ ಪಹಣಿಯಲ್ಲಿ ಮಣ್ಣಿನ ಗುಣಮಟ್ಟ enter ಆಗಬೇಕು, ಆ ರೀತಿಯಲ್ಲಿ compulsory ಯಾಗಿ ಮಾಡಬೇಕು. ಪ್ರತಿ ಮೂರು ವರ್ಷಕ್ಕೊಮ್ಮೆ soil test ಮಾಡಿಸಬೇಕು. NKP ಇದ್ದರೆ ಮಾತ್ರ ರೈತನಿಗೆ ಲೋನ್ ಕೊಡಲಾಗುವುದು ಎನ್ನುವ ವಾತಾವರಣವನ್ನು ನಿರ್ಮಾಣ ಮಾಡಬೇಕು. ಏಕೆಂದರೆ, ನಮ್ಮ ಪೂರ್ವಜರು ಇರಬಹುದು ಅಥವಾ 10–15 ವರ್ಷಗಳ ಹಿಂದೆ ಅನೇಕ ಜನ ಬೇಸಿಗೆ ಬಂತು ಎಂದರೆ ಕೆರೆ ಮಣ್ಣನ್ನು ಹಾಗೂ ಗೋಡುಗಳನ್ನು ಒಡೆದು ಜಮೀನನ್ನು ಸಮೃದ್ಧಿ ಮಾಡುತ್ತಿದ್ದರು. ಇವತ್ತು ಯಾರೂ ಕೂಡ ಕೆರೆ ಮಣ್ಣಿನ ಕಡೆಗೆ ಹೋಗುವುದಿಲ್ಲ. ಮಂಡ್ಯದಂಥ ಭತ್ತ ಮತ್ತು ಕಬ್ಬನ್ನು ಬೆಳೆಯುವಂಥ ಪ್ರದೇಶದಲ್ಲಿ ಹಸಿರು ಎಲೆಗಳನ್ನು ಹೊಲಕ್ಕೆ ತುಳಿಯುವಂಥ ವಾತಾವರಣವನ್ನು ನಾವು ನೋಡಿದ್ದೆವು. ಆದರೆ, ಇವತ್ತಿನ ಸ್ಥಿತಿ ಯಾವ ರೀತಿ ಇದೆ ಎಂದರೆ ಸಂಪೂರ್ಣವಾಗಿ ರೈತ fertilizers ಮೇಲೆ depend ಆಗುವಂಥ ಒಂದು ವಾತಾವರಣ ಇವತ್ತು ನಿರ್ಮಾಣವಾಗಿದೆ. ಆದ್ದರಿಂದ ಸರ್ಕಾರ compulsory ಯಾಗಿ ಸಾವಯವ ಕೃಷಿ, NKP, soil test ಮಾಡುವುದರ ಮುಖಾಂತರ ರೈತ ಜಮೀನಿನ ಫಲವತ್ತತೆಯನ್ನು ಕಾಪಾಡಿಕೊಂಡರೆ ಮಾತ್ರ ರೈತರಿಗೆ ಬ್ಯಾಂಕ್‌ನಲ್ಲಿ ಸಾಲ ಕೊಡುವುದು ಇರಬಹುದು ಅಥವಾ ಅವರಿಗೆ ಸಬ್ಸಿಡಿ ದರದಲ್ಲಿ ಹಣವನ್ನು ಕೊಡುವಂಥದ್ದು ಇರಬಹುದು, ಇದನ್ನು ಮಾಡುವುದಕ್ಕೆ ಪಹಣಿಯಲ್ಲಿ compulsory ಯಾಗಿ entry ಮಾಡಬೇಕು ಎನ್ನುವುದನ್ನು ನಾನು ಈ ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಪ್ರತಿ ಹೋಬಳಿ ಕೇಂದ್ರದಲ್ಲಿಯೂ ಕೂಡ soil testing ಮಾಡುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬೇಕು. ಹೋಬಳಿ ಕೇಂದ್ರದಲ್ಲಿ ಎಂದರೆ ಈ agriculture university ಯಿಂದ ಕೆಲವು ಯುವಕರನ್ನು ತಯಾರು ಮಾಡಿ, ಪ್ರತಿ ಹೋಬಳಿ ಕೇಂದ್ರದಲ್ಲೂ soil testing ಮಾಡಿ, ಅದಕ್ಕೆ ಸರ್ಕಾರ ಸಬ್ಸಿಡಿ ಮುಖಾಂತರ soil testingಗೆ ಕೂಡ ಅನುಕೂಲ ಮಾಡಿಕೊಡಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೊಟ್ಟಿಗೆ ಗೊಬ್ಬರವನ್ನು ಸಹ ಜಾಸ್ತಿ ಉಪಯೋಗಿಸುವಂಥ ರೀತಿಯಲ್ಲಿ ರೈತನಿಗೆ ತಿಳುವಳಿಕೆ ಕೊಡುವಂಥ

ಕೆಲಸವನ್ನು ಮಾಡಬೇಕು. ಇವತ್ತು ಕೆಳ ಮಟ್ಟದಲ್ಲಿರುವ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡಿದಾಗ ಮಾತ್ರ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಒಬ್ಬ village accountant ಇರಬಹುದು, agriculture assistant ಇರಬಹುದು ಅಥವಾ ಒಬ್ಬ ಪಂಚಾಯತಿ ಕಾರ್ಯದರ್ಶಿ ಇರಬಹುದು, ಇವರು ಸರಿಯಾದ ರೀತಿಯಲ್ಲಿ ಕೆಲಸ ಮಾಡದೇ ಹೋದರೆ ಇವತ್ತು ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಕೆಳ ಮಟ್ಟದ ಅಧಿಕಾರಕ್ಕೆ ಶಕ್ತಿ ತುಂಬುವಂಥ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಇವತ್ತು ಎಷ್ಟೋ ಜನ village accountantಗಳು ಇದ್ದಾರೆ. ನಮ್ಮ ತಾಲ್ಲೂಕಿನಲ್ಲಿಯೇ 2–3 village accountant ಗಳು ಇದ್ದಾರೆ. 8–10 village accountants ಇರಬೇಕಾದಂಥ ಜಾಗದಲ್ಲಿ 2–3 village accountants ಇದ್ದಾರೆ. ಅವರು ಯಾವ ರೀತಿ ರೈತರಿಗೆ ಸಲಹೆ–ಸೂಚನೆಗಳನ್ನು ಕೊಡುತ್ತಾರೆ. ದಯಮಾಡಿ agriculture ವಿಚಾರದಲ್ಲಿ ಶಕ್ತಿ ಕೊಡುವಂಥದ್ದು ಆಗಬೇಕು ಜೊತೆಗೆ ಎಷ್ಟೋ ಕಡೆ village accountants ಇಲ್ಲ. ರೈತರು ಒಂದು ಪಹಣಿ ತೆಗೆದು ಕೊಳ್ಳಬೇಕೆಂದರೆ, ರೈತರು ಸಲಹೆ ಸೂಚನೆಗಳನ್ನು ಕೇಳಬೇಕೆಂದರೆ ಎಷ್ಟೋ ಕಡೆಗಳಲ್ಲಿ village accountants ಇರುವುದಿಲ್ಲ. ಇವತ್ತು ಮೂರು ಪಂಚಾಯಿತಿಗೆ ಒಬ್ಬ village accountant ಇರತಕ್ಕಂಥ ವ್ಯವಸ್ಥೆ ಇದೆ. ಮಾನ್ಯ ಅಧ್ಯಕ್ಷರೆ, ಇನ್ನೂ ಮಾತನಾಡಲು ಗ್ರಾಮೀಣಾಭಿವೃದ್ಧಿ ವಿಷಯ ಇದೆ. ನೀವು ಚರ್ಚೆಗೆ ಅವಕಾಶ ಕೊಡುತ್ತಿಲ್ಲ. ಮಾಣ್ಯ ಮುಖ್ಯಮಂತ್ರಿಗಳು ಸಲಹೆ ಸೂಚನೆಗಳನ್ನು ತೆಗೆದುಕೊಳ್ಳಿ ಎಂದು ಕೊನೆಯಲ್ಲಿ ಒಂದು ಮಾತು ಹೇಳಿದ್ದಾರೆ. ನೀವು ಬೆಲ್ ಮಾಡುತ್ತಿರುವುದನ್ನು ನೋಡಿದರೆ ನಮಗೆ ಹಾಗೆಯೇ ಅನಿಸುತ್ತದೆ. "ಆಯವ್ಯಯ ಪೂರ್ವ ಚರ್ಚಾ ಸಮಯದಲ್ಲಿ ಈ ಎಲ್ಲಾ ವಿಚಾರಗಳನ್ನು ಪರಿಗಣಿಸಿ, ಪರಿಶೀಲಿಸಿ, ಸಂಪನ್ಮೂಲ ಲಭ್ಯತೆಗೆ ಒಳಪಟ್ಟು ಸೂಕ್ತ ಕ್ರಮ ತೆಗೆದುಕೊಳ್ಳುವುದು ಎಂದು ಭರವಸೆ ನೀಡಬಯಸುತ್ತೇನೆ" ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ನೀವು ಕಾಟಾಚಾರಕ್ಕೆ ಏನೂ ಅಧಿವೇಶನವನ್ನು ಕರೆದಿದ್ದೀರಿ ಎನಿಸುತ್ತದೆ. ಅವಕಾಶ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ಸೋಮವಾರ ಉತ್ತರ ಕೊಡಲಿ. ಇನ್ನೂ ಅನೇಕ ಯುವಕರು ಮಾತನಾಡಲು ಬಯಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಲಹೆ ಸೂಚನೆಗಳನ್ನು ತೆಗೆದುಕೊಂಡು ಈಗಾಗಲೇ

ಉತ್ತರ ಕೊಡುವುದಕ್ಕೆ ತಯಾರಾಗುತ್ತಿದ್ದಾರೆ. ಸಲಹೆ ಸೂಚನೆಗಳನ್ನು ಕೊಟ್ಟ ಮೇಲೆ ತಾನೆ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ತಯಾರಾಗಬೇಕು.

(12-00 PM)

ಮೇಲ್ಮನೆಯಲ್ಲಿ ಪಾಸ್ ಆಗಬೇಕು, ಬರಬೇಕು ಎನ್ನುವುದಕ್ಕೆ ಇದೇನು ಬಜೆಟ್ ಅಲ್ಲ. ಮುಖ್ಯಮಂತ್ರಿಗಳು 4 ಗಂಟೆಗೆ ಅಥವಾ 5 ಗಂಟೆಗೆ ಉತ್ತರ ಕೊಟ್ಟರೂ ನಡೆಯುತ್ತದೆ. ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ. ಇಲ್ಲದಿದ್ದರೆ, ಈ ಅಧಿವೇಶವನ್ನು ಕರೆಯುವ ಅವಶ್ಯಕತೆಯೇ ಇಲ್ಲವೆಂದು ಅನಿಸುತ್ತದೆ. ಮಾನ್ಯ ಅಧ್ಯಕ್ಷರೆ, ನೀವೇ ಹೇಳಿ ಈ ಅಧಿವೇಶವನ್ನು ಕರೆಯುವ ಅವಶ್ಯಕತೆ ಇತ್ತೇ?

ಅಧ್ಯಕ್ಷರು : ಈಗಾಗಲೇ ಸಾಕಷ್ಟು ಜನ ಮಾತನಾಡಿದ್ದಾರೆ. ಬೇಗ ಮುಗಿಸಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳಿ, ಕೊಟ್ಟಿಗೆ ಗೊಬ್ಬರದ ಜೊತೆಗೆ wormi-compost ಅನ್ನು ಪ್ರತಿಯೊಬ್ಬ ರೈತ compulsory ಆಗಿ ಅವನ ಮನೆಯಲ್ಲಿ ಹಿತ್ತಲಿನಲ್ಲಿ ಮಾಡಿಕೊಳ್ಳುವ ವ್ಯವಸ್ಥೆಯನ್ನು ರೂಪಿಸುವ ರೀತಿಯಲ್ಲಿ ಸಬ್ಸಿಡಿ ದರದಲ್ಲಿ ಹಣವನ್ನು ಕೊಟ್ಟು, ಅದಕ್ಕೆ ಪ್ರೋತ್ಸಾಹ ಕೊಡುವಂಥ ಕೆಲಸವನ್ನು ಸರ್ಕಾರ ಮಾಡಬೇಕು. ಮುಖ್ಯವಾಗಿ ನೀರಿನ ವಿಚಾರದಲ್ಲಿ ಹೇಳಬೇಕೆಂದರೆ, ಯಾವುದೇ ರೈತ ಬದುಕಬೇಕೆಂದರೆ ನೀರಿನ ಅವಶ್ಯಕತೆ ಬಹಳಷ್ಟಿದೆ. ನೀರಿಲ್ಲದಿದ್ದರೆ ರೈತ ಇಲ್ಲ. ಎಲ್ಲದರ ಜೊತೆಗೆ ನೀರು ಸಮೃದ್ಧವಾಗಿದ್ದರೆ ಉತ್ತಮವಾದ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ನದಿ ಜೋಡಣೆ ಬಗ್ಗೆ ಮಾತನಾಡಿದರು. ವಾಜಪೇಯಿಯವರು ನಿಜಲಿಂಗಪ್ಪನವರ ಹತ್ತಿರ ಹೋದಾಗ ಎಲ್ಲಾ ನದಿಗಳನ್ನು ಜೋಡಣೆ ಮಾಡಬೇಕೆನ್ನುವ ವಿಚಾರ ಚರ್ಚೆಯಾಯಿತು ಎಂದು ಹೇಳಿದರು. ಅದಕ್ಕೆ ನಾವೆಲ್ಲಾ ಸ್ವಾಗತವನ್ನು ಬಯಸುತ್ತೇವೆ. ಅದಕ್ಕೆ ನಮ್ಮ ವಿರೋಧಪಕ್ಷದ ನಾಯಕರೂ ಸಲಹೆಗಳನ್ನು ಕೊಡುತ್ತಾರೆ. ನದಿ ಜೋಡಣೆಯಾದರೆ ಈ ರಾಜ್ಯದ ಸುಮಾರು 60–70% ಜನರಿಗೆ ನೀರಿನ ಸೌಲಭ್ಯ ಸಿಗುತ್ತದೆ ಎಂದು ನಾನಾದರೂ ಭಾವಿಸುತ್ತೇನೆ. ಮುಖ್ಯವಾಗಿ ಈ ನೇತ್ರಾವತಿ ನೀರು, ಮಂಗಳೂರಿನ ಕಡೆಯಲ್ಲಿತಕ್ಕವರಿಗೆ ಕೆಲವರಿಗೆಲ್ಲಾ ಕೋಪ ಬರಬಹುದು.

ಅಧ್ಯಕ್ಷರು : ನೀವು ನೇತ್ರಾವತಿ ವಿಷಯ ತೆಗೆದರೆ, ಅಲ್ಲಿ ದಕ್ಷಿಣ ಕರ್ನಾಟಕದವರು ಮಾತನಾಡುತ್ತಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅವರು ಮಾತನಾಡಲಿ ಅಧ್ಯಕ್ಷರೆ, ನಮ್ಮ ಅಭಿಪ್ರಾಯವನ್ನು ಹೇಳುತ್ತೇವೆ. ಅವರ ಅಭಿಪ್ರಾಯವನ್ನು ಹೇಳಲಿ.

ಅಧ್ಯಕ್ಷರು : ಆ ವಿಷಯ ಬಿಡಿ. ಅದರ ಬಗ್ಗೆ ಸರ್ಕಾರ ಇನ್ನೂ ಏನೂ ನಿರ್ಣಯವನ್ನು ಕೈಗೊಂಡಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನಿರ್ಣಯ ಮಾಡಬೇಕು ಅಧ್ಯಕ್ಷರೆ, ಆಗುವುದಿಲ್ಲವೆಂದರೆ ಯಾವುದೂ ಆಗುವುದಿಲ್ಲ. ಮತ್ತೆ ನದಿ ಜೋಡಣೆಯನ್ನು ಹೇಗೆ ಮಾಡುತ್ತೀರಿ? ನೀವು ಉತ್ತರ ಭಾರತದಿಂದ ಹಿಡಿದು ದಕ್ಷಿಣ ಭಾರತಕ್ಕೆ ನದಿ ಜೋಡಣೆ ಮಾಡಬೇಕಾದರೆ, ದಕ್ಷಿಣ ಭಾರತದಲ್ಲಿರುವ ನೇತ್ರಾವತಿ ನದಿಯನ್ನು ಹೇಮಾವತಿಗೆ ತಂದು, ಬರಗಾಲ ಪ್ರದೇಶವಾಗಿರುವಂಥ ಕೋಲಾರ ಇರಬಹುದು, ತುಮಕೂರು ಇರಬಹುದು, ರಾಮನಗರವಿರ ಬಹುದು, ಬೆಂಗಳೂರು ಗ್ರಾಮಾಂತರವಿರಬಹುದು, ನೀರು waste ಆಗಿ ಸಮುದ್ರಕ್ಕೆ ಹೋಗುತ್ತಿದೆ. ಸಮುದ್ರಕ್ಕೆ ಹೋಗುತ್ತಿರುವಂಥ ನೀರನ್ನು ತಂದು ರೈತರ ಬದುಕನ್ನು ಹಸನು ಮಾಡಬೇಕೆಂಬ ಚಿಂತನೆಯನ್ನು ಬಹುಶಃ ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡುತ್ತಾರೆಂದು ನಾನು ಭಾವಿಸುತ್ತೇನೆ. ಒಳ್ಳೆಯ ಕೆಲಸ ಮಾಡತಕ್ಕವರು ಯಾರೂ ಕೂಡ ಹೆದರಿಕೊಳ್ಳುವಂಥ ಅವಶ್ಯಕತೆ ಇಲ್ಲ. ಅದನ್ನು ಮಾಡಬಹುದು. ಕನಿಷ್ಠ ಕುಡಿಯುವ ನೀರನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡದೇ ಹೋದರೆ ಹೇಗೆ? ಈ ಅಧಿವೇಶನವನ್ನು ಕರೆದಾಗ ಏನಾದರೂ ಮಾಡಬೇಕೆಂದು ಘೋಷಣೆ ಮಾಡಬೇಕಲ್ಲವೇ? ದಯಮಾಡಿ ಮುಖ್ಯಮಂತ್ರಿಗಳು ಅದರ ಕಡೆಗೆ ಒತ್ತು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ರೈತರು ತಮ್ಮ ಜಮೀನಿನಲ್ಲಿ ಕೃಷಿ ಹೊಂಡವನ್ನು ನಿರ್ಮಿಸಬೇಕೆಂದು ಅವರಿಗೆ compulsory ಆಗಿ ಒಂದು condition ಅನ್ನು ಹಾಕಬೇಕು. ತಮಿಳುನಾಡಿನಲ್ಲಿ ದೇವಸ್ಥಾನಕ್ಕೆ ಹೋಗುವ ಸಂದರ್ಭದಲ್ಲಿ ನಾವು ನೋಡಿದ್ದೇವೆ. ಪ್ರತಿಯೊಂದು ಗ್ರಾಮದಲ್ಲೂ ಊರಿನ ಮಧ್ಯದಲ್ಲಿ ಒಂದು ದೊಡ್ಡ ಹೊಂಡವನ್ನು ನಿರ್ಮಾಣ ಮಾಡಿರುತ್ತಾರೆ. ಪ್ರತಿಯೊಂದು ಗ್ರಾಮದಲ್ಲೂ ಇದೆ. ಹಿಂದೆ ನಮ್ಮಲ್ಲಿ ತಿಪ್ಪೆ ಹಳ್ಳಗಳೆಂದು ಇತ್ತು. ಈಗ ಅವ್ಯಾವೂ ಇಲ್ಲ, ಅವೆಲ್ಲವನ್ನೂ ಮುಚ್ಚಿಬಿಟ್ಟಿದ್ದಾರೆ. ಆದುದರಿಂದ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡತಕ್ಕಂಥದ್ದು ಮತ್ತು compulsory ಆಗಿ ಮರಗಿಡಗಳನ್ನು ಬೆಳೆಸತಕ್ಕಂಥದ್ದು ಆಗಬೇಕು. ಹಿಂದಿನ ಕಾಲದಲ್ಲಿ ನಮ್ಮ

ಪೂರ್ವಜರು ಮರ ಗಿಡಗಳನ್ನು ಬೆಳೆಸುತ್ತಿದ್ದರು. ಅಂದರೆ, ಸಿಹಿ ಬೇವಿನ ಮರ, ಹೆಬ್ಬೇವಿನ ಮರ, ಹಲಸಿನ ಮರ, ಹೀಗೆ ಬೇರೆ ಬೇರೆ ಮರಗಳನ್ನು ಬೆಳೆಸುತ್ತಿದ್ದರು. ಏಕೆಂದರೆ ಕಷ್ಟಕಾಲದಲ್ಲಿ ಆ ಮರಗಳನ್ನು ಮಾರಿದರೆ 3 ಸಾವಿರ, 4 ಸಾವಿರ ಸಿಗಬಹುದು, ಅದರಿಂದ ಅನೇಕ ಜನರು ಮದುವೆ ಮಾಡಿರುವ ಉದಾಹರಣೆಗಳೂ ಇವೆ. ಇವತ್ತು Silver Oak ಎಂದು ಸುಲಭವಾಗಿ ಬೆಳೆಯತಕ್ಕಂಥ ಮರಗಳಿವೆ. ಅದನ್ನೂ ಕೂಡ ಬೆಳೆಯುವುದಕ್ಕೆ ಸರ್ಕಾರ ಉತ್ತೇಜನವನ್ನು ಕೊಡಬೇಕು ಮತ್ತು ಅದು ಪಹಣಿಯಲ್ಲಿ entry ಆಗಬೇಕು. ಅವನು compulsory ಆಗಿ ಹಸುಗಳನ್ನು ಸಾಕಬೇಕು ಕೃಷಿ ಹೊಂಡವನ್ನು compulsory ಆಗಿ ಮಾಡಬೇಕು ಮತ್ತು ಈ ತರಹ ಗಿಡಗಳನ್ನು ಬೆಳೆಸುವ ಕೆಲಸವನ್ನು ಮಾಡಬೇಕು.

ಈಗ Bore well water extracting ಜಾಸ್ತಿಯಾಗುತ್ತಿದೆ. ಬೋರ್ ವೆಲ್ ನೀರನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವುದಕ್ಕೆ ರೈತರಿಗೆ ಮಾರ್ಗದರ್ಶನ ಕೊಡಲು ಒಂದು legislation ತರಬೇಕೆನ್ನುವುದು ನನ್ನ ಉದ್ದೇಶ. ಇಲ್ಲದಿದ್ದರೆ ground water ಅನ್ನು ಹೆಚ್ಚು extract ಮಾಡುವುದರಿಂದ ಬಹಳ ತೊಂದರೆಗಳನ್ನು ನಾವು ಅನುಭವಿಸಬೇಕಾಗುತ್ತದೆ. ಇದರ ಜೊತೆಗೆ ಇನ್ನು ಅನೇಕ ವಿಚಾರಗಳನ್ನು ಹೇಳಬೇಕು. ನೀವು ಬೆಲ್ ಹೊಡೆಯುತ್ತಿದ್ದೀರಿ. ಗ್ರಾಮೀಣಾಭಿವೃದ್ಧಿ ಬಗ್ಗೆ ಒಂದೆರಡು ಮಾತುಗಳನ್ನಾಡುತ್ತೇನೆ.

ಅಧ್ಯಕ್ಷರು : ಇನ್ನೊಂದು ಅವಕಾಶ ಸಿಕ್ಕಾಗ ಮಾತನಾಡುವಿರಂತೆ. ಈಗ ಪ್ರತಿಪಕ್ಷದ ನಾಯಕರು ಪ್ರಾರಂಭ ಮಾಡಲಿ. ನೀವು ಮುಗಿಸಿಬಿಡಿ. ಮತ್ತೆ time ಸಿಕ್ಕಿದರೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಬೇಕು.

ಅಧ್ಯಕ್ಷರು : Please, conclude ಮಾಡಿ. Time ಆಗಿದೆ.

ಒಬ್ಬ ಮಾನ್ಯ ಸದಸ್ಯರು : ಮುಖ್ಯಮಂತ್ರಿಗಳು ಸೋಮವಾರ ಉತ್ತರ ಕೊಡಲಿ. ಇವತ್ತೊಂದು ದಿನ ಚರ್ಚೆಗೆ ಅವಕಾಶ ಮಾಡಿಕೊಡಿ. ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : I am helpless.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನೀವು ಹೀಗೆ ಮಾಡಿದರೆ ಹೇಗೆ? ಇನ್ನೂ ಬಹಳಷ್ಟು ಸದಸ್ಯರು ಮಾತನಾಡುವವರಿದ್ದಾರೆ. ನಾವೂ ಮಾತನಾಡಿಲ್ಲ. ಈ ಅಧಿವೇಶನವನ್ನು ಕರೆದಿರುವ ಉದ್ದೇಶವಾದರೂ ಏನು? ಏನು ಸಲಹೆ ಕೊಡುವುದಕ್ಕೆ ಕರೆದಿದ್ದಾರೋ ಹೇಗೆ? ಏನು ಅರ್ಥವಾಗುತ್ತಿಲ್ಲ. ಎಲ್ಲರಿಗೂ ಅವಕಾಶ ಮಾಡಿಕೊಡಿ. ಸದಸ್ಯರು ಏನೋ ಅವರ ಅಭಿಪ್ರಾಯ ಗಳನ್ನು ಹೇಳುವುದಕ್ಕೆ ಬಂದಿರುತ್ತಾರೆ. ದಯವಿಟ್ಟು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಈಗ ಪ್ರತಿಪಕ್ಷದ ನಾಯಕರು ಪ್ರಾರಂಭ ಮಾಡಲಿ. Time availability ನೋಡಿಕೊಂಡು decision ತೆಗೆದುಕೊಳ್ಳೋಣ. ಮಾತನಾಡಲು ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಈ ಅಧಿವೇಶನ ಕಾಟಚಾರಕ್ಕೆ ಮಾಡಿದಂತಾಗುತ್ತದೆ. ದಯವಿಟ್ಟು ಮಾತನಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ನಾನು ನಿನ್ನೆ ಮಧ್ಯಾಹ್ನವೇ ಘೋಷಣೆ ಮಾಡಿದ್ದೇನೆ. ಇವತ್ತು ಮಧ್ಯಾಹ್ನ ಒಂದು ಗಂಟೆಯವರೆಗೂ ಚರ್ಚೆ ಮಾಡಿ ಉತ್ತರ ಕೊಡುವುದು. ಎರಡು, ಎರಡೂವರೆಗೆ close ಮಾಡೋಣವೆಂದು ನಿರ್ಣಯ ವನ್ನೇ ಕೈಗೊಂಡಿದ್ದೇವೆ. ನಿನ್ನೆ ರಾತ್ರಿ ಏಳೂವರೆ, ಎಂಟು ಗಂಟೆಯವರೆಗೂ ನಡೆಸಿದ್ದೇವೆ. ಅದಕ್ಕೋಸ್ಕರ ದಯವಿಟ್ಟು ಸಹಕಾರ ಕೊಡಿ. ಪ್ರತಿಪಕ್ಷದ ನಾಯಕರು ಪ್ರಾರಂಭ ಮಾಡಲಿ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡಲು ವಿಶೇಷ ಅಧಿವೇಶನವನ್ನು ಕರೆಯಲಾಗಿದೆ. ಆದರೆ ಮಾತನಾಡಲು ಅವಕಾಶ ಕೊಡದಿದ್ದರೆ ಹೇಗೆ? ಸುಮ್ಮನೆ ಕರೆಯಬೇಕಾದ ಅವಶ್ಯಕತೆ ಏನಿತ್ತು? ಎಲ್ಲರಿಗೂ ಅವಕಾಶ ಕೊಡದೇ ಬೇರೆ ಹಾದಿಯೇ ಇಲ್ಲ. ಬೇಕಾದರೆ ಇನ್ನೂ ಎರಡು ದಿವಸ ಮುಂದೆ ಹೋಗಲಿ.

ಅಧ್ಯಕ್ಷರು : ಈಗಾಗಲೇ 15–20 ಜನ ಸದಸ್ಯರು ಮಾತನಾಡಿದ್ದಾರೆ.

ಶ್ರೀ ಕೃಷ್ಣ ಭೈರೇಗೌಡ : ಎಲ್ಲಿ ಮಾತನಾಡಿದ್ದಾರೆ, ಇನ್ನು ನಾನು ಮಾತನಾಡಿಲ್ಲ.

ಅಧ್ಯಕ್ಷರು : ನೀವು ಮಾತನಾಡಿಲ್ಲ. ಮಾತನಾಡುವವರು ಮಾತನಾಡಿದ್ದಾರೆ.

ಶ್ರೀ ಬಂಡೆಪ್ಪ ಕಾಶಂಪೂರ್ : ನೀವು ಸಲಹೆ ಸೂಚನೆಗಳಿಗೆ ಇಷ್ಟೂ ಮಾತನಾಡಲು ಅವಕಾಶ ಕೊಡದಿದ್ದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಇದು ಬಜೆಟ್ ಅಧಿವೇಶನವಲ್ಲ. Guillotine pass ಮಾಡಿಕೊಂಡು, ಮಾಡಬೇಕೆಂದು ಇಲ್ಲ. ಮುಖ್ಯಮಂತ್ರಿಗಳು ಸೋಮವಾರ ಉತ್ತರ ಕೊಡುವುದಕ್ಕೆ ತಾವು ದಯಮಾಡಿ ಮನವೊಲಿಸಬೇಕು. ಸಲಹೆ ಸೂಚನೆಗಳನ್ನು ತೆಗೆದುಕೊಳ್ಳದೇ implement ಮಾಡುವುದಕ್ಕೆ ಉತ್ತರ ಕೊಡುವಂಥ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ನಾವೇನೂ ಆಪಾದನೆ ಮಾಡುತ್ತಿಲ್ಲ, ಜಗಳವಾಡುತ್ತಿಲ್ಲ, ಸಲಹೆಗಳನ್ನು ಕೊಡುತ್ತೇವೆಂದರೂ ನೀವು ಬೇಡವೆನ್ನುತ್ತಿದ್ದೀರಲ್ಲಾ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಸದಸ್ಯರು ಸದನಕ್ಕೆ ಬರಬೇಕು ಎಂದು ಹೇಳಿದರೆ, ಅವರು ಹೇಗೆ ಬರಬೇಕು? ಅವರಿಗೇನಾದರೂ ಮಾತನಾಡು ವುದಕ್ಕೆ ಅವಕಾಶ ಕೊಟ್ಟರೆ ಬರುತ್ತಾರೆ. ಈಗ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚಿಸಲು ಐತಿಹಾಸಿಕ ಅಧಿವೇಶವೆಂದು ಕರೆದು, ಇಲ್ಲಿ ಸದಸ್ಯರಿಗೆ ಮಾತನಾಡಲು ಅವಕಾಶವಿಲ್ಲದೆ, ಒಂದು ಗಂಟೆಗೆ ಉತ್ತರ ಕೊಡಲೇಬೇಕೆಂದು ಹೇಳಿ, ಅದೇನು ಮುಹೂರ್ತವೋ ಅಥವಾ ಗಳಿಗೆಯೋ ಗೊತ್ತಿಲ್ಲ. ಈ ತರಹ ನಿಗದಿ ಮಾಡಿಕೊಂಡು, ನಮಗೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಕಾಳಜಿ ಇದೆ ಎಂದು ಹೇಳಿದರೆ ಹೇಗೆ? ಇಲ್ಲವಾದರೆ ಈ ಅಧಿವೇಶನ ಕೇವಲ ಪತ್ರಿಕೆಗಳಲ್ಲಿ ಅಂದವಾಗಿ ಒಂದು ವರದಿ ಬರುವುದಕ್ಕೆ ಮಾತ್ರ ಸೀಮಿತವಾಗುತ್ತದೆ. ಎಲ್ಲಾ ಸದಸ್ಯರಿಗೂ ಅವರ ಅನುಭವದ ಆಧಾರದ ಮೇಲೆ ಅವರದೇ ಆದಂಥ ಅಭಿಪ್ರಾಯಗಳಿವೆ. ದಯವಿಟ್ಟು 5–10 ನಿಮಿಷ ಎಲ್ಲರಿಗೂ ಅವಕಾಶ ಮಾಡಿಕೊಡಿ. ಕಟ್ಟುನಿಟ್ಟಾಗಿ ತಾವು ಹತ್ತು ನಿಮಿಷ ಎಂದರೆ, ಹತ್ತು ನಿಮಿಷಕ್ಕೆ ನೀವು control ಮಾಡಿ. ಆ ವಿಚಾರದಲ್ಲಿ ನಾವು ಅಡ್ಡ ಬರುವುದಿಲ್ಲ. ಆದರೆ ಕನಿಷ್ಠ 9 ನೇ ತಾರೀಖು, 9ನೇ ತಿಂಗಳು, 9ನೇ

ವರ್ಷ, ಏನೋ ಒಂದು ಅಧಿವೇಶನ ಮಾಡಬೇಕೆಂದು ಅಷ್ಟಕ್ಕೆ ಮಾತ್ರ ಸೀಮಿತವಾಗುತ್ತದೆ. ದಯವಿಟ್ಟು ಆ ತರಹ ಆಗುವುದು ಬೇಡ. ಇದು ಗಂಭೀರವಾದಂತಹ ವಿಚಾರ. ಎಲ್ಲರಿಗೂ ಅನ್ವಯಿಸತಕ್ಕಂಥ ವಿಚಾರ. ದಯವಿಟ್ಟು ಅಧ್ಯಕ್ಷರು ತಾವು ಸ್ವಲ್ಪ ಮನಸ್ಸು ಮಾಡಿ ಸದಸ್ಯರ ನೆರವಿಗೆ ಬಂದು, ಸದಸ್ಯರ ಪರವಾಗಿ ತಾವು ತೀರ್ಮಾನವನ್ನು ತೆಗೆದುಕೊಳ್ಳಬೇಕು.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಇದೊಂದು ವಿಶೇಷ ಅಧಿವೇಶನ. ಅತ್ಯಂತ ಮಹತ್ತರವಾದಂಥ ಎರಡು ವಿಷಯಗಳನ್ನು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅವಕಾಶವನ್ನು ಒದಗಿಸಿಕೊಟ್ಟಿದ್ದಾರೆ. ಅನೇಕ ಪತ್ರಿಕೆಗಳ editorial ನಲ್ಲಿ ನೋಡಿ. ಈ ವೇದಿಕೆಯಲ್ಲಿ ಚುನಾಯಿತ ಪ್ರತಿನಿಧಿಗಳು ಮಾತನಾಡದೇ ಹೋದರೆ, ಬೇರೆ ಸಭೆ–ಸಮಾರಂಭಗಳಲ್ಲಿ ಮಾತನಾಡುವುದಕ್ಕೆ ಇವರಿಗೆ ಏನಿದೆ? ಎನ್ನುವುದು ಬರುತ್ತದೆ. ಸರ್ಕಾರ ಸಮಿತಿಗಳ ಮುಖಾಂತರ ಎಲ್ಲಾ ಸದಸ್ಯರಿಗೆ ರಾಷ್ಟ್ರದಿಂದ ಹೊರ ರಾಷ್ಟ್ರಗಳಿಗೆ ಹೋಗಿ ಒಂದು ಅಧ್ಯಯನ ಪ್ರವಾಸ ಮಾಡಲು ಅವಕಾಶ ಕೊಟ್ಟ ಮೇಲೆ by and large ಎಲ್ಲಾ ಸದಸ್ಯರಿಗೂ ಜ್ಞಾನೋದಯವಾಗಿ ಬಿಟ್ಟಿದೆ. ಅಲ್ಲಿರತಕ್ಕಂಥ ಜ್ಞಾನ ಸಂಪತ್ತನ್ನು ಬಳಸಿ, ಕೊನೇ ಪಕ್ಷ ಅಲ್ಲಿ ಜನಜೀವನ ಹೇಗೆ ನಡೆಯುತ್ತಿದೆ, ಆಡಳಿತ ಹೇಗಿದೆ, ಜನರ ಬದುಕು ಯಾವ ರೀತಿ ಇದೆ, ಅವರ ವ್ಯವಸಾಯ, ಬದುಕು, ಕೃಷಿ, ನೀರಾವರಿ, ಹೈನುಗಾರಿಕೆ, ಪ್ರವಾಸೋದ್ಯಮ, ಯಾವ ರೀತಿ ಸಂಪನ್ಮೂಲವನ್ನು ಬಳಸಿಕೊಂಡು ತಲಾದಾಯವನ್ನು ಹೆಚ್ಚಿಸಿ, ಗುಣಾತ್ಮಕವಾದಂಥ ಉತ್ತಮ ಜೀವನವನ್ನು ನಡೆಸುತ್ತಿದ್ದಾರೆ ಎನ್ನುವ ಅನೇಕ ವಿಷಯಗಳನ್ನು ಸದಸ್ಯರು ಅಲ್ಲಿ ಕಂಡು, ಕೇಳಿ, ಚರ್ಚೆ ಮಾಡಿ ಬಂದಿದ್ದಾರೆ. ಜೊತೆಗೆ ಈ ಎರಡು ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ವಿಶೇಷವಾದ ಅಧ್ಯಯನ ಏನೂ ಬೇಕಾಗಿಲ್ಲ. ನಾವೆಲ್ಲಾ ಹೊಲಗದ್ದೆಗಳಲ್ಲಿ ಸ್ವತಃ ದುಡಿದು ಬಂದಿರುವವರು. ಮಾನ್ಯ ಮುಖ್ಯಮಂತ್ರಿ ಗಳು ಈ ನಿಮ್ಮ ಸಲಹೆಗಳನ್ನು ತೆಗೆದುಕೊಂಡು, ಅವರ ಹೋರಾಟದ, ಗ್ರಾಮೀಣ ಮತ್ತು ಕೃಷಿ ಬದುಕಿನ ಹೋರಾಟದ ಹಿನ್ನೆಲೆಯಲ್ಲಿ ಮುಂದಿನ ಆಯವ್ಯಯದಲ್ಲಿ ನಾನು ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅದು ಅನುದಾನದ ಲಭ್ಯತೆಗೆ ಆಧರಿಸಿ ಎಂದು ಹೇಳಿದ್ದಾರೆ.

ಡಾ: ಹೆಚ್.ಸಿ.ಮಹದೇವಪ್ಪ : ಅದಕ್ಕೆ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬೇಕಾದ ಅಗತ್ಯ ಇಲ್ಲವೇ ಇಲ್ಲ. ಅವರು ಒಳ್ಳೆಯ ಮನಸ್ಸಿನಿಂದ, ಒಳ್ಳೆಯ ಕೆಲಸ ಮಾಡಬೇಕೆನ್ನುವ ಉದ್ದೇಶದಿಂದ ಅವರು ಹೇಳಿದ್ದಾರೆ. ಚೈನಾದಲ್ಲಿ ಅವರು ಹೋಗಿ ನೋಡಿದ ಮೇಲೆ family planning ಬಗ್ಗೆ, ಸ್ಫೋಟಗೊಳ್ಳುತ್ತಿರುವ ಜನಸಂಖ್ಯೆ ಇವತ್ತಿನ ಅನೇಕ ಅಭಿವೃದ್ಧಿಗೆ ಅಡ್ಡಿಯಾಗಿದೆ. Family planning ಒಂದು national programme.

ಶ್ರೀ ಎಸ್. ಸುರೇಶ್‌ಕುಮಾರ್ : ಅಧ್ಯಕ್ಷರೆ, ಇವತ್ತಿನ ವಿಶೇಷ ಸಂದರ್ಭದಲ್ಲಿ ವಿಶೇಷ ವಿಚಾರವನ್ನು ಚರ್ಚಿಸುವುದಕ್ಕೋಸ್ಕರ ಸದನ ಕರೆದಿದ್ದೇವೆ. ಒಟ್ಟು ಮೂರು ದಿನಗಳ ಕಾಲ ಅಧಿವೇಶನ ಜರುಗಿಸಬೇಕೆಂದು ಅಂದು ನಿರ್ಧಾರವಾಗಿತ್ತು. ಸೋಮವಾರ, ಮಂಗಳವಾರ ಮತ್ತು ಬುಧವಾರ ಗಳಂದು ವಿಚಾರ ಚರ್ಚಿಸಬೇಕೆಂದು ಸಭೆಯಲ್ಲಿ ತೀರ್ಮಾನ ಕೈಗೊಳ್ಳ ಲಾಗಿತ್ತು. ಇವತ್ತು ಮಾತನಾಡುತ್ತಿರುವ ನಾವುಗಳು ಮೂರು ದಿವಸಗಳಲ್ಲಿ ಮುಗಿಸಬೇಕೆಂಬ ನಿಯಂತ್ರಣ ಇಟ್ಟುಕೊಳ್ಳಬೇಕು. ಆದರೆ, ಒಬ್ಬ ಮಾನ್ಯ ಸದಸ್ಯರು ಮಾತನಾಡಿ, ಈ ಅಧಿವೇಶನ ಕರೆಯುವ ಅಗತ್ಯವೇನಿತ್ತು, ಇದು ಅನಗತ್ಯವೆಂದು ಹೇಳುತ್ತಾರೆ. ಅನಗತ್ಯವೆಂದು ಹೇಳುತ್ತಲೇ ಒಂದೂವರೆ ಗಂಟೆ ಕಾಲ ಮಾತನಾಡುತ್ತಾರೆ! ಇದಕ್ಕೆ ಏನನ್ನೋಣ? ಯಾವುದು ಅನಗತ್ಯ? ಒಂದೂವರೆ ಗಂಟೆ ಕಾಲ ಮಾತನಾಡುವುದು ಅಗತ್ಯವೇ? ಅಥವಾ ವಿಚಾರ ಅನಗತ್ಯವೋ? ಗೊತ್ತಿಲ್ಲ. ಅದಕ್ಕೋಸ್ಕರ, ಸ್ವಯಂ ನಿಯಂತ್ರಣ ಹೇರಿಕೊಳ್ಳುವ ಮೂಲಕ, ಇವತ್ತು ಮಾನ್ಯ ಮುಖ್ಯಮಂತ್ರಿಗಳ ಉತ್ತರವೆಂದು ನಿಗದಿಯಾಗಿರು ವುದರಿಂದ ಮತ್ತು ಈ ತೀರ್ಮನವನ್ನು ಎಲ್ಲರೂ ಒಪ್ಪಿಕೊಂಡಿರುವುದರಿಂದ ಮಾನ್ಯ ಅಧ್ಯಕ್ಷರಾದ ತಾವು ತೀರ್ಮಾನವನ್ನು ದಯಮಾಡಿ ಅನುಷ್ಠಾನಗೊ ಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈ ಕುರಿತಂತೆ ಮೊದಲೇ ನಾವು ನಿರ್ಣಯ ತೆಗೆದು ಕೊಂಡಿದ್ದೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಸಚಿವರಾದ ಸುರೇಶ್‌ಕುಮಾರ್‌ರವರು ಮಾತನಾಡಿ, ಚರ್ಚೆ ಅಗತ್ಯವಿದೆಯೇ ಇಲ್ಲವೇ ಎಂದು ಹೇಳಿ ಒಂದೂವರೆ ಗಂಟೆ ಕಾಲ ಮಾತನಾಡುತ್ತಾರೆಂದು ಹೇಳಿದರು. ಅವರ ಪುಸ್ತಕದಲ್ಲಿ ಒಂದು ಮಾತನ್ನು ಹೇಳಿದ್ದಾರೆ.

ಅಧ್ಯಕ್ಷರು : Please, conclude ಮಾಡಿ, ಈಗಾಗಲೇ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದ್ದೀರಿ. ಈಗ ಕನ್‌ಕ್ಲೂಡ್ ಮಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಈ ಸರ್ಕಾರವನ್ನು ಟೀಕಿಸಿದರೂ ಕೇಳಲು ತಯಾರಿಲ್ಲ. ಪುಸ್ತಕದಲ್ಲಿ ನೀವು ಹೇಳಿದ್ದೀರಿ. ದುರಾದೃಷ್ಟವಶಾತ್.......

ಶ್ರೀ ಕೃಷ್ಣ ಬೈರೇಗೌಡ : ನಾವು ಹೊರಗಡೆ ಹೋಗುತ್ತೇವೆ, ನೀವೇ ಸದನ ನಡೆಸಿಕೊಳ್ಳಿ.

ಶ್ರೀ ಬಂಡೆಪ್ಪ ಕಾಶೆಂಪೂರ್ : ನೀವೇ ಸದನದವನ್ನು ನಡೆಸಿಕೊಳ್ಳಿ. ನಾವೆಲ್ಲರೂ ಹೊರಗಡೆ ಹೋಗುತ್ತೇವೆ.

ಅಧ್ಯಕ್ಷರು : ಈಗ ಬನ್ನಿ, ಆನಂತರ, ಸಮಯ ಸಿಕ್ಕರೆ ನೋಡೋಣ. ಈಗ ಪ್ರತಿ ಪಕ್ಷದ ನಾಯಕರು ಮಾತನಾಡಲಿ.

ಶ್ರೀ ಬಂಡೆಪ್ಪ ಕಾಶಂಪೂರ್ : ನಾವ್ಯಾರೂ ಮಾತನಾಡಿಲ್ಲ, ಇನ್ನೂ ಮಾತನಾಡುವವರಿದ್ದಾರೆ.

ಶ್ರೀ ಕಾಕಾಸಾಹೇಬ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಿಪ್ಪಾಣಿ ಇದುವರೆಗೂ ಹೊಗೆಸೊಪ್ಪಿಗೆ ಬಹಳ ಪ್ರಸಿದ್ಧಿಯಾಗಿತ್ತು. ಈಗ World Health Organization ನಿರ್ದೇಶನದ ರೀತ್ಯಾ ಹೊಗೆಸೊಪ್ಪು ಬೆಳೆಯನ್ನು ಕಡಿಮೆ ಪ್ರಮಾಣದಲ್ಲಿ ಬೆಳೆಯಬೇಕೆಂದು ಸೂಚಿಸಲಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಿಪ್ಪಾಣಿಯಲ್ಲಿ ಹೊಗೆಸೊಪ್ಪಿಗೆ ಪರ್ಯಾಯವಾಗಿ cash crop ಬೆಳೆಯಲು ಅನುಮತಿ ನೀಡಬೇಕು ಅಥವಾ ಹೊಗೆಸೊಪ್ಪಿನ ಬೀಡಿ ಸೇದುವುದರಿಂದ ಆರೋಗ್ಯ ಹಾಳಾಗುತ್ತದೆ. ಹೊಗೆಸೊಪ್ಪಿನಲ್ಲಿರುವ ನಿಕೋಟಿನ್ ಬಗ್ಗೆ ಗುಜರಾತ್‌ನಲ್ಲಿ ಸಂಶೋಧನೆ ನಡೆದಿರುವುದರಿಂದ, ಇಲ್ಲಿಯೂ ಈ ವ್ಯವಸ್ಥೆ ಮಾಡಬೇಕು. ನಿಪ್ಪಾಣಿಯಂತಹ ಗಡಿ ಪ್ರದೇಶದಲ್ಲಿ ಕುಡಿಯುವ ನೀರಿನ ಭಯಂಕರ ಕೊರತೆ ಇದೆ. ನೆರೆ ರಾಜ್ಯವಾದ ಮಹಾರಾಷ್ಟ್ರದ ಜೊತೆ ನಮ್ಮ ನೀರಾವರಿ ಸಚಿವರು ಒಂದು ಒಪ್ಪಂದಕ್ಕೆ ಬಂದು ರಾಜ್ಯದ ಗಡಿ ಭಾಗಕ್ಕೆ ನೀರು ತರುವ ವ್ಯವಸ್ಥೆ ಮಾಡಬೇಕು.

ಗ್ರಾಮೀಣಾಭಿವೃದ್ಧಿ ವ್ಯವಸ್ಥೆಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೂ ಸರಿಸಮಾನವಾಗಿ ಏನು ಅನುದಾನ ನೀಡುತ್ತಿದ್ದೇವೆ, ಅನುದಾನವನ್ನು ಜನಸಂಖ್ಯೆ ಆದಾರದ ಮೇಲೆ ನೀಡಬೇಕು. ಅದೇ ರೀತಿ CRF ನಿಧಿಯನ್ನು ಜಿಲ್ಲಾವಾರು, ತಾಲ್ಲೂಕುವಾರು ಹಂಚಿಕೆ ಮಾಡಲಾಗುತ್ತದೆ.

ರಾಮದುರ್ಗ ತಾಲ್ಲೂಕಿಗೆ 20 ಲಕ್ಷ ಬರುತ್ತದೆ, ಚಿಕ್ಕೋಡಿ ತಾಲ್ಲೂಕಿಗೆ 20 ಲಕ್ಷ ಬರುತ್ತದೆ. ನಾನು ಚಿಕ್ಕೋಡಿ–ಸದಲಗಾ ಮತ್ತು ರಾಮದುರ್ಗ ಕ್ಷೇತ್ರಗಳ ಶಾಸಕರೊಡಗೂಡಿ ಅನುದಾನ ಹಂಚಿಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ, ವಿಶೇಷವಾಗಿ ಗಡಿ ಭಾಗದಲ್ಲಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಆದಷ್ಟು ಬೇಗ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ "....ದುರದೃಷ್ಟವಶಾತ್, ನಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಕಳೆದ ಯಾವೊಂದು ಅಧಿವೇಶನದಲ್ಲೂ ವಿವಿಧ ಅಭಿವೃದ್ಧಿ ವಿಷಯಗಳ ಬಗ್ಗೆ, ಇಲಾಖಾ ಬೇಡಿಕೆಗಳ ಬಗ್ಗೆ, ಆಯವ್ಯಯದಲ್ಲಿ ಘೋಷಿಸಿದ ಹೊಸ ಯೋಜನೆಗಳ ಬಗ್ಗೆ ಸುದೀರ್ಘವಾದ ಅರ್ಥಪೂರ್ಣ ಚರ್ಚೆ ನಡೆಯಲಿಲ್ಲವೆಂದು ಹೇಳಲು ಸದನದ ನಾಯಕನಾದ ನನಗೆ ತುಂಬಾ ನೋವಾಗುತ್ತದೆ" ಎಂದು ಹೇಳಿದ್ದಾರೆ. ಎಲ್ಲರೂ ಚರ್ಚೆ ಮಾಡುತ್ತೇವೆಂದರೆ, ಟೀಕೆ ಮಾಡುತ್ತೇವೆಂದರೆ, ಚರ್ಚೆ ಮಾಡಬೇಡಿ, ಟೀಕೆ ಮಾಡಬೇಡಿ ಎಂದು ಹೇಳುತ್ತಾರೆ. ಹೀಗೆ ಮಾಡಿದರೆ ಹೇಗೆ? ಇವತ್ತು ಒಂದು ದಿವಸ ಚರ್ಚಿಸಲು ದಯಮಾಡಿ ಅವಕಾಶ ಕಲ್ಪಿಸಿಕೊಡಬೇಕು. ಸೋಮವಾರ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡಲಿ, ಇದು ಉತ್ತರವಲ್ಲ.

ಶ್ರೀ ಬಂಡೆಪ್ಪ ಕಾಶೆಂಪೂರ : ಹೇಳಿಕೆ ಕೊಟ್ಟರೆ ಅದನ್ನು ಕೇಳುವುದಕ್ಕೂ ಯಾರೂ ಇರುವುದಿಲ್ಲ. ಎಲ್ಲರೂ ಹೋಗಿಬಿಡುತ್ತಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಈಗ ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ಪಂಚಾಯತ್ ರಾಜ್‌ನಲ್ಲಿ three tier system ಇದೆ. Three tier system ಬಗ್ಗೆ ಹೇಳುವುದಾದರೆ, ಬಹುಶಃ ತಾಲ್ಲೂಕು ಪಂಚಾಯಿತಿ ಸದಸ್ಯರುಗಳಿಗೆ ಒಂದು ವರ್ಷಕ್ಕೆ ಒಂದೂವರೆ ಲಕ್ಷದಷ್ಟು ಅನುದಾನ ನೀಡುವ ವ್ಯವಸ್ಥೆ ಇದೆ. ಈ ವ್ಯವಸ್ಥೆಯನ್ನು ತೆಗೆದುಹಾಕುವುದು ಸೂಕ್ತವೆಂದು ನಾನು ಸರ್ಕಾರಕ್ಕೆ ಸಲಹೆ ನೀಡಬಯಸುತ್ತೇನೆ. ಕೇವಲ two tier system ಸಾಕು. ಒಂದು ಗ್ರಾಮ ಪಂಚಾಯಿತಿ ಮತ್ತೊಂದು ಜಿಲ್ಲಾ ಪಂಚಾಯಿತಿ. ಈ ಎರಡೂ ವ್ಯವಸ್ಥೆಗಳನ್ನು ಬಲಯುತಗೊಳಿಸಬೇಕೆಂದು ಸರ್ಕಾರಕ್ಕೆ ಸಲಹೆ ನೀಡಬಯಸುತ್ತೇನೆ.

ಇನ್ನು NREGS ಕುರಿತು ಹೇಳುವುದಾದರೆ, ಮೊದಲು ಗ್ರಾಮ ಪಂಚಾಯಿತಿಗಳಿಗೆ ಸರ್ಕಾರ 5 ಲಕ್ಷ, 10 ಲಕ್ಷ ಅನುದಾನ ನೀಡುತ್ತಿತ್ತು. ಇತ್ತೀಚಿನ ದಿವಸಗಳಲ್ಲಿ ಈ ಅನುದಾನ ತೆಗೆದು ಹಾಕಿದ್ದಾರೆ. ಅನುದಾನ ಕೇಳಿದರೆ NREGS ನಲ್ಲಿ ಬಂದಿರುವ ಹಣ ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತಾರೆ. NREGS ನಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಬೇಕೆಂದು ಹೇಳಿದ್ದಾರೆ. NREGA ಯಾವ ರೀತಿ ಉಪಯೋಗಿಸಬೇಕು? ಅದರ ಮಾನದಂಡವೇನು? ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಕೆಲವು ಅಧಿಕಾರಿಗಳು JCB ಉಪಯೋಗಿಸಿ ಕೆಲಸ ಮಾಡುವಂತಿಲ್ಲ. ಕೆಲವು ಪತ್ರಿಕೆಗಳಲ್ಲಿ ಓದಿದೆ. JCB ಉಪಯೋಗಿಸಿ ಶೇಕಡ 40ರಷ್ಟು ಕೆಲಸ ಮಾಡಬಹುದು, material component 40%. ಇದೊಂದು ಗೊಂದಲವಿದೆ. NREGS ನಲ್ಲಿ ನಾವು ಯಾವ ರೀತಿ ಕೆಲಸ ಮಾಡಬೇಕೆಂಬ ಬಗ್ಗೆ ಗೊಂದಲವಿದೆ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ NREGS ನಲ್ಲಿ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದ್ದಾರೆಂದರೆ ಅದಕ್ಕೆ ಕೇಂದ್ರ ಸರ್ಕಾರದ ಬೆಂಬಲವಿದೆ, ಅವರು ಹಣ ಖರ್ಚು ಮಾಡುತ್ತಾರೆ. ಕೇಂದ್ರ ಸರ್ಕಾರ ಅಡ್ಡ ಬಾರದಿದ್ದರೆ, JCB ಯಂತ್ರಗಳ ಮೂಲಕವಲ್ಲದೆ, ಬೇರೆ ಬೇರೆ ರೀತಿಗಳಲ್ಲಿ ನಾವು ಕೆಲಸ ಮಾಡಬಹುದಾಗಿದೆ. NREGS ಎಲ್ಲಿಯೂ ಯಶಸ್ವಿಯಾಗಿ ಕಾರ್ಯಗತಗೊಳ್ಳುತ್ತಿಲ್ಲ. NREGS ಎಲ್ಲಿ ಯಶಸ್ವಿಯಾಗಿ ಕಾರ್ಯಗತವಾಗಿದೆಯೋ, ಆ ಜಿಲ್ಲೆಗೆ ಶಾಸಕರುಗಳನ್ನು ಕರೆದುಕೊಂಡು ಹೋಗಿ ಒಂದು ಸಲ ಅದನ್ನು ನಮಗೆ ತೋರಿಸಬೇಕು. ಯಾವ ರೀತಿ NREGS ಯಶಸ್ವಿಯಾಗಿದೆ ಎಂದು ಗೊತ್ತಾದಾಗ ನಮಗೆ ಕೆಲಸ ಮಾಡಲು ಅನುಕೂಲವಾಗುತ್ತದೆ. ಅದಕ್ಕೋಸ್ಕರ, NREGS ವಿಚಾರದಲ್ಲಿ ಈ ಸರ್ಕಾರ ತಾನು ಏನು ಮಾಡಬೇಕೆಂಬುದನ್ನು ಈ ಸದನದಲ್ಲಿ ಹೇಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಇನ್ನು ಗ್ರಾಮ ಪಂಚಾಯಿತಿಯನ್ನು ಬಲಯುತಗೊಳಿಸಲು ಪ್ರತಿ ಗ್ರಾಮ ಪಂಚಾಯಿತಿಗೆ ಪ್ರತಿ ವರ್ಷವೂ 25 ಲಕ್ಷದಷ್ಟು ಅನುದಾನ ನೀಡಬೇಕು. ಗ್ರಾಮ ಪಂಚಾಯಿತಿಗೆ ನಿಮ್ಮ ಸರ್ಕಾರ ಏನು ಅನುದಾನ ಕೊಟ್ಟಿದೆ? ಗ್ರಾಮ ಪಂಚಾಯಿತಿಗಳನ್ನು ಶಕ್ತಿಯುತಗೊಳಿಸಬೇಕೆಂದು ನಾವು ಭಾಷಣಗಳನ್ನು ಮಾಡುತ್ತೇವೆ. ಆದರೆ, ಗ್ರಾಮ ಪಂಚಾಯಿತಿಗಳನ್ನು ಬಲಿಷ್ಠಗೊಳಿಸಲು ಎಷ್ಟು ದುಡ್ಡು ಕೊಟ್ಟಿದ್ದೇವೆ? ಗ್ರಾಮ ಪಂಚಾಯಿತಿಗೆ

ಬರುವ ಅನುದಾನದಲ್ಲಿ ಮೋರಿ ಸ್ವಚ್ಛಗೊಳಿಸುವುದಕ್ಕಾಗುವುದಿಲ್ಲ. ಈಗಿರುವ ವ್ಯವಸ್ಥೆಯಲ್ಲಿ ಅರ್ಧ ದುಡ್ಡು ಅವರೇ ಹೊಡೆದುಬಿಡುತ್ತಾರೆ, ಇನ್ನರ್ಧ ದುಡ್ಡು ಸುಮ್ಮನೆ ಪೋಲಾಗುತ್ತದೆ. ಆದುದರಿಂದ, ಪ್ರತಿ ಗ್ರಾಮ ಪಂಚಾಯಿತಿಗೂ 25 ಲಕ್ಷ ಅನುದಾನ ನೀಡುವ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಬಾಲಕೃಷ್ಣರವರು ಮಾತನಾಡುತ್ತಿದ್ದಾರೆ. ಬೇರೆ ಮಾನ್ಯ ಸದಸ್ಯರುಗಳು ಸದನದಲ್ಲಿ ಶಾಂತತೆ ಕಾಪಾಡಿಕೊಳ್ಳಬೇಕು. ನೀವುಗಳು ಪರಸ್ಪರ ಮಾತನಾಡುತ್ತಿದ್ದರೆ, ಅವರು ಮಾತನಾಡುವುದು ಕೇಳಿಸುವುದಿಲ್ಲ ಮತ್ತು ಸದನಕ್ಕೂ ಗೌರವ ತಂದುಕೊಡುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಇನ್ನು ಮನೆ ಕಟ್ಟುವ ವ್ಯವಸ್ಥೆ. ಈ ಹಿಂದೆ ಮನೆಗಳನ್ನು ಕಟ್ಟುವುದಕ್ಕೆ ತಾಲ್ಲೂಕು ಬೋರ್ಡ್ ಇದ್ದುದು ತಮಗೆಲ್ಲರಿಗೂ ಗೊತ್ತಿದೆ. ಸರ್ಕಾರವೇ ಮನೆಗಳನ್ನು ಕಟ್ಟಿಸಿಕೊಡುತ್ತಿತ್ತು. ಇವತ್ತು ಪರಿಸ್ಥಿತಿ ಯಾವ ರೀತಿ ಇದೆಯೆಂದರೆ, ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳಡಿ 40,000 ರೂ.ಗಳನ್ನು ಸರ್ಕಾರ ಘೋಷಿಸಿದೆ. ಮನೆಗಳನ್ನು ಕಟ್ಟಲು ಬಡವರಿಗೆ ಶಕ್ತಿ ಇರುವುದಿಲ್ಲ. ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ, ಪಂಗಡಗಳವರು ಇರಬಹುದು, ಅವರುಗಳಿಗೆ ಮನೆಗಳನ್ನು ಕಟ್ಟಲು ಶಕ್ತಿ ಇರುವುದಿಲ್ಲ. ತಳಪಾಯ ಹಾಕಿದ ಬಳಿಕ ಒಂದು ಬಿಲ್ ಎಂದು ಹೇಳುತ್ತಾರೆ. ಅರ್ಧ ಕಟ್ಟಿದ ಬಳಿಕ ಮತ್ತೊಂದು ಬಿಲ್ ಎನ್ನುತ್ತಾರೆ. ಇಷ್ಟನ್ನು ಮಾಡುವ ವೇಳೆಗೆ ಅವರು ಸಾಲ ಮಾಡಿ ಕೊನೆಗೆ ಸರಿಯಾಗಿ ಬಿಲ್ ಸಹ ಸಿಗದೇ ಆ ಮನೆಯನ್ನೂ ಸಂಪೂರ್ಣವಾಗಿ ಕಟ್ಟದೇ ಅರ್ಧಂಬರ್ಧಕ್ಕೆ ನಿಲ್ಲಿಸುವ ವ್ಯವಸ್ಥೆ ನಾವು ನೋಡಿದ್ದೇವೆ. ಆದುದರಿಂದ, ಸರ್ಕಾರವೇ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಮಾಡಬೇಕು. ಹಿಂದೆ ತಾಲ್ಲೂಕು ಬೋರ್ಡ್ ಇದ್ದಾಗ ಸರ್ಕಾರವೇ ಮನೆಗಳನ್ನು ಕಟ್ಟಿಸಿಕೊಡುತ್ತಿತ್ತು. ಆ ವ್ಯವಸ್ಥೆಯನ್ನು ಪುನಃ ಜಾರಿಗೆ ತರಬೇಕು. ಮನೆ ಕಟ್ಟುವ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವೇ ಹೊರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಆಶ್ರಯ ಸಮಿತಿ ಕುರಿತು ಹೇಳುವುದಾದರೆ, ಒಬ್ಬ ಮಾನ್ಯ ಸದಸ್ಯರು ಮಾತನಾಡುವಾಗ, ಆಶ್ರಯ ಮನೆಗಳನ್ನು ಗ್ರಾಮಸಭೆಗಳ ಮೂಲಕ ಆಯ್ಕೆ ಮಾಡಬೇಕೆಂದು ಹೇಳಿದರು. ಗ್ರಾಮ ಪಂಚಾಯಿತಿಗೆ ಅಧಿಕಾರ ಕೊಡಲಾಗಿದೆ. ಆದರೂ ಗ್ರಾಮಸಭೆಗಳ ಮೂಲಕ ಆಶ್ರಯ ಮನೆಗಳು ಆಯ್ಕೆಯಾಗುತ್ತಿಲ್ಲ. ಆಶ್ರಯ ಮನೆಗಳನ್ನು ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರುಗಳೂ ಹಂಚಿಕೊಳ್ಳುವ ವ್ಯವಸ್ಥೆಯಾಗುತ್ತಿದೆ. ಅದನ್ನು ಕಟ್ಟುನಿಟ್ಟಾಗಿ

ಜಾರಿಗೆ ತರುವ ಮೂಲಕ ಮನೆ ಹೊಂದಿಲ್ಲದಿರುವವರಿಗೆ ಮನೆಗಳನ್ನು ಒದಗಿಸಿಕೊಡಬೇಕೆನ್ನುವ ಕಾನೂನನ್ನು ಜಾರಿಗೊಳಿಸಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಇನ್ನು Family Planning ಕುರಿತಂತೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಸ್ವಾಗತಾರ್ಹವಾದುದು. ಈ ದೇಶದಲ್ಲಿ Family Planning ಅವಶ್ಯಕತೆ ಇದೆ. ಸ್ವಾತಂತ್ರ್ಯ ಬಂದ ಬಳಿಕ ಈ ದೇಶದಲ್ಲಿ 35 ಇಲ್ಲವೇ 36 ಕೋಟಿಗಳಷ್ಟು ಜನಸಂಖ್ಯೆ ಇತ್ತೆಂದು ಹೇಳಿದರು. ಇವತ್ತು 100 ಕೋಟಿಗೂ ಮೀರಿ ಜನಸಂಖ್ಯೆ ಬೆಳೆದಿದೆಯೆಂದರೆ, ಕಳೆದ 60 ವರ್ಷಗಳಲ್ಲಿ ಎಷ್ಟು ವ್ಯತ್ಯಾಸವಾಗಿದೆ ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ Family Planning ಅನ್ನು ಕಡ್ಡಾಯವಾಗಿ ಜಾರಿಗೊಳಿಸುವ ಮೂಲಕ ಸರ್ಕಾರಿ ಸವಲತ್ತುಗಳನ್ನು ಒದಗಿಸಿಕೊಡಬೇಕಾದರೆ ಪ್ರತಿಯೊಬ್ಬರೂ Family Planning ಅನುಷ್ಠಾನಗೊಳಿಸಲೇಬೇಕು. ಅಂತಹವರಿಗೆ ಮಾತ್ರ ಸರ್ಕಾರದ ಸವಲತ್ತು ಸಿಗುತ್ತದೆಂಬುದನ್ನು ತಿಳಿಸಬೇಕು. ಸರ್ಕಾರ ಈ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಸರ್ಕಾರ ತರಬೇಕೆಂದು ಉದ್ದೇಶಿಸಿರುವ ಕಾನೂನಿಗೆ ಸ್ವಾಗತ ಬಯಸುತ್ತಿದ್ದೇನೆ.

ಶಾಸಕರಾಗಲು ಅರ್ಜಿ ಹಾಕಬೇಕಾದರೆ ಅಪ್ಲಿಕೇಷನ್‌ನಲ್ಲೇ ಇದನ್ನು ಹಾಕಬೇಕು.

ಡಾ: ಹೆಚ್.ಸಿ.ಮಹದೇವಪ್ಪ : ಇದು ಸ್ಪಷ್ಟವಾಗಬೇಕು, because family planning is a National Programme.

ಶ್ರೀ ಎಸ್. ಸುರೇಶ್‌ಕುಮಾರ್ : ಈ ಸದನದಲ್ಲಿ ಮೊದಲು Time Planning implement ಆಗಬೇಕು!

ಡಾ: ಹೆಚ್.ಸಿ.ಮಹದೇವಪ್ಪ : ಕುಟುಂಬ ಕಲ್ಯಾಣ ಯೋಜನೆಯ ಬಗ್ಗೆ ಹೇಳುವುದಾದರೆ, Family Planning is a national programme. Implementation and control of population is a national programme. It is the duty of the State Government to see to it that the national programme is strictly implemented in controlling the exploding population.

ಶ್ರೀ ಹೆಚ್.ಸಿ.ಬಾಲಕೃಷ್ಣ : ನೀವು ಇಂಗ್ಲೀಷ್‌ನಲ್ಲಿ ಹೇಳುತ್ತಿದ್ದೀರಿ, ನಾವು ಕನ್ನಡದಲ್ಲಿ ಹೇಳಿದೆವು.

ಡಾ: ಹೆಚ್.ಸಿ. ಮಹದೇವಪ್ಪ : ಹಾಗಲ್ಲಾ, ನೀವು ಸವಲತ್ತು cut ಮಾಡಿಬಿಡೋಣ ಎಂದು ಹೇಳಿಸಿರಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಹೌದು. ಇಲ್ಲದಿದ್ದರೆ, ಇದನ್ನು ಹೇಗೆ Control ಮಾಡುತ್ತೀರಿ?

ಡಾ: ಹೆಚ್.ಸಿ. ಮಹದೇವಪ್ಪ : ನಾನು ಬೇರೆ ಏನನ್ನೂ ಹೇಳುತ್ತಿಲ್ಲ. ಸುಮ್ಮನೆ ತಪ್ಪು ತಪ್ಪು ಮಾತನಾಡಬಾರದು. ನಾನು ಏಕೆ ಹೇಳುತ್ತಿದ್ದೇನೆಂದರೆ, one baby norm ನ್ನು ಮಾಡಲು ಸಾಧ್ಯವಿದೆ. ಯಾವಾಗ ಅಂದರೆ, ಒಂದು ಮಗು ಹುಟ್ಟಿದರೆ ಅದು hundred percent ಬದುಕಬೇಕು. ಅದಕ್ಕೆ ಪೂರಕವಾಗಿರುವ ವಾತಾವರಣವನ್ನು nutrition, immunization, education ಅದರ programme ನ್ನು ಇವತ್ತು ಕೊಟ್ಟು ಒಂದು ಹುಟ್ಟಿದ ಮಗು ಕಡ್ಡಾಯವಾಗಿ ಇವತ್ತು ಬದುಕಿದರೆ ನೀವು ಇನ್ನು ಏನೂ ಮಾತನಾಡಬೇಡಿ. This is the intention of the family planning. Population control ಮಾಡುವುದು ಹೇಗೆಂದರೆ, ಮಾನ್ಯ ಮುಖ್ಯಮಂತ್ರಿಗಳು ಆಸಕ್ತಿಯಿಂದ ಹೇಳಿದ್ದಕ್ಕೆ ನಾನು ಮಾತನಾಡುತ್ತಿದ್ದೇನೆ. Free suggestions ಬೇಡ ಎಂದರೆ ಕುಳಿತುಕೊಳ್ಳುತ್ತೇನೆ. I don't mix politics.

ಶ್ರೀ ಹೆಚ್.ಸಿ. ಬಾಲಕೃಷ್ಣ : ಹೇಳಿಯಾಯಿತಲ್ಲಾ ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ : ಒಂದು ಕುಟುಂಬಕ್ಕೆ ಎರಡು ಮಕ್ಕಳು ಎನ್ನುವುದು National Programme. ಜನರು ಯಾವ ರೀತಿ ಅರ್ಥ ಮಾಡಿಕೊಂಡಿದ್ದಾರೆಂದರೆ ಎರಡು ಮಕ್ಕಳವರೆಗೂ ಕಷ್ಟಬೀಳಬೇಕು, ಎರಡು ಮಕ್ಕಳು ಮೀರಿದ ಮೇಲೆ ಎಷ್ಟು ಬೇಕಾದರೂ ಆಗಬಹುದು ಎಂದು!

ಶ್ರೀ ಹೆಚ್.ಸಿ.ಬಾಲಕೃಷ್ಣ : ಕಾನೂನನ್ನು ಮಾಡಬಾರದು ಎಂದು ಮಾನ್ಯ ಮಹದೇವಪ್ಪನವರು ಹೇಳಿದ್ದಾರೆ. ಈ ದೇಶದಲ್ಲಿ ಕಾನೂನನ್ನು ಮಾಡದಿದ್ದರೆ ಯಾವುದನ್ನೂ implement ಮಾಡುವುದಕ್ಕೆ ಸಾದ್ಯವೇ ಇಲ್ಲ. ಇದು ಡೆಮಾಕ್ರಟಿಕ್ ದೇಶ. ಚೀನಾಕ್ಕೂ ನಮಗೂ ವ್ಯತ್ಯಾಸವೇನು? ನಮ್ಮ ದೇಶದಲ್ಲಿ ಆ ಒಂದು ಕಮಿಟ್‌ಮೆಂಟ್ ಇಲ್ಲ. ನಾವು ಹೀಗೇ ಬದುಕಬೇಕು, ಹೀಗೇ ಇರಬೇಕು ಎಂದು ಕಮಿಟ್‌ಮೆಂಟ್ ಇಲ್ಲ. ಅವನಿಗೆ ಇಷ್ಟ ಬಂದಂತೆ ಅವನು ಇವನಿಗೆ ಇಷ್ಟ ಬಂದಂತೆ ಇವನು ಬದುಕುತ್ತಾನೆ. ಆದರೆ, ಆ ಕೆಲಸ ಆಗಬೇಕು. ನಾನು ಇಲ್ಲಿ ಯಾರನ್ನೋ ಉದ್ದೇಶಿಸಿ, ಯಾರಿಗೋ

ತೊಂದರೆಯಾಗತಕ್ಕ ರೀತಿಯಲ್ಲಿ ಹೇಳತಕ್ಕದ್ದಲ್ಲ. ಈ ದೇಶದ ಹಿತದೃಷ್ಟಿಯಿಂದ ಎರಡು ಮಕ್ಕಳು, ಮೂರು ಮಕ್ಕಳನ್ನು ಮಾಡುತ್ತೀರೊ ಮಾಡಿ. ಆದರೆ, ಅದನ್ನು ಕಡ್ಡಾಯ ಮಾಡಿ.

ಶ್ರೀ ಸಿ.ಎಸ್.ಪುಟ್ಟೇಗೌಡ : ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಯಾವುದೇ ಸರ್ಕಾರ ಹೇಳದಿದ್ದರೂ ಕೂಡ ಒಂದೇ ಮಕ್ಕಳಿಗೆ Family Planning ಮಾಡಿಕೊಳ್ಳುತ್ತಿದ್ದಾರೆ. ಅಂಥವರಿಗೆ ಸರ್ಕಾರ ಕೊಡುವ ಗೌರವವೇನು, ಸವಲತ್ತೇನು ಎಂಬುದನ್ನು ಮೊದಲು ಹೇಳಿ? ಅವರು ವಾಲೆಂಟಿಯರ್ ಆಗಿ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಅವರಿಗೆ ಯಾವುದೇ ಸವಲತ್ತನ್ನು ನೀವು ಕೊಡುತ್ತಿಲ್ಲ. ಆದ್ದರಿಂದ ಅಂಥವರಿಗೆ ಸವಲತ್ತನ್ನು ಘೋಷಣೆ ಮಾಡಿ. ಅದರಲ್ಲಿ ತಪ್ಪೇನಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಇವತ್ತು ಶೌಚಾಲಯದ ವಿಚಾರವನ್ನು ಚರ್ಚೆ ಮಾಡಿದ್ದಾರೆ. ಇವತ್ತು ಆರ್.ಡಿ.ಪಿ.ಆರ್. ಸಚಿವರೂ ಸಹ ಹೆಣ್ಣು ಮಗಳು. ಗ್ರಾಮೀಣ ಪ್ರದೇಶದಲ್ಲಿ ವಾಸಮಾಡತಕ್ಕ ಸುಮಾರು 70 ಪರ್ಸೆಂಟ್ ಹೆಣ್ಣುಮಕ್ಕಳು ಇವತ್ತು ಬಯಲು ಶೌಚಾಲಯವನ್ನು ಆಶ್ರಯಿಸುತ್ತಿರುವ ವಾತಾವರಣವನ್ನು ನಾವು ನೋಡುತ್ತಿದ್ದೇವೆ. ಅದೂ ಬೆಳಿಗ್ಗೆ ಸಮಯದಲ್ಲಿ ಹೋಗಲು ಆಗುವುದಿಲ್ಲವೆಂದು ರಾತ್ರಿ ಕತ್ತಲಾದ ಮೇಲೆ ಬಯಲು ಶೌಚಾಲಯವನ್ನು ಉಪಯೋಗಿಸುವ ಸ್ಥಿತಿಯನ್ನು ನಿರ್ಮಾಣ ಮಾಡಿದ್ದೇವೆ. ಕೇಂದ್ರ ಸರ್ಕಾರ ಎರಡೂವರೆ ಸಾವಿರ ಹಣವನ್ನು ಕೊಡುತ್ತಿದೆ. ಸಂಪೂರ್ಣವಾಗಿ ಶೌಚಾಲಯವನ್ನು ಕಟ್ಟಿಸುವ ಕಡ್ಡಾಯ ಕಾನೂನನ್ನು ಈ ಸರ್ಕಾರ ಜಾರಿಗೆ ತರಬೇಕು. ಸರ್ಕಾರದ ಯಾವುದೇ ಸವಲತ್ತನ್ನು ಪಡೆಯಬೇಕಾದರೆ, ಬಿ.ಪಿ.ಎಲ್. ಕಾರ್ಡ್ ಪಡೆಯಬೇಕಾದರೆ ಶೌಚಾಲಯ ಇರುವುದನ್ನು ಕಡ್ಡಾಯ ಮಾಡಬೇಕು. ಕೇಂದ್ರದವರು ಎರಡೂವರೆ ಸಾವಿರ ಕೊಡುತ್ತಾರೆ, ನೀವು ಎರಡೂವರೆ ಸಾವಿರ ಕೊಡಿ. ಐದು ಸಾವಿರದಲ್ಲಿ ಅವರೂ ಒಂದು ಎರಡು ಸಾವಿರ ಹಾಕಿಕೊಂಡು ಒಂದು ಒಳ್ಳೆಯ ಶೌಚಾಲಯವನ್ನು ನಿರ್ಮಾಣ ಮಾಡಬಹುದು. NREGS ದಲ್ಲಿ ಅವರು ಅದರ ಪ್ರಯೋಜನವನ್ನು ಪಡೆಯಬಹುದು. ಅದನ್ನು ಮಾಡುವುದನ್ನು ಕಡ್ಡಾಯ ಮಾಡಬೇಕು. ಚುನಾವಣೆಗೆ ನಿಲ್ಲಬೇಕಾದರೆ, ಬಿ.ಪಿ.ಎಲ್. ಕಾರ್ಡ್ ಕೊಡಬೇಕಾದರೆ, ಅವರಿಗೆ ಬೇರೆ ಬೇರೆ ಸರ್ಕಾರಿ ಸೌಲಭ್ಯಗಳು ಸಿಗಬೇಕಾದರೆ, ಬ್ಯಾಂಕ್ ಲೋನ್ ಸಿಗಬೇಕಾದರೆ, ಶೌಚಾಲಯ

ಮಾಡುವುದನ್ನು ಕಡ್ಡಾಯ ಮಾಡಬೇಕು. ಶೌಚಾಲಯ ಇದೆಯೋ ಇಲ್ಲವೊ ಎಂಬುದನ್ನು ತಿಳಿದುಕೊಂಡು ಸರ್ಕಾರದ ಬಾಕಿ ಸೌಲಭ್ಯವನ್ನು ಕೊಡುವ ಕೆಲಸ ಸರ್ಕಾರ ಮಾಡಬೇಕು.

ಶಿಕ್ಷಣ, ಸಾಕ್ಷರತೆಯ ಪ್ರಮಾಣ ಕಡಿಮೆ ಇದೆಯೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಅದರಲ್ಲೂ ಡಿಗ್ರಿಗೆ ಹೋಗತಕ್ಕ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿಯೆಂದು ಹೇಳಿದರು. ಈ ಹಿಂದೆ ಕುಮಾರಸ್ವಾಮಿ ಯವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಸುಮಾರು 50 ವರ್ಷಗಳಲ್ಲಿ ಏನು ಸರ್ಕಾರಿ ಹೈಸ್ಕೂಲ್‌ಗಳನ್ನು, ಕಾಲೇಜುಗಳನ್ನು ಪ್ರಾರಂಭ ಮಾಡಿದ್ದರೋ ಅಷ್ಟು ಕಾಲೇಜು ಮತ್ತು ಹೈಸ್ಕೂಲ್‌ಗಳನ್ನು 20 ತಿಂಗಳಿನಲ್ಲಿ ಪ್ರಾರಂಭ ಮಾಡಿದರು. ಅವರ ಉದ್ದೇಶ, ಹಳ್ಳಿಯಲ್ಲಿರುವ ಮಕ್ಕಳಿಗೂ education ಸಿಗಬೇಕು, ಅವರು ಓದಲು ಬೆಂಗಳೂರಿಗೆ ಬರಬಾರದು, ತಾಲ್ಲೂಕು ಕೇಂದ್ರದಲ್ಲೇ ವಿದ್ಯಾಭ್ಯಾಸವನ್ನು ಪಡೆಯಬೇಕೆಂದು. ಶಿಕ್ಷಣಕ್ಕೆ ಮೂಲಭೂತ ಸೌಲಭ್ಯವನ್ನು ಕೊಡುವ ಮೂಲಕ ಅದಕ್ಕೆ ಶಕ್ತಿಯನ್ನು ಹೆಚ್ಚು ಮಾಡಬೇಕು. ಈಗ ಪರಿಸ್ಥಿತಿ ಏನಾಗಿದೆಯೆಂದರೆ, ಒಬ್ಬ ವಿಲೇಜ್ ಅಕೌಂಟೆಂಟ್, ರೆವಿನ್ಯೂ ಇನ್ಸ್‌ಪೆಕ್ಟರ್, ಅಗ್ರಿಕಲ್ಚರ್ ಅಸಿಸ್ಟೆಂಟ್, ಡಾಕ್ಟರ್, ಟೀಚರ್, ಅಲ್ಲಿರುವ ಟೀಚರ್‌ರವರ ಮಗ ಬೆಂಗಳೂರಿನಲ್ಲಿ ಓದುತ್ತಾನೆ, ಆ ಟೀಚರ್ ಅಲ್ಲಿ ವಾಸ ಮಾಡತಕ್ಕದ್ದು. ಅವರು ಶಾಲೆಗೆ 10 ಗಂಟೆಗೆ ಹೋಗಬೇಕಾಗಿದ್ದರೆ 11 ಗಂಟೆಗೆ ಹೋಗುತ್ತಾರೆ. ಬೆಂಗಳೂರಿನಿಂದ, ಜಿಲ್ಲಾ ಕೇಂದ್ರದಿಂದ ಅಥವಾ ತಾಲ್ಲೂಕು ಕೇಂದ್ರಗಳಿಂದ ಅವರು up and down ಮಾಡುತ್ತಾರೆ. 5 ಗಂಟೆಗೆ ಬಿಡಬೇಕಾದ ಶಾಲೆಯನ್ನು ಬಸ್ಸು ಬರುತ್ತದೆಂದು 4 ಗಂಟೆಗೆ ಹೊರಡಲು ready ಆಗಿರುತ್ತಾರೆ. ಆದ್ದರಿಂದ ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಅವರಿಗೆ ಕಡ್ಡಾಯವಾಗಿ quarters ನ್ನು ಕಟ್ಟುವುದರ ಮೂಲಕ ಶಿಕ್ಷಕರು ಅಲ್ಲೇ ವಾಸ ಮಾಡುವಂತೆ ಮಾಡಬೇಕು. ನೀವು ಗ್ರಾಮೀಣ ಅಭಿವೃದ್ಧಿ ಮಾಡಬೇಕಾದರೆ, ಅಲ್ಲಿನ ಜನರಿಗೆ ವಿಶ್ವಾಸವನ್ನು ಮೂಡಿಸಬೇಕಾದರೆ ಅವರನ್ನು ಕಡ್ಡಾಯವಾಗಿ ಅಲ್ಲೇ ವಾಸ ಮಾಡುವಂತೆ ಮಾಡಬೇಕು. ಒಬ್ಬರು ವಿಲೇಜ್ ಅಕೌಂಟೆಂಟ್ ತಾಲ್ಲೂಕು ಕೇಂದ್ರದಲ್ಲಿ ವಾಸ ಮಾಡುತ್ತಾನೆ. ಒಬ್ಬರು ತಹಶೀಲ್ದಾರರು ಜಿಲ್ಲಾ ಕೇಂದ್ರದಲ್ಲಿ ವಾಸ ಮಾಡುತ್ತಾರೆ. ದಯಮಾಡಿ ಅವರು ಅಲ್ಲಲ್ಲೇ ವಾಸ ಮಾಡುವ ರೀತಿ ಮಾಡಬೇಕು. ಇದರ ಬಗ್ಗೆ ಈಗಾಗಲೇ ಕಾನೂನು ಇದೆ.

ಆದರೆ, ಅದನ್ನು ಜಾರಿಗೆ ತರುತ್ತಿಲ್ಲ. ಅದನ್ನು ಜಾರಿಗೆ ತರುವ ಕೆಲಸವನ್ನು ಮಾಡಬೇಕು. ಅವರಿಗೆ ಅಲ್ಲಿರಲು ಮೂಲಭೂತ ಸೌಕರ್ಯವನ್ನು ಕೊಡಬೇಕು. ಒಬ್ಬ ಟೀಚರ್, ಡಾಕ್ಟರ್, ವಿಲೇಜ್ ಅಕೌಂಟೆಂಟ್ ಅಲ್ಲೇ ವಾಸ ಮಾಡುತ್ತಾರೆಂದರೆ ಬಹಳಷ್ಟು ಜನರು ಅಲ್ಲೇ ವಾಸ ಮಾಡುತ್ತಾರೆ. ಇಲ್ಲದಿದ್ದರೆ ಎಲ್ಲರೂ ನಗರ ಪ್ರದೇಶಕ್ಕೆ ಹುಡುಕಿಕೊಂಡು ಬರತಕ್ಕ ವಾತಾವರಣ ನಿರ್ಮಾಣವಾಗುತ್ತದೆ. ಆದ್ದರಿಂದ ಆ ವ್ಯವಸ್ಥೆಯನ್ನು ಕಡ್ಡಾಯ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಉಚಿತ ಶಿಕ್ಷಣ. ಇವತ್ತು ಅನೇಕ ಜನರು educationನ್ನು ಅರ್ಧದಲ್ಲೇ ನಿಲ್ಲಿಸುವ ವಾತಾವರಣ ಇದೆ. ಉಚಿತ ಶಿಕ್ಷಣವೆಂದರೆ 12 ನೇ ತರಗತಿಯವರೆಗೆ ಕಡ್ಡಾಯವಾಗಿ ಓದಲೇ ಬೇಕು. ಅದಕ್ಕೆ ಸರ್ಕಾರ ಉಚಿತವಾದ ಶಿಕ್ಷಣದ ವ್ಯವಸ್ಥೆ ಮಾಡುವ ದಿಕ್ಕಿನಲ್ಲಿ ಯೋಜನೆ ಮಾಡಿ ಕಡ್ಡಾಯ ಮಾಡಬೇಕು. ಅದರ ಬಗ್ಗೆ ಚರ್ಚೆಗಳು ನಡೆಯುತ್ತಿದೆ. ಆದರೆ, ಅದು ಎಲ್ಲೂ ಕಡ್ಡಾಯವಾಗಿ ಆಗಿಲ್ಲ. ಪ್ರತಿಯೊಬ್ಬರಿಗೂ ಎಲ್ಲಾ ಸೌಲಭ್ಯವನ್ನು ಕೊಟ್ಟು ಆ ಮಕ್ಕಳು 12ನೇ ತರಗತಿಯವರೆಗೆ ಓದುವ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕು.

ರಸ್ತೆಯ ವಿಚಾರವಾಗಿ ಹೇಳುವುದಾದರೆ, ಪಿ.ಡಬ್ಲ್ಯೂ.ಡಿ. ರಸ್ತೆ. ಮುಖ್ಯ ರಸ್ತೆಗಳು. ಕೆ.ಆರ್.ಡಿ.ಸಿ.ಎಲ್. ಎಂದು ಹೆಡ್‌ನ್ನು open ಮಾಡಿ ಅದರ ಅಡಿಯಲ್ಲಿ ಡೆವಲಪ್ ಮಾಡುತ್ತಿದ್ದಾರೆ. ಆದರೆ, ರೂರಲ್‌ರೋಡ್ ಡೆವಲಪ್‌ಮೆಂಟ್‌ನಲ್ಲಿ ಅದಕ್ಕೇ ಆದಂಥ ಪ್ರತ್ಯೇಕವಾದ Rural Road Development Corporation ಎಂದು ವಿಭಾಗವನ್ನು ತೆರೆಯಬೇಕು. ಅದರ ಅಡಿಯಲ್ಲಿ ಹೆಚ್ಚು ಹಣವನ್ನು ಕೊಟ್ಟು ಆ ಗ್ರಾಮೀಣ ಪ್ರದೇಶಗಳ ರಸ್ತೆಗಳ ಅಭಿವೃದ್ಧಿಪಡಿಸಬೇಕು. ಜನರು ಓಡಾಡಲು ಸರಿಯಾದ ರಸ್ತೆ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಕೊಡದಿದ್ದರೆ ನಾವು ಗ್ರಾಮೀಣ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ನಮಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ನಾವು ಏನಾದರೂ ಟೀಕೆ ಮಾಡಿದರೆ ಟೀಕೆ ಮಾಡಿದರು ಇವರು ಎಂದು ಹೇಳುತ್ತಾರೆ. ಚರ್ಚೆ ಮಾಡಿದರೆ ನೀವು ಬೇಡ ಎಂದು ಬೆಲ್ ತಟ್ಟಿ ಐದು ನಿಮಿಷ, ಹತ್ತು ನಿಮಿಷವಾಯಿತು ಮುಗಿಸಿಯೆಂದು ಹೇಳುತ್ತೀರಿ. ಆದ್ದರಿಂದ ದಯಮಾಡಿ ಈ ಚರ್ಚೆಗೆ ಹೆಚ್ಚು ಅವಕಾಶ ಮಾಡಿಕೊಡಬೇಕು. ನೀವು

ಉತ್ತರ ಕೊಡುವ ಅವಶ್ಯಕತೆ ಇಲ್ಲ. ಅವರು ಏನು ಮಾಡಬೇಕೆಂದು ಹೇಳಿಬಿಟ್ಟಿದ್ದಾರೆ. ಆದ್ದರಿಂದ ಅವರು ಉತ್ತರ ಕೊಡುವ ಅವಶ್ಯಕತೆಯೇನು ಇಲ್ಲ. ಸೋಮವಾರ ಬೇಕಾದರೆ ಅವರ ಅನಿಸಿಕೆಯನ್ನು ವ್ಯಕ್ತಪಡಿಸಬಹುದು. ಆದರೆ, ಎಲ್ಲರಿಗೂ ಸಂಪೂರ್ಣವಾಗಿ ಚರ್ಚೆಗೆ ಅವಕಾಶ ಮಾಡಿಕೊಡಿ. ಒಂದೂವರೆ ವರ್ಷವಾದ ನಂತರ ಮಾನ್ಯ ಮುಖ್ಯಮಂತ್ರಿಯವರು ಗ್ರಾಮೀಣ ಜನರ ಬಗ್ಗೆ, ಕೃಷಿಯ ಬಗ್ಗೆ ನಿಜವಾಗಿಯೂ ಯೋಚನೆ ಮಾಡಿರುವುದಕ್ಕೆ ಅವರಿಗೆ ಧನ್ಯವಾದವನ್ನು ಹೇಳಿ, ಇದನ್ನು ಅನುಷ್ಠಾನ ಮಾಡಿದರೆ ಮಾತ್ರ ಅವರಿಗೆ ಒಳ್ಳೆಯ ಹೆಸರು ಬರುತ್ತದೆ. ಇಲ್ಲದಿದ್ದರೆ ಎಲ್ಲಾ ಟೀಕೆಗೆ ಅವರೇ ಗುರಿಯಾಗುತ್ತಾರೆ. ನಾವೇನು ಟೀಕೆ ಮಾಡಿಲ್ಲ. ನಮ್ಮ ಸಲಹೆ ಸೂಚನೆಗಳನ್ನು ಕೊಟ್ಟಿದ್ದೇವೆ. ಅವರು ಬಜೆಟ್‌ನಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ಇದನ್ನು implement ಮಾಡುತ್ತೇನೆಂದು ಹೇಳಿದ್ದಾರೆ. ಅದನ್ನು ಬಜೆಟ್‌ನಲ್ಲಿ ಹೇಳಿದ್ದೀರಿ. ಆದ್ದರಿಂದ ಇದರ ಅವಶ್ಯಕತೆ ಇರಲಿಲ್ಲ. ಬಜೆಟ್‌ನಲ್ಲೇ ಕೃಷಿ ಮಿಷನ್‌ನನ್ನು ಮಾಡುತ್ತೇವೆ, Horticulture Mission ಮಾಡಿದ್ದೇವೆ, ಅಲ್ಲಿ, ಇಲ್ಲಿ ದುಡ್ಡನ್ನು ತರುತ್ತೇವೆಂದು ಹೇಳಿದ್ದೀರಿ. ಹಾಗಾದರೆ ಇದರ ಅವಶ್ಯಕತೆಯೇನು? ವಿಶೇಷವಾದಂಥ ಅನುದಾನವನ್ನು ಈ ಎರಡೂ ಇಲಾಖೆಗೆ ಘೋಷಣೆ ಮಾಡುತ್ತೀರಿ ಎಂದು ನಾವಾದರೂ ಭಾವಿಸಿದ್ದೇವೆ. ನಾಳೆಯಿಂದ ಆ ರೈತ ಖುಷಿ ಖುಷಿಯಾಗಿ ಓಡಾಡುತ್ತಾನೆ ಎಂಬ ವಾತಾವರಣ ನಿರ್ಮಾಣ ಮಾಡುತ್ತಾರೆ ಎಂದು ನಾನು ಆಶಿಸುತ್ತಾ ಈ ಒಂದು ಕೆಲಸ ಬರೀ ಸದನದಲ್ಲಿ ಚರ್ಚೆಗೆ ಮಾತ್ರ ಸೀಮಿತವಾಗಿರದೆ ಇದರಿಂದ ಫಲ ಕೂಡ ಸಿಗಬೇಕೆಂದು ತಮ್ಮ ಮೂಲಕ ಅವರಿಗೆ ಒತ್ತಾಯ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದವನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(12-30 PM)

ಅಧ್ಯಕ್ಷರು : ಮಾನ್ಯ ಪ್ರತಿಪಕ್ಷದ ನಾಯಕರು, ದಯವಿಟ್ಟು ತಮ್ಮ ಭಾಷಣ ಪ್ರಾರಂಭ ಮಾಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ನಾಡಗೌಡರವರೆ ಮತ್ತು ಮಾನ್ಯ ಮಹೇಶ್ ರವರೆ, ಮಾನ್ಯ ಪ್ರತಿ ಪಕ್ಷದ ನಾಯಕರು ಎದ್ದು ನಿಂತಿದ್ದಾರೆ. ದಯವಿಟ್ಟು one minute ತಾಳಿ. ಅವರೇನು ಮಾತನಾಡುತ್ತಾರೋ ಕೇಳೋಣ.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ಸಾ.ರಾ.ಮಹೇಶ್‌ರವರು ಸದನದ ಬಾವಿಗೆ ಬಂದರು)

ಅಧ್ಯಕ್ಷರು : ಮಾನ್ಯ ಮಹೇಶ್‌ರವರೆ, ಈ ರೀತಿ ಮಾಡುವುದು ಸರಿಯಲ್ಲ. ಪ್ರತಿ ಪಕ್ಷದ ನಾಯಕರು ಎದ್ದು ನಿಂತು ಮಾತನಾಡುತ್ತಿದ್ದಾರೆ.

(ಮಾನ್ಯ ಸದಸ್ಯರಾದ ಶ್ರೀ ಸಾ.ರಾ.ಮಹೇಶ್‌ರವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು : ಆಯಿತು, ತಾವು ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ. ಅದರ ಬಗ್ಗೆ ಮಾತನಾಡೋಣ. ಶಾಸಕರು ಈ ರೀತಿ behave ಮಾಡುವುದು ಸರಿಯಲ್ಲ. ಮಾತನಾಡುವುದಕ್ಕಾಗಿ ಅವಕಾಶ ಕೇಳಲು ಈ ರೀತಿ ಸದನದ ಬಾವಿಗೆ ಬಂದು ಒತ್ತಡ ತರುವುದು ಸರಿಯಲ್ಲ. ಈ ರೀತಿ ಮಾತನಾಡಬಾರದು. ದಯವಿಟ್ಟು ತಾವು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಾ.ರಾ.ಮಹೇಶ್‌ರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂದಿರುಗಿಸಿದರು)

ಅಧ್ಯಕ್ಷರು : ಸದನವನ್ನು ಏನೆಂದು ತಿಳಿದುಕೊಂಡಿದ್ದೀರಿ? ಮಾತನಾಡಲಿಕ್ಕೆ ಅವಕಾಶ ಕೊಡಲು ನಿಮ್ಮ ಪಕ್ಷದವರನ್ನು ಕೇಳಿ. ಈ ರೀತಿ ಒತ್ತಡ ತರುವುದು ಸರಿಯಲ್ಲ. ಸದನಕ್ಕೆ ಒಂದು ಗೌರವವಿದೆ. ಯಾರು ಎದ್ದು ಮಾತನಾಡಬೇಕು? ಯಾವ ಪಕ್ಷದವರು ಮಾತನಾಡಬೇಕು? ಎಷ್ಟು ಹೊತ್ತು ಮಾತನಾಡಬೇಕು? ಎಂದು ನಿಗದಿ ಮಾಡಿ ಎಲ್ಲಾ ಪಕ್ಷದವರಿಗೂ ಅವಕಾಶ ಕೊಟ್ಟಿರುತ್ತೇವೆ. ಆದ್ದರಿಂದ ನೀವು ಈ ರೀತಿ behave ಮಾಡುವುದು ಸರಿಯಲ್ಲ. ಇದು ಒಳ್ಳೆಯದಲ್ಲ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಗಳು ಇವತ್ತು ಬಹಳ

ಪ್ರಮುಖವಾದಂತಹ ಎರಡು ವಿಚಾರಗಳನ್ನು ಸದನದಲ್ಲಿ ಚರ್ಚೆ ಮಾಡಲಿಕ್ಕೆ ಈ ಮುಂದುವರೆದ ಅಧಿವೇಶನದಲ್ಲಿ ತೆಗೆದುಕೊಂಡು ಬಂದಿದ್ದಾರೆ. ಈ ಬಗ್ಗೆಯೇ ಮೂರು ದಿವಸ ಚರ್ಚೆ ಮಾಡಬೇಕೆಂದು ಸರ್ಕಾರ ಹೇಳಿದೆ. ಇಲ್ಲಿ 224 ಜನ ಸದಸ್ಯರಿದ್ದಾರೆ. ಆ ಕಡೆಗೂ ಇದ್ದಾರೆ, ಈ ಕಡೆಗೂ ಇದ್ದಾರೆ. ಎಲ್ಲರೂ ಮಾತನಾಡಬೇಕೆಂಬ ಆಸಕ್ತಿ ತೋರಿಸಿದ್ದಾರೆ. ಕೇವಲ ಅವರ ಕ್ಷೇತ್ರಕ್ಕೆ ಸೀಮಿತವಾಗದೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂತೆ ಮಾತನಾಡಬೇಕೆಂಬುದು ಬಹಳ ಶಾಸಕರ ಬಯಕೆಯಾಗಿದೆ. ತಾವು ಕರಾರುವಕ್ಕಾಗಿ, 'ಈಗಲೇ ಮುಗಿಸಿಬಿಡಿ, ಬೇರೆ ಇನ್ಯಾರಿಗೂ ಅವಕಾಶ ಕೊಡುವುದಿಲ್ಲ' ಎಂದಾಗ ಅವರಿಗೂ ಕೂಡ 'ತಮಗೆ ಮಾತನಾಡಲು ಅವಕಾಶ ಸಿಕ್ಕಲಿಲ್ಲವಲ್ಲ' ಎಂದು ಬೇಸರವಾಗುತ್ತದೆ. ದಯಮಾಡಿ ತಮ್ಮಲ್ಲಿ ಮನವಿ ಮಾಡುತ್ತೇನೆ. ತಾವು ದಯವಿಟ್ಟು ಇಂದು ಮಧ್ಯಾಹ್ನ 2 ಗಂಟೆಯವರೆಗೂ ಕೂಡ ಎಲ್ಲಾ ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಸ್ವಲ್ಪ ಸ್ವಲ್ಪ ಸಮಯ ಕೊಡಿ. ಎಲ್ಲರೂ ಅಲ್ಲಿಯವರೆಗೆ ಮಾತನಾಡಲಿ. ನಾನು 3 ಗಂಟೆ ಮೇಲೆ ಮಾತನಾಡುತ್ತೇನೆ. ದಯವಿಟ್ಟು ತಾವು ತಾಳ್ಮೆಯಿಂದ ಆಲಿಸಬೇಕು. ಸರ್ಕಾರ ಕೂಡ ಸ್ವಲ್ಪ ವಿಶಾಲ ಮನೋಭಾವ ತೋರಿಸಬೇಕು. ಸರ್ಕಾರವೇ ಈ ವಿಷಯವನ್ನು ಸದನದಲ್ಲಿ ಮಂಡಿಸಿ, ಇದರ ಬಗ್ಗೆ ವಿಸ್ತೃತವಾಗಿ ಚರ್ಚೆಯಾಗಬೇಕು, ಎಲ್ಲರ ಸಲಹೆಗಳೂ ನಮಗೆ ಬೇಕು, ಎಲ್ಲರ ಸಲಹೆಗಳನ್ನು ಕ್ರೋಢೀಕರಣ ಮಾಡಿ, ಮುಂದೆ ನಾವು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಒತ್ತು ಕೊಡುತ್ತೇವೆ ಎಂದು ಹೇಳಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅವರ quality of life ಅನ್ನು ಬದಲಾವಣೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡು ಈ ವಿಷಯವನ್ನು ಸರ್ಕಾರ ಚರ್ಚೆಗೆ ತಂದಿದೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲೂ ಕೂಡ ಮನವಿ ಮಾಡಿಕೊಳ್ಳುತ್ತೇನೆ. ನಾನು ಅವರಿಗೆ ಸಲಹೆ ಏನು ಕೊಡುತ್ತೇನೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಈಗಲೇ ಉತ್ತರ ಕೊಡುತ್ತೇನೆಂದು ಹಠ ಮಾಡುವುದು ಬೇಡ. ಈಗೇನು ನಾವು demands ಮೇಲೆ ಚರ್ಚೆ ಮಾಡಿಲ್ಲ. ಇವತ್ತೇ Appropriation Bill pass ಆಗಬೇಕೆಂಬ ವಿಚಾರ ಸಹ ಸದನದ ಮುಂದಿಲ್ಲ. ಈಗ ಅಂತಹ urgency ಏನೂ ಇಲ್ಲ. ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಲಿ. ಮಾನ್ಯ ಅಧ್ಯಕ್ಷರೆ, ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ಸೋಮವಾರ

ಉತ್ತರ ಕೊಡಲಿಕ್ಕೆ ಹೇಳಿ. ಮಾನ್ಯ ಮುಖ್ಯಮಂತ್ರಿಗಳು ಸೋಮವಾರ ಉತ್ತರ ಕೊಡಲಿ. ಈಗ ಇನ್ನೊಂದಷ್ಟು ಜನ ಚರ್ಚೆಯಲ್ಲಿ participate ಮಾಡಲಿ. ಆಮೇಲೆ, ನಾನು ಕೊನೆಯಲ್ಲಿ ಮಾತನಾಡುತ್ತೇನೆ. ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ತಾವು ಎಷ್ಟು ಗಂಟೆಗೆ ಮಾತನಾಡುತ್ತೀರಿ?

ಶ್ರೀ ಸಿದ್ದರಾಮಯ್ಯ : ನೀವು ಯಾವಾಗ ಹೇಳುತ್ತೀರೋ, ಆಗ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಎಲ್ಲರೂ time limitation ಹಾಕಿಕೊಂಡು ಮಾತನಾಡ ಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲು ಮಾತನಾಡಬೇಕಾಗಿತ್ತು ಎಂದು ಹೇಳಿದರು. ನಾನೇ ಮೊದಲು ಏಕೆ ಮಾತನಾಡಲಿಕ್ಕೆ ನಿಂತಿಲ್ಲ ಎಂದರೆ, ಈ ಕಡೆಯ ಮತ್ತು ಆ ಕಡೆಯ ಎಲ್ಲಾ ಮಾನ್ಯ ಸದಸ್ಯರೂ ಮೊದಲು ಮಾತನಾಡಲಿ, ಮೊದಲು ಅವರಿಗೆ ಅವಕಾಶ ಸಿಗಲಿ. ಅವರೆಲ್ಲರಿಗೂ ಅವಕಾಶ ಸಿಕ್ಕಿದ ಮೇಲೆ ನಾನು ನಂತರ ಮಾತನಾಡೋಣ ಎನ್ನುವಂತಹ ಕಾರಣಕ್ಕಾಗಿ ನಾನು ಮೊದಲು ಮಾತನಾಡಲಿಲ್ಲ. ಈ ತರಹ ಮುಂದುವರೆದ ಅಧಿವೇಶನ ಕರೆದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ನಿರ್ದಿಷ್ಟ ದಿನಗಳನ್ನು ನಿಗದಿ ಮಾಡಿ ಚರ್ಚೆ ಮಾಡುವಂಥದ್ದು ಹಿಂದೆಂದೂ ನಡೆದಿರಲಿಲ್ಲ. Governor's Address ಮೇಲಿನ ಚರ್ಚೆ ಅಥವಾ ಬಜೆಟ್ ಮೇಲಿನ ಚರ್ಚೆಯಾದಲ್ಲಿ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭಿಸುವುದು ಸಂಪ್ರದಾಯ ವಾಗಿದೆ. ಆಸಂಪ್ರದಾಯ ಈ ಚರ್ಚೆಗೇನೂ ಅನ್ವಯವಾಗುವುದಿಲ್ಲ. ಇಲ್ಲಿ ಬೇರೆ ಬೇರೆ ಸದಸ್ಯರು ಬೇರೆ ಬೇರೆ ಭಾಗಗಳಿಂದ ಬಂದಿದ್ದಾರೆ. ಅವರವರ area ಗಳಲ್ಲಿ ಅವರದೇ ಆದಂತಹ ಸಮಸ್ಯೆಗಳಿರುತ್ತವೆ. ಅವರ area ದಲ್ಲೇ ಕೃಷಿಗೆ ಸಂಬಂಧಪಟ್ಟಂತಹ ಸಮಸ್ಯೆಗಳು ಬೇರೆ ಇರುತ್ತವೆ. ಮೈಸೂರಿನಲ್ಲಿ ಇರುವ ಸಮಸ್ಯೆ ಗುಲ್ಬರ್ಗಾದಲ್ಲಿ ಇರಲಿಕ್ಕೆ ಸಾಧ್ಯವಾಗುವುದಿಲ್ಲ ಅಥವಾ ಬೀದರ್‌ನಲ್ಲಿ ಇರುವುದಿಲ್ಲ. ಕೋಲಾರದಲ್ಲಿ ಇರುವಂತಹ ಸಮಸ್ಯೆ ಬಿಜಾಪುರದಲ್ಲಿ ಅಥವಾ ಬೆಳಗಾಂನಲ್ಲಿ ಇರಲಿಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿನ ಕೃಷಿ ಸಮಸ್ಯೆಗಳೇ ಬೇರೆ ಇರುತ್ತವೆ, ಇಲ್ಲಿಯ ಕೃಷಿ ಸಮಸ್ಯೆಗಳೇ ಬೇರೆ ಇರುತ್ತವೆ. ಅಲ್ಲಿ ಬೇರೆ ರೀತಿಯ ಬೆಳೆಗಳನ್ನು ಹಾಕಿರುತ್ತಾರೆ, ಇಲ್ಲಿ ಬೇರೆ

ರೀತಿಯ ಬೆಳೆಗಳನ್ನು ಹಾಕಿರುತ್ತಾರೆ. ಅಲ್ಲಿ ಬೇರೆ ಕಾಲದಲ್ಲಿ ಮಳೆ ಬೀಳುತ್ತದೆ, ಇಲ್ಲಿ ಬೇರೆ ಕಾಲದಲ್ಲಿ ಮಳೆ ಬೀಳುತ್ತದೆ. ಇವೆಲ್ಲಾ ಸಮಸ್ಯೆಗಳಿರುವುದರಿಂದ, ಒಟ್ಟಾರೆಯಾಗಿ ಅವರ ಅಭಿಪ್ರಾಯಗಳನ್ನು ಕೊಡಲಿ. ಅವರು ಅದನ್ನೆಲ್ಲಾ ಕೊಟ್ಟಮೇಲೆ ಅದರಿಂದ ಸರ್ಕಾರಕ್ಕೆ ಇನ್ನೂ ಹೆಚ್ಚು ಅನುಕೂಲವಾಗುತ್ತದೆ. ಎಲ್ಲಾ ಭಾಗಗಳ ಸದಸ್ಯರಿಂದ ಸರ್ಕಾರಕ್ಕೆ ಸಲಹೆಗಳು ಬಂದರೆ ಸರ್ಕಾರಕ್ಕೆ ಹೆಚ್ಚು ಉಪಯೋಗವಾಗುತ್ತದೆ. ಅವುಗಳನ್ನೆಲ್ಲಾ ಕ್ರೋಢೀಕರಣ ಮಾಡಿ ಜಾರಿಗೆ ತನ್ನಿ. ಇವರೆಲ್ಲರೂ ಮಾತನಾಡಿದ ಮೇಲೆ ನಾನು ಮಾತನಾಡಲಿಕ್ಕೆ ತಯಾರಾಗಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೆ, ಪ್ರತಿ ಪಕ್ಷದ ನಾಯಕರು ಮತ್ತು ಈ ಮನೆಯ ಎಲ್ಲಾ ಸದಸ್ಯರಿಗಿಂತ ದೊಡ್ಡವನು ನಾನಲ್ಲ. ಕೃಷಿಗೆ ಸಂಬಂಧಪಟ್ಟಂತೆ ಮತ್ತು ಗ್ರಾಮೀಣ ಜನತೆಯ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಅನೇಕ ರೀತಿ ಗ್ರಾಮೀಣ ಪ್ರದೇಶದಿಂದ ಬಂದಿರುವವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಕಳಕಳಿ ಇರುವಂಥದ್ದು ಸ್ವಾಭಾವಿಕವಾಗಿದೆ. ನನ್ನ ಸಮಸ್ಯೆ ಏನೆಂದರೆ, Business Advisory Committeeಯಲ್ಲಿ ತೀರ್ಮಾನವಾದಂತೆ ನಾವು ನಡೆದು ಕೊಳ್ಳಬೇಕಾಗಿದೆ. ಇವತ್ತು 6 ಗಂಟೆಗೆ ಮೇಲೆ ನನಗೆ ಬೇರೆ ಕಾರ್ಯಕ್ರಮಗಳಿವೆ. ನಿಮಗೆ ಗೊತ್ತಿದೆ. ಬಹುಶಃ ಯಾರೂ ತಪ್ಪು ತಿಳಿದುಕೊಳ್ಳದಿದ್ದರೆ ನಾನು ಒಂದು ಮಾತನ್ನು ಹೇಳುತ್ತೇನೆ. ಈ ಸದನ ನಡೆಯಬೇಕಾದರೆ, ಒಂದು ನಿಮಿಷವೂ ಕೂಡ ನಾನು ಹೊರಗಡೆ ಇರುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಇವತ್ತು 6 ಗಂಟೆಗೆ ಅನಿವಾರ್ಯವಾಗಿ ನಾನು ಹೋಗಲೇಬೇಕು. ನಾನು ಇವತ್ತು 6 ಗಂಟೆಯಿಂದ 8-9 ಗಂಟೆಯವರೆಗೆ ಇಲ್ಲಿ ಇರಲಿಕ್ಕೆ ಸಾಧ್ಯವಿಲ್ಲದಿರುವಂತಹ ಯಾವುದೋ ಒಂದು ಇಕ್ಕಟ್ಟಿನ ಪರಿಸ್ಥಿತಿ ಉಂಟಾಗಿದೆ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಅಧ್ಯಕ್ಷರು ಸೋಮವಾರ ಬೆಳಿಗ್ಗೆ 10 ಅಥವಾ 10.30 ಗಂಟೆಗೆ ಸದನ ಪ್ರಾರಂಭವಾದ ಕೂಡಲೇ ಉತ್ತರ ಕೊಡಬೇಕೆಂದು ತಿಳಿಸಿದರೆ, ಅದಕ್ಕೆ ನಾನು ಬದ್ಧನಾಗಿದ್ದೇನೆ. ಆದರೆ ದಯಮಾಡಿ ಇವತ್ತು 6 ಗಂಟೆ ನಂತರ ನಾನು ಸದನದಲ್ಲಿ ಇಲ್ಲದಿದ್ದರೆ ದಯಮಾಡಿ ಯಾರೂ ನನ್ನ ಬಗ್ಗೆ ತಪ್ಪು ತಿಳಿದುಕೊಳ್ಳಬಾರದು. ಯಾರು ಬೇಕಾದರೂ ಮಾತನಾಡಿ. ಮಾನ್ಯ ಸದಸ್ಯರು ಮಾತನಾಡಲು ಇಷ್ಟೊಂದು

ಆಸಕ್ತಿ ತೋರಿಸುತ್ತಿರುವುದು ನನಗೆ ಅತ್ಯಂತ ಸಂತೋಷ ತಂದಿದೆ. ನನಗೆ ಗೊತ್ತಿಲ್ಲದಂತೆ ನಾನು ಪ್ರಾರಂಭದಲ್ಲಿ ಮಾತನಾಡುವಾಗ ನನ್ನಿಂದ ಕಣ್ಣೀರು ಹಾಕುವಂತಹ ಪ್ರಯತ್ನ ಆಯಿತು. ಕೃಷಿಕರ ಬಗ್ಗೆ ಚರ್ಚೆ ಮಾಡುವುದಕ್ಕೆ ನೀವೇ ಪ್ರಸ್ತಾಪಿಸಬೇಕಿತ್ತು, ನಿಮಗೆ ಬದಲಾಗಿ ನಾನೇ ಚರ್ಚೆ ಮಾಡಲು ಪ್ರಸ್ತಾಪಿಸಿದರೂ ಸಹ ಇದಕ್ಕೇನು ಅಡ್ಡಿ ಮಾಡುತ್ತಾರೆಂದು ನನಗೆ ಸ್ವಲ್ಪ ಬೇಸರವಾಗಿತ್ತು. ಮೂರು ದಿವಸ ಇದರ ಬಗ್ಗೆ ಚರ್ಚೆಯಾಗಬೇಕೆಂದೇ ನಾವು ಸದನ ಕರೆದಿದ್ದೆವು. 'ಯಡಿಯೂರಪ್ಪನವರೆ ಮೂರು ದಿವಸ ಬಿಡಿ, ಐದು ದಿವಸ ಬೇಕಾದರೆ ಚರ್ಚೆ ಮಾಡೋಣ' ಎಂದು ತಾವು ಹೇಳುವುದಾದರೆ ನಾನು ಅದಕ್ಕೂ ಸಿದ್ಧನಾಗಿದ್ದೇನೆ. ನನಗೇನೂ ಅದಕ್ಕೆ ಅಭ್ಯಂತರವಿಲ್ಲ. ಇಲ್ಲಿರುವವರು ಯಾರೇ ಮಾತನಾಡುವುದನ್ನು ಮೊಟಕು ಮಾಡಬೇಕೆಂಬ ಭಾವನೆ ನನಗಿಲ್ಲ. ಆದ್ದರಿಂದ, ಮಾನ್ಯ ಅಧ್ಯಕ್ಷರೆ, ಸೋಮವಾರದ ದಿವಸ ತಾವು ಎಷ್ಟು ಗಂಟೆಗೆ ಸದನ ಕರೆಯುತ್ತೀರೋ, ಆ ದಿನ ಅಷ್ಟು ಗಂಟೆಗೆ ನಾನು ಉತ್ತರ ಕೊಡುತ್ತೇನೆ. ಸದನವನ್ನು ಸೋಮವಾರದಂದು 10 ಅಥವಾ 11 ಗಂಟೆಗೆ ಕರೆಯುವುದು ತಮಗೆ ಬಿಟ್ಟ ವಿಚಾರವಾಗಿದೆ. ಸೋಮವಾರ ಸದನ ಸೇರಿದ ತಕ್ಷಣ ಉತ್ತರ ಕೊಡಲಿಕ್ಕೆ ನೀವು ನನಗೆ ಅವಕಾಶ ಮಾಡಿಕೊಡುವುದಾದರೆ, ಈಗ ಚರ್ಚೆಯನ್ನು ಮುಂದುವರೆಸಲು ನನ್ನದೇನೂ ಅಭ್ಯಂತರವಿಲ್ಲ. ನಾವು ಶಾಂತವಾಗಿ ಕುಳಿತುಕೊಂಡು ನೀವು ಹೇಳುವ ಸಲಹೆಗಳನ್ನು ಕೇಳುತ್ತೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸೋಮವಾರ ಬೆಳಿಗ್ಗೆಯೇ ಉತ್ತರ ಕೊಡಲಿ. ಅದಾದ ನಂತರ ನಾವು Adjournment Motion ಮುಖಾಂತರ move ಮಾಡಿ ನೀವು Rule 69 ಅಡಿ ಚರ್ಚೆ ನಡೆಸಲು convert ಮಾಡಿರುವ ಬರಗಾಲ ವಿಷಯದ ಬಗ್ಗೆ ಮಾತನಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಪ್ರತಿ ಪಕ್ಷದ ನಾಯಕರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ ಮೇಲೆ, ಮಾನ್ಯ ಮುಖ್ಯಮಂತ್ರಿಗಳು ಸೋಮವಾರ ಉತ್ತರ ಕೊಡಲಿಕ್ಕೆ ತಯಾರಾಗಿದ್ದಾರೆ. ಅಂದು ಬೆಳಿಗ್ಗೆ 10 ಅಥವಾ 10.30 ಗಂಟೆಗೆ ನಾವು ನಿಗದಿ ಮಾಡೋಣ. ಸೋಮವಾರ ಸದನ ಪ್ರಾರಂಭವಾದ ತಕ್ಷಣವೇ ಅವರು ಉತ್ತರ ಕೊಡಲಿ. ಆದರೆ ಈಗ ಮಾತನಾಡಲಿಕ್ಕೆ ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಆದರೆ ತಾವು time limitation ನೊಳಗೆ

ಮಾತನಾಡಬೇಕು. Business Advisory Committee ಯಲ್ಲಿ ನಾವು ಕೆಲವೊಂದು ನಿರ್ಣಯಗಳನ್ನು ಕೈಗೊಂಡಿರುತ್ತೇವೆ. ಇಷ್ಟು ಅವಧಿಯವರೆಗೆ ಇಂತಹ ವಿಷಯಗಳನ್ನು ಚರ್ಚೆ ಮಾಡಬೇಕೆಂದು ಅದರಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರ ಪ್ರಕಾರ ನಡೆದುಕೊಳ್ಳಬೇಕಾದುದು ಒಬ್ಬ ಸ್ಪೀಕರ್‌ರವರ ಕರ್ತವ್ಯವಾಗಿದೆ. ಅದರ ಪ್ರಕಾರ ನಡೆದುಕೊಳ್ಳುವಂತಹ ಸಂದರ್ಭದಲ್ಲಿ ಕೆಲವು ಶಾಸಕರಿಗೆ ಮಾತನಾಡಲಿಕ್ಕೆ ಅವಕಾಶ ಸಿಗಲಿಕ್ಕಿಲ್ಲ. ನಿಮ್ಮ ಪಕ್ಷಕ್ಕೆ ನಿಗದಿಪಡಿಸಿರುವ ಸಮಯದಲ್ಲೇ ನಿಮ್ಮ ಪಕ್ಷದ ಎಲ್ಲಾ ಸದಸ್ಯರೂ ಮಾತನಾಡಲು ಅವಕಾಶವಾಗುವಂತೆ ನೀವು ನಿಮ್ಮಲ್ಲೇ ಯಾರ್‍ಯಾರು ಎಷ್ಟೆಷ್ಟು ಮಾತನಾಡಬೇಕೆಂದು restrictions ಹಾಕಿಕೊಳ್ಳಿ. ನಾನು ನಿನ್ನೆಯೇ ಚರ್ಚೆ ನಡೆಸಲು ಒಂದೊಂದು ಪಕ್ಷಕ್ಕೆ ಇಂತಿಷ್ಟು ಅವಧಿ ಎಂದು ನಿಗದಿಪಡಿಸಿದ್ದೇನೆ. ಅದನ್ನು ಮೀರಿಯೂ ಇವತ್ತು ಚರ್ಚೆ ನಡೆದಿದೆ. ಕೆಲವೊಮ್ಮೆ ಅದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಸದನ ಇರುವಂತಹ systemನಲ್ಲಿ ಹೆಚ್ಚು ಕಡಿಮೆ ಟೈಮ್ ಕೊಡಲೇಬೇಕಾಗುತ್ತದೆ. ಅಷ್ಟಕ್ಕೇ restrictions ಮಾಡಲಿಕ್ಕಾಗುವುದಿಲ್ಲ. ಆದರೆ ನಮಗೆ ನಾವು ಕೆಲವೊಂದು Self restrictions ಮಾಡಿಕೊಳ್ಳಬೇಕಾಗುತ್ತದೆ. ನಿಮ್ಮ ಪಕ್ಷದ ಸದಸ್ಯರನ್ನು ನೀವು ನಿಯಂತ್ರಣ ಮಾಡಿಕೊಳ್ಳಬೇಕಾಗುತ್ತದೆ. ಆಗಲೇ ಒಬ್ಬ ಗೌರವಾನ್ವಿತ ಸದಸ್ಯರು ಇಲ್ಲಿ ವೆಲ್‌ಗೆ ಬಂದರು. ನಾನು ಸ್ಪೀಕರ್ ಆದಮೇಲೆ ಸಾಕಷ್ಟು ಸದಸ್ಯರು ವೆಲ್‌ಗೆ ಬಂದಿದ್ದರು. ಅವರೆಲ್ಲರಿಗೂ ನಾನು protection ಮಾಡಿದ್ದೇನೆ, ಅವರ ಪರವಾಗಿ ಸರ್ಕಾರದ ವಿರುದ್ಧ ಹೋರಾಟ ಮಾಡಿದ್ದೇನೆ, ಎಲ್ಲವನ್ನೂ ಮಾಡಿದ್ದೇನೆ. ವೆಲ್‌ಗೆ ಬರುವುದಕ್ಕೆ ನನಗೇನೂ objection ಇಲ್ಲ.

ಅಧ್ಯಕ್ಷರು : ಅದಕ್ಕೆ ನನ್ನದೇನು ಅಬ್ಜೆಕ್ಷನ್ ಇಲ್ಲ, ಆದರೆ ಸ್ಪೀಕರ್ ಅವರ ಲಿಮಿಟೇಷನ್ ಅನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾನು ಎಲ್ಲರಿಗೂ ಅವಕಾಶ ಕೊಡಲಾಗುವುದಿಲ್ಲ, ಇವತ್ತು ಸಂಜೆಯವರೆಗೆ ಕುಳಿತು ಮಾತನಾಡುತ್ತೇವೆಂದರೆ, ಎಲ್ಲರೂ ಮಾತನಾಡಿ, ಹತ್ತು ನಿಮಿಷವೆಂದರೆ, ನೀವು ಹತ್ತು ನಿಮಿಷವೇ ಮಾತನಾಡಿ. ಆದರೆ ಒಬ್ಬರು ಅರ್ಧಗಂಟೆ ಮಾತನಾಡುತ್ತಾರೆ, ಇನ್ನೊಬ್ಬರು ಒಂದು ಗಂಟೆ ಮಾತನಾಡುತ್ತಾರೆ, ಅಗ ನಿಮ್ಮ ಪಕ್ಷದ ಮತ್ತೊಬ್ಬ ಶಾಸಕರು ಮಾತನಾಡುವ ಅವಕಾಶ ತಪ್ಪುತ್ತದೆ, ಅದನ್ನು ನೀವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅವರು (ಸಾರಾ ಮಹೇಶ್) ಈ ವೆಲ್‌ನಲ್ಲಿ ಬಂದು ನಿಂತ ಆ ಬಿಹೇವಿಯರ್ ನನಗೆ ಲೈಕ್

ಆಗಲಿಲ್ಲ. ಅಸಮಾಧಾನವಿದ್ದರೆ ಹೇಳಿ. ಆದರೆ ಸಭಾಧ್ಯಕ್ಷರ ಮೇಲೆ ಅಟ್ಯಾಕ್ ಮಾಡುವಂಥಹ ರೀತಿಯಲ್ಲಿ ಬಂದ ಬಿಹೇವಿಯರ್‌ನಿಂದ ನನಗೆ ಬಹಳ ಬೇಜಾರಾಗಿದೆ. ಇಂಥ ಘಟನೆಗಳು ಇಲ್ಲಿ ನಡೆಯಬಾರದೆಂಬುದು ನನ್ನ ಅನಿಸಿಕೆ. ಇದು ನನ್ನ ವೈಯಕ್ತಿಕ ಪ್ರಶ್ನೆಯಲ್ಲ, ಸಭಾಧ್ಯಕ್ಷರ ಸ್ಥಾನದ ಪ್ರಶ್ನೆ ಇದೆ, ಈ ರೀತಿಯ ಭಾವನೆಗಳನ್ನು ಹೇಳಬೇಕಾಗುತ್ತದೆ, ನಿಮ್ಮ ಲಿಮಿಟೇಷನ್ ಅನ್ನು ನೀವು ವಿಚಾರ ಮಾಡಿಕೊಳ್ಳಿ. ಈಗ ಮುಖ್ಯಮಂತ್ರಿಗಳು ಹಾಗೂ ಸಿದ್ಧರಾಮಯ್ಯನವರು ಎಲ್ಲರೂ ಮಾತನಾಡಲು ಅವಕಾಶ ಕೊಡಿ ಎಂದು ಹೇಳಿದರು. ಅದಕ್ಕಾಗಿ ನಾವೊಂದು ಟೈಂ ಲಿಮಿಟೇಷನ್ ಹಾಕಿಕೊಳ್ಳೋಣ. ಈಗ 2 ಗಂಟೆಯವರೆಗೆ ಎಲ್ಲರೂ ಮಾತನಾಡಿ, ಆಮೇಲೆ ಸಿದ್ಧರಾಮಯ್ಯ ನವರು 3 ಗಂಟೆಯಿಂದ ಪ್ರಾರಂಭ ಮಾಡಲಿ, ಈ ರೀತಿ ನಾವೊಂದು ಲಿಮಿಟೇಷನ್ ಹಾಕಿಕೊಂಡರೆ ಆ ಅವಧಿಯೊಳಗೆ ಎಷ್ಟು ಜನ ಡಿಸ್ಕಷನ್ ಮಾಡುತ್ತಾರೋ ಮಾಡಲಿ, ಉಳಿದವರಿಗೆ ಅವಕಾಶ ಸಿಕ್ಕಿಲ್ಲವೆಂದು ಮತ್ತೆ ಈ ವೆಲ್‌ನಲ್ಲಿ ಬಂದು ಕುಳಿತುಕೊಳ್ಳುವಂತಾಗಬಾರದು.

ಶ್ರೀ ಸಾ.ರಾ.ಮಹೇಶ್ : ಮಾನ್ಯ ಅಧ್ಯಕ್ಷರೆ, ನಾವು ಒಂದೂವರೆ ವರ್ಷದಿಂದ ಹಲವಾರು ಬಾರಿ ಮನವಿಯನ್ನು ಮಾಡಿದ್ದೇವೆ, ನಮ್ಮ ಪರಿಸ್ಥಿತಿಯನ್ನು ಕೂಡ ತಾವು ಅರ್ಥಮಾಡಿಕೊಳ್ಳಿ. ನಾವು ಹಲವಾರು ಬಾರಿ ಕೈ ಎತ್ತಿ ನೋವು ಬಂದುಬಿಟ್ಟಿದೆ. ನಾವು ನಿಮ್ಮನ್ನು ಅಗೌರವದಿಂದ ನೋಡಬೇಕೆಂದಾಗಲಿ, ನಿಮ್ಮ ಮನಸ್ಸಿಗೆ ನೋವನ್ನುಂಟು ಮಾಡಬೇಕೆಂದಾಗಲಿ ಆ ರೀತಿ ನಡೆದುಕೊಂಡಿಲ್ಲ. ನಮ್ಮ ಪರಿಸ್ಥಿತಿ ಇಷ್ಟೆ, ಇವತ್ತು ನಮ್ಮ ಸರ್ಕಾರವಿಲ್ಲ, ಮಾನ್ಯ ಯಡಿಯೂರಪ್ಪನವರು, ನಿಮಗೆ ಗೊತ್ತಿರುವ ಏನು ವಿಚಾರವಿದೆ ಬಂದು ಹೇಳಿ ಎಂದು ಹೇಳಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ನಮ್ಮ ಪಕ್ಷದ ನಾಯಕರು ಇವರಿವರೇ ಕುಳಿತು ತೀರ್ಮಾನ ಮಾಡುವುದಾದರೆ, ನಮ್ಮ ಅಭಿಪ್ರಾಯವನ್ನು ಏಳುವಂತಹವರು ಯಾರಿದ್ದಾರೆ? ಆ ಒಂದು ಭಾವನೆಯಿಂದ ನಾನು ನಿನ್ನೆಯಿಂದಲೂ ನಿಮ್ಮನ್ನು ಕೈಮುಗಿದು ಕೇಳಿದೆ, ನೀವು ಕೊಡಲಿಲ್ಲ, ಆ ಕಾರಣದಿಂದ ನಾನು ಬಾವಿಗೆ ಬಂದೆ. ಅದು ಬಿಟ್ಟರೆ, ನಾನು ನಿಮಗೆ ಅಗೌರವ ಸೂಚಿಸಬೇಕು, ನಿಮ್ಮ ಮನಸ್ಸಿಗೆ ನೋವನ್ನುಂಟು ಮಾಡಬೇಕೆಂಬುದು ನನ್ನ ಉದ್ದೇಶವಲ್ಲ. ಆದರೆ ನಮ್ಮ ಸದಸ್ಯರು ಸಮಯವನ್ನು ನಿಗದಿ ಮಾಡಿದಂಥ ಸಂದರ್ಭದಲ್ಲಿ ತಾವು ಸ್ವಲ್ಪ ಮೃದು ಧೋರಣೆಯನ್ನು ಕಡಿಮೆ ಮಾಡಿ, ನೀವು ನೇರವಾಗಿ ಹೇಳಿಬಿಡಿ. ನೀವು ನಮಗೆ ಸ್ಪಷ್ಟವಾಗಿ ಹೇಳಿದ್ದೀರಿ, ನಾವು ತಪ್ಪು ಮಾಡಿದಾಗ

ನಮ್ಮ ಮೇಲೆ ಕ್ರಮತೆಗೆದುಕೊಳ್ಳಿ ಯಾವುದೇ ಅಭ್ಯಂತರವಿಲ್ಲ. ಆದರೆ ನೀವೇನು ಸಮಯವನ್ನು ನಿಗದಿ ಮಡುತ್ತೀರಿ, ಆ ಪ್ರಕಾರ ನಡೆದು ಕೊಳ್ಳಬೇಕು. ಹಾಗಾಗಿ ನಾನು ನಿಮಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ, ನಿಮ್ಮ ಮನಸ್ಸಿಗೆ ನೋವನ್ನುಂಟು ಮಾಡಬೇಕೆಂಬ ಉದ್ದೇಶವಿಲ್ಲ, ನಿಮ್ಮ ಬಗ್ಗೆ ನಮಗೆ ಗೌರವವಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಇವತ್ತು ಸಾ.ರಾ.ಮಹೇಶ್ ಅವರು ಆವೇಶಕ್ಕೆ ಒಳಗಾದರೊ ಗೊತ್ತಿಲ್ಲ, ಆ ಬಿಸಿ ರಕ್ತ ಆ ರೀತಿ ಮಾಡಿರಬೇಕು, ನೀವು ಮಾತನಾಡಬೇಕೆಂಬ ಕಾತುರತೆಯಿಂದ ಹಾಗೆ ಆಗಿರಬೇಕು. ಆದರೆ ಅಧ್ಯಕ್ಷರ ಜೊತೆ ಮಾತನಾಡುವಾಗ ನಾವು ನೀವು ಬಹಳ ಎಚ್ಚರಿಕೆಯಿಂದ, ಸೌಜನ್ಯದಿಂದ ಇರಬೇಕೆಂಬುದನ್ನು ಹೇಳಬಯ ಸುತ್ತೇನೆ. ಯಂಗ್‌ಸ್ಟಾರ್ ಆಗಿರಲಿ, ನಾವೆಲ್ಲರೂ ಕಲಿಯುವುದು ಬಹಳ ಇದೆ, ಆ ದೃಷ್ಟಿಯಿಂದ ಒಂದು ಮಾತನ್ನು ಹೇಳಿದರಷ್ಟೆ, ಬೇರೆ ಏನೂ ಪ್ರಶ್ನೆ ಇಲ್ಲ. ಪ್ರತಿಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರಲ್ಲಿ ನಾನು ಒಂದೇ ಒಂದು ವಿನಂತಿ ಮಾಡುವುದೇನೆಂದರೆ, ನನಗೆ ನಿಮ್ಮ ಮಾತನ್ನು ಕೇಳಬೇಕೆಂಬ ಕಾತುರವಿದೆ, ಅದಕ್ಕೆ ತಾವು 4 ಗಂಟೆಗೆ ಶುರು ಮಾಡಿ, 6 ಗಂಟೆಯವರೆಗೆ ನಿಮ್ಮ ಮಾತುಗಳನ್ನು ಕೇಳಿ ಆಮೇಲೆ ನಾನು ಹೋಗುತ್ತೇನೆ. ನಂತರ 6 ಗಂಟೆಯಿಂದ 8 ಗಂಟೆಯವರೆಗೆ ಬೇರೆಯವರು ಐದೈದು ನಿಮಿಷ ಮಾತನಾಡಲಿ. ದಯಮಾಡಿ ನಿಮ್ಮ ಮಾತನ್ನು ನಾನು ಕೇಳಿದ್ದೇನೆ, ನನ್ನ ಮಾತಿಗೆ ಇಷ್ಟಾದರೂ ಬೆಲೆ ಕೊಡಿ.

ಶ್ರೀ ಬಂಡಪ್ಪ ಕಾಶಂಪೂರ್ : ಸನ್ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಹೇಳಿದಂತೆ, ಸಾ.ರಾ.ಮಹೇಶ್ ಅವರು ಇವತ್ತಿನವರೆಗೆ ಯಾವತ್ತೂ ಬಹಳ ಮೃದುವಾಗಿ, ಬಹಳ ಒಳ್ಳೆಯ ರೀತಿಯಿಂದ ಸುಮ್ಮನೆ ಕುಳಿತಿರುವಂಥ ವ್ಯಕ್ತಿಯಾಗಿದ್ದಾರೆ. ಆದರೆ ವಿರೋಧ ಪಕ್ಷದ ನಾಯಕರು ಎದ್ದ ತಕ್ಷಣ ಎಲ್ಲಿ ನನಗೆ ಮಾತನಾಡಲು ಅವಕಾಶ ಸಿಗುತ್ತದೆಯೋ ಇಲ್ಲವೊ ಎಂದು ತಿಳಿದುಕೊಂಡು, ಅದರಲ್ಲೂ ಈ ರೈತರ ಬಗ್ಗೆ ಏನು ಚರ್ಚೆಗೆ ಕರೆದಿದ್ದೀರಿ, ತಾವು ಬಹಳ ಒಳ್ಳೆಯ ರೀತಿಯಲ್ಲಿ ಈ ಸದನವನ್ನು ನಡೆಸಿಕೊಂಡು ಬರುತ್ತಿದ್ದೀರಿ, ನಮ್ಮ ಸಮಯಕ್ಕಿಂತ ಹೆಚ್ಚಿನ ಸಮಯವನ್ನು ಕೊಡುತ್ತಿದ್ದೀರಿ, ಎಲ್ಲರೂ ಅದರಿಂದ ತೃಪ್ತರಾಗಿದ್ದೇವೆ. ಆದರೆ ನಮ್ಮ ಸದಸ್ಯರು ಯಾವುದೇ ರೀತಿಯಲ್ಲಿ ತಮಗೆ ಅಗೌರವ ಸೂಚಿಸಬೇಕೆಂಬ ಉದ್ದೇಶವನ್ನಿಂಟುಕೊಂಡಿಲ್ಲ,

ನಡವಳಿಕೆಯಲ್ಲಿ ಏನೇ ಏರುಪೇರುಗಳಾದರೆ ನಮ್ಮ ಪಕ್ಷದಿಂದ ವಿಷಾದವನ್ನು ವ್ಯಕ್ತಪಡಿಸುತ್ತೇವೆ.

ಶ್ರೀ ಎ.ಮಂಜು : ಹಿರಿಯ ಸದಸ್ಯರುಗಳು ಎರಡೆರಡು ಗಂಟೆ ಅವರೇ ಮಾತನಾಡುತ್ತಿದ್ದರೆ ಬೇರೆಯವರಿಗೆ ಮಾತನಾಡಲು ಅವಕಾಶವಿರುವುದಿಲ್ಲ. ತಮಗೆ ಕೊಟ್ಟಂಥ ಅವಕಾಶದಲ್ಲಿ ಬೇರೆಯವರಿಗೆ ಅವಕಾಶ ಸಿಗುವಂತೆ ಕಡಿಮೆ ಅವಧಿಯಲ್ಲಿ ಮಾತನಾಡಬೇಕು, ನಮಗೂ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು : ಮಾನ್ಯ ರುದ್ರೇಶ್‌ಗೌಡರೆ, ಹತ್ತತ್ತು ನಿಮಿಷದಲ್ಲಿ ತಮ್ಮ ಮಾತುಗಳನ್ನು ಮುಗಿಸುವುದು.

ಶ್ರೀ ವೈ. ಎನ್. ರುದ್ರೇಶ್‌ಗೌಡ (ಬೇಲೂರು) : ಆಯಿತು, ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಸಭಾಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಹೇಳುತ್ತೇನೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಚಾರಗಳ ಬಗ್ಗೆ ಚರ್ಚೆ ನಡೆದಿದೆ ಈಗ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ರೈತರ ಸ್ಥಿತಿಗತಿ ನನಗೆ ಗೊತ್ತಿರುವಂತೆ 30 ವರ್ಷದಲ್ಲಿ ಯಾವ ಸ್ಥಿತಿಗತಿ ಇತ್ತೋ ಇವತ್ತು ಸಹ ರೈತರ ಸ್ಥಿತಿಗತಿ ಅದೇ ರೀತಿಯಲ್ಲಿದೆ, ಯಾವ ಬದಲಾವಣೆಯೂ ಇಲ್ಲ. ಈ ರೀತಿಯಲ್ಲಿ ಬದಲಾವಣೆಯಾಗಬೇಕೆಂದರೆ, ಸರ್ಕಾರ ರೈತರಿಗೆ ಪ್ರೋತ್ಸಾಹ ನೀಡುವಂಥ ಹಲವಾರು ಹೊಸ ಯೋಜನೆಗಳನ್ನು ಹಾಕಿಕೊಂಡು, ಆಯವ್ಯಯದಲ್ಲಿ ಕೃಷಿಗೆ ಪ್ರತ್ಯೇಕವಾಗಿ ಹಣವನ್ನು ಅಲೊಕೇಷನ್ ಇಡಬೇಕೆಂಬುದನ್ನು ಕೆಲವರು ವ್ಯಕ್ತಪಡಿಸಿದರು. ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ನಮ್ಮ ಹಾಸನ ಜಿಲ್ಲೆಯಲ್ಲಿ ಒಂದು ಲಕ್ಷ ಎಕರೆ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆ ಬೆಳೆಯುತ್ತೇವೆ. ಈ ಬೆಳೆ ಅಂಗಮಾರಿ ರೋಗದಿಂದ ಕಳೆದ ವರ್ಷ ಸರ್ವನಾಶವಾಯಿತು. ಹಾಸನದಲ್ಲಿ ಆಲೂಗೆಡ್ಡೆ ಬೆಳೆ ಒಂದು ಲಕ್ಷ ಎಕರೆ ಜಮೀನಿನಲ್ಲಿ ಹೋಗಿದೆ, ಆಲೂಗೆಡ್ಡೆ ಬೆಳೆಯಲ್ಲಿ ಮಾತ್ರ ರೈತರಿಗೆ ಆದಾಯ ಬರುವುದು, ನೀವು ಇದಕ್ಕೆ ಏನಾದರೂ ಪರಿಹಾರವನ್ನು ಮಾಡಬೇಕೆಂದು ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದೆವು, ಆಗ ಆಲೂಗೆಡ್ಡೆ ಬೆಳೆ ಬೆಳೆಯುವುದನ್ನು ನಿಲ್ಲಿಸಿ ಬೇರೆ ಬೆಳೆಯನ್ನು ಬೆಳೆಯಿರಿ ಎಂದು ಮಾನ್ಯ ತೋಟಗಾರಿಕೆ ಸಚಿವರು ಹೇಳಿದರು. ನಾನು ಹೇಳುವುದೇನೆಂದರೆ, ಅಂಥ ಸಂದರ್ಭದಲ್ಲಿ, ಒಂದು ಲಕ್ಷ ಎಕರೆ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆ ಹೋದಾಗ ಅವರ ಖರ್ಚನ್ನು ಅಟ್‌ಲೀಸ್ಟ್ ಪರಿಹಾರ ರೂಪದಲ್ಲಾದರೂ ಸರ್ಕಾರ ಕೊಡಬಹುದಾಗಿತ್ತು, ಸರ್ಕಾರ ಆ

ಬಗ್ಗೆ ಚಿಂತನೆಯನ್ನೇ ಮಾಡಲಿಲ್ಲ, ರೈತರಿಗೆ ಯಾವ ರೀತಿಯಲ್ಲೂ ಪರಿಹಾರ ಕೊಡಲು ಸಾಧ್ಯವಿಲ್ಲವೆಂಬ ಅಭಿಪ್ರಾಯವನ್ನು ತೋಟಗಾರಿಕೆ ಮಂತ್ರಿಗಳು ವ್ಯಕ್ತಪಡಿಸಿದರು. ಅದೇ ರೀತಿಯಲ್ಲಿ ಮತ್ತೊಂದು ವಿಚಾರವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಹಾಸನ ಜಿಲ್ಲೆಗೆ ಜಿಲ್ಲಾಮಂತ್ರಿಗಳಿದ್ದಾರೆ, ಅವರು ಒಂದು ವರ್ಷದಿಂದಲೂ ನಮ್ಮ ಜಿಲ್ಲೆಯಲ್ಲಿ ಪತ್ತೆ ಇಲ್ಲ, ಹಾಸನ ಜಿಲ್ಲೆಗೆ ಕಾಲೂ ಇಡಲಿಲ್ಲ, ನಾವು ಯಾರ ಹತ್ತಿರ ಕಷ್ಟ ಹೇಳಿಕೊಳ್ಳುವುದು? ಆದುದರಿಂದ ಇವತ್ತು ತಾವು ಒಂದು ಆದೇಶವನ್ನು ನೀಡಬೇಕು, ಯಾರು ಜಿಲ್ಲಾಮಂತ್ರಿಗಳಿದ್ದಾರೆ, 3 ತಿಂಗಳಿಗೆ ಒಂದು ಸಾರಿ ಕಡ್ಡಾಯವಾಗಿ ಕೆಡಿಪಿ ಮಿಟಿಂಗ್ ಮಾಡುವ ವ್ಯವಸ್ಥೆಯನ್ನು ಏನು ಹಿಂದಿನಿಂದಲೂ ಹಾಕಿಕೊಂಡು ಬರಲಾಗಿದೆಯೊ, ಏನು ಸರ್ಕಾರದ ಆದೇಶವಿದೆಯೊ ಆ ರೀತಿ ಮಾಡಬೇಕು. ಒಂದು ಕಾಲು ವರ್ಷದಿಂದಲೂ ಸಹ ಹಾಸನ ಜಿಲ್ಲೆಯಲ್ಲಿ ಯಾವ ಕೆಡಿಪಿ ಮೀಟಿಂಗೂ ಮಾಡಿಲ್ಲ. ಹಾಗಾಗಿ ನಮ್ಮ ಹಾಸನ ಜಿಲ್ಲೆಯ ಕಷ್ಟವನ್ನು ಹೇಳಿಕೊಳ್ಳೋಣವೆಂದರೆ, ಈಗ ಜಿಲ್ಲೆ ಮಂತ್ರಿಗಳು ಈಗ ಹಾಸನ ಜಿಲ್ಲೆಗೆ ಕಾಲು ಇಡುತ್ತಿಲ್ಲ. ಇದು ಹೀಗೆ ಏಕೆ ಆಗಿದೆ ಎಂದರೆ, ಹಾಸನ ಜಿಲ್ಲೆಗೆ ನಾವೇನು ಹಣ ಕೊಟ್ಟರೂ ಪ್ರಯೋಜನವಿಲ್ಲ, ಆ ಜಿಲ್ಲೆಯನ್ನು ಬೇರೆ ರೀತಿಯಲ್ಲಿ ನಾವು ಕಾಣಬೇಕೆನ್ನುವ ಭಾವನೆ ಅವರಿಗಿದೆಯೊ ಏನೊ ನನಗೆ ಗೊತ್ತಿಲ್ಲ. ಸರ್ಕಾರ, ಹಾಸನ ಜಿಲ್ಲೆಗೆ ಹಣವನ್ನು ಕೊಡಬಾರದು, ಆ ಜಿಲ್ಲೆಯ ಅಭಿವೃದ್ಧಿ ಕೆಲಸವನ್ನು ಮಾಡಬಾರದು ಎನ್ನುವ ಆ ಮನೋಭಾವನೆ ಇದ್ದರೆ, ದಯವಿಟ್ಟು ಆ ಮನೋಭಾವನೆಯನ್ನು ಬದಲಾಯಿಸಿಕೊಳ್ಳಬೇಕು. ಏಕೆಂದರೆ, ನಮ್ಮ ಸರ್ಕಾರದ ಪರವಾಗಿ ಓಟು ಕೊಟ್ಟಿಲ್ಲ, ಆದುದರಿಂದ, ನಾವು ಹಣವನ್ನು ಕೊಡುವುದು ಬೇಡವೆನ್ನುವ ಮನೋಭಾವನೆಯನ್ನಿಟ್ಟು ಕೊಂಡಿರಬೇಕು. ಕಳೆದ ವರ್ಷ ಪಿಡಬ್ಲ್ಯೂಡಿ ಸೇರಿದಂತೆ ಯಾವ ಹಣವನ್ನೂ ಕೊಡಲಿಲ್ಲ, ಕಾರಣವೇನೆಂದರೆ, ಹಿಂದಿನ ಸಾಲಿನಲ್ಲಿ ಹೆಚ್ಚಿಗೆ ಹಣವನ್ನು ಕೊಟ್ಟಿದ್ದಾರೆ, ಈ ವರ್ಷ ಕೊಡುವುದಿಲ್ಲವೆನ್ನುವುದು. ಈ ಜಿಲ್ಲೆಗೆ ನಿಗದಿ ಪಡಿಸಿರುವ ತಾರತಮ್ಯವನ್ನು ಹೋಗಲಾಡಿಸಬೇಕು. ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ H1 N1 ನಲ್ಲಿ ನಾವು ಎರಡನೇ ಸ್ಥಾನದಲ್ಲಿದ್ದೇವೆ, 54 ಜನ ನಮ್ಮ ರಾಜ್ಯದವರು ಸತ್ತಿದ್ದಾರೆ. ಮಹಾರಾಷ್ಟ್ರ ಮೊದಲನೇ ಸ್ಥಾನದಲ್ಲಿದ್ದರೆ ನಮ್ಮ ರಾಜ್ಯ ಎರಡನೇ ಸ್ಥಾನದಲ್ಲಿದೆ. ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡು H1 N1 ಅನ್ನು ಕಂಟ್ರೋಲಿಗೆ

ನಮ್ಮ ಕರ್ನಾಟಕ ರಾಜ್ಯದಲ್ಲಿ ತರಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರೈತರ ಸ್ಥಿತಿಗತಿಯ ಬಗ್ಗೆ ಹಲವಾರು ಸದಸ್ಯರು ಈಗ ಮಾತನಾಡಿದರು, ಪ್ರತಿ ದಿವಸ ಶಾಸಕರು ರೈತರ ಜೊತೆಯಲ್ಲಿ ಬೆರೆಯುವಂತಹವರು. ಅವರ ಸ್ಥಿತಿಗತಿ ನೋಡಿದರೆ ಏನೂ ಸುಧಾರಣೆಯಾಗಿಲ್ಲ. ನಾನು ಯಾವ ವಿಚಾರವನ್ನು ಹೇಳುತ್ತಿದ್ದೇನೆಂದರೆ, 4 ವರ್ಷಗಳ ಹಿಂದೆ ಒಬ್ಬ ಲೇಬರ್‌ಗೆ 30 ರೂಪಾಯಿ ಇದ್ದ ಸಂಬಳ ಇವತ್ತು 150 ರೂಪಾಯಿಗಳಾಗಿವೆ. ಐದು ವರ್ಷದ ಹಿಂದೆ ಒಂದು ಟನ್ ಗೊಬ್ಬರಕ್ಕೆ 2.50 ಸಾವಿರ ರೂ. ಇದ್ದಂತಹ ದರ ಇವತ್ತು 9000 ರೂ. ಆಗಿದೆ. ಅದೇ ರೀತಿಯಲ್ಲಿ ನಾನು ಹೇಳುವುದು ಇಷ್ಟೆ. ರೈತರು ನೀವು ಯಾವುದೇ ಒಂದು action plan ಅನ್ನು ಯೋಜನೆಯನ್ನು ರೈತರು ಆರ್ಥಿಕವಾಗಿ ಮುಂದೆ ಬರಲಿಕ್ಕೆ ಒಂದು ಯೋಜನೆ ಹಾಕಿಕೊಳ್ಳದೆ ಇದ್ದರೆ ಎಷ್ಟೇ discussion ಮಾಡಿದರೂ ಅಷ್ಟೆ. ಹೌಸ್‌ನಲ್ಲಿ ಎಷ್ಟೇ ಚರ್ಚೆ ಮಾಡಿದರೂ ಪ್ರಯೋಜನ ಆಗಲಾರದು. ಆದ್ದರಿಂದ ನಾನು ಕಡ್ಡಾಯವಾಗಿ ಹೇಳುವುದು ಇಷ್ಟೆ. ಏನು ಈ ರಾಜ್ಯ ಸರ್ಕಾರ ರೈತರನ್ನು ಮುಂದೆ ತರಬೇಕು. ರೈತರಿಗೆ ಪ್ರೋತ್ಸಾಹ ನೀಡಬೇಕು. ರೈತರ ಬೆಳೆಗೆ ಏನಾದರೂ ತೊಂದರೆ ಆದ ತಕ್ಷಣ ಅವರಿಗೆ ಪರಿಹಾರ ನೀಡಿ ರಕ್ಷಣೆ ನೀಡಬೇಕು. ನಾನು ಬಜೆಟ್ ಬುಕ್‌ನಲ್ಲಿ ನೋಡಿದ್ದೇನೆ. ಪ್ರತಿ ಬಜೆಟ್ ಬುಕ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೌಸ್‌ನಲ್ಲಿ ಹೇಳುತ್ತಾರೆ, ನಾವು ರೈತರ ಪರವಾಗಿದ್ದೇವೆ. ರೈತರಿಗೆ ಕಷ್ಟ ಆದರೆ ನಾವು ಭಾಗಿಗಳಾಗಲಿಕ್ಕೆ ಸಿದ್ಧರಿದ್ದೇವೆ ಎಂದು ಹೇಳುತ್ತಾರೆ. ಆದರೆ ನಾವು ಹೇಳುವುದು ಇಷ್ಟೆ, ಒಂದು ಲಕ್ಷ ಎಕರೆ ಭೂಮಿಯಲ್ಲಿ ಬೆಳೆದ ಆಲೂಗಡ್ಡೆ ಬೆಳೆ ಸಂಪೂರ್ಣವಾಗಿ ನಾಶವಾದಾಗ ನಮ್ಮ ಕಷ್ಟಕ್ಕೆ ಬಂದು ಭಾಗಿ ಆಗಲಿಲ್ಲ. ಸುಮ್ಮನೆ ಬುಕ್‌ನಲ್ಲಿ ಹೇಳಿಕೊಂಡು ಹೋಗುವುದು, ಪ್ರತಿನಿತ್ಯ ಪೇಪರ್‌ನಲ್ಲಿ ಹೇಳಿಕೊಂಡು ಹೋಗುವುದು, ಇದು ಏನೂ ಪ್ರಯೋಜನ ಆಗಲಾರದು. ಮೊದಲು ಸರ್ಕಾರಕ್ಕೆ ಮನಸ್ಸು ಇರಬೇಕು. ರೈತರ ಪರವಾಗಿದ್ದೇವೆ, ರೈತರಿಗೆ ಸಹಾಯ ಮಾಡುತ್ತೇವೆ, ರೈತರನ್ನು ಆರ್ಥಿಕವಾಗಿ ಮುಂದೆ ತರುತ್ತೇವೆ, ರೈತರ ಸಹಾಯಕ್ಕೆ ನಾವು ಆಗುತ್ತೇವೆಂದು ಹೇಳಿ, ಸರ್ಕಾರಕ್ಕೆ ಆ ಒಂದು ಮನಸ್ಸು ಎಂದು ಇದ್ದರೆ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ. ನಾನು ಈ ಸಂದರ್ಭದಲ್ಲಿ ಹೇಳುವುದು ಇಷ್ಟೆ. ಸರ್ಕಾರ ಮನಸ್ಸು ಮಾಡಬೇಕು. ರೈತರ ಕಷ್ಟಕ್ಕೆ ನಾವು ಆಗುತ್ತೇವೆಂದು ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡಿದರೆ

ಆ ಕೆಲಸ ಆಗುತ್ತದೆ ಎಂದು ಒಂದು ವಿಚಾರವನ್ನು ಹೇಳುತ್ತಾ, ತುಂಬ ಜನ ರೈತರು ಇನ್‌ಶೂರೆನ್ಸ್ ಕಂಪನಿಗಳಿಗೆ ಹಣವನ್ನು ಕಟ್ಟಿದ್ದಾರೆ. ಯಾವ ಬೆಂಬಲ ಬೆಲೆ ಕೂಡ ರೈತರಿಗೆ ದೊರೆತಿಲ್ಲ. ಇನ್ನು ಗ್ರಾಮೀಣಾಭಿವೃದ್ಧಿ ಬಗ್ಗೆ ಹೇಳಬೇಕೆಂದರೆ, ಬಜೆಟ್ ಬುಕ್‌ನಲ್ಲಿ ಇರುವುದೇ ಒಂದು ಫಿಗರ್, ಲೋಕೋಪಯೋಗಿ ಇಲಾಖೆಗೆ ನನ್ನ ತಾಲ್ಲೂಕಿಗೆ ಇದುವರೆಗೆ ಎರಡು ಕೋಟಿ ರೂ. ಕೊಟಿದ್ದಾರೆ. ನಮಗೆ ಇರುವುದು 300 ಕಿ.ಮಿ. ಈ ವರ್ಷ 2009–10ನೇ ಸಾಲಿನಲ್ಲಿ ಎರಡು ಕೋಟಿ ರೂ.ಗಳಲ್ಲಿ 300 ಕಿ.ಮೀ. ನೀನು ಮೆಯಿನ್‌ಟೈನ್ ಮಾಡು ಎಂದರೆ, ಈಗಾಗಲೇ ಸೆಪ್ಟೆಂಬರ್ ತಿಂಗಳು ಅರ್ಧ ವರ್ಷ ಮುಗಿದೇ ಹೋಯಿತು. ಅವರು ಏನೇ ಹಣ ಕೊಡುವುದಿದ್ದರೂ ಸಹ ಈ ಅವಧಿ ಒಳಗೆ ಅವರು ಮಾಡಿಕೊಳ್ಳಬೇಕು. ಹೋದ ಸಾರಿ ಅವರು ಇಟ್ಟಂತಹ ಅಮೌಂಟ್‌ನಲ್ಲಿ 7 ರಿಂದ 8 ಸಾವಿರ ಕೋಟಿ ರೂ. ಕೊರತೆ ಬಿದ್ದಿದೆ. ಅಭಿವೃದ್ಧಿ ಕೆಲಸಗಳೆಲ್ಲವೂ ಹಿಂದೆ ಬಿದ್ದಿವೆ. 2009–10ರಲ್ಲಿ ಮೈನರ್ ಇರಿಗೇಷನ್‌ಗೆ ಒಂದು ರೂಪಾಯಿಯೂ ಕೊಟ್ಟಿಲ್ಲ. ಒಂದು ರೂ. ನಿಗದಿ ಮಾಡಿ ಇನ್ನೂ ಆರ್ಡರ್ಸ್ ಆಗಿಲ್ಲ. ನಾವು ಪ್ರಧಾನ ಕಾರ್ಯದರ್ಶಿಗಳನ್ನು ಹಾಗೂ IAS ಅಧಿಕಾರಿಗಳನ್ನು ಕೇಳಿದರೆ ಈ ವರ್ಷ ಹಣ ಬರುವುದು ಡೌಟ್ ಇದೆ, ಸರ್ಕಾರ ಇಕ್ಕಟ್ಟಿನ ಪರಿಸ್ಥಿತಿಯಲ್ಲಿದೆ. ಸರ್ಕಾರಕ್ಕೆ ಹಣದ ಕೊರತೆ ಇದೆ ಎನ್ನುವ ವಿಚಾರವನ್ನು ಹೇಳುತ್ತಾರೆ. ನಾನು ಈ ಸಂದರ್ಭದಲ್ಲಿ ಹೇಳುವುದು ಇಷ್ಟೆ, ಈ ವರ್ಷ ಬಜೆಟ್ ಬುಕ್‌ನಲ್ಲಿಯೂ ಸಹ ಮೊದಲನೇ ಪೇಜ್‌ನಲ್ಲಿಯೇ ಹೇಳಿದ್ದಾರೆ. ಆರ್ಥಿಕ ಹಿಂಜರಿತ ಇರುವುದರಿಂದ ಸರ್ಕಾರಕ್ಕೆ ಸಂಪೂರ್ಣವಾದ ಬಜೆಟ್‌ನಲ್ಲಿ ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಹಣವನ್ನು ನಿಗಧಿ ಮಾಡಿದೆಯೋ ಆ ಹಣವನ್ನು ಕೊಡಲಿಕ್ಕೆ ಸರ್ಕಾರಕ್ಕೆ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಯೋಜನೆ ಮತ್ತು ಯೋಜನೇತರ ಏನು ಮಾಡಿದ್ದಾರೆ, 58,000 ಕೋಟಿ ರೂ. ಗಳಲ್ಲಿ ಸರ್ಕಾರಕ್ಕೆ 9,000 ಕೋಟಿ ರೂ. ಕೊರತೆ ಆಗುತ್ತದೆ. ಅದನ್ನು ಯಾವ ರೀತಿಯಲ್ಲಿ ತುಂಬುತ್ತಾರೊ ಗೊತ್ತಿಲ್ಲ. 9,000 ಕೋಟಿ ರೂ.ಗಳ ಅಭಿವೃದ್ಧಿ ಹಿಂದೆ ಬೀಳುತ್ತದೆ. ಮೈನರ್ ಇರಿಗೇಷನ್ ಇರಬಹುದು, PWD ಇರಬಹುದು, ಗ್ರಾಮೀಣಾಭಿವೃದ್ಧಿ ಇರಬಹುದು, ZP ಇರಬಹುದು, ಜಿಲ್ಲಾ ಪಂಚಾಯಿತಿಯವರಿಗೆ ಕೇಳಿದರೆ, ಜಿಲ್ಲಾ ಪಂಚಾಯಿತಿಯವರು ಯಾವ action plan ಈ ಸಾರಿ ಮಾಡಿಲ್ಲ. ಹೋದ ವರ್ಷದ action planಗೆ ಅದೇ ಕಾಮಗಾರಿಯನ್ನು

ಮುಂದುವರೆಸುತ್ತಾರೆ. ಈ ವರ್ಷ ಯಾವುದೇ ಹೊಸ action plan ಮಾಡಿಲ್ಲವೆಂದು ಜಿಲ್ಲಾ ಪಂಚಾಯಿತಿಯವರು ಹೇಳುತ್ತಾರೆ. ಗ್ರಾಮೀಣಾಭಿವೃದ್ಧಿಯನ್ನು ಮಾಡಬೇಕಾದರೆ ಅಭಿವೃದ್ಧಿ ಕೆಲಸಕ್ಕೆ 28,000 ಕೋಟಿ ರೂ. ಕೊಡುತ್ತೇವೆಂದು ಬಜೆಟ್ ಬುಕ್‌ನಲ್ಲಿ ಏನು ನಿಗಧಿ ಪಡಿಸಿದ್ದಾರೋ ಅದನ್ನು ಕಡ್ಡಾಯವಾಗಿ ಕೊಡಬೇಕು. ಯಾವ ರೂಪದಲ್ಲಾದರೂ ತರಬೇಕು. ನಬಾರ್ಡ್‌ನಿಂದಲಾದರೂ ತನ್ನಿ. ಯಾವುದಾದರೂ ರೂಪದಲ್ಲಿ ತಂದು ಕೊಟ್ಟರೆ ಗ್ರಾಮೀಣಾಭಿವೃದ್ಧಿ ಕೆಲಸ ಸ್ವಲ್ಪ ಮಟ್ಟಿಗೆ ಆಗುತ್ತದೆ ಹೊರತು ಯಾವ ಕಾರಣಕ್ಕೂ ಸಹ ಗ್ರಾಮೀಣಾಭಿವೃದ್ಧಿ ಕೆಲಸ ಆಗುವುದಿಲ್ಲ, ನಾವು ಈ ತರಹ ಹೌಸ್‌ಗೆ ಬರುತ್ತಿರುತ್ತೇವೆ. ರೈತರು ಕೆಲಸ ಕೇಳುತ್ತಿರುತ್ತಾರೆ, ನಾವು ಸುಳ್ಳು ಹೇಳಿಕೊಂಡು ಐದು ವರ್ಷ ಕಾಲವನ್ನು ಕಳೆಯುತ್ತೇವೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದು ಆಗಬೇಕೆಂದರೆ ಸರ್ಕಾರ ಮನಸ್ಸು ಮಾಡಬೇಕು.

ಅಧ್ಯಕ್ಷರು : ಮಾನ್ಯ ರುದ್ರೇಶ್‌ಗೌಡರೇ, ಟೈಮ್ ಲಿಮಿಟೇಷನ್ ಹಾಕಿಕೊಳ್ಳದೆ ಇದ್ದರೆ ಸಾಯಂಕಾಲ 6 ರಿಂದ 8 ಗಂಟೆ ಆದರೂ ಮುಗಿಯುವುದಿಲ್ಲ. 10–10 ನಿಮಿಷ ಎಂದು ಟೈಮ್ ಲಿಮಿಟೇಷನ್ ಹಾಕಿದ್ದೇನೆ. ಎಲ್ಲರೂ ಅರ್ಥ ಮಾಡಿಕೊಳ್ಳಿ ನೀವೊಬ್ಬರೇ ಮಾತನಾಡಿದರೆ ಮತ್ತೊಬ್ಬರಿಗೆ ಅವಕಾಶ ಕಡಿಮೆ ಆಗುತ್ತದೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಬರ ಎಂದು ಹೇಳಿ ನಮ್ಮ ಹಾಸನ ಜಿಲ್ಲೆಗೆ ಹೆಚ್ಚುವರಿ ಬೆಳೆಗೆ ಎರಡು ಕೋಟಿ ರೂ. ಕೊಟ್ಟಿದ್ದೀರಿ. ಎರಡು ಕೋಟಿ ರೂ.ಗಳಲ್ಲಿ ಜಿಲ್ಲಾಧಿಕಾರಿಗಳು..

ಅಧ್ಯಕ್ಷರು : ಎಲ್ಲಾ ಸದಸ್ಯರೂ ಒಂದೊಂದು ವಿಷಯವನ್ನು ಕವರ್ ಮಾಡಿ. ಎಲ್ಲರೂ ಎಲ್ಲವನ್ನೂ ಕವರ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫ್ಜಲ್‌ಪುರ) : ಮಾನ್ಯ ಅಧ್ಯಕ್ಷರೆ, ಈ ದೇಶದ ಬೆನ್ನೆಲುಬಾದ ರೈತರ ಬಗ್ಗೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ದೀರ್ಘ ವಿಚಾರ ಮಂಥನ ಮಾಡಲು ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ಅರ್ಥಪೂರ್ಣವಾದ ಮೂರು ದಿನಗಳ ಅಧಿವೇಶನವನ್ನು ಕರೆದಿದ್ದಾರೆ. ಬಹಳಷ್ಟು ಹಿರಿಯ ನಾಯಕರು ತಮ್ಮದೇ ಆದ ಅನುಭವದಲ್ಲಿ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇನ್ನು ಉಳಿದ ಸದಸ್ಯರು

ಬಜೆಟ್‌ನಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲವೆಂದು ತಮ್ಮ ಕ್ಷೇತ್ರಗಳ ಬಗ್ಗೆ ಮಾತನಾಡಿದ್ದಾರೆ. ಎಲ್ಲಾ ವಿಷಯಗಳ ಬಗ್ಗೆ ನಾನು ಹೋಗುವುದಿಲ್ಲ. ಸನ್ಮಾನ್ಯ ನಮ್ಮ ಮಾಜಿ ರಾಷ್ಟ್ರಪತಿಗಳಾದ ಡಾ: ಎ.ಪಿ.ಜೆ. ಅಬ್ದುಲ್ ಕಲಾಂರವರು ಬಂದಾಗ ಎಲ್ಲಾ ಶಾಸಕರಿಗೆ ಒಂದು ಪತ್ರವನ್ನು ಬರೆದಿದ್ದರು. ನಿಮ್ಮ ಕ್ಷೇತ್ರ ಯಾವ ರೀತಿ ಇರಬೇಕೆಂಬ ಬಗ್ಗೆ ತಮ್ಮ ಸಲಹೆಗಳನ್ನು ಕೊಡಬೇಕೆಂಬ ವಿಚಾರವನ್ನು ಪ್ರಸ್ತಾಪ ಮಾಡಿದಾಗ ನಮ್ಮದೇ ಆದ ಕೆಲವು ಅನುಭವದ ಹಿನ್ನೆಲೆಯಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಏನು ಇವತ್ತು ಈ ಪುಸ್ತಕದಲ್ಲಿ ಪ್ರಸ್ತಾಪ ಮಾಡಿದ್ದಾರೆ, ಪ್ರತಿಯೊಂದು ಹಳ್ಳಿಗೆ ಕೆರೆ ಇರಬೇಕು, ವನ ಇರಬೇಕು, ಒಳ್ಳೆಯ ಶೌಚಾಲಯಗಳು ಇರಬೇಕು, ಮತ್ತು ಶಿಕ್ಷಣ ಕಡ್ಡಾಯವಾಗಿರಬೇಕೆಂಬ ಸಲಹೆಗಳನ್ನು ನಾನು ನನ್ನದೇ ಆದ ಅನುಭವದಲ್ಲಿ ಕಳುಹಿಸಿದ್ದೆ. ನನಗೆ ಸಂತೋಷವಾಗುತ್ತಿದೆ, ಆ ಒಂದು ಸಮಾರಂಭದಲ್ಲಿ ನಮ್ಮ ಸಲಹೆಗಳನ್ನು ಅವರು ಪ್ರಸ್ತಾಪ ಮಾಡಿ ಮಾನ್ಯ ಮಾಲೀಕಯ್ಯ ಗುತ್ತೇದಾರ್‌ರವರು ಕಳುಹಿಸಿದಂತಹ ಸಲಹೆಗಳನ್ನು ತಾವು ಫಾಲೋ ಮಾಡಬೇಕು ಎನ್ನುವಂತಹ ಸಂದೇಶವನ್ನು ಅನೇಕ ಸದಸ್ಯರಿಗೆ ಹೇಳಿದರು. ನಾನೇನು ಬಹಳ ದೊಡ್ಡ ಅನುಭವಿ ಎಂದು ಮಾತನಾಡುತ್ತಿಲ್ಲ. ವಸ್ತು ಸ್ಥಿತಿ ಬಗ್ಗೆ ನಾನು ಮಾತನಾಡಿದೆ. ಹಿಂದೆ ನಮ್ಮ ಹಳ್ಳಿಗಳಲ್ಲಿ ಕೆರೆ ಇರುತ್ತಿದ್ದವು. ಕೆರೆ ನೀರು ತುಂಬಿದಾಗ ಇಡೀ ಗ್ರಾಮದ ಜನ ಹೋಗಿ ಬಾಗಿನ ಅರ್ಪಣೆ ಮಾಡಿ ಪೂಜೆ ಮಾಡಿ ಬರುತ್ತಿದ್ದರು. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಅಂತರ್ಜಲ ಬಹಳ ಚೆನ್ನಾಗಿ ಇರುತ್ತಿತ್ತು. ಆದರೆ ನಾವು ಕೆರೆಗಳನ್ನು ಒತ್ತುವರಿ ಮಾಡಿ ಮನೆಗಳನ್ನು ಕಟ್ಟುವುದರ ಮುಖಾಂತರ ಕೆರೆಗಳನ್ನು ನಾಶ ಮಾಡಿದ್ದೇವೆ. ಪುನಃ ಕೆರೆಗಳನ್ನು ಕಟ್ಟಬೇಕೆಂದು ನಾನು ಆ ಸಂದರ್ಭದಲ್ಲಿ ಸಲಹೆಯನ್ನು ಕೊಟ್ಟಿದ್ದೆ. ಜೊತೆಗೆ ಹಿಂದೆ ನಮ್ಮದೇವರು ನಮ್ಮ ರೈತರಿಗೆ ಅನುಕೂಲ ಆಗತಕ್ಕಂತಹ ರೀತಿಯಲ್ಲಿ ಹಲವಾರು ರೀತಿಯ ಒಂದು ಸೃಷ್ಟಿಯನ್ನು ರೂಪಿಸಿದ್ದಾನೆ. ಉದಾಹರಣೆಗೆ, ನಾವು ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿ ಬೆಳೆಯನ್ನು ಹೆಚ್ಚಿಗೆ ಬೆಳೆಯುತ್ತೇವೆ. ನಮ್ಮ ಜವಾರಿ ತೊಗರಿ ಬೆಳೆಗೆ ಇರುವೆಗಳು ಇರುತ್ತಿದ್ದವು. ಆ ಇರುವೆಗಳು ಎಲ್ಲಿಂದ ಬರುತ್ತಿದ್ದವೊ ಗೊತ್ತಿಲ್ಲ. ಅದರ ಸಿಹಿ ತಿನ್ನಲಿಕ್ಕೆ ಬರುತ್ತಿದ್ದವು. ಆ ಇರುವೆಗಳು ತೊಗರಿ ಕಾಯಿ ತಿನ್ನತಕ್ಕಂತಹ ಹುಳುಗಳನ್ನು ತಿನ್ನುತ್ತಿದ್ದವು. ಆ ಹುಳುಗಳನ್ನು ತಿಂದು ನಮ್ಮ ತೊಗರಿ ಬೆಳೆಯನ್ನು ರಕ್ಷಣೆ ಮಾಡುತ್ತಿದ್ದವು. ಇದು ದೇವರ ಸೃಷ್ಟಿ. ಈಗ ನಾವು ಕೆಮಿಕಲ್ ತಂದು ಹೊಡೆದು ಆ ಇರುವೆಗಳನ್ನು ಕೊಲ್ಲುತ್ತಿದ್ದೇವೆ. ಆ

ಹುಳುಗಳು ತೊಗರಿ ತಿನ್ನಲಿಕ್ಕೆ ಅನುಕೂಲ ಮಾಡಿಕೊಡುತ್ತಿದ್ದೇವೆ. ಅದಕ್ಕಾಗಿ ಹಳೆಯ ಪದ್ಧತಿಗೆ ಹೋಗಬೇಕೆಂಬ ಸಲಹೆಯನ್ನು ನಾನು ಆ ಸಂದರ್ಭದಲ್ಲಿ ಕೊಟ್ಟಿದ್ದೆ. ದೇವರಿಗಿಂತ ನಾವು ಯಾರೂ ದೊಡ್ಡವರಲ್ಲ. ನಮ್ಮ ಈ ಒಂದು ಪ್ರದೇಶದಲ್ಲಿರತಕ್ಕಂತಹ ದನಕರುಗಳು ಕುರಿಗಳನ್ನು ನೋಡಿ. ಹಿಮಾಚಲ ಪ್ರದೇಶದಲ್ಲಿರತಕ್ಕಂತಹ ದನಕರುಗಳು ಹಾಗೂ ಕುರಿಗಳನ್ನು ನೋಡಿ. ಇಲ್ಲಿ ವಾತಾವರಣ ಬೇರೆ. ಅಲ್ಲಿಯ ವಾತಾವರಣಕ್ಕೆ ತಕ್ಕ ಹಾಗೆ ದೇವರು ಸೃಷ್ಟಿ ಮಾಡಿದ್ದಾನೆ. ನಾವು ದೇವರನ್ನೇ ಓವರ್ ಟೇಕ್ ಮಾಡತಕ್ಕಂತಹ ರೀತಿಯಲ್ಲಿ ಕೆಲವು ಸಾಧನೆಗಳನ್ನು ಮಾಡಿ ಕೆಲವೊಂದು ಎಡವಿದ್ದೇವೆ. ಪುನಃ ಈಗ ಮತ್ತೆ ಸಾವಯವ ಪದ್ಧತಿಗೆ ಹೋಗತಕ್ಕಂತಹ ವಿಚಾರಗಳನ್ನು ನಮ್ಮ ಹಿಂದಿನ ಕೃಷಿ ಸಚಿವರಾದ ಮಾನ್ಯ ಟಿ.ಬಿ. ಜಯಚಂದ್ರರವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಜೊತೆಗೆ ಮಾನ್ಯ ಸಿ.ಟಿ. ರವಿಯವರು ಕೂಡ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ನಾಡಗೌಡರು ಕೂಡ ಮಾತನಾಡಿದ್ದಾರೆ. ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ತಮ್ಮ ಅಮೂಲ್ಯವಾದ ಸಮಯವನ್ನು ಹಾಳು ಮಾಡದೆ, ಅನೇಕ ಸದಸ್ಯರು ಮಾತನಾಡಲಿ, ಒಳ್ಳೆಯ ವಿಷಯಗಳನ್ನು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಎಲ್ಲರ ಸಲಹೆಗಳನ್ನು ಸ್ವೀಕರಿಸಿ ಗ್ರಾಮಪಂಚಾಯಿತಿಗಳಿಗೆ ಬೇಕಾದ ಪ್ರಾಮಾಣಿಕ ಸಿಬ್ಬಂದಿ ಕೊರತೆ ಮತ್ತು ಪಂಚಾಯಿತಿಗಳಿಗೆ ಹೆಚ್ಚಿನ ಒತ್ತನ್ನು ಕೊಡತಕ್ಕಂತಹ ರೀತಿಯಲ್ಲಿ ಅದರ ಬಗ್ಗೆ ಮುತುವರ್ಜಿ ವಹಿಸಿ ಮಾನ್ಯ ಮುಖ್ಯ ಮಂತ್ರಿಗಳು ಕಾರ್ಯಕ್ರಮವನ್ನು ರೂಪಿಸಿದರೆ ಖಂಡಿತವಾಗಿ ನಮ್ಮ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಆಗುತ್ತದೆ. ಮಾನ್ಯ ಅಭಯ ಪಾಟೀಲರ ಬೆಳಗಾಂ ಜಿಲ್ಲೆಗೆ ನಾನೂ ಕೂಡ ಹೋಗಿದ್ದೆ. ಅಲ್ಲಿ ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ. ಗ್ರಾಮದ ಜನರ ಸಹಕಾರದೊಂದಿಗೆ ಒಳ್ಳೆಯ ಒಂದು ಮಾದರಿ ಗ್ರಾಮವಾಗಿ ಅವರು ನಿರ್ಮಾಣ ಮಾಡಿದ್ದಾರೆ. ಅನೇಕ ಜನರು ಅಲ್ಲಿ ಸಹಕಾರ ಕೊಟ್ಟಿದ್ದಾರೆ.

(1-00 PM)

ಆದರೆ ಅಲ್ಲಿ ಜನರು ಆರ್ಥಿಕವಾಗಿ ಮುಂದೆ ಬರುವುದಕ್ಕೆ ಆರ್ಥಿಕ ಸಹಾಯದ ಕೊರತೆ ಇದೆ. ಅದರ ಬಗ್ಗೆ ಕೂಡ ಅಭಯಪಾಟೀಲ್‌ರವರು ಮಾತನಾಡಿದಾಗ ಇಲ್ಲಾ ಆರ್ಥಿಕ ಸಹಾಯವನ್ನು ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಸರ್ಕಾರವದರು ಹೇಳಿದ್ದೀರಿ. ಹೈನುಗಾರಿಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಮುಖಾಂತರ ರೈತ ಮುಂದೆ ಬರಬೇಕು.

ಏಕೆಂದರೆ ರೈತ ಕೇವಲ ಬೆಳೆಯ ಅವಲಂಬನದ ಮೇಲೆಯೇ ಇರದೆ ಬೇರೆ ಬೇರೆ ರೈತರಿಗೆ ಸಂಬಂಧಪಟ್ಟಂತೆ ಇನ್ನುಳಿದಿರುವ ಆರ್ಥಿಕವಾದ ಕೆಲವೊಂದು ಯೋಜನೆಗಳಿಗೆ ಹೊಂದಿಕೊಂಡರೆ ರೈತ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ಬೆಳೆ ವಿಮೆ ಬಗ್ಗೆ ಹಲವಾರು ಸದಸ್ಯರುಗಳು ಮಾತನಾಡಿದ್ದಾರೆ. ರೈತ ಇವತ್ತು ಸಮೃದ್ಧವಾಗಿ ಬದುಕಬೇಕಾದರೆ ಕಡ್ಡಾಯವಾಗಿ ನಾವು ಎಲ್ಲಾ ಬೆಳೆಗಳಿಗೆ ವಿಮೆಯನ್ನು ಮಾಡಿಸತಕ್ಕಂಥ ಕಾರ್ಯಕ್ರಮದ ಬಗ್ಗೆ ಸರ್ಕಾರ ಮುತುವರ್ಜಿ ವಹಿಸಿದರೆ ಮಾತ್ರ ಖಂಡಿತವಾಗಿ ರೈತರು ಇಲ್ಲಿ ಸುಖವಾಗಿ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಅದರ ಬಗ್ಗೆ ವಿಶೇಷವಾಗಿ ನಮ್ಮ ಸಭಾನಾಯಕರು ಕಾರ್ಯಕ್ರಮವನ್ನು ಹಾಕುತ್ತಾರೆ ಎನ್ನುವ ವಿಶ್ವಾಸವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಟೀಕೆ ಮಾಡತಕ್ಕಂಥ ಸಂದರ್ಭ ಇದಲ್ಲ. ಏನೋ ಒಂದು ಚೈನಾ ದೇಶದ ಪ್ರವಾಸ ಮಾಡಿ ಬಂದಮೇಲೆ ನಮ್ಮ ಗ್ರಾಮೀಣ ಅಭಿವೃದ್ಧಿಯಾಗಬೇಕು, ಕೃಷಿಯ ಬಗ್ಗೆ ವಿಶೇಷವಾಗಿ ಕಾಳಜಿ ವಹಿಸಬೇಕು ಎನ್ನುವಂಥ ಒಂದು ಅತ್ಯಂತ ಅಮೂಲ್ಯವಾದಂಥ ವಿಚಾರಗಳು ನಮ್ಮ ಮುಖ್ಯಮಂತ್ರಿಯವರಿಂದ ಬಂದಾಗ ನಾವೆಲ್ಲಾ ಸದಸ್ಯರುಗಳು ಈಗಾಗಲೇ ಸಹಕಾರವನ್ನು ಕೊಡುತ್ತಿದ್ದೇವೆ. ಮುಂದೆ ನೋಡೋಣ. ನಮ್ಮ ಸಲಹೆ, ಸಹಕಾರಗಳನ್ನು ಸ್ವೀಕರಿಸಿದ ಮೇಲೆ ಮುಖ್ಯಮಂತ್ರಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಿದರೆ ನಾವೆಲ್ಲರೂ ಅದನ್ನು ಸ್ವಾಗತ ಮಾಡುತ್ತೇವೆ. ಪರಿಣಾಮಕಾರಿಯಾಗಿ ಕೆಲಸ ಮಾಡದೇ ಹೋದರೆ ಕೇವಲ ನೀವು ನಾಟಕ ಮಾಡಿದಿರಿ ಎನ್ನುವಂಥ ಮಾತನ್ನು ವಿರೋಧ ಪಕ್ಷದಲ್ಲಿ ಕುಳಿತು ನಾವು ಮಾತನಾಡತಕ್ಕಂಥದ್ದು ಆಗುತ್ತದೆ. ಏಕೆಂದರೆ ನಮಗೆ ಹಕ್ಕಿದೆ. ನಾವು ಮಾತನಾಡುತ್ತೇವೆ. ಆದರೆ ಈ ಒಂದು ಸಲಹೆಗೆ ನಮ್ಮ ಸಂಪೂರ್ಣವಾದ ಬೆಂಬಲವಿದೆ. ಈ ಮೂರು ದಿವಸಗಳ ಅಧಿವೇಶನ ವೇನಿದೆ, ಒಳ್ಳೆಯ ಅರ್ಥಪೂರ್ಣವಾಗಿದೆ. ನಮ್ಮ ನಾಡಿನ ಗ್ರಾಮೀಣ ಭಾಗದ ಜನರಿಗೆ, ನಮ್ಮ ರೈತರಿಗೆ ಒಂದು ವಿಶೇಷವಾದಂಥ ಪ್ಯಾಕೇಜ್‌ನ್ನು ನಮ್ಮ ಮುಖ್ಯಮಂತ್ರಿಗಳು ಕೊಡುತ್ತಾರೆ ಎನ್ನುವ ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆಂದು ಈ ಸಂದರ್ಭದಲ್ಲಿ ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಅಧಿವೇಶನವನ್ನು ಕರೆಯುವ ಮೂಲಕ

ಒಂದು ಮಹತ್ವವಾದ ಹೆಜ್ಜೆಯನ್ನು ಇಟ್ಟಿದ್ದಾರೆಂದು ಹೇಳುತ್ತೇನೆ. ಈ ಒಂದು ಸದನದಲ್ಲಿ ವಿಚಾರ ಮಾಡಿರುವುದೇನಿದೆ, ಇದು ದೇಶಕ್ಕೇ ಮಾದರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ವಿಶೇಷ ಅಧಿವೇಶನ ದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಕೆಲವೊಂದು ವಿಚಾರಗಳನ್ನು ಸದನದ ಗಮನಕ್ಕೆ ತಂದರು. ಅದರಲ್ಲಿ ಅತಿವೃಷ್ಟಿ ಮತ್ತು ಬರದ ಬಗ್ಗೆ ಹೆಚ್ಚು ಒತ್ತು ಕೊಟ್ಟು ಹೇಳಿದ್ದಾರೆ. ನನ್ನ ಕ್ಷೇತ್ರ ಅತಿವೃಷ್ಟಿಯಲ್ಲಿ ಬರುತ್ತದೆ. ಈಗಾಗಲೇ ನಮ್ಮ ಮುಖ್ಯಮಂತ್ರಿಗಳು ಅತಿವೃಷಿ ಪ್ರದೇಶಕ್ಕೆ ಹೆಚ್ಚು ಒತ್ತನ್ನು ಕೊಟ್ಟಿದ್ದಾರೆ. ಅತಿವೃಷ್ಟಿ ಪ್ರದೇಶಗಳಲ್ಲಿ ಸೇತುವೆಗಳನ್ನು ಕಟ್ಟಲು 25 ಕೋಟಿ ರೂ.ಗಳನ್ನು ಖರ್ಚು ಮಾಡಿ ವಿದ್ಯಾರ್ಥಿಗಳು ಮತ್ತು ಜನರು ಸಂಚರಿಸಲು ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಇನ್ನೂ ಕೂಡ ಹೆಚ್ಚು ಕೆಲಸವನ್ನು ಈ ನಿಟ್ಟಿನಲ್ಲಿ ಮಾಡಬೇಕೆಂದು ಸದನದ ಮೂಲಕ ಹೇಳಬಯಸುತ್ತೇನೆ. ಇವತ್ತು ಚಿಕ್ಕಮಗಳೂರು ಮತ್ತು ಕೊಡಗಿನ ಭಾಗಮಂಡಲ, ಮೂಡಿಗೆರೆ, ಕೊಟ್ಟಿಗೆ ಮತ್ತು ಆಗುಂಬೆ ಎನ್ನುವ ಭಾಗಗಳೇನಿವೆ, ಅವೆಲ್ಲವುಗಳೂ ಕೂಡ ಅತ್ಯಂತ ಅತಿವೃಷ್ಟಿ ಪ್ರದೇಶಗಳಾಗಿವೆ. ಇದುವರೆವಿಗೂ ಯಾವುದೇ ಸರ್ಕಾರಗಳೂ ಕೂಡ ಆ ಭಾಗಗಳ ಬಗ್ಗೆ ಗಮನವನ್ನು ಕೊಟ್ಟಿಲ್ಲ. ಅಲ್ಲಿ ಬೆಳೆ ಹೇಗಿದೆ, ಅತಿವೃಷ್ಟಿ ಹೇಗಿದೆ, ಅಲ್ಲಿ ಯಾವ ಸಮಯದಲ್ಲಿ ಬೆಳೆಯನ್ನು ಬಿತ್ತಬೇಕು, ಅಲ್ಲಿ ಯಾವ ಬೆಳೆ ಬರುತ್ತದೆ ಎಂಬ ವಿಚಾರಗಳ ಬಗ್ಗೆ ಇದುವರೆವಿಗೂ ಕೂಡ ಯಾವುದೇ ಸರ್ಕಾರಗಳು ಕೂಡ ಗಮನವನ್ನು ಕೊಟ್ಟಿಲ್ಲ. ಹೀಗಾಗಿ ಇನ್ನು ಮುಂದಾದರೂ ಕೂಡ ಅತಿವೃಷ್ಟಿ ಪ್ರದೇಶಗಳ ಬಗ್ಗೆ ಸಮೀಕ್ಷೆಯಾಗಬೇಕು ಮತ್ತು ಅಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು ಎಂಬ ಬಗ್ಗೆ ಸಮೀಕ್ಷೆಯಾಗಬೇಕು ಎಂದು ಹೇಳಿ ನಾನು ಒತ್ತಾಯವನ್ನು ಮಾಡುತ್ತೇನೆ. ಇವತ್ತು ಅತಿವೃಷ್ಟಿ ಪ್ರದೇಶಗಳಲ್ಲಿ ಬೆಳೆ ಬೆಳೆಯುವ ಬಗ್ಗೆ ವೈಜ್ಞಾನಿಕವಾದ ದೃಷ್ಟಿ ಇರಬೇಕಾದ ಅಗತ್ಯವಿದೆ. ಇಲ್ಲಿ ಕೆಲವು ಕಡೆ ಕಾಫಿಯನ್ನು ಬೆಳೆಯಲಾಗುತ್ತದೆ. ಈಗ ಅತ್ಯಂತ ಮಳೆಯಿಂದಾಗಿ ಈ ಬೆಳೆ ಕೊಚ್ಚಿಕೊಂಡು ಹೋಗಿ ಎಲ್ಲವೂ ಉದುರಿ ಹೋಗಿವೆ. ಆದುದರಿಂದ ಇದಕ್ಕೆ ಪರಿಹಾರ ಸಿಗಬೇಕಾಗಿದೆ. ಬೆಳೆ ವಿಮೆಯನ್ನು ಜಾರಿಗೆ ತರಬೇಕು ಎಂಬುದೇ ನನ್ನ ಮುಖ್ಯ ಉದ್ದೇಶವಾಗಿದೆ. ಇನ್ನು ರಸ್ತೆಗಳ ಬಗ್ಗೆ ಹೇಳಬೇಕೆಂದರೆ ಬೆಂಗಳೂರು ಮತ್ತು ಕೋಲಾರದಲ್ಲಿ ಮಾಡಿರುವಂತೆ ರಸ್ತೆಗಳನ್ನು ಕೊಡಗಿನಲ್ಲಿ ಮತ್ತು ಚಿಕ್ಕಮಗಳೂರಿನಲ್ಲಿ ಅದೇ ಗುಣಮಟ್ಟದಲ್ಲಿ ಮಾಡಿ ಎಂದರೆ ತಪ್ಪಾಗುತ್ತದೆ. ನಮ್ಮ ಬಾಲಕೃಷ್ಣರವರು ಮಾತನಾಡುತ್ತಾ

ಗ್ರಾಮಾಂತರ ನಿಗಮವೆಂದೇ ಮಾಡಬೇಕೆಂದು ಹೇಳಿದರು. ಇವತ್ತು ಒಂದು ಸಾವಿರ ಸೆಂಟಿಮೀಟರ್ ಇರುವಂಥ ಒಂದು ಪ್ರದೇಶದಲ್ಲಿ ಬೆಂಗಳೂರು ಮಹಾನಗರದಲ್ಲಿ ಮಾಡಿರುವಂತೆ ರಸ್ತೆಗಳನ್ನು ಮಾಡಿದರೆ ಹೇಗಿರಬಹುದು ಎನ್ನುವ ಬಗ್ಗೆ ಕೂಡ ನಾವು ಚಿಂತನೆಯನ್ನು ಮಾಡಬೇಕಾಗುತ್ತದೆ. ಅಲ್ಲಿ ಸಾರಿಗೆ ನಿಗಮ ಆಗಬೇಕೆಂದರೆ ರಸ್ತೆಯ ಗುಣಮಟ್ಟವನ್ನು ಕಾಪಾಡುವುದು ಇಂದು ಬಹಳ ಅಗತ್ಯವಿದೆ. ಈ ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಇನ್ನೊಂದು ಪ್ರಮುಖವಾದ ವಿಚಾರವನ್ನು ಸದನದ ಗಮನಕ್ಕೆ ತರುವುದೇನೆಂದರೆ, ಪಾರ್ಲಿಮೆಂಟ್ ಹಾಗೂ ವಿಧಾನಸಭೆ ಕ್ಷೇತ್ರಗಳ ವಿಚಾರದಲ್ಲಿ ಡೀ–ಲಿಮಿಟೇಶನ್ ಆಯಿತು. ಆ ಸಂದರ್ಭದಲ್ಲಿ ಹೆಚ್ಚಿನ ಜನರ ಕೂಗು ಏನಿತ್ತೆಂದರೆ ಕ್ಷೇತ್ರದ ವಿಂಗಡಣೆಯನ್ನು ಮಾಡಿದರೆ ಗ್ರಾಮಾಂತರದವರು ಅನುದಾನ ವಂಚಿತರಾಗುತ್ತಾರೆ ಎನ್ನುವ ಮಾತು ಬಂದಿತ್ತು. ಅದು ಇಂದು ಸತ್ಯವಾಗಿದೆ. ಇವತ್ತು ಒಂದು ವಿಧಾನಸಭೆ ಕ್ಷೇತ್ರ ಕೆಲವು ಕಡೆ 152 ಕಿ.ಮೀ. ಇದೆ. ಕೆಲವು ಕಡೆಗಳಲ್ಲಿ 200 ಕಿ.ಮೀ. ಇದೆ. ಕೆಲವು ಕಡೆ 210 ಕಿ.ಮಿ. ಇದೆ. ಇನ್ನೂ ಕೆಲವು ವಿಧಾನಸಭೆ ಕ್ಷೇತ್ರಗಳು ಹತ್ತು ಕಿ.ಮೀ., ಐದು ಕಿ.ಮೀ. ಗಳದ್ದಾಗಿದೆ. ಹೀಗಾದಾಗ ಅನುದಾನ ತಾರತಮ್ಯವಾಗುತ್ತದೆ. ಎಲ್ಲ ಶಾಸಕ ಕ್ಷೇತ್ರಗಳಿಗೂ ಒಂದು ಕೋಟಿ ರೂ.ಗಳನ್ನು ಕೊಡುವುದು ತಪ್ಪು. ಕೆಲವರಿಗೆ 50 ಲಕ್ಷ ರೂ.ಗಳನ್ನು ಮಾತ್ರ ಕೊಡಬೇಕು ಅಥವಾ ಇನ್ನೂ ಜಾಸ್ತಿ ಮಾಡಿ. ನಮಗೆ ಒಂದು ಕೋಟಿ ಕೊಡುತ್ತೀರಿ. ಆದರೆ ನಮ್ಮ ಭಾಗಕ್ಕೆ ಎರಡು ಕೋಟಿ ರೂ.ಗಳನ್ನು ಕೊಡಬೇಕು. 152 ಕಿ.ಮೀ. ವ್ಯಾಪ್ತಿ ಇರುವ ವಿಧಾನಸಭೆ ಕ್ಷೇತ್ರಕ್ಕೂ ಮತ್ತು ಕೇವಲ ಹತ್ತೇ ಕಿ.ಮೀ. ವ್ಯಾಪ್ತಿ ಇರತಕ್ಕಂಥ ವಿಧಾನ ಸಭೆ ಕ್ಷೇತ್ರಕ್ಕೂ ಒಂದೇ ರೀತಿ ನೋಡಿದರೆ ಅದು ತಾರತಮ್ಯವಾಗುವುದಿಲ್ಲವೆ ಹೇಳಿ. ದಯವಿಟ್ಟು ಇದನ್ನು ಸರಿಪಡಿಸಬೇಕು. ಜಿಲ್ಲಾ ಪಂಚಾಯತಿ ಇರಬಹುದು ಅಥವಾ ವಿಧಾನಸಭೆ ಕ್ಷೇತ್ರವಿರಬಹುದು. ನೀವು ಕಿ.ಮೀ. ಆಧಾರದ ಮೇಲೆ ಅನುದಾನವನ್ನು ಕೊಡಿ. ಅದನ್ನು ಬಿಟ್ಟು ಈಗಿರುವಂತೆ ಗೈಡ್‌ಲೈನ್ಸ್ ಪ್ರಕಾರ ಅನುದಾನ ಕೊಟ್ಟರೆ ಹೇಗೆ ಅಭಿವೃದ್ಧಿಯನ್ನು ಮಾಡಬೇಕು ಎನ್ನುವ ವಿಚಾರವನ್ನು ಸದನದಲ್ಲಿ ಗಂಭೀರವಾಗಿ ಪರಿಗಣಿಸಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ಗ್ರಾಮ ಪಂಚಾಯತಿ ವಿಷಯದಲ್ಲಿಯೂ ಅಷ್ಟೆ. 6 ಗ್ರಾಮಗಳನ್ನೊಳಗೊಂಡಿರುವುದಕ್ಕೂ ಒಂದು ಗ್ರಾಮ ಪಂಚಾಯತಿ ಇರುತ್ತದೆ. ಇಪ್ಪತ್ತರಿಂದ ಮೂವತ್ತು ಗ್ರಾಮಗಳನ್ನೊಳಗೊಂಡ ಒಂದು ಪಂಚಾಯತಿ ಕೂಡ ಇರುತ್ತದೆ. ಏಕೆ ನೀವು

ನಲವತ್ತೇ ಮನೆಗಳನ್ನು ಕೊಡಬೇಕು? 6 ಗ್ರಾಮಗಳನ್ನೊಳಗೊಂಡ ಒಂದು ಗ್ರಾಮ ಪಂಚಾಯತಿಗೂ ಮತ್ತು 30 ಗ್ರಾಮಗಳನ್ನೊಳಗೊಂಡ ಒಂದು ಗ್ರಾಮ ಪಂಚಾಯತಿಗೂ ಅನುದಾನ ಕೊಡುವುದರಲ್ಲಿ ಸಮಾನ ಮಾಡಿದರೆ ಹೇಗೆ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಆದುದರಿಂದ ನಾನು ಹೇಳುವುದೇನೆಂದರೆ, ಇವೆಲ್ಲವೂ ಕೂಡ ಕಿ.ಮೀ. ಆಧಾರದ ಮೇಲೆ ಅನುದಾನವನ್ನು ಕೊಡಬೇಕು ಎಂದು ನನ್ನ ಒತ್ತಾಯವಾಗಿದೆ. ಇನ್ನು ಗ್ರಾಮ ಪಂಚಾಯಿತಿಯಲ್ಲಿ ಈಗ ಒಂದು ಮಹತ್ವದ ಯೋಜನೆ ಬಂದಿದೆ. ಅದರಲ್ಲಿ ಕುಡಿಯುವ ನೀರಿನ ಯೋಜನೆಗೆ ಮತ್ತು ಕೌಶಲ್ಯದ ಕೆಲಸಗಳಿಗೆ, ರಸ್ತೆಯ ಕೆಲಸಗಳಿಗೆ ಅನುದಾನ ಕೊಡಬೇಕಾದರೆ ಇರುವ ಪರ್ಸೆಂಟೇಜ್ ಏನಿದೆ, ಅದನ್ನು ಹೆಚ್ಚಿಗೆ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಹಾಗೆಯೇ ದೊಡ್ಡ ಗ್ರಾಮ ಪಂಚಾಯತಿ, ಇವತ್ತು ಕೆಲವು ಪಟ್ಟಣ ಗ್ರಾಮ ಪಂಚಾಯತಿ ಮಾಡುತ್ತೇವೆಂದರು. ಕೆಲವು ಪಟ್ಟಣ ಪಂಚಾಯತಿ ವ್ಯಾಪ್ತಿಗೂ ಬರುವುದಿಲ್ಲ, ಕೆಲವು ಗ್ರಾಮ ಪಂಚಾಯತಿ ವ್ಯಾಪ್ತಿಗೂ ಬರುವುದಿಲ್ಲ. ಅಂಥವುಗಳಿಗೆ ಅನುದಾನವನ್ನು ಜಾಸ್ತಿ ಮಾಡಬೇಕು. ಇನ್ನು ಇವತ್ತು ಗ್ರಾಮ ಪಂಚಾಯತಿಗೆ 6 ಲಕ್ಷ ರೂ.ಗಳ ಅನುದಾನವನ್ನು ಕೊಡುತ್ತೀರಿ. ಈ ಆರು ಲಕ್ಷ ಅನುದಾನದಲ್ಲಿ ಮೂರು ಲಕ್ಷ ರೂ.ಗಳನ್ನು ವಿದ್ಯುಚ್ಛಕ್ತಿ ಬಿಲ್‌ಗೆಂದು ತೆಗೆದುಕೊಂಡರೆ ಇನ್ನುಳಿದ ಮೂರು ಲಕ್ಷ ರೂ.ಗಳಲ್ಲಿ ಏನು ಅಭಿವೃದ್ಧಿ ಕೆಲಸವನ್ನು ಮಾಡುವುದಕ್ಕಾಗುತ್ತದೆ? ಇದಲ್ಲದೇ ಅದರಲ್ಲಿ ಎಸ್‌ಸಿ/ಎಸ್‌ಟಿ ಯೋಜನೆಗೆ 25 ಪರ್ಸೆಂಟ್ ಕೊಡಬೇಕು, ಅಭಿವೃದ್ಧಿಗೆ 25% ಕೊಡಬೇಕು, ಈ ರೀತಿಯಲ್ಲಿ ಮಾಡಬೇಕಾದಾಗ ಕೊಡತಕ್ಕಂಥ ಅನುದಾನದಲ್ಲಿ ಸರಿಯಾದ ರೀತಿಯಲ್ಲಿ ಹಂಚಿಕೆಯನ್ನು ಮಾಡಬೇಕಾಗುತ್ತದೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠದಿಂದ ನಿರ್ಗಮಿಸಿದರು. ಮಾನ್ಯ ಅಪ್ಪಾಜಿ ನಾಡಗೌಡರು ಅಧ್ಯಕ್ಷ ಪೀಠದಲ್ಲಿ ಕುಳಿತುಕೊಂಡು ಕಲಾಪವನ್ನು ಮುಂದುವರಿಸಿದರು)

ಈಗ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಸದನದಲ್ಲಿ ಇಲ್ಲ. ಎಲ್ಲಾ ರೀತಿಯ ಕುಡಿಯುವ ನೀರಿನ ಬಿಲ್‌ಗಳನ್ನು ಸರ್ಕಾರವೇ ಭರಿಸಬೇಕು. ಕೊಡೋ ಆರು ಲಕ್ಷ ರೂ.ಗಳಲ್ಲಿ ನೀವು ವಿದ್ಯುಚ್ಛಕ್ತಿ ಬಿಲ್‌ಗೆಂದೇ ಮೂರು ಲಕ್ಷ ರೂ.ಗಳನ್ನು ಕಟ್ ಮಾಡಿಕೊಂಡರೆ ಇವತ್ತು ಗ್ರಾಮ ಪಂಚಾಯತಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಈಗಾಗಲೇ ಟ್ಯಾಪ್ 99 ಅನ್ನು

ತುರ್ತು ಕುಡಿಯುವ ನೀರಿನ ಕಾಮಗಾರಿಗಾಗಿ ಕೊಡಬೇಕಾಗಿತ್ತು. ಆದರೆ ಟ್ಯಾಪ್ 99 ಅನ್ನು ಕ್ಯಾನ್ಸಲ್ ಮಾಡಿದ್ದಾರೆ. ದಯವಿಟ್ಟು ಪುನಃ ಅದನ್ನು ಜಾರಿಗೆ ತರಬೇಕು. ಇನ್ನು ಎಲ್ಲಾ ಕಡೆಯಲ್ಲಿಯೂ ಕೂಡ ವಿದ್ಯುಚ್ಛಕ್ತಿ ಪೂರೈಕೆಗೆ ಸಂಬಂಧಪಟ್ಟಂತೆ ಅಗತ್ಯವಿರುವ ಉಪಕರಣಗಳನ್ನೊಳಗೊಂಡ ಸ್ಟೋರ್ ಇರಬೇಕೆಂದು ಒತ್ತಾಯ ಮಾಡುತ್ತೇನೆ. ಈಗೇನಾಗಿದೆಯೆಂದರೆ ಏನೇ ಉಪಕರಣ/ವಿದ್ಯುಚ್ಛಕ್ತಿ ಸಾಮಗ್ರಿಗಳು ಬೇಕು ಎಂದರೂ ಜಿಲ್ಲಾ ಕೇಂದ್ರಕ್ಕೇ ಹೋಗಬೇಕಾಗಿದೆ. ಎಲ್ಲಾ ಕಡೆಯಲ್ಲಿಯೂ ವಿದ್ಯುಚ್ಛಕ್ತಿ ಸ್ಟೋರ್‌ಗಳಿಲ್ಲ. ಆದುದರಿಂದ ಪ್ರತಿ ವಿಧಾನಸಭಾ ಕ್ಷೇತ್ರದ ತಾಲ್ಲೂಕು ಹೆಡ್ ಕ್ವಾರ್ಟರ್‌ನಲ್ಲಿ ಈ ಸ್ಟೋರ್‌ಗಳು ಇರುವಂತೆ ಮಾಡಬೇಕು. ಈ ರೀತಿಯಾದರೆ ಮಾತ್ರ ವಿದ್ಯುತ್ ಸಂಪರ್ಕವನ್ನು ತುರ್ತಾಗಿ ಕೊಡಬಹುದೆಂದು ಹೇಳಲು ಬಯಸುತ್ತೇನೆ. ಇವತ್ತು ಎನ್‌ಆರ್‌ಇಜಿಯಲ್ಲಿ ಬಹುಶಃ ಇದಕ್ಕೆ ಸಂಬಂಧ ಪಟ್ಟಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಅಧಿಕಾರ ಇರಬಹುದು. ಇವರು ಎಂಥ ತಪ್ಪು ಮಾಡಿದ್ದಾರೆಂದರೆ ಜಿಲ್ಲಾ ಯುನಿಟ್ ಮಾಡಿದ್ದಾರೆ. ಎನ್‌ಆರ್‌ಇಜಿ ಕೆಲಸ ಮಾಡಿದರೆ ಇಡೀ ಜಿಲ್ಲೆಯಲ್ಲಿ ಸರಾಸರಿ ನೋಡಿ ಕೆಲಸ ಕೊಡುತ್ತಾರೆ. ಅದು ತಪ್ಪು. ತಾಲ್ಲೂಕು ಯೂನಿಟ್ ಮಾಡಬೇಕು. ತಾಲ್ಲೂಕಿನಲ್ಲಿ ಕೆಲಸ ನೋಡಬೇಕು. ಇವತ್ತು ಆ ಕ್ಷೇತ್ರದ ಶಾಸಕರಿರಬಹುದು, ಅಧಿಕಾರಿಗಳಿರಬಹುದು, ಚುರುಕಾಗಿ ಕೆಲಸ ಮಾಡುತ್ತಾರೆ. ಅಂಥ ತಾಲ್ಲೂಕಿಗೆ ಇವತ್ತು ವಂಚನೆಯಾಗುತ್ತಿದೆ. ನಿಮ್ಮ ಜಿಲ್ಲೆಯಲ್ಲಿ ಕೆಲಸವಾಗಿಲ್ಲ, ಯಾವುದೋ ಭಾಗದಲ್ಲಿ ಆಗಿಲ್ಲವಾದ ಕಾರಣ ನಿಮ್ಮ ತಾಲ್ಲೂಕಿಗೆ ಕೊಡುವುದಿಲ್ಲವೆನ್ನುವ ಅಭಿಪ್ರಾಯವಿದೆ. ಬಹುಶಃ ಈಗ ಇಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲ. ಅದನ್ನು ಎನ್‌ಆರ್‌ಇಜಿ ಯಲ್ಲಿ ಯಾವ ತಾಲ್ಲೂಕಿನಲ್ಲಿ ಕೆಲಸವನ್ನು ಮಾಡಿದ್ದಾರೆ, ಆ ತಾಲ್ಲೂಕಿಗೆ ಕೊಡುವಂಥ ಕೆಲಸವಾಗಬೇಕು. ನಿಮ್ಮ ಜಿಲ್ಲೆಯಲ್ಲಿ ಮಾಡಿಲ್ಲ, ಆ ಭಾಗದಲ್ಲಿ ಮಾಡಿಲ್ಲ, ಆ ಮೂಲೆಯಲ್ಲಿ ಮಾಡಿಲ್ಲವೆಂದರೆ ಅದಕ್ಕೆ ನಾವು ಜವಾಬ್ದಾರರಲ್ಲ. ನಾವು ಅಧಿಕಾರಿಗಳನ್ನು ಕಡ್ಡಾಯವಾಗಿ ನಿಲ್ಲಿಸಿ ಕೆಲಸ ಮಾಡಿಸುವಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಆದರೆ ನಮಗೆ ಇಂದಿಗೂ ಎನ್‌ಆರ್‌ಇಜಿ ಬಿಲ್‌ಗಳನ್ನು ಕೊಡುವುದಕ್ಕೆ ಆಗಿಲ್ಲ. ಈ ವ್ಯವಸ್ಥೆ ದಯವಿಟ್ಟು ತೆಗೆಯಬೇಕು. ಇದನ್ನು ಸರಿಪಡಿಸಬೇಕೆಂದು ಹೇಳಬಯಸುತ್ತೇನೆ. ಇನ್ನು ಲೋಕೋಪಯೋಗಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು ಕಡ್ಡಾಯವಾಗಿ ಅತಿವೃಷ್ಟಿ ಪ್ರದೇಶಗಳಲ್ಲಿ ರಸ್ತೆ ಸಮೀಕ್ಷೆಯನ್ನು ಮಾಡಬೇಕು. ಇದುವರೆಗೂ ಕೂಡ ಆ

ರೀತಿಯ ಕೆಲಸವಾಗುತ್ತಿಲ್ಲ. ಇನ್ನು ಮುಂದಾದರೂ ಕೂಡ ರಸ್ತೆಯ ಗುಣಮಟ್ಟದ ಬಗ್ಗೆ ಏನು ಮಾಡಬೇಕು ಎಂಬ ಬಗ್ಗೆ ಸಮೀಕ್ಷೆ ಮಾಡಬೇಕು ಎಂದು ನನ್ನ ಒತ್ತಾಯ. ಇನ್ನು ಕೆಲವು ಭಾಗಗಳಲ್ಲಿ ಸಾರಿಗೆ ವ್ಯವಸ್ಥೆಯಲ್ಲಿ ನಾನ್–ನ್ಯಾಷನಲೈಸ್ಡ್ ರಸ್ತೆಗಳು ಎಂದು ಇದೆ. ಅಲ್ಲಿ ಪ್ರೈವೇಟ್‌ನವರು ಬಸ್ ಓಡಿಸುತ್ತಾರೆ. ಈಗ ಸರ್ಕಾರದ ಸಾರಿಗೆಯಲ್ಲಿ 7 ನೇ ತರಗತಿಯವರೆವಿಗೂ ವಿದ್ಯಾರ್ಥಿಗಳಿಗೆ ಬಸ್‌ಪಾಸ್‌ನ್ನು ಫ್ರೀಯಾಗಿ ಕೊಡಲಾಗುತ್ತಿದೆ. ಆದರೆ ನಾನ್–ನ್ಯಾಷನಲೈಸ್ಡ್ ರಸ್ತೆಗಳು ಎಂದು ಏನು ನಿಯಮವಿದೆ, ಅದರಲ್ಲಿ ಕೇವಲ ಪ್ರೈವೇಟ್ ಬಸ್‌ಗಳಿವೆ. ಆ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಬಸ್‌ಪಾಸ್ ಇಲ್ಲ, ವಿದ್ಯಾರ್ಥಿಗಳಿಗೆ ಪಾಸ್ ಇಲ್ಲ. 60 ವರ್ಷ ದಾಟಿದ ವೃದ್ಧರಿಗೆ ಪಾಸ್ ಇಲ್ಲ. ಆದುದರಿಂದ ಈ ರಸ್ತೆಗಳಲ್ಲಿಯೂ ಹೋಗುವ ಪ್ರೈವೇಟ್ ಬಸ್‌ಗಳಲ್ಲಿ ಬಸ್‌ಪಾಸ್ ಕೊಡಿಸುವ ವ್ಯವಸ್ಥೆಯನ್ನು ಮಾಡಿಕೊಡಬೇಕು. ಈಗಿರುವ ನಿಯಮವೇನಿದೆ, ಅದನ್ನು ತೆಗೆದು ಹಾಕಬೇಕು. ಇವೆಲ್ಲದಕ್ಕೂ ಕೂಡ ಸರ್ಕಾರದ ಸೌಲಭ್ಯ ಸಿಗಬೇಕೆಂದರೆ ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಹೋಗಬೇಕು.

ಎಲ್ಲರಿಗೂ ಕೂಡ ಸರ್ಕಾರಿ ಸೌಲಭ್ಯ ಸಿಗಬೇಕೆಂದರೆ ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಹೋಗಿ ಸಂಚಾರ ಮಾಡಬೇಕು. ಆಗ ಮಾತ್ರ ಸರ್ಕಾರದ ಸವಲತ್ತುಗಳನ್ನು ಎಲ್ಲಾ ಬಡಜನರು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ಮಾತನ್ನು ಏಕೆ ಹೇಳುತ್ತೇನೆಂದರೆ ನನ್ನ ಪ್ರದೇಶ ನಕ್ಸಲ್ ಪೀಡಿತ ಪ್ರದೇಶ ಎನ್ನುವ ಮಾತಿದೆ. ಅಲ್ಲಿ ಎಸ್‌ಸಿ:ಎಸ್‌ಟಿ ಮತ್ತು ಹಿಂದುಳಿದ ವರ್ಗದವರಿಗೆ ಶಿಕ್ಷಣದ ಗುಣಮಟ್ಟ ಕಡಿಮೆ ಇದೆ. ಏಕೆಂದರೆ ಕೆಎಸ್‌ಆರ್‌ಟಿಸಿ ಬಸ್ಸು ಅಲ್ಲಿ ತಿರುಗಾಡುತ್ತಿಲ್ಲ. ಅಲ್ಲಿ ಪ್ರೈವೇಟ್ ಬಸ್ಸಿನವರು ಸರ್ಕಾರಿ ಸೌಲಭ್ಯಗಳನ್ನು ಕೊಡುವುದಿಲ್ಲ. ಇದರ ಬಗ್ಗೆ ದಯವಿಟ್ಟು ಗಮನಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ ಗೊಬ್ಬರ, ರೈತರಿಗೆ ಗೊಬ್ಬರ ಸರಿಯಾಗಿ ಸಿಗುತ್ತಿಲ್ಲ. ಎಲ್ಲಿ co-operative society ಗಳಿವೆ, ಅಲ್ಲಿಗೆ ನೇರವಾಗಿ ಗೊಬ್ಬರಗಳು ಹೋಗುತ್ತಿಲ್ಲ. ಅದನ್ನು federation ಗೆ ಅಥವಾ private ನವರಿಗೆ ಕೊಡುತ್ತಾರೆ. ಅವರು ಯಾರಿಗೆ ಕೊಡುತ್ತಾರೆಂದರೆ ಅವರ ಪಕ್ಷದವರಿಗೆ ಅಥವಾ ಇನ್ನೇನೋ ತಾರತಮ್ಯ ನಡೆಯುತ್ತದೆ. ರೈತರಿಗೆ ನೇರವಾಗಿ ಗೊಬ್ಬರ ಸಿಗುತ್ತಿಲ್ಲ. ಈ ಒಂದು ವ್ಯವಸ್ಥೆ ತೊಲಗಬೇಕು. ಇವತ್ತು ಏನು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯವನ್ನು ಚರ್ಚೆಗೆ

ತೆಗೆದುಕೊಂಡಿದ್ದೇವೆ, ಇವತ್ತು ರೈತರಿಗೆ ನೇರವಾಗಿ ಗೊಬ್ಬರ ಸಿಗಬೇಕೆಂದರೆ ಸರ್ಕಾರವೇ ಎಲ್ಲಾ co-operative society ಗಳಿಗೆ ಹೋಗುವಂತಹ ವ್ಯವಸ್ಥೆ ಯಾಗಬೇಕು. ನಾವು ಗೊಬ್ಬರವನ್ನು private, federation ನವರಿಗೆ ಕೊಟ್ಟರೆ ರೈತರಿಗೆ ಗೊಬ್ಬರ ಹೋಗುವುದಿಲ್ಲ. ಇಲ್ಲಿ ಕೃಷಿ ಸಚಿವರಿದ್ದಾರೆ, ದಯಮಾಡಿ ಇದನ್ನು ಗಮನಿಸಬೇಕೆಂದು ನಾನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಎಸ್‌ಸಿ:ಎಸ್‌ಟಿ ಕಾರ್ಪೋರೇಷನ್ ಬಗ್ಗೆ ಹೇಳುವುದಾದರೆ, ಹಿಂದೆ ಇದದತಹ ಸರ್ಕಾರದಲ್ಲಿ ಭೂಮಿಯನ್ನು ಕೊಳ್ಳುವುದಕ್ಕೆ 60 ಸಾವಿರ ರೂಪಾಯಿ ಮಾತ್ರ ಅವಕಾಶ ಇತ್ತು. ಇವತ್ತು ನಮ್ಮ ಮಾನ್ಯ ಯಡಿಯೂರಪ್ಪ ನವರ ಸರ್ಕಾರದವರು 2.50 ಲಕ್ಷ ರೂಪಾಯಿ ಮಾಡಿದ್ದಾರೆ, ಅದು ಇನ್ನೂ 5.00 ಲಕ್ಷ ರೂಪಾಯಿಯಾಗಬೇಕು. ಐದು ಲಕ್ಷ ರೂಪಾಯಿ ಮಾಡಿದಾಗ ಒಬ್ ಪದವಿ ಮಾಡಿದ ಕೃಷಿಕ ಒಬ್ಬ ಆಧುನಿಕ ಕೃಷಿಕ ಆಗುವುದಕ್ಕೆ ಅವಕಾಶವಾಗುತ್ತದೆ. ಅವನು ಒಬ್ಬ ಸಣ್ಣ ರೈತ ಆಗುವುದಕ್ಕೆ ಇಷ್ಟಪಡುತ್ತಾನೆ. ಇವತ್ತು ಸರ್ಕಾರ ಎಲ್ಲರಿಗೂ ಕೆಲಸ ಕೊಡಿಸುವುದಕ್ಕೆ ಆಗುವುದಿಲ್ಲ. ಮುಂದಿನ ದಿನಗಳಲ್ಲಿ ಎಸ್‌ಸಿ:ಎಸ್‌ಟಿ ಕಾರ್ಪೋರೇಷನ್‌ಗೆ ಭೂಮಿ ಖರೀದಿಗೆ ಕೊಡುವಂತಹ ಹಣ 2.50 ಲಕ್ಷ ರೂಪಾಯಿ ಏನಿದೆ, ಅದನ್ನು 5.00 ಲಕ್ಷ ರೂಪಾಯಿ ಮಾಡಬೇಕೆಂಬುದು ನನ್ನ ಮನವಿ ಇದೆ. ಇವತ್ತು ಮಾನ್ಯ ಸದಸ್ಯರಾದ ಬಾಲಕೃಷ್ಣರವರು ನೀರಾವರಿ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತನಾಡುವಾಗ ಹೇಮಾವತಿ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದರು. ಹೇಮಾವತಿ ಯೋಜನೆ ಆಗಬೇಕು. ಆದರೆ ವರ್ಷದಲ್ಲಿ ಜೂನ್‌ನಿಂದ ಡಿಸೆಂಬರ್ ವರೆಗೆ ಮಾತ್ರ ಬಯಲುಸೀಮೆಗೆ ನೀರನ್ನು ಕೊಡುವಂತಹ ಅವಕಾಶವಾಗಬೇಕು. ವರ್ಷಪೂರ್ತಿ ನಾವು ನೀರು ಕೊಡುವುದಕ್ಕೆ ಆಗುವುದಿಲ್ಲ. ಅಲ್ಲಿ ಕೂಡ ಅಕ್ಷೇಪ ಇದೆ. ಅಲ್ಲಿ ಸಾಕಷ್ಟು ನೀರು ಸಮುದ್ರದ ಪಾಲಾಗುತ್ತದೆ. ನನ್ನ ಮನವಿ ಏನೆಂದರೆ ಆ ನೀರನ್ನು ಈ ದಿನಗಳಲ್ಲಿ ಬಯಲು ಸೀಮೆಗೆ ಕೊಟ್ಟರೆ ಅನುಕೂಲವಾಗುತ್ತದೆಂದು ಈ ಸದನದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದಿನ ಸಮ್ಮಿಶ್ರ ಸರ್ಕಾರ ಮತ್ತು ಈಗಿನ ಸರ್ಕಾರ ಸಾಕಷ್ಟು ಶಾಲಾ ಕಾಲೇಜುಗಳನ್ನು ಮಾಡಿದೆ. ಆದರೆ ಅವುಗಳಿಗೆ ಕಟ್ಟಡಗಳಾಗಲಿ, ಸರಿಯಾದ ಸೌಲಭ್ಯಗಳಾಗಲಿ ಸಿಕ್ಕಿಲ್ಲ, ಆ ಸೌಲಭ್ಯಗಳು ಆಗಬೇಕು. ಇನ್ನೊಂದು ವಿಚಾರವೇನೆಂದರೆ ಕೌನ್ಸೆಲಿಂಗ್ ಪದ್ಧತಿಯಲ್ಲಿ ಶಿಕ್ಷಕರಿಗೆ ಅವಕಾಶ ಕೊಟ್ಟಾಗ ಅವರೆಲ್ಲರೂ ಪಟ್ಟಣಕ್ಕೆ

ವರ್ಗಾವಣೆ ಕೇಳುತ್ತಿದ್ದಾರೆ. ಅದು ತಪ್ಪು, ಗ್ರಾಮಾಂತರ ಪ್ರದೇಶಗಳಿಗೆ ಶಿಕ್ಷಕರು ಮತ್ತು ಡಾಕ್ಟರು ಯಾರೂ ಹೋಗುತ್ತಿಲ್ಲ. ಕೌನ್ಸಿಲಿಂಗ್ ಪದ್ಧತಿಯಲ್ಲಿ ಏನು ಲೋಪವಿದೆ, ಅದನ್ನು ಸರಿಪಡಿಸಬೇಕು, ಇಲ್ಲದಿದ್ದರೆ ಗ್ರಾಮಾಂತರ ಮಟ್ಟದಲ್ಲಿ ಶಿಕ್ಷಣ ಕೊಡುವುದಕ್ಕೆ ಆಗುವುದಿಲ್ಲ. ಅಲ್ಲದೆ ಇವತ್ತು ಅನೇಕ ಶಾಲಾ ಕಾಲೇಜುಗಳಲ್ಲಿ ಉಪನ್ಯಾಸಕರು ಮತ್ತು ಶಿಕ್ಷಕರ ಹುದ್ದೆ ಖಾಲಿ ಇದೆ. ಅದನ್ನು ಸರಿಪಡಿಸಬೇಕೆಂದರೆ ಈ ಕೌನ್ಸೆಲಿಂಗ್ ವ್ಯವಸ್ಥೆಯನ್ನು ಸರಿಪಡಿಸಬೇಕು. ಈಗ ಸಮಯ ಹೆಚ್ಚಾಗಿ ಇಲ್ಲದಿರುವುದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗದೆ ಇವತ್ತು ಅತಿವೃಷ್ಟಿ ಪ್ರದೇಶದಲ್ಲಿ ಬೆಳೆ ವಿಮೆಯನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಎಸ್.ಆರ್. ಮಹೇಶ್ (ಕೃಷ್ಣರಾಜ ನಗರ) : ಮಾನ್ಯ ಅಧ್ಯಕ್ಷರೆ, ಇವತ್ತು ಕೃಷಿ ಮತ್ತು ಗ್ರಾಮೀಣಾವೃದ್ಧಿಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಏನು ವಿಶೇಷವಾದಂತಹ ಅಧಿವೇಶನವನ್ನು ಕರೆದಿದ್ದಾರೆ, ಅದು ಸ್ವಾಗತಾರ್ಹವಾದಂತಹ ವಿಚಾರ. ಇವತ್ತು ಈ ವಿಚಾರದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕೆ ನಾನು ಈ ಸಂದರ್ಭದಲ್ಲಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾವು ಹೊಸದಾಗಿ ಈ ಮನೆಗೆ ಆರಿಸಿ ಬಂದು ಸುಮಾರು ಒಂದೂವರೆ ವರ್ಷ ಕಳೆದಿದೆ. ಈ ಸಂದರ್ಭದಲ್ಲಿ ನಮ್ಮ ತಾಲ್ಲೂಕಿನ ಹಾಗೂ ಜಿಲ್ಲೆಯ ಹಲವಾರು ಸಮಸ್ಯೆಗಳನ್ನು ಈ ಮನೆಗೆ ಮನದಟ್ಟು ಮಾಡಬೇಕೆಂದು ನಮ್ಮ ಮನವಿ ಇತ್ತು. ಹಲವಾರು ಬಾರಿ ನಾವು ಸಮಯವನ್ನು ಕೇಳಿದಂತಹ ಸಂದರ್ಭದಲ್ಲಿ ಅನಿವಾರ್ಯವಾಗಿ ಅವಕಾಶ ಸಿಗದ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರಿಗೆ ಪ್ರತಿಭಟನೆ ಮೂಲಕ ಮನವೊಲಿಸುವುದಕ್ಕೆ ಪ್ರಯತ್ನವನ್ನು ಮಾಡಿದೆವು. ಹಾಗಾಗಿ ಮಾನ್ಯ ಅಧ್ಯಕ್ಷರಿಗೆ ಹಾಗೂ ಹಿರಿಯ ಸದಸ್ಯರಿಗೆ ನೋವಾಗಿದ್ದರೆ ನಾನು ಕ್ಷಮೆಯನ್ನು ಕೋರುತ್ತೇನೆ. ಇವತ್ತು ಚರ್ಚೆ ನಡೆದಂತಹ ಸಂದರ್ಭದಲ್ಲಿ ಈಗಾಗಲೇ ಮಾನ್ಯ ಹಿರಿಯ ಸದಸ್ಯರುಗಳು ಕೃಷಿ ಬಗ್ಗೆ ಕೆಲವು ಸಲಹೆಯನ್ನು ಕೊಟ್ಟಿದ್ದಾರೆ. ನನ್ನ ಮನವಿ ಇಷ್ಟೆ, ಇವತ್ತು ಪ್ರಮುಖವಾಗಿ ಹಳ್ಳಿಗಾಡಿನಲ್ಲಿ ಕೃಷಿ ಮಳೆಯಿಲ್ಲದೆ ಹಾಳಾಗುತ್ತಿತಕ್ಕಂಥದ್ದು. ಮಳೆ ಬಾರದಿರುವಂತಹ ಸಂದರ್ಭದಲ್ಲಿ ಯಾರು ಪಂಪ್‌ಸೆಟ್‌ನ್ನು ನಂಬಿಕೊಂಡಿರುತ್ತಾರೆ ಅವರಿಗೆ ವಿದ್ಯುತ್ ಇಲ್ಲದೆ ತೊಂದರೆಯಾಗಿದೆ. ಇವತ್ತು ಅನೇಕ ಸಂದರ್ಭದಲ್ಲಿ ಮಳೆ ಮತ್ತು ವಿದ್ಯುತ್ ಎರಡನ್ನೂ

ಅವಲಂಬಿಸಿಕೊಂಡು ಅಲ್ಪಸ್ವಲ್ಪ ಬಿತ್ತನೆ ಮಾಡಿದಂತಹ ಸಂದರ್ಭದಲ್ಲಿ ಬಿತ್ತನೆ ಬೀಜಗಳು ಸರಿಯಾಗಿ, ವ್ಯವಸ್ಥಿತವಾಗಿ ಸರಬರಾಜು ಆಗದಿರುವಂತಹ ಸಂದರ್ಭದಲ್ಲಿ ಬೆಳೆಗಳು ಬೆಳೆಯದಿರುವಂತಹ ಸಂದರ್ಭದಲ್ಲಿ ರೈತನಿಗೆ ಅನಾನುಕೂಲವಾಗುತ್ತದೆ. ದಯಮಾಡಿ ಮಳೆ ಬರದಿರುವಂತಹ ಸಂದರ್ಭ ದಲ್ಲಿ ರೈತನಿಗೆ ವಿದ್ಯುತ್‌ನ್ನು ಸರಿಯಾದಂತಹ ರೀತಿಯಲ್ಲಿ ಕೊಟ್ಟರೆ, ರೈತ ನೆಮ್ಮದಿಯಿಂದ ಬೆಳೆಯನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಮನವಿಯನ್ನು ಮಾಡುತ್ತಿದ್ದೇನೆ. ಇವತ್ತು ಕೃಷಿ ಇಲಾಖೆ ಅಧಿಕಾರಿಗಳು ಸರಿಯಾಗಿ ಗೊಬ್ಬರವನ್ನು ತಲುಪಿಸುವುದಕ್ಕೆ ಆಗದಿರುವಂತಹ ಸಂದರ್ಭದಲ್ಲಿ ರೈತರಿಗೆ ಅನಾನುಕೂಲ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರ ಜೊತೆಗೆ ಇವತ್ತು ಹಲವಾರು ಕಡೆಗಳಲ್ಲಿ ನಾವು ಏನು ವಾಣಿಜ್ಯ ಬೆಳೆಗಳೆಂದು ಕಾಣುತ್ತೇವೆ, ಆ ಬೆಳೆಗಳಲ್ಲಿ ರೈತರುಗಳು ಹೆಚ್ಚಿನ ನಷ್ಟವನ್ನು ಅನುಭವಿಸಿ ಆತ್ಮಹತ್ಯೆಗೆ ಶರಣಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಾನು ಈ ಸದನದಲ್ಲಿ ಮನವಿ ಮಾಡುವುದೇನೆಂದರೆ ಈ ಮೂರು ವಿಚಾರಗಳಲ್ಲಿ ವಿಶೇಷವಾದಂತಹ ಗಮನವನ್ನು ಹರಿಸಿ ರೈತರಿಗೆ ಅನುಕೂಲವನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡಬೇಕೆಂದು ಮನವಿ ಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆ ಮೈಸೂರು ಜಿಲ್ಲೆಯಲ್ಲಿ ಕೃಷ್ಣರಾಜ ನಗರ ಕ್ಷೇತ್ರದ ಒಂದು ತಾಲ್ಲೂಕಿನಲ್ಲಿ ಪ್ರಗತಿ ಪರಿಶೀಲನಾ ಸಭೆಯನ್ನು ಕರೆದಿದ್ದೆವು. ಅಲ್ಲಿ ಒಂದು ಶ್ರೀರಾಂಪುರ ಎನ್ನುವ ಗ್ರಾಮದಲ್ಲಿ ಹಿಂದಿನಿಂದಲೂ ರೇಷ್ಮೆ ಕೃಷಿ ಬೆಳೆಯನ್ನು ಅವಲಂಬಿಸಿ ತುಂಬಾ ಚೆನ್ನಾಗಿ ಬೆಳೆಯುತ್ತಿದ್ದಂತಹ ಅನೇಕ ರೈತರುಗಳು ಇರುತ್ತಿದ್ದರು. ನಾವು ಅಧಿಕಾರಿ ಯನ್ನು ಏನು ಸ್ವಾಮಿ ಎಷ್ಟು ಚೆನ್ನಾಗಿ ಇದುವರೆಗೆ ಒಳ್ಳೊಳ್ಳೆಯ ಬೆಳೆಯನ್ನು ಬೆಳೆಯುತ್ತಿದ್ದರು, ಈ ಬಾರಿ ಏಕೆ ಇಷ್ಟೊಂದು ಕುಂಠಿತವಾಗಿದೆ ಎನ್ನುವ ಪ್ರಶ್ನೆಯನ್ನು ಮಾಡಿದಂತಹ ಸಂದರ್ಭದಲ್ಲಿ ಅವರು ಒಂದು ಉತ್ತರವನ್ನು ಕೊಟ್ಟರು. ನೋಡಿ ಸಾರ್ ಸರ್ಕಾರ ಹುಟ್ಟಿದರೆ, ವಯಸ್ಸಾದರೆ, ಆಸ್ಪತ್ರೆಗೆ ಸೇರಿದರೆ, ಸತ್ತರೂ ದುಡ್ಡು ಕೊಡುತ್ತದೆ, ಹಾಗಾಗಿ ಜನ ಸೋಮಾರಿಗಳಾಗಿ ಬಿಟ್ಟು ಯಾವ ಬೆಳೆ ಬೆಳೆಯದ ಹಾಗೆ ಆಗಿದ್ದಾರೆ ಎಂದು ಹೇಳಿದರು. ನಾನು ಈ ಸದನದಲ್ಲಿ ಒಂದು ಮನವಿಯನ್ನು ಮಾಡುತ್ತೇನೆ, ಹಿಂದಿನಿಂದ ಹಲವಾರು ನಾಯಕರುಗಳು ಸರ್ಕಾರ ನಡೆಸಿರುವುದನ್ನು ನೋಡಿದ್ದೇನೆ. ನಾನು ಯಾವುದೇ ನೇತೃತ್ವದ ಸರ್ಕಾರವನ್ನು ಅಲ್ಲಗಳೆಯುವಂತಹ ಕೆಲಸವನ್ನು ಮಾಡುತ್ತಿಲ್ಲ. ಆದರೆ ನಮ್ಮ ಪ್ರಮುಖವಾದ ಗುರಿ ಏನೆಂದರೆ

ನಾವು ಹಲವಾರು ಸಂದರ್ಭದಲ್ಲಿ ಏನು ಮಾಡುತ್ತೇವೆಂದರೆ ನಾವು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ನಾವು ಎಂತಹ ಕೊಡುಗೆಯನ್ನು ರೈತನಿಗೆ ಕೊಟ್ಟರೆ ಅಥವಾ ಯಾರಿಗೆ ಸಹಕಾರವನ್ನು ಕೊಟ್ಟರೆ ಅವರು ನಮಗೆ ಮತವನ್ನು ಹೆಚ್ಚು ಕೊಡುತ್ತಾರೆಂದು ಯೋಚನೆಯನ್ನು ಮಾಡುತ್ತೇವೆ ವಿನಃ ಅವರಿಗೆ ಈ ಒಂದು ಕಾರ್ಯಕ್ರಮವನ್ನು ಕೊಟ್ಟರೆ ಕೊನೆಯವರೆಗೂ ಇದನ್ನು ನಂಬಿಕೊಂಡು, ಅದನ್ನೇ ಅವಲಂಬಿಸಿಕೊಂಡು ಕೆಲಸ ಮಾಡುತ್ತಾನೆ, ಅವನ ಜೀವನ ಉದ್ಧಾರವಾಗುತ್ತದೆ ಎನ್ನುವಂತಹ ಭಾವನೆಯನ್ನು ನಾವು ಕಡಿಮೆ ಮಾಡಿಕೊಳ್ಳುತ್ತಿದ್ದೇವೇನೋ ಎಂದು ಈ ಸಂದರ್ಭದಲ್ಲಿ ಮನವಿಯನ್ನು ಈ ಸದನದಲ್ಲಿ ಮಾಡಿಕೊಳ್ಳುತ್ತಿದ್ದೇನೆ. ನನ್ನ ಮನವಿ ಇಷ್ಟೇ, ಇವತ್ತು ಯಾವ ರೈತನಿಗೆ ಹಣವನ್ನು ಕೊಟ್ಟರೆ, ಅಕ್ಕಿಯನ್ನು ಕೊಡುತ್ತೇವೆ. ಯಾವ ರೈತನಿಗೆ ಹಣವನ್ನು ಕೊಟ್ಟಂತಹ ಸಂದರ್ಭದಲ್ಲಿ ಸಮರ್ಪಕವಾಗಿ ನೀರನ್ನು ಕೊಡುತ್ತೇವೆ, ಯಾವ ರೈತನಿಗೆ ಹಣವನ್ನು ಕೊಟ್ಟಂತಹ ಸಂದರ್ಭದಲ್ಲಿ ವಿದ್ಯುತ್ ಅನ್ನು ಕೊಡುತ್ತೇವೆ, ಹಾಗೇ ರಸ್ತೆಯನ್ನು ಕೊಡುತ್ತೇವೆ, ಈ ಮೂಲಭೂತ ಸೌಕರ್ಯಗಳನ್ನು ಹಣವನ್ನು ಕೊಡುವಂತವರಿಗೆ ಕೊಡುವಂತಹ ಕೆಲಸವನ್ನು ನಾವು ಮರೆಯುತ್ತಿದ್ದೇವೆಂದು ನಾನು ಈ ಸಂದರ್ಭದಲ್ಲಿ ಮನವಿಯನ್ನು ಮಾಡುತ್ತಿದ್ದೇನೆ. ದಯಮಾಡಿ ನಾವು ಯಾರಿಗೆ ಸಾಲ ಮನ್ನಾ ಮಾಡುತ್ತೇವೆ, ಯಾರಿಗೆ ನಾವು ಒಂದು ಸಾವಿರ, ಎರಡು ಸಾವಿರ ಸಬ್ಸಿಡಿ ಹಣವನ್ನು ಕೊಡುತ್ತೇವೆ, ಆ ಕೆಲಸವನ್ನು ಬಿಟ್ಟು, ಅವರು ವ್ಯವಸ್ಥಿತವಾಗಿ ರೂಪುಗೊಳ್ಳುವುದಕ್ಕೆ, ಇವತ್ತು ಆಗದಿರಬಹುದು. ಇನ್ನೂ ಐದು ವರ್ಷಕ್ಕೆ ಆಗಬಹುದು ಅಥವಾ ಹತ್ತು ವರ್ಷಕ್ಕೆ ಆಗಬಹುದು. ನಾವು ತಕ್ಷಣ ಅವರಿಂದ ಶಹಭಾಷ್ ಗಿರಿಯನ್ನು ತೆಗೆದುಕೊಂಡು, ಮತ ಬ್ಯಾಂಕ್‌ಗಳಾಗಿ ಪರಿವರ್ತಿಸಿಕೊಳ್ಳದೇ, ಮುಂದಿನ ಈ ದೇಶವನ್ನು, ಈ ರಾಜ್ಯವನ್ನು ಗಮನದಲ್ಲಿಟ್ಟುಕೊಂಡು ನಾವು ಈ ಯೋಜನೆಗಳನ್ನು ಮಾಡಿದರೆ ರೈತರಿಗೆ ಅನುಕೂಲವಾಗುವುದಕ್ಕೆ ಸಹಕಾರಿಯಾಗುತ್ತದೆಂದು ಈ ಸಂದರ್ಭ ದಲ್ಲಿ ಮನವಿಯನ್ನು ಮಾಡುತ್ತಿದ್ದೇನೆ. ಇವತ್ತು ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಹಣವನ್ನು ಕೊಟ್ಟವರಿಗೆ ಸೀಮೆಎಣ್ಣೆಯನ್ನು ಸಮರ್ಪ ಕವಾಗಿ ಕೊಡುವುದಕ್ಕೆ ಆಗುತ್ತಿಲ್ಲ, ಅಕ್ಕಿಯನ್ನು ಸಮರ್ಪಕವಾಗಿ ಕೊಡುವುದಕ್ಕೆ ಆಗುತ್ತಿಲ್ಲ, ವಿದ್ಯುತ್ ಅನ್ನು ಸಮರ್ಪಕವಾಗಿ ಕೊಡುವುದಕ್ಕೆ ಆಗುತ್ತಿಲ್ಲ, ಹಾಗೆಯೇ ರಸ್ತೆಗಳನ್ನು ಸಮರ್ಪಕವಾಗಿ ಕೊಡುವುದಕ್ಕೆ ಆಗುತ್ತಿಲ್ಲ. ಈ ಮೂಲಭೂತ ಸೌಲಭ್ಯಗಳ ಕಡೆಗೆ ಗಮನಹರಿಸಿ ರಾಜ್ಯದ ಜನರಿಗೆ

ಅನುಕೂಲವಾಗುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ಇನ್ನು ಗ್ರಾಮೀಣಾಭಿವೃದ್ಧಿ ವಿಚಾರವಾಗಿ ಹೇಳುವುದಾದರೆ ಶಾಶ್ವತವಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿದೆ. ಆದರೆ ಅದರ ನಿರ್ವಹಣೆಯನ್ನು ಅಲ್ಲಿನ ಪಂಚಾಯತಿಯ ಒಬ್ಬ water man ನೋಡುತ್ತಿದ್ದಾನೆ. ಇದಕ್ಕೆ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಅದರ ಬಗ್ಗೆ ಅನುಭವವಿಲ್ಲದೇ ಇರುವ water man ಆ ಇಡೀ ವ್ಯವಸ್ಥೆಯ ನಿರ್ವಹಣೆ ಮಾಡುತ್ತಿದ್ದರೆ ಅದು ಒಂದು, ಒಂದೂವರೆ ವರ್ಷದಲ್ಲೇ ಕೆಟ್ಟು ಹೋಗುವ ಪರಿಸ್ಥಿತಿಗೆ ಬಂದು, ಮತ್ತೆ ಸರ್ಕಾರದ ಮೇಲೆ ಹೊರೆ ಬೀಳುತ್ತದೆ. ಇದರ ಜೊತೆಗೆ ಇವತ್ತು ಸುಮಾರು ಪುರಸಭೆಗಳಲ್ಲಿ ನೋಡಿದ ಹಾಗೆ ನೀರಿನ ವ್ಯವಸ್ಥೆಯನ್ನು ಈ ಪುರಸಭೆಯವರೇ ನಿರ್ವಹಣೆ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ತಾವು ದಯಮಾಡಿ ಟೌನ್‌ಗಳಲ್ಲಿ water board ಎಂದು ಮಾಡಿದ್ದು ಅವರು ನೀರಿನ ನಿರ್ವಹಣೆಯನ್ನು ಯಾವ ರೀತಿಯಾಗಿ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ತಾಲ್ಲೂಕು ಕೇಂದ್ರಗಳಲ್ಲಿರುವಂಥ ಎಲ್ಲಾ ಪುರಸಭೆಗಳ ವ್ಯಾಪ್ತಿಯಲ್ಲಿರುವಂಥ ಈ ನೀರಿನ ವ್ಯವಸ್ಥೆಯನ್ನು water board ನವರೇ ನಿರ್ವಹಣೆ ಮಾಡುವಂತೆ ಮಾಡಿದರೆ ಜನರಿಗೆ ಸಮರ್ಪಕವಾಗಿ ನೀರನ್ನು ತಲುಪಿಸುವಂಥ ಕೆಲಸವಾಗುತ್ತದೆ. ಇವತ್ತು ನಾನು ಸದನದಲ್ಲಿ ಮನವಿ ಮಾಡುವುದೇನೆಂದರೆ ನನ್ನ ಕ್ಷೇತ್ರವಾದ ಕೃಷ್ಣರಾಜನಗರದಲ್ಲಿ ಹಿಂದೆ ಸುಮಾರು ಮೂರ್ನಾಲ್ಕು ಕೋಟಿ ರೂಪಾಯಿ ಗಳಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಿದ್ದಾರೆ. 10 ವರ್ಷಗಳ ಹಿಂದೆ ಸುಮಾರು ಒಂದು ಕಾಲು ಕೋಟಿ ರೂಪಾಯಿಗಳಲ್ಲಿ ಹಾಕಲಾಗಿದ್ದ ಒಂದು ಯಂತ್ರ ಕೆಟ್ಟು ನಿಂತಿದೆ. ಇವತ್ತಿಗೂ ಅದನ್ನು ರಿಪೇರಿ ಮಾಡುವಂಥ ಕೆಲಸವಾಗಿಲ್ಲ. ಇದನ್ನು ಅನುಭವವಿಲ್ಲದೇ ಇರುವವರು ನಿರ್ವಹಿಸಿದ್ದರಿಂದ ಈ ರೀತಿಯಾಗಿದೆ. ಆದುದರಿಂದ ಅನುಭವವಿರುವಂಥ water board ಅಥವಾ K.U.W.S.S.B. ಎಂದು ಏನು ಇದೆ, ಎಲ್ಲಾ ತಾಲ್ಲೂಕುಗಳ ಪುರಸಭಾ ಕೇಂದ್ರಗಳನ್ನು water board ನಿಂದ ನೀರಿನ ನಿರ್ವಹಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ಇನ್ನು ಹಲವಾರು ಸಂದರ್ಭಗಳಲ್ಲಿ ಅಧಿಕಾರವನ್ನು ವಿಕೇಂದ್ರಿಕರಣ ಮಾಡಬೇಕೆಂದು ಹಿಂದಿನಿಂದ ಇವತ್ತಿನ ನಾಯಕರುಗಳು ಹೇಳಿಕೊಂಡು ಬರುತ್ತಿದ್ದಾರೆ. ಈ ಹಿಂದೆ ಭ್ರಷ್ಟಾಚಾರವೆನ್ನುವಂಥದ್ದು

ಮೇಲ್ಮಟ್ಟದಲ್ಲಿ ನಡೆಯುತ್ತಿತ್ತು. ಆದರೆ ಇವತ್ತಿನ ದಿವಸ ಅಧಿಕಾರ ಎಲ್ಲಾ ಕಡೆಗಳಲ್ಲೂ ಏನು ಆಗುತ್ತಿದೆಯೆಂದರೆ ಇದು ತಳಮಟ್ಟಕ್ಕೆ ಹೋದಂಥ ಸಂದರ್ಭದಲ್ಲಿ ಭ್ರಷ್ಟಾಚಾರವೂ ಅಷ್ಟೇ ವ್ಯವಸ್ಥಿತವಾಗಿ ತಳಮಟ್ಟಕ್ಕೆ ಹೋಗುವಂಥದ್ದು ಆಗಿದೆ. ಅದಕ್ಕೆ ಯಾರು ಕಾರಣವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ದಯಮಾಡಿ ನಮ್ಮೆಲ್ಲರ ಗಮನ ಅದರ ಕಡೆಗೆ ಹೆಚ್ಚು ಇರಬೇಕು. ನಾನು ಈ ಎಲ್ಲಾ ವಿಚಾರಗಳನ್ನು ತಮಗೆ ತಿಳಿಸುತ್ತಾ, ಇನ್ನು ಮುಂದಿನ ದಿವಸಗಳ ಲ್ಲಾದರೂ ಅಭಿವೃದ್ಧಿ ಕಾರ್ಯಗಳಲ್ಲಿ ಪಕ್ಷಾತೀತವಾಗಿ ಪಕ್ಷಭೇದವನ್ನು ಮರೆತು ಅಭಿವೃದ್ಧಿ ಕೆಲಸಗಳನ್ನು ಒಟ್ಟಾಗಿ ಮಾಡಬೇಕು. ಇನ್ನು ಇವತ್ತು ನಾನು ಈಗ ಇಷ್ಟು ಮನವಿಗಳನ್ನು ಮಾಡಿದ್ದೇನೆ. ದಯಮಾಡಿ ಮಾನ್ಯ ಮುಖ್ಯಮಂತ್ರಿ ಯವರು ಹಾಗೂ ಸದನದ ಎಲ್ಲಾ ಸದಸ್ಯರು ಗಮನ ಹರಿಸಬೇಕೆಂದು ಪ್ರಾರ್ಥನೆ ಮಾಡುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್, ಜೈ ಕರ್ನಾಟಕ.

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಛೇರ್ಮನ್‌ರೆ, ರಾಜ್ಯದ ಮುಖ್ಯಮಂತ್ರಿಯವರು ವಿಶೇಷವಾಗಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳ ಬಗ್ಗೆ ಅವರದೇ ಆದಂಥ ವಿಶೇಷವಾದ ಮನ್ನಣೆಯನ್ನು ಕೊಟ್ಟು ಅವರ ಪ್ರಾಸ್ತಾವಿಕ ನುಡಿಗಳ ಮುಖಾಂತರ ಈ ಒಂದು ಅಧಿವೇಶನದಲ್ಲಿ ಕೃಷಿ ಮತ್ತು ಗ್ರಾಮೀಣ ಜನರ ಬದುಕಿನ ಬಗ್ಗೆ ಅವರದೇ ಆದಂಥ ರೀತಿಯಲ್ಲಿ, ಅವರದೇ ಆದಂಥ ಅನುಭವ ನುಡಿಗಳಲ್ಲಿ ಇವತ್ತು ಈ ಸಭೆಯಲ್ಲಿ ನಮ್ಮ ಮುಂದಿಟ್ಟಿದ್ದಾರೆ. ಅವರು ಆಡಿರುವಂಥ ಎಲ್ಲಾ ಮಾತುಗಳು ನಮ್ಮ ಗ್ರಾಮೀಣ ಭಾಗದ ನೈಜ ಮಟ್ಟವನ್ನು ಅವರು ಪ್ರತಿಬಿಂಬಿಸಿದ್ದಾರೆ. ಅದು ಎಷ್ಟೇ ಆದರೂ ಗ್ರಾಮೀಣ ಭಾಗದ ಬದುಕು ಹಸನಾಗಲಿಲ್ಲ. ಅವನಿಗೆ ಬೇಕಾದಂಥ ಕನಿಷ್ಟ ನಾಗರೀಕ ಸವಲತ್ತುಗಳು ದೊರೆಯಲಿಲ್ಲ. ಅವರಿಗೆ ನಾಗರೀಕ ಸವಲತ್ತು ಗಳನ್ನು ಕೊಡಬೇಕಾದಂಥ ಜವಾಬ್ದಾರಿಗಳ ಬಗ್ಗೆ ನಮ್ಮ ಸರ್ಕಾರಗಳು ಕಳೆದ 60 ವರ್ಷಗಳಲ್ಲಿ ಮಾಡಿದಂಥ ಎಲ್ಲಾ ಪ್ರಯತ್ನಗಳು ನಿರೀಕ್ಷಿತ ಮಟ್ಟಕ್ಕೆ ಅವು ಮುಟ್ಟಲಿಲ್ಲ. ಅದನ್ನು ನಾವು ಯಾವ ರೀತಿಯಾಗಿ ಸುಧಾರಣೆ ಮಾಡಬೇಕೆಂಬ ಬಗ್ಗೆ ಚಿಂತನೆ ಮಾಡಬೇಕೆಂದು ಇವತ್ತು ಈ ವಿಶೇಷ ವಾದಂಥ ಅಧಿವೇಶನವನ್ನು ಕರೆದಿದ್ದಾರೆ. ಈ ರೀತಿ ಕರೆದಿರುವಂಥದ್ದು ಬಹಳ ಸಂತೋಷ. ಇವತ್ತು ನೂರಕ್ಕೆ ಎಪ್ಪತ್ತು ಭಾಗದ ಜನರ ಬದುಕು ಕೃಷಿಯಲ್ಲಿ ತೊಡಗಿರುವಂಥ ಸಂದರ್ಭದಲ್ಲಿ ನಾವೆಲ್ಲರೂ ಇಲ್ಲಿಗೆ ನೂರಕ್ಕೆ ತೊಂಭತ್ತು ಭಾಗ ಕೃಷಿಕರ ಕುಟುಂಬದಿಂದ ಬಂದಿರುವವರಾಗಿದ್ದೇವೆ. ನಾವು

ವಾಸ್ತವವಾಗಿ ಕೃಷಿ ಸಮಸ್ಯೆಗಳನ್ನು ಪ್ರತಿ ನಿತ್ಯ ನೋಡುತ್ತಿರುವವರು. ನಾವು ಎಷ್ಟೇ ಪ್ರಯತ್ನ ಪಟ್ಟರೂ ಕೃಷಿಕನ ಬದುಕು ಬಹಳಷ್ಟು ಹಸನಾಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಎಲ್ಲೋ ಅಲ್ಲೊಂದು ಕಡೆ, ಇಲ್ಲೊಂದು ಕಡೆ ನೀರಿನ ಸವಲತ್ತು ಸ್ವಲ್ಪ ಇರುವ ಕಡೆಗಳಲ್ಲಿ ಸುಮಾರಾಗಿ ಅವರು ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಇವತ್ತು ನಾವು ಬಯಲುಸೀಮೆ ಪ್ರದೇಶಕ್ಕೆ ಬಂದದ್ದೇ ಆದರೆ ಸುಮಾರು 70 ರಿಂತ 75 ತಾಲ್ಲೂಕುಗಳಲ್ಲಿ ಅವರ ಪಾಡು ಹೇಳತೀರದು. ಅವರಿಗೆ ವಿಧಿ ಇಲ್ಲ, ಅವರಿಗೆ ಪರ್ಯಾಯವಾಗಿ ಬೇರೆ ಬೇರೆ ಯಾದಂಥ ಹೈನುಗಾರಿಕೆಯನ್ನು ಇಟ್ಟುಕೊಂಡು ಇವತ್ತು ಅನಿವಾರ್ಯವಾಗಿ ಅವರು ಜೀವನ ನಡೆಸುವಂಥ ಪರಿಸ್ಥಿತಿ ಬಂದೊದಗಿದೆ. ಕಳೆದ 15–20 ವರ್ಷಗಳಿಂದಲೂ ಪ್ರತಿ ವರ್ಷವೂ ಮಳೆ ಕಡಿಮೆಯಾಗುತ್ತಿದೆ, ನಿರೀಕ್ಷಿತ ಮಳೆ ತರುತ್ತಿಲ್ಲ. ಅಂತರ ಜಲ ಪಾತಾಳಕ್ಕೆ ಹೋಗುತ್ತಿದೆ. 1970, 1971, 1972 ರಲ್ಲಿ ಸುಮಾರು 50 ಅಡಿ, 60 ಅಡಿ, 70 ಅಡಿಗಳಲ್ಲಿದ್ದಂಥ ನೀರು ಇವತ್ತು 1,000, 2,000 ಅಡಿ ಕೊಳವೆ ಬಾವಿಗಳನ್ನು ಕೊರೆದರೂ ಅನೇಕ ಕಡೆಗಳಲ್ಲಿ ನೀರು ಸಿಗುತ್ತಿಲ್ಲ. ನಾವು ಈ ಪರಿಸ್ಥಿತಿಗೆ ಮುಟ್ಟಿದ್ದೇವೆ. ಈ ರೀತಿ ನಮ್ಮ ಕೋಲಾರ, ಚಿಕ್ಕಬಳ್ಳಾಪುರದಲ್ಲಿ ಸುಮಾರು 4,000 ಕೆರೆಗಳು ಇವೆ. ಅದು ಸಣ್ಣ ನೀರಾವರಿ ಇರಬಹುದು, ಜಿಲ್ಲಾ ಪಂಚಾಯತ್ ನಲ್ಲಿರಬಹುದು, ಇತರೆ ಉಸ್ತುವಾರಿಯಲ್ಲಿರುವಂಥ ಕೆರೆಗಳು ಇರಬಹುದು. ಈ 4,000 ಕೆರೆಗಳ ಪೈಕಿ ಸ್ವಾತಂತ್ರ್ಯ ಪೂರ್ವದಲ್ಲೇ 100ಕ್ಕೆ 80% ಕೆರೆಗಳು ರಾಜ ಮಹಾರಾಜರ ಕಾಲದಲ್ಲೇ ನಿರ್ಮಾಣವಾಗಿದ್ದವು. ಅವರ ದೂರದೃಷ್ಟಿಯಿಂದ ನಾವು ಇಲ್ಲಿಯವರೆಗೆ ಉಳಿದುಕೊಂಡು ಬಂದಿದ್ದೇವೆಂದು ಹೇಳಿದರೆ ತಪ್ಪಾಗುವುದಿಲ್ಲ. ಆದರೆ ನಂತರ ಬಂದ ಸರ್ಕಾರಗಳು ಕಳೆದ 60 ವರ್ಷಗಳಲ್ಲಿ ಅದಕ್ಕೆ ಎಷ್ಟರಮಟ್ಟಿಗೆ ಆದ್ಯತೆಯನ್ನು ಕೊಡಬೇಕು, ಇರತಕ್ಕಂಥ ಕೆರೆಗಳಿಗೆ ಯಾವ ರೀತಿಯಾಗಿ ಜೀರ್ಣೋದ್ಧಾರವನ್ನು ಮಾಡಿಕೊಳ್ಳಬೇಕು, ಆ ಕೆರೆಗಳ ಮುಖಾಂತರ ರೈತನ ಬದುಕನ್ನು ಹಸನು ಮಾಡುವಂಥ ಪ್ರಯತ್ನಕ್ಕೆ ಎಷ್ಟು ಪ್ರೋತ್ಸಾಹವನ್ನು ಕೊಡಬೇಕು, ಆ ಪ್ರಯತ್ನ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲವೆನ್ನುವುದೇ ನಮ್ಮಲ್ಲಿರುವಂಥ ರೈತ ಪ್ರತಿನಿಧಿಗಳ ಮತ್ತು ರೈತನಲ್ಲಿರುವಂಥ ಕೊರಗು ಆಗಿದೆ. ಇವತ್ತು ಆ ಕೊರಗನ್ನು ನಿವಾರಣೆ ಮಾಡುವ ಬಗ್ಗೆ ಚಿಂತನ ಮಂಥನ ಎನ್ನುವ ವಿಚಾರವನ್ನು ಈ ವಿಶೇಷ ಅಧಿವೇಶನದಲ್ಲಿ ಚರ್ಚಿಸಲು ಕರೆದಿರುವಂಥದ್ದು, ಇದು ನಿಜವಾಗಿಯೂ ನಮ್ಮ ವಿಧಾನಸಭೆಯ ಅಧಿವೇಶನದ ಇತಿಹಾಸದಲ್ಲಿ ದಾಖಲೆಯಾಗು

ವಂಥದ್ದು. ಆದರೆ ಅದಕ್ಕೆ ಪ್ರತಿಫಲಗಳು ಬೇಕಾಗುತ್ತದೆ. ನಾವು ಇಲ್ಲಿ ಕೊಟ್ಟಂಥ ಸಲಹೆಗಳನ್ನು ಕಾರ್ಯರೂಪಕ್ಕೆ ಬರುವಂಥ ವ್ಯವಸ್ಥೆ ಆಗಬೇಕಾಗಿದೆ. ಇವತ್ತು ಇರುವಂಥ ಸಮಸ್ಯೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಪ್ರಾಸ್ತಾವಿಕ ನುಡಿಗಳಲ್ಲಿ ಹೇಳಿದ್ದಾರೆ. ಅವರು ಜನಿಸಿದಂಥ ಬೂಕನಕೆರೆಯಲ್ಲಿ ಯಾವ ರೀತಿಯಾಗಿ ರೈತನ ಸಮಸ್ಯೆಗಳು ಇವೆ. ಕಳೆದ 25, 30, 40 ವರ್ಷಗಳ ಹಿಂದೆ ಇದ್ದಂಥ ಬದುಕು ಇವತ್ತಿಗೂ ಅದೇ ರೀತಿಯಾಗಿ ಮುಂದುವರೆಯುತ್ತಿದೆ ಎನ್ನುವಂಥದ್ದು ಏನು ಇದೆ, ಇದು ಅವರು ಹುಟ್ಟಿದ ಊರಿನಲ್ಲಿ ಅಷ್ಟೆ ಅಲ್ಲ, ಪ್ರತಿಯೊಬ್ಬರೂ ಹುಟ್ಟಿರುವಂಥ ಹಳ್ಳಿಗಳ ನೈಜವಾದ ಬದುಕು ಅದೇ ರೀತಿಯಲ್ಲಿ ಇದೆ. ಇಲ್ಲಿ ನೂರಕ್ಕೆ 5%, 10% ಬೇರೆ ರೀತಿಯ ವ್ಯವಹಾರಗಳನ್ನು ಅದಕ್ಕೆ ಪೂರಕವಾಗಿ ಸೇರಿಕೊಂಡು ಮಾಡಿಕೊಂಡಿದ್ದಾರೆಯೇ ಹೊರತು, ವ್ಯವಸಾಯವನ್ನೇ ನಂಬಿರುವವರ ಬದುಕು ಅಷ್ಟು ಹಸನಾಗಿಲ್ಲದೇ ಇರುವಂಥ ಬದುಕನ್ನು ನಾವು ಇವತ್ತು ರೈತರಲ್ಲಿ ಕಾಣುತ್ತಿದ್ದೇವೆ. ಅದಕ್ಕೆ ನಾಣ್ಣುಡಿ ಏನು ಇದೆಯೆಂದರೆ, "ವ್ಯವಸಾಯವೆಂದರೆ ನೀನು ಸಾಯ, ನೀನು ನಿನ್ನ ಮಕ್ಕಳು ಎಲ್ಲಾ ಸಾಯ" ಎನ್ನುವಂಥದ್ದು. ಇಲ್ಲಿ ಸಾಯ ಎಂದರೆ, ಇವರ ಕುಟುಂಬದಲ್ಲಿ ಎಲ್ಲರೂ ವ್ಯವಸಾಯ ಮಾಡಬೇಕು. ಇವರಿಗೆ ಯಾರಿಗೂ ಪುರುಷೊತ್ತು ಇರುವುದಿಲ್ಲ. ಎಲ್ಲರೂ ಕೆಲಸ ಮಾಡಿದರೂ ಅದು ಆರಂಭದಲ್ಲೇ ಇರುತ್ತದೆ. ಅವರು ಬೆಳಿಗ್ಗೆ ಏಳುತ್ತಲೇ ವ್ಯವಸಾಯ ಮಾಡುತ್ತಿರಬೇಕು. ಅವರ ಕುಟುಂಬದವರಿಗೆಲ್ಲಾ ಉದ್ಯೋಗವಿದೆ, ಅಂಥ ವ್ಯವಸಾಯ ಇದು. ಅವನು ಇಷ್ಟು ವ್ಯವಸಾಯ ಮಾಡಿ, ಈ ರಾಷ್ಟ್ರದಲ್ಲಿರುವಂಥ ಪ್ರತಿಯೊಬ್ಬರಿಗೂ ಅನ್ನವನ್ನು ಕೊಡುವಂಥ ಅನ್ನದಾತನಾಗಿದ್ದಾನೆ. ಅವನು ದೇಶದ ಬೆನ್ನೆಲುಬು. ನಾವು ಅವನ ಬಗ್ಗೆ ಎಷ್ಟರಮಟ್ಟಿಗೆ ಚಿಂತನೆ ಮಾಡಿ, ಅವನ ಬದುಕು ಹಸನು ಮಾಡುವಂಥ, ಅವನಿಗೆ ಕನಿಷ್ಟ ಸವಲತ್ತುಗಳನ್ನು ಕೊಡುವಂಥ ಕೆಲಸವನ್ನು ಮಾಡಬೇಕಾಗಿ ರುವುದು. ನಮ್ಮ ಜನ ಪ್ರತನಿಧಿಗಳ ಸರ್ಕಾರಗಳ ಜವಾಬ್ದಾರಿಯಾಗಿದೆಯೆಂಬ ಮಾತನ್ನು ನಾವೆಲ್ಲರೂ ಅರ್ಥ ಮಾಡಿಕೊಂಡು ಅದರ ಬಗ್ಗೆ ಚಿಂತನೆ ಮಾಡತಕ್ಕಂಥ ಅವಶ್ಯಕತೆ ಖಂಡಿತವಾಗಿ ಇದೆಯೆಂಬ ಮಾತನ್ನು ಹೇಳುತ್ತೇನೆ.

(1-30 PM)

ವ್ಯವಸಾಯ ಎಂದರೆ ಅದಕ್ಕೆ ಮೂಲಭೂತವಾಗಿ ಬೇಕಾಗಿರುವಂಥದ್ದು ನೀರಿನ ಸವಲತ್ತು. ಬಯಲುಸೀಮೆ ಪ್ರದೇಶಗಳಲ್ಲಿ ಕಳೆದ 15 ವರ್ಷಗಳಿಂದ ಒಂದು ಕೆರೆಗೂ ನೀರು ಬರಲಿಲ್ಲ. ಪೂರ್ಣವಾಗಿ ಮಳೆ ಆಶ್ರಿತ

ವ್ಯವಸಾಯ ಮಾಡತಕ್ಕಂಥವರು ನಾವು. ಕೆರೆ ಮತ್ತು ಕೆರೆಯ ಆಶ್ರಯದ ಅಂತರ್ಜಲದಿಂದ ಬರತಕ್ಕಂಥ ಕೊಳವೆ ಬಾವಿ ನೀರಾವರಿಯನ್ನು ಮಾಡತಕ್ಕಂಥವರು ನಾವು. ನಮ್ಮ ಕೊಳವೆ ಬಾವಿಗಳ ಗತಿ ಏನಾಗಿದೆ ಎಂದರೆ, ಬೋರ್‌ವೆಲ್ ಹೊಡೆದು ವ್ಯವಸಾಯ ಮಾಡಿ ಅದರಿಂದ ಅಷ್ಟೋ, ಇಷ್ಟೋ ಹಣ ಬಂದರೆ ಅದರಲ್ಲಿ ಇನ್ನೊಂದು ಬೋರ್‌ವೆಲ್ ಹಾಕುವುದೇ ನಮ್ಮ ಮೊದಲನೇ ಕೆಲಸ. ನಮ್ಮ ಭಾಗದಲ್ಲಿ ರೈತರು ಹಣವನ್ನು ಬೇರೆ ಇನ್ನ್ಯಾವುದಕ್ಕೂ ಉಪಯೋಗ ಮಾಡುತ್ತಿಲ್ಲ. ಈ ರೀತಿ ಮಾಡಿದರೂ ಅವನ ಕಷ್ಟವನ್ನು ತಪ್ಪಿಸಲಿಕ್ಕೆ ಸಾಧ್ಯವೇ ಆಗುತ್ತಿಲ್ಲ. ಇಂಥ ಒಂದು ಸಂದರ್ಭ ಬಂದಿದೆ. ನಾವು ಸಮೃದ್ಧಿಯಾದಂಥ ಒಂದು ಕರ್ನಾಟಕದ ಚಿತ್ರವನ್ನು ಕಾಣುತ್ತಿದ್ದೇವೆ. ಸಮೃದ್ಧಿ ಕರ್ನಾಟಕ ಅಂದರೆ ಅದರ ಅರ್ಥವೇನು? ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಪ್ರತಿಯೊಂದು ಜಿಲ್ಲೆಯಲ್ಲಿರತಕ್ಕಂಥ ಪ್ರತಿಯೊಬ್ಬ ಮನುಷ್ಯನಿಗೂ ಕನಿಷ್ಠ ಸವಲತ್ತು ಸಿಗಬೇಕು, ಅದರಲ್ಲೂ ವಿಶೇಷವಾಗಿ ಪ್ರತಿಯೊಬ್ಬ ರೈತನಿಗೂ ಬೇಕಾದಂಥ, ಮೂಲಭೂತವಾಗಿ ಅವಶ್ಯಕವಾಗಿರುವಂಥ ನೀರನ್ನು ಒದಗಿಸುವಂಥ ಜವಾಬ್ದಾರಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡತಕ್ಕಂಥ ಸರ್ಕಾರದ ಜವಾಬ್ದಾರಿ ಎಂದು ನಾನು ಹೇಳುತ್ತೇನೆ. ಸ್ವಾತಂತ್ರ್ಯ ಬಂದಾಗಿನಿಂದ ಇವತ್ತಿನವರೆಗೂ ಸಹ ಬಯಲು ಸೀಮೆ ಪ್ರದೇಶಗಳಿಗೆ ನೀರಾವರಿ ಒದಗಿಸುವ ಬಗ್ಗೆ ಸರ್ಕಾರಗಳು ಚಿಂತನೆ ಮಾಡಲಿಲ್ಲ. ಅದು ನಮ್ಮ ಸರ್ಕಾರ ಇರಬಹುದು, ಇನ್ನೊಂದು ಸರ್ಕಾರ ವಿರಬಹುದು ಅಥವಾ ಇವತ್ತು ಇರತಕ್ಕಂಥ ಸರ್ಕಾರ ಇರಬಹುದು. ಬಯಲುಸೀಮೆಯ ಪ್ರದೇಶಗಳಿಗೆ ಯಾವ ರೀತಿಯಾದಂಥ ವಿಶೇಷವಾದಂಥ ಆದ್ಯತೆ ಕೊಡಬೇಕು ಎನ್ನುವ ಬಗ್ಗೆ Drought Prone Area Programme (D.P.A.P.) ಎಂದು ಕೇಂದ್ರ ಸರ್ಕಾರದಲ್ಲಿ ಘೋಷಣೆ ಮಾಡಿದ್ದಾರೆ. ಆದರೆ ಆ ಭಾಗಕ್ಕೆ ಯಾವ ತರವಾದಂಥ ಆದ್ಯತೆಗಳನ್ನು ಕೊಡಬೇಕು, ಅಲ್ಲಿಗೆ ಯಾವ ರೀತಿ ನೀರಾವರಿ ಸವಲತ್ತುಗಳನ್ನು ಕೊಡಬೇಕು ಎನ್ನುವುದರ ಬಗ್ಗೆ ಇದುವರೆಗೂ ಚಿಂತನೆ ಮಾಡಿಲ್ಲ. ಅದರ ಬಗ್ಗೆ ಇವತ್ತು ಚಿಂತನೆ ನಡೆಯಬೇಕಾಗಿದೆ. ಆ ಭಾಗದ ರೈತರ ಕಷ್ಟ ಏನಿದೆ ಎನ್ನುವುದರ ಬಗ್ಗೆ ಗಮನ ಹರಿಸಬೇಕಾಗಿದೆ. ಆ ಭಾಗದ ರೈತರ ಸ್ಥಿತಿಗತಿಗಳನ್ನು, ಅವರ ಜೀವನ ನಿರ್ವಹಣೆಯನ್ನು ಯಾವ ರೀತಿ ನಡೆಸಿಕೊಂಡು ಹೋಗುತ್ತಿದ್ದಾರೆ ಎನ್ನುವ ಬಗ್ಗೆ ರೈತರ ಮನೆಯಲ್ಲಿನ ಅವರ ಬದುಕನ್ನು ನೋಡಿದರೆ ಕಣ್ಣಲ್ಲಿ ನೀರು

ಬರುತ್ತದೆ. ಇಲ್ಲಿರತಕ್ಕಂಥ ವಾತಾವರಣ ಮತ್ತು ಅಲ್ಲಿರತಕ್ಕಂಥ ವಾತಾವರಣವನ್ನು ಕಂಡಾಗ ರೈತನ ಬದುಕು ಬೇಡಪ್ಪಾ ಎನಿಸುತ್ತದೆ. ಅದಕ್ಕಾಗಿಯೇ, ಆ ಭಾಗದಲ್ಲಿರತಕ್ಕಂಥ ಎಲ್ಲರೂ ಇವತ್ತು ಬೆಂಗಳೂರು ನಗರಕ್ಕೆ ಬರುತ್ತಿದ್ದಾರೆ. ಇಲ್ಲಿ ಏನೋ ಒಂದು ಕೆಲಸ ಸಿಕ್ಕಲಿ, ಹೇಗೋ ನಮ್ಮ ಜೀವನ ನಡೆಯಲಿ ಎನ್ನತಕ್ಕಂಥ ಪರಿಸ್ಥಿತಿ ಉದ್ಭವಿಸಿದೆ. ಆದ್ದರಿಂದ ನಾನು ತಮ್ಮ ಮುಖಾಂತರ ಈ ಸರ್ಕಾರವನ್ನು ಒತ್ತಾಯ ಮಾಡತಕ್ಕಂಥದ್ದು ಇಷ್ಟೇ, ಬಯಲುಸೀಮೆ ಪ್ರದೇಶಕ್ಕೆ ತಕ್ಷಣ ನೀರಾವರಿ ಕೊಡತಕ್ಕಂಥದ್ದಕ್ಕೆ ಕಾರ್ಯಕ್ರಮ ವನ್ನು ರೂಪಿಸಬೇಕು. 2000 TMC ನೀರು ಪಶ್ಚಿಮ ಘಟ್ಟಗಳಿಂದ ವ್ಯರ್ಥವಾಗಿ ಹರಿದು ಸಮುದ್ರಕ್ಕೆ ಹೋಗುತ್ತಿದೆ. ಇವತ್ತು ಅನೇಕ ರೀತಿಯಾ ದಂಥ ತಂತ್ರಜ್ಞಾನ ಬಂದಿದೆ. ಅದನ್ನು ಉಪಯೋಗಿಸಿಕೊಂಡು ಆ ರೀತಿ ವ್ಯರ್ಥವಾಗತಕ್ಕಂಥ ನೀರನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳ ಬೇಕು, ಅಲ್ಲಿರತಕ್ಕಂಥ ಜನರಿಗೆ ತೊಂದರೆಯಾಗಬಾರದು, ನೀರನ್ನು ಸಮಗ್ರವಾಗಿ ಎಲ್ಲಾ ಜನರಿಗೆ ಕೊಡತಕ್ಕಂಥ ಒಂದು ಅವಕಾಶವನ್ನು ಕಲ್ಪಿಸಬೇಕು ಎಂದು ಹೇಳುತ್ತೇನೆ. ದಿವಂಗತ ಡಾ: ವೈ.ಎಸ್. ರಾಜಶೇಖರ ರೆಡ್ಡಿಯವರಿಗೆ ನಾವು ಮೊನ್ನೆ ಶ್ರದ್ಧಾಂಜಲಿ ಅರ್ಪಿಸತಕ್ಕಂಥ ಸಮಯದಲ್ಲಿ ನೆನೆಪು ಮಾಡಿಕೊಂಡೆವು. ಅವರು ಜಲಯಜ್ಞ ಎನ್ನತಕ್ಕಂಥ ಒಂದು ಕಾರ್ಯಕ್ರಮವನ್ನು ತಂದು, ನಮ್ಮ ಭಾಗಕ್ಕಿಂಥ ಅತಿ ಕಠಿಣವಾದಂಥ, ಕುಡಿಯುವ ನೀರೂ ಸಹ ಇಲ್ಲದ, ಫ್ಲೋರೈಡ್ ಯುಕ್ತ ನೀರು ಇರುವ ರಾಯಲಸೀಮೆ ಪ್ರದೇಶಕ್ಕೆ ನೀರು ಕೊಡತಕ್ಕಂಥ ಪ್ರಯತ್ನವನ್ನು ಅವರ ಆಂಧ್ರ ಪ್ರದೇಶ ಸರ್ಕಾರ ಮಾಡಿದೆ, ಅವರು ಆ ಸಾಹಸವನ್ನು ಮಾಡಿ ಸಫಲವಾಗಿದ್ದಾರೆ ಎನ್ನುವುದಾದರೆ, ನಮ್ಮ ಸರ್ಕಾರ ನಮ್ಮ ಬಯಲುಸೀಮೆ ಪ್ರದೇಶಕ್ಕೆ ನೀರು ಕೊಡತಕ್ಕಂಥದ್ದಕ್ಕೆ, ಆ ಭಾಗದಲ್ಲಿರತಕ್ಕಂಥ ರೈತರಿಗೆ ನೀರಿನ ಸವಲತ್ತನ್ನು ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡದೇ ಹೋದರೆ ಸಮೃದ್ಧ ಕರ್ನಾಟಕ ಹೇಗೆ ಸಾಧ್ಯವಾಗುತ್ತದೆ? ನಮ್ಮಷ್ಟಕ್ಕೆ ನಾವೇ ಸಮೃದ್ಧ ಕರ್ನಾಟಕ ಎಂದು ಮಾತು ಆಡುವುದರಲ್ಲಿ ಅರ್ಥವಿಲ್ಲ. ನಮ್ಮ ಭಾಗದಲ್ಲಿ ಜನರು ಕೊರಗುತ್ತಿದ್ದಾರೆ. ನಿಜವಾಗಿ ಹೇಳುವುದಾದರೆ ನಮ್ಮ ಕಡೆ ಶುದ್ಧವಾದ ಕುಡಿಯುವ ನೀರು ಸಹ ಇಲ್ಲ. ಫ್ಲೋರೈಡ್ ಯುಕ್ತ ನೀರನ್ನು ಕುಡಿದು ಅನಿವಾರ್ಯವಾಗಿ ದಂತಕ್ಷಯ, ಮತ್ತಿತರ ಕಾಯಿಲೆಗಳಿಗೆ ತುತ್ತಾಗಿ ಅಲ್ಲಿ ಸಾಯತಕ್ಕಂಥ ಪರಿಸ್ಥಿತಿಯನ್ನು ನಮ್ಮ ಕೋಲಾರ, ಚಿಕ್ಕಬಳ್ಳಾಪುರ, ಪಾವಗಡ, ತುಮಕೂರಿನಿಂದ ಹಿಡಿದು ಚಿತ್ರದುರ್ಗದವರೆಗೆ ನಾವು ಕಾಣುತ್ತಿದ್ದೇವೆ. ಅಂಥ

ಪರಿಸ್ಥಿತಿಯನ್ನು ಗಡಿ ಪ್ರದೇಶದಲ್ಲಿ ನಾವು ಕಾಣುತ್ತಿದ್ದೇವೆ. ಇಂಥ ಪರಿಸ್ಥಿತಿ ಇರತಕ್ಕಂಥ ಸಂದರ್ಭದಲ್ಲಿ ಇವತ್ತು ರೈತನ ಬದುಕು ಕರ್ನಾಟಕ ರಾಜ್ಯದಲ್ಲಿ ಸಮಾನವಾಗಿ ಹಸನಾಗಬೇಕು, ಅವನಿಗೆ ಕನಿಷ್ಠ ಸವಲತ್ತುಗಳು ಸಿಗಬೇಕು, ಅದರಲ್ಲೂ ಮುಖ್ಯವಾಗಿ ರೈತನಿಗೆ ಮೂಲಭೂತವಾಗಿ ಬೇಕಾದಂಥ ನೀರಿನ ಸವಲತ್ತು ಸಿಗಬೇಕು ಎನ್ನುವುದಾದರೆ ನೀರಾವರಿಗೆ ಹೆಚ್ಚು ಒತ್ತು ಕೊಡತಕ್ಕಂಥ ಕೆಲಸ ಆಗಬೇಕು. ನಾನು ಸರ್ಕಾರವನ್ನು ಒತ್ತಾಯ ಮಾಡತಕ್ಕಂಥದ್ದು ಇಷ್ಟೇ. ನಮ್ಮ ಸರ್ಕಾರದವರು ಕೇವಲ ಎರಡೂವರೆ ಸಾವಿರ ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಇಟ್ಟಿದ್ದಾರೆ. ಆಂಧ್ರ ಪ್ರದೇಶದವರು 1 ಲಕ್ಷದ 49 ಸಾವಿರ ಕೋಟಿ ರೂಪಾಯಿಗಳನ್ನಿಟ್ಟಿದ್ದಾರೆ. ಮೂರು ವರ್ಷದ ಅವಧಿಯಲ್ಲಿ ಅದನ್ನು ಅನುಷ್ಠಾನಗೊಳಿಸುತ್ತೇವೆ ಎಂದು ಅಲ್ಲಿನ ಸರ್ಕಾರದವರು ಘೋಷಣೆ ಮಾಡಿದ್ದಾರೆ. ಈಗಾಗಲೇ 49 ಸಾವಿರ ಕೋಟಿ ರೂಪಾಯಿಗಳನ್ನು ಆಂಧ್ರ ಸರ್ಕಾರದವರು ಖರ್ಚು ಮಾಡಿದ್ದಾರೆ. ನೀವು ಸಂಪನ್ಮೂಲವನ್ನು ಯಾವ ರೀತಿ ತರುತ್ತೀರೋ ಅದು ಬೇರೆ ವಿಚಾರ. ಇವತ್ತು ಸರ್ಕಾರ ಮನಸ್ಸು ಮಾಡಿದರೆ, ಬೇರೆ ಬೇರೆ ರೀತಿಯಲ್ಲಿ ಸಂಪನ್ಮೂಲ ಕೊಡಲು ಅಂತರರಾಷ್ಟ್ರೀಯ ಮಟ್ಟದಲ್ಲಿರುವಂಥ ಬೇರೆ ಬೇರೆ ಏಜೆನ್ಸಿಗಳವರು ತಯಾರಿದ್ದಾರೆ. ಅದನ್ನು ಉಪಯೋಗ ಮಾಡಿಕೊಳ್ಳತಕ್ಕಂಥ ಮನಸ್ಸು, ಅದಕ್ಕೆ ಕಾರ್ಯಕ್ರಮವನ್ನು ಕೊಡತಕ್ಕಂಥ ಸ್ಥೈರ್ಯಬೇಕು. ಅಲ್ಲಿರತಕ್ಕಂಥ ಜನರ ಕಷ್ಟವನ್ನು ಅರ್ಥ ಮಾಡಿಕೊಳ್ಳತಕ್ಕಂಥ ಸರ್ಕಾರ ಬೇಕು. ಆ ಕೆಲಸ ಮಾಡಿದರೆ ಮಾತ್ರ ರೈತನ ಬಗ್ಗೆ ಚಿಂತನೆ ಮಾಡಿದ ಹಾಗಾಗುತ್ತದೆ. ನೀವು ನೀರು ಕೊಟ್ಟರೆ ನಮ್ಮಲ್ಲಿ ಬಂಗಾರಕ್ಕಿಂತ ಹೆಚ್ಚಿನ ಬೆಲೆ ಕೊಡತಕ್ಕಂಥ ಬೆಳೆಗಳನ್ನು ಬೆಳೆದುಕೊಡುತ್ತಾರೆ. ಆದರೆ ನಮಗೆ ನೀರು ಬೇಕು ಅಷ್ಟೇ. ನೀರಿಗಾಗಿ ಹೋರಾಟ ಮಾಡುವವರಿಗೆ ನೀರಿನ ಪ್ರಾಮುಖ್ಯತೆ ಅರ್ಥವಾಗುತ್ತದೆಯೇ ಹೊರತು, ನೀರು ಸಮೃದ್ಧಿಯಾಗಿರತಕ್ಕಂಥ ಜನರಿಗೆ ಅದರ ಪ್ರಾಮುಖ್ಯತೆ ಖಂಡಿತವಾಗಿ ಅರ್ಥವಾಗುವುದಿಲ್ಲ. ಆದ್ದರಿಂದ, ನೀವು ನಮಗೆ ನೀರು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ನಾನು ಈ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಕನಿಷ್ಠ 20 ಸಾವಿರ ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಮೀಸಲಿಡಬೇಕು. ಅನುತ್ಪಾದಕ ಕಾರ್ಯಕ್ರಮಗಳು ಮತ್ತು ಅನುತ್ಪಾದಕವಾಗಿರತಕ್ಕಂಥ ಅನೇಕ ಇಲಾಖೆಗಳಿದ್ದು ಅವನ್ನು 10 ವರ್ಷ close ಮಾಡಿ. ಅದರಿಂದ ಏನೂ ತೊಂದರೆ ಯಾಗುವುದಿಲ್ಲ, ನಷ್ಟವಾಗುವುದಿಲ್ಲ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ

ಮಟ್ಟದಲ್ಲಿರತಕ್ಕಂಥ ಆ ಅಧಿಕಾರಿಗಳಿಗೇ attach ಮಾಡಿ. ಈಗ ಆ ಅಧಿಕಾರಿಗಳು ಅನುತ್ಪಾದಕ ಇಲಾಖೆಗಳಲ್ಲಿ ನಿಷ್ಪ್ರಯೋಜಕವಾಗಿ ಕೆಲಸ ಮಾಡಿಕೊಂಡು ಸಂಬಳವನ್ನು ತೆಗೆದುಕೊಳ್ಳುತ್ತಿದ್ದಾರೆ. ಕೆಲವು ಇಲಾಖೆಗಳಲ್ಲಿ ಕೆಲಸವೇ ಇಲ್ಲ. ಆ ರೀತಿ ಅನುತ್ಪಾದಕವಾಗಿರತಕ್ಕಂಥ ಕಾರ್ಯಕ್ರಮಗಳನ್ನು ರದ್ದು ಮಾಡಿ, ಆ ಹಣವನ್ನು pool ಮಾಡಿ, resource create ಮಾಡಿ ನೀರಾವರಿಗೆ ಉಪಯೋಗಿಸಿ. ಸಾಲ ತೆಗೆದುಕೊಂಡು ಬನ್ನಿ, ಜನರ ಮೇಲೆ ಸ್ವಲ್ಪ ತೆರಿಗೆ ಹಾಕಿ, ತೊಂದರೆಯಿಲ್ಲ, ನೀವು ನೀರನ್ನು ಕೊಟ್ಟು, ರೈತರಿಗೆ ಒಂದು ಎಕರೆಗೆ ಒಂದು ಸಾವಿರ ರೂಪಾಯಿ ತೆರಿಗೆ ಹಾಕಿದರೆ ಅವರು ಅದನ್ನು ಲೆಕ್ಕಕ್ಕಿಡದೇ ಕೊಡುತ್ತಾರೆ, ಐದು ಸಾವಿರ ರೂಪಾಯಿ ಹಾಕಿದರೂ ಲಕ್ಷಾಂತರ ಕೊಡುತ್ತಾರೆ. ಆದರೆ ಅಂಥ ಕಾರ್ಯಕ್ರಮವನ್ನು ರೂಪಿಸತಕ್ಕಂಥದ್ದಕ್ಕೆ ಸರ್ಕಾರಕ್ಕೆ ಒಂದು ದೃಢವಾದ ನಿಲುವು ಬೇಕು ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಇದರ ಬಗ್ಗೆ ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದೇನೆ. ಡಾ: ಪರಮಶಿವಯ್ಯನವರಿಗೆ ಸರ್ಕಾರ ಯಾವುದೇ ಸಂಬಳ ಕೊಡಲಿಲ್ಲ, ಯಾರೂ ಅವರಿಗೆ ಪ್ರೋತ್ಸಾಹ ಕೊಡಲಿಲ್ಲ. ಆದರೂ ಸಹ ಅವರು ಒಂದು ವರದಿಯನ್ನು ತಯಾರು ಮಾಡಿ ಕೊಟ್ಟಿದ್ದಾರೆ. ಆ ವರದಿಯ ಆಧಾರದ ಮೇಲೆ satellite survey ಮಾಡುವುದಕ್ಕೆ ಸನ್ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರವಿದ್ದಾಗ ಸುಮಾರು 5 ಕೋಟಿ ರೂಪಾಯಿಗಳನ್ನು ಕಟ್ಟಿದ್ದು, ಅದರ ಸಮೀಕ್ಷಾ ವರದಿ ತರಿಸಿ ಎಂದು ಅವರು ಈ ಸರ್ಕಾರಕ್ಕೆ ಮಾತ್ರ ಬರೆದು ಎರಡು ವರ್ಷವಾಗಿದೆ. ಅದಕ್ಕೆ ಸುಮಾರು 21 ಕೋಟಿ ರೂಪಾಯಿಗಳನ್ನು ಕಟ್ಟಬೇಕು. ಯಾವ್ಯಾವುದಕ್ಕೋ 10 ಕೋಟಿ, 20 ಕೋಟಿ ರೂಪಾಯಿಗಳನ್ನು ದಾನ ಮಾಡಿದ ಹಾಗೆ ಕೊಡುತ್ತಿದ್ದೀರಿ. ಆದರೆ, ನೀರಾವರಿಗಾಗಿ ಸಮೀಕ್ಷೆ ಮಾಡುವುದಕ್ಕೆ, ಬಯಲು ಸೀಮೆಗೆ ನೀರು ಕೊಡುವುದಕ್ಕೆ, ಸಮೀಕ್ಷಾ ವರದಿ ತರಿಸಲಿಕ್ಕಾಗಿ 21 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಕಟ್ಟಲಿಕ್ಕೆ ಆಗಲಿಲ್ಲ ಎಂದರೆ ಇದಕ್ಕಿಂತ ದುರದೃಷ್ಟಕರವಾದುದು ಇನ್ನೊಂದಿಲ್ಲ. ಆ ಕೆಲಸವನ್ನು ಈಗಾಗಲೇ ನೀವು ಮಾಡಬೇಕಾಗಿತ್ತು. ಯಾರೂ ಹೇಳಬೇಕಾದಂಥದ್ದಲ್ಲ ಅದು. ತಕ್ಷಣ ಡಾ: ಪರಮಶಿವಯ್ಯನವರ ವರದಿ ಆಧಾರದ ಮೇಲೆ ಸಮೀಕ್ಷಾ ವರದಿಯನ್ನು ತರಿಸಿಕೊಳ್ಳುವಂಥ ಕೆಲಸ ಆಗಬೇಕಾಗಿದೆ. ರೈತನ ಬದುಕು ಹಸನಾಗ ಬೇಕಾದರೆ ನೀರೇ ಮೂಲಾಧಾರ. ತದನಂತರ ಬೇರೆ ವಿಚಾರಗಳು ಬರುತ್ತವೆ.

ಅಂದರೆ, ನಂತರ ಒಳ್ಳೆಯ ಗುಣಮಟ್ಟದ ಬೀಜ ಕೊಡತಕ್ಕಂಥದ್ದು ಆಗಬೇಕು. ಸುಗ್ಗಿಕಾಲದಲ್ಲಿ ಹೆಚ್ಚು ಬೆಳೆ ಬರುತ್ತದೆ. ಸದಾ ಸುಗ್ಗಿಕಾಲದಲ್ಲಿ ಬೆಳೆಗಳಿಗೆ ಬೆಲೆ ಕುಗ್ಗುತ್ತದೆ. ಹಾಗೆ ಬೆಲೆ ಕುಗ್ಗಿದಂಥ ಸಂದರ್ಭದಲ್ಲಿ ಯಾವ ರೀತಿ ಸರ್ಕಾರ ರೈತರಿಗೆ ಬೆಂಬಲ ಬೆಲೆ ಕೊಡಬೇಕು ಎನ್ನತಕ್ಕಂಥದ್ದನ್ನು ಈಗಲೇ ಚಿಂತನೆ ಮಾಡಿ. ಎಸ್.ಎಂ.ಕೃಷ್ಣರವರ ಸರ್ಕಾರವಿದ್ದಾಗಲೇ, ರೈತರಿಗೆ ಬೆಂಬಲ ಬೆಲೆ ಕೊಡಲಿಕ್ಕಾಗಿ ಆವರ್ತ ನಿಧಿಯನ್ನು ಇಟ್ಟಿದ್ದಾರೆ. ಆದರೆ ಅದು ಸಾಲದು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ godowns ಇರಬೇಕು, cold storage ಗಳಿರಬೇಕು, ಹೆಚ್ಚು ಉತ್ಪಾದನೆ ಬಂದಂಥ ಸಂದರ್ಭದಲ್ಲಿ ಅವುಗಳಲ್ಲಿ ಶೇಖರಿಸಿಟ್ಟು ಮುಕ್ತ ಬೆಲೆ ಬಂದಂಥ ಸಂದರ್ಭದಲ್ಲಿ ಅದನ್ನು ಮಾಡಿಕೊಳ್ಳತಕ್ಕಂಥ ಮುಕ್ತ ಅವಕಾಶ ಅವನಿಗಿರಬೇಕು. ಇವತ್ತು ರೈತರು survival ಆಗಬೇಕಾದರೆ ಇಂಥಾದ್ದು ಆಗಬೇಕು. ಈಗ ಏನಾಗುತ್ತಿದೆ ಎಂದರೆ ಅನೇಕ ಸಣ್ಣ ರೈತರು ಬೆಳೆ ಬೆಳೆಯುತ್ತಾರೆ, ಅದನ್ನು ಶೇಖರಿಸಿಟ್ಟುಕೊಳ್ಳಲು ಅವನ ಮನೆಯಲ್ಲಿ ಜಾಗವಿರುವುದಿಲ್ಲ, ಆಗ ಅವನು ಅನಿವಾರ್ಯವಾಗಿ ಮಾರುಕಟ್ಟೆಗೆ ಹೋಗಿ, ಕುಸಿದಿರುವಂಥ ಬೆಲೆಗೇ ಕೊಡಬೇಕಾಗುತ್ತದೆ. ಇದು ಇರತಕ್ಕಂಥ ವಾಸ್ತವಾಂಶ. ಇದನ್ನು ಅರ್ಥ ಮಾಡಿಕೊಂಡು, ರೈತನಿಗೆ ಉತ್ಪಾದನೆಯಾಗತಕ್ಕಂಥ ಬೆಳೆಯನ್ನು ನಂತರ ಕಾಪಾಡತಕ್ಕಂಥ process ಏನಿದೆ, ಅದಕ್ಕೆ ಸರ್ಕಾರ ರಕ್ಷಣೆಯನ್ನು ಕೊಡಬೇಕಾಗುತ್ತದೆ. ಅದಕ್ಕೆ ಮೂಲಭೂತವಾದಂಥ ಸೌಕರ್ಯಗಳನ್ನು ಸರ್ಕಾರ ಮಾಡಬೇಕಾಗುತ್ತದೆ. ಆಗ ರೈತನಿಗೆ ಒಂದು ಶಕ್ತಿ ಬರುತ್ತದೆ. ನಾನು ಬೆಳೆದಂಥ ಬೆಳೆಗೆ ಬೆಲೆ ಕುಸಿದರೆ ಆಗ ಸರ್ಕಾರ ನಮ್ಮ ರಕ್ಷಣೆಗೆ ಇದೆ ಎನ್ನುವ ಧೈರ್ಯ ಅವನಿಗೆ ಬರುತ್ತದೆ. ಆ ರೀತಿಯಾಗಿ ರೈತನಿಗೆ ರಕ್ಷಣೆ ಕೊಡತಕ್ಕಂಥ, ಧೈರ್ಯ ಕೊಡತಕ್ಕಂಥ ಕೆಲಸ ಆಗಬೇಕು. ಇತ್ತೀಚೆಗೆ ನೀವು ರೈತರಿಗೆ ಪರಿಹಾರ ಎಂದು 500 ರೂಪಾಯಿಗಳನ್ನೋ, ಒಂದು ಸಾವಿರ ರೂಪಾಯಿಗಳನ್ನೋ ಕೊಟ್ಟಿರಿ. ಅದರಿಂದ ಏನು ಪ್ರಯೋಜನವಾಯಿತು? ಮಹದೇವ ಪ್ರಸಾದ್‌ರವರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟರು. ಅದರಂತೆ, 5 ಎಕರೆಯ ಒಳಗಡೆ ಜಮೀನು ಹೊಂದಿರತಕ್ಕಂಥ ಎಲ್ಲ ರೈತರಿಗೂ ನೀವೇ insurance ಕಟ್ಟಬಹುದಾಗಿತ್ತು. ಯಾರು ಬೆಳೆ ಕಳೆದುಕೊಳ್ಳುತ್ತಾರೆ, ಅವರಿಗೆ automatic ಆಗಿ insurance company ಯವರು ಒಂದಷ್ಟು ಬೆಳೆ ವಿಮೆಯನ್ನಾದರೂ ಕೊಡುತ್ತಿದ್ದರು. ಅದನ್ನೂ ಮಾಡಲಿಲ್ಲ. ಅನೇಕ ಜನ ರೈತರು ನೀವು ಕೊಡುವ

ಒಂದು ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳಲಿಕ್ಕೆ 500 ರೂಪಾಯಿಗಳನ್ನು ಖರ್ಚು ಮಾಡಿಕೊಂಡು, ಬೇಜವಾಬ್ದಾರಿಯಿಂದ 10-15 ದಿನ ಕಾಲ ಕಳೆದು, ಒಂದು ಸಾವಿರಕ್ಕೆ ಐದು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಕೊಂಡಿದ್ದಾರೆ. ಈ ತರಹದ ಕಾರ್ಯಕ್ರಮ ದಯಮಾಡಿ ಬೇಡ. ಇವತ್ತು ನೀವು ಹಾಲು ಉತ್ಪಾದಕರಿಗೆ ಒಂದು ಲೀಟರ್‌ಗೆ 2 ರೂಪಾಯಿಗಳನ್ನು ಕೊಡುತ್ತಿದ್ದೀರಿ. ಎಲ್ಲಿ ನೀರಿಲ್ಲ. ನೀರಿಲ್ಲದೇ ಎಲ್ಲಿ ಕೆಲಸವಿಲ್ಲ ಅಂಥ ಕಡೆಗಳಲ್ಲಿ ವಿಧಿಯಿಲ್ಲದೇ ಹಾಲು ಉತ್ಪಾದನೆಗೆ ಮುಂದಾಗುತ್ತಿದ್ದಾರೆ. ಅಲ್ಲಿ ಕೆಲಸ ಮಾಡತಕ್ಕಂಥವರು ಹೆಣ್ಣು ಮಕ್ಕಳು. ಅಂಥವರಿಗೆ ನೀವು ಒಂದು ಲೀಟರ್‌ಗೆ 2 ರೂಪಾಯಿಗಳನ್ನು ಕೊಡುತ್ತಿದ್ದೀರಿ. ನಿಜವಾಗಿಯೂ ಅವರಿಗೆ ಅದು ವರದಾನ. ಈ ಸರ್ಕಾರ ಮಾಡಿರತಕ್ಕಂಥದ್ದನ್ನು ಅದನ್ನು ನಾನು ಮೆಚ್ಚುತ್ತೇನೆ. ಅದಕ್ಕಾಗಿ ನಾನು ಮುಖ್ಯಮಂತ್ರಿಗಳನ್ನು ಅಭಿನಂದಿ ಸುತ್ತೇನೆ. ಇದರಿಂದ ನಿಜವಾಗಿಯೂ ಒಳ್ಳೆಯದಾಗಿದೆ. ಇದರಿಂದ ಇವತ್ತು ಹೆಣ್ಣುಮಕ್ಕಳು ಸಂತೋಷ ಪಡುತ್ತಿದ್ದಾರೆ. ಈ ರೀತಿಯಾಗಿ ರೈತನಿಗೆ ಅನುಕೂಲವಾಗುವಂತೆ, ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿ ಅವನಿಗೆ ಬೇಕಾಗಿರತಕ್ಕಂಥ ಮೂಲಭೂತ ಸೌಕರ್ಯಗಳನ್ನು upgrade ಮಾಡತಕ್ಕಂಥ ಕೆಲಸಕ್ಕೆ ಸರ್ಕಾರ ಸರಿಯಾದಂಥ, ವ್ಯವಸ್ಥಿತವಾದಂಥ, ವೈಜ್ಞಾನಿಕ ಆಧಾರದ ಮೇಲೆ ಕಾರ್ಯಕ್ರಮಗಳನ್ನು ರೂಪಿಸಬೇಕು. ಇದು ಆಗದೇ, ಸುಮ್ಮನೆ ಚಿಂತನೆ ಮಾಡುವುದು, ಮಂಥನ ಮಾಡುವುದು, ಆಮೇಲೆ ಮನೆಗೆ ಹೋಗುವುದಾದರೆ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಆದ್ದರಿಂದ, ಅಂಥ ಕಾರ್ಯಕ್ರಮಗಳನ್ನು ಮಾಡಬೇಕಾಗಿದೆ ಎಂದು ಹೇಳುತ್ತೇನೆ.

ರೇಷ್ಮೆ ಇಲಾಖೆ ಬಗ್ಗೆ ಬಹಳ ಮನನೊಂದು ಹೇಳುತ್ತೇನೆ. ಬಿತ್ತನೆ ವಲಯ ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದೆ. ಬಿತ್ತನೆ ವಲಯ ಎಂದರೆ ಅದು ಒಂದು ಪ್ರತ್ಯೇಕವಾದ ವಲಯ ಅಂದರೆ isolated place ಎಂದು ಹೇಳಬಹುದು. ಅದು ಯಾವುದರ ಮಧ್ಯೆ ಬಿತ್ತನೆ ಬಿಟ್ಟು ಬೇರೆ ಮಿಶ್ರತಳಿ ಆಗಲಿ ಅಥವಾ ಬೇರೆ ಯಾವುದೇ ಆಗಲಿ ಅಲ್ಲಿ ಮೇಯಿಸಲೇ ಬಾರದು, ಹುಳ ಸಾಕಣೆ ಮಾಡಲೇಬಾರದು. ದುರಾದೃಷ್ಟವಶಾತ್ ಅಲ್ಲಿ ಮಿಶ್ರತಳಿಯನ್ನು ಮೇಯಿಸುತ್ತಿದ್ದಾರೆ. ಆದ್ದರಿಂದ, ಇವತ್ತು seed quality ಹಾಳಾಗುತ್ತಿದೆ. ಇದರಿಂದಾಗಿ ಸಂಪೂರ್ಣವಾಗಿ ರೋಗಗಳು ಹರಡಿ ಉತ್ಪಾದನೆ

ಕುಂಠಿತಗೊಂಡಿದೆ. ಉತ್ಪಾದನೆಯಲ್ಲಿ 60% ಶಿಡ್ಲಘಟ್ಟ ಮಾರುಕಟ್ಟೆಗೆ ಬರುತ್ತಿತ್ತು. ಈಗ ಅದು 30–32 ಟನ್, 25 ಟನ್‌ಗೆ ಬಂದು ನಿಂತಿದೆ. ಹಾಗಾಗಿ ಬಿತ್ತನೆ ವಲಯ ಎನ್ನುವ concept ಏನಿದೆ, ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ, ಅದನ್ನು ಕಾಪಾಡುವ ಜವಾಬ್ದಾರಿಯನ್ನು ತಕ್ಷಣ ಜಾರಿಗೆ ತರಬೇಕು. concept ಕಳೆದರೆ ರೇಷ್ಮೆ ಕಳೆದುಕೊಂಡ ಹಾಗೆ. ರೇಷ್ಮೆಗೆ ಕರ್ನಾಟಕ ರಾಜ್ಯದಲ್ಲಿ ಒಂದು ಇತಿಹಾಸವಿದೆ. ಈ ರಾಷ್ಟ್ರದಲ್ಲಿ ಮೂರನೇ ಎರಡು ಭಾಗ ರೇಷ್ಮೆಯನ್ನು ಕರ್ನಾಟಕ ರಾಜ್ಯ ಉತ್ಪಾದನೆ ಮಾಡುತ್ತಿತ್ತು. ಅದರಲ್ಲೂ ಕೋಲಾರ ಜಿಲ್ಲೆ, ಮೈಸೂರು ಜಿಲ್ಲೆ, ನಾವು ನಮ್ಮ ತಾತನ ಕಾಲದಿಂದ ಅಂದರೆ 300–400 ವರ್ಷಗಳಿಂದ ರೇಷ್ಮೆಯನ್ನು ಬೆಳೆದುಕೊಂಡು ಬಂದಿದ್ದೇವೆ. ಅಂಥ ರೇಷ್ಮೆ ಕೃಷಿ ಇವತ್ತು ಕಳೆದುಹೋಗುತ್ತಿದೆ ಎನ್ನುವುದಾದರೆ ಬಹಳ ನೋವಿನಿಂದ ಹೇಳುತ್ತೇನೆ, ಮೊದಲು ಬಿತ್ತನೆ ವಲಯವನ್ನು ಭದ್ರಪಡಿಸಬೇಕು. ಬಿತ್ತನೆ ವಲಯವನ್ನು control ಮಾಡುವುದಕ್ಕಾಗದಿದ್ದರೆ ಪರ್ಯಾಯವಾಗಿ isolated ಆಗಿರುವ ಜಾಗಗಳ ವ್ಯವಸ್ಥೆ ಮಾಡಿ. ಹೊಸ ಪ್ರದೇಶಕ್ಕೆ ಹೋಗಿ ಅಲ್ಲಿ ಹೊಸ ಪ್ರದೇಶವನ್ನು ಘೋಷಣೆ ಮಾಡಿ ಅವರಿಗೆ incentives ಕೊಟ್ಟು ಅಲ್ಲಿ ಬಿತ್ತನೆ ಬೆಳೆಯುವುದನ್ನು ಮಾಡಿದರೆ ಮಾತ್ರ ಆ seeds purity ಅನ್ನು quality ಅನ್ನು maintain ಮಾಡುವುದಕ್ಕಾಗುತ್ತದೆ. ಆ ಕೆಲಸ ಮಾಡಬೇಕು. ಹಾಗೆಯೇ, ಇದಕ್ಕಾಗಿ ಮಾರುಕಟ್ಟೆಗಳನ್ನು ಪ್ರಾರಂಭ ಮಾಡಬೇಕೆಂದಿದ್ದೀರಿ. ರೈತರಿಗೆ ಅದೊಂದು ವರದಾನವಾಗಿದೆ. ಇದರಲ್ಲಿ ರೈತನಿಗೆ ರಕ್ಷಣೆ ಬಹಳ ಚೆನ್ನಾಗಿದೆ. ಮಾರುಕಟ್ಟೆಗೆ ಬಂದ ತಕ್ಷಣವೇ open auction ವ್ಯವಸ್ಥೆ ಇದೆ. ಯಾರದೋ ಮಾತುಕೇಳಿ ದಯಮಾಡಿ ಹಳೆಯ ಪದ್ಧತಿಗೆ ಹೋಗಬೇಡಿ. ಯಾರೋ ಉದ್ದಿಮೆದಾರರ ಮಾತು ಕೇಳಿ ಮಾರುಕಟ್ಟೆಗಳನ್ನು ತೆಗೆದುಹಾಕ ಬೇಡಿ. ಮಾರುಕಟ್ಟೆಗಳನ್ನು ತೆಗೆಯತಕ್ಕಂಥ Central Silk Boardನ proposal ಇದ್ದರೆ, ಆ proposal ಪ್ರಕಾರ ಅದಕ್ಕೆ ಕರ್ನಾಟಕ ಸರ್ಕಾರದವರು ಜವಾಬ್ದಾರಿ. ಮೂರನೇ ಎರಡು ಭಾಗದಷ್ಟು ರೇಷ್ಮೆ ಉತ್ಪಾದನೆ ಮಾಡತಕ್ಕಂಥವರು ನಾವು. ಇಲ್ಲಿ ನಮ್ಮ ರೈತರನ್ನು ನೀವು ರಕ್ಷಣೆ ಮಾಡಬೇಕು. ಅಲ್ಲಿ ಬಹಳಷ್ಟು irregularities ಇದೆ. ಅದನ್ನು ಸರಿಪಡಿಸುವ ಕೆಲಸವಾಗಬೇಕು.

ಛೇರ್ಮನ್ : ಮುನಿಯಪ್ಪನವರೆ, ತಾವು ಮುಕ್ತಾಯ ಮಾಡಿ. ಈಗಾಗಲೇ 15 ನಿಮಿಷ ಮಾತನಾಡಿದ್ದೀರಿ. ಇನ್ನು, ತಾವು ಸೋಮವಾರ ಮಾತನಾಡಬಹುದು.

ಶ್ರೀ ವಿ. ಮುನಿಯಪ್ಪ : ವ್ಯವಸಾಯ ಸುಧಾರಣೆಯಾಗಬೇಕಾದರೆ, ಮೊದಲು Soil testing ಮಾಡುತ್ತಿದ್ದರು. ಹಿಂದೆ ಎಲ್ಲಾ ಜಿಲ್ಲೆಗಳಲ್ಲಿ mobile vans ಇದ್ದವು. ಈಗ ಎಲ್ಲಿಯೂ soil testing ಮಾಡುವ ಪದ್ಧತಿಯೇ ಇಲ್ಲ, ಆ ಬಗ್ಗೆ ರೈತರಿಗೇ ಜ್ಞಾಪಕವಿಲ್ಲ. ಅದನ್ನು ರೈತರು ಮರೆತುಹೋಗಿದ್ದಾರೆ. ಆದ್ದರಿಂದ, ಮಣ್ಣು ಪರೀಕ್ಷೆ ಆಗಬೇಕು. ತಾಲ್ಲೂಕು ಮಟ್ಟದಲ್ಲಿ ರೈತರಿಗೆ ಬೀಜ ಸಿಗುವಂಥದ್ದಾಗಬೇಕು. Universityಯಲ್ಲಿ Research and Development ವಿಭಾಗವೇನಿದೆ, ಅದು total defunct ಆಗಿದೆ. ಅದು ಯಾವ ಕಾರಣಕ್ಕಾಗಿದೆ ಎಂಬ ಬಗ್ಗೆ ಹೇಳುವುದಕ್ಕೆ ಸಮಯವಿಲ್ಲ. ಅದರ ಬಗ್ಗೆ ಸಂಪೂರ್ಣ ಅಂಕಿ ಅಂಶ ನನ್ನ ಹತ್ತಿರವಿದೆ. ಕೃಷಿ ಇಲಾಖೆಯಲ್ಲಿ Research and Development ಗೆ ಹೆಚ್ಚಿನ ಆದ್ಯತೆ ಕೊಡಬೇಕು. ಇತ್ತೀಚೆಗೆ ಹೊಸ ಹೊಸ ತಳಿಗಳನ್ನು ಕಂಡುಹಿಡಿಯುತ್ತಿದ್ದಾರೆ. Seeds Certification Agency ಎಂದು ಇದೆ. Seeds Certification was totally defunct. ಅದಕ್ಕೇ ಇವತ್ತು ಮಾರುಕಟ್ಟೆಯಲ್ಲಿ ಕಳಪೆ ಬೀಜ ತಾಂಡವವಾಡುತ್ತಿದೆ. Private ನವರು ಬಂದು ರೈತರನ್ನು ಶೋಷಣೆ ಮಾಡುತ್ತಿದ್ದಾರೆ. Seeds Certification Agency ಯವರು ಕೆಲಸ ಮಾಡುತ್ತಿಲ್ಲ. ಅದು Seed quality ಯನ್ನು maintain ಮಾಡಲಿಕ್ಕೆ ಇರುವ ಅದು ಒಂದು Authority ಆಗಿದೆ. ಅಂಥ Seeds Certification Agency ಇವತ್ತು ಕೆಲಸ ಮಾಡುತ್ತಿಲ್ಲ. ಇದರ ಬಗ್ಗೆ ದಯಮಾಡಿ ಗಮನಹರಿಸಬೇಕು.

ಛೇರ್ಮನ್ : ಮುನಿಯಪ್ಪನವರೆ, ದಯಮಾಡಿ, conclude ಮಾಡಿ. ಸೋಮವಾರ, ಮಂಗಳವಾರ ಬೇಕಾದರೆ ಬರಗಾಲದ ಮೇಲೆ ಬೇಕಾದಷ್ಟು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ದಿ: 9–09–09 ರಂದು ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ ಪ್ರಾಸ್ತಾವಿಕ ನುಡಿಗಳಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ವಿಧಾನ ಮಂಡಲದ ಅಧಿವೇಶನವನ್ನು ವಿಶೇಷವಾಗಿ ಕರೆದಿರುವುದಾಗಿ

ಪ್ರಸ್ತಾಪಿಸಿದ್ದಾರೆ. ಈ ಪ್ರಾಸ್ತಾವಿಕ ನುಡಿಗಳನ್ನು ಹೇಳುವ ಸಂದರ್ಭದಲ್ಲಿ, ಈ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಯಾವುದೇ ಅಧಿವೇಶನದಲ್ಲಿ ವಿವಿಧ ಅಭಿವೃದ್ಧಿ ವಿಷಯಗಳ ಮೇಲೆ ಚರ್ಚೆ ಮಾಡಿಲ್ಲ, ಕೇವಲ ಬೇಡಿಕೆಗಳು, ಆಯವ್ಯಯದಲ್ಲಿ ಘೋಷಿಸಿದ ಹೊಸ ಯೋಜನೆಗಳ ಬಗ್ಗೆ ಸುದೀರ್ಘವಾಗಿ ಅರ್ಥಪೂರ್ಣ ಚರ್ಚೆ ಆಗಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರು ಸಭೆಗೆ ಭಾರಿ ನೋವಿನಿಂದ ತಿಳಿಸಿದ್ದಾರೆ. ಮತ್ತೆ, ಪ್ರಾಸ್ತಾವಿಕ ನುಡಿಗಳಲ್ಲಿ ಹೇಳುತ್ತಾ, ಹಿಂದಿನದೆಲ್ಲ ಮರೆತು ಮುಂದಿನ ದಿನಗಳಲ್ಲಿ ಗಂಭೀರವಾಗಿ ಚರ್ಚೆಗಳನ್ನು ಪ್ರಾರಂಭ ಮಾಡಬೇಕೆಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಅದರ ಜೊತೆಗೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚಿಸಲು ವಿಶೇಷವಾಗಿ ಗಮನಹರಿಸಬೇಕೆಂದು ಕಾಡಿ ಬೇಡಿ, ಅತ್ತೂ ಕರೆದು ವಿರೋಧ ಪಕ್ಷದವರನ್ನು ಒಪ್ಪಿಸಿದ್ದೇನೆಂದು ತಿಳಿಸಿದ್ದಾರೆ. ಇವತ್ತಿನವರೆಗೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಏನೇ ಮಾಡಲೂ ಹೋದರೂ ಈ ಸರ್ಕಾರ ಅಧಿಕಾರಕ್ಕೆ ಬಂದ ಒಂದೂಕಾಲು ವರ್ಷಗಳಲ್ಲಿ ವಿರೋಧ ಪಕ್ಷದವರು ಅಡೆತಡೆ ಮಾಡುವುದಕ್ಕೆ ಹೋಗಲಿಲ್ಲ. ಕಳೆದ ಅಧಿವೇಶನದಲ್ಲಿ ಹಲವಾರು ಬೇಡಿಕೆಗಳು ಚರ್ಚೆಗೆ ಬಂದವು. ಉದಾಹರಣೆಗಾಗಿ, ಅಧಿವೇಶನ ಜುಲೈ 9ನೇ ತಾರೀಖಿಗೆ ಪ್ರಾರಂಭವಾಗಿ 29ನೇ ತಾರೀಖಿಗೆ ಮುಕ್ತಾಯವಾಯಿತು. ಕೇವಲ 13 ದಿವಸ ಮಾತ್ರ ಅಧಿವೇಶನ ನಡೆದಿದೆ. ಅದರಲ್ಲಿ ಹಲವಾರು ಗುರುತರವಾದ, ಗಂಭೀರವಾದ ಚರ್ಚೆಗಳನ್ನು ಸಲಹೆಗಳನ್ನು ವಿರೋಧ ಪಕ್ಷದವರಾಗಿ ನಾವೇನು ಕರ್ತವ್ಯ ಮಾಡಬೇಕೋ ಅದನ್ನು ಮಾಡಿದ್ದೇವೆ. ಗುರುತರವಾದ ಆಪಾದನೆಗಳನ್ನೂ ಮಾಡಿದ್ದೇವೆ. ಏಕೆಂದರೆ, ಸನ್ಮಾನ್ಯ ಮುಖ್ಯಮಂತ್ರಿಯವರು ಕಾಡಿ ಬೇಡಿ ಒಪ್ಪಿಸಿದೆ ಎಂದು ಹೇಳಿದ್ದಕ್ಕೋಸ್ಕರ ಈ ಮಾತನ್ನು ಈ ಸಭೆಯ ಗಮನಕ್ಕೆ ತರಬೇಕಾಯಿತು. ಏಕೆಂದರೆ, ಈ ರಾಜ್ಯದ ರೈತಾಪಿ ಜನರ ಬಗ್ಗೆ, ಗ್ರಾಮೀಣ ಪ್ರದೇಶದ ರೈತರ ಬಗ್ಗೆ ಇರಬಹುದು, ಈ ಸರ್ಕಾರವೇನಾದರೂ ಹೊಸದಾಗಿ ಚಿಂತನೆ ಇಟ್ಟುಕೊಂಡು ಅಧಿವೇಶನ ಕರೆದಿದ್ದರೆ ಈ ಮೂರು ದಿನಗಳ ಅಧಿವೇಶನದಲ್ಲಿ ಚರ್ಚಿಸಲು ನಮ್ಮದೇನೂ ಅಭ್ಯಂತರವಿಲ್ಲ. ಹಿಂದಿನ ಅಧಿವೇಶನದಲ್ಲಿ ಇದಕ್ಕೋಸ್ಕರ ಮೂರು ದಿನಗಳ ಅಧಿವೇಶನ ಕರೆಯುತ್ತೇವೆಂದು ಹೇಳಿದ್ದರು. ಅದರ ಜೊತೆಗೆ, ಕಳೆದ ಸಾರಿಯ ಅಧಿವೇಶನದಲ್ಲಿ 24 ಬೇಡಿಕೆಗಳ ಮೇಲೆ ಕೆಲವು ಸದಸ್ಯರುಗಳು ಮಾತ್ರ ಚರ್ಚೆ ಮಾಡುವುದಕ್ಕೆ ಆಯಿತು. ಏಕೆಂದರೆ, ಕೆಲವು ಸದಸ್ಯರುಗಳಿಗೆ ಕೆಲವು

ಇಲಾಖೆಗಳ ಬಗ್ಗೆ ಚರ್ಚೆ ಮಾಡಲೇಬೇಕೆನ್ನುವ ಕಾತುರವಿತ್ತು, ಇದೆ. ಅದು ವಿರೋಧ ಪಕ್ಷದ, ಆಡಳಿತ ಪಕ್ಷದ ಸದಸ್ಯರು ಇರಬಹುದು, ಹೀಗೆ ಎಲ್ಲರೂ ಕಾತುರರಾಗಿದ್ದಾರೆ. ಸುಮಾರು 18–20 ವಿಧೇಯಕಗಳ ಬಗ್ಗೆ ಸಹ ಚರ್ಚೆಯಾಗಬೇಕಾಗಿತ್ತು. ಸರ್ಕಾರದ ಆಗುಹೋಗುಗಳ ಬಗ್ಗೆ ನಾವು ಗುರುತರವಾದ ಆಪಾದನೆಗಳನ್ನು ಮಾಡಬೇಕಾಗುತ್ತದೆ. ಅದರ ಜೊತೆಗೆ, ಕಳೆದ ಸಾರಿ ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು ಮಾತು ಹೇಳಿದ್ದರು. BAC meeting ನಲ್ಲಿ, ನಾವು, ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಸಿದ್ದರಾಮಯ್ಯನವರು ಎಲ್ಲ ಹಲವಾರು ಸಾರಿ ಅಧ್ಯಕ್ಷರ ಗಮನಕ್ಕೆ, ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ, ಕಾನೂನು ಸಚಿವರ ಗಮನಕ್ಕೆ ತಂದಿದ್ದೇವೆ. ಸದನ ಏನು ನಿಯಮ ರೂಪಿಸಿದೆ, ಅದರ ಪ್ರಕಾರ ವರ್ಷಕ್ಕೆ 60 ದಿನಗಳು ಅಧಿವೇಶನ ನಡೆಸಬೇಕು. 60 ದಿನಗಳಲ್ಲಿ ಇವತ್ತಿನವರೆಗೆ ಕೇವಲ 29 ದಿನಗಳು ಮಾತ್ರ ಅಧಿವೇಶನ ನಡೆದಿದೆ. ಇನ್ನೂ 21 ದಿನಗಳ ಅಧಿವೇಶನ ನಡೆಯಬೇಕಾಗಿದೆ. ಈ ತಿಂಗಳು 30ನೇ ತಾರೀಖಿನ ಒಳಗೆ ಕಾನೂನು ರೀತ್ಯಾ ಕನಿಷ್ಠ 50 ದಿವಸಗಳ ಅಧಿವೇಶನ ನಡೆಯಬೇಕಾಗಿದೆ. 50 ದಿವಸಗಳ ಅಧಿವೇಶನ ನಡೆಯಬೇಕಾಗಿದ್ದರೆ ಮೂರು ದಿವಸಗಳು ಸಾಕಾಗುವುದಿಲ್ಲ, ಕನಿಷ್ಠ 21 ದಿನಗಳ ಕಾಲ ಅಧಿವೇಶನ ನಡೆಸಬೇಕೆಂದು ಈಗಾಗಲೇ, ನಾನು ಮತ್ತು ಸಿದ್ದರಾಮಯ್ಯನವರು ಎಲ್ಲ ಹಲವಾರು ಸಾರಿ ಹಿಂದಿನ BAC meetingನಲ್ಲಿಯೂ ಹೇಳಿದ್ದೇವೆ, ಇಂದಿನ ಮೀಟಿಂಗ್‌ನಲ್ಲಿಯೂ ಹೇಳಿದ್ದೇವೆ, ಕಳೆದ ಸಾರಿ ವಿಧಾನ ಸಭಾ ಚುನಾವಣೆ ಇದ್ದಿದ್ದರಿಂದ, ಜುಲೈ ತಿಂಗಳ 30ನೇ ತಾರೀಖಿನೊಳಗೆ ಲೇಖಾನುದಾನ ಪಡೆಯಬೇಕೆಂಬುದು ಸರ್ಕಾರದ ಉದ್ದೇಶವಿದ್ದರಿಂದ ಅವತ್ತು ವಿರೋಧ ಪಕ್ಷದವರಿಂದ ಅಭಿವೃದ್ಧಿ ಕಾರ್ಯಗಳಿಗೆ ಅಡೆತಡೆಯಾಗಬಾರದೆಂಬುವ ಉದ್ದೇಶದಿಂದ ನಾವು ಒಪ್ಪಿದ್ದೆವು. ಮತ್ತೆ ಈ ಸಾರಿಯಾದರೂ ಕನಿಷ್ಠ 20 ದಿವಸಗಳಾದರೂ ಅಧಿವೇಶನವನ್ನು ಮುಂದುವರೆಸಬೇಕೆಂಬುದು ನಮ್ಮ ಬೇಡಿಕೆ ಇದೆ. ಏಕೆಂದರೆ, ಹಲವಾರು ವಿಷಯಗಳ ಬಗ್ಗೆ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಸದಸ್ಯರು ಇರಬಹುದು ಅವರಲ್ಲಿ ತಾವು ಮಾತನಾಡಬೇಕೆಂದು ಭಾವನೆ ಇದೆ. ಏಕೆಂದರೆ, ಈ ಕಾನೂನನ್ನು ನೀವೇ ರೂಪಿಸಿದ್ದೀರಿ. ನವೆಂಬರ್ ಡಿಸೆಂಬರ್‌ನಲ್ಲಿ ಅಧಿವೇಶನ ಕರೆಯುತ್ತೇವೆಂದು ಹೇಳಿದ್ದೀರಿ. ಕರೆಯದಿದ್ದರೆ ಅದೂ ಇಲ್ಲ. ಲೋಕೋಪಯೋಗಿ ಸಚಿವರಾದ

ಶ್ರೀ ಉದಾಸಿಯವರು, ಕಾನೂನು ಮಂತ್ರಿಗಳಾದ ಶ್ರೀ ಸುರೇಶ್‌ಕುಮಾರ್ ರವರಿದ್ದಾರೆ. ಕಳೆದ ಅಧಿವೇಶನದಲ್ಲಿ 18 ವಿಧೇಯಕಗಳು, 24 ಬೇಡಿಕೆಗಳು ಚರ್ಚೆಗೆ ಬಂದವು. ಆದರೆ, 24 ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಸಿಕ್ಕಿದ್ದು ಎರಡರಿಂದ ಎರಡೂವರೆ ಗಂಟೆ ಮಾತ್ರ. ಸನ್ಮಾನ್ಯ ಕರಡಿ ಸಂಗಣ್ಣನವರು, ಗುತ್ತೇದಾರ್‌ರವರು ಉತ್ತರ ಕರ್ನಾಟಕದ ಬಗ್ಗೆ ಚರ್ಚಿಸಲು ಅರ್ಧ ಗಂಟೆ ಅವಕಾಶ ಕೊಡಿ ಎಂದು ಕೇಳಿದ್ದರೂ ಅದಕ್ಕೆ ಅವರಿಗೆ ಅವಕಾಶ ಕೊಡಲಿಲ್ಲ. ಆವತ್ತು ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು writing ನಲ್ಲಿ ಕಳುಹಿಸಿಕೊಟ್ಟರು. ಅವರು ಬರೆದುಕೊಂಡು ಬಂದಿದ್ದ ಉತ್ತರದ ಪ್ರತಿಯನ್ನು ಸದನದ ಮುಂದಿಟ್ಟು ಅದು ರೆಕಾರ್ಡ್ ಆಗಿದೆ. ನಾನು ಅದನ್ನೂ ಸಹ ಇವತ್ತು ನೋಡಿದೆ. ಆವತ್ತು ಮಾನ್ಯ ಮುಖ್ಯಮಂತ್ರಿಯವರು reply ಕೊಡುವ ಸಂದರ್ಭದಲ್ಲಿ ಕೃಷಿ ಬಗ್ಗೆ ಯಾವುದೇ ಚಕಾರವೆತ್ತಲಿಲ್ಲ. ಗ್ರಾಮೀಣಾಭಿವೃದ್ಧಿಗೆ ಇಷ್ಟು ಹಣ ಕೊಡುತ್ತೇವೆಂಬ ಬಗ್ಗೆ ಚಕಾರವೆತ್ತಲಿಲ್ಲ. ಅಂದು ಕೊನೆಯ ದಿವಸವೆಂದು ಲೇಖಾನುದಾನಕ್ಕೆ ಮಂಜೂರಾತಿ ಪಡೆದುಕೊಂಡರು. ಕೃಷಿ ಬಗ್ಗೆ, ರಾಜ್ಯದ ರೈತಾಪಿ ಜನರ ಬಗ್ಗೆ ಈ ಸರ್ಕಾರಕ್ಕೆ ಕಾಳಜಿ ಇದೆ, ವಿರೋಧ ಪಕ್ಷದವರನ್ನು ಕಾಡಿಬೇಡಿ ಒಪ್ಪಿಸಿದೆವು ಎನ್ನುವ ಭಾವನೆ ರಾಜ್ಯದ ಜನತೆಗೆ ಈ ಸದನದ ಮೂಲಕ ಕಳುಹಿಸುವುದು ಬೇಡ. ಕೃಷಿಗೆ ಎಷ್ಟು ಹಣಕೊಟ್ಟರೂ, ಈ ಸರ್ಕಾರ ಎಲ್ಲಾ ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದರೂ ವಿರೋಧ ಪಕ್ಷದವರಾದ ನಾವು ಇವತ್ತೇ Yes ಎಂದು ಹೇಳುತ್ತೇವೆ. ಆ ತರಹದ ಅಜೆಂಡಾ ಏನಾದರೂ ಇದ್ದರೆ ಮಾಡಿ. ಆ ಉದ್ದೇಶದಿಂದ ಈ ಸದನ ಕರೆದು ಇಡೀ ರೈತರ ಸಾಲವನ್ನು ಒಂದೇ ಸಲಕ್ಕೆ ಮನ್ನಾ ಮಾಡುವುದಿರಬಹುದು ಅಥವಾ ರೈತರಿಗೆ ಸವಲತ್ತು ಕೊಡುವ ಕಾರ್ಯಕ್ರಮವಿದ್ದರೆ ಅದನ್ನು ರೂಪಿಸಿದ್ದರೆ ಅದನ್ನು ಮಾಡಲಿ. ಅದಕ್ಕೆ ನಾವು ಯಾವುದೇ ಚರ್ಚೆ ಮಾಡುವುದಿಲ್ಲ. ಇದರ ಬಗ್ಗೆ ಇನೂ ಎರಡು ದಿವಸ ಬೇಕಾದರೆ ಆಡಳಿತ ಪಕ್ಷದ ಎಲ್ಲಾ ಸದಸ್ಯರೂ ಮಾತನಾಡಲಿ. ನಾವು ಬೇಷರತ್ ಬೆಂಬಲ ಕೊಡುತ್ತೇವೆ. ಸಿದ್ದರಾಮಯ್ಯನವರು ಸಹ ಇದಕ್ಕೆ ಬೆಂಬಲ ಕೊಡುತ್ತಾರೆ, ಅವರು ಸಹ ಮೊನ್ನೆ ಹೇಳಿದ್ದಾರೆ, ಅದರ ಬಗ್ಗೆ ಎರಡು ಮಾತಿಲ್ಲ. ಈ ಸರ್ಕಾರಕ್ಕೆ ರೈತರ ಬಗ್ಗೆ ಚಿಂತನೆ ಇದ್ದರೆ, ರೈತರ ಸಾಲ ಮನ್ನಾ ಮಾಡುವುದು ಇರಬಹುದು, ನಮ್ಮದೇನೂ ತಕರಾರಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಕಳೆದ 60 ವರ್ಷಗಳ ಇತಿಹಾಸವನ್ನು

ಹೇಳಿದ್ದಾರೆ. ಅವರ ಭಾಷಣವನ್ನು ಪುಸ್ತಕ ರೂಪದಲ್ಲಿ ಮಾಡಿಸಿ ನಮಗೆ ಒಂದು ಕಾಪಿ ಕೊಟ್ಟಿದ್ದಾರೆ. ಈ ಪುಸ್ತಕದಲ್ಲಿರುವ ಅಂಶವೇನೆಂದರೆ, ಕಳೆದ 60 ವರ್ಷಗಳಲ್ಲಿ ಯಾವುದೇ ರಾಜಕೀಯ ಪಕ್ಷ ಏನೂ ಕೆಲಸ ಮಾಡಿಲ್ಲ, ನಾವು ಅಧಿಕಾರಕ್ಕೆ ಬಂದು ಒಂದೂಕಾಲು ವರ್ಷದಲ್ಲಿ ಕೆಲವು ಸಾಧನೆಗಳನ್ನು ಮಾಡಿದ್ದೇವೆ ಎನ್ನುವ ಭಾವನೆ ಮೂಡುವಂತೆ ರಾಜ್ಯದ ಜನತೆಗೆ ತಿಳಿಸಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು ಸಹ ಹಿಂದೆ ಹಣಕಾಸು ಸಚಿವರಾಗಿ 5 ಸಲ ಬಜೆಟ್ ಮಂಡಿಸಿದ್ದಾರೆ.

(ಈ ಹಂತದಲ್ಲಿ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಹಣಕಾಸು ಖಾತೆ ಸಹ ಇವತ್ತು ಮಾನ್ಯ ಮುಖ್ಯಮಂತ್ರಿಯವರೇ ವಹಿಸಿಕೊಂಡಿದ್ದಾರೆ. ಉದಾಹರಣೆಗೆ, ಬೆಂಗಳುರು ನಗರಕ್ಕೆ 22000 ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡುತ್ತೇವೆಂದು ಹೇಳಿದರು. ಇವರು ಈ ರೀತಿ ಹೇಳಿದ ಮಾರನೇ ದಿವಸ ಹಣಕಾಸು ಇಲಾಖೆಯ ಕಾರ್ಯದರ್ಶಿಯವರು 750 ಕೋಟಿ ರೂಪಾಯಿಗಳ ಸಾಲ ತೆಗೆದುಕೊಳ್ಳುತ್ತಿದ್ದೇವೆಂದು ಹೇಳುತ್ತಾರೆ. 22 ಸಾವಿರ ಕೋಟಿ ರೂಪಾಯಿಗಳನ್ನು ಬೆಂಗಳೂರು ನಗರಕ್ಕೆ invest ಮಾಡುತ್ತೇವೆಂದು ಹೇಳಿದ ಮೇಲೆ ಕೃಷಿಕರಿಗೆ ಎಷ್ಟು ಹಣ ಕೊಡುತ್ತೇವೆಂದು announce ಮಾಡುತ್ತೀರಿ? ದಯಮಾಡಿ ತಿಳಿಸಿ, ಈ ಸರ್ಕಾರದಲ್ಲಿ ಹಣವಿದ್ದರೆ ಬೆಂಗಳೂರು ನಗರಕ್ಕೆ 22000 ಕೋಟಿ ರೂಪಾಯಿಗಳನ್ನು ವಿನಿಯೋಗಿಸಿ. ನಾವು ಬೇಡವೆಂದು ಹೇಳುವುದಿಲ್ಲ. ಈ ಸರ್ಕಾರಕ್ಕೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಒತ್ತು ಕೊಡಬೇಕೆನ್ನುವ ಭಾವನೆ ಇದೆ. ಕೊಡೋಣ. ಸನ್ಮಾನ್ಯ ಮುಖ್ಯಮಂತ್ರಿಯವರು ಚೈನಾಕ್ಕೆ ಹೋಗಿ 4–5 ದಿವಸ ಪ್ರವಾಸ ಮಾಡಿ ಅಲ್ಲಿಂದಲೇ ಸಾರ್ವಜನಿಕರಿಗೆ, ರೈತರಿಗೆ ಒಂದು ಸಂದೇಶವನ್ನು ಕಳುಹಿಸಿಕೊಟ್ಟಿದ್ದಾರೆ. ನಾವು ಸದನ ನಡೆಸುತ್ತೇವೆ, ಆ ಸಂದರ್ಭದಲ್ಲಿ ನಿಮ್ಮ ಅಭಿಪ್ರಾಯವೇನಾದರೂ ಇದ್ದರೆ ನಮಗೆ ಕಳುಹಿಸಿಕೊಡಿ ಎಂದು ಹೇಳಿದ್ದಾರೆ. ರೈತಾಪಿ ಜನರಿಂದ ಹಲವಾರು ಕಾಗದಪತ್ರಗಳು ಬಂದಿವೆ ಎಂದು ಸನ್ಮಾನ್ಯ ಮುಖ್ಯಮಂತ್ರಿಯವರು ಭಾವನೆ ವ್ಯಕ್ತಪಡಿಸಿದ್ದಾರೆ. ಏಕೆಂದರೆ, ಸಾರ್ವಜನಿಕರು ಯಾರೂ ಈ ಸದನದಲ್ಲಿ ಬಂದು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ ಅವರಿಗೆ ಸಂದೇಶ ಕಳುಹಿಸಿ ರೈತರಿಂದ ಅಭಿಪ್ರಾಯ ತೆಗೆದುಕೊಂಡಿದ್ದಾರೆ. ಒಂದೂವರೆ ಸಾವಿರ ಪತ್ರ

ಬಂದಿವೆ ಎನ್ನುವ ಭಾವನೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ನಮ್ಮ ರೈತಾಪಿ ಜನರಿಂದ ಏನು ಬಂದಿದೆ? ಆ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮ ರೂಪಿಸುತ್ತದೆ? ಈ ಸರ್ಕಾರಕ್ಕೆ ಬದ್ಧತೆ ಏನಿದೆ? ಕೇಂದ್ರದಲ್ಲಿ ಹಿಂದೆ NDA ಸರ್ಕಾರವಿತ್ತು. ಇವತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ. 1999 ರಿಂದ 2004 ರವರೆಗೆ ನಮ್ಮ ರೈತಾಪಿ ಜನರಿಗೆ ಯಾವ ಕಾರ್ಯಕ್ರಮವನ್ನು ರೂಪಿಸಿದ್ದರು ಎನ್ನುವುದನ್ನು ದಯಮಾಡಿ ತಿಳಿಸಬೇಕಾಗುತ್ತದೆ. ಕೃಷಿ ಕ್ಷೇತ್ರದ ಬೆಳವಣಿಗೆಯನ್ನು ಶೇಕಡ 4% ಗೆ ಬರುವಂಥ ಸನ್ನಿವೇಶಕ್ಕೆ ತೆಗೆದುಕೊಂಡು ಹೋಗುತ್ತೇವೆಂದು NDA ಸರ್ಕಾರದವರು ಹೇಳಿದ್ದರು. ಆದರೆ ಅವರು ಕೃಷಿ ಕ್ಷೇತ್ರದ ಬೆಳವಣಿಗೆಯನ್ನು 1.4% ರಿಂದ 1.8% ಗೆ ಮಾತ್ರ ಮಾಡಿದರು. ನನಗೆ NDA ಅಥವಾ ಇನ್ನೊಂದು ಸರ್ಕಾರವನ್ನು ಬಯ್ಯಬೇಕೆಂಬ ಉದ್ದೇಶವಿಲ್ಲ. UPA ಸರ್ಕಾರದವರು ಸಹ ಅದನ್ನು 1.4 ರಿಂದ 1.8ಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಿಲ್ಲ. ಏಕೆಂದರೆ, ನಮ್ಮ ರೈತಾಪಿ ಜನ ಕೃಷಿಯನ್ನು ಯಾವ ರೀತಿ ಅವಲಂಬನೆ ಮಾಡಿದ್ದಾರೆ? ರೈತರ ಪರಿಸ್ಥಿತಿ ಏನಿದೆ ಎನ್ನುವುದನ್ನು ಹೇಳಬೇಕಾಗುತ್ತದೆ. ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀಮತಿ ಸೋನಿಯಾ ಗಂಧಿಯವರು ರೂಪಿಸಿರುವ ನೀತಿ ಕಾರ್ಯಕ್ರಮದಂತೆ ಬ್ಯಾಂಕುಗಳ ವಹಿವಾಟು ಶೇಕಡ 100% ಸಾಲ ಕೊಡುವುದರಲ್ಲಿ 18% ರಷ್ಟು ಕೃಷಿ ವಲಯಕ್ಕೆ ಕೊಡುತ್ತೇವೆಂಬ ಭಾವನೆ ವ್ಯಕ್ತಪಡಿಸಿದರು. ಅಂದರೆ ಶೇ 100ಕ್ಕೆ 18 ರಷ್ಟು ಕೃಷಿ ವಲಯಕ್ಕೆ ನೀಡಲಾಗುವುದು ಎಂದು ಹೇಳಿದ್ದಾರೆ. 18% ಎಂದರೆ ಅಂದರೆ 2 ಲಕ್ಷದ 85 ಸಾವಿರ ರೂಪಾಯಿಗಳನ್ನು ಕೃಷಿ ವಲಯಕ್ಕೆ ಕೊಡುತ್ತೇವೆಂಬ ಭಾವನೆಯನ್ನು ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀಮತಿ ಸೋನಿಯಾ ಗಾಂಧಿಯವರು ವ್ಯಕ್ತಪಡಿಸಿದ್ದಾರೆ. ಅದರ ಜೊತೆಗೆ ಪ್ರಸ್ತುತ ವರ್ಷದಲ್ಲಿ ಸುಮಾರು 3 ಲಕ್ಷ 28 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಕೃಷಿ ವಲಯಕ್ಕೆ Agriculture Credit Leading ಕೇಂದ್ರ ಆಯವ್ಯಯದಲ್ಲಿ ನೀಡಲು ಉದ್ದೇಶಿಸಿದೆ ಎಂಬ ಭಾವನೆ ವ್ಯಕ್ತಪಡಿಸಿದ್ದಾರೆ. ನಮ್ಮ ದೇಶದಲ್ಲಿ ರೈತಾಪಿ ಜನ ಒಂದು ಕಡೆ ಸಾಲದ ಬವಣೆಯಿಂದ ನರಳುತ್ತಿದ್ದಾರೆ, ಸಾಯುತ್ತಿದ್ದಾರೆ. ಇನ್ನೊಂದು ಕಡೆ ಬೆಳೆ ನಷ್ಟವಾಗಿ ರೈತ ಕಣ್ಣೀರಲ್ಲಿ ಕೈತೊಳೆಯುವ ಸ್ಥಿತಿ ಇದೆ. ಅದೇ ರೀತಿ ಈ ದೇಶದ ರೈತರ ಸಂಕಷ್ಟವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ವಿದರ್ಭ ಭಾಗಕ್ಕೆ ಇವತ್ತಿನ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾದ ಮತ್ತು

ಲೋಕಸಭಾ ಸದಸ್ಯರಾದ ರಾಹುಲ್ ಗಾಂಧಿಯವರು ಆ ಪ್ರದೇಶಗಳಿಗೆ ಭೇಟಿ ನೀಡಿ 5 ಹೆಕ್ಟೇರ್ ಜಮೀನು ಇರುವವರಿಗೆ ಒಂದು ಸಾರಿ ಸಂಪೂರ್ಣ ಸಾಲ ಮನ್ನಾ ಮಾಡಬೇಕೆನ್ನುವ ಭಾವನೆಯನ್ನು ಅವರು ಕೇಂದ್ರ ಸರ್ಕಾರದ ಮುಂದಿಟ್ಟಿದ್ದಾರೆ.

(2-00 PM)

ಏಕೆಂದರೆ ನಿಜವಾಗಲೂ ಅವರಿಗೆ ರೈತರ ಬಗ್ಗೆ ಒಂದು ಕಾಳಜಿ ಇರುವುದರಿಂದ ಇವತ್ತು 5 ಹೆಕ್ಟೇರ್‌ಗಿಂತ ಕಡಿಮೆ ಜಮೀನು ಯಾರದು ಇದೆ, ಅಂಥವರ ಜಮೀನಿನ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇವತ್ತಿನವರೆಗೂ ಕೇಂದ್ರ ಸರ್ಕಾರ ಅದರ ಬಗ್ಗೆ ಏನು ಕಾರ್ಯಕ್ರಮ ಮಾಡಿಲ್ಲ. ಅದನ್ನು ಕೂಡಲೇ ಮಾಡುವುದಕ್ಕೆ ಈ ಸದನದ ಮುಖೇನ ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಸಂದೇಶವನ್ನು ಕಳುಹಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇವತ್ತು ನಾನು ತರುತ್ತಿದ್ದೇನೆ. ಅದರ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರ ಒಂದು task force committee ಯನ್ನು ಕೂಡ ಮಾಡಿದ್ದಾರೆ ಎನ್ನುವ ಒಂದು ಭಾವನೆಯೂ ಇದೆ. ಅದು ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ಒಂದು ಭಾಗದಲ್ಲಿ ನಮ್ಮ ರೈತಾಪಿ ಜನಕ್ಕೆ ಕೇಂದ್ರ ಸರ್ಕಾರದಲ್ಲಿ ಹೆಸರಾಂಥ ವಿಜ್ಞಾನಿಯಾದ ಡಾ: ಸ್ವಾಮಿನಾಥನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದರು. ಇಡೀ ರಾಷ್ಟ್ರದ ರೈತರ ಬಗ್ಗೆ ಏನು ಕಾರ್ಯಕ್ರಮ ರೂಪಿಸಬೇಕು ಎನ್ನುವ ಒಂದು ಸಮಿತಿಯನ್ನು ಮಾಡಿ ಅವರು ಎಲ್ಲಾ ರಾಜ್ಯಕ್ಕೆ ಭೇಟಿ ಮಾಡಿದ್ದಾರೆ. ಅದರಲ್ಲೂ ಕರ್ನಾಟಕ ರಾಜ್ಯದಲ್ಲಿ whole committee ಬಂದಾಗ ಆಗ ಕೃಷಿ ಸಚಿವರಾಗಿ ಮಾನ್ಯ ಬಂಡೆಪ್ಪ ಕಾಶೆಂಪೂರರವರು ಇದ್ದರು. ಒಂದು Agriculture policy ಯನ್ನು ಮಾಡಿದ್ದರು, ಅದರ ಬಗ್ಗೆ ನಾನು ಆಮೇಲೆ ಹೇಳುತ್ತೇನೆ. ಡಾ: ಸ್ವಾಮಿನಾಥನ್‌ರವರು ಇಡೀ ರಾಷ್ಟ್ರದ ಎಲ್ಲಾ ರಾಜ್ಯದಲ್ಲಿ ಪ್ರವಾಸ ಮಾಡಿ ಅದರಲ್ಲೂ ಕರ್ನಾಟಕ ರಾಜ್ಯದಲ್ಲಿ ಒಂದು ಕೃಷಿ ನೀತಿಯನ್ನು ಮಾಡಿ ಒಳ್ಳೆಯ ರೀತಿಯ ಕಾರ್ಯಕ್ರಮವನ್ನು ರೂಪಿಸಿದ್ದಾರೆ ಎನ್ನುವ ಭಾವನೆಯನ್ನು ಮಾನ್ಯ ಕುಮಾರಸ್ವಾಮಿ ಮತ್ತು ಬಂಡೆಪ್ಪ ಕಾಶೆಂಪೂರರವರು ವ್ಯಕ್ತಪಡಿಸಿ ದ್ದಾರೆ. ಇವತ್ತು ಅವರು ಕೊಟ್ಟಂಥ ವರದಿ ಏನಾಗಿದೆ ಎನ್ನುವುದು ಗೊತ್ತಾಗಿಲ್ಲ. ಆ ವರದಿಯನ್ನು ಕೇಂದ್ರ ಸರ್ಕಾರ ಜಾರಿಗೆ ತರುವುದಕ್ಕೆ ರಾಜ್ಯ

ಸರ್ಕಾರದಿಂದ ಈ ಸಂದರ್ಭದಲ್ಲಿ ಒತ್ತಾಯವನ್ನು ನಾವು ಮಾಡಬೇಕಾಗುತ್ತದೆ. ರಾಜಕೀಯವನ್ನು ಆಮೇಲೆ ಮಾಡೋಣ, ಈಗ ರಾಜಕೀಯವನ್ನು ಮಾಡುವುದು ಬೇಡ. ಕೇಂದ್ರ ಸರ್ಕಾರಕ್ಕೆ ಡಾ: ಸ್ವಾಮಿನಾಥನ್‌ರವರ ವರದಿ ಏನಾಗಿದೆ, ಎಲ್ಲಾ ರಾಜ್ಯದಿಂದ ಅವರು ಏನು ಮಾಡಿದ್ದಾರೆ, ಆ ವರದಿಯನ್ನು ಏನು ಮಾಡಿದ್ದಾರೆ, ಅದನ್ನು ಅನುಷ್ಠಾನಕ್ಕೆ ತಂದರೆ ಇವತ್ತು ರಾಷ್ಟ್ರದ ಎಲ್ಲಾ ರೈತಾಪಿ ಜನರಿಗೆ ಅನುಕೂಲವಾಗುತ್ತದೆ ಎನ್ನುವ ಭಾವನೆ ಇದೆ. ಅದು ಅಲ್ಲದೆ NDA ಸರ್ಕಾರದ ಅವಧಿಯಲ್ಲಿ ರೈತರಿಗೆ ಕೃಷಿ ಸಾಲದ ಕಾರ್ಡ್ ಎಂದು ಕೊಟ್ಟರು. ಅದರಲ್ಲಿ ಕೃಷಿ ಉಪಯೋಗಕ್ಕೆ ಉಪಯೋಗಿಸಬಹುದಾಗಿ ಘೋಷಿಸಿ ಕಾರ್ಡ್ ಕೊಟ್ಟರು. ಅದು ಏನಾಯಿತು? ಕೇಂದ್ರ ಸರ್ಕಾರದಲ್ಲಿ ಅವರದೇ ಸರ್ಕಾರ ಐದು ವರ್ಷ ಇತ್ತು. ವಿರೋಧ ಪಕ್ಷದವರು ಅವರನ್ನು ಮಾಡಬೇಡಿ ಎಂದು ಏನಾದರೂ ಹಿಡಿದುಕೊಂಡಿದ್ದೇವಾ? ಇದು ಅಲ್ಲದೆ NDA Government ಐದು ವರ್ಷ ಇದ್ದಂಥ ಕಾಲದಲ್ಲಿ 10,000 ರೈತರುಗಳು.......

ಅಧ್ಯಕ್ಷರು : ಒಂದು ನಿಮಿಷ, ತಮಗೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ತಾವು ಸಮಯ ಕೊಟ್ಟರೆ ಹೇಳುತ್ತೇವೆ. ಇಲ್ಲಾ ತಾವು ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು : ನಾನು ತಮಗೆ ಕುಳಿತುಕೊಳ್ಳಲು ಹೇಳುತ್ತಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಸರ್ ಇದು ರೈತರ ಬಗ್ಗೆ, ನಾನು ಏನು ನನ್ನ ಪರ್ಷನಲ್ ಮಾತನಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ.

ಅಧ್ಯಕ್ಷರು : ಸಮಯದ ಬಗ್ಗೆ ಒಂದು planning ಮಾಡೋಣ ಅಷ್ಟೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಮುಖ್ಯಮಂತ್ರಿಗಳು ಇವತ್ತು ವಿರೋಧ ಪಕ್ಷದವರನ್ನು ಕಾಡಿ ಬೇಡಿ ಸಭೆ ಮಾಡಿದ್ದೇನೆಂದು ಹೇಳಿದ್ದಾರೆ. ನಾವು ಏನು ನಿಮ್ಮ ಎದುರುಗಡೆ ವಿರೋಧ ಮಾಡಿಲ್ಲ.

ಅಧ್ಯಕ್ಷರು : ನಮ್ಮ ಅಭಿಪ್ರಾಯವೇನೆಂದರೆ, ಇನ್ನು 4–5 ಜನ ಶಾಸಕರು ಮಾತನಾಡಬೇಕೆಂದು ಅಪೇಕ್ಷೆ ಮಾಡಿದ್ದಾರೆ. ನಾನು ಹೇಳುವುದು

ಮುಗಿಸಿದ ನಂತರ ನೀವು ಹೇಳಿ. ಮಾನ್ಯ ಪ್ರತಿಪಕ್ಷದ ನಾಯಕರು 4 ಗಂಟೆಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : 4 ಗಂಟೆಯೊಳಗೆ ನಾನು ಮುಗಿಸುತ್ತೇನೆ ಸ್ವಾಮಿ.

ಅಧ್ಯಕ್ಷರು : ಇನ್ನೊಂದು ಸಲಹೆ, ಊಟಕ್ಕೇನು ನಾವು ಬಿಡುತ್ತಿದ್ದೆವು 2 ಗಂಟೆಯಿಂದ 3 ಗಂಟೆವರೆಗೆ, ಅದನ್ನು ಬಿಟ್ಟುಬಿಡೋಣ. ಆ ಊಟದ ಸಮಯವನ್ನು ನೀವು ತೆಗೆದುಕೊಂಡು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ನಮಗೆ ಊಟ ಬೇಡ. ಬೇಕಾದರೆ ನಾವು ಹಾಗೆ ಇದ್ದು ಸಭೆ ಮಾಡುವುದಕ್ಕೆ ರೆಡಿ ಇದ್ದೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮನಯ ಮುಖ್ಯಮಂತ್ರಿಗಳು ಮಾನ್ಯ ಸಿದ್ಧರಾಮಯ್ಯನವರು ಮಾತನಾಡುವಾಗ ನಾನು ಇರಬೇಕಾಗುತ್ತದೆ, ಅವರ ಭಾಷಣ ಕೇಳಬೇಕಾಗುತ್ತದೆಂದು ಹೇಳಿದರು. ಈ ರಾಜ್ಯದಲ್ಲಿ 27 ಜನರನ್ನು ನಮ್ಮ ಪಕ್ಷದಿಂದ ರಾಜ್ಯದಿಂದ ಜನರು ಆರಿಸಿ ಕಳುಹಿಸಿದ್ದಾರೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರು ಬಹಳ ಮಹತ್ವಪೂರ್ಣವಾದ ವಿಷಯವನ್ನು ಮಾತನಾಡಬೇಕದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏತಕ್ಕೆ ನಮ್ಮ ಪಕ್ಷದ ಸಲಹೆ ಸೂಚನೆಗಳನ್ನು ಕೇಳಬಾರದೆಂದು ಸಂವಿಧಾನದಲ್ಲಿ ಏನಾದರೂ ಬರೆದಿದ್ದಾರೆಯೇ? ದಯಮಾಡಿ ಏತಕ್ಕೆ ಈ ತಾರತಮ್ಯ, ನಮ್ಮ ನಾಯಕರು ಮಾತನಾಡುವಂಥ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಲಿಂಗೇಗೌಡರೆ, ಯಾವುದಕ್ಕೂ ಕೂಡ ತೀರ್ಪು ಕೊಡಬೇಡಿ. Do not come to the conclusion. ಮಾನ್ಯ ರೇವಣ್ಣನವರು ಎಷ್ಟು ಗಂಟೆಗೆ ಮಾತನಾಡುತ್ತಾರೆಂದು ಯಾರಿಗೆ ಗೊತ್ತಿತ್ತು. ಬೆಳಿಗ್ಗೆ ಅವರು ಸದನದಲ್ಲಿ ಇದ್ದರೆ? ಮಾನ್ಯ ಬಾಲಕೃಷ್ಣರವರೇ ನಾಯಕರ ರೀತಿ ಮಾತನಾಡಿದರೆಂದು ನಾವು ಅಂದುಕೊಂಡೆವು. ಸುಮಾರು ಒಂದು ಗಂಟೆಗಳ ಕಾಲ ಮಾತನಾಡಿದ್ದಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಹಾಗಾದರೆ ನೀವು ನಮ್ಮ ಮಾತನ್ನು ಕೇಳಬೇಡಿ. ನಮ್ಮ ನಾಯಕರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಕೇಳಬೇಕಲ್ಲಾ?

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಈ ಸದನಕ್ಕೆ ಆಗಮಿಸಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನೀವು ರೂಲಿಂಗ್ ಕೊಡುವುದಕ್ಕೆ ಹೋಗಬೇಡಿ. ತಾರತಮ್ಯ ಮಾಡಿದ್ದಾರೆಂದು ಹೇಳುವುದು ಸರಿಯಲ್ಲ. It is not right.

ಶ್ರೀ ಕೆ.ಎಂ.ಶಿವಲಿಂಗೇಗೌಡ : ನಾವು ಹೇಳುವುದು ತೀರ್ಪು ಅಲ್ಲ, ದಯಮಾಡಿ ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸಿ, ನಮ್ಮ ನಾಯಕರು ಮಾತನಾಡುವಾಗ ಸಲಹೆಗಳನ್ನು ಕೇಳಿಕೊಳ್ಳಲಿ. ಆಮೇಲೆ ಜೆಡಿಎಸ್‌ನವರು ಏನು ಸಲಹೆ ಸೂಚನೆಗಳನ್ನು ಕೊಡಲಿಲ್ಲವೆಂದು ಅಂದು ಬಿಟ್ಟರೆ?

ಶ್ರೀ ಹೆಚ್.ಸಿ.ಬಾಲಕೃಷ್ಣ : ಜೆಡಿಎಸ್ ದಿಂದ ನಮ್ಮ ನಾಯಕರು ಕೊಡುವ ಸಲಹೆ ಸೂಚನೆಗಳು ಬೇಡವೆ?

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಬಾಲಕೃಷ್ಣರವರು ಜೆಡಿಎಸ್ ಅಲ್ಲವೆ?

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಮ್ಮ ನಾಯಕರು ರೇವಣ್ಣನವರು, ಮಾನ್ಯ ಸಿದ್ಧರಾಮಯ್ಯನವರು ಮಾತನಾಡುವಾಗ ಇರಬೇಕೆಂದು ಹೇಳಿದ್ದಾರೆ. ನಮ್ಮ ನಾಯಕರು ಮಾತನಾಡುವಾಗ ಇರಬೇಕಲ್ಲವೇ? ಆದರೆ ನಾವು ಮಾತನಾಡುವಾಗ ಇರುವುದು ಬೇಡ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಉತ್ತರವನ್ನು ರೆಡಿ ಮಾಡಿಕೊಂಡು ಬಿಟ್ಟಿದ್ದಾರೆ. ಅವರು ಏನು ಹೇಳಬೇಕೆನ್ನುವುದನ್ನು ನಿನ್ನೆ ರೆಡಿ ಮಾಡಿಕೊಂಡು ಕುಳಿತಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಸಿದ್ಧರಾಮಯ್ಯನವರ ಮಾತನ್ನು ಕೇಳುತ್ತಾರೆ, ಹಾಗಾದರೆ ನಮ್ಮ ನಾಯಕರು ಮಾತನಾಡುವುದನ್ನು ಕೇಳುವುದಿಲ್ಲವೆ ಅವರು ಈಗ ಇಲ್ಲ ಎನ್ನುವುದು ಗೊತ್ತು. ಎಲ್ಲರೂ ಮಾತನಾಡುವಾಗ ಇರಬೇಕೆಂದು ಏನಿಲ್ಲ. ಹಾಗಾದರೆ ಸಭೆ ಏಕೆ ಕರೆಯಬೇಕು? ವಿಶೇಷ ಸದನ ಎಂದು ಹೇಳಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ರೇವಣ್ಣನವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ, ಅದು ಮಾನ್ಯ ಶಿವಲಿಂಗೇಗೌಡರಿಗೆ ಇಷ್ಟವಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಹೌದು, ನೀವು ಏನು ಹೇಳಿದರೂ ನನ್ನ ಅಭ್ಯಂತರವಿಲ್ಲ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳನ್ನು ಸದನಕ್ಕೆ ಕರೆಸಿ.

ಅಧ್ಯಕ್ಷರು : ಆಯಿತು. ಮಾನ್ಯ ರೇವಣ್ಣನವರೆ, lunch break ಬೇಡ. ನೀವು continue ಮಾಡಿ. ಆದಷ್ಟು ಬೇಗನೆ ಮುಗಿಸಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಒಳ್ಳೆಯದಾಯಿತು. ನಿಮಗೆ ಕೃಷಿಯ ಬಗ್ಗೆ ಕಾಳಜಿ ಇದೆ. ಮಾನ್ಯ ತೋಟಗಾರಿಕೆ ಮಂತ್ರಿಗಳು ಆಗಲೇ ಹೊರಟರು. ಅವರು ಇಲ್ಲದಿದ್ದರೆ ನಾವು ಇನ್ನೇನು ಮಾತನಾಡುವುದು. ಮಾನ್ಯ ಕಾನೂನು ಸಚಿವರಿಗೆ ನಾನು ಮನವಿ ಮಾಡುವುದು ಇಷ್ಟೆ. ಮಾನ್ಯ ಕಾನೂನು ಸಚಿವರು ಹೇಳಿದರು, ಇಂತಹ ಸಮಯದಲ್ಲಿ ರೇವಣ್ಣನವರು ಮಾತನಾಡುತ್ತಾರೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರಲಿಲ್ಲ. ನಾಳೆ ಸಿದ್ಧರಾಮಯ್ಯನವರು 10 ಗಂಟೆಯಿಂದ 12 ಗಂಟೆಯವರೆಗೆ ಮಾತನಾಡುತ್ತಾರೆ, ನೀವು 12 ಗಂಟೆ ನಂತರ ಮಾತನಾಡಿ ಎಂದು ಸಭಾನಾಯಕರು ತಮ್ಮ ಭಾವನೆ ವ್ಯಕ್ತಪಡಿಸಿ ತೀರ್ಮಾನವನ್ನು ಕೊಟ್ಟಿದ್ದರು. ಅದಕ್ಕೆ ನಾನು ಹನ್ನೆರಡೂವರೆ ಮೇಲೆ ಬಂದೆ, ಬಂದ ನಂತರ ಹೊರಗಡೆ ಇದ್ದೆ, ನಮ್ಮ ಸದಸ್ಯರುಗಳು ಮಾತನಾಡುವಾಗ ಅಡ್ಡಬರಬಾರದೆಂದು ನಾನು ಬರಲಿಲ್ಲ. ನಿನ್ನೆ ಸಭಾನಾಯಕರು ನಮ್ಮ ಗಮನಕ್ಕೆ ತಂದಿದ್ದರು. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಶೀವಲಿಂಗೇಗೌಡರು ಹೇಳಿದರು. ಮಾನ್ಯ ಕಾನೂನು ಸಚಿವರೆ, ಹೋದ ಸಲ ನಾವು ಅಷ್ಟೆಲ್ಲಾ ಮಾತನಾಡಿದೆವು. ನಾನು ಮಾತನಾಡಿದೆ, ಮಾನ್ಯ ಸಿದ್ಧರಾಮಯ್ಯನವರು ಮಾತನಾಡಿ ಇಲಾಖೆಯ ಮೇಲೆ ಐದಾರು ಗುರುತರವಾದ ಅಪಾದನೆಗಳನ್ನು ನಾವು ಕೊಟ್ಟಿದ್ದೆವು. 29ನೇ ತಾರೀಖಿನಲ್ಲಿ ಕೊಟ್ಟಿರುವ statement ನೋಡಿ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಆ ಕಡೆ ಈ ಕಡೆ ಗ್ಯಾಲರಿಗಳು ಖಾಲಿ ಇವೆ. ಅಧಿಕಾರಿಗಳೂ ಇಲ್ಲ. ಅವರನ್ನಾದರೂ ಕರೆಸಿ.

ಅಧ್ಯಕ್ಷರು : ಆಯಿತು. ಈಗ ಕರೆಸುತ್ತೇವೆ.

ಶ್ರೀ ಸುನೀಲ್ ವಿ. ಹೆಗಡೆ : ಮಾನ್ಯ ಅಧ್ಯಕ್ಷರೆ, ಈಗ ಊಟಕ್ಕಾಗಿ ಸದನವನ್ನು ಮುಂದೂಡಿ. ಅನಂತರ ಬಂದು ಮಾತನಾಡೋಣ.

ಶ್ರೀ ಹೆಚ್.ಡಿ.ರೇವಣ್ಣ : ಬೇಡ ಬಿಡಿ, ಈಗಲೇ ಮಾತನಾಡುತ್ತೇನೆ. ಮಾನ್ಯ ಸಭಾಧ್ಯಕ್ಷರು ಇದ್ದಾರೆ. ಅವರೊಬ್ಬರು ಇದ್ದರೆ ನಮಗೆ ಸಾಕು, ಬೇರೆ ಯಾವ ಅಧಿಕಾರಿಗಳು ಇಲ್ಲದಿದ್ದರೂ ಪರವಾಗಿಲ್ಲ. ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ವಿಚಾರ ತರುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು 29ನೇ

ತಾರೀಖಿನ ದಿವಸ ಕೊನೆಯಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದರು. ಉತ್ತರ ಕರ್ನಾಟಕದ ಬಗ್ಗೆ ಮಾನ್ಯ ಸದಸ್ಯರು ಕೇಳುವುದಕ್ಕೆ ಅವಕಾಶ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮಾಡಿರುವ ಸ್ಟೇಟ್‌ಮೆಂಟ್‌ನಲ್ಲಿ ಕೃಷಿ ಬಗ್ಗೆ ಒಂದು ಪದವೇನಾದರೂ ಇದ್ದರೆ ಅವರು ಏನು ಹೇಳುತ್ತಾರೆಯೋ ಅದನ್ನು ನಾವು ಕೇಳುತ್ತೇವೆ. ಸದನದಲ್ಲಿ ಕಾಡಿಬೇಡಿ ಕೇಳುತ್ತೇನೆ ಎಂದು ಅವರು ಹೇಳಿದರು. ಆದರೆ, ನಾವೇ ಬೇಕಾದರೆ ಕಾಡಿಬೇಡಿ ನಮ್ಮದು ತಪ್ಪಾಯಿತೆಂದು ಅವರಲ್ಲಿ ಕ್ಷಮೆ ಕೇಳುತ್ತೇವೆ. ಅವರ ಹೇಳಿಕೆಯಲ್ಲಿ ಕೃಷಿ ಬಗ್ಗೆ ಒಂದು ಅಂಶ ಕೂಡ ಇಲ್ಲ. ಆದ್ದರಿಂದ, ಅವರ ಹೇಳಿಕೆಯನ್ನು ಒಂದು ಕಡೆ ಹಾಕಬೇಕಾಗುತ್ತದೆ. ಏಕೆಂದರೆ, ಇವತ್ತು ದೇಶದಲ್ಲಿ ಒಂದು ಕುಟುಂಬಕ್ಕೆ ಕೇವಲ 1.82 ಹೆಕ್ಟೇರ್ ಭೂಮಿ ಇದೆ. ಇದನ್ನು ನಾನು ಹೇಳಿಲ್ಲ, ಅಧ್ಯಯನ ಮಾಡಿರುವವರು ಹೇಳಿರತಕ್ಕಂಥದ್ದನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರು ಅಥವಾ ಮಧ್ಯಮ ವರ್ಗದ ರೈತರು ಸುಮಾರು ಶೇ. 78 ರಷ್ಟು ರೈತರು ಈ ರಾಷ್ಟ್ರದಲ್ಲಿದ್ದಾರೆ. 22% ನಷ್ಟು ಉಳಿದ ವರ್ಗದವರು ಇದ್ದಾರೆ. ಇವತ್ತು ರಾಜ್ಯದಲ್ಲಿ ಕೆಲವು ಕಡೆ ಬರಗಾಲ ಇದೆ. ಈ ಬರಗಾಲಕ್ಕೋಸ್ಕರ ರೈತರಿಗೆ ಏನು ಕಾರ್ಯಕ್ರಮ ಮಾಡಬೇಕೆಂಬ ಬದ್ಧತೆ ಈ ಸರ್ಕಾರಕ್ಕೆ ಇಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ನಾಯಕರು ಮಾತನಾಡುತ್ತಿದ್ದಾರೆ. ಈಗ ಮಂತ್ರಿಗಳು ಮತ್ತು ಅಧಿಕಾರಿಗಳು ಸಹ ಇಲ್ಲ. ಆದ್ದರಿಂದ, ಊಟಕ್ಕೆ ಸದನ ಮುಂದೂಡಿ ಮತ್ತೆ ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಈಗ ಒಂದು ಗಂಟೆ ಮುಂದೂಡಿ. ಯಾರು ಇಲ್ಲದೆ ಇರುವಾಗ ಏತಕ್ಕೆ ಮಾತನಾಡಬೇಕು?

ಶ್ರೀ ಹೆಚ್.ಡಿ.ರೇವಣ್ಣ : ಇಲ್ಲದಿದ್ದರೆ ಏನಂತೆ?

ಶ್ರೀ ಕೆ.ಎಂ.ಶಿವಲಿಂಗೇಗೌಡ : ಆ ರೀತಿಯಾಗುವುದಿಲ್ಲ. ದಯಮಾಡಿ ಬ್ರೇಕ್ ಕೊಡಿ. ನಮ್ಮ ಪಕ್ಷದ ಗೌರವದ ಪ್ರಶ್ನೆಯಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಯಾರಿಗೂ ಆಸಕ್ತಿ ಇಲ್ಲ. ಅರ್ಧ ಗಂಟೆ ಮುಂದೂಡಿ ಮತ್ತೆ ಮುಂದುವರಿಸೋಣ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಅಧಿಕಾರಿಗಳ ಗ್ಯಾಲರಿಯಲ್ಲಿ ಅಧಿಕಾರಿಗಳೂ ಸಹ ಇಲ್ಲ. ಮತ್ತೆ ಅವರ ಕಡೆ ಸುಮಾರು 10 ಜನ ಕೂಡ ಇಲ್ಲ. ಅರ್ಧ ಗಂಟೆ ಮುಂದೂಡಿ ಆನಂತರ ಮಾತನಾಡೋಣ.

ಅಧ್ಯಕ್ಷರು : ಉಳಿದವರು ಯಾರಾದರೂ ಮಾತನಾಡುವುದಾದರೆ ಮಾತನಾಡಿ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಅಧಿಕಾರಿಗಳು ಬರುತ್ತಾರೆ. ತಾವು ಮಾತನಾಡಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರು ಮಾತನಾಡುವುದಕ್ಕೆ ಅಪೇಕ್ಷೆ ಇಲ್ಲದಿದ್ದರೆ ಬೇರೆಯವರಿಗೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಬಂಡೆಪ್ಪ ಕಾಶೇಂಪೂರ್ : ಮಾನ್ಯ ಅಧ್ಯಕ್ಷರೆ, ಕಾಟಾಚಾರಕ್ಕೆ ಕೇಳುತ್ತೇವೆಂದರೆ ಮಾತನಾಡುವುದು ಬೇಡ. ಅಧಿಕಾರಿಗಳು, ಮಂತ್ರಿಗಳ್ಯಾರು ಇಲ್ಲ. ಕೃಷಿ ಮಂತ್ರಿಗಳು ಒಬ್ಬರು ಇರುವುದು ನನಗೆ ಕಾಣಿಸುತ್ತಿದೆ. ವಿರೋಧಪಕ್ಷದ ನಾಯಕರು ಮಾತನಾಡುವಾಗ ಒಬ್ಬ ಅಧಿಕಾರಿಗಳು ಇಲ್ಲವೆಂದರೆ ಹೇಗೆ?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಮಂತ್ರಿಗಳು ಮತ್ತು ಕೃಷಿ ಮಂತ್ರಿಗಳು ಇದ್ದಾರೆ ನಮಗೆ ಸಾಕು. ನಮಗೇನು ತೋಟಗಾರಿಕೆ ಮಂತ್ರಿಗಳೇನು ಬೇಕಾಗಿಲ್ಲ. ಏಕೆಂದರೆ, ಅವರು ನಮ್ಮ ಟ್ರಾನ್ಸ್ ಫಾರ್ಮರ್‌ಗಳ ಲೆಕ್ಕ ತೆಗೆದುಕೊಂಡು ಬರುವುದಕ್ಕೆ ಹೋಗಿದ್ದಾರೆ. ಟ್ರಾನ್ಸ್ ಫಾರ್ಮರ್‌ಗಳ ವಿಚಾರವನ್ನು ನಿನ್ನೆ ದಿವಸದಿಂದ ಟೈಪ್ ಮಾಡಿಸುತ್ತಿದ್ದಾರೆ. ಅದನ್ನು ತರುವುದಕ್ಕೆ ಅವರು ಹೋಗಿದ್ದಾರೆ. ಅವರು ತೆಗೆದುಕೊಂಡು ಬರಲಿ, ನನ್ನದೇನು ಅಭ್ಯಂತರ ಇಲ್ಲ. ಅಷ್ಟು ಹೊತ್ತಿಗೆ ನಾನು ಮಾತನಾಡುತ್ತೇನೆ. ನಮ್ಮ ಸದಸ್ಯರುಗಳ ಭಾವನೆ ಏನೆಂದರೆ, ನಾವು ಒಟ್ಟು 28 ಜನ ಸದಸ್ಯರಿದ್ದು, ನಮ್ಮ ಭಾವನೆಯನ್ನು ಈ ಸರ್ಕಾರದ ಮುಂದೆ ವ್ಯಕ್ತಪಡಿಸಿದರೂ ಕೂಡ ಅವರು ಕೇಳುತ್ತಿಲ್ಲವೆಂಬ ಭಾವನೆ. ಮಾನ್ಯ ಶಿವಲಿಂಗೇಗೌಡರು, ಮಾನ್ಯ ಬಾಲಕೃಷ್ಣರವರು, ಮಾನ್ಯ ಕರಡಿ ಸಂಗಣ್ಣನವರದು ಆಗಿದೆ. ಆದ್ದರಿಂದ, ನಿಮ್ಮ ಗಮನಕ್ಕೆ ವಿಷಯವನ್ನು ತರುತ್ತೇವೆ. ಮತ್ತೆ ಪತ್ರಿಕಾ ಸ್ನೇಹಿತರು ಸಾಕಷ್ಟು ಇರುವುದರಿಂದ ರಾಜ್ಯದ ಜನತೆಗೆ ಈ ವಿಚಾರ ಮುಟ್ಟಿಸುತ್ತಾರೆ. ಆದ್ದರಿಂದ, ನಮಗೇನು ಅಧಿಕಾರಿಗಳು ಬೇಕಾಗಿಲ್ಲ. ವಿರೋಧ ಪಕ್ಷದ ಸದಸ್ಯರು ಸ್ವಲ್ಪ ಜಾಸ್ತಿ ಇದ್ದಾರೆ, ಆಡಳಿತ ಪಕ್ಷದ ಕಡೆ ಸ್ವಲ್ಪ ಕಡಿಮೆ ಇದ್ದರೂ ಕೂಡ ಪರವಾಗಿಲ್ಲ. ಏಕೆಂದರೆ, ಈ ಕಡೆ ಬೆಂಚ್‌ನವರು ಇದ್ದರೆ ಸಾಕು. ಈ ಸರ್ಕಾರ ಬಂದು 1 ವರ್ಷ 4 ತಿಂಗಳಾಗಿದೆ. ಇಲ್ಲಿಯವರೆಗೆ ರೈತರ ಬಗ್ಗೆ ಯಾವುದಾದ ರೊಂದು ಕಾರ್ಯಕ್ರಮವನ್ನು ಇವರು ರೂಪಿಸಿದ್ದಾರೆಯೇ? ರೈತರ ಬಗ್ಗೆ ಅವರೇನಾದರೂ ಒಂದು ಕಾರ್ಯಕ್ರಮ ರೂಪಿಸಿದ್ದರೆ ಅವರು ಏನು

ಹೇಳುತ್ತಾರೆಯೊ ಅದಕ್ಕೆ ನಾವು ಭಾಗಿಯಾಗುತ್ತೇವೆ. ಏಕೆಂದರೆ, ಇವತ್ತಿನ ದಿವಸ ಕೃಷಿ ನೀತಿಯನ್ನು ತಂದವರು ಯಾರು? ಇಡೀ ರಾಷ್ಟ್ರದಲ್ಲಿ ಕೃಷಿ ನೀತಿಯನ್ನು ಕರ್ನಾಟಕ ರಾಜ್ಯದಲ್ಲಿ ತಂದಂಥ ವ್ಯಕ್ತಿ ಇದ್ದರೆ ಅದು ಮಾಜಿ ಮುಖ್ಯ ಮಂತ್ರಿಯಾಗಿರುವ ಕುಮಾರಸ್ವಾಮಿಯವರ ಕಾಲದಲ್ಲಿ ಸನ್ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರು ಕೃಷಿ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಇದನ್ನು ತಂದರು. ಕೃಷಿ ನೀತಿಯನ್ನು ತರಬೇಕೆಂಬ ಭಾವನೆಯನ್ನು 1995ರಲ್ಲಿ ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದಂತಹ ಕಾಲದಲ್ಲಿ ಯೋಚಿಸಲಾಗಿತ್ತು. ಆಗ ಸನ್ಮಾನ್ಯ ಬೈರೇಗೌಡರು ಇದ್ದರು. ಸನ್ಮಾನ್ಯ ಬೈರೇಗೌಡರು ಇವತ್ತು ನಮ್ಮ ಮುಂದೆ ಇಲ್ಲ. ಕೃಷಿ ನೀತಿಗೆ ಚಾಲನೆ ಕೊಟ್ಟಂಥ ರಾಜಕಾರಣಿಗಳು ಯಾರಾದರೂ ಇದ್ದರೆ ಅದು ಸನ್ಮಾನ್ಯ ದೇವೇಗೌಡರು ಎಂದು ನಾನು ಹೇಳಬೇಕಾಗುತ್ತದೆ. 1995 ರಲ್ಲಿ ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ರಾಜ್ಯದಲ್ಲಿ ಕೃಷಿ ನೀತಿಯನ್ನು ತರಬೇಕೆಂಬ ಭಾವನೆಯನ್ನು ವ್ಯಕ್ತಪಡಿಸಿದರು. ಮತ್ತೆ ಅವರು 1996ನೇ ಇಸವಿಯಲ್ಲಿ ಪ್ರಧಾನ ಮಂತ್ರಿಯಾಗಿ ಹೋದಂಥ ಸಂದರ್ಭದಲ್ಲಿ ಇಡೀ ರಾಷ್ಟ್ರದಲ್ಲಿ ಕೃಷಿನೀತಿಯನ್ನು ತರಬೇಕೆಂಬ ಭಾವನೆಯನ್ನು ವ್ಯಕ್ತಪಡಿಸಿದವರು ಯಾರಾದರೂ ಇದ್ದರೆ ಅದು ಸನ್ಮಾನ್ಯ ದೇವೇಗೌಡರು ಎಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, 60 ವರ್ಷಗಳಲ್ಲಿ ಯಾವ ರಾಜಕಾರಣಿಗಳು ಏನೂ ಮಾಡಿಲ್ಲವೆಂಬ ಭಾವನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ವ್ಯಕ್ತಪಡಿಸಿದ್ದಾರೆ. ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಂಥ ಕಾಲದಲ್ಲಿ ನಮ್ಮ ಕೃಷಿಕರಿಗೆ ಏನೇನು ಕಾರ್ಯಕ್ರಮಗಳನ್ನು ಕೊಟ್ಟರೆಂಬುದನ್ನು ಈ ಸಭೆಯ ಮೂಲಕ ಸನ್ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮಾನ್ಯ ದೇವೇಗೌಡರ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಏನೇನು ಕಾರ್ಯಕ್ರಮಗಳನ್ನು ರೂಪಿಸಿದ್ದರು ಎಂಬುದರ ಬಗ್ಗೆ ಹೇಳುತ್ತೇನೆ. ಇವತ್ತಿನ ದಿವಸ ರೈತರು ಬಳಸುವ ಡಿಎಪಿ ಅಥವಾ phosphate ಗೊಬ್ಬರ ಇರಬಹುದು. ಒಟ್ಟಿನಲ್ಲಿ ಗೊಬ್ಬರಕ್ಕೆ ಸುಮಾರು 2500 ಕೋಟಿ ರೂಪಾಯಿ ಸಬ್ಸಿಡಿಯನ್ನು ಸನ್ಮಾನ್ಯ ದೇವೇಗೌಡರು ಕೊಟ್ಟರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ದೇಶದಲ್ಲಿ ಪ್ರಥಮ ಬಾರಿಗೆ ಗೊಬ್ಬರಕ್ಕೆ 2500 ಕೋಟಿ ರೂಪಾಯಿ ಸಬ್ಸಿಡಿ ಕೊಟ್ಟಂಥ ಯಾರಾದರೂ ಪ್ರಧಾನ ಮಂತ್ರಿ ಇದ್ದರೆ ಅದು ದಕ್ಷಿಣ ಭಾರತದಲ್ಲಿನ ಕರ್ನಾಟಕ ರಾಜ್ಯದ ಪ್ರಧಾನ

ಮಂತ್ರಿ ಎಂದು ಹೇಳಬೇಕಾಗುತ್ತದೆ. ಮತ್ತೆ ಇದರ ಜೊತೆಗೆ ರೈತರು ಬಳಸುವ ಕ್ರಿಮಿನಾಶಕ ಔಷಧಿಗಳಿಗೆ ಸಬ್ಸಿಡಿ ಕೊಟ್ಟಿದ್ದಾರೆ. ಸನ್ಮಾನ್ಯ ನೀರಾವರಿ ಮಂತ್ರಿಗಳು ಇಲ್ಲಿದ್ದಾರೆ. ಇವರ ತಂದೆಯವರು ಅವತ್ತಿನ ದಿವಸ ಕೇಂದ್ರದಲ್ಲಿ ಹೆಚ್‌ಆರ್‌ಡಿ ಮಂತ್ರಿಯಾಗಿದ್ದರು. ಆಗ ಸನ್ಮಾನ್ಯ ದೇವೇಗೌಡರು ಮತ್ತು ಅವರ ತಂದೆಯವರು ಸೇರಿ ಇಡೀ ರಾಷ್ಟ್ರದಲ್ಲಿ ನೀರಾವರಿ ಯೋಜನೆಗಳಿಗೆ ಕೊಟ್ಟಷ್ಟು ಬೇರೆ ಯಾರೂ ಕೊಟ್ಟಿಲ್ಲ. ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ಫೌಂಡೇಷನ್ ಹಾಕಿ ಹೋಗಿದ್ದರು. ಈಗ ಅದು ಏನಾಯಿತು ಸ್ವಾಮಿ? ಕೃಷ್ಣ ಬೇಸಿನ್ ಕೆಲಸ ಮಾಡುವುದಕ್ಕೆ ಎಷ್ಟು ವರ್ಷ ತೆಗೆದುಕೊಳ್ಳಲಾಯಿತು? ಒಂದು ವರ್ಷಕ್ಕೆ ಸುಮಾರು 5000 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ನಿರ್ಣಯ ಮಾಡಿದವರು ಯಾರು? ಸನ್ಮಾನ್ಯ ದೇವೇಗೌಡರು ಇದನ್ನು ಮಾಡಿದರು. ಕೇಂದ್ರದಿಂದ ನೀರಾವರಿ ಯೋಜನೆಗಳು ಯಾವುವು ನೆನೆಗುದಿಗೆ ಬಿದ್ದಿದ್ದವೋ, ಈ ಎಲ್ಲಾ ಯೋಜನೆಗಳಿಗೆ ಹೆಚ್ಚುವರಿ ಹಣವನ್ನು ಕೊಟ್ಟಂಥ ನೀರಾವರಿ ಮಂತ್ರಿ ಇಡೀ ಹಿಂದುಸ್ಥಾನದಲ್ಲಿ ಯಾರಾದರೂ ಮಂತ್ರಿಯಿದ್ದರೆ ಅದು ಸನ್ಮಾನ್ಯ ದೇವೇಗೌಡರು ಎಂದು ಹೇಳಬೇಕಾಗುತ್ತದೆ. ಮತ್ತೆ ಅದೇ ರೀತಿಯಾಗಿ ಹನಿ ನಿರಾವರಿಗೆ 75% ಸಬ್ಸಿಡಿ ಕೊಟ್ಟರು. ಮತ್ತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಹಾಗೂ ಮಹಿಳೆಯರಿಗೆ 90% ಸಬ್ಸಿಡಿಯನ್ನು ಸನ್ಮಾನ್ಯ ದೇವೇಗೌಡರ ಕಾಲದಲ್ಲಿ ಕೊಟ್ಟಿದ್ದು ಎಂದು ಹೇಳಬೇಕಾಗುತ್ತದೆ. ಹಿಂದಿನ ಸರ್ಕಾರಗಳು ಇದನ್ನು ಏಕೆ ಮಾಡಲಿಲ್ಲ? ಮತ್ತೆ 18 ಹೆಚ್‌ಪಿ ಸಾಮರ್ಥ್ಯದ ಟ್ರಾಕ್ಟರ್‌ಗಳಿಗೆ ಸನ್ಮಾನ್ಯ ದೇವೇಗೌಡರು ಇದ್ದಂಥ ಕಾಲದಲ್ಲಿ 50% ಸಬ್ಸಿಡಿ ಕೊಟ್ಟರು. ಮತ್ತೆ ಈ ರಾಷ್ಟ್ರದ ಗ್ರಾಮೀಣ ಪ್ರದೇಶ, ನಗರ ಪ್ರದೇಶ, ಪುರಸಭೆ ಪ್ರದೇಶದ ಜನರು ಇರಬಹುದು, ಒಟ್ಟು 36 ಸಾವಿರ ಕೋಟಿ ಜನರಿಗೆ ರಿಯಾಯಿತಿ ದರದಲ್ಲಿ 2.50 ಪೈಸೆ ದರದಲ್ಲಿ ಗೋಧಿ, 3.00 ರೂಪಾಯಿ ಯಲ್ಲಿ ಅಕ್ಕಿ, 3.00 ರೂಪಾಯಿ ದರದಲ್ಲಿ ಸೀಮೆ ಎಣ್ಣೆ ಕೊಡತಕ್ಕಂಥ ಕಾರ್ಯಕ್ರಮವನ್ನು ಇಡೀ ರಾಷ್ಟ್ರದಲ್ಲಿ ಪ್ರಥಮವಾಗಿ ಜಾರಿಗೆ ತಂದಂಥ ವ್ಯಕ್ತಿ ಇದ್ದರೆ ಅದು ಸನ್ಮಾನ್ಯ ದೇವೇಗೌಡರು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ, 60 ವರ್ಷಗಳಿಂದ ಯಾರು ಏನು ಮಾಡಿಲ್ಲ, ನಾವು 1 ವರ್ಷ 4 ತಿಂಗಳಲ್ಲಿ ಮಾಡುವುದಕ್ಕೆ ಹೊರಟಿದ್ದೇವೆಂದು ಈ ಸರ್ಕಾರ ತನ್ನ ಭಾವನೆಯನ್ನು ವ್ಯಕ್ತಪಡಿಸುತ್ತದೆ. ಇಡೀ ರಾಷ್ಟ್ರದಲ್ಲಿ 50 ವರ್ಷಗಳಲ್ಲಿ 36 ಕೋಟಿ ಜನರಿಗೆ ರಿಯಾಯಿತಿ ದರದಲ್ಲಿ 2.50 ಪೈಸೆ

ದರದಲ್ಲಿ ಗೋಧಿ, 3.00 ರೂಪಾಯಿಯಲ್ಲಿ ಅಕ್ಕಿ, 3.00 ರೂಪಾಯಿ ದರದಲ್ಲಿ ಸೀಮೆ ಎಣ್ಣೆ ಕೊಡತಕ್ಕಂಥ ಕಾರ್ಯಕ್ರಮವನ್ನು ಹಿಂದಿನ ಸರ್ಕಾರಗಳು ಮಾಡಬಾರದೆಂದು ಯಾರಾದರು ಹಿಡಿದುಕೊಳ್ಳಲಾಗಿತ್ತೆ? ಇದನ್ನು ಮಾಡುವುದಕ್ಕೆ ದೇವೇಗೌಡರು ಬೇಕಾಗಿತ್ತೆ? ಕೃಷಿಗೆ ಸಂಬಂಧಪಟ್ಟಂತೆ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಇರಬಹುದು ಅಥವಾ ಪಶುಂಗೋಪನಾ ಇಲಾಖೆ ಇರಬಹುದು. ಮೀನುಗಾರಿಕೆ ಇಲಾಖೆ ಇರಬಹುದು, ರೇಷ್ಮೆ ಇಲಾಖೆ ಇರಬಹುದು, ಇವತ್ತಿನದಿವಸ ಯಾವಯಾವ ಕಾರ್ಯಕ್ರಮಗಳಿಗೆ ಎಷ್ಟು ಒತ್ತು ಕೊಟ್ಟಿದ್ದಾರೆ? ಸನ್ಮಾನ್ಯ ದೇವೇಗೌಡರ ಕಡೆಯಿಂದ ಅವತ್ತಿನ ದಿವಸ ನಾನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ 100ಕ್ಕೆ 70 ಭಾಗ ಸಬ್ಸಿಡಿ ಕೊಟ್ಟು ಉಳಿದ 30 ಭಾಗಕ್ಕೆ 4% ಬಡ್ಡಿಯಂತೆ 10 ವರ್ಷದಲ್ಲಿ ಸಾಲ ಮರುಪಾವತಿ ಮಾಡುವುದಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಇದನ್ನು ದೇಶದಲ್ಲಿ ಪ್ರಥಮ ಬಾರಿಗೆ ಮಾಡಲಾಗಿತ್ತು. ಅವತ್ತಿನ ದಿವಸ ಡೈರಿ ಸೆಕ್ಟರ್‌ಗೆ ಸುಮಾರು 60 ಕೋಟಿ ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಾನು ಕೊಡಿಸಿಕೊಟ್ಟೆ. ಸುಮಾರು 20,000 ಕುಟುಂಬಗಳಿಗೆ ನಾನು ಆವತ್ತು ಡೈರಿ ಸೆಕ್ಟರ್‌ನಲ್ಲಿ ಹಸುಗಳನ್ನು ಕೊಡಿಸುವಂಥ ಕಾರ್ಯಕ್ರಮಗಳನ್ನು ಮಾಡಿಸಿದ್ದೇನೆ. ಮತ್ತು ರೀ ಪೇಮೆಂಟ್ ಕೂಡ 90% ಆಯಿತು. ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದವರು ಸಾಲ ತೆಗೆದುಕೊಂಡರೆ ವಾಪಸ್ಸು ಕಟ್ಟುವುದಿಲ್ಲವೆಂದು ಇತ್ತು, ಸಾಲವನ್ನು 90% ಮರು ಪಾವತಿ ಮಾಡಿಸಿದ್ದೇವೆ. ಅದೇ ರೀತಿ ಸನ್ಮಾನ್ಯ ದೇವೇಗೌಡರು ಇದ್ದಂಥ ಕಾಲದಲ್ಲಿ ಆಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ನಬಾರ್ಡ್ ಬಗ್ಗೆ ಹೇಳಿದ್ದಾರೆ. ಹಿಂದೆ ಈ ನಬಾರ್ಡ್‌ನಲ್ಲಿ ಏನಿತ್ತು, ಕೃಷಿ ಸಾಲವನ್ನು ಕೊಡುವುದು ಬಿಟ್ಟರೆ ಬೇರೆ ಏನೂ ಇಲ್ಲ. ಇವತ್ತು 1 ರಿಂದ 14ವರೆಗೆ ಈ ಕಾರ್ಯಕ್ರಮವನ್ನು ರೂಪಿಸಿದ್ದಕ್ಕೆ ಕರ್ನಾಟಕ ರಾಜ್ಯಕ್ಕೆ ಸುಮಾರು 4883 ಕೋಟಿ ರೂಪಾಯಿಗಳ ರಸ್ತೆಗಳು ಇರಬಹುದು, ಶಾಲಾ ಕಟ್ಟಡಗಳು ಇರಬಹುದು, ಕೆರೆಗಳಿಗೆ ಇರಬಹುದು, ಅಂಗನವಾಡಿ ಕಟ್ಟಡಗಳು ಇರಬಹುದು, ಆಸ್ಪತ್ರೆಗಳಿಗೆ ಇರಬಹುದು ಇದರಲ್ಲಿ ಮಾಡುವುದಕ್ಕೆ ಅವಕಾಶ ಇರಲಿಲ್ಲ. ಇದನ್ನು ಪ್ರಥಮವಾಗಿ ತಂದಿರುವವರು ಮಾನ್ಯ ದೇವೇಗೌಡರು ಎಂದು ಹೇಳಬೇಕಾಗುತ್ತದೆ. ಇದರಿಂದ 25304 ಕಾಮಗಾರಿಗಳನ್ನು ಇವತ್ತು ತೆಗೆದುಕೊಂಡಿದ್ದಾರೆ. 14 ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟವರು ಸನ್ಮಾನ್ಯ

ದೇವೇಗೌಡರು ಪ್ರಧಾನ ಮಂತ್ರಿಗಳು ಇದ್ದಂಥ ಕಾಲದಲ್ಲಿ ಮಾಡಿದ್ದು ಎಂದು ಹೇಳಬೇಕಾಗುತ್ತದೆ. ಅದೇ ರೀತಿ Step ಯೋಜನೆಯಲ್ಲಿ ಮಹಿಳಾ ಸೊಸೈಟಿ ಮಾಡಿದರೆ ಕನಿಷ್ಟ 2.50 ಯಿಂದ 3.50 ಲಕ್ಷ ರೂ.ಗಳನ್ನು ಕೊಡುವ ಕಾರ್ಯಕ್ರಮವನ್ನು ಮಾಡಿದರು. 1996 ರಿಂದ ಸುಮಾರು 50 ಕೋಟಿ ರೂ.ಗಳ ಹಣ ಬಂದಿದೆ. ಮಹಿಳಾ ಉತ್ಪಾದಕರಿಗೆ ಇದರಲ್ಲಿ ಸುಮಾರು 30 ಸಾವಿರ ಹಸುಗಳನ್ನು ಕೊಡುವಂಥ ಕಾರ್ಯಕ್ರಮ, ಇದನ್ನು ಯಾರು ರೂಪಿಸಿದ್ದು ಎಂದರೆ ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಡೈರಿ ಸೆಕ್ಟರ್‌ಗೆ ರೂಪಿಸಿಕೊಟ್ಟಿದ್ದು ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಗುಜರಾತಿನಲ್ಲಿ ಬಿಟ್ಟರೆ ಸುಮಾರು 50 ಕೋಟಿ ರೂ.ಗಳು ಎರಡನೇ ಡೈರಿ ಬೆಂಗಳೂರಿಗೆ ಹಣ ಬಂದಿದ್ದು. ಅದರ ಜೊತೆಗೆ ದಕ್ಷಿಣ ಭಾರತದಲ್ಲಿ ಸಹಕಾರಿ ರಂಗದಲ್ಲಿ ಐಸ್ ಕ್ರೀಂ ಪ್ಲಾಂಟ್ ಇದ್ದರೆ ಅದು ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳಿಯಲ್ಲಿ ಇದನ್ನು ಮಾನ್ಯ ದೇವೇಗೌಡರ ಒಂದು ಆಶೀರ್ವಾದದಿಂದ ಅವತ್ತು ನಾನು ಮಾಡಿಸಿಕೊಂಡು ಬಂದಿರುತ್ತೇನೆ. ಐಸ್ ಕ್ರೀಂ ಘಟಕ ಇರಬಹುದು, ಇದೇ ರೀತಿ ಹಲವಾರು ಬಡವರ ಬಗ್ಗೆ ಹೇಳುವುದಕ್ಕೆ ಹೋದರೆ ಒಂದಲ್ಲ ಐವತ್ತು ಕಾರ್ಯಕ್ರಮಗಳನ್ನು ಕೇವಲ ಹತ್ತುವರೆ ತಿಂಗಳ ಅಧಿಕಾರದ ಅವಧಿಯಲ್ಲಿ ಮಾನ್ಯ ದೇವೇಗೌಡರು ಮಾಡಿರುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಅವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ 3.00 ರೂ.ಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಟ್ಟರು, ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಾಗ 2.00 ರೂ.ಗಳಿಗೆ ಒಂದು ಕೆ.ಜಿ ಅಕ್ಕಿಯನ್ನು ಕೊಡುವ ಕಾರ್ಯಕ್ರಮ ಇತ್ತು. ಅದನ್ನು ತೆಗೆದು ಹಾಕಿದರು, ಇದು ಮಾನ್ಯ ಜಯಚಂದ್ರರವರು ಇಲ್ಲಿಯೇ ಇದ್ದಾರೆ, ಅವರಿಗೆ ಗೊತ್ತಿದೆ. ಮತ್ತೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿ ಬಂದ ನಂತರ 3.00 ರೂ.ಗಳಿಗೆ ಕೆ.ಜಿ.ಗೆ ಅಕ್ಕಿ ಕೊಡುವ ಕಾರ್ಯಕ್ರಮ ಜಾರಿಗೆ ಬಂತು. ಮತ್ತೆ ಮಾನ್ಯ ದೇವೇಗೌಡರು ಹೋದ ಮೇಲೆ ಅದನ್ನು ತೆಗೆದು ಹಾಕಿದರು. ಆಗ ಅಕ್ಕಿ ಕೆ.ಜಿ.ಗೆ 7.50 ರೂಪಾಯಿಗಳು ಇತ್ತು. ಮಾನ್ಯ ಧರ್ಮಸಿಂಗ್ ರವರ ನೇತ್ರತ್ವದಲ್ಲಿ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಈ ರಾಜ್ಯದಲ್ಲಿ 3.20 ರೂ.ಗಳಿಗೆ ಕೆ.ಜಿ.ಗೆ ಜಾರಿಗೆ ತಂದೆವು. ಕೇಂದ್ರದಲ್ಲಿ NDA Government ಇತ್ತು, ಇವತ್ತು ನಮ್ಮ ರೈತಾಪಿ ಜನರಿಗೆ ಯಾವ ರೀತಿ ಅನುಕೂಲವಾಗಿ ರುತ್ತದೆಂದು ಭಾವಿಸಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಂಥ

ಸಂದರ್ಭದಲ್ಲಿ ತಾವು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಪಕ್ಷಬೇಧ ಮರೆತು ಅಭಿವೃದ್ಧಿ ಕಾರ್ಯದಲ್ಲಿ ನಾವು ಒಂದಾಗಬೇಕೆಂದು ಹೇಳಿ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. 1995 ರಲ್ಲಿ ಕರ್ನಾಟಕ ಹಾಲು ಮಹಾ ಮಂಡಳದ ಅಧ್ಯಕ್ಷನಾದ ಸಂದರ್ಭದಲ್ಲಿ ಸುಮಾರು 13 ಒಕ್ಕೂಟಗಳು ಇದ್ದವು. ಅದರಲ್ಲಿ 10 ಒಕ್ಕೂಟಗಳು ಸಂಪೂರ್ಣವಾಗಿ ನಷ್ಟದಲ್ಲಿದ್ದವು. 10 ವಾರದಿಂದ 15 ವಾರದವರೆಗೆ ಬಟವಾಡೆ ಕೊಟ್ಟಿರಲಿಲ್ಲ. ಮಾನ್ಯ ಜಯಚಂದ್ರರವರು ಇಲ್ಲಿಯೇ ಇದ್ದಾರೆ, ತುಮಕೂರು ಹಾಲು ಒಕ್ಕೂಟದಲ್ಲಿ 10–12 ವಾರದಿಂದ ಬಟವಾಡೆಯನ್ನು ಕೊಟ್ಟಿರಲಿಲ್ಲ. ತಮ್ಮ ಧಾರವಾಡ ಹಾಲು ಒಕ್ಕೂಟದಲ್ಲಿ 10 ವಾರದವರೆಗೆ ಬಟವಾಡೆಯನ್ನು ಕೊಟ್ಟಿರಲಿಲ್ಲ. ನಾನು ಮಾನ್ಯ ದೇವೇಗೌಡರನ್ನು ಹಿಡಿದು ಕೇಂದ್ರ ಸರ್ಕಾರದಿಂದ 5 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರದಿಂದ 5 ಕೋಟಿ ರೂ.ಗಳನ್ನು ಕೊಡಿಸಿ ಆ ಒಕ್ಕೂಟಗಳನ್ನು ಮೇಲಕ್ಕೇಳಿಸುವ ಕಾರ್ಯಕ್ರಮವನ್ನು ಮಾಡಿಸಿದೆವು. ಅದೇ ರೀತಿ ಕೋಲಾರದಲ್ಲಿ ರಜಾ ಘೋಷಣೆ ಮಾಡುವಂಥ ದಿನ ಇತ್ತು. ಬರೀ 9 ರಿಂದ 10 ಲಕ್ಷ ಮೀಟರ್ ಹಾಲನ್ನು ನಾವು ತೆಗೆದುಕೊಳ್ಳುವಂಥ ಸನ್ನಿವೇಶದಲ್ಲಿ ಇರಲಿಲ್ಲ. ಇವತ್ತು ಕೇವಲ 10 ವರ್ಷದಲ್ಲಿ 40 ಲಕ್ಷ ಲೀಟರ್ ಹಾಲು ಇವತ್ತು ಬರುತ್ತಿದೆ. ಈ ರಾಷ್ಟ್ರದಲ್ಲಿ 60 ವರ್ಷದಿಂದ ಯಾರು ಮಾಡಿಯೇ ಇಲ್ಲ ಎನ್ನುವಂಥ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೃಷಿಯಲ್ಲಿ ಯಾರು ಕೆಲಸವನ್ನು ಮಾಡಿಲ್ಲ ಎನ್ನುವ ಭಾವನೆ ಇದೆ, ಯಾರಾದರೊಬ್ಬರು ಮಾಡಿರುತ್ತಾರೆ. ಅದನ್ನು ನಾನು ಮಾಡಿದ್ದೇನೆಂದು ಹೇಳುತ್ತಿಲ್ಲ. ಹಾಲು ಉತ್ಪಾದಕರ ಮತ್ತು ಸಹಕಾರ ಹಾಲು ಒಕ್ಕೂಟದ ನೌಕರರ ಸಹಕಾರದಿಂದ ನಾವು ಮಾಡಿರುತ್ತೇವೆ. ಅದರ ಕೊರತೆಯಲ್ಲಿ ಇವತ್ತು 150–200 ಕೋಟಿ ರೂ.ಗಳು ಚನ್ನರಾಯಪಟ್ಟಣ ಡ್ಯೆರಿ ಇರಬಹುದು, ಅದು 50 ಕೋಟಿ ರೂ.ಗಳಿಂದ 85 ಕೋಟಿ ರೂ.ಗಳವರೆಗೆ ಬಂದು ಇವತ್ತು, 150 ಕೋಟಿ ರೂ.ಗಳವರೆಗೆ ಬಂದಿದೆ. ಅದೇ ರೀತಿ ಇವತ್ತು ಕರ್ನಾಟಕ ರಾಷ್ಟ್ರದಲ್ಲಿ ಹಾಲು ಉತ್ಪಾದನೆಯಲ್ಲಿ ಎರಡನೆಯ ಸ್ಥಾನದಲ್ಲಿದ್ದೇವೆ. ಸುಮಾರು 400 ಕೋಟಿ ರೂಪಾಯಿಗಳ turn over ಇದ್ದಂಥದ್ದನ್ನು 3400 ಕೋಟಿ ರೂ.ಗಳವರೆಗೆ ತೆಗೆದುಕೊಂಡು ಹೋಗಿರುತ್ತೇವೆ. ಬೇಕಾದರೆ ಇವತ್ತು ಮಾಡಲಿ, ಈಗಿನ ಅಧ್ಯಕ್ಷರು 30,000 ಕೋಟಿ ರೂ.ಗಳವರೆಗ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದ್ದಾರೆ. ಡಾ: ಕುರಿಯನ್‌ರವರು ಡ್ಯೆರಿ ರಂಗದಲ್ಲಿ ಸಾಕಷ್ಟು

ಅನುಭವವನ್ನು ಹೊಂದಿದ್ದರೂ ಕೂಡ ಅವರು 40 ವರ್ಷ ಕಷ್ಟಪಟ್ಟರೂ 5000 ಕೋಟಿ ರೂ.ಗಳಿಗೆ ತೆಗೆದುಕೊಂಡು ಹೋಗುವುದಕ್ಕಾಗಲಿಲ್ಲ. ಏಕೆಂದರೆ ಅದು ಅಷ್ಟು ಸುಲಭವಲ್ಲ. ನಾವು ಇದ್ದಂಥ ಸಮಯದಲ್ಲಿ ಕೋಲಾರದಲ್ಲಿ ರೋಡಿಗೆ ಹಾಲು ಸುರಿದಿದ್ದಾರೆ. ತುಮಕೂರು ಡೈರಿ ಬಾಗಿಲು ಮುಚ್ಚುವ ಪರಿಸ್ಥಿತಿಯಲ್ಲಿತ್ತು. ಕಾನೂನು ಮಂತ್ರಿಗಳು ಒಬ್ಬರು ಇದ್ದಾರೆ ಸಾಕು, ಎಲ್ಲಾ ಮಂತ್ರಿಗಳು ಅವರಿಗೆ ಹೇಳಿ ಹೋಗಿದ್ದಾರೆ, ಅವರ ಹತ್ತಿರ ಎಲ್ಲಾ ಮಾಹಿತಿ ಇರುತ್ತದೆ. ನೀವು ಏನು ಚಿಂತೆ ಮಾಡುವುದು ಬೇಡ. ಈಗ ಓಟಿಂಗ್ ಹಾಕಿ ಬಿಡಿ, ಯಾರ ಮೆಜಾರಿಟಿ ಇದೆ ಎನ್ನುವುದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ನಾವು ಸಲಹೆ ತೆಗೆದುಕೊಳ್ಳುವವರು ಅಲ್ಲ, ಸಲಹೆಯನ್ನು ನೀವು ತೆಗೆದುಕೊಳ್ಳುತ್ತಿರುವವರು. ಸಲಹೆ ಕೊಡಿ ಎಂದು ಹೇಳಿದವರು ನೀವು, ನಾವು ಹೇಳಿದೆವಾ? ಬರೆದುಕೊಳ್ಳುವವರು ಇದ್ದರೆ, ಅದನ್ನು ತಿಳಿದುಕೊಳ್ಳುವವರು ಇರಬೇಕು.

ಶ್ರೀ ಹೆಚ್.ಡಿ.ರೇವಣ್ಣ : ಇರಲಿ ಬಿಡಿ. ಈಗ ಮಾನ್ಯ ಮುಖ್ಯಮಂತ್ರಿಗಳು ಎಲ್ಲಿದ್ದರೂ ಟಿ.ವಿ.ಯಲ್ಲಿ ನೋಡುತ್ತಿರುತ್ತಾರೆ, ನೀವು ಏನು ಚಿಂತೆ ಮಾಡಿಕೊಳ್ಳಬೇಡಿ, ಸುಮ್ಮನೆ ಇರಿ. ಮಾನ್ಯ ಸಚಿವರಾದ ವೆಂಕಟರಮಣಪ್ಪನವರಿಗೆ ನಾವು ಧನ್ಯವಾದಗಳನ್ನು ಹೇಳೋಣ. ನಿಮ್ಮ ಬಗ್ಗೆ ಹೇಳಬೇಕೆಂದರೆ, Sericulture ಕರ್ನಾಟಕ ರಾಜ್ಯದಲ್ಲಿ ಬಾಗಿಲು ಮುಚ್ಚುವಂಥ ಪರಿಸ್ಥಿತಿಯಲ್ಲಿದೆ. ಒಂದಾನೊಂದು ಕಾಲದಲ್ಲಿ ಈ ರಾಜ್ಯದಲ್ಲಿ Sericulture first ಇತ್ತು. ನೀವು ಹಿರಿಯರಿದ್ದೀರಿ. ಮಾಡಿ ನಮಗೆ ಸಂತೋಷವಿದೆ. ನಮ್ಮ ರೈತಾಪಿ ಜನರಿಗೆ ಪಶು ಆಹಾರ ಬೇಕು. 1994–95 ರಲ್ಲಿ ಬರೀ 2000 ಟನ್ ಮೊದಲು ಮಾಡುತ್ತಿರಲಿಲ್ಲ. 24000 ಮೆಟ್ರಿಕ್ ಟನ್ ಇವತ್ತು ಪ್ರತಿ ತಿಂಗಳು ಉತ್ಪಾದನೆಯಾಗುತ್ತಿದೆ. ಇಡೀ ರಾಷ್ಟ್ರದಲ್ಲಿ ಕರ್ನಾಟಕ ಹಾಲು ಮಹಾಮಂಡಳಿ ಮಾಡುತ್ತಿದೆ ಎಂದು ಹೇಳಬೇಕಾಗುತ್ತದೆ. ಮುಂದಿನ ದಿನಗಳಲ್ಲಿ 48000 ಮೆಟ್ರಿಕ್‌ಟನ್ ಉತ್ಪಾದನೆ ಮಾಡಬೇಕೆನ್ನುವುದು ಈಗಾಗಲೇ ನಾನು ಇದ್ದಾಗ ಈ ಕೆಲಸವನ್ನು ಪ್ರಾರಂಭ ಮಾಡಿಸಿದ್ದೇನೆ ಎನ್ನುವುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕಾಗುತ್ತದೆ. ಏಕೆಂದರೆ, ಈ ದೇಶದಲ್ಲಿ 60 ವರ್ಷದಲ್ಲಿ ಏನೂ ಆಗಿಲ್ಲ. ಅವರ ಊರಿನ ಬಗ್ಗೆ ಹೇಳಿದ್ದಾರೆ, ಅದರ ಬಗ್ಗೆ ಆಮೇಲೆ ಬರುತ್ತೇನೆ.

ನಮ್ಮೂರಿನ ಬೂಕನಕೆರೆ, ರಾಜ್ಯದಲ್ಲಿ ಎಷ್ಟು ಬೂಕನಕೆರೆ ಇವೆ ಎನ್ನುವುದನ್ನು ನಾನು ಆಮೇಲೆ ಹೇಳುತ್ತೇನೆ. ಎಷ್ಟು ಹರಪನಹಳ್ಳಿ ಇದೆ ಎನ್ನುವುದನ್ನು ಹೇಳುತ್ತೇನೆ. ಮಾನ್ಯ ಪುಟ್ಟೇಗೌಡರ ಊರು ಚಾಮನಹಳ್ಳಿ ಇರಬಹುದು, ಅದನ್ನು ಆಮೇಲೆ ಹೇಳುತ್ತೇನೆ. ಡೈರಿ ರಂಗ ಹೇಗೆ ಮುಂದೆ ಬರುತ್ತದೆ ಎನ್ನುವುದನ್ನು ನಾನು ತೋರಿಸಿ ಕೊಟ್ಟಿದ್ದೇನೆ. ನಮ್ಮ ರೈತಾಪಿ ಜನರಿಗೆ ಇವತ್ತು ಪ್ರತಿನಿತ್ಯ ಯಾವುದಾದರೂ ಕೃಷಿಯಲ್ಲಿ failure ಆದರೂ ಡೈರಿಯಿಂದ ನಮ್ಮ ರೈತರು ಇವತ್ತು ಉಳಿದುಕೊಂಡಿದ್ದಾರೆ. ಇವತ್ತು ನಿಮ್ಮ ರೇಷ್ಮೆ ಇಲಾಖೆ ಇರಬಹುದು. ತೋಟಗಾರಿಕೆ ಇಲಾಖೆ ಇರಬಹುದು. ಕೆಲವು ಕಡೆ ಇವತ್ತು ಉದಾಹರಣೆ ಹೇಳುವುದಾದರೆ ಏನು ಕಾರ್ಯಕ್ರಮವನ್ನು ರೂಪಿಸಿದರು. 60 ವರ್ಷದಿಂದ ಇವತ್ತಿನವರೆಗೆ ಯಾರು ಏನು ಮಾಡಿಲ್ಲವೆನ್ನುವ ಭಾವನೆ ಇದೆ. ಡೈರಿ ಇವತ್ತು ಈ ರಾಷ್ಟ್ರದಲ್ಲಿ ಎರಡನೇ ಸ್ಥನಕ್ಕೆ ಹೋಗಿ ಬೇಕಾದರೆ ಯಾರು ಮಾಡಬೇಕಾಗಿತ್ತು, ಬಾಗಿಲು ಮುಚ್ಚುವಂಥ ಪರಿಸ್ಥಿತಿ ಇತ್ತು, 10–15 ವಾರದ ಬಟವಾಡೆಯನ್ನು ಕೊಡಬೇಕಾಗಿತ್ತು.

(2-30 PM)

ಏಕೆಂದರೆ ರೈತರಿಗೆ ಎರಡು ರೂಪಾಯಿಗಳು ಜಾಸ್ತಿ ಕೊಡಿ ಎಂದು ಹೇಳಿದರೆ ಅದರ ಮೇಲೆ 64 enquiry ಎಂದು ಹೇಳುತ್ತಾರೆ. ನಿಮ್ಮ ಸಹಕಾರ ಮಂತರಿಗಳು ಅಪೆಕ್ಸ್ ಬ್ಯಾಂಕ್‌ನ ಎಲ್ಲಾ ಡೈರೆಕ್ಟರ್‌ಗಳನ್ನು ಜೊತೆಯಲ್ಲಿ ಕರೆದುಕೊಂಡು ಅವರೆಲ್ಲರೂ ಸೇರಿ 14 ದಿವಸಗಳ ಪ್ರವಾಸವನ್ನು ಮಾಡಿದ್ದಾರೆ. ಅಪೆಕ್ಸ್ ಬ್ಯಾಂಕಿನಲ್ಲಿ ಏನೇನು ಆಗಿದೆ ಎಂಬುದರ ಬಗ್ಗೆ enquiry ಮಾಡುತ್ತೀರಲ್ಲಾ ಅದೇ ರೀತಿಯಾಗಿ ನಮ್ಮ ಡೈರಿಯದು ಸಹ enquiry ಮಾಡಿ. ಅಪೆಕ್ಸ್ ಬ್ಯಾಂಕ್‌ದು ಸಹ enquiry ಮಾಡಿ. ನಾನು ರೆಡಿ ಇದ್ದೇನೆ ಕೊಡುವುದಕ್ಕೆ. ನಾನು ಹೆದರಿ ಹೋಗುವುದಿಲ್ಲ. ಕಾಲ ಹೀಗೆಯೇ ಇರುವುದಿಲ್ಲ. ಏಕೆಂದರೆ ನೀವು ಸುಳ್ಳನ್ನು ಹೇಳಿಕೊಂಡು ಎಷ್ಟು ದಿವಸ ಜೀವನವನ್ನು ಮಾಡುತ್ತೇವೆಂದು ತಿಳಿದುಕೊಂಡಿದ್ದರೆ ಅದು ಸುಳ್ಳು, ದೇವರು ಒಂದಲ್ಲ ಒಂದು ದಿವಸ ಶಿಕ್ಷೆಯನ್ನು ಕೊಡುವಂತಹ ಕಾಲ ಬರುತ್ತದೆ ಎಂದು ನಾನು ಮಾನ್ಯ ಸಭಾಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಏಕೆಂದರೆ ಅಧಿಕಾರಿಗಳಿಂದಲೇ ನಾವು ಜಾಸ್ತಿ ದಿನಗಳ ಕಾಲ ಬದುಕುತ್ತೇವೆಂದು ಈ ಸರ್ಕಾರದವರು ತಿಳಿದುಕೊಂಡಿದ್ದರೆ ಯಾವತ್ತಾದರೂ

ಅಧಿಕಾರಿಗಳು ನಿಮಗೆ ಯಾವ ರೀತಿಯಾಗಿ ಆಗುತ್ತಾರೆಂದು ಅದನ್ನು ಕಾಲವೇ ನಿರ್ಧರಿಸುತ್ತದೆ. ಹಿಂದಿನ ಸರ್ಕಾರಗಳು ಯಾರು ಮಾಡಿಯೇ ಇಲ್ಲ, ಹಿಂದೆ 50 ವರ್ಷಗಳಲ್ಲಿ ಏತಕ್ಕೆ ಮಾನ್ಯ ವೀರೇಂದ್ರ ಪಾಟೀಲ್‌ರವರು ಏನು ಮಾಡಿಲ್ಲವೇ? ನಿಜಲಿಂಗಪ್ಪನವರು ಏನೂ ಮಾಡಿಲ್ಲವೇ, ನಿಜಲಿಂಗಪ್ಪನವರ ಬಗ್ಗೆ ಹೇಳುತ್ತಿದ್ದರು, ಪ್ರಧಾನಮಂತ್ರಿಗಳು ಬಂದಾಗ ಮಾಡಿದ್ದರು. ನಿಜಲಿಂಗಪ್ಪ ನವರು ಹಾಗಾದರೆ ಏನೂ ಮಾಡಿಲ್ಲವೇ? ಶ್ರೀ ಕೆ.ಸಿ.ರೆಡ್ಡಿಯವರು ಏನೂ ಮಾಡಿಲ್ಲವೇ? ಶ್ರೀ ವೀರೇಂದ್ರಪಾಟೀಲ್‌ರವರು ಮಾಡಿಲ್ಲವೇ? ಶ್ರೀ ರಾಮಮಕೃಷ್ಣಹೆಗಡೆಯವರು ಏನೂ ಮಾಡಿಲ್ಲವೇ? ಶ್ರೀ ಬಂಗಾರಪ್ಪ ನವರು ಏನೂ ಮಾಡಿಲ್ಲವೇ? ಶ್ರೀ ಎಸ್.ಎಂ. ಕೃಷ್ಣರವರು ಏನೂ ಮಾಡಿಲ್ಲವೇ? ಹಾಗಾದರೆ ಮುಖ್ಯಮಂತ್ರಿಗಳಾಗಿದ್ದವರು 60 ವರ್ಷಗಳಲ್ಲಿ ಏನು ಮಾಡಿಯೇ ಇಲ್ಲವೇ? ಈ ಸರ್ಕಾರವು ಒಂದು ಕಾಲು ವರ್ಷದಲ್ಲಿ ಮಾಡಿದ್ದಾರೆಂದು ನಾವು ಹೇಳಬೇಕಾಗುತ್ತದೆ. ಹಿಂದಿನ ಸರ್ಕಾರಗಳು ಮಾಡಿಲ್ಲವೆಂದು ಉದಾಹರಣೆಯನ್ನು ಇಟ್ಟುಕೊಳ್ಳೋಣ. ಹಾಗಾದರೆ ಈ ಒಂದುಕಾಲು ವರ್ಷದಲ್ಲಿ ಈ ಸರ್ಕಾರವು ಏನೇನು ಮಾಡಿದೆ ಎಂಬುದನ್ನಾದರೂ ಹೇಳಲಿ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಎಲ್ಲಿಯೂ ಕೂಡ 60 ವರ್ಷದಿಂದ ಏನೂ ಆಗಿಲ್ಲವೆಂದು ಎಲ್ಲಿಯೂ ಹೇಳಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಚಿವರೆ, ತಾವು ಒಂದು ನಿಮಿಷ ಯೀಲ್ಡ್ ಆಗಿ.

ಶ್ರೀ ಎಸ್. ಸುರೇಶ್‌ಕುಮಾರ್ : ನಮ್ಮ ಗಣರಾಜ್ಯದ....

ಶ್ರೀ ಹೆಚ್.ಡಿ.ರೇವಣ್ಣ : ಒಂದು ನಿಮಿಷ ತಾವು ಕುಳಿತುಕೊಳ್ಳಿ.

ಶ್ರೀ ರಮಾನಾಥ್ ರೈ : ನೀವು ಯಾರಾದರೂ ಮಾತನಾಡುವಾಗ ನಾವು ಮಧ್ಯದಲ್ಲಿ ಎದ್ದು ನಿಂತುಕೊಂಡು ಮಾತನಾಡಿದ್ದೇವಾ? 60 ವರ್ಷದಿಂದ ಏನೂ ಆಗಿಲ್ಲವೆಂಬುದನ್ನೇ ಹೇಳಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಅವರು ಪುಸ್ತಕವನ್ನು ರೆಫರ್ ಮಾಡಿದ್ದಾರೆ.

ಶ್ರೀ ರಮಾನಾಥರೈ : ಲೂಟಿ ಮಾಡಿದ್ದಾರೆಂದು ಹೇಳಿದ್ದಾರೆ. ಎಲ್ಲಾ ನಾಯಕರನ್ನು ಕೂಡ ಅಪಮಾನ ಮಾಡಿದ ಹಾಗೆ ಆಯಿತು. ಅದು ಕೆಂಗಲ್ ಹನುಮಂತಯ್ಯ ಇರಬಹುದು, ಕೆ.ಸಿ.ರೆಡ್ಡಿ ಇರಬಹುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ : 60 ವರ್ಷದಿಂದ ಈ ರಾಜ್ಯದಲ್ಲಿ ರೈತರ ಪರವಾಗಿ ಯಾರು ಏನು ಕೆಲಸವನ್ನೇ ಮಾಡಿಲ್ಲ. ನಾನು ಕೆಲಸವನ್ನು ಮಾಡಬೇಕು. ತಾವು ಸಲಹೆ ಸೂಚನೆಗಳನ್ನು ಕೊಡಿ ಎಂದು ಕೇಳಿದರು. 60 ವರ್ಷದಿಂದ ಯಾರು ಮಾಡಿಲ್ಲವೆಂದರೆ ಕೆಲಸ ಮಾಡಿರುವವರು ಏನಾಗಬೇಕು?

ಶ್ರೀ ರಮಾನಾಥ ರೈ : 60 ವರ್ಷದಿಂದ ಎಲ್ಲವನ್ನು ಲೂಟಿ ಮಾಡಿದ್ದಾರೆಂದು ನೀವು ಹೇಳಿರುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ : 60 ವರ್ಷದಿಂದ ನಾವು ಏನು ಮಾಡಿಲ್ಲ, ಈಗಲೂ protest ಮಾಡುತ್ತಿದ್ದೀರಿ. ಈಗಲೂ ಕೂಡ ರೈತರ ಬಗ್ಗೆ ಚರ್ಚೆ ಮಾಡಬೇಕೆಂದು ಇದ್ದರೆ ಅದಕ್ಕೆ ತಾವು ಅವಕಾಶವನ್ನೇ ಕೊಡುತ್ತಿಲ್ಲ. ತಾವು ನಿಲುವಳಿ ಸೂಚನೆಯನ್ನು ತರುತ್ತಿದ್ದೀರಿ. ರೈತರ ಬಗ್ಗೆ ಕಾಳಜಿ ಇಲ್ಲವೆಂದು ನನಗೆ ದುಃಖ ಬರುತ್ತಿದೆ ಎಂದು ಹೇಳಿದರು.

ಶ್ರೀ ಎಸ್. ಸುರೇಶ್‌ಕುಮಾರ್ : ನಮ್ಮ ಗಣರಾಜ್ಯದ 60 ವರ್ಷಗಳ ಇತಿಹಾಸದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಸಾಕಷ್ಟು ಚರ್ಚೆಗಳು ಆಗಿದೆ. ಹಲವಾರು ಪ್ರಯೋಗಗಳು ನಡೆದಿವೆ. ಬಹಳಷ್ಟು ಯೋಜನೆಗಳು ಜಾರಿಗೆ ಬಂದಿವೆ ಎಂದು ಎಲ್ಲರಿಗೂ ಕೂಡ credit ನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಕಾನೂನು ಮಂತ್ರಿಗಳು ಅವೆಲ್ಲರೂ ಮಾಡಿದ್ದಾರೆಂದು ಹೇಳಿದ್ದಾರೆ. ಅದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮೊನ್ನೆ 9ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡುವಾಗ ಒಂದು ಕಡೆಯಲ್ಲಿ ಕಣ್ಣೀರು ಬೀಳುತ್ತಿತ್ತು, ಇನ್ನೊಂದು ಕಡೆಯಲ್ಲಿ ಪ್ರತಿಪಕ್ಷದವರನ್ನು ಕಾಡಿಬೇಡಿ ಅಂದರೆ ಕಾಲು ಹಿಡಿದುಕೊಳ್ಳು ವಂತಹ ಪರಿಸ್ಥಿತಿಗೆ ಅಂದರೆ ಸಿದ್ದರಾಮಯ್ಯನವರನ್ನು ಹಿಡಿದುಕೊಂಡರೋ ಅಥವಾ ಜಯಚಂದ್ರರವರನ್ನು ಹಿಡಿದುಕೊಂಡರೋ ಗೊತ್ತಿಲ್ಲ. ನಾನು ಮಾನ್ಯ ಸಭಾಧ್ಯಕ್ಷರ ಮುಂದೆ ಹೇಳಿದೆ. ಮೊನ್ನೆ ಒಂದು ದಿವಸ ಮುಂಚೆಯೇ ಹೇಳಿದೆ. ಕೃಷಿಯ ಬಗ್ಗೆ ಚರ್ಚೆ ನಮ್ಮದೇನು ತಕರಾರು ಇಲ್ಲ. ಹಗರಣಗಳ ಬಗ್ಗೆ ಪ್ರಜಾವಾಣಿ ಪೇಪರ್‌ನಲ್ಲಿಯೂ ಬಂತು. 40 ವರ್ಷಗಳ ಹಗರಣ ಗಳನ್ನು ಗೃಹ ಇಲಾಖೆ, ವಾರ್ತಾ ಇಲಾಖೆ ಮತ್ತು ಎಲ್ಲಾ ಇಲಾಖೆ ಯಿಂದಲೂ ಮಾಹಿತಿಯನ್ನು ತರಿಸಿಕೊಂಡು ಎಲ್ಲಾ ಹಿಂದಿನ ಕಾಲದಿಂದಲೂ ಮಾನ್ಯ ದೇವೇಗೌಡರದು, ಮಾನ್ಯ ಕುಮಾರಣ್ಣನವರದ್ದು, ಹಿಂದಿನ ಎಲ್ಲಾ

ಮುಖ್ಯಮಂತ್ರಿಗಳ ಕಾಲದ ಮಾಹಿತಿಯನ್ನು ರೆಡಿ ಮಾಡಿ ಇಟ್ಟುಕೊಂಡಿದ್ದೇವೆಂದು ಹೇಳಿದರು. one line resolution ಮಾಡಿಬಿಡೋಣವೆಂದು ನಾನು ಹೇಳಿದೆ. 40ವರ್ಷಗಳ ಹಗರಣಗಳು ಏನು ಇದೆ, ಅದರ ಬಗ್ಗೆ ಚರ್ಚೆಯನ್ನು ಮಾಡುವುದು ಬೇಡ. ಸುಮ್ಮನೇ ಕಾಲಹರಣವನ್ನು ಏತಕ್ಕೆ ಮಾಡಬೇಕು? ನಾಡಿದ್ದು ಸೋಮವಾರ ಮತ್ತು ಮಂಗಳವಾರ ಹಗರಣಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಎಂದು ಇಟ್ಟುಕೊಂಡಿದ್ದಾರೆ. ಅದರ ಬಗ್ಗೆ ಚರ್ಚೆಯನ್ನು ಮಾಡುವುದೇ ಬೇಡ. one line resolution ಅದನ್ನು ಮಾನ್ಯ ಮುಖ್ಯಮಂತ್ರಿಗಳು ಮೂವ್ ಮಾಡಲಿ. 40 ವರ್ಷಗಳಲ್ಲಿ ಯಾರ್‍ಯಾರು ಮುಖ್ಯಮಂತ್ರಿಗಳು ಅಥವಾ ರಾಜಕಾರಣಿಗಳು ಏನೇನು ಮಾಡಿದ್ದಾರೆ, ಅದರ ಬಗ್ಗೆ one line resolution ಮಾಡಲಿ. ಅದರ ಬಗ್ಗೆ ಸಿಬಿಐ ತನಿಖೆಯನ್ನು ಮಾಡಿಸುತ್ತಾರೋ, ಮಾಡಲಿ. ಲೋಕಾಯುಕ್ತದವರ ಮೇಲೆ ನಂಬಿಕೆ ಈ ಸರ್ಕಾರಕ್ಕೆ ಇಲ್ಲ. ಬೇಕಾದರೆ ಸುಪ್ರೀಂಕೋರ್ಟಿನ ನ್ಯಯಾಧೀಶರ ಕೈಯಲ್ಲಿಯಾದರೂ ಮಾಡಿಸಲಿ ಅಥವಾ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಮೇಲೆ ನಂಬಿಕೆ ಇದ್ದರೆ ಅವರ ಕೈಯಲ್ಲಿಯಾದರೂ ತನಿಖೆಯನ್ನು ಮಾಡಿಸಲಿ, ಇದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಸಿಬಿಐನಿಂದ ತನಿಖೆಯನ್ನು ಮಾಡಿಸುತ್ತೇನೆಂದರೆ ಮಾಡಿಸಲಿ, ಅಥವಾ international ಯಾವುದಾದರೂ enquiry ಸಂಸ್ಥೆಯಿದ್ದರೆ ಅವರಿಂದಲಾದರೂ ಮಾಡಿಸಲಿ. ಏನಾದರೂ ಕೇಳುವಾಗಿದ್ದರೆ ಮಾನ್ಯ ಜಯಚಂದ್ರರವರನ್ನು ಕೇಳಿ, ಅವರು ಸೆಕೆಂಡ್ ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು propose ಮಾಡಲಿ. ಸಿದ್ದರಾಮಯ್ಯನವರು propose ಮಾಡಲಿ. ನಾವು ಬೇಕಾದರೆ ಸೆಕೆಂಡ್ ಮಾಡುತ್ತೇವೆ. ಏನು ಅದರ ಬಗ್ಗೆ ಮೂರು ದಿನಗಳ ಕಾಲ ಚರ್ಚೆಯನ್ನು ಮಾಡುವುದು ಬೇಡ. ಎಲ್ಲಾ ನಮ್ಮ ಸದಸ್ಯರುಗಳಿಗೆ ಕೃಷಿ ಮತ್ತು ಗ್ರಾಮೀಣ ಮತ್ತು ಇನ್ನು ಕೈಗಾರಿಕೆ ಇರಬಹುದು, ಎಲೆಕ್ಟ್ರಿಸಿಟಿ ಇರಬಹುದು, ಅದರ ಬಗ್ಗೆ ನಾವು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಳ್ಳೋಣ. one line resolution ಮಾಡಲಿ. ಒಂದು ಕಾಲು ವರ್ಷದಲ್ಲಿ ಈ ಸರ್ಕಾರವು ಏನು ಮಾಡಿದೆ, ಅದರ ಬಗ್ಗೆ ನಾವು ಎಳೆಎಳೆಯಾಗಿ ಬಿಡಿಸುವುದರ ಬಗ್ಗೆ ನಾವು ರೆಡಿ ಇದ್ದೇವೆ. ಅದಕ್ಕೂ ಮಾಡಲಿ, ಇಲ್ಲವೆಂದರೆ ಬೇಡ ಸ್ವಾಮಿ, ಒಂದುಕಾಲು ವರ್ಷದಿಂದ ನಾವು ಮುಚ್ಚಿಹಾಕಿಕೊಳ್ಳುವುದಕ್ಕೋಸ್ಕರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ

ಚರ್ಚೆ ಮಾಡುವುದಕ್ಕೆ ಕರೆದಿದ್ದೇವೆಂದು ಹೇಳಿದರೆ ಸಂತೋಷ. ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಕುಮಾರಸ್ವಾಮಿಯವರು ಸನ್ಮಾನ್ಯ ಯಡಿಯೂರಪ್ಪನವರು ಇದ್ದಂತಹ ಕಾಲದಲ್ಲಿ ಏನು ಕಾರ್ಯಕ್ರಮವನ್ನು ರೂಪಿಸಿದ್ದಾರೆ? ಮಾನ್ಯ ಕುಮಾರಸ್ವಾಮಿಯವರೊಬ್ಬರೇ ಮಾಡಿದ್ದಾರೆಂದು ಹೇಳುವುದಕ್ಕೆ ಇಲ್ಲಿಗೆ ಬಂದಿಲ್ಲ. ಎಲ್ಲರೂ ಸೇರಿಕೊಂಡೇ ಮಾಡಿದ್ದಾರೆ. ಇವತ್ತು ಉದಾಹರಣೆಗೆ ಹೇಳುವುದಾದರೆ ಚಿಕ್ಕಮಗಳೂರು ಇರಬಹುದು, ಬೆಳಗಾಂ ಇರಬಹುದು, ಕೊಡಗು ಹಾಗೂ ಚಿತ್ರದುರ್ಗ ಇರಬಹುದು, ಹಾಸನ ಇರಬಹುದು including ಶಿವಮೊಗ್ಗ, ದೇವೇಗೌಡರು ಮತ್ತು ಕುಮಾರಸ್ವಾಮಿಯವರು ಶಿವಮೊಗ್ಗಕ್ಕೆ influence ಮಾಡಿದ್ದಾರೆ, ಆ ತರಹ ಸಣ್ಣ ರಾಜಕೀಯ ಮಾಡುವುದಕ್ಕೆ ಬಂದಿಲ್ಲ. ಈಗ ಹಾಸನದ ಕೆಲಸವನ್ನೆಲ್ಲಾ ನಿಲ್ಲಿಸಿದ್ದಾರಲ್ಲಾ, ಆ ತರಹ ಸಣ್ಣ ಕೆಲಸವನ್ನು ದೇವೇಗೌಡರು ಮತ್ತು ಕುಮಾರಸ್ವಾಮಿಯವರು ಮಾಡುವುದಕ್ಕೆ ಹೋಗಲಿಲ್ಲ. ಅವತ್ತು ರಾಮನಗರದ ಕೆಲಸವನ್ನು ಸಹಾ ನಿಲ್ಲಿಸಿದ್ದಾರೆ. ಇಲ್ಲಿ ನಮ್ಮ ಬಾಲಣ್ಣನವರು ಅಳುತ್ತಿದ್ದರು. ಅದರ ಬಗ್ಗೆ worry ಮಾಡುವುದು ಬೇಡ. ಬಾಲಣ್ಣ, ಕೆಲಸವನ್ನು ಮಾಡಿಸುವ ಬಗ್ಗೆ ನೀನು ಏತಕ್ಕೆ ತಲೆಕೆಡಿಸಿಕೊಳ್ಳುತ್ತೀಯಾ?. ಹೋದ ಸಾರಿ ಬೆಳಗಾಂ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಒಳ್ಳೆಯ ದಿನದಂದು ಬಂದು ಅವತ್ತು ಪೂಜೆಯನ್ನು ಮಾಡುತ್ತೇನೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ಸಹಾಯಧನದ ರೂಪದಲ್ಲಿ ಕೇಂದ್ರ ಸರ್ಕಾರದಿಂದ free grant 1568 ಕೋಟಿ ವಿದರ್ಭ ಪ್ಯಾಕೇಜ್‌ಗೆ ಮತ್ತೆ ಸಾಲದ ರೂಪದಲ್ಲಿ 1121 ಕೋಟಿ ರೂಪಾಯಿಗಳು, ಒಟ್ಟು 2689 ಕೋಟಿ ರೂಪಾಯಿಗಳು ಬಂದಿದೆ. ಅದರಲ್ಲಿ ಇವತ್ತಿನವರೆಗೆ ಕೇಂದ್ರಸರ್ಕಾರದ 1250 ಕೋಟಿ ರೂಪಾಯಿಯನ್ನು ಇವತತಿನವರೆಗೆ ಈ ಸರ್ಕಾರವು ಖರ್ಚು ಮಾಡುವುದಕ್ಕಾಗಲಿಲ್ಲ. ವಿದರ್ಭ ಪ್ಯಾಕೇಜ್‌ಗೆಂದು 6 ಜಿಲ್ಲೆಗೆಂದು ಹಣ ಬಂದಿದೆಯಲ್ಲಾ, ಇವತ್ತಿನವರೆಗೆ ಈ ಸರ್ಕಾರವು ಹಣವನ್ನು ಖರ್ಚು ಮಾಡುವುದಕ್ಕೆ ಆಗಿದೆಯಾ? ಆ ಬಗ್ಗೆ ಹೇಳಲಿ ದಯಮಾಡಿ. 1250 ಕೋಟಿ ರೂಪಾಯಿಗಳನ್ನು ಇವತ್ತಿನವರೆಗೂ ಖರ್ಚು ಮಾಡಿವುದಕ್ಕಾಗಲಿಲ್ಲ. ಇವತ್ತಿನ ದಿವಸ ಕೇಂದ್ರ ಸರ್ಕಾರದ ಅಧಿಕಾರಗಳು ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಅವರು ಕೊಟ್ಟಂತಹ ಹಣ 2689 ಕೋಟಿ ರೂಪಾಯಿಗಳು ಅದರಲ್ಲಿ 1250 ಕೋಟಿ ರೂಪಾಯಿಗಳನ್ನು ಇವತ್ತಿನವರೆಗೆ

ಈ ಸರ್ಕಾರವು ಖರ್ಚು ಮಾಡುವುದಕ್ಕಾಗಲಿಲ್ಲ. ಅವರು ಖರ್ಚು ಮಾಡುವುದು ಇರಲಿ, ಇವತ್ತು ಕೇಂದ್ರಸರ್ಕಾರದವರು ಕೊಟ್ಟಂತಹ ಹಣವನ್ನು ಇವರು ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಕಾರಣವೇನು ಎಂದು ದಯಮಾಡಿ ಹೇಳಬೇಕಾಗುತ್ತದೆ. ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ ಏನಾಗಿತ್ತೆಂದು ಹೇಳಬೇಕು. ಇವತ್ತು ದೆಹಲಿಗೆ ಒಂದು ನೊಯೋಗವನ್ನು ಕರೆದುಕೊಂಡು ಹೋದರು. ವಿರೋಧಪಕ್ಷದವರನ್ನು ಬರಗಾಲದ ಬಗ್ಗೆ ಕರೆಯುತ್ತಾರೆ. ಮಾರನೇ ದಿನ ಫೋನ್ ಮತ್ತು ಲೆಟರ್ ಹಾಕಿ ಇಲ್ಲಾ ಸ್ವಾಮಿ ನೀವು ಬರಬೇಡಿ, ಆ ರೀತಿಯಾಗಿ ಹೋಗುವುದಿದ್ದರೆ ನಿಮಗೆ ತಿಳಿಸುತ್ತೇವೆಂದು ಹೇಳುತ್ತಾರೆ. ಆಯಿತು ಪರವಾಗಿಲ್ಲ. ನಮ್ಮನ್ನು ಬಿಟ್ಟೇ ಅಲ್ಲಿಗೆ ಹೋಗಲಿ. ನಾವು ಹೋಗಬೇಕೆಂಬ ಉದ್ದೇಶವಿಲ್ಲ. ಬರಗಾಲದ ಬಗ್ಗೆ ಏನಾಯಿತು ಸ್ವಾಮಿ? 20 ಜಿಲ್ಲೆಗಳಲ್ಲಿ ಇವತ್ತು ಬರಗಾಲವಿದೆ. 3 ಜಿಲ್ಲೆಗಳಲ್ಲಿ ಇವತ್ತು ಅತಿವೃಷ್ಟಿ ಇದೆ. ಯಾರಾದರೂ ಜಿಲ್ಲಾ ಮಂತ್ರಿಗಳು ಹೋಗಿ ಅಲ್ಲಿಗೆ ತಲೆಯನ್ನು ಹಾಕಿದ್ದಾರಾ? ಈ ಜಿಲ್ಲೆಯೊಳಗೆ ಏನಾಗಿದೆ ಎಂದು ಅಧ್ಯಯನ ಮಾಡಿದ್ದಾರೆಯೇ?

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಬರಗಾಲದ ಬಗ್ಗೆ ಏಕೆ ಮಾತನಾಡುತ್ತಿದ್ದೀರಿ?

ಶ್ರೀ ಹೆಚ್.ಡಿ.ರೇವಣ್ಣ : ಎರಡರ ಬಗ್ಗೆ ಚರ್ಚೆ ಮಾಡಿ ಎಂದು ಹೇಳಿದ್ದಾರೆ ಸಾರ್. ನೀವು ಒಂದು ಸ್ವಲ್ಪ ಊಟವನ್ನು ಮಾಡಿಕೊಂಡು ತಣ್ಣಗೆ ಬಂದು ಕುಳಿತುಕೊಳ್ಳಿ. ಈಗ ನಿಮ್ಮ ವಿಷಯದ ಬಗ್ಗೆ ಯಾವುದು ಚರ್ಚೆ ಇಲ್ಲ ತಾವು ಕುಳಿತುಕೊಳ್ಳಿ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಮಾನ್ಯ ಬಾಲಣ್ಣ ಮತ್ತು ಜಯಚಂದ್ರರವರು ಸುಮ್ಮನೆ ಇದ್ದಾರೆ.

(ಈ ಹಂತದಲ್ಲಿ ಶ್ರೀ ಹೆಚ್.ಕೆ.ಕುಮಾರಸ್ವಾಮಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್.ಡಿ.ರೇವಣ್ಣ : ಬೇಡ ಎಂದರೆ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ಮಾತನಾಡುವುದಕ್ಕೆ ಅಭ್ಯಂತರವಿಲ್ಲ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಬೇಕೆಂದು ನಿಶ್ಚಯ ಮಾಡಿದ್ದರು. ಈಗ ನೀವು ಬರಗಾಲದ ಬಗ್ಗೆ ಶುರು ಮಾಡಿದ್ದೀರಿ. ಹೇಗೆ ಎಂದು ಕೇಳಿದೆ?

ಶ್ರೀ ಹೆಚ್.ಸಿ.ಬಾಲಕೃಷ್ಣ : ಗ್ರಾಮೀಣಾಭಿವೃದ್ಧಿಯ ಬಗ್ಗೆ ನಿಮಗೆ ಏನು ಗೊತ್ತು?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಕಟ್ಟಾಸುಬ್ರಹ್ಮಣ್ಯನಾಯ್ಡುರವರು ಹಿರಿಯ ಸದಸ್ಯರಾಗಿದ್ದಾರೆ. ಅವರು ಒಂದೆರಡು ದಿನಗಳು ಮಾನ್ಯ ಕುಮಾರಣ್ಣನವರ ಜೊತೆಯಲ್ಲಿ ಗ್ರಾಮವಾಸ್ತವ್ಯಕ್ಕೆ ಹೋಗಿದ್ದರೆ ಚೆನ್ನಾಗಿರುತ್ತಿತ್ತು. ಕುಮಾರಣ್ಣನವರ ಜೊತೆಯಲ್ಲಿ ಅವರದು ಬೆಂಗಳೂರಿನಲ್ಲಿ ಏನು ಕೆಲಸಗಳು ಇದ್ದವು. ಅದಕ್ಕೆ ಅವರಿಬ್ಬರೂ ಚೆನ್ನಾಗಿದ್ದರು.

ಈಗ ಆ ವಿಷಯವನ್ನು ಮಾತನಾಡುವುದು ಬೇಡ. ಅವರು ಈಗ ಊಟವನ್ನು ಮಾಡಿಕೊಂಡು ಬಂದಿದ್ದಾರೆ. ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರ 20 ತಿಂಗಳುಗಳ ಕಾಲ ಆಡಳಿತದಲ್ಲಿ ಏನು ಮಾಡಿಲಿಲ್ಲವೆಂದು ಹೇಳುತ್ತಾರೆ. ಇವತ್ತು ಏನು ಕೃಷಿ ವಲಯಕ್ಕೆ ಸುಮಾರು 700 ರಿಂದ 800 ಕೋಟಿ ರೂಪಾಯಿಗಳ ಹಣವನ್ನಿಟ್ಟಿದ್ದರು. ಬರೀ ಕೇವಲ 700 ಕೋಟಿ ರೂಪಾಯಿಗಳು, ಇವತ್ತು ಕುಮಾರಸ್ವಾಮಿಯವರ ಕಾಲದಲ್ಲಿ ಎಷ್ಟು ಹಣವನ್ನಿಟ್ಟಿದ್ದರು.?

ಎರಡು ಸಾವಿರ ಕೋಟಿ ರೂ.ಗಳನ್ನು ಕುಮಾರಸ್ವಾಮಿಯವರು ಸರ್ಕಾರದಲ್ಲಿ ಇಟ್ಟಿದ್ದರು. 700 ಕೋಟಿ ರೂ.ಗಳನ್ನು 2,000 ಕೋಟಿ ರೂ.ಗಳನ್ನಾಗಿ ಮಾಡಿದವರು ಯಾರು? ಕುಮಾರಸ್ವಾಮಿಯವರು ತಮ್ಮ 20 ತಿಂಗಳ ಆಡಳಿತದಲ್ಲಿ ಮಾಡಿಲ್ಲವೇ? ಸುವರ್ಣಗ್ರಾಮಕ್ಕೆ ಒಂದುಸಾವಿರ ಕೋಟಿ ರೂ.ಗಳ ಯೋಜನೆಯನ್ನು ತಯಾರು ಮಾಡಿದವರು ಯಾರು? ಸುವರ್ಣಗ್ರಾಮಕ್ಕೆ ಮೂರು ವರ್ಷಗಳಿಂದ contiune ಮಾಡಿದರು, ಅದನ್ನು ಯಾರಾದರೂ ಮಾಡಿದ್ದರೆ? ಒಂದು ಸಾವಿರ ಕೋಟಿ ರೂ.ಗಳ ಹಣ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು : ಹಣಕಾಸಿನ ಸಚಿವರು ಯಡಿಯೂರಪ್ಪನವರು, ಆರ್.ಡಿ.ಪಿ.ಆರ್. ಸಚಿವರು ಉದಾಸಿಯವರು. ಅವರ ಕಲ್ಪನೆಗೆ ಬಂದಿರಬೇಕು.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ಯಾರಿದ್ದರೂ ಎಲ್ಲರಿಗೂ ಬರುವುದಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಸಮ್ಮಿಶ್ರ ಸರ್ಕಾರದಲ್ಲಿ ಒಳೆಯದಾದರೂ, ಕೆಟ್ಟದಾದರೂ ಇಬ್ಬರಿಗೂ ಬರುತ್ತದೆ.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಹಣಕಾಸಿನ ಯಡಿಯೂರಪ್ಪನವರು..

ಶ್ರೀ ಕೆ.ಎಂ.ಶಿವಲಿಂಗೇಗೌಡ : ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದವರು ಕುಮಾರಸ್ವಾಮಿಯವರು. ಅವರದು ನಿರ್ಣಯ, ಸಭಾ ನಾಯಕರವರು. ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಎಲ್ಲಾ ಮಂತ್ರಿಗಳದ್ದು ಇಲ್ಲಿ ಚರ್ಚೆಗೆ ಬರುವುದಿಲ್ಲ.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಸುವರ್ಣಗ್ರಾಮದ ಕಲ್ಪನೆ ಉದಾಸಿಯವರದು.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಹಾಗಾದರೆ ಪುರವನ್ನು ಹಿಡಿದು ಕೊಂಡಿದ್ದೀರಿ ಏಕೆ? ಅದನ್ನು ನೀವು ಮಾಡಿದ್ದಲ್ಲವೇ? ಅದನ್ನು ಏಕೆ ಬಿಟ್ಟಿರಿ?

ಶ್ರೀ ಎಂ. ವಿರೂಪಾಕ್ಷಪ್ಪ : ಪುರವನ್ನು ಮಾಡಲಿಕ್ಕೆ ಎಲ್ಲಿ ಬಿಟ್ಟಿರಿ? ಸಮ್ಮಿಶ್ರ ಸರ್ಕಾರದಲ್ಲಿ ಒಳ್ಳೆಯದು, ಕೆಟ್ಟದ್ದು ಇಬ್ಬರಿಗೂ ಸಮಪಾಲು.

ಛೇರ್ಮನ್ : ಈಗ ವಿರೂಪಾಕ್ಷಪ್ಪನವರೇ ನಿಮ್ಮ ಅಭಿಪ್ರಾಯ ತಿಳಿಸಿದ್ದೀರಿ, ನೀವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಮುಖ್ಯಮಂತ್ರಿಗಳು ಸಮರ್ಥರಿದ್ದಾರೆ, ಅವರು ಉತ್ತರ ಕೊಡುತ್ತಾರೆ, ನೀವ್ಯಾಕೆ worry ಮಾಡುತ್ತೀರಿ? ಒಂದು ಸಾವಿರ ಕೋಟಿ ರೂ.ಗಳನ್ನು ಕೊಡಲಾಗಿದೆ. ನಮ್ಮ ನಗರ ಪ್ರದೇಶವಿರಬಹುದು, ಗ್ರಾಮೀಣ ಪ್ರದೇಶದಲ್ಲಿ widow pension ಇರಬಹುದು, ವೃದ್ಧಾಪ್ಯ ವೇತನ ಇರಬಹುದು, 200–400 ರೂ.ಗಳನ್ನು ಯಾರು ಮಾಡಿದ್ದು? ಕುಮಾರಸ್ವಾಮಿಯವರಿಗೆ ಗ್ರಾಮಸ್ಥರ ಬಗ್ಗೆ ಅರಿವಿದ್ದರಿಂದ ಇವತ್ತು 200–400 ರೂ.ಗಳನ್ನಾಗಿ ಮಾಡಿದರು.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು : 400–00 ರೂ.ಗಳಿಗೆ ಹೆಚ್ಚಿಸಿದ್ದು, ಎಲ್ಲಾ ಕೂಡ ಕುಮಾರಸ್ವಾಮಿಯವರಿಗೆ ಸಲ್ಲಲಿ, ನಮ್ಮದೇನೂ ಅಭ್ಯಂತರವಿಲ್ಲ, ಪೂರ್ತಿ ಸಮ್ಮಿಶ್ರ ಸರ್ಕಾರದ ಗೌರವವನ್ನು ನೀವೇ ತೆಗೆದುಕೊಳ್ಳಿ. ಈಗ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಿಬಿಡಿ. ಪೂರ್ತಿ ಕ್ರೆಡಿಟ್ ನಿಮ್ಮದೇ,

ನಮ್ಮದೇನೂ ಇಲ್ಲಪ್ಪ. ಪೂರ್ಣ ಕ್ರೆಡಿಟ್ ನಿಮ್ಮದು ನಿಮ್ಮ ತಮ್ಮನದು, ಜನತಾದಳದ್ದು, ನಮ್ಮದಲ್ಲ, ಆಯಿತು, ಒಪ್ಪಿಕೊಳ್ಳುತ್ತೇವೆ. ಇವತ್ತು ತಾವು ಅತ್ಯಂತ ಹಿರಿಯ ಅಣ್ಣರವರು ಇದ್ದೀರಿ, ರೇವಣ್ಣನವರು ಕೃಷಿಗೆ ಎಷ್ಟು ಬೇಕೆಂದು ಹೇಳಿ, ಗ್ರಾಮೀಣಾಭಿವೃದ್ಧಿಗೆ ತಮ್ಮ ಅತ್ಯುತ್ತಮವಾದ ಸಲಹೆಗಳನ್ನು ಕೊಡಿ. ಆ ಕ್ರೆಡಿಟ್ ಬಗ್ಗೆ ಮತ್ತೆ ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ. ಆ ಕ್ರೆಡಿಟ್ ಪೂರ್ತಿ ನಿಮ್ಮದೆ.

ಶ್ರೀ ನೆ.ಲ.ನರೇಂದ್ರ ಬಾಬು : ಮಾನ್ಯ ಅಧ್ಯಕ್ಷರೇ, ಕ್ರೆಡಿಟ್ ಯಾರದು, profit ಯಾರದು ಗೊತ್ತಾಗುತ್ತಿಲ್ಲ.

ಛೇರ್ಮನ್ : ತಾವು ಯೀಲ್ಡ್ ಆಗಬೇಡಿ, ಮಾತನಾಡಿ ಸರ್.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ನಾನು ನಮ್ಮ ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೇ, ಈಗ ಸನ್ಮಾನ್ಯ ಸಭಾನಾಯಕರು ಬಂದಿದ್ದಾರೆ, ಅವರು ಸಮರ್ಥರಾಗಿದ್ದಾರೆ ಉತ್ತರ ಕೊಡುವುದಕ್ಕೆ, ನಾನು ಮಾತನಾಡಿದ ಮೇಲೆ ನೀವು ನಿಂತು ಇನ್ನು ಚರ್ಚೆ ಮುಂದುವರೆಸೋಣ, ದಯಮಾಡಿ ತಾವೆಲ್ಲಾ ಅವಕಾಶ ಕೊಡಬೇಕೆಂದು ಮನವಿ ಮಾಡುತ್ತೇನೆ. ಅಂಗವಿಕಲರಿಗೆ ಸಾವಿರ ರೂಪಾಯಿ ಕೊಡುವ ಕಾರ್ಯಕ್ರಮವಿರಬಹುದು, ಸಂಧ್ಯಾ ಸುರಕ್ಷಾ, ಕಾರ್ಯಕ್ರಮ ಇದೆ, 18 ವರ್ಷಗಳಾದ ಇಬ್ಬರು ಹೆಣ್ಣು ಮಕ್ಕಳಿಗೆ 40,000 ರೂ.ಗಳನ್ನು ಕೊಡುವ ಕಾರ್ಯಕ್ರಮ. ನಾನು ಇಬ್ಬರೂ ಸೇರಿ ಮಾಡಿದ್ದು ಎಂದು ಹೇಳುತ್ತಿದ್ದೇನೆ ಹೊರತು first time ಅವರು start ಮಾಡಿದರು. ಮೊದಲು ಹೇಳಿದ ಮೇಲೆ ಪ್ರತಿ ಸಾರಿ ಹೇಳುವುದ್ಕೆ ಆಗುತ್ತದೆಯೇ? ಮಾಡಿಲ್ಲ ಎನ್ನುವ ಭಾವನೆ ಇತ್ತು ಅಲ್ಲವೇ ಹಿಂದಿನ ಮುಖ್ಯಮಂತ್ರಿಗಳು 60 ವರ್ಷಗಳಿಂದ ಮಾಡಿಲ್ಲ ಎಂದು ಇತ್ತಲ್ಲ ಅದಕ್ಕೋಸ್ಕರ ಈ ವಿಷಯವನ್ನು ಹೇಳಬೇಕಾಯಿತು. ಈಗ ಉದಾಹರಣೆಗೆ ಹೇಳುವುದಾದರೆ ಹೆಣ್ಣುಮಕ್ಕಳಿಗೆ, ಗಂಡುಮಕ್ಕಳಿಗೆ ಸೈಕಲ್ ಕೊಡುವ ಕಾರ್ಯಕ್ರಮ ಇದೆ. ಸುಮಾರು 1100 ಪ್ರೌಢಶಾಲೆ, 500 ಪಿ.ಯು. ಕಾಲೇಜು, ಈ ಸ್ವಾತಂತ್ರ ಬಂದು 60 ವರ್ಷಗಳಾಯಿತು, ಕುಮಾರಸ್ವಾಮಿ ಯವರು, ಯಡಿಯೂರಪ್ಪನವರ ಸಮ್ಮಿಶ್ರ ಸರ್ಕಾರ ಬರುವವರೆಗೆ 40 ತಾಲ್ಲೂಕು ಕೇಂದ್ರಗಳಲ್ಲಿ ಕಾಲೇಜುಗಳಿರಲಿಲ್ಲ. 4 ಜಿಲ್ಲಾಕೇಂದ್ರಗಳಲ್ಲಿ ಕಾಲೇಜುಗಳಿರಲಿಲ್ಲ, ಸುಮಾರು ಇಂಜಿನಿಯರಿಂಗ್, ಐ.ಟಿ.ಐ., ಪಾಲಿಟೆಕ್ನಿಕ್ ಕಾಲೇಜುಗಳಿರಬಹುದು, ಮೆಡಿಕಲ್ ಕಾಲೇಜನ್ನು ಹಿಂದೆ ನಾವು ಧರಂಸಿಂಗ್

ರವರು ಸೇರಿ ಮಾಡಿದ್ದೇವೆ. ಎಲ್ಲವನ್ನೂ ಹೇಳಲಿಕ್ಕೆ ತಯಾರಿಲ್ಲ. ಅದರ ಜೊತೆಗೆ ಸುಮಾರು 2500 ಶಿಕ್ಷಕರುಗಳ ನೇಮಕ, ಏಕೆಂದರೆ ಇವತ್ತು ಗ್ರಾಮೀಣ ಪ್ರದೇಶದಲ್ಲಿ ನಮ್ಮ ರೈತರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ನಮ್ಮ ಮುಖ್ಯಮಂತ್ರಿಗಳಿಗಿದೆ. ಇವತ್ತು ಕೆಲವು ಶಾಲೆಗಳಲ್ಲಿ ಹೇಳುವುದಾದರೆ, ಶೀಕ್ಷಣ ಸಚಿವರು ಕಾಗೇರಿಯವರು ಇಲ್ಲಿಲ್ಲ. ಇವತ್ತು ಸುಮಾರು ಹಾಸನ ಜಿಲ್ಲೆಯದೊಂದರಲ್ಲೇ ಪಿ.ಯು. ಕಾಲೇಜೊಂದರಲ್ಲೇ 500 ಜನ ಶಿಕ್ಷಕರಿಲ್ಲ. ನನ್ನೂರಿನಲ್ಲಿ ಪಿ.ಯು. ಕಾಲೇಜಿನಲ್ಲಿ 50 ಹುಡುಗರು ಇದ್ದಾರೆ, ಒಬ್ಬ ಶಿಕ್ಷಕರಿದ್ದಾರೆ. ನಗರಪ್ರದೇಶದಲ್ಲಿ ದೊಡ್ಡವರ ಮಕ್ಕಳು ಸರ್ಕಾರಿ, ಪ್ರೈವೇಟ್ ಕಾಲೇಜುಗಳಲ್ಲಿ ಹೇಗೋ ಓದಿಕೊಳ್ಳುತ್ತಾರೆ, ಗ್ರಾಮೀಣ ಪ್ರದೇಶದಲ್ಲಿ ರೈತರ ಬಾಳು ಹಸನಾಗಬೇಕಾದರೆ, ಅವರ ಲೆಕ್ಕ ಪತ್ರ ಬರೆಯುವುದಕ್ಕೋಸ್ಕರವಾದರೂ ಅವರಿಗೆ ವಿದ್ಯೆ ಕಲಿಸಲಿಕ್ಕೆ ದಾರಿ ಮಾಡಿಕೊಡಿ, ನಾನು ಬೇರೆ ಉದ್ದೇಶಕ್ಕೆ ಹೇಳುತ್ತಿಲ್ಲ. ಎಷ್ಟು ಶಿಕ್ಷಕರ ಹುದ್ದೆಗಳಿವೆ ನೋಡಿ one time appoint ಮಾಡಿ. ಬೇರೆ ಕಾರ್ಯಕ್ರಮಗಳನ್ನೆಲ್ಲಾ ರೂಪಿಸಿ. ಇವತ್ತು ಪಿ.ಯು. ಕಾಲೇಜಿನಲ್ಲಿ 1550 ಹುದ್ದೆ ಖಾಲಿ ಇದೆ, one time ಮಾಡಲಿಕ್ಕೆ ತೊಂದರೆ ಏನು, ಪ್ರಥಮ ದರ್ಜೆ ಕಾಲೇಜಿಗೆ 2500 ಉಪನ್ಯಾಸಕರ ಹುದ್ದೆಗಳು ಕೆ.ಪಿ.ಎಸ್.ಸಿ.ಯಿಂದ select ಆಗಿ ಬಂದಿದೆ, ಕೊಡುತ್ತಿದ್ದೀರಿ. ಅದೇರೀತಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಇನ್ನು 2000 ಹುದ್ದೆಗಳು ಇವೆ. ಐ.ಟಿ.ಐ. ಕಾಲೇಜುಗಳಲ್ಲಿ ಇವೆ, ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜುಗಳಲ್ಲಿವೆ. one time ವಿದ್ಯಾಭ್ಯಾಸಕ್ಕೆ ನೀವು ಕಾರ್ಯಕ್ರಮವನ್ನು ರೂಪಿಸಬೇಕು ಎಂದು ಹೇಳಿ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನಮ್ಮಲ್ಲಿ ಕೃಷಿ ಕಾಲೇಜು ಮಾಡಿದ್ದೀರಿ, ಮತ್ತೆ ತೋಟಗಾರಿಕೆ ಕಾಲೇಜು ಮಾಡಿದ್ದೀರಿ, ಅದಕ್ಕೆ ಮೂಲಭೂತ ಸೌಕರ್ಯಗಳೇನು ಬೇಕು, ಅದನ್ನು ಮಾಡಲಿಕ್ಕಾಗಿದೆಯೇ? ಸುಮಾರು ಎರಡು ವರ್ಷಗಳಾಯಿತು, ಅದಕ್ಕೆ ಇನ್ನೂ ಶಿಕ್ಷಕರ ನೇಮಕಾತಿ ಆಗಿಲ್ಲ. ಶಿವಮೊಗ್ಗ, ಹಾಸನ ಜಿಲ್ಲೆಗಳ ಕಾಲೇಜುಗಳಲ್ಲಿ ಕಳೆದ ಸಾರಿ admission ಆಗಿಲ್ಲ, ತಾವು ಈ ಬಗ್ಗೆ ತಿಳಿದ ಮೇಲೆ ಸಂಬಂಧಪಟ್ಟ ವಿಶ್ವವಿದ್ಯಾಲಯದವರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದೀರಿ. ಏಕೆಂದರೆ ನಿಮ್ಮ ಬಗ್ಗೆ ನಾನು ಹೇಳುತ್ತಿಲ್ಲ. ಕೆಲವು ಅಧಿಕಾರಿಗಳು ಮಾಡುವಂಥ ಕೆಲಸ ತಮ್ಮ ಗಮನಕ್ಕೆ ಬರುತ್ತದೋ, ಬರುವುದಿಲ್ಲವೋ ಎಲ್ಲದಕ್ಕೂ ಮುಖ್ಯಮಂತ್ರಿಗಳನ್ನೇ

ಹೊಣೆಗಾರಿಕೆ ಮಾಡಲಿಕ್ಕಾಗುವುದಿಲ್ಲ. ಇವತ್ತು ನಾವು ಕೃಷಿ ಬಗ್ಗೆ ಮಾತನಾಡುತ್ತಿದ್ದೇವೆ, ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನೆ ಇಲಾಖೆ, ಇವುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ, ನಮ್ಮ ಕೃಷಿ ಸಚಿವರಿಗೆ ಇವತ್ತು ನಾನು ಗಮನಕ್ಕೆ ತರುತ್ತೇನೆ, ಸುಮಾರು ಕೃಷಿ ಇಲಾಖೆಯಲ್ಲಿ ಸುಮಾರು 9,000 sanctioned posts ಇದೆ, 9,000 posts ನಲ್ಲಿ ಸುಮಾರು 3,600 ಹುದ್ದೆಗಳು ಖಾಲಿ ಇವೆ. ಕುಮಾರಸ್ವಾಮಿಯವರಿದ್ದಾಗ 500 ಹುದ್ದೆಗಳನ್ನು Assistant Director posts ನಮ್ಮ ಬಂಡೆಪ್ಪ ಕಾಶಂಪೂರ್ ಇದ್ದಾಗ ಭರ್ತಿ ಮಾಡಲಾಯಿತು.

ಶ್ರೀ ಎ.ಎಸ್. ರವೀಂದ್ರನಾಥ್(ಕೃಷಿಸಚಿವರು) : ಕುಮಾರಸ್ವಾಮಿಯವರು ಮುಖ್ಯಮಂತ್ರಿಯವರು ಆಗಿದ್ದಾಗಲೂ ಅಷ್ಟೇ ಹುದ್ದೆಗಳು ಇದ್ದವು, ಈಗಲೂ ಅಷ್ಟೇ ಹುದ್ದೆಗಳಿವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಆಗ ನೀವು ನಮ್ಮ ಜೊತೆಯಲ್ಲಿದ್ದರಲ್ಲ.

ಶ್ರೀ ಬಂಡೆಪ್ಪ ಕಾಶಂಪೂರ್ : ನಮ್ಮ ಸಮಯದಲ್ಲಿ A.E.O. ಗಳ 410 ಹುದ್ದೆಗಳನ್ನು ಭರ್ತಿ ಮಾಡಿರುವುದು.

ಛೇರ್ಮನ್ : ನೀವು ಮಾತನಾಡಿ :

ಶ್ರೀ ಹೆಚ್.ಡಿ.ರೇವಣ್ಣ : ಕೃಷಿ ಸಚಿವರು ಹೇಳಿದರು, ಕುಮಾರಸ್ವಾಮಿಯವರು ಆ ಕಾಲದಲ್ಲಿದ್ದರು ಎಂದು ಹೇಳಿದರು, ಆಯಿತು, ಬಂಡೆಪ್ಪ ಕಾಶಂಪೂರ್‌ರವರು ಇದ್ದರು, 410 ಜನರನ್ನು Direct ಆಗಿ appoint ಆಯಿತು. ಅದು Seniority ಮೇಲೆ ಮಾಡಿದರು, ಇಲ್ಲದೇ ಹೋದರೆ ಅದು ಒಂದು ಲೋಕಾಯುಕ್ತಕ್ಕೆ ಹೋಗುತ್ತಿತ್ತು. ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಕುಮಾರಸ್ವಾಮಿಯವರು ತೆಗೆದುಕೊಂಡಿದ್ದಾರೆಯೇ? ನಾನು ಹೇಳುವುದು ಯಡಿಯೂರಪ್ಪನವರು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಈ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಕ್ಕಾದರೂ ಈ 3500 ಹುದ್ದೆಗಳನ್ನು ಭರ್ತಿ ಮಾಡಿ ಎಂದು ಹೇಳುತ್ತಿದ್ದೇನೆ. ಇಲ್ಲದಿದ್ದರೆ ನಾನು ಅದನ್ನು ಹೇಳುತ್ತಿರಲಿಲ್ಲ. ಬೇಡ ಎಂದರೆ ಬೇಡಿ, ರೈತರ ಹೆಸರಿನಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿಲ್ಲ, ಅದು ಬೂಟಾಟಿಕೆ ಎಂದರೆ 3500 ಹುದ್ದೆಗಳ ಬಗ್ಗೆ ಬಿಟ್ಟು ಬಿಡಿ, ನಮ್ಮದೇನೂ ಅಭ್ಯಂತರವಿಲ್ಲ. ನಮ್ಮ ಕೃಷಿ ಸಚಿವರಿಗೆ ಕೆಲವೊಂದು ವಿಷಯಗಳು ಗೊತ್ತಾಗುವುದಿಲ್ಲ, ಕೆಲವೊಂದು ಹೇಳಬೇಕಾಗುತ್ತದೆ, ಹೇಳುತ್ತೇನೆ, ಐದು ನಿಮಿಷ ತಾಳ್ಮೆಯಿಂದಿರಿ.

ಹಾವೇರಿಯಲ್ಲಿ, ದಾವಣಗೆರೆಯಲ್ಲಿ ಗೋಲಿಬಾರ್ ಹೇಗೆ ಆಯಿತು ಎಂದು ಹೇಳುತ್ತೇನೆ.

ಮಾನ್ಯ ಛೇರ್‌ಮನ್‌ರವರೇ, ಹಾವೇರಿಯಲಿ ಗೋಲಿಬಾರ್ ಹೇಗೆ ಆಯಿತು? ದಾವಣಗೆರೆಯಲ್ಲಿ ಗೋಲಿಬಾರ್ ಹೇಗೆ ಆಯಿತು? ಅದನ್ನು ನಾನು ಹೇಳುತ್ತೇನೆ. ದಯವಿಟ್ಟು ಸ್ವಲ್ಪ ತಾಳ್ಮೆಯಿಂದ ಕುಳಿತು ಕೇಳಿ. ತೋಟಗಾರಿಕೆ ಇಲಾಖೆಯಲ್ಲಿ Assistant Director ಗಳು ಇರಲಿಲ್ಲ, AHO ಗಳು ಇರಲಿಲ್ಲ, ಅಂದು ತೋಟಗಾರಿಕಾ ಇಲಾಖೆ ಒಂದರಲ್ಲಿಯೇ 1500 ಹುದ್ದೆಗಳನ್ನು ಮಾನ್ಯ ಕುಮಾರಸ್ವಾಮಿಯವರು ತುಂಬಿದರು. ಇವತ್ತು 1500 ಜನರಿಗೆ ತೋಟಗಾರಿಕಾ ಇಲಾಖೆಯಲ್ಲಿ ಹುದ್ದೆಗಳನ್ನು ತುಂಬುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಇವತ್ತು ತೋಟಗಾರಿಕೆ ಇಲಾಖೆಯಲ್ಲಿ ಹುದ್ದೆಗಳನ್ನು ತುಂಬುವುದಕ್ಕೆ ಆಗಿದೆಯೇ? ಕೇಂದ್ರ ಸರ್ಕಾರದಿಂದ ಮಾನ್ಯ ಶರದ್ ಪವಾರ್ ರವರು ಇವತ್ತು ಕರ್ನಾಟಕಕ್ಕೆ National Horticulture Machine ನಿಂದ ಸುಮಾರು 7–9 ಜಿಲ್ಲೆಗಳನ್ನು ಕೊಟ್ಟಿರಬಹುದು. ಎಷ್ಟು ಬೇಕಾದರೂ ದುಡ್ಡು ಕೊಡುತ್ತೇವೆ ಎಂದು ಹೇಳುತ್ತಾರೆ. 1500 ಹುದ್ದೆಗಳನ್ನು ತೋಟಗಾರಿಕೆ ಇಲಾಖೆಗೆ ಮಾನ್ಯ ಕುಮಾರಸ್ವಾಮಿಯವರು ತುಂಬಿದ್ದಾರೆ. 1500 ಹುದ್ದೆಗಳಿಗೆ ಅಂದೇ ಅನುಮತಿ ಕೊಟ್ಟಿದ್ದರು. ಇವತ್ತಿನವರೆಗೆ ಅಂದರೆ ಒಂದೂಕಾಲು ವರ್ಷದಲ್ಲಿ ಹುದ್ದೆಗಳನ್ನು ಏಕೆ ತುಂಬುವುದಕ್ಕೆ ಆಗಿಲ್ಲ? 3,500 ಜನ ಕೃಷಿ ಇಲಾಖೆ. ಇವತ್ತು ತಾವು ಹೇಳಿದ್ದರೆ ನಾನು ಒಪ್ಪುತ್ತಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಪಟ್ಟಿಯಲ್ಲಿ ಕೃಷಿ ಇಲಾಖೆಯಲ್ಲಿ ಇಂತಿಂಥ ಹುದ್ದೆಗಳು ಇವೆ, ಅವರ ಊರಿಗೆ ಸಂಬಂಧಪಟ್ಟಿದ್ದನ್ನೂ ಸಹ ಹೇಳಿದ್ದಾರೆ, ಬೂಕನಕೆರೆಯ ವಿಷಯವನ್ನು ಹೇಳಿದ್ದಾರೆ. ಅದನ್ನೂ ಸೇರಿಸಿ ಕೃಷಿ ಇಲಾಖೆಯಲ್ಲಿ ಇಂತಿಂಥ ಹುದ್ದೆಗಳಿವೆ ಎಂದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಇವತ್ತು ಅದಲ್ಲದೇ ಮೀನುಗಾರಿಕೆ ಇಲಾಖೆಯಿರಬಹುದು, ಪಶುಸಂಗೋಪನೆ ಇಲಾಖೆಯಿರಬಹುದು, ರೇಷ್ಮೆ ಇಲಾಖೆಯಿರಬಹುದು ಅಥವಾ ವಿಶ್ವವಿದ್ಯಾನಿಲಯಗಳಿರಬಹುದು, ಇದೆಲ್ಲಾ ಕೃಷಿ ಇಲಾಖೆಗೆ ಬರುತ್ತದೆ ಅಲ್ಲವೇ? ಇವತ್ತಿನವರೆಗೆ vacancy ಗಳು ಎಷ್ಟಿವೆ ಸ್ವಾಮಿ? ಇವೆಲ್ಲಾ ಯಾರ ಪರವಾಗಿ ಇರುವುದು? ಇವೆಲ್ಲಾ ಇರುವುದು ರೈತರ ಪರವಾಗಿ ಅಲ್ಲವೇ? ಇವತ್ತಿನ ವರೆಗೂ ಏನಾದರೂ ಹುದ್ದೆಗಳನ್ನು ತುಂಬಲಾಗಿದೆಯೇ? ದಯಮಾಡಿ ತಾವು ತಿಳಿಸಬೇಕು ಎಂದು ನಾನು ಸಭಾನಾಯಕರನ್ನು, ಕೃಷಿ ಸಚಿವರನ್ನು

ಮನವಿ ಮಾಡುತ್ತೇನೆ. ಪ್ರಥಮವಾಗಿ ಈ ರಾಷ್ಟ್ರದಲ್ಲಿ ಏನಾದರೂ ಕೃಷಿ ನೀತಿಯನ್ನು ಕೊಟ್ಟಂಥ ಕೃಷಿ ಸಚಿವರು ಇದ್ದರೆ ಅವರು ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರು ಹಾಗೂ ಇದರ ಕ್ರೆಡಿಟ್ ಮಾನ್ಯ ಕುಮಾರಸ್ವಾಮಿ ಯವರಿಗೆ ಹೋಗಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾ ಗುತ್ತದೆ. ಏಕೆಂದರೆ, ಇವತ್ತು ಕೃಷಿ ನೀತಿ ಏನಾಗಿದೆ ಎಂದರೆ Agriculture policy 2006 ಏನಾಗಿದೆ ಎನ್ನುವುದನ್ನು ನೋಡಬೇಕಾಗಿದೆ. ಈ ಪುಸ್ತಕ ಏನಾಗಿದೆ ಸ್ವಾಮಿ? ಇದನ್ನು ಏನಾದರೂ ಕಸದ ಬುಟ್ಟಿಗೆ ಹಾಕಿದ್ದೀರೋ ಏನೋ ಗೊತ್ತಿಲ್ಲ. ಇದು ಒಂದು ವಿಚಾರ. ಎರಡನೆಯದಾಗಿ, improving the economic conditions of the farmers. ರೈತರ ಆರ್ಥಿಕ ಸ್ಥಿತಿ ಬಗ್ಗೆ ಮಾನ್ಯ ಕುಮಾರಸ್ವಾಮಿಯವರು ಒಂದು ಸಮಿತಿ ಮಾಡಿದರು. ಆ ಸಮಿತಿಯನ್ನು ಯಾರ ಕಡೆಯಿಂದ ಮಾಡಿಸಿದರು? ಈಗಿನ ಹಣಕಾಸಿನ ಕಾರ್ಯದರ್ಶಿಗಳಾದ ಮಾನ್ಯ ಶ್ರೀನಿವಾಸ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಮಾಡಿಸಿದ್ದರು. ಏಕೆಂದರೆ, ಮಾನ್ಯ ಶ್ರೀನಿವಾಸಮೂರ್ತಿಯವರ ಮೇಲೆ ನನಗೆ ಗೌರವವಿದೆ. ಅವರು ರೈತಾಪಿ ವರ್ಗದಿಂದ ಬಂದಂಥವರು. ಗ್ರಾಮೀಣ ಪ್ರದೇಶದ ರೈತರ ಬಗ್ಗೆ ಚಿಂತನೆಯಿರುವ ಅಧಿಕಾರಿಗಳು ಯಾರಾದರೂ ಇದ್ದಾರೆ ಎಂದರೆ ಅವರು ಶ್ರೀನಿವಾಸ ಮೂರ್ತಿಯವರು ಎಂದು ನಾನು ಹೇಳುತ್ತೇನೆ. ಅವರು ನಮ್ಮ ಕೆಲಸ ಮಾಡುತ್ತಾರೋ ಅಥವಾ ಬಿಡುತ್ತಾರೋ ಅದು ಬೇರೆ ವಿಚಾರ. ನಾನು ಆ ವಿಚಾರವಾಗಿ ತಲೆ ಕೆಡಿಸಿಕೊಳ್ಳುವುದಿಲ್ಲ. ಹಾಸನ 11ನೇ ಸ್ಥಾನದಲ್ಲಿ ಇದೆ, ಶಿವಮೊಗ್ಗ 5ನೇ ಸ್ಥಾನದಲ್ಲಿದೆ ಎಂದು ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಅದರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ರಾಯಚೂರು ಕೊನೆಯ ಸ್ಥಾನದಲ್ಲಿದೆ ಎಂದರು. ನಾನು ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಶ್ರೀನಿವಾಸ ಮೂರ್ತಿಯವರ ಅಧ್ಯಕ್ಷತೆಯಲ್ಲಿ ನಮ್ಮ ರೈತರ ಸ್ಥಿತಿ ಹೇಗಿದೆ ಎನ್ನುವುದರ ಬಗ್ಗೆ ವರದಿ ಕೊಟ್ಟಿದ್ದಾರೆ. ಯಾವಾಗ ಕೊಟ್ಟಿರುವುದು ಎಂದರೆ, RDPR 65, REP 2007 dated 5th July 2007. ಅಂದರೆ ಜುಲೈ 5ನೇ ತಾರೀಖಿನಂದು ಕೊಟ್ಟಿದ್ದು, ಇಂದಿಗೆ ಎರಡು ವರ್ಷಗಳಾಯಿತು. ಮಾನ್ಯ ಶ್ರೀನಿವಾಸಮೂರ್ತಿಯವರು ಅವರ ಜೊತೆಗೆ ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಮಾನ್ಯ ರಾಮಸ್ವಾಮಿಯವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ

ಕಾರ್ಯದರ್ಶಿಗಳಾದ ಮಾನ್ಯ ಜಯರಾಜ್‌ರವರು, ಸಹಕಾರ ಇಲಾಖೆಯ ಉಪಕಾರ್ಯದರ್ಶಿಗಳಾದ ರವಿಕುಮಾರ್‌ರವರು ಇವರೆಲ್ಲರೂ ಇಲ್ಲಿಯೇ ಇದ್ದಾರೆ. ಈ ಎರಡೂ ಪುಸ್ತಕಗಳನ್ನು ಎಲ್ಲಿಟ್ಟು improvement ಮಾಡಿದರು? ಏಕೆಂದರೆ ಕೃಷಿ ವಿಷಯದ ಬಗ್ಗೆ ಚರ್ಚೆಗೆ ಏನಾದರೂ ಕರೆದರೆ ಈ ಎರಡು ಪುಸ್ತಕಗಳಿಗೆ ಜೀವ ಬರುತ್ತದೆಯೇ ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಏಕೆಂದರೆ, ಈ ಎರಡೂ ಪುಸ್ತಕಗಳು ಎಲ್ಲಿವೆ ಎನ್ನುವುದನ್ನು ದಯಮಾಡಿ ಮಾನ್ಯ ಸಭಾ ನಾಯಕರು ಈ ರಾಜ್ಯದ ಜನತೆಗೆ ತಿಳಿಸಬೇಕು ಎಂದು ನಾನು ಮನವಿ ಮಾಡುತ್ತೇನೆ. ಸನ್ಮಾನ್ಯ ಪ್ರಧಾನ ಮಂತ್ರಿಗಳು ಹೈದರಾಬಾದ್ ಹಾಗೂ ಮಹಾರಾಷ್ಟ್ರಗಳಿಗೆ ಭೇಟಿ ನೀಡಿದಂಥ ಸಂದರ್ಭದಲ್ಲಿ 15–20 ನಿಮಿಷಗಳ ಕಾಲ ಸಭೆ ಮಾಡಿದರು, ಸರಿಯಾದ ಮಾಹಿತಿ ಇಟ್ಟಿಲ್ಲ ಎಂದು ಹೇಳಿದರು. ಅಂದು ನಮ್ಮ ರಾಜ್ಯಕ್ಕೆ ಬಂದಂಥ ಸಂದರ್ಭದಲ್ಲಿ ಏನು presentation ಮಾಡಿದರು, ಪ್ರಧಾನ ಮಂತ್ರಿಗಳಿರ ಬಹುದು, ಕೃಷಿ ಮಂತ್ರಿಗಳಾದ ಮಾನ್ಯ ಶರದ್ ಪವಾರ್ ಇರಬಹುದು, ಅರ್ಥ ಸಚಿವರಾದ ಮಾನ್ಯ ಚಿದಂಬರಂರವರು ಇರಬಹುದು, ಅವರ ಜೊತೆಗೆ ಕೇಂದ್ರ ಸರ್ಕಾರದ ಎಲ್ಲಾ ಅಧಿಕಾರಿಗಳು ಬಂದಿದ್ದನ್ನು ಗಮನಿಸ ಬೇಕಾಗಿದೆ. ಆ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಈಗಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪರವರು ಉಪ ಮುಖ್ಯ ಮಂತ್ರಿಗಳಾಗಿ ಅಲ್ಲಿ ಉಪಸ್ಥಿತರಿದ್ದರು. ಅವರ ಸಮ್ಮುಖದಲ್ಲಿ ಈ ರಾಜ್ಯದ ಕೃಷಿ ಬಗ್ಗೆ 90 ನಿಮಿಷಗಳ ಕಾಲ ಪ್ರಾತ್ಯಕ್ಷಿಕೆಯನ್ನು ಮಾಡಿದ್ದನ್ನು ಒಪ್ಪಿ ಇಡೀ ರಾಷ್ಟ್ರದಲ್ಲಿ ಕರ್ನಾಟಕ ಮಾದರಿಯಾಗಿದೆ ಎನ್ನುವ ಭಾವನೆ ಯನ್ನು ಈ ದೇಶದ ಪ್ರಧಾನ ಮಂತ್ರಿಗಳು ಆ ಸಮಯದಲ್ಲಿ ವ್ಯಕ್ತಪಡಿಸಿ ಹೋದರು. ಇದರ ಸಲುವಾಗಿ ಅಂದು ಆ ಒಂದು ಸಭೆಯಲ್ಲಿ ಏನು ಮಾಡಿದರು ಎಂದರೆ ಕೇಂದ್ರ ಸರ್ಕಾರದಿಂದ ಪ್ರಧಾನ ಮಂತ್ರಿಗಳು ಈ ರಾಜ್ಯಕ್ಕೆ 5 ವರ್ಷಗಳಲ್ಲಿ 1,750 ಕೋಟಿ ರೂಪಾಯಿಗಳನ್ನು ಕೃಷಿಗೆ ಕೊಡುತ್ತೇವೆ ಎಂದು ಹೇಳಿದ್ದರು. ಆ ವಿಚಾರವೇನಾಯಿತು, ಆ ಹಣವನ್ನು ಈ ಸರ್ಕಾರ ಕೇಂದ್ರ ಸರ್ಕಾರದಿಂದ ತೆಗೆದುಕೊಂಡಿದೆಯೇ ಸ್ವಾಮಿ? ಮಾನ್ಯ ಕುಮಾರಸ್ವಾಮಿ ಯವರು ಇದ್ದಂಥ ಸಂದರ್ಭದಲ್ಲಿ 175 ಕೋಟಿ ರೂಪಾಯಿಗಳ ಹಣ ಬಂತು. ಇತ್ತೀಚೆಗೆ ಯಾರೂ ಕೂಡ ಕೇಂದ್ರ ಸರ್ಕಾರದಿಂದ ಹಣ ತೆಗೆದು ಕೊಳ್ಳುವ ಬಗ್ಗೆ ಅಧಿಕಾರಿಗಳು ಸಹ ಗಮನಹರಿಸಿಲ್ಲ. ಏಕೆಂದರೆ ಯಾರಿಗೂ

ಆಸಕ್ತಿ ಇಲ್ಲ. 1,750 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಪ್ರಧಾನ ಮಂತ್ರಿಗಳು 5 ವರ್ಷಗಳಲ್ಲಿ ಕರ್ನಾಟಕಕ್ಕೆ ಕೊಡುತ್ತೇವೆ ಎಂದು ಹೇಳಿದರು. ಅದನ್ನು ತೆಗೆದು ಕೊಳ್ಳುವುದಕ್ಕೆ ನಿಮಗೆ ಆಸಕ್ತಿಯಿಲ್ಲವೆಂದರೆ ನಾನು ಏನು ಹೇಳಬೇಕೆನ್ನುವ ವಿಚಾರವಾಗಿ ಮಾನ್ಯ ಛೇರ್‌ಮನ್‌ರವರಿಗೆ ತಿಳಿಸುತ್ತಿದ್ದೇನೆ. ಇದಲ್ಲದೆ, ಸಾವಯವ ಕೃಷಿ ಬಗ್ಗೆ ಹೇಳುವುದಾದರೆ ಧಾರವಾಡದಲ್ಲಿ ಮೊದಲ ಬಾರಿಗೆ ಇಡೀ ರಾಷ್ಟ್ರದಲ್ಲಿ ಒಂದೇ ವರ್ಷದಲ್ಲಿ ಕಾಲೇಜು ಸ್ಥಾಪನೆ ಮಾಡಿ, ಒಂದೇ ವರ್ಷದಲ್ಲಿ ಕಟ್ಟಡವನ್ನು ಮಾಡಿ, ಧಾರವಾಡಕ್ಕೆ Planning Commissioner ರವರೇ ಬಂದು ಸಾವಯವ ಕೃಷಿ ಕಾಲೇಜನ್ನು ಪ್ರಾರಂಭ ಮಾಡಿದ್ದು ಇಡೀ ರಾಷ್ಟ್ರದಲ್ಲಿ ಎಂದರೆ ಅದು ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ ಎನ್ನುವುದನ್ನು ಈ ಸದನದಲ್ಲಿ ಹೇಳಬೇಕಾಗಿದೆ. ಏಕೆಂದರೆ Deputy Planning Chairman ರವರು ಅದನ್ನು ಮೆಚ್ಚಿ ಧಾರವಾಡದಲ್ಲಿ ಮಾಡಿರುವ ಸಾವಯವ ಕೃಷಿ ಕಾಲೇಜು ಮತ್ತು ತರಬೇತಿಯನ್ನು ಇಡೀ ರಾಷ್ಟ್ರ ಎಲ್ಲಾ ಕಡೆ ಮಾಡಬೇಕೆಂಬ ಭಾವನೆಯನ್ನು ವ್ಯಕ್ತಪಡಿಸಿ ಹೋದರು. ಏಕೆಂದರೆ, ಕೈಗಾರಿಕೆಗಳಿಗೆ ಏನು 4% ಬಡ್ಡಿ ದರದಲ್ಲಿ ಸಾಲ ಕೊಡುತ್ತಿದ್ದಾರೆ, ನಮಗೆ ಏಕೆ ಕೊಡುತ್ತಿಲ್ಲ ಎನ್ನುವ ಭಾವನೆ ವ್ಯಕ್ತವಾಯಿತು. ಅದನ್ನು ಇವತ್ತು ಕೇಳುವವರು ಯಾರು? ಆವತ್ತು ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಪಕ್ಷಗಳ ಸಮ್ಮಿಶ್ರ ಸರ್ಕಾರ ಇದ್ದಂಥ ಸಂದರ್ಭದಲ್ಲಿ 5 ವರ್ಷಗಳ ಕಾಲ ಕೇಂದ್ರದಲ್ಲಿ ಇದ್ದಂಥ NDA Government ಮಾಡಲಿಲ್ಲ. ಆ ಸಂದರ್ಭದಲ್ಲಿ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದರು ಹಾಗೂ ಮಾನ್ಯ ಸಿದ್ದರಾಮಯ್ಯರವರು ಹಣಕಾಸಿನ ಸಚಿವರಾಗಿದ್ದರು. ಆ ಸಂದರ್ಭದಲ್ಲಿ ಇಡೀ ದೇಶದಲ್ಲಿ 6% ಬಡ್ಡಿ ದರದಲ್ಲಿ ಸಾಲ ನೀಡುವ ವ್ಯವಸ್ಥೆಯನ್ನು ಪ್ರಥಮವಾಗಿ ಕರ್ನಾಟಕದಲ್ಲಿ ಮಾಡಲಾಯಿತು. ಆ ಸಂದರ್ಭದಲ್ಲಿ ರೈತಾಪಿ ಜನರು ಯಾವುದೇ ಬ್ಯಾಂಕು ಗಳಲ್ಲಿ ಸಾಲ ತೆಗೆದುಕೊಂಡರೆ 6% ಬಡ್ಡಿ ದರದಲ್ಲಿ ಕೊಡುವಂಥ ಕಾರ್ಯ ಕ್ರಮವನ್ನು ರೂಪಿಸಲಾಯಿತು. ಅದುವರೆವಿಗೂ ಯಾರೂ ರೂಪಿಸಿರಲಿಲ್ಲ ಎನ್ನುವುದನ್ನು ಸನ್ಮಾನ್ಯ ಸಭಾನಾಯಕರ ಗಮನಕ್ಕೆ ತರುತ್ತಿದ್ದೇನೆ. ಅದೇ ರೀತಿಯಲ್ಲಿ ರಾಷ್ಟ್ರೀಯ ಕಿಸಾನ್ ವಿಕಾಸ ಯೋಜನೆ ಯಡಿಯಲ್ಲಿ ಮತ್ತೆ 1,650 ಕೋಟಿ ರೂಪಾಯಿಗಳ ಹಣ ಕೇಂದ್ರ ಸರ್ಕಾರದಿಂದ ಬಂದಿದೆ. National Fund Security Machine ಅಡಿಯಲ್ಲಿ 450 ಕೋಟಿ ಬಂದಿದೆ.

ಸುಮಾರು 2,100 ಕೋಟಿ ಹಣ ಇವತ್ತು ಬಂದಿದೆ. ಎರಡೂ ಕಡೆಗಳಿಂದ ಬಂದಂಥ ಹಣ ಇದೆ. ಏಕೆಂದರೆ ಅಂದು ಸನ್ಮಾನ್ಯ ಪ್ರಧಾನ ಮಂತ್ರಿಗಳು ಹಾಗೂ ಮಾನ್ಯ ಶರದ್ ಪವಾರ್‌ರವರು ರಾಷ್ಟ್ರೀಯ ಕಿಸಾನ್ ಯೋಜನೆ ಯಡಿಯಲ್ಲಿ 1,650 ಕೋಟಿ ಮತ್ತು Natinal Fund Security Machine ಅಡಿಯಲ್ಲಿ 450 ಕೋಟಿ ಹಣ, ಒಟ್ಟು 2,100 ಕೋಟಿ ಹಣವನ್ನು ಕೊಟ್ಟರು. ಅದರ ಜೊತೆಗೆ ಕೇಂದ್ರ ಸರ್ಕಾರದ ಎಲ್ಲಾ ಕಾರ್ಯದರ್ಶಿಗಳನ್ನು 10 ದಿನಗಳ ಕಾಲ ಇಲ್ಲಿಯೇ ಬಿಟ್ಟು ಹೋದರು, ಪ್ರಾಜೆಕ್ಟ್ ರಿಪೋರ್ಟ್ ಇವೆಲ್ಲಾ ಆಯಿತು. ರಾಜ್ಯ ಸರ್ಕಾರದ ಅಧಿಕಾರಿಗಳು ಹಾಗೂ ಕೇಂದ್ರ ಸರ್ಕಾರದ ಅಧಿಕಾರಿಗಳು ಸತತವಾಗಿ 10 ದಿನಗಳ ಕಾಲ ಮಾಡಿದಂಥ ರಿಪೋರ್ಟ್ ನಿಂದ ಇವತ್ತು ಕೇಂದ್ರ ಸರ್ಕಾರದಿಂದ 2,100 ಕೋಟಿ ರೂಪಾಯಿಗಳ ಹಣ ಬರುತ್ತಿತ್ತು. ಅದಕ್ಕೆ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಸಹಿಯನ್ನು ಕೂಡ ಹಾಕಿದ್ದರು. ಸಹಿ ಹಾಕಿ ಕಳುಹಿಸಿದ ಮೇಲೆ ಮತ್ತೆ ಇನ್ನೊಂದು ಬಾರಿ review ಮಾಡಬೇಕೆಂದು ಹೇಳಿದ್ದರು. ಆದರೆ, ಕೇಂದ್ರ ಸರ್ಕಾರದಿಂದ ಬರುವ 2,100 ಕೋಟಿ ರೂಪಾಯಿಗಳ ಹಣಕ್ಕೆ ಕಲ್ಲು ಹಾಕಿದವರು ಯಾರು ಎಂಬುದನ್ನು ಸನ್ಮಾನ್ಯ ಸಭಾ ನಾಯಕರು ದಯಮಾಡಿ ತಿಳಿಸಬೇಕು. ಏಕೆಂದರೆ, ಇಡೀ ರಾಷ್ಟ್ರದಲ್ಲಿ 10 ದಿನಗಳ ಕಾಲ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಎಲ್ಲಾ ಅಧಿಕಾರಿಗಳೆಲ್ಲರೂ ಕುಳಿತು prepare ಮಾಡಿದಂಥ 2,100 ಕೋಟಿ ರೂಪಾಯಿಗಳ ಯೋಜನೆ ಏನಾಯಿತು? ಏಕೆಂದರೆ ಪುಸ್ತಕದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಇವೆಲ್ಲವನ್ನೂ ಗಮನಕ್ಕೆ ತಂದಿರುವುದರಿಂದ ನಾನು ಇವತ್ತು ಹೇಳುತ್ತಿದ್ದೇನೆ. ಇವತ್ತು ಹಣ ಏನಾಯಿತು ಸ್ವಾಮಿ? ಅನುಮತಿ ಏಕೆ ಕೊಡಲಿಲ್ಲ? ಅದಕ್ಕೆ ಕಾರಣವೇನು? ಹಿಂದಿನ ಮುಖ್ಯಮಂತ್ರಿಗಳು ಕಳುಹಿಸಿರುವುದನ್ನು ಮತ್ತೆ Review ಮಾಡುವಂಥಾದ್ದು ಯಾರು? ಉದಾಹರಣೆಗೆ ಇವತ್ತು ಕೃಷಿ ಬಗ್ಗೆ ಮಾತನಾಡುವುದಕ್ಕೆ ನಾವು ಸಭೆ ಕರೆದಿದ್ದೇವೆ ಸಂತೋಷ. ಇವತ್ತು Development Commissioner ಇದ್ದಾರೆಯೇ ಸ್ವಾಮಿ? ನಾಲ್ಕು ತಿಂಗಳಿನಿಂದ Development Commissioner ಹುದ್ದೆ ಖಾಲಿ ಇದೆ. ಆದರೆ, ಇವತ್ತು ನಾವು ಬರಗಾಲದ ಬಗ್ಗೆ ಮಾತನಾಡುತ್ತೇವೆ.

(3-00 PM)

ನಾಲ್ಕೈದು ತಿಂಗಳಿನಿಂದ ರೆವಿನ್ಯೂ ಇಲಾಖೆಯಲ್ಲಿ ರೆವಿನ್ಯೂ ಕಮೀಷನರ್ ಅವರೇ ಇಲ್ಲ. ರೆವಿನ್ಯೂ ಕಮೀಷನರ್ ಅವರು ಇದ್ದಾರೆಯೇ ಹೇಳಿ ಸ್ವಾಮಿ? ಹುದ್ದೆ ಖಾಲಿ ಇರಲು ಏನು ಕಾರಣ? ಈ ರಾಜ್ಯದಲ್ಲಿ ರೆವಿನ್ಯೂ ಕಮೀಷನರ್ ಅವರು ಇಲ್ಲವೇ ಇಲ್ಲವಾ? Development Commissioner ಅವರನ್ನು ಹಾಕುವುದು ಬೇಡವೇ? ಹಾಗಾದರೆ ಈ ರಾಜ್ಯದ ರೈತರ ಅಭಿವೃದ್ಧಿಯಾಗುವುದು ಬೇಡವೇ? Development Commissioner ಹುದ್ದೆ ಮೂರ್ನಾಲ್ಕು ತಿಂಗಳಿನಿಂದ ಖಾಲಿ ಇದೆ. ಸರ್ಕಾರದ ಜೊತೆ Development Commissioner ಅವರು ಸರಿಯಾಗಿ ನಡೆದುಕೊಳ್ಳು ವುದಿಲ್ಲವೇ ಅಥವಾ ರೆವಿನ್ಯೂ ಕಮೀಷನರ್ ಅವರು ಸರಿಯಾಗಿ ನಡೆದು ಕೊಳ್ಳುತ್ತಿಲ್ಲವೇ? ಏಕೆ ಈ ಹುದೆಯನ್ನು ಖಾಲಿ ಇಟ್ಟಿದ್ದೀರಿ ಎನ್ನುವುದನ್ನು ದಯಮಾಡಿ ಹೇಳಿ. ಖಾಲಿ ಇಡುವಂಥ ಉದ್ದೇಶವೇನು? ಏಕೆಂದರೆ, ಮಾನ್ಯ ಶರದ್ ಪವಾರ್ ಅವರು ಕೇಂದ್ರ ಸರ್ಕಾರದಿಂದ ಹಣ ಕೊಡುತ್ತೇವೆಂದು ಹೇಳಿದ್ದಾರೆ. ಹಣವನ್ನು ಕೊಟ್ಟರೂ ಈ ಸರ್ಕಾರ ತೆಗೆದುಕೊಳ್ಳುವ ಸನ್ನಿವೇಶದಲ್ಲಿ ಇಲ್ಲವೆಂದು ಹೇಳಬೇಕಾಗುತ್ತದೆ. ಉದಾಹರಣೆಗೆ ಹೇಳುವು ದಾದರೆ, ರಾಮನಗರದಲ್ಲಿ National Institute of Rural Management ಎಂದಿದೆ. ಡಾ. ಕುರಿಯನ್ ಅವರನ್ನು ನಾನೇ ಕರೆದುಕೊಂಡು ಬಂದೆ. ಸುಮಾರು 100 ಎಕರೆ ಜಮೀನು ಕೊಟ್ಟಿದ್ದರೆ ಇವತ್ತು ರಾಜ್ಯಕ್ಕೆ ಸುಮಾರು 500 ಕೋಟಿ ರೂಪಾಯಿ ಹಣ ಬರುತ್ತಿತ್ತು. ಕೇಂದ್ರ ಸರ್ಕಾರವೂ ಪೂರ್ತಿ ಹಣವನ್ನು ಕೊಡುತ್ತೇವೆಂದು ಹೇಳಿದ್ದರು. ಪ್ರಸ್ತಾವನೆಯು ಕೇಂದ್ರ ಸರ್ಕಾರಕ್ಕೆ ಹೋಗಿದೆ. ಇಲ್ಲಿ ಜಮೀನು ಕೊಡುವುದಕ್ಕಾಗುವುದಿಲ್ಲ. ಏಕೆಂದರೆ, ರಾಮನಗರ ಕುಮಾರಸ್ವಾಮಿಯವರ ಕ್ಷೇತ್ರ, ಬಾಲಣ್ಣನ ಕ್ಷೇತ್ರ. ಹೋಗಲಿ ರಾಮನಗರ ಬೇಡ ಬಿಡಿ. ಬೇರೆ ಶಿವಮೊಗ್ಗಕ್ಕೆ ಏಕೆ ಬೇಡ ಎಂದು ಹೇಳಿದರು? ಏನು ಕಾರಣ? 500 ಕೋಟಿ ರೂಪಾಯಿ ಹಣ ಬರುವುದನ್ನು ನೀವು ಏಕೆ ಕಳೆದಿರಿ? ಅದಲ್ಲದೇ ಕಬ್ಬು ಸಾಗಾಣಿಕೆ, ಮಾನ್ಯ ಕುಮಾರಸ್ವಾಮಿಯವರು ಇದ್ದಾಗ, ಒಂದು ಎಕರೆ ಕಬ್ಬನ್ನು ಯಾರು ಫ್ಯಾಕ್ಟರಿಗೆ ಸರಬರಾಜು ಮಾಡುವುದಕ್ಕಾಗುವುದಿಲ್ಲವೋ ಹತ್ತು ಸಾವಿರ ರೂಪಾಯಿಯನ್ನು ರೈತರಿಗೆ ಕೊಡುತ್ತೇವೆಂದು ಹೇಳಿದರು. 25 ಸಾವಿರ ಹೆಕ್ಟೇರ್‌ಗೆ, 10 ಸಾವಿರ ರೂಪಾಯಿ ಎಕರೆಗೆ ಕೊಡುತ್ತೇವೆಂದು ಹೇಳಿದರು. ವಿಧಾನಸಭೆ ಚುನಾವಣೆ

ಇದ್ದಾಗ ಸನ್ಮಾನ್ಯ ಮುಖ್ಯಮಂತ್ರಿಗಳು ಬಿಜಾಪುರಕ್ಕೆ ಹೋಗುತ್ತಾರೆ. ಚುನಾವಣೆ ಕಳೆದ ತಕ್ಷಣ ನಿಮ್ಮ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಪತ್ರಿಕೆಯಲ್ಲಿ ಹೇಳುತ್ತಾರೆ. ಮಾನ್ಯ ಕಾರಜೋಳ ಅವರು ಇಲ್ಲಿ ಇಲ್ಲ. ಎಂ.ಎಲ್.ಎ ಎಲೆಕ್ಷನ್‌ಗೆ ವೋಟ್ ಹಾಕಿಸಿ ಆಯಿತು, ಲೋಕಸಭೆ ಎಲೆಕ್ಷನ್‌ಗೆ ಹೋದರು. ಆಗಲೂ ಇನ್ನು 21 ದಿವಸದಲ್ಲಿ ಮಾಡುತ್ತೇವೆಂದು ಹೇಳಿದರು. 21 ದಿನದಿಂದ ಅಲ್ಲಿ ರೈತರು strike ಮಾಡುತ್ತಿದ್ದಾರೆ. ಹಾಸನ ಕ್ಷೇತ್ರದ್ದು ಬಿಡಿ. ಏಕೆಂದರೆ, ಹಾಸನದ್ದು red ink ಹಾಕುತ್ತೀರಿ. ಹಾಸನದ್ದು ಕೊಟ್ಟಿಲ್ಲ. ಹಾಸನ ಕ್ಷೇತ್ರದ ಬಗ್ಗೆ ಹೇಳುವುದಕ್ಕೆ ಹೋದರೆ ಇನ್ನು ಬೇರೆ ತರಹ ಆಗುತ್ತದೆ. ನನ್ನ ಕ್ಷೇತ್ರವಾದ ಹಾಸನದ್ದು ಹಾಳು ಬಿಟ್ಟು ಹೋಗಲಿ. ಬಿಜಾಪುರ, ಬಾಗಲಕೋಟೆ ರೈತರು ನಿಮಗೆ ಏನು ಮಾಡಿದ್ದರು?

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) : ಕಬ್ಬಿನ ಹಣವನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ಈಗ ಕೊಟ್ಟಿರಬೇಕು. ನಾನು ಮೊನ್ನೆ ಮಾತನಾಡಿದ ಮೇಲೆ ಕೊಟ್ಟಿರಬೇಕು. ಯಾವಾಗ ಕೊಟ್ಟಿದ್ದೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಕಬ್ಬಿನ ಹಣವನ್ನು ಎಲ್ಲಿ, ಯಾವಾಗ, ಎಷ್ಟು ಕೊಟ್ಟಿದ್ದಾರೆ ಎನ್ನುವುದನ್ನು ಹೇಳಲಿ.

(ಗೊಂದಲ)

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ : ಈಗಾಗಲೇ ಪರಿಹಾರ ಹಣ ವಿತರಣೆಯಾಗಿದೆ. ಕಾರ್ಯಕ್ರಮವನ್ನು ಮಾಡಿ ಶಾಸಕರ ಸಮ್ಮುಖದಲ್ಲಿ ಈಗಾಗಲೇ ಚೆಕ್ ಅನ್ನು ಕೊಡಲಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ : ಈಗ ಕಾರ್ಯಕ್ರಮವನ್ನು ಮಾಡೇ ಕೊಡಿ. ಬೇಡ ಎಂದು ನಾನು ಹೇಳುವುದಿಲ್ಲ. ನಿಮ್ಮ ಫೋಟೋ ಇರಲಿ. ಎಲ್ಲಾ ಇರಲಿ, ನಾನೂ ಕರೆದುಕೊಂಡು ಹೋಗುತ್ತೇನೆ. ನಮ್ಮ ಹಾಸನ ಕ್ಷೇತ್ರಕ್ಕೆ ಕೊಡಿ ಸ್ವಾಮಿ. ಬೇಕಾದರೆ ನಿಮ್ಮ ಫೋಟೋವನ್ನು ಹಾಕಿಕೊಂಡು ಇಟ್ಟುಕೊಳ್ಳುತ್ತೇವೆ. ಈಗ ನಾನು ಹೇಳುವುದೇನೆಂದರೆ, ಬಿಜಾಪುರ ಮತ್ತು ಬಾಗಲಕೋಟೆಯಲ್ಲಿ ಕಬ್ಬು ಬೆಳೆಗಾರರು 21 ದಿವಸ strike ಕುಳಿತದ್ದು ನಿಜವಲ್ಲವೇ? ಇದನ್ನು ದಯಮಾಡಿ ಮಾನ್ಯ ಮಂತ್ರಿಗಳು ಹೇಳಬೇಕು. 21 ದಿನ strike ಕುಳಿತಿಲ್ಲವೆಂದರೆ ನಾನು ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಡಾ: ಬಗಲಿ ಸಾರ್ವಭೌಮ ಸಾತಗೌಡ : ಆಗ ಹಣವಿರಲಿಲ್ಲ. ಜುಲೈ 31ನೇ ತಾರೀಖಿಗೆ Regular budget ಮೊನ್ನೆ ಆಯಿತು.

ಛೇರ್ಮನ್ : ತಾವು ಇದರಲ್ಲಿ yield ಆಗಬೇಡಿ. ಮಾನ್ಯ ಮಂತ್ರಿಗಳು ಹೇಳುತ್ತಾರೆ ನೀವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಅವರೇ ಸರ್ಕಾರದಲ್ಲಿ ಹಣವಿಲ್ಲವೆಂದು ಹೇಳುತ್ತಿದ್ದಾರೆ. ರೈತರಿಗೆ ಕೊಡಲು ಹಣವಿಲ್ಲವೆಂದು ಹೇಳುತ್ತಿದ್ದಾರೆ ನನ್ನದೇನೂ ಅಭ್ಯಂತರವಿಲ್ಲ. ಸರ್ಕಾರದ ಪರವಾಗಿ ಸದಸ್ಯರು Statement ಮಾಡಿದ ಮೇಲೆ ನನ್ನದೇನೂ ಅಭ್ಯಂತರ ವಿಲ್ಲ. ಏಕೆಂದರೆ 21 ದಿನ ರೈತರು strike ಕುಳಿತುಕೊಂಡಿರುವ ಮಾಹಿತಿ ಯನ್ನು ನನಗೇ ಬಂದು ಕೊಟ್ಟಿರುವುದರಿಂದ ನಾನು ಹೇಳಿದೆ ಅಷ್ಟೆ. ಸೋಮವಾರ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ಯಾರು ಕಬ್ಬು ಬೆಳೆಗಾರರು ಇದ್ದಾರೆ, ಅವರಿಗೆ ಪರಿಹಾರವನ್ನು ಎಲ್ಲಾ ಒಂದೇ ಸಲ settle ಮಾಡುತ್ತೇವೆಂದು ಹೇಳಿದರೆ ನನಗೆ ಸಂತೋಷ. ಏಕೆಂದರೆ, ಕುಮಾರ ಸ್ವಾಮಿಯವರು announce ಮಾಡಿದರು, ಸನ್ಮಾನ್ಯ ಯಡಿಯೂರಪ್ಪನವರೇ ಆವತ್ತು ಹಣಕಾಸಿನ ಮಂತ್ರಿಗಳಾಗಿದ್ದರು. ಅವರಿಬ್ಬರೂ ಸೇರಿ ಮಾಡಿರುವುದು. ಇಲ್ಲವೆಂದರೆ ರಾಜ್ಯದ ಕಬ್ಬು ಬೆಳೆಗಾರರ ಹತ್ತಿರ ಅವರಿಬ್ಬರು ಬೈಯಿಸಿಕೊಳ್ಳಲಿ, ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಚಿವರು) : ನನ್ನದೇನು ಇಲ್ಲ, ನನ್ನದೇನು ಇಲ್ಲವೆಂದು ಮಾತನಾಡುವುದು ಅಷ್ಟೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಒಳಚರಂಡಿ ಮಂಡಳಿಯ ಮಂತ್ರಿಗಳು ನಮಗೆ ಏಕೆ disturb ಮಾಡುತ್ತೀರಾ? ನಿಮ್ಮ ಮಂಡಳಿಗೆ ಸಂಬಂಧಿಸಿದಂತೆ ಯಾವುದೇ ವಿಷಯಕ್ಕೆ ನಾವು ಬರುತ್ತಿಲ್ಲ. ಇವತ್ತೇನಿದ್ದರೂ ಗ್ರಾಮೀಣ ಮತ್ತು ಕೃಷಿಗೆ ಸಂಬಂಧಿಸಿದಂತೆ ಮಾತನಾಡುತ್ತಿದ್ದೇವೆ. ಮಾನ್ಯ ಉಪಾಧ್ಯಕ್ಷರೆ, 2–3 ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಉದಾಹರಣೆಗೆ ಹೇಳುವುದಾದರೆ, ಸರ್ಕಾರ ಇವತ್ತು ರೈತರ ಬೆಳೆ, ಕೃಷಿ, ತೋಟಗಾರಿಕೆ ಬಗ್ಗೆ ಒಂದು

ವಿಶೇಷವಾದಂತಹ ಕಾಳಜಿಯನ್ನು ವಹಿಸಿದೆ. ತೋಟಗಾರಿಕೆ ಮಂತ್ರಿಗಳು ಇಲ್ಲೇ ಇದ್ದಾರೆ. ತೋಟಗಾರಿಕೆ ಮಂತ್ರಿಗಳಲ್ಲಿ ನಾನು ಮನವಿ ಮಾಡುವುದು ಇಷ್ಟೇ. ನಮ್ಮ transforms ಏನೇನಿವೆ, ಯಾವ್ಯಾವುದು ಇವೆ ಎನ್ನುವುದನ್ನು ಅಣ್ಣವ್ರು ನೀವು ಸೇರಿ ಲೆಕ್ಕ ಹಾಕಿ type ಮಾಡಿಕೊಡಿ. ಅವೆಲ್ಲದರ ಬಗ್ಗೆ enquiry ಮಾಡುವುದಕ್ಕೆ ಹೇಳಿದರೂ ನಾನು ಸಿದ್ಧನಿದ್ದೇನೆ. ಇಲ್ಲೇ ಸಭೆಯೊಳಗೇ ತೀರ್ಮಾನ ಮಾಡೋಣ. One line resolution. Transformer ಬಗ್ಗೆ ಯಾವುದೋ ಇದೆ ಎಂದು ಹೇಳಿದ್ದೀರಲ್ಲಾ, ಇಟ್ಟು ಬಿಡಿ. ನಾನು ರೆಡಿ ಇದ್ದೇನೆ. ಒಂದೂ ಕಾಲು ವರ್ಷದಲ್ಲಿ ವಿದ್ಯುತ್ ಇಲಾಖೆ ಯಲ್ಲಿ ಏನೇನು ಆಗಿದೆ ಎನ್ನುವುದರ ಬಗ್ಗೆಯೂ ಮಾಡೋಣ. ನಾನೇನು ಬೇಡವೆನ್ನುವುದಿಲ್ಲ.

ಶ್ರೀ ಆರ್.ಅಶೋಕ್(ಸಾರಿಗೆ ಸಚಿವರು) : ಮಾನ್ಯ ರೇವಣ್ಣನವರೆ,. . .

ಶ್ರೀ ಹೆಚ್.ಡಿ.ರೇವಣ್ಣ : ಆಯಿತು, ಸಾರ್ ನಾನು ವಿಷಯವನ್ನು ಸ್ವಲ್ಪ ಅವರ ಗಮನಕ್ಕೆ ತರಬೇಕು ಮಾನ್ಯ ಅಶೋಕ್‌ರವರೆ. ಈಗ ನಾನು ಬಸ್ಸಿನದ್ದು ತರುತ್ತಿಲ್ಲ. ಬಸ್ ಎಲ್ಲಾ ಓಡುತ್ತಿವೆ.

ಶ್ರೀ ಆರ್.ಅಶೋಕ್ : ಆಗಿನಿಂದಲೂ ನಿಮ್ಮ ಹತ್ತಿರ ಇರುವ ನಿಂಬೆಹಣ್ಣು ಏನು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ತೋಟಗಾರಿಕೆ ಇಲಾಖೆಯ ಮಂತ್ರಿಗಳ ಗಮನಕ್ಕೆ ತರುವುದು ಇಷ್ಟೆ... ನಿಂಬೆಹಣ್ಣು ಇಲ್ಲ ಸಾರ್.

ಶ್ರೀ ಆರ್.ಅಶೀಕ್ : ಬೇಕಾದರೆ ಅದನ್ನು ತೆಗೆಯಿರಿ ನೋಡೋಣ.

ಶ್ರೀ ಹೆಚ್.ಡಿ.ರೇವಣ್ಣ : ದೇವಸ್ಥಾನದಲ್ಲಿ ಹೂವು ಕೊಟ್ಟಿರುವುದು ಸಾರ್. ಅವುಗಳನ್ನು ಇಟ್ಟುಕೊಳ್ಳಬೇಕಲ್ಲಾ.

ಶ್ರೀ ಆರ್.ಅಶೋಕ್ : ಈಗ ನೀವು ಒಂದು function ಗೆ ಹೋದರೆ ಅಲ್ಲಿ ಹೂವಿನ ಹಾರ ಹಾಕಿದರೆ ಏನು ಮಾಡುತ್ತೀರಾ, ಅದನ್ನು ಇಟ್ಟುಕೊಳ್ಳುತ್ತೀರಾ?

ಶ್ರೀ ಹೆಚ್.ಡಿ.ರೇವಣ್ಣ : ಇಟ್ಟುಕೊಂಡರೆ ಬಿದ್ದು ಹೋಗುತ್ತದಲ್ಲಾ ಸಾರ್. ಏನು ಮಾಡೋಣ?

(ಗೊಂದಲ)

ಶ್ರೀ ಆರ್.ಅಶೋಕ್ : ಒಳ್ಳೆಯದು ಆಗಲಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನಿಂಬೆಹಣ್ಣಿನ ಮಹಿಮೆ ಏನಾಯಿತೆಂದರೆ, ಎಲ್ಲಾ ನೀವೇ ಮಾಡಿದ್ದು, ನೀವೇ ಮಾಡಿದ್ದು ಎಂದು ಮಾನ್ಯ ಕಟ್ಟಾ ಸುಬ್ರಹ್ಮಣ್ಯನವರು ಎಲ್ಲಾದಕ್ಕೂ ಒಪ್ಪಿಕೊಂಡುಬಿಟ್ಟಿದ್ದಾರೆ, ಅದು ನಿಂಬೆಹಣ್ಣಿನ ಮಹಿಮೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಮಾನ್ಯ ತೋಟಗಾರಿಕೆ ಮಂತ್ರಿಗಳೂ ಇದ್ದಾರೆ. ರಾಜ್ಯದಲ್ಲಿ ಪ್ರಮುಖವಾಗಿ ಆಲೂಗಡ್ಡೆ ಬೆಳೆ ಬೆಳೆಯುವುದು ಅವರ ಜಿಲ್ಲೆಯಾದ ಬೆಳಗಾಂ ಇರಬಹುದು, ಇಲ್ಲ ಬೆಳಗಾಂ ಜಿಲ್ಲೆಯನ್ನು ಹೊಡೆದುಹಾಕಿದ್ದೇವೆ, ಕಬ್ಬು ಬೆಳೆ ಬೆಳೆಯುವುದಕ್ಕೆ ನಮ್ಮ ಅಣ್ಣಾವ್ರು ಮಾಡಿದ್ದಾರೆಂದು ಹೇಳಿದರೆ ನನ್ನದೇನೂ ಅಭ್ಯಂತರವಿಲ್ಲ. Major ಬೆಳಗಾಂ ಜಿಲ್ಲೆ ಇರಬಹುದು, ಧಾರವಾಡ ಜಿಲ್ಲೆ ಇರಬಹುದು, ಚಿಕ್ಕಮಗಳೂರು ಜಿಲ್ಲೆ ಇರಬಹುದು, ಹಾಸನವೂ ಇದೆ. ಇವತ್ತು ಉದಾಹರಣೆಗೆ ಹೇಳುವುದಾದರೆ, 2008-09ರಲ್ಲಿ ಹಾಸನ ಜಿಲ್ಲೆಯಲ್ಲಿ 71 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಬೆಳೆ ಇದೆ. ಅದರಲ್ಲಿ 55 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಸಂಪೂರ್ಣ ಬೆಳೆ ನಾಶವಾಗಿದೆ. ಒಂದಲ್ಲ, ಎರಡಲ್ಲ, 55 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಸಂಪೂರ್ಣ ಬೆಳೆ ನಾಶವಾಗಿದೆ. 2008-09ರಲ್ಲಿ 129 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಜಿಲ್ಲಾಧಿಕಾರಿಗಳು ವರದಿಯನ್ನು ಕೊಟ್ಟಿದ್ದಾರೆ. ಈ ವರದಿಯನ್ನು ನಾನು ಕೊಟ್ಟಿಲ್ಲ. ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳೇ ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇವತ್ತು 55 ಸಾವಿರ ಹೆಕ್ಟೇರ್ ಜಮೀನಿನಲ್ಲಿ ರೈತರು ಬೆಳೆದಿರುವ ಬೆಳೆ, ಅವರಿಗೆ ಲಾಭವಿಲ್ಲ. ಆಲೂಗಡ್ಡೆ, ಬಿತ್ತನೆ ಬೀಜ, ಗೊಬ್ಬರ, ಕ್ರಿಮಿನಾಶಕ, ಕೂಲಿ ದುಡ್ಡು ಹೆಕ್ಟೇರ್‌ಗೆ 25 ಸಾವಿರ ರೂಪಾಯಿ. ಕೇಂದ್ರ ಸರ್ಕಾರದ 800 ರೂಪಾಯಿ ಸಿ.ಆರ್.ಎಫ್ ಫಂಡ್ ಬಿಟ್ಟರೆ ಇವತ್ತಿನವರೆಗೂ ರಾಜ್ಯ ಸರ್ಕಾರದಿಂದ ಹತ್ತು ರೂಪಾಯಿ ಹಣ ಇಲ್ಲ. ಇವತ್ತು ಕೃಷಿ ಬಗ್ಗೆ ವಿಶೇಷ ಅಧಿವೇಶವನ್ನು ಕರೆದಿದ್ದೀರಿ. ರೈತರು ವಿಷ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿದ್ದಾರೆ. 55 ಸಾವಿರ ಹೆಕ್ಟೇರ್ ಜಮೀನು ಸರ್ವನಾಶವಾಗಿರುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಏನಾದರೂ ದಾಖಲೆ ಒದಗಿಸಿದ್ದೀರಾ?

ನೀವು ಇರಲಿಲ್ಲ. ಪಾಪ! ಅವರು ಬಂದ ನಂತರವಾದರೂ ಒಂದು ಪತ್ರ ಬರೆದಿದ್ದಾರೆ. ಕನಿಷ್ಠ ಪಕ್ಷ ನಾವು ಅವರಿಗೆ ಥ್ಯಾಂಕ್ಸ್ ಹೇಳಬೇಕಾಗುತ್ತದೆ. ತೋಟಗಾರಿಕೆ ಮಂತ್ರಿಗಳು ನಮ್ಮ ಹಳೆಯ ಸ್ನೇಹಿತರಾಗಿದ್ದು, ಅವರು

ಪತ್ರವನ್ನಾದರೂ ಬರೆದಿದ್ದಾರೆ. ಇವತ್ತು ಸರ್ಕಾರ ಹೇಗಿದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 2007–08ನೇ ಸಾಲಿಗೆ ನಮ್ಮಲ್ಲಿ 10,500 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯಲಾಗಿತ್ತು. 2008–09ನೇ ಸಾಲಿನಲ್ಲಿ 71,000 ಹೆಕ್ಟೇರ್ ಜಮೀನಿನಲ್ಲಿ ಆಲೂಗಡ್ಡೆ ಬೆಳೆಯುತ್ತಿದ್ದರು, ಈ ವರ್ಷ ಕೇವಲ 17,000 ಹೆಕ್ಟೇರ್ ಪ್ರದೇಶಕ್ಕೆ ಇಳಿದಿದ್ದಾರೆ. ಇವತ್ತು 17,000 ಹೆಕ್ಟೇರ್‌ನಲ್ಲಿ ಮೆಕ್ಕೆಜೋಳ ಬೆಳೆಯುತ್ತಿರುವ ರೈತರು 55,000 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆದಿದ್ದಾರೆ. ಒಂದು ಕಡೆ ಆಲೂಗಡ್ಡೆ ಬೆಳೆ ಸಂಪೂರ್ಣವಾಗಿ ನಷ್ಟವಾಯಿತು. ಈ ವರ್ಷ 17,000 ಹೆಕ್ಟೇರ್ ಜಮೀನಿನಲ್ಲಿ ಬೆಳೆ ಏನಿತ್ತು, ಅದರಲ್ಲಿ ಕನಿಷ್ಠ 50ರಿಂದ 60% 8,000 ಹೆಕ್ಟೇರ್ ಜಮೀನಿನಲ್ಲಿ ಆಲೂಗಡ್ಡೆ ನಾಶವಾಗಿದೆ. ನಾನು ಮಾನ್ಯ ತೋಟಗಾರಿಕಾ ಮಂತ್ರಿಗಳನ್ನು ಕೇಳುವುದಿಷ್ಟೆ. ನೀವು ಬಿತ್ತನೆ ಬೀಜ ಕೊಡುತ್ತೀರಲ್ಲ, ಸರ್ಟಿಫೈಡ್ ಬೀಜ ನೀಡುತ್ತೀರೋ? ಅಥವಾ ಯಾರು ಬೇಕಾದರೂ, ಹೇಗೆ ಬೇಕಾದರೂ ಬಿತ್ತನೆ ಬೀಜ ನೀಡಬಹುದೇ? ಯಾವುದಾದರೂ ಬಿತ್ತನೆ ಬೀಜ ನೀಡಬಹುದೇ? ದಯಮಾಡಿ ಹೇಳಬೇಕು. ರಾಜ್ಯದಲ್ಲಿ ಯಾರು ಬೇಕಾದರೂ ಬಂದು ಬಿತ್ತನೆ ಬೀಜ ಮಾರಾಟ ಮಾಡಬಹುದೇ? ಕಳೆದ ವರ್ಷ ಸುಮಾರು 55,000 ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ನಾಶವಾಯಿತು. ಈ ವರ್ಷ 8,000 ಹೆಕ್ಟೇರ್ ಪ್ರದೇಶದಲ್ಲಿ ನಾಶವಾಗಿದೆ. ಕಳೆದ ವರ್ಷ ಮತ್ತು ಪ್ರಸಕ್ತ ವರ್ಷ ಸೇರಿ ಒಟ್ಟು 63,000 ಹೆಕ್ಟೇರ್ ಪ್ರದೇಶದಲ್ಲಿ ನಾಶವಾಗಿದ್ದು, ಇದರ ಮೊತ್ತ 150 ಕೋಟಿ ರೂ.ಗಳಷ್ಟು ನಷ್ಟವುಂಟಾಗಿದೆ.

ಇವತ್ತು ಕೇಂದ್ರ ಸರ್ಕಾರಕ್ಕೆ ಮಾಜಿ ಪ್ರಧಾನ ಮಂತ್ರಿಗಳಾದ ದೇವೇಗೌಡರು ಪತ್ರ ಬರೆದಿದ್ದಾರೆ. ನಾವು ಐದು ಎಂಎಲ್‌ಎಗಳು ಪತ್ರಗಳನ್ನು ಬರೆದಿದ್ದೇವೆ. ಇದರ ಬಗ್ಗೆ ಸರ್ಕಾರದ ಕಾರ್ಯದರ್ಶಿಯವರಾಗಲಿ, ಒಬ್ಬರು ಡೆಪ್ಯುಟಿ ಡೈರೆಕ್ಟರ್ ಆಗಲಿ, ಯಾರೂ ಅತ್ತ ತಿರುಗಿ ನೋಡಿಲ್ಲ. ಪಾಪ!, ಡಿ.ಸಿ.ಯವರು ಪತ್ರ ಬರೆದಿರಬಹುದೇನೋ, ನನಗೆ ಗೊತ್ತಿಲ್ಲ. ಇವತ್ತು ಸರ್ಕಾರ ಯಾವ ದಿಕ್ಕಿನಲ್ಲಿ ಕೆಲಸ ಮಾಡುತ್ತಿದೆ ಎಂಬುದನ್ನು ಹೇಳಬೇಕಾ ಗುತ್ತದೆ. ರೈತರಿಗೆ CRF ನಿಧಿ 800 ರೂ. ಇರುವುದನ್ನು 5,000 ರೂ. ಮಾಡುವುದಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತೀರಾ? ಇಲ್ಲದಿದ್ದರೆ, ರೈತರಿಗೆ ಪ್ಯಾಕೇಜ್ ಘೋಷಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತೀರಾ? ರೈತರು ಸರ್ವನಾಶ ವಾಗಿದ್ದಾರೆ. ಇದಕ್ಕೆ ರಾಜ್ಯ ಸರ್ಕಾರ ಏನು ಕೊಡುತ್ತದೆ? ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದಿದ್ದರು. ಸಭೆಯಲ್ಲಿ ಜಯಚಂದ್ರರವರೂ

ಇದ್ದರು. ಅವರೆದುರಿಗೇ ನಾನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವುದಾಗಿ ಹೇಳಿದ್ದಾರೆ. ನಮ್ಮ ರಾಜ್ಯದಿಂದ ಏನು ಕೊಡಬೇಕೆನ್ನುವುದನ್ನೂ ನಾವು ಚಿಂತನೆ ಮಾಡುತ್ತೇವೆಂಬ ಭಾವನೆಯನ್ನೂ ವ್ಯಕ್ತಪಡಿಸಿದ್ದಾರೆ. ದಯಮಾಡಿ ಈಗಲಾದರೂ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ರೈತರಿಗೆ ಒಂದು ಪ್ಯಾಕೇಜ್ ಘೋಷಿಸುವುದಾಗಿರಬಹುದು ಅಥವಾ ರೈತರಿಗೆ CRF ನಿಧಿ 800 ರೂ. ಇರುವುದನ್ನು ಎಕರೆಗೆ ಕನಿಷ್ಠ 5,000 ರೂ. ಮಾಡಬೇಕೆಂದು ಕೇಳಿ ಕೇಂದ್ರ ಸರ್ಕಾರಕ್ಕೆ ನೀವು ಒತ್ತಾಯ ಮಾಡಬೇಕು. ಇದರ ಜೊತೆಗೆ, ಬೆಳೆ ಬೆಳೆದು ರೈತರು ಏನು ನಾಶವಾಗಿದ್ದಾರೆ, ಅದಕ್ಕೆ ಕನಿಷ್ಠ 10,000 ರೂ.ಗಳನ್ನಾದರೂ ರಾಜ್ಯ ಸರ್ಕಾರ ಕೊಡುವ ಔದಾರ್ಯ ತೋರಬೇಕೆಂದು ನಾನು ತೋಟಗಾರಿಕಾ ಮಂತ್ರಿಗಳನ್ನು, ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

ಇದರ ಜೊತೆಗೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲವು ಕಾರ್ಯಕ್ರಮಗಳಿವೆ. ಇಡೀ ರಾಷ್ಟ್ರದಲ್ಲಿ ಈ ಯೋಜನೆಯ ಅನುಷ್ಠಾನದಲ್ಲಿ ಕೊನೆಯ ಸ್ಥಾನದಲ್ಲಿರುವ ಯಾವುದಾದರೂ ರಾಜ್ಯವಿದ್ದರೆ ಅದು ಕರ್ನಾಟಕ. ಏಕೆ ಕೊನೆಯ ಸ್ಥಾನದಲ್ಲಿದೆ ಎಂಬುದನ್ನು ಮುಖ್ಯಮಂತ್ರಿಗಳು ದಯಮಾಡಿ ತಿಳಿಸಬೇಕು. ಸದನದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳಿಲ್ಲ. ಇದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಆಗಿದೆಯೆಂಬ ಭಾವನೆ ವ್ಯಕ್ತಪಡಿಸುತ್ತಿಲ್ಲ. ಇವತ್ತು ತಮಿಳುನಾಡಿನಲ್ಲಿ ಎಷ್ಟು ಹಣ ಖರ್ಚು ಮಾಡಿದ್ದಾರೆ? ಆಂಧ್ರ ಪ್ರದೇಶದಲ್ಲಿ ಎಷ್ಟು ಹಣ ಖರ್ಚು ಮಾಡಿದ್ದಾರೆ? ಆಂಧ್ರಪ್ರದೇಶದಲ್ಲಿ 2,000 ದಿಂದ 3,000 ಕೋಟಿ ರೂ.ಗಳಷ್ಟು ಹಣ ಖರ್ಚಾಗಿದೆ. ಅದೇ ರೀತಿ ರಾಜಸ್ಥಾನದಲ್ಲಿ ನಿಮ್ಮದೇ ಸರ್ಕಾರವಿತ್ತು. ಅವರು ಎಷ್ಟು ಹಣ ಖರ್ಚು ಮಾಡಿದ್ದಾರೆಂದು ದಯವಿಟ್ಟು ಹೇಳಬೇಕು. ಮಹಾರಾಷ್ಟ್ರ ಸರ್ಕಾರದವರು ಎಷ್ಟು ಹಣ ಖರ್ಚು ಮಾಡಿದ್ದಾರೆ? ನಮ್ಮ ರಾಜ್ಯದಲ್ಲಿ ಕೇವಲ 300 ಕೋಟಿ ರೂ.ಗಳಷ್ಟು ಮಾತ್ರ ಖರ್ಚಾಗಿದೆ. ತುಮಕೂರಿನಲ್ಲಿ ಕೇವಲ 5 ಕೋಟಿ ಮಾತ್ರ ಖರ್ಚಾಗಿದೆ. ನಿನ್ನೆ, ಮೊನ್ನೆಯಿಂದ ಡೆಪ್ಯುಟಿ ಕಮೀಷನರ್ ಮತ್ತು ಚೀಫ್ ಸೆಕ್ರೆಟರಿಯವರು ಇಡೀ ರಾತ್ರಿ ಮೆಷಿನ್‌ಗಳನ್ನು ಬಳಸಿ ಕಾಮಗಾರಿ ನಡೆಸುತ್ತಿದ್ದಾರೆ.......

ಶ್ರೀ ಸಿ.ಟಿ.ರವಿ : ಈಗ ರೇವಣ್ಣನವರು ಒಳ್ಳೆಯ ವಿಚಾರದ ಮೇಲೆ ಬೆಳಕು ಚೆಲ್ಲುತ್ತಿದ್ದಾರೆ. ಆಂಧ್ರಪ್ರದೇಶದಲ್ಲಿ 2,000 ಕೋಟಿ ರೂ. ಖರ್ಚು

ಮಾಡಿದ್ದು, ನಮ್ಮ ರಾಜ್ಯದಲ್ಲಿ ಕೇವಲ 300 ಕೋಟಿ ರೂ. ಮಾತ್ರ ಖರ್ಚು ಮಾಡಿದ್ದಾರೆಂದು ಹೇಳಿದರು. ವಾಸ್ತವಿಕತೆ ಏನೆಂದರೆ, ಯೋಜನೆ ಪ್ರಾರಂಭವಾದಾಗ 5 ಕೋಟಿ ರೂ. ಸಹ ಖರ್ಚಾಗಿರಲಿಲ್ಲ. ಈ ವರ್ಷ ಅದು 300 ಕೋಟಿ ರೂ.ಗಳಿಗೆ ತಲುಪಿದೆ. 2005-06ನೇ ಸಾಲಿನಲ್ಲಿ 5 ಕೋಟಿ ರೂ. ಸಹ ಖರ್ಚಾಗಿರಲಿಲ್ಲ 2006-07ನೇ ಸಾಲಿಗೆ ಅದರ ಹಣೆಬರಹ ಅಷ್ಟೇ ಇತ್ತು. ಈಗ 300 ಕೋಟಿ ರೂ.ಗಳಿಗೆ ಬಂದಿದೆ. ಈಗ 2,000 ಕೋಟಿ ರೂ.ಗಳಷ್ಟು ಹಣ ಖರ್ಚು ಮಾಡುವ ಗುರಿ ಇಟ್ಟು ಕೊಂಡಿದ್ದಾರೆ. ಆರಂಭದಿಂದಲೂ ನಮ್ಮ ನೌಕರ ವರ್ಗದ ಮಾನಸಿಕತೆ....

ಶ್ರೀ ವೆಂಕಟರಾವ್ ನಾಡಗೌಡ : ನಮ್ಮ ಸಲಹೆಯೂ ಅದೇ ಆಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ರಾತ್ರಿ ಹೊತ್ತು JCB ಮೆಷಿನ್‌ಗಳನ್ನು ಉಪಯೋಗಿಸಿ ಕಾಮಗಾರಿಗಳನ್ನು ನಡೆಸಲು ಪ್ರಾರಂಭಿಸಿದ್ದಾರೆ. ಜಿಲ್ಲಾ ಪರಿಷತ್ ಅಧ್ಯಕ್ಷರು ಸ್ಥಳಕ್ಕೆ ತೆರಳಿ ಮೆಷಿನ್‌ಗಳನ್ನು ಹಿಡಿದಿದ್ದಾರೆ. JCB ಯಿಂದ ಕಾಮಗಾರಿ ನಡೆಸಿದಲ್ಲಿ, 2,000 ಕೋಟಿಯಲ್ಲ, 3,000 ಕೋಟಿ ರೂ.ಗಳನ್ನಾದರೂ ಖರ್ಚು ಮಾಡಬಹುದಾಗಿದೆ. ಅದಕ್ಕೋಸ್ಕರ ನಾನು ಮಾತನಾಡುವ ಸಂದರ್ಭದಲ್ಲಿ ಹೇಳಿದೆ. NREGS ನ್ನು ಯಾವ ರೀತಿ ಉಪಯೋಗಿಸಬೇಕು? ಇದರ ವಿವರಗಳನ್ನು ಈ ಸದನದ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಬೇಕು. ಒಂದು ಕಡೆ ಮೆಷಿನರಿಗಳಿಂದ ಕಾಮಗಾರಿ ನಡೆಸುತ್ತಾರೆ, ಅವರು ಹಣ ಉಪಯೋಗಿಸಿಕೊಳ್ಳುತ್ತಾರೆ. ನಮ್ಮ ಕಡೆ ಮೆಷಿನ್ ಗಳನ್ನು ಬಳಸಿ ಕಾಮಗಾರಿ ನಡೆಸುವುದಕ್ಕೆ ಅಧಿಕಾರಿಗಳು ಹೆದರುತ್ತಾರೆ. ದಯಮಾಡಿ ಸರಿಯಾದ ರೀತಿಯಲ್ಲಿ ಈ ಸದನಕ್ಕೆ ಮಾರ್ಗದರ್ಶನ ನೀಡಬೇಕು.

ಶ್ರೀ ಸಿ.ಟಿ.ರವಿ : ಆಂಧ್ರಪ್ರದೇಶದಲ್ಲಿ JCB ಮೆಷಿನ್‌ಗಳನ್ನು ಉಪಯೋಗಿಸಿಯೇ ಕಾಮಗಾರಿ ನಡೆಸಿ ಹಣ ಖರ್ಚು ಮಾಡಿರುವುದು.

ಶ್ರೀ ಹೆಚ್.ಡಿ.ರೇವಣ್ಣ : ರವಿಯವರೆ, ಈಗ ನಿಮಗೆ ಹಾಸನ ದೊಂದಿಗೆ ಹೆಚ್ಚು ಬಾಂಧವ್ಯ ಉಂಟಾಗಿದೆ. ಏಕೆಂದರೆ, ಬಾಬಾಬುಡನ್ ಗಿರಿಯಿಂದ ನಿಮ್ಮನ್ನು ಹಾಸನಕ್ಕೆ ಕಳುಹಿಸಿದ್ದಾರೆ. ಮೊನ್ನೆ ಬಾಬಾಬುಡಬ್ ಗಿರಿಯಲ್ಲಿ ಪೂಜೆ ನಡೆಸಿ ಸೀದಾ ಹಾಸನಕ್ಕೆ ಬರಬೇಕೆಂದು ಹೇಳಿದ್ದಾರೆ, ಸಂತೋಷ. ಬನ್ನಿ ಅಲ್ಲಿಯೇ ಇದ್ದುಬಿಡಿ, ನಾವೇನೂ ಬೇಡವೆನ್ನುವುದಿಲ್ಲ.

ಶ್ರೀ ಸಿ.ಟಿ.ರವಿ : ನಿಮ್ಮ ಅಜ್ಞಾತವಾಸ, ವನವಾಸ ಎಲ್ಲವೂ ಕೊನೆಯಾಗಲೆಂದು ನೀವೂ ಅಲ್ಲಿಗೇ ಬಂದು ಒಂದು ಪೂಜೆ ಮಾಡಿಸಿ. ನಿಮಗೆ ಒಳ್ಳೆಯದಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ನಾವು ರವಿಯವರು ಇರುವ ಜಾಗಕ್ಕೆ ಬಂದು ಅಲ್ಲಿರುವ ಅಲ್ಪಸಂಖ್ಯಾತರಿಗೆ ತೊಂದರೆ ಕೊಡುವುದಕ್ಕೆ ಹೋಗುವುದಿಲ್ಲ. ನಾವು ಮತ್ತು ಅಶೋಕ್‌ರವರು ಇಲ್ಲಿಯೇ ಇರುವ ಬನಶಂಕರಿಯಮ್ಮನವರ ದೇವಸ್ಥಾನದಲ್ಲಿಯೇ ಪೂಜೆ ಮಾಡಿಸುತ್ತೇವೆ.

ಶ್ರೀ ಸಿ.ಟಿ.ರವಿ : ಅಶೋಕಣ್ಣ, ಹುಷಾರಾಗಿರಪ್ಪ.

ಶ್ರೀ ಆರ್. ಅಶೋಕ್ : ದಯವಿಟ್ಟು ನನ್ನ ಬಗ್ಗೆ ಏನೂ ಮಾಡಿಸಬೇಡಣ್ಣಾ.

ಶ್ರೀ ಸಿ.ಟಿ.ರವಿ : ಅಶೋಕಣ್ಣ, ಈಗ ಅವರೊಂದಿಗೆ ಹೋಗಿ ಪೂಜೆ ಮಾಡಿಸುವುದೆಂದರೆ, ನಿನಗೇನೋ ಗ್ರಹಾಚಾರ ಹಿಡಿದಿದೆ ಎಂದರ್ಥ! ಹುಷರಾಗಿರು, ಮುಂಚಿತವಾಗಿಯೇ ಏನಾದರೂ ಕಟ್-ಗಿಟ್ ಮಾಡಿಸಿಕೊಂಡು ಹೋಗು.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಶೋಕಣ್ಣನಿಗೆ ಏನೋ ಯೋಗ ಬರುತ್ತದೆ ಕಣ್ರಿ.

ಶ್ರೀ ಹೆಚ್.ಡಿ.ರೇವಣ್ಣ : ಅದಕ್ಕೋಸ್ಕರ, ರವಿಯವರಿಗೆ ಹೇಳುತ್ತೇನೆ. ನನ್ನ ಹಾಸನಕ್ಕೆ ಬರುವುದು ಬೇಡ. ಬಂದರೆ ನಿನಗೇನೋ ತೊಂದರೆಯಾಗುತ್ತದೆ. ಅವರಿಗೆ ತೊಂದರೆಯಾಗುವುದು ಬೇಡವೆಂದು ಹೇಳುತ್ತಿದ್ದೇನೆ. ನೀನು ಏನಿದ್ದರೂ ಚಿಕ್ಕಮಗಳೂರಿನಲ್ಲಿ ಅಲ್ಪಸಂಖ್ಯಾತ ರೊಂದಿಗೆ ರಾಜ್ಯದಲ್ಲಿ ಸ್ವಲ್ಪ ಗಲಾಟೆ ಎಬ್ಬಿಸಲು ಸಿದ್ದ ಮಾಡು! ಬಾಕಿ ಇನ್ನೇನೂ ಬೇಡ.

ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಹಣ ಯಾವ ರೀತಿ ಖರ್ಚಾಗುತ್ತಿದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆಂಧ್ರಪ್ರದೇಶದಲ್ಲಿ ಸುಮಾರು 2,000 ಕೋಟಿ ರೂ.ಗಳಷ್ಟು ಹಣವನ್ನು ಈ ಯೋಜನೆಯಡಿ ಹೇಗೆ ಖರ್ಚು ಮಾಡುತ್ತಾರೆ? ಇವತ್ತು ರಾಜಸ್ಥಾನದಲ್ಲಿ 6,000 ಕೋಟಿ ರೂ.ಗಳಷ್ಟು ಹಣ ಖರ್ಚು ಮಾಡಿದ್ದಾರೆ. ಇಷ್ಟು ಹಣವನ್ನು ಯಾವ ರೀತಿ ಖರ್ಚು ಮಾಡಿದ್ದಾರೆ? ಇಷ್ಟು ಹಣ ಖರ್ಚು ಮಾಡಲು ನಿಮಗೆ ಮೂರು ವರ್ಷಗಳು ಬೇಕಾಗಿತ್ತೇ? ಮೂರು ವರ್ಷಗಳಿಂದ 300 ಕೋಟಿ ರೂ.ಗಳನ್ನು ಖರ್ಚು ಮಾಡುವ ಸನ್ನಿವೇಶವಾದರೂ ಏನಿತ್ತು? ಈ ಸರ್ಕಾರ ಬಂದು ಒಂದು

ಕಾಲು ವರ್ಷವಾಯಿತು. ಕೇಂದ್ರ ಸರ್ಕಾರದಿಂದ ಪೂರ್ತಿ ಹಣ ಬರುತ್ತದೆ. ಇವತ್ತು ಈ ಸರ್ಕಾರದಲ್ಲಿ ಹತ್ತು ರೂ. ದುಡ್ಡಿಲ್ಲವೆಂದು ಕಾಣುತ್ತದೆ. ಯಾವುದನ್ನೇ ಕೇಳಿದರೂ NREGS ನಲ್ಲಿ ಕೆಲಸ ಮಾಡಿ ಎಂದು ಹೇಳುತತಾರೆ. ಮಾನ್ಯ ಸಭಾ ನಾಯಕರು ಒಂದು ಮಾತನ್ನು ಹೇಳಿದರು. ಅವರ ಹುಟ್ಟೂರಾದ ಬೂಕನಕೆರೆ ಕುರಿತು ಪ್ರಸ್ತಾಪಿಸಿದರು. ಇದರ ಬಗ್ಗೆ ಒಂದೆರಡು ಮಾತುಗಳನ್ನಾಡುತ್ತೇನೆ. ಬೂಕನಕೆರೆಯಲ್ಲಿ ಗ್ರಾಮ ಪಂಚಾಯಿತಿ ಹೆಡ್‌ಕ್ವಾರ್ಟರ್ಸ್ ಇದೆ, 795 ಕುಟುಂಬಗಳಿವೆ, 3,426 ಜನರಿದ್ದಾರೆ. ಗ್ರಾಮ ಪಂಚಾಯಿತಿಗಳ ಪರಿಸ್ಥಿತಿ ಹೇಗಿದೆ ಎಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ ಐದು ಕೋಟಿ ಜನತೆಗೆ ತಿಳಿಸಬೇಕು. ಇವತ್ತು ಗ್ರಾಮ ಪಂಚಾಯಿತಿಗೆ ಅನುದಾನ ಕೊಡುತ್ತಿರುವುದು ಕೇವಲ 6 ಲಕ್ಷ ರೂ. ಮಾತ್ರ. ಆದರೆ, ಖರ್ಚಾಗುತ್ತಿರುವುದೆಷ್ಟು? ಕೆಇಬಿಗೆ 60% ಹೋಗುತ್ತದೆ, ಅಂದರೆ, 3,60,000 ರೂ. ಕೆಇಬಿಗೆ ಹೋಗುತ್ತದೆ. ಉಳಿದುಕೊಳ್ಳುವುದು 2,40,000 ರೂ. ಪಂಚಾಯಿತಿ ಕಾರ್ಯದರ್ಶಿ, ಇತರೆ ಸಿಬ್ಬಂದಿಗೆ 1,00,000. ಇನ್ನು 1,40,000 ಉಳಿದುಕೊಳ್ಳುತ್ತದೆ. ಪಂಚಾಯಿತಿಯಲ್ಲಿ 15 ಸದಸ್ಯರಿರುತ್ತಾರೆ. ಪ್ರತಿ ಸದಸ್ಯರಿಗೂ 10,000 ರೂ.ಗಳು ಸಹ ಬರುವುದಿಲ್ಲ. NREGSನಲ್ಲಿ ಗುಜರಾತ್‌ನ ಪಂಚಾಯಿತಿಯೊಂದರಲ್ಲೇ 50 ಕೋಟಿ ರೂ.ಗಳನ್ನು ಖರ್ಚು ಮಾಡಿರುವ ಉದಾಹರಣೆ ಇದೆ.

ನಾನು ಮೊನ್ನೆ ಪತ್ರಿಕೆಯಲ್ಲಿ ನೋಡಿದೆ. ವಿಧಾನಸಭೆ ಹಾಗೂ ವಿಧಾನಪರಿಷತ್ತಿನಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಬೂಕನಕೆರೆ ಒಳಗೆ. . .

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನೀವು ಹೊರಗಡೆ ಹೋಗುವ ಹಾಗೆ ಮಾಟ ಮಂತ್ರ ಮಾಡಿಸಿ ತಾವು ಈಗ ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಹೋಗಿದ್ದೀರಿ.

ಶ್ರೀ ಸಿದ್ದರಾಮಯ್ಯ : ಸುಬ್ರಹ್ಮಣ್ಯ ನಾಯ್ಡುರವರೆ, ನಾನೇ ಬಿಟ್ಟುಬಂದಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ : ಪಾಪ ಸಿದ್ದರಾಮಯ್ಯನವರ ಬಗ್ಗೆ ನೀವೇಕೆ ತಲೆ ಕೆಡಿಸಿಕೊಳ್ಳುತ್ತೀರಿ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅವರನ್ನು ಮುಖ್ಯಮಂತ್ರಿ ಮಾಡುತ್ತೇವೆಂದು ಘೋಷಣೆ ಮಾಡಿ ಬಿಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನಮ್ಮ ಪಕ್ಷಕ್ಕೆ ಬರಲಿ ನಾವು ಘೋಷಣೆ ಮಾಡುತ್ತೇವೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮುಂದಿನ ಚುನಾವಣೆಗಳು ಬಂದರೆ, ಸಮ್ಮಿಶ್ರ ಸರ್ಕಾರ ಬಂದರೆ, ನಾವು ಸಿದ್ದರಾಮಯ್ಯನವರನ್ನು ಮುಖ್ಯ ಮಂತ್ರಿ ಮಾಡುತ್ತೇವೆಂದು ಘೋಷಣೆ ಮಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಅವಕಾಶ ಕೊಡುವುದಾದರೆ ಅವರನ್ನು ಈಗಲೇ ಮುಖ್ಯ ಮಂತ್ರಿಗಳನ್ನಾಗಿ ಮಾಡೋಣ. ಇಬ್ಬರೂ ಸೇರಿ ಘೋಷಣೆ ಮಾಡೋಣ. ಅವಕಾಶ ಮಾಡಿ ಕೊಡಿ.

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ಮಾನ್ಯ ರೇವಣ್ಣರವರೇ ಮುಗಿಸಿ.

ಶ್ರೀ ಹೆಚ್.ಡಿ.ರೇವಣ್ಣ : ಮಧ್ಯೆ ಮಧ್ಯೆ disturb ಮಾಡುತ್ತಿದ್ದಾರೆ ಏನು ಮಾಡಲಿ?

ಅಧ್ಯಕ್ಷರು : ಮಾನ್ಯ ರೇವಣ್ಣರವರೆ, 4.00 ಗಂಟೆಗೆ ಮಾನ್ಯ ಪ್ರತಿ ಪಕ್ಷದ ನಾಯಕರು ಮಾತನಾಡುತ್ತಾರೆ. ಅದಕ್ಕಿಂತ ಮುಂಚೆ 3–4 ಜನ ಶಾಸಕರು ಮಾತನಾಡುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಯಾರೂ disturb ಮಾಡದೇ ಇದ್ದರೆ ಇನ್ನು 20 ನಿಮಿಷಗಳಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : 1.45 ರಿಂದ ನೀವು ಪ್ರಾರಂಭ ಮಾಡಿದ್ದೀರಿ. ಒಂದುವರೆ ಗಂಟೆ ಆಯಿತು. ಸಾಕಷ್ಟು ಅವಕಾಶ ಸಿಕ್ಕಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಆ ಸ್ಥಾನದಲ್ಲಿ ಕುಳಿತಿದ್ದವರಿಗೆ ಒಂದೂವರೆ ಗಂಟೆ ಕಾಲ ಬೆಲ್ ಮಾಡುವುದಕ್ಕಾಗಲಿಲ್ಲ. ಆ ಸ್ಥಾನದಲ್ಲಿ ಕುಳಿತಿದ್ದವರ ಮೇಲೆ ದಿಗ್ಬಂಧನ ಹಾಕಿದ್ದರು. ಮಾನ್ಯ ಕುಮಾರಸ್ವಾಮಿಯವರು ಅಲ್ಲಿ ಕೂತಿದ್ದರು. ಅವರ ಮೇಲೆ ದಿಗ್ಬಂಧನ ಇತ್ತು. ನಿಂಬೆ ಕಾಯಿ ಪ್ರಭಾವ ಇತ್ತು. ಒಂದೂವರೆ ಗಂಟೆಗಳ ಕಾಲ ಅವರು ಯಾರಿಗೂ ಏನೂ ಮಾಡುವುದಕ್ಕಾಗಲಿಲ್ಲ.

ಅಧ್ಯಕ್ಷರು : ಮಾನ್ಯ ರೇವಣ್ಣರವರೇ ಮುಗಿಸಿ ಬಿಡಿ. ಇನ್ನು 3–4 ಜನ ಸದಸ್ಯರು ಮಾತನಾಡಿದ ನಂತರ ಪ್ರತಿ ಪಕ್ಷದ ನಾಯಕರು ಪ್ರಾರಂಭ ಮಾಡಲಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಟ್ಟಾಸುಬ್ರಹ್ಮಣ್ಯ ನಾಯ್ಡುರವರು ಒಂದು ವಿಷಯವನ್ನು ಹೇಳಿದ್ದಾರೆ. ಅವರು ಮಾನ್ಯ ಸಿದ್ದರಾಮಯ್ಯನವರನ್ನು ಮುಖ್ಯ ಮಂತ್ರಿಗಳನ್ನಾಗಿ ಮಾಡಬೇಕೆಂದು ಹೇಳಿದ್ದಾರೆ. ಅವರು ಪ್ರಪೋಸ್ ಮಾಡಲಿ, ನಾನು ಬೇಕಾದರೆ ಈಗಲೇ ಸೆಕೆಂಡ್ ಮಾಡುತ್ತೇನೆ. ಅವರು ಮಾಡಲಿ ನಾವು ಸರ್ವಾನುಮತದಿಂದ ಒಪ್ಪಿಗೆ ಕೊಡುತ್ತೇವೆ. ನಾನು ಯಾವತ್ತೂ ಮಾನ್ಯ ಸಿದ್ದರಾಮಯ್ಯನವರನ್ನು ಮುಖ್ಯ ಮಂತ್ರಿ ಮಾಡುವ ವಿಷಯದಲ್ಲಿ ಹಿಂದೆ ಬಿದ್ದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಊರು ಬೂಕನಕೆರೆ 60 ವರ್ಷಗಳ ಹಿಂದೆ ಹೇಗಿತ್ತು, ಹಾಗೆಯೇ ಇದೆ ಎಂದು ಹೇಳಿದರು. ಇವತ್ತು ಬೂಕನಕೆರೆಗೆ 34 ಕೋಟಿ ರೂ. ವರ್ಕ್ ಆಗಿದೆ ಎಂದು ಪತ್ರಿಕೆಯಲ್ಲಿ ಬಂದಿದೆ. ಅದು ಸುಳ್ಳೋ ನಿಜವೋ ಎಂದು ಹೇಳಬೇಕು. ಒಂದು ಕಡೆ ಮಾನ್ಯ ಮುಖ್ಯ ಮಂತ್ರಿಗಳು 60 ವರ್ಷಗಳಿಂದ ಬೂಕನಕೆರೆ ಹೇಗಿತ್ತು ಹಾಗೆಯೇ ಇದೆ. ಅಲ್ಲಿ ಶೌಚಾಲಯ ಮಾಡುವುದಕ್ಕಾಗಲಿಲ್ಲ, ರಸ್ತೆ ಮಾಡುವುದಕ್ಕಾಗಲಿಲ್ಲ, ಶಾಲಾ ಕಟ್ಟಡಗಳು ಇಲ್ಲ, ಅವರೇ ಹಣಕಾಸು ಮಂತ್ರಿಗಳು, ಅವರೇ ಒಂದೂಕಾಲು ವರ್ಷಗಳಿಂದ ಮುಖ್ಯ ಮಂತ್ರಿಗಳಾಗಿದ್ದಾರೆ. ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ 20 ತಿಂಗಳು ಉಪ ಮುಖ್ಯ ಮಂತ್ರಿಗಳಾಗಿದ್ದರು. ಇಷ್ಟೆಲ್ಲ, ಇದ್ದು ಬೂಕನಕೆರೆಗೆ ಅಭಿವೃದ್ಧಿ ಮಾಡುವುದಕ್ಕಾಗಲಿಲ್ಲವೆಂದರೆ, ರಾಜ್ಯದಲ್ಲಿರುವ 25,000 ಹಳ್ಳಿಗಳಿಗೆ ಏನು ಮಾಡಬಹುದು ಹೇಳಿ. ನಾನು ಅಭಿವೃದ್ಧಿ ಮಾಡಬೇಡಿ ಎಂದು ಹೇಳಲಿಲ್ಲ. ಬೂಕನಕೆರೆ ಜೊತೆಯಲ್ಲಿ ರಾಜ್ಯದ 25,000 ಹಳ್ಳಿಗಳನ್ನು ನೆನಪಿಟ್ಟುಕೊಳ್ಳಿ ಎಂದು ಹೇಳುತ್ತಿದ್ದೇನೆ. ಹೊಳೆನರಸೀಪುರಕ್ಕೆ ರೆಡ್ಇಂಕ್ ಹಾಕಿದ್ದೀರಿ. ನೀವು ಅದನ್ನು ತೆಗೆಯುವವರೆಗೆ ನೀವು ಏನೂ ಕೆಲಸ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಆರ್. ಅಶೋಕ್ : ಇನ್ನು 50 ವರ್ಷಕ್ಕೆ ಆಗುವಷ್ಟು ದುಡ್ಡು, ಫೆಸಿಲಿಟೀಸ್ ಅಲ್ಲಿಗೆ ಹೋಗಿದೆ. ಇನ್ನು 50 ವರ್ಷ ಹೊಳೆನರಸೀಪುರವನ್ನು ಮುಟ್ಟುವ ಹಾಗಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಅಶೋಕ್ ರವರಿಗೆ ಹೇಳುತ್ತೇನೆ, ಮಾನ್ಯ ಅಶೋಕ್‌ರವರು 22,000 ಕೋಟಿ ಬೆಂಗಳೂರಿಗೆ ಕೊಡುತ್ತೇನೆಂದು ಒಮ್ಮೆ ಅನೌನ್ಸ್ ಮಾಡಿದ್ದಾರೆ. ಕೃಷಿಗೆ ಒಂದು 10,000 ಕೋಟಿ ಕೊಡುವುದಕ್ಕೆ ಹೇಳಿಬಿಡಿ, ನಾವು ಅವರು ಹೇಳಿದ್ದಕ್ಕೆಲ್ಲಾ ಎಸ್ ಎಂದು ಹೇಳುತ್ತೇವೆ. ಅವರು 10,000 ಕೋಟಿ ಕೊಟ್ಟರೆ ನಾವು ಏನೂ

ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ ಹೀಗೇ ನಿಂತು ಬಿಡುತ್ತೇವೆ. ನೀವು 22,000 ಕೋಟಿ ರೂ. ಎಂದು ಹೇಳುತ್ತೀರಿ, ನಿಮ್ಮ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು 750 ಕೋಟಿ ಸಾಲ ಮಾಡುತ್ತಿದ್ದೇವೆಂದು ಅವರು ಹೇಳುತ್ತಾರೆ. ನಿಮ್ಮನ್ನು ನಂಬುವುದೋ ಹಣಕಾಸು ಇಲಾಖೆಯ ಕಾರ್ಯದರ್ಶಿಯವರನ್ನು ನಂಬುವುದೋ ಹೇಳಿ. ಅವರು 750 ಕೋಟಿ ರೂ. ಸಾಲ ಮಾಡುತ್ತೇವೆಂದು ಹೇಳುತ್ತಾರೆ, ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು 2,500 ಕೋಟಿ ರೂ. ಸಾಲಕ್ಕೆ ಹಿಂದಿನ ಅಧಿವೇಶನದಲ್ಲಿ ಅನುಮತಿ ತೆಗೆದುಕೊಂಡಿದ್ದಾರೆ. ಸಾವಯವ ಕೃಷಿ ಮಿಷನ್ ಇದೆ, ಅಲ್ಲಿ ಏನಾಗಿದೆ, ಅದು ಸಾವಯವ ಕೃಷಿ ಅಲ್ಲ, ಅದು ಒಂದು ಟ್ರಸ್ಟ್ ಮಾಡಿ 172 ತಾಲ್ಲೂಕುಗಳಲ್ಲಿ ಏನಾಗಿದೆ ಗೊತ್ತಾ? ಒಂದು ತಾಲ್ಲೂಕಿಗೆ 24 ಲಕ್ಷ ರೂ. ಎಂದು ಬಿಡುಗಡೆ ಮಾಡಿದ್ದೀರಿ. 300 ಜನ ಸದಸ್ಯರು ಎಂದು ಮಾಡಿದ್ದೀರಿ. ಸಂಚಾಲಕರಿಗೆ 5000 ರೂ. ಸಂಬಳ 2500 ರೂ. ಸಂಭಾವನೆ ಎಂದು ಮಾಡಿದ್ದೀರಿ. ನಾನು ಕೇಳಿದಾಗ ನಮ್ಮ ಜಾಯಿಂಟ್ ಡೈರೆಕ್ಟರ್ ಹೇಳಿದ್ದು ಇಷ್ಟೆ. 5000 ರೂ. ಸಂಬಳ, 2,500 TA DA ಭತ್ಯೆ ಇನ್ನೊಬ್ಬರು ಸಂಚಾಲಕರಿಗೆ 5,000, 15 ಜನ ಸಂಚಾಲಕರಿದ್ದಾರೆ. 15 ಜನ ಡೈರೆಕ್ಟರ್ ಗಳಿಗೆ 1000 ರೂ. ಸಂಬಳ 500 ರೂ. ಭತ್ಯೆ ಅವರು ತಾಲ್ಲೂಕುಗಳಲ್ಲಿ ಮೆಂಬರ್ ಶಿಪ್ ಮಾಡಬೇಕೆಂದರೆ 400 ರೂ. ಯಾವ ತಾಲ್ಲೂಕಿನಲ್ಲಿ ಮಾಡಿದ್ದಾರೆ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಸಾವಯವ ಕೃಷಿ ಮಿಷನ್ ಕಾರ್ಯಕ್ರಮ ಗಳ ಅನುಷ್ಠಾನಕ್ಕೆ ಎಲ್ಲಾ ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರು ಆಯ್ಕೆಯಾಗಿರುವ ಸಾವಯವ ಕೃಷಿಕರ ಸಂಘದಲ್ಲಿ ಜಂಟಿಯಾಗಿ ನಿರ್ವಹಿಸುವ ಖಾತೆಯನ್ನು ರಾಷ್ಟ್ರೀಕೃತ ಬ್ಯಾಂಕ್ ಆದ ಕಾರ್ಪೊರೇಷನ್ ಬ್ಯಾಂಕ್ ಶಿವಮೊಗ್ಗ ಶಾಖೆಯಲ್ಲಿ ತೆರೆಯುವುದು ಎಂದು ಇದೆ. ರಾಜ್ಯದಲ್ಲಿರುವ ಎಲ್ಲಾ ರೈತರೂ ಕೂಡ ಶಿವಮೊಗ್ಗದಲ್ಲಿ ಖಾತೆ ತೆರೆಯ ಬೇಕಂತೆ. ರಾಷ್ಟ್ರೀಕೃತ ಕಾರ್ಪೊರೇಷನ್ ಬ್ಯಾಂಕಿನಲ್ಲಿ ಖಾತೆ ತೆರೆದು ಕಾರ್ಯಕ್ರಮಗಳಿಗೆ ಸರ್ಕಾರ ನೀಡುವ ಅನುದಾನವನ್ನು ಈ ಖಾತೆಯಲ್ಲಿ ಜಮಾ ಮಾಡುವುದು. ಇದರ ಉದ್ದೇಶ ಏನೆಂದು ದಯಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ದಯಮಾಡಿ ಹೇಳಬೇಕು. ಬಿಡುಗಡೆ ಆದ ಎಲ್ಲ ಹಣವನ್ನು ಕಾರ್ಪೊರೇಷನ್ ಬ್ಯಾಂಕ್ ಶಿವಮೊಗ್ಗದಲ್ಲಿ ಜಮಾ ಮಾಡಬೇಕೆಂದು ಏಕೆ ಹೇಳಿದ್ದಾರೆ ಎನ್ನತಕ್ಕಂಥದ್ದನ್ನು

ಹೇಳಬೇಕು. ನಮ್ಮ ಮಾಗಡಿಯಲ್ಲಿ ಬ್ಯಾಂಕ್ ಇಲ್ಲವಾ? ಇತರ ಹಳ್ಳಿಗಳಲ್ಲಿ ಬ್ಯಾಂಕ್ ಇಲ್ಲವಾ? ದುಡ್ಡನ್ನೆಲ್ಲಾ ಅಲ್ಲಿ ಏಕೆ ಜಮಾ ಮಾಡಬೇಕು?

ಅಧ್ಯಕ್ಷರು : ಮಾನ್ಯ ರೇವಣ್ಣರವರೇ ಒಂದು ಗಂಟೆ 45 ನಿಮಿಷ ಆಯಿತು, ಮುಗಿಸಿಬಿಡಿ. ನೀವೇ ಅರ್ಥಮಾಡಿಕೊಳ್ಳಿ. ನಾವೇನೂ ಹೇಳಬೇಕಾಗಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, 2008–09ಕ್ಕೆ 100 ಕೋಟಿ ರೂ ಇಟ್ಟಿದ್ದರು. ಅದರಲ್ಲಿ 60 ಕೋಟಿ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. 172 ತಾಲ್ಲೂಕುಗಳಿಗೆ 24 ಲಕ್ಷ ರೂ. ಎಂದರೆ, 172 ತಾಲ್ಲೂಕುಗಳಿಂದ 60 ಕೋಟಿ ರೂ. ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಈ ವರ್ಷ 100 ಕೋಟಿ ರೂ. ಇಟ್ಟಿದ್ದಾರೆ, 10–10 ಲಕ್ಷ ರೂ. ಬಿಡುಗಡೆ ಮಾಡಿದ್ದಾರೆ. ಇದರಲ್ಲಿ ಹಣ ಪೂರ್ತಿ ಲೂಟಿ ಮಾಡಿದ್ದಾರೆ. ಇದು ಹಾಡು ಹಗಲು ದರೋಡೆಯಾಗಿದೆ. ಇದನ್ನು CBI ತನಿಖೆ ಆದರೂ ಮಾಡಿ, COD ತನಿಖೆ ಆದರೂ ಮಾಡಿ, 60 ಕೋಟಿ ಹಣ ಎಲ್ಲಿಯೂ ಖರ್ಚಾಗಿಲ್ಲ. ಅದಕ್ಕೆ ಬೇಕಾದರೆ ಸಾಕ್ಷಿ ಒದಗಿಸಿಕೊಡುವುದಕ್ಕೆ ನಾನು ತಯಾರಿದ್ದೇನೆ. ನೀವು ಕೊಟ್ಟಿರುವ 60 ಕೋಟಿ ಹಣದಲ್ಲಿ ಏನಾಗಿದೆ ಎಂದರೆ, ಅದನ್ನು ನಾನು enquiry ಮಾಡುವ ಸಮಯದಲ್ಲಿ ಹೇಳುತ್ತೇನೆ. ದಯಮಾಡಿ ಮಾನ್ಯ ಕೃಷಿ ಸಚಿವರು enquiry ಮಾಡುವುದಕ್ಕೆ ಆದೇಶ ಕೊಡಬೇಕೆಂದು ಮನವಿ ಮಾಡುತ್ತೇನೆ. ನಮ್ಮ ರೈತರಿಗೆ ಕಳಪೆ ಬೀಜ ಕೊಡುತ್ತಿದ್ದಾರೆ. ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ 75% ಇದ್ದುದು 50%ಗೆ ಇಳಿಸಿದ್ದಾರೆ. ಅದರಲ್ಲಿಯೂ ಬಿತ್ತನೆ ಬೀಜದ ಬಗ್ಗೆ ಏನು ಮಾಡುತ್ತಿದ್ದೀರಿ?

(3-30 PM)

ಉದಾಹರಣೆಗೆ ಹೇಳುವುದಾದರೆ, ಕಡ್ಲೇಕಾಯಿ ಬಿತ್ತನೆ ಬೀಜವೆಂದು ವಿತರಿಸಲು ಕೊಟ್ಟಿದ್ದರೆ, ಅವುಗಳನ್ನು ಸಾಯಂಕಾಲ ಹುರಿಗಡಲೆ ಅಂಗಡಿಯಲ್ಲಿ ಮಾರುವುದಕ್ಕೆಂದು ಕೊಟ್ಟಿದ್ದಾರೆ. ಅದರ ಬದಲು ಶೇಕಡ 50ರಷ್ಟೇ ಸಬ್ಸಿಡಿ ಕೊಟ್ಟು, ಒಂದು ಚೀಲ ಗೊಬ್ಬರವನ್ನಾದರೂ ಕೊಡಿ ಎಂದು ನಾನು ಹೇಳುತ್ತೇನೆ. ಕಡ್ಲೇಬೀಜವನ್ನು ನೀವು ಕೊಟ್ಟರೆ ಅಧಿಕಾರಿಗಳು ಅದನ್ನೆಲ್ಲಾ ತೆಗೆದುಕೊಂಡು ಹೋಗಿ ಅಂಗಡಿಗೆ ಮಾರುತ್ತಾರೆ. ಕೆಲವು ಒಳ್ಳೆಯ ಅಧಿಕಾರಿಗಳಿದ್ದಾರೆ. ಆದರೆ ಕೆಲವರು ಬಿತ್ತನೆ ಬೀಜವನ್ನು ಲೆಕ್ಕಕ್ಕೆ ತೆಗೆದು ಕೊಂಡು, ಮಾರುಕಟ್ಟೆಯಲ್ಲಿ ಬಿತ್ತನೆ ಬೀಜ ಮಾರುವವರಿಗೆ ಕೊಡುತ್ತಿದ್ದಾರೆ.

ಕೃಷಿ ಇಲಖೆಯ Director and Assistant Director ರವರು ಇಬ್ಬರೂ ಸೇರಿಕೊಂಡು ಅದನ್ನೆಲ್ಲಾ ಹುರಿದುಕೊಂಡು ತಿನ್ನುತ್ತಿದ್ದಾರೆ. ಇಂದು ಅಂತಹ ಪರಿಸ್ಥಿತಿ ಇದೆ...

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, 3 ಗಂಟೆಗೇ ನೀವು ಮಾತನಾಡುವುದನ್ನು close ಮಾಡಬಹುದೆಂದು ನಾವು ತಿಳಿದುಕೊಂಡಿದ್ದೆವು. ನಿಮಗೆ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಹೊತ್ತು ಮಾತನಾಡುವುದು ಸರಿಯಲ್ಲ. ನಿಮಗೆ ಕೊಟ್ಟಿರುವ time limitation ನಲ್ಲೇ ನೀವು ಮಾತನಾಡಿ ಮುಗಿಸಿದರೆ, ಮಿಕ್ಕ ಸಮಯದಲ್ಲಿ ಬೇರೆಯವರಿಗೂ ಮಾತನಾಡಲು ಅವಕಾಶ ಸಿಗುತ್ತದೆ. ನಿಮಗೆ ಎಷ್ಟು ಹೇಳಿದರೂ ಅರ್ಥವೇ ಆಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಕೊನೆಯದಾಗಿ ತಮ್ಮ ಹತ್ತಿರ ಮನವಿ ಮಾಡಿಕೊಳ್ಳುವುದು ಇಷ್ಟೇ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ವಿಶೇಷವಾಗಿ ನಾವಿಂದು ಚರ್ಚಿಸುತ್ತಿದ್ದೇವೆ. ಈ ಸರ್ಕಾರ ರೈತರಿಗೆ ಒಳ್ಳೆಯ ಬಿತ್ತನೆ ಬೀಜ ಮತ್ತು ಉತ್ತಮ ಕ್ರಿಮಿನಾಶಕಗಳನ್ನು ಒದಗಿಸಬೇಕು. ರೈತರಿಗಾಗಿ ಗೋಡೌನ್‌ಗಳನ್ನು ಇದುವರೆಗೂ ಎಲ್ಲಿಯೂ ನಿರ್ಮಾಣ ಮಾಡಿಲ್ಲ. ಹಿಂದೆ ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ ಮೂರು ಕಡೆ ಗೋಡೌನ್ ಆಗಿರುವುದನ್ನು ಬಿಟ್ಟರೆ ಮಿಕ್ಕೆಲ್ಲೂ ಗೋಡೌನ್‌ಗಳು ಆಗಿಲ್ಲ. ಅದನ್ನು ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಎರಡೂ ಸೇರಿ ಇವತ್ತು ರೈತರಿಗಾಗಿ 1000 ಕೋಟಿ ರೂ.ಗಳನ್ನು ಮೀಸಲಾಗಿಡಿ. ಆಂಧ್ರ ಪ್ರದೇಶದಲ್ಲಿ ರೈತರಿಗಾಗಿ 900 ಕೋಟಿ ರೂ.ಗಳನ್ನೇನು ಇಟ್ಟಿದ್ದಾರೋ, ಅದೇ ರೀತಿಯಲ್ಲಿ ನಮ್ಮಲ್ಲೂ ರೈತರಿಗಾಗಿ 1000 ಕೋಟಿ ರೂ.ಗಳ Corpus Fund ಇಡಬೇಕು. ರೈತರು ಬೆಳೆದ ಬೆಳೆಗಳಿಗೆ ಬೆಲೆ ಬಿದ್ದು ಹೋದರೆ, ಅವರಿಗೆ ಈ ಫಂಡ್‌ನಿಂದ ಸಹಾಯ ಮಾಡುವಂತೆ ಮಾಡಬೇಕು. ಇನ್ನು ತರಕಾರಿ ಬಗ್ಗೆ ಹೇಳುವುದಾದರೆ, ಇವತ್ತು ರಾಜ್ಯದಲ್ಲಿ ಕೋಲಾರ ಜಿಲ್ಲೆ ಇರಬಹುದು, ಬೆಳಗಾಂ ಜಿಲ್ಲೆ ಇರಬಹುದು, ಕೆಲವೊಂದು ಭಾಗಗಳಲ್ಲಿ ಅತಿ ಹೆಚ್ಚು ತರಕಾರಿಯನ್ನು ಬೆಳೆಯಲಾಗುತ್ತಿದೆ. ಅದಕ್ಕೆ KMF ಮಾದರಿಯಲ್ಲಿ ಸಂಸ್ಥೆಯೊಂದನ್ನು ಸ್ಥಾಪಿಸಿ, ರೈತರಿಂದ ನೇರವಾಗಿ ತರಕಾರಿಯನ್ನು ಖರೀದಿ ಮಾಡುವಂತಾಗಬೇಕು. ಮಾನ್ಯ ಶರದ್ ಪವಾರ್‌ರವರು ಚನ್ನಪಟ್ಟಣದ ಹತ್ತಿರ ನಾಲ್ಕು ಕಡೆಗಳಲ್ಲಿ ಇದನ್ನು ಮಾಡುತ್ತೇವೆಂದರು. ಅದಕ್ಕಾಗಿ ನಾವು ಕೇಂದ್ರ ಸರ್ಕಾರದಿಂದ 300

ಕೋಟಿ ರೂ. ಗಳನ್ನು ಕೊಡುತ್ತೇವೆ, ನೀವು 100 ಎಕರೆ ಜಮೀನನ್ನು ಒದಗಿಸಿ ಎಂದರು. ಆ ಪ್ರಸ್ತಾವ ಹಾಗೆಯೇ ಬಿದ್ದು ಹೋಗಿದೆ. ಶಿವಮೊಗ್ಗದಲ್ಲಿ ಒಂದನ್ನು ಮಾಡುತ್ತೇವೆಂದರು, ಅದೂ ಕೂಡ ಆಗಿಲ್ಲ. KMF ಮಾದರಿಯಲ್ಲಿ ಸಂಸ್ಥೆಯೊಂದನ್ನು ಸ್ಥಾಪಿಸಿ, ಅವರು ಪ್ರತಿ ಹಳ್ಳಿಗೂ ರೈತರ ಬಳಿ ಹೋಗಿ ತರಕಾರಿಯನ್ನು ಕೊಂಡು ತಂದು ಮಾರಾಟ ಮಾಡುವಂತಾಗಬೇಕು. ಅಂತಹ ಸಂಸ್ಥೆಯನ್ನು ಹುಟ್ಟು ಹಾಕಬೇಕೆಂದು ರೈತರ ಪರವಾಗಿ ಕೇಳುತ್ತಿದ್ದೇನೆ. ಇವತ್ತು ಬಿಜಾಪುರದಲ್ಲಿ ದ್ರಾಕ್ಷಿ ಹೆಚ್ಚಿಗೆ ಬೆಳೆಯುತ್ತಿದ್ದಾರೆ. ಸರ್ಕಾರದ ಸಂಸ್ಥೆಯೊಂದನ್ನು ಸ್ಥಾಪಿಸಿ, ಬಿಜಾಪುರದ ರೈತರಿಂದ ನೇರವಾಗಿ ದ್ರಾಕ್ಷಿ ಖರೀದಿಸಿ, ಅದನ್ನು ಹೊರ ದೇಶಗಳಿಗೆ ರಫ್ತು ಮಾಡಲು ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಇವತ್ತು ಮಾವಿನ ಹಣ್ಣನ್ನು ಹೆಚ್ಚಿಗೆ ಬೆಳೆಯುತ್ತಿದ್ದಾರೆ. ಅದನ್ನೂ ಸಹ ಹೊರ ದೇಶಗಳಿಗೆ ರಫ್ತು ಮಾಡಲಿಕ್ಕೆ ಸರ್ಕಾರ ಕರ್ಯಕ್ರಮವೊಂದನ್ನು ರೂಪಿಸಬೇಕು. ಇನ್ನು ಹಾವೇರಿ ಮತ್ತು ಬ್ಯಾಡಗಿಗಳಲ್ಲಿ ಮೆಣಸಿನಕಾಯಿ ಹೆಚ್ಚಾಗಿ ಬೆಳೆಯುತ್ತಾರೆ. ಆ ಭಾಗದಲ್ಲಿ ಸಂಸ್ಕರಣ ಕೇಂದ್ರವೊಂದನ್ನು ಮಾಡಿದರೆ ಅಲ್ಲಿಯ ರೈತರಿಗೆ ಅನುಕೂಲವಾಗುತ್ತದೆ. ಅದನ್ನು ಮಾಡಬೇಕೆಂದು ಈ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತಿದ್ದೇನೆ. ಇನ್ನು ಬೆಳೆ ವಿಮೆ ಬಗ್ಗೆ ಹೇಳುವುದಾದರೆ, ಬೆಳೆ ವಿಮೆ ಈಗ ಹೋಬಳಿ ಮಟ್ಟದಲ್ಲಿದೆ. ಅದನ್ನು ಪಂಚಾಯಿತಿ ಮಟ್ಟಕ್ಕೆ ವಿಸ್ತರಣೆ ಮಾಡಬೇಕು. ಇಲ್ಲದಿದ್ದರೆ ಬೆಳೆ ವಿಮೆಗಾಗಿ ದುಡ್ಡು ಕಟ್ಟಿದ್ದರೂ ಸಹ ನೂರಕ್ಕೆ ಎಪ್ಪತ್ತು ಭಾಗ ರೈತರಿಗೆ ವಿಮೆ ಹಣ ಸಿಗುವುದಿಲ್ಲ. ರೈತರು ಸುಮ್ಮನೆ ಎಲ್ಲಾ ಕ್ರಾಪ್‌ಗೂ ನಾಮಾಕಾವಸ್ತೆ ದುಡ್ಡು ಕಟ್ಟುವಂತಾಗಿದೆ. ಬೆಳೆ ವಿಮೆ ಹಣವನ್ನು ರೈತರೇಕೆ ಕಟ್ಟಬೇಕು, ಅದನ್ನು ಸರ್ಕಾರವೇ ಕಟ್ಟಲಿ. ಅದಕ್ಕಾಗಿ ಕೇವಲ 100 ಕೋಟಿ ರೂ.ಗಳು ಖರ್ಚಾಗಬಹುದು. ಅದಕ್ಕೆ 500 ಕೋಟಿ ರೂ.ಗಳು ಖರ್ಚಾಗುತ್ತದೆ ಎನ್ನುವುದಾದರೆ, ಆಗಲಿ ಬಿಡಿ. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸುವ ಮತ್ತು ರೈತರಿಗಾಗಿ ಕಣ್ಣೀರು ಹಾಕುವ ನೀವು ಅವರಿಗಾಗಿ 500 ಕೋಟಿ ರೂ.ಗಳನ್ನು ಕೊಡಲಿಕ್ಕೆ ಏಕೆ ಹಿಂದೇಟು ಹಾಕುತ್ತೀರಿ? 3000 ಕೃಷಿ ಅಧಿಕಾರಿಗಳ ಹುದ್ದೆಗಳು ಮತ್ತು 1500 Horticulture ಅಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಮೀನುಗಾರಿಕೆ ಇಲಾಖೆಯಲ್ಲೂ ಸಹ 500 ಹುದ್ದೆಗಳು ಖಾಲಿ ಇವೆ. ನಾನು ಸರ್ಕಾರದ ವಿರುದ್ಧ ಯಾವುದೇ

allegation ಮಾಡುತ್ತಿಲ್ಲ, ಖಾಲಿ ಹುದ್ದೆಗಳನ್ನು ಸರ್ಕಾರ ಕೂಡಲೇ ಭರ್ತಿ ಮಾಡಬೇಕೆಂದು ಆಗ್ರಹಿಸುತ್ತಿದ್ದೇನೆ. ಬ್ಯಾಂಕ್‌ಗಳಿಂದ ರೈತರಿಗೆ ಸಾಲ ಸೌಲಭ್ಯಗಳು ಸರಿಯಾದ ರೀತಿಯಲ್ಲಿ ಸಿಗುವಂತಹ ಕಾರ್ಯಕ್ರಮ ರೂಪಿಸಬೇಕು. ಇವತ್ತು ಏನಾಗಿದೆ ಎಂದರೆ, ಏಪ್ರಿಲ್ ತಿಂಗಳಿನಲ್ಲಿ ಸಾಲ ಕೊಡಿ ಎಂದರೆ, ಜುಲೈ ತಿಂಗಳಿನಲ್ಲಿ ಸಾಲ ಕೊಡಲಾಗುತ್ತಿದೆ. ಆಪೆಕ್ಸ್ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್‌ಗಳು ಅಥವಾ VSSN ಇವತ್ತು ರೈತರಿಗೆ ಎಷ್ಟು ಸಾಲ ಕೊಡುತ್ತಿವೆ? ಯಾರು ದೊಡ್ಡವರಿದ್ದಾರೋ, ಅವರಿಗೆ ಅವುಗಳು ಸಾಲ ಕೊಡುತ್ತವೆ. ಪ್ರಕರಣವೊಂದರಲ್ಲಿ ಹೊಸೂರಿನಿಂದ ಬೆಂಗಳೂರಿಗೆ ಬಂದಿರುವವರಿಗೆ ನಬಾರ್ಡ್ ಮಾರ್ಗಸೂಚಿ Violate ಮಾಡಿ 18 ಕೋಟಿ ರೂ.ಗಳ ಸಾಲ ಕೊಡಲಾಗಿದೆ. ಯಾರು ಆ ರೀತಿಯ ಸಾಲವನ್ನು ಯಾರಿಗೆ ಕೊಟ್ಟಿದ್ದಾರೆ ಎಂಬ ಬಗ್ಗೆ ಮಾನ್ಯ ಸಹಕಾರ ಸಚಿವರನ್ನೇ ಕೇಳಿ. ಸರ್ಕಾರ ರೈತರ ಏಳಿಗೆಗೆ ಬದ್ಧವೆಂದು ಹೇಳುತ್ತದೆ. ಕಾಟಾಚಾರಕ್ಕಾಗಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಇಲ್ಲಿ ಚರ್ಚೆಯಾಗಬಾರದು. ಆಂಧ್ರ ಪ್ರದೇಶದ ಸರ್ಕಾರ ಗ್ರಾಮೀಣಾಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವಂತೆ ಈ ಸರ್ಕಾರವೂ ಮಾಡಬೇಕು. ಅಲ್ಲದೆ ಹೆಚ್ಚುವರಿ ಪ್ಯಾಕೇಜ್ ಅನ್ನೂ ಸಹ ಘೋಷಣೆ ಮಾಡಬೇಕು. ಮಾನ್ಯ ಅಶೋಕ್ ರವರು ಮೊನ್ನೆ ಬೆಂಗಳೂರು ನಗರದ ಅಭಿವೃದ್ಧಿಗಾಗಿ 22 ಸಾವಿರ ಕೋಟಿ ರೂ.ಗಳನ್ನು ಘೋಷಿಸಿರುವಂತೆ ರೈತರಿಗಾಗಿ ಕನಿಷ್ಟ 10 ಸಾವಿರ ಕೋಟಿ ರೂ. ಗಳನ್ನಾದರೂ ಈ ಸರ್ಕಾರದವರು ಮೀಸಲಾಗಿಡಬೇಕೆಂದು ಆಗ್ರಹಿಸುತ್ತೇನೆ. ನಿಮಗೇನಾದರೂ ಕೃತಜ್ಞತೆ ಇದ್ದರೆ, ಆಲೂಗಡ್ಡೆ ಬೆಳೆಗಾರರಿಗೆ ವಿಶೇಷವಾಗಿ 150 ಕೋಟಿ ರೂ.ಗಳ ಹಣವನ್ನು ಕೊಡಿ. ಅದರ ಜೊತೆಗೆ ಕೆಲವು ಜಿಲ್ಲೆಗಳನ್ನು ನೀವು ಕೆಲಸ ಮಾಡುವಂತಹ ಸಂದರ್ಭದಲ್ಲಿ......

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರಿಗೆ ಬೆಂಗಳೂರು ನಗರದಲ್ಲಿ ಒಳ್ಳೆಯ ಸೈಟು ಬೇಕು ಮತ್ತು ಮನೆ ಬೇಕು. ಆದರೆ ಬೆಂಗಳೂರು ನಗರದ ಅಭಿವೃದ್ಧಿಗೆ ಸರ್ಕಾರ ಹಣ ಕೊಟ್ಟರೆ, ಅದನ್ನು ಕೊಡಬಾರದು ಎನ್ನುತ್ತಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ಅದನ್ನು ಬೇಕಾದರೆ ನಿಮಗೇ ಬರೆದು ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಬೆಂಗಳೂರು ನಗರದ ಅಭಿವೃದ್ಧಿ ಬೇಡವೆಂದು ನಾನು ಹೇಳುತ್ತಿಲ್ಲ. ಬೆಂಗಳೂರು ನಗರದ ಅಭಿವೃದ್ಧಿಗೆ 22 ಸಾವಿರ ಕೋಟಿ ರೂ.ಗಳನ್ನು ತೆಗೆದುಕೊಳ್ಳುತ್ತಿದ್ದೀರಿ. ಅದೇ ರೀತಿ ರೈತರಿಗಾಗಿ 10 ಸಾವಿರ ಕೋಟಿ ರೂ.ಗಳನ್ನು ಕೊಡಿ ಎಂದಷ್ಟೇ ನಾನು ಕೇಳುತ್ತಿದ್ದೇನೆ. ಅದನ್ನು ಬಿಟ್ಟು ನಾನು ಬೇರೇನನ್ನೂ ಕೇಳುತ್ತಿಲ್ಲ.

ಶ್ರೀ ಆರ್.ಅಶೋಕ್ : ಮಾನ್ಯ ರೇವಣ್ಣನವರೆ, ನೀವು ರೈತರ ಪರವಾಗಿ 22 ಸಾವಿರ ಕೋಟಿ ರೂ.ಗಳನ್ನಾದರೂ ಕೇಳಿ, ಅದಕ್ಕೆ ನಮ್ಮದೇನು objection ಇಲ್ಲ. ಬೆಂಗಳೂರು ನಗರದ ಅಭಿವೃದ್ಧಿಗೆ ಹಣ ನೀಡಿದ್ದರ ಬಗ್ಗೆ ಮಾನ್ಯ ರೇವಣ್ಣನವರು ವಕ್ರದೃಷ್ಟಿ ಹಾಯಿಸುವುದು ಬೇಡ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ರೈತರ ಬಗ್ಗೆ ಬಹಳಷ್ಟು ಕಾಳಜಿ ಇಟ್ಟುಕೊಂಡಿದ್ದಾರೆ. ಕಾಡಿ, ಬೇಡಿ ವಿರೋಧ ಪಕ್ಷದವರನ್ನು ಚರ್ಚೆಗೆ ಒಪ್ಪಿಸಬೇಕಾಯಿತು ಎಂದು ಅವರು ಹೇಳಿದರು. ಚೀನಾದಿಂದ ಅವರು ಪತ್ರಿಕೆಗಳಿಗೆ ಬರೆದ ಲೇಖನಕ್ಕೆ 1500 ಪ್ರತಿಕ್ರಿಯೆಗಳು ಬಂದಿದೆ ಎಂದು ಅವರು ಹೇಳಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಸೆಂಟ್ರಲ್ ಕಾಲೇಜ್ ಗ್ರೌಂಡ್‌ನಲ್ಲಿ ಮಾನ್ಯ ಕುಮಾರಸ್ವಾಮಿಯವರು ಮತ್ತು ಮಾನ್ಯ ಕೃಷಿ ಸಚಿವರು ಇಬ್ಬರೂ ಸೇರಿ ರೈತರನ್ನು ಕರೆಸಿ, ಅವರೊಂದಿಗೆ ಸಂವಾದ ಮಾಡಿದರು. ಅವತ್ತು ಮಾನ್ಯ ಯಡಿಯೂರಪ್ಪನವರಿಗೆ ರೈತರ ಬಗ್ಗೆ ಚಿಂತನೆ ಬರಲಿಲ್ಲ. ಸೆಂಟ್ರಲ್ ಕಾಲೇಜ್ ಗ್ರೌಂಡ್‌ಗೆ ಬಂದು ರೈತರ ಸಮಸ್ಯೆಗಳನ್ನು ಅಂದು ಅವರು ಆಲಿಸಲಿಲ್ಲ. ಈ ಬಗ್ಗೆ ಅವರು ದಯಮಾಡಿ ಹೇಳಲಿ. ವಿರೋಧ ಪಕ್ಷದವರನ್ನು ದೂಷಿಸುವ ಬದಲು ಅವರು ಅಂದು ಏಕೆ ಬರಲಿಲ್ಲ ಎನ್ನುವುದನ್ನು ಇಲ್ಲಿ ಹೇಳಲಿ. ಏಕೆಂದರೆ, ನಿಮಗೆ ರೈತರ ಬಗ್ಗೆ ಚಿಂತನೆ ಇರಲಿಲ್ಲ. ಆಗ ನೀವು ಜೊತೆಗೆ ಕರೆದುಕೊಂಡು ಹೋಗುತ್ತಿದ್ದಿರಿ........

(ಗೊಂದಲ)

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ದಯವಿಟ್ಟು ಬೇಗ ತಮ್ಮ ಭಾಷಣ ಮುಗಿಸಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಆಗ ಯಾವತ್ತು ನೀವು ನಮಗೆ ಗೌರವ ಕೊಟ್ಟಿದ್ದಿರಿ? ಯಾವಾಗ ನಮ್ಮನ್ನು ಕರೆದಿದ್ದಿರಿ? ಆಗ ಎಲ್ಲಾ

ಸಮಯದಲ್ಲೂ ನಮ್ಮನ್ನು ಅವಮಾನಗೊಳಿಸಲಾಯಿತು. ದಬ್ಬಾಳಿಕೆ ಮಾಡುವುದು ಮತ್ತು ಅವಮಾನ ಮಾಡುವುದು ಎರಡೇ ನಿಮಗೆ ಗೊತ್ತಿದ್ದು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಎಲ್ಲಾ ಮೀಟಿಂಗ್ ಮಾಡಿದ್ದು ನಿಜ. ನಾನು ಬೆಂಗಳೂರು ನಗರದಲ್ಲಿ ಎಲ್ಲೂ ಜಾಗ ಹುಡುಕಲಿಕ್ಕೆ ಹೋಗಿರಲಿಲ್ಲ. HLC meetingನಲ್ಲಿ ಯಾರಿದ್ದರು? ಯಾವ್ಯಾವ ಮೀಟಿಂಗ್‌ನಲ್ಲಿ ಏನೇನು ಮಾಡಿಸಿಕೊಂಡರು?.......

(ಗೊಂದಲ)

ಅಧ್ಯಕ್ಷರು : ಮಾನ್ಯ ನಾಯ್ಡುರವರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ, ತಮ್ಮ ಭಾಷಣ conclude ಮಾಡಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ...... ಎಲ್ಲದಕ್ಕೂ ನಿಮ್ಮ ತಮ್ಮನೇ ಇದಕ್ಕೆ ಜವಾಬ್ದಾರರು. ನಿಮ್ಮ ಅಣ್ಣ ತಮ್ಮಂದಿರೇ ಇದಕ್ಕೆ ಜವಾಬ್ದಾರರು. ಅದು ನಮ್ಮದಲ್ಲ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅದಕ್ಕೆ ಪೂರ್ತಿಯಾಗಿ ಅಣ್ಣ ತಮ್ಮಂದಿರಾದ ನೀವಿಬ್ಬರೇ ಜವಾಬ್ದಾರರು. ನೀವು ಅವರನ್ನು ಕುಣಿಸಿದಿರಿ, ಅವರು ಕುಣಿದರು. ನಿಮ್ಮ ತಮ್ಮನೇ ಎಲ್ಲಾ ಅನುಮತಿಗಳನ್ನು ಕೊಟ್ಟದ್ದು. ನಮ್ಮನ್ನೇಕೆ ಆ ಬಗ್ಗೆ ಕೇಳುತ್ತೀರಿ? ನಮ್ಮನ್ನು ರಬ್ಬರ್ ಸ್ಟಾಂಪ್ ತರಹ ನೀವು use ಮಾಡಿಕೊಂಡಿರಿ?

(ಗೊಂದಲ)

ಅಧ್ಯಕ್ಷರು : ನಾನು ಮಾತನಾಡಲು ಮತ್ತೊಬ್ಬರ ಹೆಸರನ್ನು ಕರೆಯುತ್ತೇನೆ. ಏಕೆಂದರೆ, ನಾನು ನಿಮಗೆ ಈಗಾಗಲೇ maximum time ಅನ್ನು ಕೊಟ್ಟಿದ್ದೇನೆ. ನೀವು ಈ ರೀತಿ ಮಾಡುವುದು ಸರಿಯಲ್ಲ. ಅದನ್ನು ನೀವೇ ಅರ್ಥ ಮಾಡಿಕೊಳ್ಳಬೇಕು. You are a senior leader. ಮಂತ್ರಿಗಳಾಗಿ ಸಹ ನೀವು ಕೆಲಸ ಮಾಡಿದ್ದೀರಿ. You have to understand the limitations.

ಶ್ರೀ ಹೆಚ್.ಡಿ.ರೇವಣ್ಣ : ಕೊನೆಯದಾಗಿ, ಒಂದು important ವಿಷಯವೇ ಬಿಟ್ಟು ಹೋಗಿದೆ. ದಯವಿಟ್ಟು ಅದನ್ನು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಅಧ್ಯಕ್ಷರು : ಚರ್ಚೆ ನಡೆಸಲು ನಿಮ್ಮ ಪಕ್ಷಕ್ಕೆ total ಆಗಿ ಎರಡು ಗಂಟೆಗಳ ಕಾಲಾವಕಾಶ ನೀಡಲಾಗಿತ್ತು. ಅದರಲ್ಲಿ ನೀವು ಎರಡು ಗಂಟೆ ಮಾತನಾಡಿದ್ದೀರಿ, ಉಳಿದವರು ಇನ್ನೆರಡು ಗಂಟೆಗಳ ಕಾಲ ಮಾತನಾಡಿದ್ದಾರೆ. ದಯವಿಟ್ಟು ಸದನ ನಡೆಸುವ ನನ್ನ ಕಷ್ಟವನ್ನು ತಾವು ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು : Senior leader ಗಳಾದ ತಾವೇ ಅರ್ಥ ಮಾಡಿಕೊಳ್ಳುವುದಿಲ್ಲವೆಂದರೆ ಹೇಗೆ? ಮತ್ತೆ ತಮ್ಮ ಭಾಷಣ continue ಮಾಡಬೇಡಿ, ದಯವಿಟ್ಟು ಅದನ್ನು ಮುಗಿಸಿಬಿಡಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಟ್ಟಾ ಸುಬ್ರಹ್ಮಣ್ಯನಾಯ್ಡುರವರು......

ಅಧ್ಯಕ್ಷರು : ಅವರ ವಿಷಯವನ್ನು ಬಿಟ್ಟುಬಿಡಿ. ಇನ್ನೂ ಮಾತನಾಡಬೇಕಾಗಿರುವ ಬೇರೆ ಶಾಸಕರಿದ್ದಾರೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಿ. ಅವರಿಗೂ ಅವಕಾಶ ಕೊಡಬೇಕಾಗಿದೆ. ದಯವಿಟ್ಟು ತಾವು ಬೇಗ ಮುಗಿಸಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲೇ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕಳೆದ ವಿಧಾನಸಭೆ ಅಧಿವೇಶನದಲ್ಲಿ ಹಗರಣಗಳ ಚರ್ಚೆಗಾಗಿಯೇ ಅಧಿವೇಶನ ಕರೆಯುವುದಾಗಿ ಅವರಿಗೆ ಆಶ್ವಾಸನೆ ಕೊಟ್ಟಿದ್ದರು. ಸೋಮವಾರದಿಂದಲಾದರೂ ಈ ರಾಜ್ಯದಲ್ಲಿ ಭ್ರಷ್ಟಾಚಾರ ಯಾರ್ಯಾರು ಮಾಡಿದ್ದಾರೆ? ಯಾರ್ಯಾರ ಕಾಲದಲ್ಲಿ ಏನೇನು ಆಯಿತು? ಎಂದು ಚರ್ಚಿಸಲು ಅವಕಾಶ ಕೊಡಿ. ಹಿಂದಿನ 40 ವರ್ಷಗಳ ಹಗರಣಗಳ ಬಗ್ಗೆ ಟೈಪ್ ಮಾಡಿಸಿ, ಕಡತವನ್ನು ಸಿ.ಎಂ. ಸೆಕ್ರೆಟರಿಗೆ ಕೊಡಲಾಗಿದೆ. ಅದನ್ನು ತಾಕತ್ತು ಇದ್ದರೆ ಸದನದ ಮುಂದಿಡಲಿಕ್ಕೆ ಹೇಳಿ. ನಾವು ಆ ಬಗ್ಗೆ ಚರ್ಚೆ ಮಾಡುವುದಕ್ಕೆ ರೆಡಿ ಇದ್ದೇವೆ. ಕಳೆದ ವಿಧಾನ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಹಗರಣಗಳ ಚರ್ಚೆಗೆಂದೇ ಮೂರು

ದಿವಸ ಸದನ ಕರೆಯುವುದಾಗಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳಿದ್ದರು. ಮಾನ್ಯ ಸಿದ್ದರಾಮಯ್ಯನವರು ಅದಕ್ಕೆ ಒಪ್ಪಿ, ಅದಕ್ಕಾಗಿ ಡೇಟ್ಸ್ ಫಿಕ್ಸ್ ಮಾಡಿ ಎಂದು ಹೇಳಿದ್ದರು. ಸೋಮವಾರದಿಂದ ಸಮಯ ನಿಗದಿ ಮಾಡಿ. ಯಾವ್ಯಾವ ಹಗರಣಗಳಿವೆ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ರೆಡಿ ಇದ್ದೇವೆ. ಸರ್ಕಾರದವರೂ ಸಹ ಈ ಬಗ್ಗೆ ದಯಮಾಡಿ ತಯಾರಾಗಿರಿ.

ಶ್ರೀ ಹೆಚ್.ಡಿ.ರೇವಣ್ಣ : ಇಲ್ಲದೇ ಹೋದರೆ ನೀವು ಭ್ರಷ್ಟರೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಕಟ್ಟಾ ಸುಬ್ರಹಣ್ಯ ನಾಯ್ಡು (ಅಬಕಾರಿ ಮಂತ್ರಿಗಳು) : ಯಾರ್ಯಾರು ಯಾವ್ಯಾವ ಕಾಲದಲ್ಲಾದರೂ ಇರಲಿ, ನಾವು ಅದಕ್ಕೆ ತಯಾರು, ನಾವು ಯಾವ ಟೈಂನಲ್ಲಿ ಬೇಕಾದರೂ ತಯಾರು.

ಶ್ರೀ ಹೆಚ್.ಡಿ.ರೇವಣ್ಣ : ನಾವು ತನಿಖೆಗೆ ಸಿದ್ದರಿದ್ದೇವೆ, ಮಾನ್ಯ ಸಭಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ) : ಮಾನ್ಯ ಸಭಾಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಸಲುವಾಗಿ ಚರ್ಚಿಸಲು ನಮ್ಮ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಅಧಿವೇಶನ ಕರೆದಿರುವುದನ್ನು ಸ್ವಾಗತ ಮಾಡುತ್ತೇವೆ. ಈಗಾಗಲೇ ಸದನದಲ್ಲಿ ಹಲವಾರು ಜನ ಪ್ರಮುಖ ಮುಖಂಡರು, ಎಲ್ಲಾ ಪಕ್ಷದ ಸನ್ಮಾನ್ಯ ಶಾಸಕರು, ಪಂಚಾಯತ್ ರಾಜ್ ಮಸೂದೆಯ ಬಗ್ಗೆಯಾಗಲಿ, ಗ್ರಾಮೀಣಾಭಿವೃದ್ಧಿ, ಕೃಷಿ ಬಗ್ಗೆಯಾಗಲಿ ಸರ್ಕಾರಕ್ಕೆ ಸಾಕಷ್ಟು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಅವರೆಲ್ಲರಿಗೂ ಕೂಡ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ವ್ಯಕ್ತಪಡಿಸುತ್ತಿದ್ದೇನೆ. ಇಲ್ಲಿ ಕೆಲವು ವಿಚಾರಗಳನ್ನು ನಾನು ನನಗೆ ಕೊಟ್ಟಂಥ 10 ನಿಮಿಷದ ಅವಧಿಯಲ್ಲಿ ನನ್ನ ಕೆಲವೊಂದು ಅನುಭವದ ವಿಚಾರಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇನೆ. ಮಹಾತ್ಮ ಗಾಂಧೀಜಿಯವರ ಗ್ರಾಮ ರಾಜ್ಯಗಳು ನನಸಾಗಬೇಕಾದರೆ, ಹಳ್ಳಿಗಳ ಅಭಿವೃದ್ಧಿಯಾಗಬೇಕು, 100ಕ್ಕೆ 80% ಇರುವ ರೈತರು ಅಭಿವೃದ್ಧಿಯಾಗಬೇಕಾದಂಥ, ಉಪಯುಕ್ತವಾದಂಥ ಕಾರ್ಯಕ್ರಮಗಳನ್ನು ರೂಪಿಸುವುದು ಅತ್ಯಂತ ಅಗತ್ಯವಾಗಿದೆ. ಈ ಸಂದರ್ಭದಲ್ಲಿ ಕೆಲವೊಂದು ವಿಚಾರಗಳನ್ನು ಈ ಸನದ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಮೂಲಭೂತವಾಗಿ ಈ ಭ್ರಷ್ಟಾಚಾರದ ಬಗ್ಗೆ ಸಾಕಷ್ಟು ಜನ ಮಾತನಾಡುತ್ತೇವೆ, ಭ್ರಷ್ಟಾಚಾರ ಆಗಬಾರದು, ಕಡಿವಾಣ ಹಾಕಬೇಕು, ಎಲ್ಲಾ ಸರ್ಕಾರದವರು, ಮುಖ್ಯಮಂತ್ರಿಗಳು ಸೇರಿದಂತೆ ಎಲ್ಲರೂ ಘೋಷಣೆ ಮಾಡಿದರು ಕೂಡಾ ಅದಕ್ಕೆ ಕಡಿವಾಣ ಹಾಕುವುದಕ್ಕಾಗುತ್ತಿಲ್ಲ. ಅದಕ್ಕಾಗಿ ಈ ಸಂದರ್ಭದಲ್ಲಿ ಚುನಾವಣಾ ನೀತಿಯನ್ನು ಬದಲಾವಣೆ ಮಾಡಬೇಕಾದರೆ, ಗ್ರಾಮೀಣ ಮಟ್ಟದಲ್ಲಿ ತಾವು ನೋಡಿ, ಪಂಚಾಯತ್ ಚುನಾವಣೆಗಳಾಗುತ್ತವೆ, ಜಿಲ್ಲಾ ಪಂಚಾಯತ್ ಚುನಾವಣೆಗಳಾಗುತ್ತವೆ, ಗ್ರಾಮ ಪಂಚಾಯತ್ ಸೇರಿದಂತೆ ಬೇರೆ ಬೇರೆ ಚುನಾವಣೆಗಳಾಗುತ್ತವೆ, ಸಿಕ್ಕಾಬಟ್ಟೆ ಹಣ ಖರ್ಚು ಮಾಡುವಂಥ ಪರಿಸ್ಥಿತಿ ಇದೆ. ಒಂದು ಕಾಲದಲ್ಲಿ ಹಣವನ್ನೇ ಖರ್ಚು ಮಾಡದ ರೀತಿಯಲ್ಲಿ ಚುನಾವಣೆಗಳಾಗುತ್ತಿತ್ತು. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲವರ್ಧನೆ ಮಾಡುವ ವಿಚಾರವನ್ನು ಇಟ್ಟುಕೊಂಡು ಹೋಗಬೇಕಾದರೆ, ಚುನಾವಣೆಗಳಿಗೆ ಒಂದು ನೀತಿ ರೂಪಿಸಬೇಕು, ಸರ್ಕಾರದವರೇ ಚುನಾವಣೆ ವೆಚ್ಚವನ್ನು ಭರಿಸಬೇಕು ಎಂದು ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಸಣ್ಣ ಚುನಾವಣೆಗಳಾದ, ಪಂಚಾಯತ್ ಚುನಾವಣೆಗಳಿರಬಹುದು, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಗಳಿರಬಹುದು, ಸಿಕ್ಕಾಪಟ್ಟೆ ಹಣಖರ್ಚು ಮಾಡುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಈ ಪ್ರಜಾಪ್ರಭುತ್ವದಲ್ಲಿ ಏನಾದರೂ ಹೊಸ ರೂಪದ ಬದಲಾವಣೆ ತರಬೇಕೆಂದರೆ, ಚುನಾವಣೆಗಳಲ್ಲಿ ಕಡ್ಡಾಯವಾಗಿ ಕೆಲವೊಂದು ಬದಲಾವಣೆಗಳನ್ನು ಮಾಡಿ, ಚುನಾವಣೆ ಖರ್ಚು ಏನಿದೆ ಅದನ್ನು ಸರ್ಕಾರದವರೇ ಭರಿಸಿಕೊಂಡು ಚುನಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಈ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದಕ್ಕೆ ಸಾಧ್ಯವಾಗಬಹು ದೆನ್ನುವ ವಿಚರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಎರಡನೆಯದಾಗಿ, ಇವತ್ತು ನಿಜವಾಗಿ ಗ್ರಾಮಪಂಚಾಯತಿಗಳ ಬಲವರ್ಧನೆ ಯಾಗಬೇಕು, ಎಲ್ಲಿಯವರೆಗೆ ನಾವು ಗ್ರಾ ಪಂಚಾಯತಿಗಳನ್ನು ಅಭಿವೃದ್ಧಿ ಮಾಡುವುದಿಲ್ಲ ಅಲ್ಲಿಯವರೆಗೆ ಹಳ್ಳಿಗಳು ಉದ್ಧಾರವಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಮೂಲಭೂತವಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಉದಾಹರಣೆಗೆ ಹೇಳುವುದಾದರೆ ಪ್ರತಿ ಗ್ರಾಮ ಪಂಚಾಯತಿ ಹೆಡ್ ಕ್ವಾರ್ಟರ್‌ಗೆ ಪ್ರಾಥಮಿಕ ಆರೋಗ್ಯ ಕೇಂದ್ರವಿರಬೇಕು, ಪ್ರೌಢಶಾಲೆಗಳಿರಬೇಕು, ಅದರ ಜೊತೆಗೆ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳಿರಬೇಕು, ಪವರ್ ಸ್ಟೇಷನ್ ಆಗಬೇಕು,

ಪೋಲಿಸ್ ಸ್ಟೇಷನ್ ಆಗಬೇಕು. ಪ್ರತಿ ಗ್ರಾಮದಲ್ಲಿರುವ ಕುಡಿಯುವ ನೀರಿನ ಯೋಜನೆಗಳಿಗೆ ಎಲ್ಲಾ ಗ್ರಾಮಗಳಿಗೆ ಸರ್ಕಾರ ಇಷ್ಟೊಂದು ಖರ್ಚು ಮಾಡಿದರೂ ಕೂಡ ಇಲ್ಲಿಯವರೆವಿಗೂ ನಾವು ಕುಡಿಯಲು ಶುದ್ಧ ನೀರನ್ನು ಕೊಡಲಾಗಲಿಲ್ಲ. 63 ವರ್ಷಗಳೇ ಕಳೆದರೂ ಕೂಡ ನಾವು ಎಷ್ಟೋ ಸಾರಿ ಗ್ರಾಮಗಳಿಗೆ ಹೋದರೆ ನೀರಿನ ಸಮಸ್ಯೆ ಬಹಳ ಕೇಳಿ ಬರುತ್ತಿದೆ, ರಸ್ತೆ ಸಮಸ್ಯೆಗಳು ಸರಿಯಾದ ರೀತಿಯಲ್ಲಿ ಪರಿಹಾರವಾಗಿಲ್ಲ. ಅದರ ಸಲುವಾಗಿ ಪಂಚಾಯತ್ ಹೆಡ್ ಕ್ವಾರ್ಟರ್ ಬಲವರ್ಧನೆ ಮಾಡುವ ಸಲುವಾಗಿ ಒಂದು ಕಾರ್ಯಕ್ರಮ ರೂಪಿಸಬೇಕು. ನಾನು ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಉದಾಹರಣೆಗೆ ಹೇಳಬೇಕೆಂದರೆ, ಒಂದು ಪಂಚಾಯಿತಿಯಲ್ಲಿ ವೆಟನರಿ ಆಸ್ಪತ್ರೆ ಬೇರೆ ಊರಿನಲ್ಲಿರುತ್ತದೆ, ಅದು ಪಂಚಾಯಿತಿ ಹೆಡ್ ಕ್ವಾರ್ಟರ್‌ನಲ್ಲಿ ಇದ್ದರೆ ಎಲ್ಲರಿಗೂ ಅದರ ಅನುಕೂಲ ಸಿಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಹೈಸ್ಕೂಲ್, ಹಾಸ್ಟೆಲ್‌ಗಳು, ವಸತಿಗೃಹಗಳು, ಪವರ್ ಸ್ಟೇಷನ್ ಮತ್ತು ಸಾರ್ವಜನಿಕ ರಸ್ತೆ ಇವೆಲ್ಲವೂ ಒಂದೆಡೆ ಇದ್ದರೆ ಒಳ್ಳೆಯದಾಗಬಹುದೆನ್ನುವ ಉಪಯುಕ್ತವಾದ ವಿಚಾರಗಳನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. ಇನ್ನು ಪ್ರತಿಯೊಂದು ರೆವಿನ್ಯೂ ಸರ್ಕಲ್, ಹೋಬಳಿಗಳಲ್ಲಿ ಸ್ಟೇಡಿಯಂ ನಿರ್ಮಾಣ ವಾಗಬೇಕು. ನಾವು ಸಣ್ಣ ಗ್ರಾಮಾಭಿವೃದ್ಧಿಯಾಗಬೇಕು, ಕಲೆಗಳು ಬೆಳೆಯಬೇಕು, ವಾಲಿವಾಲ್ ಆಡುವುದಾಗಲಿ, ಕುಸ್ತಿಯಾಡುವುದಾಗಲಿ, ಹಳ್ಳಿಗಳಲ್ಲಿರುವ ಬೇರೆ ಬೇರೆ ಕ್ರೀಡೆಗಳಲ್ಲಿ ಜನರಿಗೆ ಪ್ರೋತ್ಸಾಹ ಕೊಡಬೇಕು. ಉದಾಹರಣೆಗೆ ಹೇಳುವುದಾದರೆ, ಇವತ್ತು ಎಲ್ಲಾ ಗೆದ್ದ ಶಾಸಕರು ಇಲ್ಲಿ ಕುಳಿತಿದ್ದಾರೆ, ತಾಲ್ಲೂಕು ಮಟ್ಟದಲ್ಲೂ ಕೂಡ ಇವತ್ತು ಕ್ರೀಡಾಂಗಣವಿಲ್ಲ, ಇದರಿಂದ ಅಂಥ ಒಂಧು ಕಲ್ಚರ್ ಬೆಳೆಯುವುದಕ್ಕಾಗುವುದಿಲ್ಲ. ಆ ಒಂದು ವಾತಾವರಣ ಬೆಳೆಯಬೇಕೆಂದರೆ, ನಾವು ಎಷ್ಟೆಷ್ಟೋ ಯೋಜನೆಗಳಿಗೆ ಹಣ ಖರ್ಚು ಮಾಡುತ್ತೇವೆ, ಹುಡುಗ ಹುಡುಗಿಯರಿಗೆ ಆಟವಾಡಲು ಉತ್ತೇಜನ ಕೊಡುವ ದೃಷ್ಟಿಯಿಂದ ಕನಿಷ್ಠ ಪಕ್ಷ ಪ್ರತಿಯೊಂದು ರೆವಿನ್ಯೂ ಸರ್ಕಲ್‌ಗೆ ಸ್ಟೇಡಿಯಂ ನಿರ್ಮಾಣ ಮಾಡಬೇಕೆಂದು ನಾನು ನಮ್ಮ ಸರ್ಕಾರಕ್ಕೆ ಒತ್ತಾಯ ಮಾಡಲು ಬಯಸುತ್ತೇನೆ. ಮುಖ್ಯವಾಗಿ ಗ್ರಾಮ ಪಂಚಾಯತಿಗಳನ್ನು ಬಲವರ್ಧನೆ ಮಾಡಬೇಕೆಂದರೆ, ಅಲ್ಲಿ ಪಂಚಾಯಿತಿ ಸೆಕ್ರೆಟರಿ ಇರುವುದಿಲ್ಲ, ಇರುವಂಥ ರೆವಿನ್ಯೂ ಇನ್ಸ್‌ಪೆಕ್ಟರ್ಸ್ ಇರುವುದಿಲ್ಲ, ಗ್ರಾಮ ಸೇವಕರೂ ಇರುವುದಿಲ್ಲ. 6 ದಿವಸಗಳ ಕಾಲ ಚರ್ಚೆ ಮಾಡಲು ತಾವು ಅಧಿವೇಶವನ್ನು

ಕರೆದಿದ್ದೀರಿ, ಈ ಅಧಿವೇಶನದ ಮೂಲಕ ನಾನು ಮನವಿ ಮಾಡುವುದೇನೆಂದರೆ, ಪಂಚಾಯತ್ ಅನ್ನು ಬಲವರ್ಧನೆ ಮಾಡಬೇಕೆಂದರೆ, ಈಗಾಗಲೇ ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಪ್ರಕಟಿಸಿದ್ದಾರೆ, ಪ್ರತಿ ಗ್ರಾಮ ಪಂಚಾಯತಿಗೆ ಸೆಕ್ರೆಟರಿ ನೇಮಕಾತಿ ಯಾಗಬೇಕು, ಅಭಿವೃದ್ಧಿ ಅಧಿಕಾರಿಗಳ ನೇಮಕಾತಿಯಾಗಬೇಕು, ಅಕೌಂಟೆಂಟ್ ನೇಮಕಾತಿ ಮಾಡಲು ಏನು ಪ್ರೋಗ್ರಾಂ ಹಾಕಿದ್ದಾರೆ, ಅದು ಆದಷ್ಟು ಬೇಗನೆ ಜಾರಿಯಾದರೆ, ಗ್ರಾಮೀಣ ಭಾಗದ ಜನಸಾಮಾನ್ಯರಿಗೆ ಸರ್ಕಾರದ ಸೌಲಭ್ಯ ಕೊಡುವುದಕ್ಕೆ ಸಾಧ್ಯವಾಗಬಹುದು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿಯಾಗಿ ಗ್ರಾಮ ಪಂಚಾಯತಿಗಳಿಗೆ ಮುಖ್ಯ ಕಾರ್ಯನಿರ್ವಹಣಾ ಧಿಕಾರಿಗಳು ಪದೇ ಪದೇ ವಿಸಿಟ್ ಮಾಡಬೇಕು, ಡಿಪಾರ್ಟ್‌ಮೆಂಟ್ ರೆವ್ಯೂ ಮಾಡಬೇಕು. ನಾವು ನೋಡುತ್ತಿರುವಂತೆ ಡಿಪಾರ್ಟ್‌ಮೆಂಟ್ ರೆವ್ಯೂ ಬಹಳ ಕಡಿಮೆಯಾಗಿದೆ. ಎಲ್ಲಾ ಸಂಬಂಧಪಟ್ಟ ಮಂತ್ರಿಗಳು, ಶಾಸಕರು, ಕೆಡಿಬಿ ಮೀಟಿಂಗ್‌ನಲ್ಲಾಗಲಿ ರೆವ್ಯೂ ಮಾಡಿದರೆ, ಅಲ್ಲಿರುವ ಸಮಸ್ಯೆಗಳು ಶಾಸಕರಿಗೂ ಗೊತ್ತಾಗುತ್ತದೆ, ಮತ್ತೆ ಅದಕ್ಕೆ ಏನು ಮಾಡಬಹುದೆನ್ನುವ ವಿಚಾರ ನಮಗೆ ಹೊಳೆಯುವುದಕ್ಕೆ ಸಾಧ್ಯವಾಗುತ್ತದೆ. ದೊಡ್ಡ ದೊಡ್ಡ ಅಧಿಕಾರಿಗಳ ಗ್ರಾಮಮಟ್ಟದ ಸಮಸ್ಯೆಗಳಿಗೆ ಸ್ಪಂದಿಸಿಕೊಂಡು ಹೋಗಬೇಕಾದರೆ ಅಲ್ಲಿರುವ ಜಿಲ್ಲಾಧಿಕಾರಿ ಇರಬಹುದು, ಸಿ.ಇ.ಓ ಅಧಿಕಾರಿಗಳು ಇರಬಹುದು, ಎಲ್ಲಾ ಪಂಚಾಯಿತಿಗಳಿಗೆ ಭೇಟಿ ಕೊಡುವುದರಿಂದ ಪಂಚಾಯತಿಗಳಿಗೆ ಶಕ್ತಿ ತುಂಬುವುದಕ್ಕೆ ಸಾಧ್ಯವಾಗಬಹುದೆನ್ನುವ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಬಹಳಷ್ಟು ಶೌಚಾಲಯಗಳ ಕೊರತೆ ಇದೆ ಎಂದು ಬಹಳಷ್ಟು ಸದಸ್ಯರು ಹೇಳಿದರು, ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ಶೌಚಾಲಯಗಳ ಕೊರತೆ ಇದೆ. ಅದಕ್ಕೆ ಏನಾದರೂ ಒಂದು ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದ ಎಲ್ಲಾ ಪ್ರತಿಯೊಂದು ಹಳ್ಳಿಯಲ್ಲಿ ಮತ್ತು ಪಟ್ಟಣಗಳಲ್ಲೂ ಸಹಿತ ಇವತ್ತು ಶೌಚಾಲಯಗಳ ಕೊರತೆ ಇದೆ. ಈ ಕೊರತೆಯನ್ನು ನೀಗಿಸಬೇಕಾದರೆ, ಬೆಂಗಳೂರಿನಲ್ಲಿ ನಿರ್ಮಲ ಶೌಚಾಲಯ ವಿರುವಂತೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಎಲ್ಲಾ ಗ್ರಾಮಗಳಲ್ಲಿ ರೂಪಿಸುವುದರಿಂದ ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ, ಸರ್ಕಾರದ ಸೌಲಭ್ಯಗಳು ಸಿಗಬಹುದೆನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಹಾಗೆ ಪ್ರತಿಯೊಂದು ಹರಿಜನವಾಡದಲ್ಲೂ ಕೂಡ

ಅಂಬೇಡ್ಕರ್ ಭವನವನ್ನು ನಿರ್ಮಾಣ ಮಾಡಬೇಕು. ಬಹಳಷ್ಟು ಕಡೆ ನಾವು ಬೇರೆ ಬೇರೆ ಸಾರ್ವಜನಿಕ ಸಮುದಾಯ ಭವನಗಳನ್ನು ಕಟ್ಟಿದ್ದೇವೆ. ಹರಿಜನ ಗಿರಿಜನರು ದೊಡ್ಡ ಪ್ರಮಾಣದಲ್ಲಿ ಸಮಾರಂಭಗಳನ್ನು ಮಾಡಬೇಕಾದರೆ ಹರಿಜನವಾಡದಲ್ಲಿ ಅಂಬೇಡ್ಕರ್ ಭವನವನ್ನು ಕಡ್ಡಾಯವಾಗಿ ಸರ್ಕಾರದ ನಿರ್ಮಿಸಬೇಕು. ಹಳ್ಳಿಯಲ್ಲಿರುವ ಹರಿಜನ ಗಿರಿಜನರ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂದರೆ ಪ್ರತಿಯೊಂದು ಗ್ರಾಮಕ್ಕೆ ಅಂಬೇಡ್ಕರ್ ಭವನ ಕೊಡಬೇಕೆಂದು ಈ ಒಂದು ವೇದಿಕೆಯ ಮೂಲಕ ನಾನು ಸರ್ಕಾರಕ್ಕೆ ಮನವಿ ಮಾಡಲು ಬಯಸುತ್ತೇನೆ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಎಷ್ಟೊಂದು ತೊಂದರೆ ಇದೆ, ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ವೆಟರ್ನರಿ ದವಾಖಾನೆಗಳಿಲ್ಲ. ನಮ್ಮ ಬಸವಕಲ್ಯಾಣ ತಾಲ್ಲೂಕಿನ ಉದಾಹರಣೆಯನ್ನು ಕೊಡಬೇಕೆಂದರೆ, ನಮ್ಮ ತಾಲ್ಲೂಕಿನಲ್ಲಿ ಸುಮಾರು 15 ವೆಟರ್ನರಿ ಆಸ್ಪತ್ರೆಗಳಿವೆ, 36 ಪಂಚಾಯಿತಿಗಳು ಬರುತ್ತವೆ. ಪ್ರತಿಯೊಂದು ಪಂಚಾಯಿತಿಯಲ್ಲಿ ವೆಟರ್ನರಿ, ಸರ್ಕಾರಿ ಆಸ್ಪತ್ರೆ ಆಗಬೇಕಾದ ಅವಶ್ಯಕತೆ ಇದೆ. ಜಾನುವಾರುಗಳ ರಕ್ಷಣೆ ಮಾಡುವುದು ನಮ್ಮ ಕರ್ತವ್ಯವೆಂದು ಹೇಳುತ್ತೇವೆ, ಜಾನುವಾರುಗಳ ಆರೋಗ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಎಲ್ಲಿಯೂ ಕೂಡ ವೆಟರ್ನರಿ ಆಸ್ಪತ್ರೆಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಆದುದರಿಂದ ಪ್ರತಿಯೊಂದು ಪಂಚಾಯತಿಯಲ್ಲೂ ಕೂಡ ಕಡ್ಡಾಯವಾಗಿ ಸರ್ಕಾರಿ ದವಾಖಾನೆ ಇದ್ದರೂ ಕೂಡ ವೆಟರ್ನರಿ ಆಸ್ಪತ್ರೆಗಳನ್ನು ನಿರ್ಮಿಸಲು ಮಾನ್ಯ ಮುಖ್ಯಮಂತ್ರಿಗಳು ಕರೆದಂತೆ ಈ ಚರ್ಚೆಯ ಫಲವಾಗಿ ಬಜೆಟ್ ಪ್ರಾವಿಷನ್ ಮಾಡಿಕೊಂಡು ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಬರಗಾಲಕ್ಕೆ ತುತ್ತಾದ ಹಳ್ಳಿಗಳಲ್ಲಿ ಅಲ್ಲಿದ್ದಂಥ ಎಲ್ಲಾ ಕೆರೆಗಳು ಹಾಳಾಗಿ ಹೋಗಿವೆ, ನಮ್ಮಲ್ಲಿರುವ ಗಿಡಗಳನ್ನೆಲ್ಲಾ ಕಡಿದಿದ್ದಾರೆ, ಫಾರೆಸ್ಟ್ ಎಲ್ಲಾ ಹಾಳಾಗಿದೆ. ಅದಕ್ಕೆ ಹೆಚ್ಚಿನ ಉತ್ತೇಜನ ಕೊಡುವ ದೃಷ್ಟಿಯಿಂದ, ಎಲ್ಲಾ ಗ್ರಾಮಗಳಿಗೆ, ಗುಡ್ಡಗಾಡು ಪ್ರದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಪ್ಲಾಂಟೇಷನ್ ಮಾಡುವಂಥ ಕಾರ್ಯಕ್ರಮ ಮತ್ತು ಪ್ರತಿಯೊಂದು ಗ್ರಾಮಕ್ಕೆ ಕೂಡಾ ಉತ್ತೇಜನವನ್ನು ಕೊಡಬೇಕು. ಮಾನ್ಯ ಶಾಸಕರು ಮಾತನಾಡುವಾಗ ಹೇಳಿದರು, ದೊಡ್ಡ ಕೆರೆಗಳು ಮಾಡುವುದಕ್ಕಿಂತಲೂ ವಿಶೇಷವಾಗಿ ಸಣ್ಣ ಕೆರೆಗಳು ನಿರ್ಮಾಣ ಮಾಡಬೇಕಾದುದು ಅವಶ್ಯ ಇದೆ. Future generation

ಗೋಸ್ಕರ ಪ್ರತಿ ಗ್ರಾಮಕ್ಕೂ ಸಹಿತ ಟೈಮ್ ಬೌಂಡ್ ಫಿಕ್ಸ್ ಮಾಡಿ ಪ್ರತಿ ಗ್ರಾಮಕ್ಕೆ ಒಂದು ಕೆರೆ ಮಾಡಬೇಕು. ಯಾವ ರೀತಿ ನಾವು ಸ್ಕೂಲ್ ಬಿಲ್ಡಿಂಗ್ ಮಾಡಿದ್ದೇವೆ ಮತ್ತು ಬೇರೆ ಬೇರೆ ಹೆಣ್ಣು ಮಕ್ಕಳಿಗೆ ಏನು ಶಿಕ್ಷಣ ಕೊಡುತ್ತಿದ್ದೇವೆ, ಅದೇ ಪದ್ದತಿಯಲ್ಲಿ ಪ್ರತೀ ಗ್ರಾಮಕ್ಕೂ ಕೂಡ ಕಡ್ಡಾಯವಾಗಿ ಸಣ್ಣ ಕೆರೆಗಳನ್ನು ನಿರ್ಮಾಣ ಮಾಡುವ ಮಹತ್ವದ ಕಾರ್ಯ ನಮ್ಮ ಸರ್ಕಾರದಿಂದ ಆಗಬೇಕು. ಅದಕ್ಕೆ ಹೆಚ್ಚಿನ ಹಣಕಾಸಿನ ನೆರವು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮಗೆ ಹೇಳಬಯಸುತ್ತೇನೆ. ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡಿಗೆ ಒಂದೊಂದರಂತೆ ಹೊಲಿಗೆ ತರಬೇತಿ ಕೇಂದ್ರಗಳಿವೆ. ಹೆಣ್ಣು ಮಕ್ಕಳಿಗೆ ನಾವು 50% ರಿಸರ್ವೇಷನ್ ಕೊಡುವಂತಹ ಸಂದರ್ಭದಲ್ಲಿ ಹಳ್ಳಿಗಾಡಿನ ಹೆಣ್ಣು ಮಕ್ಕಳಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ, ಸಣ್ಣ ಗುಡಿ ಕೈಗಾರಿಕೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರತಿಯೊಂದು ಪಂಚಾಯಿತಿಗೂ ಕೂಡ ಹೊಲಿಗೆ ಕೇಂದ್ರಗಳನ್ನು ಮಂಜೂರು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ಅದೇ ಪ್ರಕಾರ ಖಾದಿ ಗ್ರಾಮೋದ್ಯೋಗದ ವತಿಯಿಂದ ಗುಡಿ ಕೈಗಾರಿಕೆಗೆ ಹೆಚ್ಚಿನ ಉತ್ತೇಜನ ಕೊಡಬೇಕು. ಬೆಲ್ಲ ತಯಾರು ಮಾಡುವುದು ಇರಬಹುದು, ಎಣ್ಣೆ ತಯಾರು ಮಾಡುವುದು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಬರುವಂತಹ ಹಲವಾರು ಸಣ್ಣ ಮಟ್ಟ ಕೈಗಾರಿಕೆಗಳು ಏನಿವೆ, ಅದಕ್ಕೆ ಹೆಚ್ಚಿನ ಪ್ರಮಾಣದ ಸಬ್ಸಿಡಿ ಕೊಡುವುದು ಆಗಲಿ, ಅವರಿಗೆ ಸಾಲ ಕೊಡುವಂತಹ ಕಾರ್ಯಕ್ರಮವನ್ನು ಸಹಿತ ರೂಪಿಸಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ರೈತರು ಪದೇ ಪದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಈ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಏನಾದರೂ ಒಂದು ಕಡಿವಾಣ ಹಾಕಬೇಕು. ಎಲ್ಲ ಒಬ್ಬರ ಮೇಲೊಬ್ಬರು ಹಾಕುವುದು ಬೇಡ. ಕೇಂದ್ರ ಸರ್ಕಾರ ಇರಲಿ, ರಾಜ್ಯ ಸರ್ಕಾರ ಇರಲಿ, ರೈತರು ಯಾವಾಗಲೂ ಕೂಡ ಅವರ ಸಂಕಷ್ಟದ ಪರಿಸ್ಥಿತಿಯಲ್ಲಿ ನಿಜವಾದ ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಂತಹ ಪ್ರಕರಣಗಳು ಏನು ಬರುತ್ತಿವೆ, ಅಂತಹವರ ಕುಟುಂಬಕ್ಕಾದರೂ ಒಂದು ಸರ್ಕಾರಿ ಉದ್ಯೋಗ ನೀಡಬೇಕು. ಆತ್ಮಹತ್ಯೆ ಮಾಡಿಕೊಂಡಂತಹವರ ಕುಟುಂಬದಲ್ಲಿ ವಿದ್ಯಾವಂತರು ಇದ್ದರೆ ಅವರಿಗೆ ಒಂದು ಸರ್ಕಾರಿ ಉದ್ಯೋಗ ದೊರಕಿಸಿಕೊಡಬೇಕು. ಪ್ರವಾಸೋದ್ಯಮದ ಬಗ್ಗೆ ಹೇಳಬೇಕೆಂದರೆ ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ಸೌಂದರ್ಯದ ಪ್ರದೇಶಗಳಿವೆ. ಪ್ರವಾಸೋದ್ಯಮದ ಬಗ್ಗೆ ಯಾರೂ ಗಮನ ಕೊಡುತ್ತಿಲ್ಲ.

ಪ್ರವಾಸೋದ್ಯಮದಿಂದ ಸರ್ಕಾರಕ್ಕೆ ಸಾಕಷ್ಟು ವರಮಾನ ಬರುತ್ತಿದೆ. ಇಂತಹ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ಒತ್ತನ್ನು ನೀಡಬೇಕು. ಬೀದರ್, ಗುಲ್ಬರ್ಗ ಮತ್ತು ಬಿಜಾಪುರ ಗೋಳಗುಮ್ಮಟ ಇದೆ. ಹಲವಾರು ದೊಡ್ಡ ದೊಡ್ಡ ಪ್ರವಾಸಿ ಕೇಂದ್ರಗಳಿವೆ. ಪ್ರವಾಸೋದ್ಯಮಕ್ಕೆ ಹೆಚ್ಚಿನ ಹಣಕಾಸನ್ನು ಒದಗಿಸಬೇಕೆಂದು ತಮಗೆ ಹೇಳಿ, ಕೊನೆಯದಾಗಿ ನಮ್ಮ ಬೀದರ್ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಬಹಳ ದೊಡ್ಡ ಪ್ರಮಾಣದಲ್ಲಿ ರೈತರಿಗೋಸ್ಕರ ಕೆಲಸ ಮಾಡುತ್ತಿವೆ. ಸಕ್ಕರೆ ಕಾರ್ಖಾನೆಗಳ ಸ್ಥಿತಿ ಚಿಂತಾಜನಕವಾಗಿದೆ. ಮೊನ್ನೆ ಕೂಡ ಮಾನ್ಯ ಈಶ್ವರ ಖಂಡ್ರೆಯವರು ಮತ್ತು ನಾವು ಸೇರಿ ಭಾಲ್ಕಿಯಲ್ಲಿ ರೈತ ಮುಖಂಡರ ಸಮಾವೇಶ ಮಾಡಿದ್ದೆವು. ಅದರಲ್ಲಿ ಬಂದಂತಹ ಮುಖ್ಯವಾದ ಸಲಹೆ ಅವರಿಗೆ ಹೆಚ್ಚಿನ ಹಣಕಾಸಿನ ತೊಂದರೆ ಇದೆ. ಸಕ್ಕರೆ ಕಾರ್ಖಾನೆಗಳಿಗೆ ಕಷ್ಟ ಇದೆ. ಇದು ರೈತರಿಗೆ ಉಪಯೋಗವಾಗುವಂತಹ ಕಾರ್ಖಾನೆಗಳು. ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೂ ಐದೈದು ಕೋಟಿ ರೂ. ಹಣ ಸರ್ಕಾರದವರು ಗ್ರ್ಯಾಂಟ್ ಆಗಲಿ ಅಥವಾ ಲೋನ್ ಮುಖಾಂತರವಾಗಲಿ ಕೊಡಬೇಕು, ರೈತರಿಗೆ ಉತ್ತೇಜನ ಮಾಡಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಮನವಿ ಮಾಡಿ, ನಾನು ಐದಾರು ಸಾರಿ ಚುನಾಯಿತರಾಗಿ ಬಂದಿದ್ದೇನೆ. ಅಧಿವೇಶನದಲ್ಲಿ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಸಿಗುತ್ತಿಲ್ಲ. ಅಸೆಂಬ್ಲಿ ಕೆಲವೊಂದು ಜನರ ಸ್ವತ್ತಾಗಬಾರದು. ಎಲ್ಲಾ ಶಾಸಕರಿಗೂ ಕೂಡ ತಾವು ದಯಮಾಡಿ ಮುಂಬರುವ ಅಧಿವೇಶನದಲ್ಲಿ ಮಾತನಾಡಲು ಅವಕಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಮ್ರ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ನಿಮ್ಮ ನಾಯಕರು ಎರಡು ಗಂಟೆ ಮಾತನಾಡಿದ್ದಾರೆ, ಆಗುವುದಿಲ್ಲ. ಬಾಲಕೃಷ್ಣರವರು ಒಂದು ಗಂಟೆ ಮಾತನಾಡಿದ ಮೇಲೆ ಇನ್ನು ಯಾರಿಗೆ ಮಾತನಾಡಲು ಅವಕಾಶ ಕೊಡುವುದಕ್ಕಾಗುತ್ತದೆ? ನಾಲ್ಕು ಗಂಟೆಗೆ ವಿರೋಧ ಪಕ್ಷದ ನಾಯಕರು ಮಾತನಾಡಬೇಕೆಂದು ನಾನು ಫಿಕ್ಸ್ ಮಾಡಿದ್ದೇನೆ. ಪದೇ ಪದೇ ಎಲ್ಲರೂ ಮಾತನಾಡಬೇಕೆಂದು ಹೇಳುತ್ತೀರಿ. ಎಲ್ಲದಕ್ಕೂ ನಮಗೆ ಒಂದು ತಾಳ್ಮೆ ಇದೆ. ನಿಮ್ಮ ನಾಯಕರು ಎರಡು ಗಂಟೆ ಮಾತನಾಡಿದಾಗ ನೀವು ಎದ್ದು ಅವರಿಗೆ ಕೇಳಿದಿರಾ? ಒಂದೇ ಸಮಯಕ್ಕೆ 225 ಜನರಿಗೆ ಅವಕಾಶ ಕೊಡಲಿಕ್ಕೆ ಸಾಧ್ಯ ಇದೆಯಾ? ನೀವು ಸೆಲೆಕ್ಟ್ ಮಾಡಿಕೊಳ್ಳಬೇಕು. ಬರಗಾಲದ ಮೇಲೆ ನಾಲ್ಕು ಜನ ಮಾತನಾಡಿ. ಎಲ್ಲರೂ ಇದರ ಮೇಲೆಯೇ ಮಾತನಾಡಬೇಕೆಂದೇನೂ ಇಲ್ಲ. ನಾಳೆ

ಸೋಮವಾರದಂದು ಬರಗಾಲದ ವಿಷಯ ಬಂದಾಗ 10 ಜನ ಬೇರೆಯವರು ಮಾತನಾಡಿ. ಬೇರೆ ಬೇರೆ ವಿಷಯ ಮಾತನಾಡಿ. ಎಲ್ಲರೂ ಒಂದೇ ಸಮಯಕ್ಕೆ ಮಾತನಾಡುವುದಕ್ಕೆ ಸಾಧ್ಯವಿಲ್ಲ. ನಿಮಗೆ ಬಿಟ್ಟಿದ್ದೇನೆ. ನಾನು ಬೇಕಾದಷ್ಟು ಸಮಯ ಕೊಡುವುದಕ್ಕೆ ತಯಾರಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಬೇಕು. ಸೋಮವಾರ 10.30ಕ್ಕೆ ಬೆಳಿಗ್ಗೆ ಪ್ರಾರಂಭವಾದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಇವತ್ತು ಸಾಯಂಕಾಲದವರೆಗೆ ನೀವೇ ಅಡ್ಜಸ್ಟ್ ಮಾಡಿಕೊಂಡು ಬಿಡಿ. ಹೇಗೆ ಮಾಡುತ್ತೀರಿ, ಮಾಡಿ. ಮಾನ್ಯ ವಿರೋಧ ಪಕ್ಷದ ನಾಯಕರೂ ಮಾತನಾಡಬೇಕು. ನೀವೂ ಮಾತನಾಡಬೇಕು. ಇಷ್ಟೆಲ್ಲಾ ಅವಕಶ ಕೊಟ್ಟಾಗಲೂ ಸಮಾಧಾನ ಇಲ್ಲವೆಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. we are helpless. ಎಲ್ಲರೂ ಐದೈದು ನಿಮಿಷ ಅಂದರೆ ಇನ್ನು ಎರಡು ಗಂಟೆ ಬೇಕು. ನೀವೇ ಡಿಸಿಷನ್ ತೆಗೆದುಕೊಳ್ಳಿ. ನೀವೇ ನಿರ್ಧಾರ ಮಾಡಿಕೊಳ್ಳಿ, ನಾನು ನಿಮಗೇ ಬಿಡುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ಕೆಲವು ಜನರಿಗೆ ಅವಕಾಶ ಮಾಡಿಕೊಡಿ. ನಾವೆಲ್ಲಾ ಇನ್ನೂ ಮಾತನಾಡಬೇಕು. ರಾತ್ರಿ ಎಂಟು ಗಂಟೆಯವರೆಗೆ ಬೇಕಾದರೆ ನಾವು ಕೂರುತ್ತೇವೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ಅವಕಾಶ ಕೊಡೋಣ. ಅಲ್ಲಿಯವರೆಗೆ ಎಲ್ಲರೂ ಇದ್ದರೆ ಅವಕಾಶ ಕೊಡೋಣ. ನೀವೇ ನಿರ್ಣಯ ಮಾಡಿಕೊಳ್ಳಿ. I am helpless. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದು ಬೇಡವೆಂದರೆ ಬಿಟ್ಟು ಬಿಡಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ದಯಮಾಡಿ ನನ್ನ ಸಮಯದ ಮಧ್ಯದಲ್ಲಿ interfere ಆಗಿದೆ. ಅದನ್ನು ರೆಕಾರ್ಡ್ ಮಾಡಬೇಕೆಂದು ದಯಮಾಡಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಆ ಪದ್ಧತಿ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಕೆಲವು ಸಲಹೆ ಕೊಟ್ಟಿರುವುದನ್ನು ರೆಕಾರ್ಡ್ ಮಾಡಿ.

ಅಧ್ಯಕ್ಷರು : ಮಾನ್ಯ ರೇವಣ್ಣರವರೇ, ಹೊಸ ಸಂಪ್ರದಾಯ ಹಾಕಬೇಡಿ. ಎಲ್ಲರೂ ಐದು ನಿಮಿಷ ಭಾಷಣ ಮಾಡುತ್ತಾರೆ, 10 ಪುಟದ್ದು

ನಮ್ಮ ಸಲಹೆ ಇದೆ, ಇದನ್ನು ರೆಕಾರ್ಡ್ ಮಾಡಿಕೊಳ್ಳಿ ಎಂದರೆ ಅದು ಹೊಸ ಸಂಪ್ರದಾಯ ಆಗುತ್ತದೆ. ಅದು ಬೇಡ.

ಶ್ರೀ ಹೆಚ್.ಡಿ.ರೇವಣ್ಣ : ಸಮಯ ಕೊಟ್ಟಿದ್ದೀರಿ, ಮಾತನಾಡುವುದಕ್ಕೆ ಅವಕಾಶ ಇದೆ, ದಯಮಾಡಿ ಅದನ್ನು ರೆಕಾರ್ಡ್ ಮಾಡಬೇಕು.

ಅಧ್ಯಕ್ಷರು : I will take decision. ಮಾನ್ಯ ಕೃಷ್ಣ ಬೈರೇಗೌಡರು ಮಾತನಾಡಿದ ನಂತರ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ನಂತರ ಮತ್ತೆ ಅವಕಾಶ ಕೊಡುತ್ತೇನೆ. ನೀವು ಅರ್ಥ ಮಾಡಿಕೊಳ್ಳುತ್ತಿಲ್ಲ. I am helpless.

ಶ್ರೀ ಸಿದ್ದರಾಮಯ್ಯ : 4.30 ರವರೆಗೆ ಮುಂದುವರೆಸಿ.

ಶ್ರೀ ಕೃಷ್ಣ ಬೈರೇಗೌಡ : (ಬ್ಯಾಟರಾಯನಪುರ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಅಭಿನಂದನೆ ಸಲ್ಲಿಸುತ್ತೇನೆ. ಮೊದಲ ಬಾರಿಗೆ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬಗ್ಗೆ ಮುಂದುವರೆದ ಅಧಿವೇಶನವನ್ನು ಕರೆದಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ..

ಅಧ್ಯಕ್ಷರು : ರೂಲಿಂಗ್ ಪಾರ್ಟಿಯವರೂ ಮಾತನಾಡಿ, ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಆಡಳಿತ ಪಕ್ಷದ ಸದಸ್ಯರು ಸ್ವಲ್ಪ ಸಂಯಮದಿಂದ ಇರಬೇಕೆಂದು ಹೇಳಿದರು. ನೀವೂ ಮಾತನಾಡಬೇಕೆಂದರೆ ಮಾತನಾಡಿ. ನಾನಾದರೂ ಏನು ಮಾಡುವುದಕ್ಕಾಗುತ್ತದೆ.?

ಶ್ರೀ ಕೃಷ್ಣ ಬೈರೇಗೌಡ : ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಾಕಷ್ಟು ವಿಚಾರಗಳನ್ನು ಉಲ್ಲೇಖ ಮಾಡಿದ್ದಾರೆ.

(4-00 PM)

ಬಹುಶಃ ಸ್ವತಂತ್ರ್ಯ ಭಾರತದಲ್ಲಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದಿಂದ ಕೈಗೆತ್ತಿಕೊಂಡಿರತಕ್ಕಂಥ ಕೃಷಿ ಗ್ರಾಮೀಣಾಭಿವೃದ್ಧಿಯ ಅನೇಕ ಕಾರ್ಯಕ್ರಮಗಳನ್ನು ಉಲ್ಲೇಖ ಮಾಡಿದ್ದಾರೆ. ಆದರೂ ಸಹ ಇವತ್ತು ಕೃಷಿಕರ ಪರಿಸ್ಥಿತಿಯಲ್ಲಿ ನಾವು ಗಮನಾರ್ಹವಾದಂಥ ಬದಲಾವಣೆಯನ್ನು ಕಂಡಿಲ್ಲ ಎನ್ನತಕ್ಕಂಥ ಪ್ರಶ್ನೆಯನ್ನು ಅವರೇ ಎತ್ತಿದ್ದಾರೆ. ಆದುದರಿಂದ ಈಗ ನಮ್ಮ ಮುಂದೆ ಪ್ರಶ್ನೆ ಬರತಕ್ಕಂಥದ್ದು ಇರುವ ಎಲ್ಲಾ ಯೋಜನೆಗಳಲ್ಲಿಯೂ ಸಹ ಕೃಷಿಕರಿಗೆ ಸಹಾಯಗಳನ್ನು ಕೊಡತಕ್ಕಂಥ ಕ್ರಮಗಳನ್ನು ಸರ್ಕಾರ ಕೈಗೆತ್ತಿಕೊಂಡಿದ್ದರೆ ಇದುವರೆಗೂ ಬದಲಾವಣೆ ಏಕೆ ಆಗಿಲ್ಲವೆನ್ನತಕ್ಕಂಥ ಪ್ರಶ್ನೆ

ಬರುತ್ತದೆ. ಶಾಸ್ತ್ರಿಯವರು ಮತ್ತು ಜಗಜೀವನ್ ರಾಂ ರವರ ಕಾಲದಲ್ಲಿ ಆದಂಥ ಹಸಿರು ಕ್ರಾಂತಿಯ ನಂತರ ಕೃಷಿಯಲ್ಲಿ ಅಂಥ ಪರಿಣಾಮ ಕಾರಿಯಾದ ಬದಲಾವಣೆಯನ್ನು ತರತಕ್ಕಂಥ ತಿರುವು ಇದುವರೆವಿಗೂ ಸಹ ಆಗಿಲ್ಲ. ಹೀಗಾದರೆ ಮುಂದೆ ಏನು ಎನ್ನತಕ್ಕಂಥ ಪ್ರಶ್ನೆ ಈ ಸದನದ ಮುಂದೆ ಇದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸದಾ ಕಾಲ ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಕಳೆದ ಬಾರಿ ಇದೇ ಸದನಕ್ಕೆ ಅವರು ಬಂದಿದ್ದಾಗ ಅನೇಕ ವಿಚಾರಗಳನ್ನು ನಮ್ಮ ಮುಂದೆ ಇಟ್ಟಿದ್ದರು. ನಾನು ಅವರು ಹೇಳಿದ್ದನ್ನು ಕೇಳಿ ಕಲಿತಂಥ ಬಹಳ ಮುಖ್ಯವಾದ ವಿಚಾರವೆಂದರೆ ಯಾವುದೇ ವಿಚಾರದಲ್ಲಿ ಒಂದು ದೂರದೃಷ್ಟಿ ಇರಬೇಕು ಎನ್ನತಕ್ಕಂಥದ್ದು. ಸರ್ಕಾರ ಏನು ಮಾಡಿದೆಯೆಂದರೆ ಇರತಕ್ಕಂಥ ಎಲ್ಲಾ ಯೋಜನೆಗಳನ್ನು ಉಲ್ಲೇಖ ಮಾಡಿದ್ದಾರೆ. ಎಲ್ಲದರಲ್ಲಿಯೂ ಸಹ ಇಲ್ಲಿ ಸ್ವಲ್ಪ ಸಬ್ಸಿಡಿ ಕೊಡುವುದು, ಅಲ್ಲಿ ಸ್ವಲ್ಪ ಸಬ್ಸಿಡಿ ಕೊಡುವುದು, ಇಂಥ ಯೋಜನೆಗಳೇ ಇವೆಯೇ ಹೊರತು ದೂರದೃಷ್ಟಿ ಇರತಕ್ಕಂಥ ಯೋಜನೆಗಳು ಕೃಷಿ, ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ಬಹಳ ಕಡಿಮೆಯಾಗಿವೆ. ಹೀಗಾಗಿ ಬಹುಶಃ ನಾವು ಕಲಾಂರವರಿಂದ ಮೊದಲು ಕಲಿಯಬೇಕಾಗಿರುವಂಥದ್ದು ಏನೆಂದರೆ, ಇಪ್ಪತ್ತು-ಮೂವತ್ತು ವರ್ಷಗಳ ಅಂತರದಲ್ಲಿ ಯೋಚನೆಯನ್ನು ಮಾಡಬೇಕಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಹೀಗಾಗಿ ಇಂದು ನಾವು ಪರಿಣಾಮಕಾರಿಯಾದಂಥ ಬದಲಾವಣೆಯನ್ನು ಕಾಣಬೇಕಾದರೆ ಒಂದು ದೂರದೃಷ್ಟಿ ಬಹಳ ಅವಶ್ಯಕ. ಏನೇ ಒಂದು ಯೋಜನೆಯನ್ನು ಹಾಕಿಕೊಂಡರೆ ದೂರದೃಷ್ಟಿ ಇರಬೇಕೇ ಹೊರತು ತಾತ್ಕಾಲಿಕವಾಗಿ ಪರಿಹಾರ ಕೊಡತಕ್ಕಂಥ ಕಾರ್ಯಕ್ರಮಗಳಿಂದ ನಾವು ಕೃಷಿ ಕ್ಷೇತ್ರದಲ್ಲಿ ಮತ್ತು ಗ್ರಾಮೀಣ ಕ್ಷೇತ್ರದಲ್ಲಿ ಯಾವ ಬದಲಾವಣೆಯನ್ನೂ ಸಹ ತರುವುದಕ್ಕೆ ಸಾಧ್ಯವಿಲ್ಲವೆಂದು ನಾನು ಸರ್ಕಾರಕ್ಕೆ ಮೊದಲನೆಯದಾಗಿ ಕೊಡತಕ್ಕಂಥ ಒಂದು ಸಣ್ಣ ಸಲಹೆ. ಇದು ನನ್ನ ಸಲಹೆಯೆಂದಲ್ಲ, ಕಲಾಂರವರು ಖುದ್ದು ಇಲ್ಲಿಗೆ ಬಂದು ಹೇಳಿದ್ದೇನೆಂದರೆ, ಯಾವುದೇ ಒಂದು ಕಾರ್ಯಕ್ರಮಕ್ಕೆ ದೂರದೃಷ್ಟಿ ಇರಬೇಕು ಎಂದು ಹೇಳಿದ್ದಾರೆ. ಆಗಲೇ ಮಹೇಶ್‌ರವರು ಮಾತನಾಡುತ್ತಾ ಯಾವುದೇ ಒಂದು ಮತಗಳನ್ನು ಆಧಾರವಾಗಿಟ್ಟುಕೊಂಡು ಯಾವುದೇ ಒಂದು ಬಗೆಯ ಯೋಜನೆಗಳನ್ನು ರೂಪಿಸಬಾರದು ಎಂದು ಹೇಳಿದರು. ಹಾಗಾದರೆ ದೂರದೃಷ್ಟಿ ಇರತಕ್ಕಂಥ ಕಾರ್ಯಕ್ರಮಗಳು ಏನು ಎನ್ನತಕ್ಕಂಥ ಪ್ರಶ್ನೆ ಬಂದಾಗ, ಕಳೆದ ಕೆಲವು ವರ್ಷಗಳಿಂದ ರಾಷ್ಟ್ರ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ

ಏನಾಗುತ್ತಿದೆಯೆಂದರೆ ಕೃಷಿ ಕ್ಷೇತ್ರದಲ್ಲಿ, ಗ್ರಾಮೀಣ ಕ್ಷೇತ್ರದಲ್ಲಿ ನಾವು ಎಷ್ಟರಮಟ್ಟಿಗೆ ಬಂಡವಾಳವನ್ನು ಹೂಡಬೇಕಾಗಿದೆಯೋ ಅದು ದಿನೇ ದಿನೇ ಕಡಿಮೆಯಾಗುತ್ತಿದೆ. ಆ ಬಂಡವಾಳವನ್ನು ಹೂಡುವುದರಲ್ಲಿ ಕೊರತೆಯಾಗಿರು ವುದರಿಂದ ಕೃಷಿ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೂ ಆಗುತ್ತಿಲ್ಲ ಮತ್ತು ಹೊಸ ಸಮಸ್ಯೆಗಳು ಕೂಡ ಸೃಷ್ಟಿಯಾಗುತ್ತಿವೆ. ಅದರಲ್ಲಿಯೂ ಬಹಳ ಪ್ರಮುಖವಾಗಿ ನೀರಾವರಿ ಕ್ಷೇತ್ರ ಮತ್ತು ಮೈಕ್ರೊ-ಇರಿಗೇಷನ್ ಎಂದು ನಾವು ಏನು ಕರೆಯುತ್ತೇವೆ, ಈ ಒಣಭೂಮಿಯಲ್ಲಿ ಮೈಕ್ರೋ-ಇರಿಗೇಷನ್ ಗೆ ನಾವು ಸಾಕಷ್ಟು ಬಂಡವಾಳವನ್ನು ಹೂಡುತ್ತಿಲ್ಲ. ಅದೇ ರೀತಿ ವಿದ್ಯುತ್ ಕ್ಷೇತ್ರದಲ್ಲಿ ನಾವು ಹೂಡುತ್ತಿರುವಂಥ ಬಂಡವಾಳ ಸಾಲುತ್ತಿಲ್ಲ. ಇಂದು ರೈತರು ಬೆಳೆದಂಥ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ಸೌಲಭ್ಯವನ್ನು ಕೃಷಿಕರು ಬಯಸುತ್ತಿದ್ದಾರೆ. ಮಾರುಕಟ್ಟೆ ಸೌಲಭ್ಯಗಳನ್ನು ಸುಧಾರಣೆಯನ್ನು ಮಾಡುವುದಕ್ಕೆ ಕೂಡ ನಮ್ಮಲ್ಲಿ ಆಗುತ್ತಿಲ್ಲ. ಇವತ್ತು ಕೃಷಿಗೆ ಪೂರಕವಾದಂಥ ಸಂಸ್ಥೆಗಳು, ಈ ಯೂನಿವರ್ಸಿಟಿಗಳಾಗಬಹುದು ಅಥವಾ ಈ ಸಹಕಾರಿ ಬ್ಯಾಂಕ್‌ಗಳಾಗಬಹುದು, ಇಂಥವುಗಳು ಕಾಲಕ್ರಮೇಣವಾಗಿ ಶಕ್ತಿಯನ್ನು ಕಳೆದುಕೊಂಡು ಅವುಗಳಲ್ಲಿಯೂ ಸಹ ನಾವು ಬಂಡವಳವನ್ನು ಹೂಡದೆ ಕೃಷಿ ಕ್ಷೇತ್ರಕ್ಕೆ ಪೂರಕವಾದಂಥ ಸಂಸ್ತೆಗಳಲ್ಲಿ ನಮ್ಮ ಬಂಡವಾಳದ ಕೊರತೆ ಎದ್ದು ಕಾಣುತ್ತಿದೆ. ಹೀಗಾಗಿ ಈ ಬಂಡವಾಳದ ಕೊರತೆ ಬಗ್ಗೆ ನಿರ್ದಿಷ್ಟವಾಗಿ ಹೇಳುವುದಾದರೆ ಇವತ್ತು ನೀರು ಎನ್ನತಕ್ಕಂಥದ್ದು ಕೃಷಿ ಕ್ಷೇತ್ರಕ್ಕೆ ಸರ್ವಸ್ವ ಆಗದೇ ಇರಬಹುದು ಅಥವಾ ಕೃಷಿಕರಿಗೆ ಬಹಳ ಮೂಲ ಆಧಾರವಾದ ಸ್ಥಂಭ ಯಾವುದು ಎಂದರೆ ನೀರಾವರಿ ಅಥವಾ ನೀರು. ಆ ನೀರು ಇಲ್ಲದೇ ನೀವು ಕೃಷಿಯನ್ನು ಊಹೆ ಮಾಡುವುದಕ್ಕೂ ಕೂಡ ಸಾಧ್ಯವಿಲ್ಲ. ಇವತ್ತು ನೀರಾವರಿ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಏನಾಗಿದೆ? ನಾನು ಕಳೆದ ಐದಾರು ವರ್ಷಗಳಲ್ಲಿನ ಕೆಲವು ಅಂಕಿ ಸಂಖ್ಯೆಗಳನ್ನು ಸದನದಲ್ಲಿ ಹೇಳಬಯಸುತ್ತೇನೆ. ಅಂದರೆ ಕಳೆದ ಐದಾರು ವರ್ಷಗಳಲ್ಲಿ ನೀರಾವರಿ ಕ್ಷೇತ್ರದಲ್ಲಿ ನಮ್ಮ ರಾಜ್ಯದ ಆಗುಹೋಗುಗಳು ಏನು ಅನ್ನತಕ್ಕಂಥದ್ದರ ಬಗ್ಗೆ ಹೇಳುತ್ತೇನೆ. 2002–03 ರಲ್ಲಿ ನೀರಾವರಿಗೆ ನಮ್ಮ ರಾಜ್ಯದ Plan expenditure ರೂ. 2790 ಕೋಟಿಗಳಾಗಿದೆ. ಅಂದರೆ ನಮ್ಮ ಯೋಜನಾ ವೆಚ್ಚದಲ್ಲಿ ಶೇ. 32.4 ರಷ್ಟು ನೀರಾವರಿಗೆ ಕಾದಿರಿಸಿದ್ದೇವೆ. ಹೆಚ್ಚು ಕಡಿಮೆ ಯೋಜನಾ ವೆಚ್ಚದ ಮೂರನೇ ಒಂದು ಭಾಗದಷ್ಟು ಗಾತ್ರದ ಆಯವ್ಯಯದಲ್ಲಿ

ನೀರಾವರಿಗೆ ನಾವು ಆದ್ಯತೆಯನ್ನು ಕೊಟ್ಟಿದ್ದೇವೆ. 2003–04 ಕ್ಕೆ 3002 ಕೋಟಿ ಇಡಲಾಗಿದೆ. ಅಂದರೆ ಶೇ. 31. 2004–05ಕ್ಕೆ 3023 ಕೋಟಿಗಳನ್ನು ಇಡಲಾಗಿದೆ. ಅಂದರೆ ಶೇ. 24.5 ರಷ್ಟು ಇದೆ. 2005–06 ರಲ್ಲಿ 3942 ಕೋಟಿ ರೂ.ಗಳನ್ನು ಇಡಲಾಗಿದೆ. ಅಂದರೆ ಆಯವ್ಯಯದಲ್ಲಿ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಶೇ. 29 ರಷ್ಟು ಹಣವನ್ನು ನೀರಾವರಿಗೆ ಕಾದಿರಿಸಿದ್ದೆವು. 2006–07ಕ್ಕೆ ಐತಿಹಾಸಿಕವಾಗಿ 4000 ಕೋಟಿ ರೂ.ಗಳನ್ನು ಕಾದಿರಿಸ ತಕ್ಕಂಥ ಕೆಲಸವನ್ನು ಅಂದಿನ ಹಣಕಾಸು ಸಚಿವರಾಗಿದ್ದ ನಮ್ಮ ಮಾನ್ಯ ಸಿದ್ದರಾಮಯ್ಯನವರು ಮಾಡಿದ್ದರು. ಅಂದು ನಮ್ಮ ಆಯವ್ಯಯದಲ್ಲಿ 4280 ಕೋಟಿ ರೂ.ಗಳನ್ನು ಇಡಲಾಗಿತ್ತು. ಆದರೆ 2007–08ರ ನಂತರ ಏನಾಗುತ್ತಿದೆಯೆಂದರೆ 4280 ಕೋಟಿ ಇದ್ದದ್ದು 2007–08ಕ್ಕೆ 3145 ಕೋಟಿಗೆ ಬಂತು. ಅಂದರೆ ಶೇ.17.5 2008–09ಕ್ಕೆ 3468 ಕೋಟಿ ಯಾಯಿತು. ಅಂದರೆ ನಮ್ಮ ಪ್ಲಾನ್ ಎಕ್ಸ್‌ಪೆಂಡಿಚರ್‌ನ 25952 ಕೋಟಿ ಏನಿತ್ತು, ಅದರಲ್ಲಿ ಕೇವಲ ಶೇ 13.37 ರಷ್ಟು ಮಾತ್ರ ಕಾದಿರಿಸಲಾಗಿದೆ. ಅತಿ recent ಎಂದರೆ 2009–10ರ plan expenditureನಲ್ಲಿ 29500 ಕೋಟಿಗಳಲ್ಲಿ ನೀರಾವರಿಗೆ ಇಟ್ಟಿರುವುದು 3983 ಕೋಟಿ. ಅಂದರೆ ಶೇ. 14 ರಷ್ಟು ಮಾತ್ರ. ಕೃಷಿ ಬಗ್ಗೆ ಇಷ್ಟೆಲ್ಲಾ ಮಾತನಾಡುವ ನಾವು ರೈತನಿಗೆ ಆಧಾರ ಸ್ಥಂಭವಾಗಿರುವ ನೀರಾವರಿಗೆ ಕೇವಲ ಶೇ. 14 ರಷ್ಟು ಹಣವನ್ನು ಮಾತ್ರ ಆಯವ್ಯಯದ ಯೋಜನಾ ವೆಚ್ಚದಲ್ಲಿ ನಾವು ನಿಗದಿ ಮಾಡುತ್ತೇವೆಂದರೆ ನಿಜವಾಗಿ ನಮಗೆ ಕೃಷಿಕನನ್ನು ಅವನ ಪರಿಸ್ಥಿತಿಯಿಂದ ಹೊರಗೆ ತರತಕ್ಕಂಥ ಒಂದು ಬದ್ಧತೆ ಇದೆಯೇ ಎನ್ನತಕ್ಕಂಥ ಪ್ರಶ್ನೆ ಉದ್ಭವವಾಗುತ್ತದೆ. ನಾನು ಇದರ ಬಗ್ಗೆ ಯಾರ ಮೇಲೂ ಕೂಡ ಆರೋಪವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಇವೆಲ್ಲವೂ ನಿಜವಾದ ಅಂಕಿಸಂಖ್ಯೆಗಳೇ ಆಗಿವೆ. ಅಂಕಿ ಸಂಖ್ಯೆಗಳಲ್ಲಿಯೇ ತಪ್ಪಿದ್ದರೆ ಯಾರಾದರೂ ಸರಿಪಡಿಸಿ ಹೇಳಲಿ. ನಾನು ತಪ್ಪು ಹೇಳಿದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ನಾನೂ ಕೂಡ ತಯಾರಿದ್ದೇನೆ. ಈ ರೀತಿಯಾದರೆ ಕೃಷಿಗೆ ನಾವು ಏನೂ ಮಾಡುವುದಕ್ಕೆ ಸಾಧ್ಯವಿಲ್ಲವೆ? ನೀರಾವರಿಗೆ ಹೆಚ್ಚಿನ ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆ? ಇವತ್ತು ನಾನು ಪಕ್ಕದ ರಾಜ್ಯದ ಆಂಧ್ರಪ್ರದೇಶದ ಉದಾಹರಣೆಯನ್ನೇ ಕೊಡುತ್ತೇನೆ. 2007–08 ರಲ್ಲಿ ಪ್ಲಾನ್ ಮತ್ತು ನಾನ್–ಪ್ಲಾನ್ ಎರಡರಲ್ಲಿ Minor Irrigation & Major Irrigation ಎರಡದ್ದನ್ನೂ ಸೇರಿಸಿ 15,839 ಕೋಟಿ

ರೂ.ಗಳನ್ನು ಒಂದು ವರ್ಷಕ್ಕೆ ಇಡಲಾಗಿದೆ. 2008–09 ಕ್ಕೆ 21, 086 ಕೋಟಿ ರೂ.ಗಳನ್ನು ಒಂದು ವರ್ಷಕ್ಕೆ ಕಾದಿರಿಸಿದ್ದಾರೆ. 2009–10 ಕ್ಕೆ 22,417 ಕೋಟಿ ರೂ.ಗಳನ್ನು ನೀರಾವರಿಗೆ ಖರ್ಚು ಮಾಡುತ್ತಿದ್ದಾರೆ. ರೈತನನ್ನು ಅವನ ಪರಿಸ್ಥಿತಿಯಿಂದ ಶಾಶ್ವತವಾಗಿ ಹೊರಗೆ ತರಬೇಕು ಎನ್ನತಕ್ಕಂಥ ಬದ್ಧತೆಗೆ ಇದೊಂದು ನಿದರ್ಶನ ಎಂದು ನಾನು ಭಾವಿಸಿಕೊಂಡಿದ್ದೇನೆ. ಇದು ನನ್ನ ಹೇಳಿಕೆ ಅಲ್ಲ, ಹೋಲಿಕೆ ಮಾಡುತ್ತಿದ್ದೇನೆ. ನಿಜವಾದಂಥ ಬದ್ಧತೆ ಇದೆ ಎನ್ನುವುದಾದರೆ ಆ ರೀತಿ ಮಾಡಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಎಲ್ಲ ಕಡೆ ನೀರಾವರಿಯ ಅವಶ್ಯಕತೆ ಇಲ್ಲವೆ? ಎಲ್ಲಾ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯವನ್ನು ಮಾಡಿಕೊಟ್ಟಿದ್ದೇವೆಯೆ? ಕೃಷ್ಣ ಎ–ಸ್ಕೀಂ, ಬಿ–ಸ್ಕೀಂ ಬಗ್ಗೆ ನನಗೆ ಅರ್ಥವಾಗುವುದಿಲ್ಲ. ಆದರೆ ಇದಕ್ಕಾಗಿಯೇ ತಜ್ಞರಿದ್ದಾರೆ. ಇನ್ನೂ ನೀರಾವರಿಗೆ ಉಪಯೋಗ ಆಗತಕ್ಕಂಥ ಅವಕಾಶಗಳೇ ನಮಗೆ ಇಲ್ಲವೆ? ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ ನಿಜವಾಗಿ ನೀವು ನೀರು ಕೊಟ್ಟ ತಕ್ಷಣ ಎಲ್ಲವನ್ನೂ ಕೊಟ್ಟಂತೆ ಎಂದು ಹೇಳುವುದಿಲ್ಲ. ಆದರೆ ನೀರಾವರಿ ವ್ಯವಸ್ಥೆಯನ್ನು ಮಾಡದೇ ಹೋದರೆ ನಮ್ಮ ರೈತ ಅವನ ಪರಿಸ್ಥಿತಿಯಿಂದ ಹೊರಗೆ ಬರುವುದಕ್ಕೆ ಬಹುಶಃ ಅಸಾಧ್ಯ. ನೀವು ರೈತನನ್ನು ಅವನ ಪರಿಸ್ಥಿತಿಯಿಂದ ಹೊರಗೆ ತರಬೇಕು ಎನ್ನುವುದಾದರೆ ಈ ಬಗ್ಗೆ ಈಗಾಗಲೇ ಅನೇಕ ಸದಸ್ಯರುಗಳು ಸಲಹೆಗಳನ್ನು ಕೊಟ್ಟಿದ್ದಾರೆ. ನೀವು ನೀರಾವರಿ ವಿಚಾರದಲ್ಲಿ ಕ್ರಾಂತಿಕಾರಕವಾದ ಒಂದು ಹೆಜ್ಜೆಯನ್ನು ಇಡಿ. ಇವತ್ತು ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ನಾಲೆಗಳಿವೆ. ಮುಂದಿನ ದಿನಗಳಲ್ಲಿ ನಮ್ಮ ಮುಖ್ಯಮಂತ್ರಿಗಳ ಹೆಸರಿನಲ್ಲಿಯೂ ಕೂಡ ನಾಲೆಗಳನ್ನು ನಿರ್ಮಾಣ ಮಾಡುವುದಕ್ಕೆ ನಾವು ಕೂಡ ಸಹಕಾರವನ್ನು ಕೊಡುತ್ತೇವೆ. ನೀರಾವರಿಯನ್ನು ಎಲ್ಲ ಕಡೆ ಕಲ್ಪಿಸಿ. ನಮ್ಮ ರಾಜ್ಯಕ್ಕೆ ಸಿಗಬೇಕಾದಮಥ ನೀರನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳುವುದಕ್ಕೆ ನಾವು ಹೆಜ್ಜೆ ಇಡಲಿಲ್ಲವೆಂದರೆ ಖಂಡಿತವಾಗಿ ತಪ್ಪಾಗುತ್ತದೆ. ಶಾಶ್ವತವಾದಂಥ ದೂರದೃಷ್ಟಿ ಇರತಕ್ಕಂಥ ಒಂದು ಯೋಜನೆಯ ಅವಶ್ಯಕತೆ ಇದೆ. ಇನ್ನೊಂದು ನಾನು ಇಲ್ಲಿ ವಿಮರ್ಶೆ ಮಾಡಬೇಕಾದಂಥ ವಿಚಾರವೆಂದರೆ ಬಹುತೇಕ ಬಯಲು ಸೀಮೆ ಪ್ರದೇಶಗಳಲ್ಲಿ ಮಳೆ ಇಲ್ಲದೇ ಇರತಕ್ಕಂಥ ಪ್ರದೇಶಗಳಿವೆ. ಚಿತ್ರದುರ್ಗ ಮತ್ತು ಅದರಿಂದ ಕೆಳಗಿನ ಭಾಗಗಳಲ್ಲಿ ತುಮಕೂರಾಗಬಹುದು, ಬೆಂಗಳೂರು ಗ್ರಾಮಾಂತರವಾಗಬಹುದು, ಕೋಲಾರವಾಗಬಹುದು, ಚಿಕ್ಕಬಳ್ಳಾಪುರವಾಗ ಬಹುದು. ಇಂಥ ಅನೇಕ ಜಿಲ್ಲೆಗಳಿವೆ. ಅಲ್ಲಿ ನೀವು ನೀರಾವರಿಗೆ ನೀರು

ಕೊಡದೇ ಹೋದರೂ ಸರಿ. ಕನಿಷ್ಟ ಕುಡಿಯುವ ನೀರನ್ನೂ ಸಹ ಮುಂದಿನ ನಾಲ್ಕೈದು ವರ್ಷಗಳಲ್ಲಿ ಈ ಜಿಲ್ಲೆಗಳಿಗೆ ಸಿಗತಕ್ಕಂಥ ಪರಿಸ್ಥಿತಿ ಇಲ್ಲವಾಗಿದೆ.

ಮಾನ್ಯ ಅಧ್ಯಕ್ಷರೆ, 900 ರಿಂದ 1,200 ಅಡಿಯವರೆಗೆ ಕುಡಿಯುವ ನೀರಿಗೆ ಕೊಳವೆ ಬಾವಿಗಳನ್ನು ಕೊರೆಯಬೇಕಾದಂತಹ ಪರಿಸ್ಥಿತಿ ಇದೆ ಎಂದು ತಮಗೆ ಗೊತ್ತಿಗೆ. ಇವತ್ತು ತಮ್ಮ ಸರ್ಕಾರ ಅಧೀಕಾರಕ್ಕೆ ಬಂದಮೇಲೆ ರೈತರಿಗೆ ಸಾವಿರ–ಸಾವಿರ ರೂಪಾಯಿ ಕೊಟ್ಟು, 220 ಕೋಟಿ ರೂಪಾಯಿ ನಾವು ರೈತರ ಮನೆಗಳಿಗೆ ತಲುಪಿಸಿದೆವು ಎಂದು ಹೇಳಿದಿರಿ. ಅದೇ 220 ಕೋಟಿ ರೂಪಾಯಿ ಯಾವುದಾದರೂ ಒಂದು ಜಿಲ್ಲೆಗೆ ನೀರಾವರಿ ಮಾಡುವುದಕ್ಕೆ ಒದಗಿಸಿದ್ದರೆ ಜನ ಶಾಶ್ವತವಾಗಿ ನಿಮ್ಮನ್ನು ನೆನೆಯುತ್ತಿದ್ದರೋ ಇಲ್ಲವೋ ಯೋಚನೆ ಮಾಡಿ. ಒಂದೊಂದು ರೈತನ ಕುಂಟುಂಬಕ್ಕೆ ಸಾವಿರ ರೂಪಾಯಿ ಕೊಟ್ಟಿರಿ. ಅದು ಇವತ್ತು ಯಾವುದಕ್ಕೆ ಆಯಿತು? ಅದರ ಬದಲು ಅದೇ 220 ಕೋಟಿ ರೂಪಾಯಿಯನ್ನು ಯಾವುದಾದರೂ ಒಂದು ಜಿಲ್ಲೆಗೆ ಬಂಡವಾಳ ಹಾಕಿದ್ದರೆ ಅದರಿಂದ ಎಷ್ಟು ಶಾಶ್ವತವಾದಂತಹ ಪರಿಹಾರವನ್ನು ಹುಡುಕಬಹುದಾಗಿತ್ತು ಎನ್ನುವುದನ್ನು ಯೋಚನೆ ಮಾಡಿ. ಇಂತಹ ಯೋಜನೆಗಳಿಂದ ನಾವೇನು ಸಾಧಿಸುವುದಕ್ಕೆ ಆಗುವುದಿಲ್ಲ. ವೆಚ್ಚವನ್ನು ಬಿಟ್ಟು ಬಂಡವಾಳ ಹೂಡುವ ಕಡೆಗೆ ಏನಾದರೂ ಪರಿಣಾಮಕಾರಿಯಾಗಿ ನಾವು ಎಲ್ಲಿಯವರೆಗೆ ಗಮನ ಕೊಡುವುದಿಲ್ಲ, ಅಲ್ಲಿಯವರೆಗೆ ನಾವು ಖಂಡಿತ ಬದಲಾವಣೆಯನ್ನು ತರುವುದಕ್ಕಾಗುವುದಿಲ್ಲ. ಇವತ್ತು ನೇತ್ರಾವತಿ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅನೇಕ ಜಿಲ್ಲೆಗಳು ಇದನ್ನು ನಂಬಿಕೊಂಡಿವೆ. ಇಲ್ಲಿ ಕರಾವಳಿ ಭಾಗದ ಶಾಸಕರು ಸಹ ಇದ್ದಾರೆ. ಅವರಲ್ಲಿ ನಾನು ಮನವಿ ಮಾಡುವುದೇನೆಂದರೆ ನದಿ ತಿರುವು ಎನ್ನುವ ಪದ ತಪ್ಪು. ಇಲ್ಲಿ ನದಿ ತಿರುವಿನ ಬಗ್ಗೆ ಯಾರೂ ಸಹ ಮಾತನಾಡುತ್ತಿಲ್ಲ ಅಥವಾ ಯಾರ ನೀರನ್ನು ಕೂಡ ಯಾರೂ ಕಸಿಯುವಂತಹ ಪ್ರಯತ್ನ ಅಲ್ಲ. ಅಲ್ಲಿ ಯಥೇಚ್ಛವಾ ದಂತಹ ನೀರು ಹರಿದು ಸಮುದ್ರ ಸೇರುತ್ತಿದೆ. ಮಲೆನಾಡಿನ ಮೇಲ್ಮಟ್ಟದಲ್ಲಿ ಬಿದ್ದಂತಹ ಸ್ವಲ್ಪ ನೀರನ್ನು ಮಳೆಗಾಲದಲ್ಲಿ ಮಾತ್ರ ಬಯಲು ಸೀಮೆಯ ಕೆಲವು ಕೆರೆಗಳಿಗೆ ಕೊಡುವಂತಹ ಒಂದು ಯೋಜನೆಯಾಗಿದೆ ಅಷ್ಟೇ ಹೊರತು ನದಿಯನ್ನು ತಿರುಗಿಸುವುದಕ್ಕೆ ಮನುಷ್ಯನ ಕೈಯಲ್ಲಿ ಸಾಧ್ಯವಿಲ್ಲ. ಪರಿಸರ ಇದೆ. ಅದು ಪರಿಸರಕ್ಕೆ ಬಿಟ್ಟಂತಹ ವಿಚಾರ. ನದಿಯನ್ನು ತಿರುಗಿಸುವಂತಹ ದುಸ್ಸಾಹಸಕ್ಕೆ ಕೈ ಹಾಕುವಂತಹ ಆಲೋಚನೆ ಯಾರಿಗೂ ಕೂಡ ಇಲ್ಲ. ಹಾಗಾಗಿ ಅದಕ್ಕೆ ಸರ್ವೆ ಬಾಕಿ ಇದೆ. ಆ ಸರ್ವೆ ಕೆಲಸ ಆದರೆ

ಬಹುಶಃ ಅದರ ಮೇಲೆ ನಾವು ವೈಜ್ಞಾನಿಕವಾದಂತಹ ತೀರ್ಮಾನವನ್ನು ತೆಗೆದುಕೊಳ್ಳಬಹುದು. ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ದಯವಿಟ್ಟು ಪರಮಶಿವಯ್ಯನವರ ವರದಿಯ ಆಧಾರದ ಮೇಲೆ ಹಿಂದಿನ ಸರ್ಕಾರ ಏನು ಒಂದು ವೈಜ್ಞಾನಿಕ ಸರ್ವೆಗೆ ಆದೇಶ ಮಾಡಿದೆ, ಅದನ್ನು ಆದಷ್ಟು ಬೇಗ ಪೂರೈಸಿದರೆ ಅದರ ಮೇಲೆ ಒಂದು ಅರ್ಥಪೂರ್ಣವಾದಂತಹ ಚರ್ಚೆಯಾಗಬಹುದು. ಇಲ್ಲವೆಂದರೆ ಕೆಲವರು ಆಗುತ್ತದೆಂದು ಕೆಲವರು ಆಗುವುದಿಲ್ಲವೆಂದು ಹೇಳುತ್ತಾರೆ, ಅದಕ್ಕೆ ಯಾವುದೇ ಆಧಾರ ಇಲ್ಲ. ದಯವಿಟ್ಟು ಆದಷ್ಟು ಬೇಗ ಸರ್ಕಾರ ಆ ಒಂದು ವರದಿಯ ಬಗ್ಗೆ ವೈಜ್ಞಾನಿಕವಾಗಿ ಪರೀಕ್ಷೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ.

ಕೃಷಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಕೃಷಿ ಮಾರುಕಟ್ಟೆ, ರೈತ ನೀರಾವರಿ ಬಿಟ್ಟು, ಅವನು ಅವಲಂಬಿಸತಕ್ಕಂಥಾದ್ದು ಮಾರುಕಟ್ಟೆಯನ್ನು. ಆತನು ಬೆಳೆದಂತಹ ಪದಾರ್ಥಗಳಿಗೆ ಒಳ್ಳೆಯ ಮಾರುಕಟ್ಟೆಯನ್ನು ಕೊಟ್ಟರೆ ಬಹುಶಃ ಅದಕ್ಕಿಂತ ಇನ್ನೊಂದು ಅನುಕೂಲ ರೈತನಿಗೆ ಆಗಲಿಕ್ಕಿಲ್ಲ. ಇವತ್ತು ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಯಾಗಬೇಕಾಗಿದೆ. ನಾವು ಈ ಭಾಗದಲ್ಲಿ ಮಾವಿನ ಹಣ್ಣು, ಬಾಳೆ ಬೆಳೆಯುತ್ತೇವೆ, ಇಂತಹ ನಮ್ಮ ರಾಜ್ಯದ ಪದಾರ್ತಗಳಿಗೆ ಬೇರೆ ರಾಜ್ಯ ಮತ್ತು ಬೇರೆ ದೇಶಗಳಲ್ಲಿ ಸಾಕಷ್ಟು ಬೇಡಿಕೆ ಇದೆ. ಈ ಪದಾರ್ಥಗಳನ್ನು ಮಾರಾಟ ಮಾಡುವುದಕ್ಕೆ ಸರ್ಕಾರ ಬಂಡವಾಳವನ್ನು ಹೂಡಿದರೆ, ಸರ್ಕಾರದ ಜೊತೆ ಖಾಸಗಿಯವರು ಬಂಡವಾಳ ಹೂಡುವುದಿದ್ದರೆ ಅವರಿಗೂ ಅವಕಾಶ ಮಾಡಿಕೊಡಿ. ಅದೇ ಉದ್ದೇಶದಿಂದ APMC Act ಅನ್ನು amendment ಮಾಡಲಾಯಿತು. ಆದರೆ APMC Act ಮೂಲಕ ನಾವು ರೈತರಿಗೆ ಉಪಕಾರ ಮಾಡುತ್ತೇವೆಂದು ಹೇಳಿಕೊಂಡು ಅಪಕಾರ ಮಾಡುತ್ತೇವೆಂದರೆ, ಪಾಸ್ ಮಾಡಿದಂತಹ Bill ನಲ್ಲಿ ಒಂದು clause ಇತ್ತು. ರೈತನಿಗೆ ಹಣವನ್ನು ಕೊಡುವುದು ಒಂದು ದಿನ ನಿಧಾನ ಮಾಡಿದರೆ ಶೇಕಡ ಒಂದರಷ್ಟು ದಂಡ ಕಟ್ಟಬೇಕೆನ್ನುವ ಅಂಶ ಇವರು ಪಾಸ್ ಮಾಡಿರುವ ಆರ್ಡರ್‌ನಲ್ಲಿ ಬಿಟ್ಟುಹೋಗಿದೆ. ಏಕೆ ಈ ರೀತಿ ಮಾಡಿದ್ದೀರಿ? ನಾವು ನಿಜವಾಗಿ APMC Act ಏನೋ ಪಾಸ್ ಮಾಡಿದ್ದೇವೆ, ಆದರೆ ದಳ್ಳಾಳಿ ಒಂದು ದಿನಕ್ಕೆ 1% extra ಕಟ್ಟಬೇಕೆಂದು ಏನು clause ಇದೆ, ಅದನ್ನು ಏಕೆ ಬಿಟ್ಟಿದ್ದೀರಿ? ಅದನ್ನು ಅಳವಡಿಸಿದರೆ ತಾವು ರಾಜ್ಯದಾದ್ಯಂತ

ಅಳವಡಿಸಬೇಕಾಗುತ್ತದೆ. ಅದರಲ್ಲಿ 1,500 ಕೋಟಿ ರೂಪಾಯಿ ವ್ಯತ್ಯಾಸವಾಗುತ್ತದೆ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು, ಅದನ್ನು ತಮ್ಮ ಮುಖಾಂತರ ನಾನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಇನ್ನು ಕೃಷಿಗೆ ಬೇಕಾಗಿರುವಂತಹ ಸಹಾಯವೇನೆಂದರೆ ಸಾಂಸ್ಥಿಕ ಸಹಾಯ. ವಿಶ್ವವಿದ್ಯಾನಿಲಯಗಳು ಇವತ್ತು ಟ್ರೋಫಿಗಳಾಗಿಬಿಟ್ಟಿವೆ. ನಮ್ಮ ಭಾಗಕ್ಕೆ ಒಂದು, ಅಲ್ಲಿಗೊಂದು, ಇಲ್ಲಿಗೊಂದು ಎಂದು. ಅವುಗಳಿಂದ ರೈತರಿಗೆ ಎಷ್ಟು ಅರ್ಥಪೂರ್ಣ ಕೊಡುಗೆಯಾಗುತ್ತಾ ಇದೆ ಎನ್ನುವುದರ ಬಗ್ಗೆ ನಾವು ವಿಚಾರ ಮಾಡುತ್ತಿಲ್ಲ. ವಿಶ್ವವಿದ್ಯಾನಿಲಯಗಳು ಆಗಬಹುದು ಅಥವಾ Credit Co-operative Societies ಗಳಲ್ಲಿ ನಿಜವಾಗಿ ನಾವು 3% ನಂತೆ ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದೇವೆ. ಆದರೆ ಎಷ್ಟು ಜನರಿಗೆ ಸಿಗುತ್ತಿದೆ? ಎಷ್ಟು ಪ್ರಮಾಣದಲ್ಲಿ ಸಿಗುತ್ತದೆ? ಒಂದು ಎಕರೆಗೆ short term crop loan ಎಂದು 15 ಅಥವಾ 25 ಸಾವಿರ ರೂಪಾಯಿ ಕೊಡುತ್ತಿದ್ದಾರೆ. ಅದರಿಂದ ನಿಜವಾಗಲೂ ರೈತ ಏನಾದರೂ ಬಂಡವಾಳ ಹಾಕುವುದಕ್ಕೆ ಸಾಧ್ಯವೇ? ಹೆಸರಿಗೆ ನಾವು ಶೇಕಡ ಮೂರರ ಬಡ್ಡಿ ದರದಲ್ಲಿ ನಾವು ಸಾಲವನ್ನು ಕೊಡುತ್ತಿದ್ದೇವೆ ಎಂದು ಹೇಳಿಕೊಳ್ಳುವುದು. ಆದರೆ ರೈತರಿಗೆ ಎಷ್ಟು ಸಾಲ ಸಿಗುತ್ತಿದೆ ಎನ್ನುವುದರ ಬಗ್ಗೆ ಯೋಚನೆ ಮಾಡಿದ್ದೀರಾ? ಇಲ್ಲ, ಹೆಸರಿಗೆ ಮೂರು ಪರ್ಸೆಂಟ್‌ಗೆ ಲೋನ್ ಕೊಡಬೇಕು ಅಷ್ಟಕ್ಕೆ ಮಾತ್ರ ಸೀಮಿತವಾಗಿದೆ. ಹಾಗೂ ನಾವು ಕೃಷಿಯಲ್ಲಿ ಬದಲಾವಣೆ ಆಗಬೇಕಾದರೆ ಸ್ವಲ್ಪಮಟ್ಟಿಗೆ ಯಾಂತ್ರೀಕರಣ ಆಗಬೇಕಾಗುತ್ತದೆ. Karnataka Agro Industries Corporation ಇತ್ತು. ಇಂತಹ ಸವಲತ್ತುಗಳನ್ನು ರೈತರ ಮನೆಬಾಗಿಲಿಗೆ ಕೊಡುತ್ತಿತ್ತು. ನಾನು ಮೊನ್ನೆ ನನ್ನ ಜಮೀನನ್ನು ಸಮ ಮಾಡಬೇಕೆಂದು ಹೋದಾಗ ಹಿಂದೆ ಸಮ ಮಾಡುವುದಕ್ಕೆ KAIC ಯಿಂದ dozer ಸಿಗುತ್ತಿತ್ತು. ಇವತ್ತು dozer ನಮಗೆ ಸಿಗುವುದೂ ಇಲ್ಲ, ನಾವು ಮಾರ್ಕೆಟ್‌ನಲ್ಲಿ ಅದನ್ನು ತೆಗೆದುಕೊಂಡು ಬಂದು ಅಷ್ಟು ಹಣ ಕಟ್ಟಿ level ಮಾಡುವುದಕ್ಕೂ ಕೂಡ ಆಗುವುದಿಲ್ಲ, ಇವತ್ತು ಆ ರೀತಿಯ ಪರಿಸ್ಥಿತಿಯಾಗಿದೆ. ಇವತ್ತು KAIC ಜಮೀನಿನಲ್ಲಿ ಮಂತ್ರಿಗಳಿಗೆ, ನ್ಯಾಯಾಧೀಶರಿಗೆ ಮನೆಗಳನ್ನು, ಬಂಗಲೆಗಳನ್ನು ಕಟ್ಟಬೇಕೆನ್ನುವ ಆಲೋಚನೆ ಬಂದಿದೆ. ಆ ಮಟ್ಟಕ್ಕೆ ಹೋದರೆ ನೀವು ಕೃಷಿಯನ್ನು ಹೇಗೆ

ಉದ್ಧಾರ ಮಾಡುವುದಕ್ಕಾಗುತ್ತದೆ ಎನ್ನುವುದನ್ನು ಸಹ ನಾವು ಯೋಚನೆ ಮಾಡಬೇಕಾಗುತ್ತದೆ.

ಮಾನ್ಯ ಮುಖ್ಯಮಂತ್ರಿಗಳು ಪ್ರಾಸ್ತಾವಿಕ ನುಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ 1/3 ಭಾಗದಷ್ಟು ಜನ ಇವತ್ತಿಗೂ ಕೂಡ ಬಡತನ ರೇಖೆಯ ಕೆಳಗಡೆ ಇದ್ದಾರೆ. ಏಕೆಂದರೆ ಅಲ್ಲಿ ಸರಿಯಾಗಿ ಉದ್ಯೋಗ ಇಲ್ಲ. ಅವರಿಗೆ ಯಾವುದೇ ಉದ್ಯೋಗ ಇಲ್ಲದಿರುವುದರಿಂದ ಅವರು ಹಳ್ಳಿಗಳಲ್ಲಿದ್ದಾರೆ. ಇದನ್ನು economics ನಲ್ಲಿ "distress labour" ಎಂದು ಕರೆಯುತ್ತಾರೆ, ಅವರಿಗೆ ಬೇರೆ ಎಲ್ಲೂ ಮಾರ್ಗ ಇಲ್ಲದೆ ಇರುವುದರಿಂದ ಅವರು ಅಲ್ಲಿ ಇದ್ದಾರೆ. ಇವತ್ತು ಅಲ್ಲಿ ಏನಾದರೂ ಬದಲಾವಣೆಯಾಗಬೇಕಾದರೆ ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಉದೋಗಗಳನ್ನು ಸೃಷ್ಠಿ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಅನೇಕರು ಚೀನಾ ಪ್ರವಾಸ ಮಾಡಿ ಬಂದಿದ್ದಾರೆ. ಚೀನಾದವರು 1978ನೇ ಇಸವಿಯಲ್ಲಿ ಆರ್ಥಿಕ ಸುಧಾರಣೆಗೆ ಹೆಜ್ಜೆ ಇಟ್ಟಾಗ ಅವರು ಮೊದಲು ಮಾಡಿದ ಕೆಲಸವೇನೆಂದರೆ ಗ್ರಾಮೀಣ ಪ್ರದೇಶದಲ್ಲಿ Tool industries ಗೆ ಬಹಳ ಉತ್ತೇಜನವನ್ನು ಕೊಟ್ಟರು. ಅದರಿಂದ ತಾನೇ ತಾನಾಗಿ ಕೃಷಿಯಲ್ಲಿ surplus labour, distress labour ಏನಿತ್ತು, ಅವರಿಗೆ employment create ಆಗಿ tool industry ಮುಖಾಂತರ ಕೃಷಿಯಲ್ಲಿ ಯಾಂತ್ರೀಕರಣಕ್ಕೆ ಕೊಡುಗೆಯಾಯಿತು, ಅದರ ಜೊತೆಗೆ extra labour ಸಹ absorb ಆಯಿತು. ನಾವು ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ನಗರೀಕರಣವನ್ನು ತಡೆಯಬೇಕಾದರೂ ಕೂಡ ಅಲ್ಲಿ ನಾವು ಉದ್ಯೋಗವನ್ನು ಸೃಷ್ಠಿ ಮಾಡಬೇಕಾಗುತ್ತದೆ. ಅಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಉತ್ತೇಜನವನ್ನು ಕೊಡುವುದಾಗಲಿ, ಸಹಾಯ ಕೊಡುವುದಾಗಲಿ, ಇದು ಬಹಳ ಅವಶ್ಯಕವಾಗಿ ಆಗಬೇಕಾಗಿದೆ. ಆದುದರಿಂದ ಇವೆಲ್ಲಾ ಆಗಬೇಕಾದರೆ ನಮ್ಮ ದೂರದೃಷ್ಟಿ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕು. ನಾನು ಒಂದು ಬಾರಿ ಸುಮ್ಮನಿರಲಾರದೆ ನಿಮ್ಮ ಕೃಷಿ ಇಲಾಖೆಯಲ್ಲಿ ಏನೆಲ್ಲ ಯೋಜನೆಗಳು ಇವೆ, ಅವೆಲ್ಲವನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದೆ. ಮಾನ್ಯ ಅಧ್ಯಕ್ಷರೆ, ಕೃಷಿ ಇಲಾಖೆಯಲ್ಲಿ 58 ಪುಟದಷ್ಟು ಯೋಜನೆಗಳು ಇವೆ. 58 ಪುಟಗಳಷ್ಟು ಯೋಜನೆಗಳನ್ನು ಇಟ್ಟುಕೊಂಡು ನೀವು ನಿಜವಾಗಲೂ ಉದ್ಧಾರ ಮಾಡುವುದಕ್ಕಾಗುತ್ತದೆಯೇ? ಆರು ಯೋಜನೆಗಳ ಅಡಿಯಲ್ಲಿ tractor

subsidy ಯನ್ನು ಕೊಡುತ್ತಿದ್ದಾರೆ. ಅವುಗಳು ಸರಳೀಕರಣವಾಗಬೇಕಾಗಿದೆ. ಕೆಲವು ಮುಖ್ಯ ಗುರಿಗಳನ್ನು ಇಟ್ಟುಕೊಳ್ಳಬೇಕು. ನಾವು ಎಲ್ಲರನ್ನೂ ಸಮಾಧಾನ ಮಾಡುತ್ತೇವೆಂದರೆ ಯಾರನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಕೆಲವು ಸರಳವಾದಂತಹ ಗುರಿಗಳನ್ನು ಇಟ್ಟುಕೊಂಡು ಮೂಲಭೂತವಾದಂತಹ ಬದಲಾವಣೆ ಬಂಡವಾಳ ಹೂಡುವುದರ ಮುಖಾಂತರ ತರಬೇಕು ಎಂದು. ಯೋಚನೆ ಮಾಡದೆ 58 ಪುಟಗಳಿಗೆ ಆಗುವಷ್ಟು ಸ್ಕೀಮ್‌ಗಳನ್ನು ಇಟ್ಟುಕೊಂಡರೆ ಯಾರೂ ಉದ್ಧಾರವಾಗುವುದಿಲ್ಲ. ಅದು ಕೇವಲ ನಮ್ಮ ಚುನಾವಣೆಗಳಿಗೆ ಮಾತ್ರ ಸೀಮಿತವಾದಂತಹ ವಿಚಾರಗಳು ಆಗುತ್ತವೆ ಹೊರತು ರೈತ ಉದ್ಧಾರವಾಗುವುದಿಲ್ಲ. ವೆಚ್ಚ ಮತ್ತು ಬಂಡವಾಳ ಇವುಗಳಿಗೆ ಬಹಳ ವ್ಯತ್ಯಾಸವಿದೆ. ನಾವು ವೆಚ್ಚಗಳನ್ನು ಮಾಡಿ ರೈತರನ್ನು ಉದ್ಧಾರ ಮಾಡುತ್ತೇವೆಂದು ಹೇಳಿದರೆ ಸಾಧ್ಯವಿಲ್ಲ. ಬಂಡವಾಳ ಹೂಡುವುದರ ಮುಖಾಂತರ ಮಾತ್ರ ನಾವು ರೈತರನ್ನು ಮೇಲೆ ತರುವುದಕ್ಕೆ ಸಾಧ್ಯವಾಗುತ್ತದೆ. ಆ ಕಡೆಗೆ ಪರಿಣಾಮಕಾರಿಯಾದಂತಹ ಕೆಲವು ಯೋಜನೆಗಳನ್ನು ಈ ಒಂದು ವಿಶೇಷ ಅಧಿವೇಶನದ ಸಂದರ್ಭದಲ್ಲಿ ಅದನ್ನು ಕೈಗೆತ್ತಿಕೊಂಡರೆ ಅವರ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಇಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಖಂಡಿತವಾಗಿ ರೈತರಿಗೆ ಅನುಕೂಲವಾಗುತ್ತದೆ ಎಂದು ನನ್ನ ಒಂದೆರಡು ಸಲಹೆಗಳನ್ನು ತಮ್ಮ ಮುಖಾಂತರ ಸರಕಾರದ ಮುಂದೆ ಇಟ್ಟು. ಮಾನ್ಯ ಅಧ್ಯಕ್ಷರೆ, ನನಗೆ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಮಂಜು (ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಇವತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಯವರು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ವಿಶೇಷ ಅಧಿವೇಶನವನ್ನು ಕರೆದು, ಅವರು ಪುಸ್ತಕದ ಮುಖಾಂತರ ಅವರ ಪ್ರಾಸ್ತಾವಿಕ ನುಡಿಗಳನ್ನು 82 ಪ್ಯಾರಾಗಳಲ್ಲಿ ಹೇಳಿದ್ದಾರೆ. ಅವರು ಮುಖ್ಯಮಂತ್ರಿಗಳಾಗಿ ಒಂದೂವರೆ ವರ್ಷಗಳಾದ ಮೇಲೆ ಈ ಪುಸ್ತಕವನ್ನು ತಂದಿರುವುದನ್ನು ನೋಡಿದರೆ, ಅವರಿಗೆ ನಿಜವಾ ಗಿಯೂ ರೈತರ ಬಗ್ಗೆ ಎಷ್ಟು ಕಾಳಜಿ ಇದೆ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಎಷ್ಟು ಕಾಳಜಿ ಇದೆಯೆಂಬುದು ಅರ್ಥವಾಗುತ್ತದೆ. ಮಾನ್ಯ ಮುಖ್ಯಮಂತ್ರಿ ಯವರು ಕಣ್ಣೀರು ಹಾಕಿದರು, ಇದರಿಂದ ನನಗೂ ಕೂಡ ದುಃಖವಾಗುತ್ತದೆ. ಅವರು ಕಣ್ಣೀರು ಹಾಕುವಂಥ ಅವಶ್ಯಕತೆ ಇರಲಿಲ್ಲ. ಆದರೆ ಅವರ ಕಣ್ಣೀರು

ಅವರ ಮಂತ್ರಿಮಂಡಲದ ಅಸಹಾಯಕತೆಯನ್ನು ಎದ್ದು ತೋರಿಸುತ್ತಿತ್ತೆಂದು ನನ್ನ ಭಾವನೆ. ಅವರು ಚೈನಾ ದೇಶಕ್ಕೆ ಹೋಗಿ ಬಂದ ಮೇಲೆ ಪರಿವರ್ತನೆಯಾಗಿರುವಂಥದ್ದು ನಿಜವಾಗಿಯೂ ಸಂತೋಷದ ವಿಚಾರ ವಾಗಿದೆ. ಅವರು ಅಲ್ಲಿಗೆ ಹೋಗಿ ಬದಲಾವಣೆಯಾಗಿ, ಜ್ಞಾನೋದಯ ವಾಗಿದೆಯೆನ್ನುವುದನ್ನು ಕೂಡ ನಾವು ಅರಿತುಕೊಳ್ಳಬೇಕು. ನಮಗೆ ಏಕೆ ಖುಷಿಯಾಗುತ್ತದೆಂದರೆ ಮಾನ್ಯ ಮುಖ್ಯಮಂತ್ರಿಯವರು ಬದಲಾವಣೆಯಾಗಿ ರುವುದರಿಂದ 224 ಕ್ಷೇತ್ರಗಳನ್ನು ಇನ್ನು ಮುಂದಾದರೂ ಅವರು ಒಂದೇ ರೀತಿಯಾಗಿ ನೋಡುತ್ತಾರೆಂಬ ಭಾವನೆ, ಕಲ್ಪನೆ, ನನಗಿರುವ ಅನಿಸಿಕೆ. ಮಾನ್ಯ ಮುಖ್ಯಮಂತ್ರಿಯವರಿಗೆ ತಮ್ಮ ಅಧಿಕಾರದ ಅವಧಿಯಲ್ಲಿ ಎಲ್ಲವನ್ನು ಮಾಡಬೇಕೆಂಬ ಆಸೆ ಇದೆ. ಮಾನ್ಯ ಕೃಷಿ ಮಂತ್ರಿಯವರು ಇಲ್ಲೇ ಇದ್ದಾರೆ. ಅವರಿಗೆ ಸರ್ಕಾರಕ್ಕೆ ಹೆಸರು ಬರಬೇಕು, **development** ಮಾಡಬೇಕು, **agriculture** ನಲ್ಲಿರುವಂಥ ಕೆಲಸಗಳನ್ನು ಅನುಷ್ಠಾನ ಮಾಡಬೇಕು. ಈ ಕೆಲಸಗಳನ್ನು ಅಧಿಕಾರಿಗಳು ಮಾಡದೇ ಇದ್ದರೆ ಏಕೆ ಮಾಡಿಲ್ಲವೆಂದು ಕೇಳಬೇಕು. ಇದನ್ನು ಆ ಇಲಾಖೆಯ ಮಂತ್ರಿಗಳು ಮಾಡಬೇಕಾಗಿ ರುವಂಥದ್ದು. ನನಗೆ ಮಾನ್ಯ ಕೃಷಿ ಮಂತ್ರಿಯವರು ಬಹಳ ಹತ್ತಿರದವರಾಗಿದ್ದು, ನನಗೆ ಗೊತ್ತಿರುವಂತೆ ಅವರು ನನ್ನ ಜಿಲ್ಲೆಗೆ ಒಂದು ಬಾರಿಯೂ ಬಂದಿಲ್ಲ. ಬೇರೆ ಜಿಲ್ಲೆಗಳಿಗೆ ಬಂದಿದ್ದಾರೋ, ಇಲ್ಲವೋ, ನನಗೆ ಗೊತ್ತಿಲ್ಲ. ಇದು ಸರಿಯಾಗಬೇಕಾದರೆ ಮಾನ್ಯ ಮಂತ್ರಿಗಳು ಆಯಾ ಇಲಾಖೆಗಳಲ್ಲಿ ಸರ್ಕಾರದಲ್ಲಿರುವಂಥ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಾಗ ಮಾತ್ರ ಇದಕ್ಕೆ ಅರ್ಥವಿರುತ್ತದೆ. ಮಾನ್ಯ ಕೃಷ್ಣ ಬೈರೇಗೌಡರು ಮಾತನಾಡುತ್ತಾ 58 ಪುಟಗಳ ಕಾರ್ಯಕ್ರಮಗಳು ಇರುವಂಥದ್ದು. ಈ 58 ಪುಟಗಳ ಕಾರ್ಯಕ್ರಮಗಳಲ್ಲಿ ಕೊನೆಯ ಹಂತದ ಬಜೆಟ್ ಬಂದಾಗ ಮಾತ್ರ ಸಬ್ಸಿಡಿ ಮುಖಾಂತರ ಅವರಿಗೆ ಕೊಡಬೇಕು, ಇವರಿಗೆ ಕೊಡಬೇಕೆಂದು ಬರೆದುಕೊಂಡು ತೀರಿಸುತ್ತಾರೆಯೇ ಹೊರತು, ಬೇರೆಯದರಲ್ಲಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುವುದೆ ನೆಂದರೆ ಶ್ರೀ ಎಸ್.ಪಿ.ಬಾಲಸುಬ್ರಹ್ಮಣ್ಯಂ ಜೇಸುದಾಸ್‌ರವರು ಹಾಡುಗಳನ್ನು ಹಾಡುವ ಹಾಗೆ ಅವರವರ ಭಾಷೆಯಲ್ಲಿ, ಅವರವರ ಭಾವನೆಯಲ್ಲಿ ಹಾಡು ಹಾಡಿದ ಹಾಗೆ, ನಾನೂ ಮಾತನಾಡಿದೆ ಎಂದು ನಾವು ಇಲ್ಲಿ ಮಾತನಾಡಿ ಕೊಳ್ಳುತ್ತಿದ್ದೇವೆ ಅಷ್ಟೆ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು

ಕೇಳುವುದೇನೆಂದರೆ, ಇಲ್ಲಿ ಪುಸ್ತಕವನ್ನು ಕೊಟ್ಟಿರುವಂಥದ್ದರಲ್ಲಿ ನಾನು ಹೀಗೆ ಮಾಡಿದ್ದೇನೆಂದು ನೀವು ನಮ್ಮ ಸಲಹೆಯನ್ನು ಕೇಳುವುದಾದರೆ, ನನ್ನ ಭಾವನೆಯಲ್ಲಿ ಸರ್ಕಾರ ಈ ಕೆಲಸವನ್ನು ಮಾಡಿದ್ದೇವೆ, ಇದನ್ನು ಇಟ್ಟಿದ್ದೇವೆಂದು ಹೇಳಿ, ಇದಕ್ಕೆ ತಾವು ಸಹಕರಿಸಬೇಕೆಂದು ಹೇಳುವ ಎದೆಗಾರಿಕೆ ಇರಬೇಕು, ಒಂದು ಬದ್ಧತೆ ಇರಬೇಕು. ಆಗ ಮಾತ್ರ ಸರ್ಕಾರ ಕೆಲಸ ಮಾಡಿದ್ದಕ್ಕೂ ಸಾರ್ಥಕವಾಗುತ್ತದೆಂದು ಹೇಳುತ್ತೇನೆ. ನಾವೆಲ್ಲರೂ ಸಹ ರೈತರ ಮಕ್ಕಳಾಗಿದ್ದು, ನಾವೆಲ್ಲರೂ ಮಾತನಾಡಬೇಕಾದರೆ ನಾವು ರೈತರ ಮಕ್ಕಳು, ನಾವು ರೈತರ ಬಗ್ಗೆ ಚಿಂತನೆ ಮಾಡುತ್ತೇವೆ. ನಾವು ಶೇ. 72 ರಷ್ಟು ರೈತರು ಇದ್ದಾರೆಂದು ಹೇಳುತ್ತಲೇ ಇದ್ದೇವೆ. ಆದರೆ ನಾವು ಶೇ. 72 ಇದ್ದಾರೆಂದು ಓಟಿಗೆ ಮಾತ್ರ ಹೇಳುವಂಥದ್ದು. ಅವರ ಕಣ್ಣೀರನ್ನು ಒರೆಸುವುದಕ್ಕೆ ಮಾತ್ರ.., ಎಲ್ಲಾ ಮುಖ್ಯಮಂತ್ರಿಗಳು ಅದೇ ಕೆಲಸವನ್ನು ಮಾಡಿಕೊಂಡು ಬಂದಿರುವಂಥದ್ದು. ಆ ರೀತಿ ಆಗಬಾರದು, ಈಗ ಮಾನ್ಯ ಮುಖ್ಯಮಂತ್ರಿಯವರಿಗೆ ಚೈನಾ ದೇಶದ ಪ್ರವಾಸ ಯಶಸ್ವಿಯಾಗಿದೆ, ಬದಲಾವಣೆಯೂ ಆಗಿದೆ. ನಾವು ಅದನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಇದರ ಜೊತೆಗೆ rural development ನಲ್ಲಿ ಹಲವಾರು ಕಾರ್ಯಕ್ರಮಗಳು ಇವೆ. ಕೇಂದ್ರ ಸರ್ಕಾರದಿಂದ ಬಂದಂಥ ಹಣ ಅದು ಕೃಷಿಗೆ ಇರಬಹುದು, ವಿವಿಧ ಇಲಾಖೆಗಳಿಗೆ ಬಂದಿರುವಂಥ ಹಣ ಎಲ್ಲವೂ ವಾಪಸ್ಸು ಹೋಗುತ್ತಿದೆ. ಅದು ಏಕೆ ಹೋಗುತ್ತಿದೆ? ಅದೇ state government ನಲ್ಲಿ ಕೊಟ್ಟಿರುವಂಥ ಹಣ ಪೂರ್ತಿಯಾಗಿ ಖರ್ಚಾಗುತ್ತಿದೆ. ಅದು ಏಕೆ ಖರ್ಚಾಗುತ್ತಿದೆಯೆಂದರೆ ಇದರಲ್ಲಿ ಕಾನೂನು ಕಟ್ಟಳೆಗಳು ಇವರ ಇಷ್ಟದಂತೆ ಇರುತ್ತದೆ. Central Government Policy ಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಇದ್ದು, ಈ ಯೋಜನೆಯಲ್ಲಿ ಬೇರೆ ರಾಜ್ಯಗಳಲ್ಲಿ 6,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಖರ್ಚು ಆಗಿಲ್ಲ. ಈ ಹಣ ಖರ್ಚು ಆಗದೇ ಇರುವುದಕ್ಕೆ ಕಾರಣ ಚುನಾಯಿತ ಪ್ರತಿನಿಧಿಗಳಲ್ಲ, ಅಧಿಕಾರಿಗಳು ಏಕೆ ಖರ್ಚು ಮಾಡಿಲ್ಲವೆಂದು ಕೇಳಿ, ಹೀಗೆ ಮಾಡಬೇಕೆಂದು ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವ ಮಾನ್ಯ ಮುಖ್ಯಮಂತ್ರಿಯವರು ಅವರಿಗೆ ತಾಕೀತು ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆಯೇ, ಹೊರತು ಇಲ್ಲವೆಂದರೆ ಸಾಧ್ಯವಾಗುವುದಿಲ್ಲ. ಈಗ ಸುವರ್ಣ ಗ್ರಾಮ ಯೋಜನೆ ಅಡಿಯಲ್ಲಿ ನೀವು ಸುವರ್ಣ ಗ್ರಾಮವನ್ನು ಕೊಟ್ಟಿದ್ದೀರಿ. ಆ ಸುವರ್ಣ ಗ್ರಾಮದಲ್ಲಿ 1:3 ಇತ್ತು,

ಅಂದರೆ 2,000 ಜನಸಂಖ್ಯೆ ಹೊಂದಿರುವಂಥ ಒಂದು ಗ್ರಾಮಕ್ಕೆ ಸುವರ್ಣ ಗ್ರಾಮವೆಂದು ಘೋಷಣೆ ಮಾಡಿದ್ದಾರೆ. ಇದಕ್ಕೆ 28 ರಿಂದ 35 ಲಕ್ಷ ರೂಪಾಯಿಗಳನ್ನು ಸುವರ್ಣ ಗ್ರಾಮ ಯೋಜನೆ ಅಡಿಯಲ್ಲಿ ವಿವಿಧ ರಸ್ತೆಗಳಿಗೆ, ಚರಂಡಿಗಳಿಗೆ ಮತ್ತು ಶೌಚಾಲಯಗಳಿಗೆ ಕೊಡುವಂಥದ್ದು ಇದೆ. ಅದಾದ ಮೇಲೆ ಅದನ್ನು ವಿವಿಧ ಇಲಾಖೆಯವರು ಮೂರು ಪಟ್ಟು ಮಾಡಿ ಗ್ರಾಮವನ್ನು develop ಮಾಡಬೇಕೆಂದು ಇರುವಂಥ ಚಿಂತನೆ. ಆ ಚಿಂತನೆಯನ್ನು ಮೊಟಕು ಮಾಡಿ ಬಿಟ್ಟಿದ್ದಾರೆ. ಈಗ ಎಷ್ಟು ಹಣವನ್ನು ಕೊಟ್ಟಿರುತ್ತಾರೆ, ಅದಕ್ಕೆ ಸೀಮಿತವಾಗಿ ಕೆಲಸವನ್ನು ಮಾಡಬೇಕೆಂದು ಮಾಡಿದ್ದಾರೆ. ಗ್ರಾಮದ ಪರಿಮಿತಿ ಎರಡೂವರೆ, ಮೂರು ಕಿ.ಮೀ. ರಸ್ತೆ ಇದ್ದರೆ, ಅದಕ್ಕೆ 70, 80 ಲಕ್ಷ ರೂಪಾಯಿಗಳು ಖರ್ಚಾಗಬೇಕಾಗಿರುವಂಥದ್ದು. ಅದಕ್ಕೆ ನೀವು 22 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ, ಆ ರಸ್ತೆಗಳು ಎಲ್ಲಿ ಆಗುತ್ತವೆ? ಅಭಿವೃದ್ಧಿ ಎಲ್ಲಿ ಆಗುತ್ತದೆ? ಅದುದರಿಂದ ಮಾನ್ಯ ಮುಖ್ಯಮಂತ್ರಿಯವರು ಹಿಂದೆ 1:3 portion ಎಂದು ಏನು ಕಾನೂನು ಇತ್ತು, ಅದನ್ನು ದಯವಿಟ್ಟು continue ಮಾಡಬೇಕು, ಬದಲಾವಣೆ ಮಾಡಬಾರದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಚುನಾವಣೆ ಬಂದಾಗ ಮಾತ್ರ ಜನರಿಗೆ ಸಹಾಯ ಮಾಡುವಂಥದ್ದು. ಕಳೆದ ಬಾರಿ ಪಾರ್ಲಿಮೆಂಟ್ ಚುನಾವಣೆ ಬಂದಾಗ ಯಥೇಚ್ಛವಾಗಿ ಹಣವನ್ನು ಕೊಟ್ಟು 3,200 ಕೋಟಿ ರೂಪಾಯಿಗಳನ್ನು ಕೊಟ್ಟು ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡಿದ್ದೀರಿ. ಈಗ ರೈತರಿಗೆ ವಿದ್ಯುತ್ ಸಮಸ್ಯೆ ಇದೆ. ಈಗ ಎರಡು ಗಂಟೆಗಳು ಮಾತ್ರ ವಿದ್ಯುತ್ ಇರುವಂಥದ್ದು. ಈಗ ಅದರ ಬಗ್ಗೆ ಏಕೆ ನೀವು ಚಿಂತನೆ ಮಾಡುವುದಿಲ್ಲ. ನೀವು ಚುನಾವಣೆ ಬಂದಾಗ ಮಾತ್ರ ಈ ಬಗ್ಗೆ ಚಿಂತನೆ ಮಾಡುತ್ತೀರಿ. ನೀವು ಯಾವಾಗಲೂ ರೈತರ ಪರವಾಗಿ ಇರುವಂಥವರು. ನೀವು ಕೊನೆಯವರೆಗೂ ರೈತರನ್ನು ಉದ್ಧಾರ ಮಾಡಬೇಕೆಂಬ ಭಾವನೆಯನ್ನು ಇಟ್ಟುಕೊಳ್ಳಬೇಕೆಂಬ ಮಾತನ್ನು ಹೇಳುತ್ತೇನೆ. ಈಗ ಎಸ್.ಇ.ಝಡ್. ಎಂದು ವಿಶೇಷವಾಗಿ ಏನು ಮಾಡಿದ್ದೀರಿ, ಅದೇ ರೀತಿಯಲ್ಲಿ ಕೃಷಿಗೂ ಸಹ ವಿಶೇಷವಾಗಿ ಮಾಡಬೇಕು. ಆಗ ಮಾತ್ರ ನೀವು ರೈತರನ್ನು protect ಮಾಡಿದಂತೆ ಆಗುತ್ತದೆ. ನೀವು ಅವರಿಗೆ ಹೆಚ್ಚಿನ ಶಕ್ತಿಯನ್ನು ಕೊಟ್ಟ ಹಾಗೆ ಆಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ ಇನ್ನೊಂದು ವಿಚಾರವೇನೆಂದರೆ ಡಾ.ನಂಜುಂಡಪ್ಪನವರ ವರದಿಯ ಪ್ರಕಾರ 139 ತಾಲ್ಲೂಕುಗಳು ಅತಿ

ಹಿಂದುಳಿದ ತಾಲ್ಲೂಕುಗಳೆಂದು ತಂದರು. ಅದು ಏಕೆಂದರೆ ಹಿಂದೆ ತಾರತಮ್ಯ ಮಾಡಿ ತಾಲ್ಲೂಕು ಅಭಿವೃದ್ಧಿ ಮಾಡಿಲ್ಲ. ಆ ತಾಲ್ಲೂಕುಗಳಿಗೆ ಮೋಸವಾಗಿದೆ ಎಂದು ಅದಕ್ಕೆ ಅವುಗಳಿಗೆ ರಾಜಕೀಯ ಶಕ್ತಿಗಳು ಇಲ್ಲದೇ ಇರುವಂಥದ್ದು ಅವುಗಳಿಗೆ ಅನ್ಯಾಯವಾಗಿದೆಯೆಂದು ಈ ವರದಿಯ ಆಧಾರದ ಮೇಲೆ ಈ 139 ತಾಲ್ಲೂಕುಗಳನ್ನು ಏನು ಗುರುತು ಮಾಡಿದ್ದಾರೆ. ಅದನ್ನು ಗಾಳಿಗೆ ತೂರಿ 2010ನೇ ಇಸವಿಯಲ್ಲಿ 22 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆ ತಾಲ್ಲೂಕುಗಳನ್ನು ಉದ್ಧಾರ ಮಾಡಬೇಕೆಂದು ಏನು ಇದ್ದೀರಿ, ಅದಕ್ಕೆ ಕೊಟ್ಟಿರುವಂಥ ಹಣವನ್ನು ಮೊಟಕು ಮಾಡುತ್ತಿದ್ದೀರಿ. ನಿಮ್ಮ ಸರ್ಕಾರಕ್ಕೆ ಬದ್ಧತೆ ಇದ್ದರೆ, ಡಾ. ನಂಜುಂಡಪ್ಪನವರ ಆತ್ಮಕ್ಕೆ ಶಾಂತಿ ಸಿಗಬೇಕೆಂದರೆ ಇದನ್ನು ಒಂದು Act ಮುಖಾಂತರ ತೆಗೆದುಕೊಂಡು ಬನ್ನಿ. ಈ Act ಮುಖಾಂತರ 22 ಸಾವಿರ ಕೋಟಿ ರೂಪಾಯಿಗಳನ್ನು ಆ ತಾಲ್ಲೂಕುಗಳ ಅಭಿವೃದ್ಧಿ ಪಡಿಸುವಂಥ ವ್ಯವಸ್ಥೆಯನ್ನು ನೀವು ಮಾಡಿ. ಆಗ ಜನರು ನಿಮ್ಮನ್ನು ನಂಬುತ್ತಾರೆ. ಡಾ. ನಂಜುಂಡಪ್ಪನವರ ಆತ್ಮಕ್ಕೂ ಸಹಾ ಶಾಂತಿ ಸಿಗುತ್ತದೆ. ಅವರ ಹೆಸರನ್ನು ಹೇಳಿ backward ತಾಲ್ಲೂಕುಗಳನ್ನು ಮಾಡುವಂಥದ್ದು. ನಮಗೆ ನಿಜವಾಗಿಯೂ ಇದರಿಂದ ನೋವಾಗಿದೆ. ನೀವು ಕೊಟ್ಟಿರುವಂಥ ಹಣದಲ್ಲಿ ಮೊಟಕು ಮಾಡಿ ಕೊಟ್ಟಿರುವಂಥದ್ದು ನೋವಾಗಿದೆ. ಇವತ್ತು ಸದನದಲ್ಲಿ ಹಿರಿಯ ಸದಸ್ಯರು ಮಾತನಾಡಿದ್ದಾರೆ. ದಯಮಾಡಿ ನಮ್ಮ ವಿರೋಧ ಪಕ್ಷದ ನಾಯಕರನ್ನು ಕೇಳಿಕೊಳ್ಳುವುದೇನೆಂದರೆ ಸದನಕ್ಕೆ ಹೊಸದಾಗಿ ಆಯ್ಕೆಯಾಗಿ ಬಂದಿರುವಂಥ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಕೊಟ್ಟು ನಂತರ ತಾವು ಮಾತನಾಡಲು ಅವಕಾಶ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಕೊನೆಯದಾಗಿ ಶ್ರೀಮತಿ ಅನಿತಾ ಕುಮಾರಸ್ವಾಮಿಯವರೇ ಮಾತನಾಡಿ.

ಶ್ರೀ ಬಿ.ಸಿ.ಪಾಟೀಲ್ : ಮಾನ್ಯ ಅಧ್ಯಕ್ಷರೆ, . . .

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಸಿ.ಪಾಟೀಲ್ : ನಮಗೆ ಐದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ. ನಾವು ಕಾಯುತ್ತಿದ್ದೇವೆ.

ಅಧ್ಯಕ್ಷರು : ಬಿ.ಸಿ.ಪಾಟೀಲರೇ, time limit ಮುಗಿದಿದೆ. ರಮಾನಾಥ ರೈರವರೇ, ತಾವು ಕುಳಿತುಕೊಳ್ಳಿ. ಈವರೆಗೆ ಮಹಿಳೆಯರು ಯಾರೂ ಮಾತನಾಡಿಲ್ಲ. ಮಹಿಳೆಯರ ಪರವಾಗಿ ಅವರು ಮಾತನಾಡಲಿ. ಅವರ ನಂತರ ವಿರೋಧ ಪಕ್ಷದ ನಾಯಕರು ಮಾತನಾಡಲಿ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ರಮಾನಾಥ ರೈ : ಅವರು ಮಾತನಾಡಲಿ. ಅವರು ಮಾತನಾಡಿದ ನಂತರ ನಮಗೂ ಒಂದು ಐದು ನಿಮಿಷ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಒಂದು time limit ಇದೆ. ರಮಾನಾಥ ರೈ ರವರೇ limit ಇದೆ. ಇನ್ನು ಸಾಕು. I have given lot of time. ಇನ್ನೂ ಸಾಕಷ್ಟು ಅವಕಾಶಗಳು ಇವೆ. ಇನ್ನೂ ಮೂರು ದಿವಸ ಮಾತನಾಡುವುದಕ್ಕೆ ಅವಕಾಶವಿದೆ. ಆಗ ಇಲ್ಲಿ ಯಾರು ಮಾತನಾಡಿಲ್ಲ, ಅವರು ಮಾತನಾಡಲಿ. ಇವತ್ತೇ ಸಭೆ ಮುಗಿದಿಲ್ಲ. ಮಾತನಾಡಲು ಇನ್ನೂ ಮೂರು ದಿವಸ ಅವಕಾಶವಿದೆ. ಆಗ ನಿಮಗೆ ಅವಕಾಶ ಕೊಡುತ್ತೇನೆ. ಶ್ರೀಮತಿ ಅನಿತಾ ಕುಮಾರಸ್ವಾಮಿಯವರೇ, ನೀವು ಮಾತನಾಡಿ.

ಶ್ರೀಮತಿ ಅನಿತಾ ಕುಮಾರಸ್ವಾಮಿ (ಮಧುಗಿರಿ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸಲಿಚ್ಛಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿರುವಂತೆ ನಮ್ಮ ದೇಶದ ಗ್ರಾಮೀಣ ಭಾಗದಲ್ಲಿ ಜನರು ಹೆಚ್ಚಾಗಿ ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಅದರಲ್ಲೂ ನೈಸರ್ಗಿಕವಾದ ಮಳೆಯ ಮೇಲೆ ಅವಲಂಬಿತವಾಗಿರುವ ವ್ಯವಸಾಯವಾಗಿದೆ. ಸಾಮಾನ್ಯವಾಗಿ ಅತಿವೃಷ್ಟಿಯಾಗಿರುತ್ತದೆ ಇಲ್ಲವೆಂದರೆ ಅನಾವೃಷ್ಟಿಯಾಗಿರುತ್ತದೆ. ಎಲ್ಲವೂ ಸರಿಯಾಗಿದ್ದೂ ಉತ್ತಮ ಬೆಳೆ ಬಂದರೆ ರೈತನ ಶ್ರಮಕ್ಕೆ ತಕ್ಕಂತೆ ಬೆಳೆಗೆ ಬೆಲೆ ಸಿಗುವುದಿಲ್ಲ. ಈ ರೀತಿಯಲ್ಲಿ ರೈತನ ಜೀವನ ಬಹಳ ಕಷ್ಟದಲ್ಲಿ ಸಾಗಿದೆ. ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿರುವಂತೆ ರೈತರಿಗೆ ಬೇಕಾಗಿರುವಂಥ ಉತ್ತಮ ಗೊಬ್ಬರ, ಬಿತ್ತನೆ ಬೀಜ, ಅವರ ಕೈಗೆಟುಕುವ ಬೆಲೆಯಲ್ಲಿ ಸಿಗುವಂತೆ ಆಗಬೇಕು. ಇನ್ನು ಗ್ರಾಮೀಣ ಭಾಗಗಳಲ್ಲಿ ವಿದ್ಯುಚ್ಛಕ್ತಿಯ ತೊಂದರೆ ಇದೆ. ಇದನ್ನು ಸರಿ ಮಾಡುವಂಥದ್ದು ಆಗಬೇಕು. ಇದಲ್ಲದೆ, ವ್ಯವಸಾಯಕ್ಕೆ ಬೇಕಾದಂಥ ಬಂಡವಾಳ ಬ್ಯಾಂಕ್‌ಗಳಲ್ಲಿ

ಸುಲಭವಾಗಿ ಸಾಲ ದೊರೆಯುವಂತೆ ಆಗಬೇಕು. ಇದಲ್ಲದೆ ಅವರಿಗೆ ಉತ್ತಮ ಬೆಳೆ ಬಂದಾಗ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುವಂತೆ ಆಗಬೇಕು.

(4-30 PM)

ನೈಸರ್ಗಿಕವಾಗಿ ಏನಾದರೂ ತೊಂದರೆಯಾದಾಗ, ಅಂದರೆ ಪ್ರಕೃತಿ ವಿಕೋಪಕ್ಕೆ ಒಳಗಾಗಿ ಬೆಳೆ ನಾಶವಾದಾಗ ಸರ್ಕಾರದ ಕಡೆಯಿಂದ ಪರಿಹಾರ ಧನ ತಕ್ಷಣ ರೈತರ ಕೈಗೆ ಸಿಗುವಂತಾಗಬೇಕು. ಇದಲ್ಲದೇ, ರೈತರಿಗೆ ಕೃಷಿಯನ್ನು ಬಿಟ್ಟು ಬೇರೆ ರೀತಿಯಲ್ಲಿ ಆದಾಯವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಬೇರೆ ರೀತಿಯಲ್ಲಿ ಅನುಕೂಲಗಳನ್ನು ಮಾಡಿಕೊಡಬೇಕಾಗಿದೆ. ಹೈನುಗಾರಿಕೆ, ಪಶುಸಂಗೋಪನೆ, ಕುರಿಸಾಗಾಣಿಕೆ ಈ ರೀತಿಯ ಚಟುವಟಿಕೆಗಳಿಗೆ ಸರ್ಕಾರದ ಕಡೆಯಿಂದ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕಾಗುತ್ತದೆ. ಇದಲ್ಲದೇ, ಗ್ರಾಮೀಣ ಭಾಗದ ಮಹಿಳೆಯರಲ್ಲಿ ಕೆಲವರು ಪ್ರತಿಭಾವಂತರಿದ್ದಾರೆ. ಅವರು ಕೆಲವು ವಸ್ತುಗಳನ್ನು ಉತ್ಪಾದನೆ ಮಾಡುತ್ತಿದ್ದಾರೆ. ಅವರು ಕಷ್ಟಪಟ್ಟು ಬೆಳಗಿನಿಂದ ಸಂಜೆಯವರೆಗೂ ದುಡಿಯುತ್ತಾರೆ. ಆದರೆ ಉತ್ಪಾದನೆ ಮಾಡಿದಂಥ ವಸ್ತುಗಳನ್ನು marketing ಮಾಡಲು ಅವರಿಗೆ ಗೊತ್ತಾಗುತ್ತಿಲ್ಲ. ಈ ನಿಟ್ಟಿನಲ್ಲಿ ಸರ್ಕಾರದ ಕಡೆಯಿಂದ ಪ್ರತಿ ಜಿಲ್ಲೆಯಲ್ಲೂ ಸಹ marketing ಮಾಡಲು ಒಂದು ಕಟ್ಟಡದ ವ್ಯವಸ್ಥೆಯಾಗಬೇಕು ಮತ್ತು ಸರ್ಕಾರದ ಕಡೆಯಿಂದ ಅವರಿಗೆ ನೆರವು ನೀಡಬೇಕು ಎಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಹಾಗೆಯೇ, ನಮ್ಮ ದೇಶಕ್ಕೆ ಸ್ವಾಂತ್ರ್ಯ ಬಂದು ಸುಮಾರು 62 ವರ್ಷಗಳು ಕಳೆದರೂ ಸಹ ಈ ದಿನಕ್ಕೂ ಹಳ್ಳಿಗಳಲ್ಲಿ ಶೌಚಾಲಯಗಳ ಕೊರತೆ ಇದೆ. ಹಳ್ಳಿಗಳಲ್ಲಿ ಮಹಿಳೆಯರು ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯ ಮುಳುಗಿದ ಮೇಲೆ ಹೋಗಬೇಕಾಗುತ್ತದೆ. ಇಂಥ ಪರಿಸ್ಥಿತಿ ನಮ್ಮ ಹಳ್ಳಿಯಲ್ಲಿದೆ. ಒಬ್ಬ ಮಹಿಳೆಯಾದ ನಾನು ಅವರ ಕಷ್ಟ ಏನು ಎನ್ನುವುದನನು ಅರ್ಥ ಮಾಡಿಕೊಳ್ಳಬಲ್ಲೆ. ಈ ಪರಿಸ್ಥಿತಿಯನ್ನು ಸರಿಪಡಿಸಬೇಕಾಗಿದೆ. ಇದಲ್ಲದೇ, ಗ್ರಾಮೀಣ ಭಾಗದ ಯುವಕರಿಗೆ ನಿರುದ್ಯೋಗದ ಸಮಸ್ಯೆ ಹೆಚ್ಚಾಗಿ ಕಾಡುತ್ತಿದೆ. ಅಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ, ಅವರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ. ಹೈಸ್ಕೂಲುಗಳಲ್ಲಿ ಇತರೆ subject ಗಳ ಜೊತೆಗೆ ಒಂದು technical course ಅನ್ನು ಸರ್ಕಾರ ಏಕೆ introduce ಮಾಡಬಾರದು? Carpentry ಅಥವಾ electrician work ಅಥವಾ

plumber ಈ ರೀತಿಯ ವಿಶೇಷ ವಿದ್ಯೆಯನ್ನು ಅವರು ಕಲಿತಿದ್ದರೆ, ಅವರಿಗೆ ಯಾವುದರಲ್ಲಿ ಆಸಕ್ತಿ ಇರುತ್ತದೆಯೋ ಮುಂದೆ ಅವರು ಅದನ್ನು ಕಲಿತು ತಮ್ಮ ಜೀವನವನ್ನು ಸಾಗಿಸಬಹುದು. ಅದೇ ರೀತಿ, ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ನೀಡಬೇಕಾಗಿತ್ತು. ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗಗಳಲ್ಲಿ ಜನ ಸ್ವಲ್ಪ ಎಚ್ಚೆತ್ತುಕೊಂಡಿದ್ದು, ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸುತ್ತಿದ್ದಾರೆ. ನಮ್ಮಂತೆ ಅವರ ಜೀವನವೂ ಸಹ ಸಕಷ್ಟದಲ್ಲಿ ಕಳೆಯಬಾರದು ಎನ್ನುವ ಕಾರಣಕ್ಕೆ ಅವರು ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುತ್ತಿದ್ದಾರೆ. ಶ್ರೀಮಂತರಾಗಲೀ, ಬಡವರಾಗಲೀ ಮಕ್ಕಳಿಗೆ ವಿದ್ಯಾಭ್ಯಾಸ ವನ್ನು ಕೊಟ್ಟು ಅವರನ್ನು ವಿದ್ಯಾವಂತರನ್ನಾಗಿ ಮಾಡಿ, ಅವರು ತಮ್ಮ ಕಾಲಮೇಲೆ ತಾವು ನಿಲ್ಲುವಂತೆ ಮಾಡುತ್ತಿದ್ದಾರೆ. ಇದು ಬಹಳ ಸಂತೋಷದ ವಿಷಯ. ಇದಲ್ಲದೇ, ಇವತ್ತು ಮನುಷ್ಯನಿಗೆ ಬೇಕಾಗಿರತಕ್ಕಂಥ basic needs ಅನ್ನು ಪೂರೈಸಬೇಕಾಗಿದೆ. ಎಲ್ಲಾ ಕಡೆ ನಾನು ಗಮನಿಸಿದಂತೆ, ಮತ್ತು ನನ್ನ ಕ್ಷೇತ್ರದಲ್ಲೂ ಸಹ ಮನೆಗಳ ಅವಶ್ಯಕತೆ ಇದೆ. ಸರ್ಕಾರದ ಕಡೆಯಿಂದ ಇಡೀ ರಾಜ್ಯದಲ್ಲಿ ಒಂದು ಸಮೀಕ್ಷೆಯನ್ನು ನಡೆಸಿ, ರಾಜ್ಯದಲ್ಲಿರುವ ಎಲ್ಲ ಬಡವರಿಗೂ ಮನೆಗಳನ್ನು ಕಲ್ಪಿಸಿಕೊಡುವಂಥ ಕೆಲಸ ಸರ್ಕಾರದಿಂದ ಆಗಬೇಕಾಗಿದೆ. ಇದಲ್ಲದೇ, ಶೌಚಾಲಯಗಳ ವ್ಯವಸ್ಥೆಯನ್ನು ಸಹ ಕಲ್ಪಿಸಿಕೊಡ ಬೇಕಾಗಿದೆ. ನಮ್ಮ ತುಮಕೂರು ಜಿಲ್ಲೆಯಲ್ಲಿ ನೀರಿಗೆ ತೊಂದರೆಯಿದೆ. ನೀರಾವರಿ ಯೋಜನೆಗಳು, ರಸ್ತೆಗಳು ಹೀಗೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ಕಾರ್ಯ ಆಗಬೇಕಾಗಿದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳು ಕಳೆದರೂ ನಮ್ಮ ಗ್ರಾಮಗಳು ಇನ್ನೂ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸಿಲ್ಲ. ಅದಕ್ಕೆ ಹಲವಾರು ಪ್ರಗತಿಯನ್ನು ಸಾಧಿಸಲಿಕ್ಕೆ ಏನಾದರೊಂದು ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಈಗ ಪ್ರತಿಪಕ್ಷದ ನಾಯಕರು. ತಾವು ಪ್ರಾರಂಭ ಮಾಡಿ.

ಶ್ರೀ ಬಿ.ಸಿ.ಪಾಟೀಲ್ : ಅಧ್ಯಕ್ಷರೆ, ನಮಗೆ ಎರಡು ನಿಮಿಷಗಳ ಅವಕಾಶ ಕೊಡಿ.

ಅಧ್ಯಕ್ಷರು : ಪ್ರತಿ ಪಕ್ಷದ ನಾಯಕರೇ, ತಾವು ಪ್ರಾರಂಭ ಮಾಡಿ. ನಿಮ್ಮದು ಆದ ಮೇಲೆ ಅವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ನನ್ನದು ಆದಮೇಲೆ ನೀವು ಮಾತನಾಡಿ.

ಅಧ್ಯಕ್ಷರು : ಬಿ.ಸಿ.ಪಾಟೀಲರೇ ದಯವಿಟ್ಟು co-operate ಮಾಡಿ. ಈ ಪದ್ಧತಿ ಸರಿಯಲ್ಲ. ಈಗ ನಾನು ಪ್ರತಿಪಕ್ಷದ ನಾಯಕರನ್ನು ಕರೆದಿದ್ದೇನೆ. ಒಂದು ಸಲ ಸಭಾಧ್ಯಕ್ಷರು ಕರೆದ ಮೇಲೆ ಅದಕ್ಕೆ ನೀವು ಗೌರವವನ್ನು ಕೊಡಬೇಕು.

ಶ್ರೀ ಬಿ.ಸಿ.ಪಾಟೀಲ್ : ನಮ್ಮ ಕ್ಷೇತ್ರದ ಜನಗಳಿಗೆ ನಾವು ಏನು ಉತ್ತರ ಹೇಳಬೇಕು? ನಾವು ನಮ್ಮ ಸಮಸ್ಯೆಗಳನ್ನು ಹೇಳಬೇಕು. ಸುಮ್ಮನೆ ಇಲ್ಲಿ ಬಂದು ಕುಳಿತುಕೊಂಡು ಹೋಗಲು ನಾವು ಬಂದಿದ್ದೇವೆಯೇ?

ಅಧ್ಯಕ್ಷರು : ಪಾಟೀಲರೇ, ಇದು ಏನೆಂದು ಅರ್ಥವಾಗುತ್ತಿಲ್ಲ. ನೀವು ಸೋಮವಾರ ಮಾತನಾಡಿ, ನಿಮಗೆ ಸೋಮವಾರ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಸಿ.ಪಾಟೀಲ್ : ಆಗ ನಾವು ಮಾತನಾಡಿ ಪ್ರಯೋಜನ ಏನಿದೆ? ಯಾವಾಗಲೂ ಯಾವ ಚರ್ಚೆಗೂ ನಮಗೆ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು : ನಾನು ಈಗ ಪ್ರತಿಪಕ್ಷದ ನಾಯಕರನ್ನು ಕರೆದಿದ್ದೇನೆ. ಸಭಾಧ್ಯಕ್ಷರು ಹೇಳಿದ ಪ್ರಕಾರ ನಡೆದುಕೊಳ್ಳಿ. ನಿಮಗೆ ನಾನು allow ಮಾಡುವುದಿಲ್ಲ. ನಾನು ಎಲ್ಲರಿಗೂ ಅವಕಾಶವನ್ನು ಕೊಟ್ಟಿದ್ದೇನೆ. ನಿಮಗೆ ಸೋಮವಾರ ಕೊಡುತ್ತೇನೆ. ಈಗ ಪ್ರತಿಪಕ್ಷದ ನಾಯಕರನ್ನು ಕರೆದಿದ್ದೇನೆ. please co-operate ಮಾಡಿ.

ಡಾ: ಎಂ.ಸಿ ಸುಧಾಕರ್ : ಅಧ್ಯಕ್ಷರೆ, ದಯವಿಟ್ಟು ಸೋಮವಾರ ಎಷ್ಟು ಹೊತ್ತಿಗೆ ಕೊಡುತ್ತೀರಿ ಎಂದು ಹೇಳಿ. ಸೋಮವಾರ ನಮಗೆ ಹತ್ತತ್ತು ನಿಮಿಷ ಅವಕಾಶ ಕೊಟ್ಟರೆ ಸಾಕು.

ಶ್ರೀ ಬಿ.ಸಿ.ಪಾಟೀಲ್ : ಸೋಮವಾರ ಈ ವಿಷಯದ ಬಗ್ಗೆ ಮಾತನಾಡಲು ಆಗುತ್ತದೆಯೇ?

ಅಧ್ಯಕ್ಷರು : ಸೋಮವಾರ ಬೇರೆ ವಿಷಯಗಳು ಇರುತ್ತವೆ. ಆಗ ನೀವು ಮಾತನಾಡಿ. ಬರಗಾಲದ ಮೇಲೆ ಮಾತನಾಡಿ, ಗ್ರಾಮೀಣ ವಿಷಯದ ಬಗ್ಗೆಯೂ ಮಾತನಾಡಿ.

ಶ್ರೀ ಬಿ.ಸಿ.ಪಾಟೀಲ್ : ಸೋಮವಾರ ಮುಖ್ಯಮಂತ್ರಿಯವರ reply ಇದೆ ಎಂದು ಹೇಳುತ್ತಿದ್ದರಲ್ಲ. ಅದಕ್ಕಿಂತ ಮುಂಚೆ ನಾವು ಮಾತನಾಡಬೇಕು.

ಅಧ್ಯಕ್ಷರು : ಈಗ ನೀವು ಬರಗಾಲದ ಬಗ್ಗೆ ಮಾತನಾಡಿ.

ಡಾ: ಎಂ.ಸಿ.ಸುಧಾಕರ್ : ಮುಖ್ಯಮಂತ್ರಿಗಳು ಮಾತನಾಡಿ ಆದಮೇಲೆ ಅವಕಾಶ ಕೊಡುವಿರಾ ಅಥವಾ ಅದಕ್ಕಿಂತ ಮುಂಚೆ ಕೊಡುವಿರಾ ಎಂದು ದಯವಿಟ್ಟು ಸ್ಪಷ್ಟೀಕರಣ ಕೊಡಿ.

ಶ್ರೀ ರಮಾನಾಥ ರೈ : ಸೋಮವಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಲು ಆಗುತ್ತದೆಯೇ? ಇವತ್ತು ವಿಶೇಷವಾಗಿ ಅಧಿವೇಶನ ವನ್ನು ಕರೆದಿರತಕ್ಕಂಥದ್ದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಮೇಲೆ ಚರ್ಚೆ ಮಾಡಲಿಕ್ಕೆ.

ಅಧ್ಯಕ್ಷರು : ರಮಾನಾಥ ರೈರವರೇ, ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ನಾಯಕರು ಮಾತನಾಡುತ್ತಾರೆ, ನೀವು ದಯವಿಟ್ಟು ಸಹಕರಿಸಿ.

ಶ್ರೀ ಬಿ.ಸಿ.ಪಾಟೀಲ್ : ಒಬ್ಬರಿಗೊಂದು ಮತ್ತೊಬ್ಬರಿಗೊಂದು ಮಾಡಿದರೆ ಹೇಗೆ? ಒಬ್ಬೊಬ್ಬರು 2–3 ಗಂಟೆ ಮಾತನಾಡುತ್ತಾರೆ, ನಮಗೆ ಅವಕಾಶವನ್ನೇ ಕೊಡುವುದಿಲ್ಲ.

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಪದೇ ಪದೇ ಹೀಗೆ ಏಳಬೇಡಿ. ನಾನು ಎಲ್ಲರಿಗೂ maximum ಅವಕಾಶ ಕೊಟ್ಟಿದ್ದೇನೆ. ಪದೇಪದೇ ಎಲ್ಲರೂ ಏಳುವುದರಲ್ಲಿ ಅರ್ಥವಿಲ್ಲ.

ಶ್ರೀ ಬಿ.ಸಿ.ಪಾಟೀಲ್ : ಒಬ್ಬೊಬ್ಬರಿಗೆ 2–3 ತಾಸು ಅವಕಾಶ ಕೊಡುತ್ತೀರಿ. 224 ಜನ ಸದಸ್ಯರಲ್ಲಿ ನಾವೂ ಒಬ್ಬ ಸದಸ್ಯರಲ್ಲವೇ?

ಅಧ್ಯಕ್ಷರು : ಪ್ರತಿಯೊಬ್ಬರೂ ಅದರ ಬಗ್ಗೆ ತಮ್ಮ ಪಕ್ಷದ ಶಾಸನಸಭೆಯಲ್ಲಿ ಚರ್ಚೆ ಮಾಡಿ. ಅದನ್ನು ಇಲ್ಲಿ ಮಾತನಾಡಬೇಡಿ. ಯಾರಿಗೆ ಎಷ್ಟು ಅವಕಾಶ ಕೊಟ್ಟಿದ್ದೇವೆ, ಯಾರು ಎರಡು ತಾಸು ಮಾತನಾಡಿದರು, ಯಾರು ಒಂದು ತಾಸು ಮಾತನಾಡಿದರು ಎನ್ನುವುದನ್ನು ನೀವು ನಿಮ್ಮ ಪಕ್ಷದ ಸಭೆಯಲ್ಲಿ ಆತ್ಮಾವಲೋಕನ ಮಾಡಿಕೊಳ್ಳಿ, ಅದನ್ನೆಲ್ಲಾ ಇಲ್ಲಿ ಮಾತನಾಡಬೇಡಿ.

ಶ್ರೀ ಬಿ.ಸಿ.ಪಾಟೀಲ್ : ಇಲ್ಲಿ ಆತ್ಮಾವಲೋಕನದ ಪ್ರಶ್ನೆ ಬರುವುದಿಲ್ಲ. ನಾವು ನಮ್ಮ ಸಮಸ್ಯೆಗಳನ್ನು ಹೇಳಬೇಕಾಗುತ್ತದೆ. ಐದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಇಲ್ಲ, ನಾನು ಅವಕಾಶ ಕೊಡುವುದಿಲ್ಲ. ಪ್ರತಿಪಕ್ಷದ ನಾಯಕರು ದಯವಿಟ್ಟು ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಬಿ.ಸಿ.ಪಾಟೀಲರೇ, ನಾನು ಮಾತನಾಡಿದ ಮೇಲೆ ನೀವು ಮಾತನಾಡಿ. ಆಗ ನಾನು ಇಲ್ಲೇ ಕುಳಿತುಕೊಳ್ಳುತ್ತೇನೆ.

ಶ್ರೀ ಬಿ.ಸಿ.ಪಾಟೀಲ್ : ಆಯಿತು, ನೀವು ಮಾತನಾಡಿದ ಮೇಲೆ ಮಾತನಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇನ್ನೂ ಬಹಳ ಜನ ಶಾಸಕರಿಗೆ ಮಾತನಾಡಲು ಆಸಕ್ತಿ ಇತ್ತು. ಮುಖ್ಯಮಂತ್ರಿಗಳು ಆರು ಗಂಟೆಗೆ ನಾನು ಎಲ್ಲೋ ಹೋಗಬೇಕು ಎಂದು ಬೆಳಿಗ್ಗೆ ಹೇಳಿದರು. ಹಾಗಾಗಿ ನಾನು ನಾಲ್ಕು ಗಂಟೆಗೆ ಮಾತನಾಡುತ್ತೇನೆ ಎಂದು ಹೇಳಿದ್ದೆ. ಈಗ ನಾಲ್ಕೂವರೆಯಾಗಿದೆ. ನಾನು ಮಾತನಾಡುವವರೆಗೂ ಅವರು ಇಲ್ಲಿ ಇರುತ್ತಾರೇನೋ ಗೊತ್ತಿಲ್ಲ. ಏಕೆಂದರೆ, ಆರು ಗಂಟೆಗೆ ನೀವು ಹೋಗುತ್ತೀರಿ. ನಾನು ಅದಕ್ಕಿಂತಲೂ ಜಾಸ್ತಿ ಮಾತನಾಡಬಹುದು, ಎಷ್ಟೆಂದು ಈಗಲೇ ಹೇಳಲು ಬರುವುದಿಲ್ಲ.

ಮಾನ್ಯ ಯಡಿಯೂರಪ್ಪನವರು ಕಳೆದ ಅಧಿವೇಶನ ನಡೆದಂಥ ಸಂದರ್ಭದಲ್ಲಿ, ಉತ್ತರ ಕೊಡುತ್ತಾ ಮುಂದೆ ವಿಶೇಷ ಅಧಿವೇಶನವನ್ನು ಕರೆದು ಹಗರಣಗಳ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳಿದರು. ಅವರು ಹೇಳಿದಂಥದ್ದು record ಆಗಿದೆ. ಹಗರಣಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ವಿಶೇಷ ಅಧಿವೇಶನ ಕರೆಯುತ್ತಿದ್ದಾರೆ ಎಂದು ನಾವೆಲ್ಲ ತಿಳಿದುಕೊಂಡಿದ್ದೆವು. ಆದರೆ ಅವರು ಹಾಗೆ ಮಾಡುವುದಕ್ಕೆ ಹೋಗಲಿಲ್ಲ. ಅವರು ಚೈನಾದಲ್ಲಿದ್ದಾಗಲೇ, ಭಾರತ ದೇಶಕ್ಕೆ ಒಂದು ಪತ್ರ ಕಳುಹಿಸಿದ್ದು, ಅದು ಪತ್ರಿಕೆಗಳಲ್ಲಿ ಒಂದು article ಕೂಡ ಆಗಿಹೋಯಿತು. ಸ್ವಾತಂತ್ರ್ಯ ಬಂದು 62 ವರ್ಷಗಳಾದರೂ ನಮ್ಮ ಹಳ್ಳಿಗಳು ಇನ್ನೂ ಕೂಡ ಬಹಳ ದುಸ್ಥಿತಿಯಲ್ಲಿವೆ. ರೈತರ ಜೀವನ ಬಹಳ ಕಷ್ಟಮಯವಾಗಿದೆ.

ಹಳ್ಳಿಗಾಡಿನಲ್ಲಿ ಇವತ್ತಿಗೂ ಕೂಡ ಕನಿಷ್ಠ ಸೌಲಭ್ಯಗಳು ಸಿಗುತ್ತಿಲ್ಲ. ಹಳ್ಳಿಗಾಡಿನಲ್ಲಿರುವ ಜನರು ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ. ಬಹುಶಃ ಇನ್ನು ಸ್ವಲ್ಪ ದಿವಸಗಳಾದರೆ, ಕೆಲವು ವರ್ಷಗಳಾದರೆ ಹಳ್ಳಿಗಳಲ್ಲಿ ಯಾರೂ ಯುವಕರೇ ಇರುವುದಿಲ್ಲ. ಎಲ್ಲಾ ಯುವಕರೂ ಪಟ್ಟಣ ಸೇರುತ್ತಾರೆ. ಹಳ್ಳಿಗಳೆಲ್ಲ ಹಾಳು ಕೊಂಪೆಗಳಾಗುತ್ತವೆಂದು ಒಂದು ಪತ್ರವನ್ನು ಕಳುಹಿಸಿಕೊಟ್ಟರಿ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮೂರು ದಿನಗಳ ಕಾಲ ಚರ್ಚೆ ಮಾಡುವುದೆಂದು ನಮಗೆ ಅಜೆಂಡಾ ಬಂತು. ಆಮೇಲೆ, ನೀವು Business Advisory Committee meeting ಕರೆದ ಮೇಲೆ, ನೀವು ಹೊರಡಿಸಿರುವ notification ನಲ್ಲಿ ವಿಶೇಷ

ಅಧಿವೇಶನ ಎಂದು ಹೇಳಿದ್ದೀರಿ, ಆದರೆ, ಇದು ವಿಶೇಷ ಅಧಿವೇಶನವಲ್ಲ, ಇದು ಮುಂದುವರೆದ ಅಧಿವೇಶನ. ಈ ಮುಂದುವರೆದ ಅಧಿವೇಶನದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡೋಣ, ಇದಕ್ಕೆ ವಿಶೇಷ ಒತ್ತು ಕೊಟ್ಟು ವಿಶೇಷವಾದ ಸ್ಥಾನ ಕೊಟ್ಟು ಇಲ್ಲಿ ಚರ್ಚೆ ಮಾಡಬೇಕು, ಬೇರೆ ಯಾವುದೇ ವಿಚಾರಗಳನ್ನು ಚರ್ಚೆ ಮಾಡಬಾರದೆಂದು ನೀವು Business Advisory Committee Meeting ನಲ್ಲಿ ಕೂಡ ಹೇಳಿದಿರಿ. ಆದರೆ, ನಾವು, ರಾಜ್ಯದಲ್ಲಿ ಭೀಕರವಾದ ಬರಗಾಲವಿದೆ, 86 ತಾಲ್ಲೂಕು, 20 ಜಿಲ್ಲೆಗಳಲ್ಲಿ ಬಹಳ ಬರಗಾಲವಿದೆ, ಜನರು ಬರಗಾಲದಿಂದ ಬಹಳ ಸಂಕಷ್ಟಕ್ಕೆ ಸಿಲುಕಿಕೊಂಡಿದ್ದಾರೆ, ನೀವೇ ಇದನ್ನು ಘೋಷಣೆ ಮಾಡಿದ್ದೀರಿ, ಅದರ ಬಗ್ಗೆ ಮೊದಲು ಚರ್ಚೆ ಮಾಡಬೇಕು, ಆಮೇಲೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಮೇಲೆ ಚರ್ಚೆ ಮಾಡೋಣವೆಂದು ಹೇಳಿದಾಗ, ಇಲ್ಲ, ಇದರ ಮಹತ್ವ ಹೋಗುತ್ತದೆ, ಇದರ ಪ್ರಾಶಸ್ತ್ಯ, ಇದರ importance ಹೋಗುತ್ತದೆಂದು ನೀವು ಹೇಳಿದಿರಿ. ಹಾಗಾಗಿ, ನಾವು ಕೂಡ Adjournment Motion move ಮಾಡಿದೆವು. ಅವತ್ತು ನೀವು Adjournment Motion ಅನ್ನು Rule 60 ಇಂದ Rule 69 ಗೆ convert ಮಾಡಿ ಸೋಮವಾರ ತೆಗೆದು ಕೊಳ್ಳೋಣವೆಂದು ಹೇಳಿದಿರಿ, ನಾವೂ ಕೂಡ ಅದಕ್ಕೆ ಒಪ್ಪಿದೆವು. ಆದರೆ, ಮುಖ್ಯಮಂತ್ರಿಯವರು ಮಾತನಾಡಲಿಕ್ಕೆ ಪ್ರಾರಂಭ ಮಾಡಿದಾಗ ನಾನು ವಿರೋಧ ಪಕ್ಷದವರನ್ನು ಕಾಡಿ ಬೇಡಿ, ಬಹಳ request ಮಾಡಿ, ಗೋಗರೆದು ಒಪ್ಪಿಸಬೇಕಾಯಿತೆನ್ನುವ ಮಾತನ್ನು ಹೇಳಿದ್ದಾರೆ. ಅದರಿಂದ ಜನರಿಗೆ message ಏನು ಹೋಗುತ್ತದೆಂದರೆ, ನಾವು ಚರ್ಚೆ ಮಾಡುವುದಕ್ಕೆ ತಯಾರಾಗಿಯೇ ಇರಲಿಲ್ಲ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ವಿರೋಧ ಪಕ್ಷದವರಿಗೆ ಚರ್ಚೆ ಮಾಡುವುದಕ್ಕೆ ಆಸಕ್ತಿಯೇ ಇರಲಿಲ್ಲ, ಅವರಿಗೆ ಇಷ್ಟವಿರಲಿಲ್ಲ, ಅವರಿಗೆ ಭಾಗವಹಿಸಲಿಕ್ಕೆ ಇಷ್ಟವಿರಲಿಲ್ಲವೆನ್ನುವ ರೀತಿಯಲ್ಲಿ ಅವರು ಮಾತುಗಳನ್ನು ಪ್ರಾರಂಭ ಮಾಡಿದರು. ನಾವು ಇದರ ಬಗ್ಗೆ ಚರ್ಚೆ ಮಾಡುವುದು ಬೇಡವೆಂದು ಹೇಳಿಯೇ ಇಲ್ಲ. ಎಷ್ಟು ದಿನವಾದರೂ ಕೂಡಾ ಚರ್ಚೆ ಮಾಡೋಣವೆಂದು ಹೇಳಿದೆವು. ಮೂರು ದಿನಗಳಾದರೆ ಮೂರು ದಿನಗಳು, 5 ದಿನಗಳಾದರೆ 5 ದಿನಗಳು ಎಂದು ನೀವು ಹೇಳಿದ್ದಕ್ಕೆ ನಾವು, Assembly Session ಅನ್ನು ಮೂರು ದಿವಸಗಳಿಗೆ ಸೀಮಿತ ಮಾಡುವುದಕ್ಕೆ ಹೋಗಬೇಡಿ, 20 ದಿವಸ ನಡೆಸಿ, ಆ ಸಮಯದಲ್ಲಿ ಕೃಷಿ ಬಗ್ಗೆಯೂ,

ಗ್ರಾಮೀಣಾಭಿವೃದ್ಧಿ ಬಗ್ಗೆಯೂ ಚರ್ಚೆ ಮಾಡೋಣ ಎಂದು ಹೇಳಿದೆವು. ಹಗರಣಗಳ ಬಗ್ಗೆ ಚರ್ಚೆ ಮಾಡಬೇಕೆಂದು ನೀವೇ ಹೇಳಿದ್ದೀರಿ. ಅದರ ಬಗ್ಗೆಯೂ ಚರ್ಚೆ ಮಾಡೋಣ. ನಾವೂ ಕೂಡ ಅದಕ್ಕೆ ತಯಾರಾಗಿದ್ದೇವೆ. ರಾಜ್ಯದ ಜನರ ಬೇರೆ ಬೇರೆ ಸಮಸ್ಯೆಗಳೇನಿವೆ, ಅವುಗಳ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳಿದೆವು. ಅದಕ್ಕೆ ನೀವು ಇಲ್ಲ, 20 ದಿವಸಗಳು ನಡೆಸುವುದಕ್ಕಾಗುವುದಿಲ್ಲ, 18ನೇ ತಾರೀಖು ದಸರಾ ಬರುತ್ತದೆ, ಮಹಾಲಯ ಅಮಾವಾಸ್ಯೆ ಬರುತ್ತದೆ, ನವೆಂಬರ್‌ನಲ್ಲಿ ಅಧಿವೇಶನ ನಡೆಸೋಣವೆಂದು ಹೇಳಿದಿರಿ. ನಾವೇ ಮಾಡಿಕೊಂಡಿರುವ ಕಾನೂನಿದೆ. ಅಧಿವೇಶನವನ್ನು ವರ್ಷಕ್ಕೆ 60 ದಿವಸ ನಡೆಸಬೇಕೆಂದು ಈ ಸದನದಲ್ಲಿ ನಾವೆಲ್ಲರೂ ಕೂಡ ಒಪ್ಪಿಕೊಂಡಿದ್ದೇವೆ. ಅದಕ್ಕೆ ಇಡೀ ಸದನ ಒಪ್ಪಿದೆ. ಕನಿಷ್ಟ 60 ದಿವಸ ನಡೆಸಬೇಕು, ಅಗತ್ಯ ಬಿದ್ರೆ ಅದಕ್ಕಿಂತ ಇನ್ನೂ ಹೆಚ್ಚಿನ ದಿವಸ ಸದನ ನಡೆಸಿ ಚರ್ಚೆಗಳನ್ನು ಮಾಡಬೇಕು ಎನ್ನುವುದನ್ನೂ ಸಹ ನಾವು ಒಪ್ಪಿಕೊಂಡಿದ್ದೇವೆ. ಹಿಂದೆ 70, 80, 90 ದಿವಸಗಳ ಕಾಲ ಇಲ್ಲಿ ಅಧಿವೇಶನ ನಡೆಸಿರುವ ಅನೇಕ ನಿದರ್ಶನಗಳಿವೆ. ಆ ಬಗ್ಗೆ ದಾಖಲಾತಿಗಳಲ್ಲಿದೆ. ಕಳೆದ ಅಧಿವೇಶನದಲ್ಲಿಯೂ ಕೂಡ ಏನಾಯಿತೆಂದರೆ, ಚರ್ಚೆಗೆ ನಮಗೆ ಸಿಕ್ಕಿದ್ದು ಕೇವಲ 12 ದಿನಗಳಷ್ಟೇ. Demands ಮೇಲೆ ಚರ್ಚೆ ಮಾಡುವುದಕ್ಕಾಗಲಿಲ್ಲ. ನಿಮ್ಮ ಪ್ರಾಸ್ತಾವಿಕ ಮಾತಿನ ಪ್ಯಾರಾ 4 ರಲ್ಲಿ ನೀವೊಂದು ಮಾತು ಹೇಳಿದ್ದೀರಿ. ಏನೆಂದರೆ, "ಆಯವ್ಯಯ ಬೇಡಿಕೆಗಳ ಮೇಲೆ ಅರ್ಥಪೂರ್ಣ ಚರ್ಚೆ ನಡೆಯಲಿಲ್ಲವೆಂದು ಹಾಗೂ ನಮಗೆ ನೋವಾಗಿದೆ" ಎಂದು ಹೇಳಿಕೊಂಡಿದ್ದೀರಿ. ಆದರೆ, ದುರದೃಷ್ಟ ವಶಾತ್, ನಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಕರೆದ ಯಾವೊಂದು ಅಧಿವೇಶನದಲ್ಲಿಯೂ ಕೂಡ ವಿವಿಧ ವಿಷಯಗಳ ಬಗ್ಗೆ, ಇಲಾಖಾ ಬೇಡಿಕೆಗಳ ಬಗ್ಗೆ, ಆಯವ್ಯಯದಲ್ಲಿ ಘೋಷಿಸಿದ ಹೊಸ ಯೋಜನೆಗಳ ಬಗ್ಗೆ ಸುದೀರ್ಘವಾದ, ಅರ್ಥಪೂರ್ಣವಾದ ಚರ್ಚೆ ನಡೆಯಲಿಲ್ಲವೆಂದು ಹೇಳಲು ಸದನದ ನಾಯಕನಾದ ನನಗೆ ತುಂಬಾ ನೋವಾಗುತ್ತದೆಂದು ಹೇಳಿದ್ದಾರೆ. ನೀವು ಹೆಚ್ಚು ದಿವಸ Assembly Session ನಡೆಸಿದ್ದರೆ ಈ ನೋವು ಏಕಾಗುತ್ತಿತ್ತು? ನಿಮಗೆಲ್ಲ ನೋವಾಗಿರುವುದು, ನೀವು ಹೆಚ್ಚು ಅಧಿವೇಶನ ನಡೆಸಲಿಲ್ಲವೆಂದು ನಮಗೆ ನೋವಾಗಿದೆ. ನ್ಯಾಯ ದೊರಕಿಸಲಿಕ್ಕಾಗಲಿಲ್ಲ, ನಾವು demands ಮೇಲೆ ಚರ್ಚೆ ಮಾಡದೆ, ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸದೆ appropriation Bill pass

ಮಾಡಿಬಿಟ್ಟೆವು ಎಂದು ನಮಗೆ ನೋವಾಗಿದೆ. ನಿಮ್ಮ ನೋವಿಗೆ ನೀವೇ ಕಾರಣ, ನಾವಲ್ಲ. ನಿಮಗೇನಾದರೂ ನೋವಾಗಿದ್ದರೆ, ಆ ನೋವಾಗಲಿಕ್ಕೆ ಕಾರಣವಿಲ್ಲ, ಒಂದು ವೇಳೆ ಆಗಿದ್ದರೆ Government is responsible not the opposition. ಸಾಧ್ಯವಿಲ್ಲ. ನಾವು ರೆಡಿ ಇದ್ದೆವಲ್ಲ. ನಾವು ಎಷ್ಟು ದಿವಸವಾದರೂ ಚರ್ಚೆ ಮಾಡುವುದಕ್ಕೆ ತಯಾರಿದ್ದೆವು, ಹೆಚ್ಚು ದಿನ ಅಧಿವೇಶನ ಕರೆಯಬೇಕಾಗಿತ್ತು. ಜುಲೈನಲ್ಲಿ ಅಧಿವೇಶನ ಕರೆಯುವ ಬದಲು ಜೂನ್ ತಿಂಗಳಲ್ಲಿಯೇ ಕರೆಯಬೇಕಾಗಿತ್ತು. ಜುಲೈ 31ನೇ ತಾರೀಖಿನವರೆಗೂ ಅವಕಾಶವಿದ್ದರೂ ನೀವು ನಾನು 29ರಂದೇ ಉತ್ತರ ಕೊಡಲೇಬೇಕೆಂದು ಹಠ ಮಾಡಿದಿರಿ. ಜುಲೈ 30, 31ರಂದೂ ಚರ್ಚೆ ಮಾಡಬಹುದಾಗಿತ್ತು. ಮುಖ್ಯಮಂತ್ರಿಯವರಿಗೆ ಬಹಳ ಕೆಲಸವಿರುತ್ತದೆ. ಆದರೆ, ನನಗೆ ಗೊತ್ತಿರುವ ಹಾಗೆ, ಪತ್ರಿಕೆಯಲ್ಲಿ ಓದಿದ ಹಾಗೆ, ಶಿವಮೊಗ್ಗದಲ್ಲಿ ಬಾಗಿನ ಅರ್ಪಿಸುವುದಕ್ಕೆ ಹೋಗಿದ್ದೀರಿ. ಅದು ಬಿಟ್ಟರೆ ಬೇರೆ ದೊಡ್ಡ ಕೆಲಸವೇನಿರಲಿಲ್ಲ. ಅದನ್ನು ಕೂಡ 1ನೇ ತಾರೀಖು ಮಾಡಬಹುದಿತ್ತು. ನೀವಿಲ್ಲಿ ಸುದೀರ್ಘವಾದಂಥ, ಅರ್ಥಪೂರ್ಣವಾದಂಥ ಚರ್ಚೆ ಮಾಡಲಿಕ್ಕೆ ನಮಗೆ ಅವಕಾಶ ಕೊಡದೆಯೇ, ನಮಗೆ ಅವಕಾಶ ಸಿಕ್ಕದೆಯೇ ಈ ತರಹದ ಪದಗಳನ್ನು ಬಳಸುವುದು ಸರಿಯಲ್ಲ. ನನಗೆ ಬಹಳ ನೋವಾಗಿದೆ. ವಿರೋಧ ಪಕ್ಷದವರು ಸಿದ್ಧರಿಲ್ಲವೆಂದು ಹೇಳುವುದರಿಂದ what is the message that goes to the people? ನೀವು ಅದನ್ನು ಹೇಳಿದ್ದೀರಿ.

ಆದ್ದರಿಂದ, ನೀವೇ ಕಾರಣರು. ಯಾವುದೇ ವಿಷಯಗಳನ್ನು ನೀವು ಸರ್ಕಾರದ ಕಲಾಪಗಳಲ್ಲಿ ತಂದರೆ ಈಗಲೂ ನಾವು ಭಾಗವಹಿಸುವುದಕ್ಕೆ ತಯಾರಾಗಿದ್ದೇವೆ. ರಾಜ್ಯದ ಸಮಸ್ಯೆಗಳ ಬಗ್ಗೆ, ರಾಜ್ಯದ ಅಭಿವೃದ್ಧಿ, ಪ್ರಗತಿ ಬಗ್ಗೆ, ಸಾಮಾನ್ಯ ಜನ, ಬಡವರು, ದಲಿತರು, ಮಹಿಳೆಯರು ಯಾರ್‍ಯಾರು ಇದ್ದಾರೆ, ಈ ವರ್ಗದ ಜನರಿಗೆ ನ್ಯಾಯ ಕೊಡಬೇಕು, ಆ ವರ್ಗದ ಜನರ ಬಗ್ಗೆ ಯಾವುದೇ ವಿಷಯ ನೀವು ತೆಗೆದುಕೊಂಡು ಬಂದರೂ ಕೂಡ ನಾವು ಚರ್ಚೆ ಮಾಡಲಿಕ್ಕೆ ಸದಾಸಿದ್ಧರಿದ್ದೇವೆ. We are totally committed for the upliftment of the poor of the society, exploited, downtrodden of the society. ಆ ವಿಚಾರದಲ್ಲಿ ನಮ್ಮ ಬಗ್ಗೆ ಯಾರೂ ಕೂಡ ಸಂಶಯ ಇಟ್ಟುಕೊಳ್ಳಬೇಕಾದ ಅಗತ್ಯವಿಲ್ಲ. ನಾವೂ ಕೂಡ ನಮ್ಮ ರಾಜಕೀಯ ಜೀವನದಲ್ಲಿ ಆ ವರ್ಗದ ಜನರ ಪರವಾಗಿ ಸಾಮಾಜಿಕ.

ನ್ಯಾಯದ ಪರವಾಗಿ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಅದನ್ನು ಮುಂದೆಯೂ ಮುಂದುವರಿಸುತ್ತೇವೆ. ಇವತ್ತಿಗೂ ಕೂಡ ಅದರಲ್ಲಿ ಯಾವುದೇ ವ್ಯತ್ಯಾಸ ಇರಲಿಕ್ಕೆ ಸಾಧ್ಯವಿಲ್ಲ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಹೇಳುವುದಾದರೆ, ನಮ್ಮದು ಕೃಷಿ ಪ್ರಧಾನ ದೇಶ. ಹಳ್ಳಿಗಳಲ್ಲಿಯೇ ಹೆಚ್ಚು ಜನರು ವಾಸ ಮಾಡುತ್ತಿರುವ ದೇಶವಾಗಿದೆ. ಹಳ್ಳಿಗಳಲ್ಲಿ ವಾಸ ಮಾಡುವ ಜನರು ಕಡಿಮೆಯಾಗುತ್ತಿದ್ದಾರೆ. ಒಂದು ಕಾಲದಲ್ಲಿ ನೂರಕ್ಕೆ ಎಂಭತ್ತಕ್ಕಿಂತ ಹೆಚ್ಚು ಜನ ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದರು. ಇವತ್ತು 65–66% ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಸುಮಾರು 34–35% ಜನರು ಪಟ್ಟಣಗಳಲ್ಲಿ ವಾಸ ಮಾಡುತ್ತಿದ್ದಾರೆ. ಕೇವಲ ಜನರಷ್ಟೇ ಅಲ್ಲ, ವ್ಯವಸಾಯಕ್ಕೆ ನಮಗೆ ಲಭ್ಯವಿದ್ದ ಜಮೀನು ಕೂಡ ಕಡಿಮೆಯಾಗುತ್ತಿದೆ. ಬೇರೆ ಬೇರೆ ಕಾರಣಗಳಿಗೋಸ್ಕರವಾಗಿ ಅದೂ ಕೂಡ ಕಡಿಮೆಯಾಗುತ್ತಿದೆ. ನಮ್ಮ ಜಮೀನುಗಳ holdings ಅದೂ ಕೂಡ ಕಡಿಮೆಯಾಗುತ್ತಿದೆ. ಜನರೂ ಕೂಡ ಪಟ್ಟಣಗಳಿಗೆ ವಲಸೆ ಬರುತ್ತಿದ್ದಾರೆ.

(ಈ ಹಂತದಲ್ಲಿ ಶ್ರೀ ಚಂದ್ರಕಾಂತ ಬೆಲ್ಲದ್ ರವರು ಸಭಾಧ್ಯಕ್ಷರ ಪೀಠವನ್ನಲಂಕರಿಸಿದರು)

ಸಣ್ಣ ರೈತರು, ಅತಿ ಸಣ್ಣ ರೈತರು 73% ಇದ್ದಾರೆ. Holdings ಕಡಿಮೆಯಾಗಿ ಘಟಕ ಒಂದೊಂದಾಗಿ ಕಡಿಮೆಯಾಗುತ್ತಿದೆ. ಕೃಷಿ ಬೆಳವಣಿಗೆ ಯಾವ ಪ್ರಮಾಣದಲ್ಲಿ ಬೆಳೆಯಬೇಕಾಗಿತ್ತೋ ಆ ಪ್ರಮಾಣದಲ್ಲಿ ಬೆಳೆಯುತ್ತಿಲ್ಲ. ನಮ್ಮ ದೇಶ, ರಾಜ್ಯದಲ್ಲಿ ಕಳೆದ ಒಂದು ದಶಕದಿಂದ food production, food productivity ಎರಡೂ stagnant ಆಗಿದೆ. ನಾವು ಅಲ್ಲಿಯೇ ಗಿರಕಿ ಹೊಡೆಯುತ್ತಿದ್ದೇವೆ. 100 ಲಕ್ಷ ಟನ್ ಹಿಂದೆ ಮುಂದೆ ಅಂದರೆ 90 ಲಕ್ಷ ಟನ್ ಆಗಬಹುದು, 95 ಲಕ್ಷ ಟನ್ ಆಗಬಹುದು, 100 ಲಕ್ಷ ಟನ್ ಆಗಬಹುದು, 102 ಲಕ್ಷ ಟನ್ ಆಗಬಹುದು. 1998–99ಕ್ಕೆ ಆಹಾರ ಪದಾರ್ಥ ಬೆಳೆಯುತ್ತೇವೆಂದು ಹೇಳಿಕೊಂಡಿದ್ದು, ಗುರಿ ಇಟ್ಟುಕೊಂಡಿದ್ದು 125 ಲಕ್ಷ ಟನ್. ಆದರೆ, ಬೆಳೆಯುವುದಕ್ಕೆ ಸಾಧ್ಯವಾಗಿದ್ದು, ಗುರಿ ತಲುಪುವು ದಕ್ಕಾಗಿದ್ದು ಕೇವಲ 108 ಲಕ್ಷ ಟನ್ ಮಾತ್ರ. ಇದಕ್ಕೆ ಕಾರಣವೇನು? ಮಳೆ ಬರಲಿಲ್ಲ, ಬರಗಾಲವಿತ್ತು. rain fed area ಜಾಸ್ತಿಯಾಗಿದೆ, ನಮಗೆ ಬಹಳ ತೊಂದರೆಯಾಯಿತು, ಅಂದರೆ ಈ ವರ್ಷ ಏನಾಗಿದೆ? ಈ ವರ್ಷವೂ

ಕೂಡ 86 ತಾಲ್ಲೂಕುಗಳಲ್ಲಿ ಬರಗಾಲವಿದೆ. ಸುಮಾರು 20 ಲಕ್ಷ ಹೆಕ್ಟೇರ್‌ನಲ್ಲಿ ಈ ವರ್ಷವೂ ಕೂಡ ಬಿತ್ತನೆ ಮಾಡಿದ ಬೆಳೆ ನಷ್ಟವಾಗಿದೆ. ಸುಮಾರು 13 ರಿಂದ 14 ಲಕ್ಷ ಹೆಕ್ಟೇರ್‌ನಲ್ಲಿ ಮುಂಗಾರಿನಲ್ಲಿ ಬಿತ್ತನೆ ಮಾಡಿಲ್ಲ. ಕರ್ನಾಟಕದಲ್ಲಿ ಕೃಷಿಗೆ ಯೋಗ್ಯವಾದ ಪ್ರದೇಶ ಇರುವುದೇ 123 ಲಕ್ಷ ಹೆಕ್ಟೇರ್ ಪ್ರದೇಶ. ಅಷ್ಟು ಪ್ರದೇಶದಲ್ಲಿ ಬೆಳೆ ಬೆಳೆಯುವುದಕ್ಕೆ ಆಗುತ್ತಿಲ್ಲ. 106, 107, 102 ಲಕ್ಷ ಈ ತರಹ it varies. ಮುಂಗಾರಿಗೆ 72 ಲಕ್ಷ, ಹಿಂಗಾರಿಗೆ 32 ಲಕ್ಷ, ಬೇಸಿಗೆಗೆ 6 ಲಕ್ಷ, ಇವೆಲ್ಲ ಲೆಕ್ಕಗಳು ಯಾವಾಗ ಎಂದರೆ ಮಳೆ ಬಂದರೆ ಮಾತ್ರ. ಏಕೆಂದರೆ, ಈ ದೇಶದಲ್ಲಿ ರಾಜಸ್ಥಾನ ಬಿಟ್ಟರೆ ಕರ್ನಾಟಕ drought prone land ನಲ್ಲಿ 2ನೇ ಸ್ಥಾನದಲ್ಲಿದೆ. ಇದು ಇವತ್ತು ನಿನ್ನೆ ಆಗಿರುವುದಲ್ಲ. ಇದನ್ನು ನಾವು ನಿನ್ನೆ ಇವತ್ತು ಓದಿರುವುದಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಹಳ ನೊಂದುಕೊಂಡು ಬಹಳ ಕಳಕಳಿಯಿಂದ ನೋಡಿ ಭಾರತ ದೇಶ, Human Development Index ನಲ್ಲಿ 127ನೇ ಸ್ಥಾನದಲ್ಲಿದೆ, ನಮ್ಮ ದುಸ್ಥಿತಿ ನೋಡಿ, ಕರ್ನಾಟಕ ರಾಜ್ಯ Human Development Index ನಲ್ಲಿ ಭಾರತದಲ್ಲಿಯೇ 7ನೇ ಸ್ಥಾನದಲ್ಲಿದೆ ಎಂದು ಹೇಳಿದ್ದಾರೆ. ಇದು ನಮಗೆ ನಿನ್ನೆ ಮೊನ್ನೆ ಗೊತ್ತಾದುದಲ್ಲ. ಕರ್ನಾಟಕ ರಾಜ್ಯದಲ್ಲಿ ಮೊದಲನೇ ಬಾರಿಗೆ Human Development Index ತಯಾರಾದದ್ದು 1998ರಲ್ಲಿ. That is the first report. ನಾನು ಆಗ Planning Minister ಆಗಿದ್ದೆ. ಎರಡನೇ ಸಲ 2005ರಲ್ಲಿ Human Development Index report ಬಂದಿತ್ತು. ಆಗಲೂ ನಾನೇ Planning Minister ಆಗಿದ್ದೆ. ಇವೆಲ್ಲವೂ ಕೂಡ ಇಡೀ ರಾಜ್ಯದ ಚಿತ್ರ. Human Development Index ಎಂದರೆ ತಲಾ ಆದಾಯ ಎಷ್ಟಿದೆ? ನಮ್ಮ ರಾಜ್ಯದ ಜಿಡಿಪಿ ಎಷ್ಟಿದೆ? ನಾವು ಎಷ್ಟು ಉತ್ಪನ್ನ ಬೆಳೆಯುತ್ತೇವೆ? ಎಂದಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಭಾರತದಲ್ಲಿ ಶಿಕ್ಷಣ ಸಿಕ್ಕಿದೆಯೇ, ಅವನಿಗೆ ಸೂರು ಸಿಕ್ಕಿದೆಯೇ, health, ಉದ್ಯೋಗ ಸಿಕ್ಕಿದೆಯೇ? ಆರೋಗ್ಯ ರಕ್ಷಣೆ ಇದೆಯೇ, ಅವನು ಬದುಕಲಿಕ್ಕೆ ಒಳ್ಳೆಯ ವಾತಾವರಣ ಇದೆಯೇ? ಅವನ life expectancy ಎಷ್ಟಿದೆ? ರಾಜ್ಯ, ದೇಶದ average ಮುಂದುವರಿದ ರಾಷ್ಟ್ರಗಳಿಗಿಂತ ಹೆಚ್ಚಾಗಿದೆಯೇ, ಇಲ್ಲವೇ, ನಮ್ಮ ಮಕ್ಕಳಿಗೆ, ಬಾಣಂತಿಯರಿಗೆ ಪೌಷ್ಠಿಕ ಆಹಾರ ಸಿಗುತ್ತಿದೆಯೇ ಇಲ್ಲವೇ? ಮಕ್ಕಳಿಗೆಲ್ಲ ಶಿಕ್ಷಣ ಸಿಗುತ್ತಿದೆಯೇ

ಇಲ್ಲವೇ? ಅವರಿಗೆಲ್ಲ ಆರೋಗ್ಯ ರಕ್ಷಣೆ ಆಗುತ್ತಿದೆಯೇ ಇಲ್ಲವೇ? ಎಲ್ಲಾ ಭಾಗಗಳಲ್ಲೂ ಕೂಡ inclusive growth ಆಗಿದೆಯೇ, ಇಲ್ಲವೇ? ಇವುಗಳನ್ನೆಲ್ಲ ಆಧರಿಸಿ ಮಾನವ ಅಭಿವೃದ್ಧಿ ಸೂಚ್ಯಂಕ 1998ರಲ್ಲಿ ಮತ್ತು 2005ರಲ್ಲಿ ತಯಾರಾಯಿತು. ಆಗ ವಿರೋಧ ಪಕ್ಷದ ಸ್ಥಾನದಲ್ಲಿ ಮಾನ್ಯ ಯಡಿಯೂರಪ್ಪನವರೇ ಕುಳಿತಿದ್ದರು.

(5-00 PM)

ಬಹುಶಃ ಆ ಕಾಲದಲ್ಲಿ ವಿರೋಧ ಪಕ್ಷದಲ್ಲಿ ಮಾನ್ಯ ಯಡಿಯೂರಪ್ಪನವರು ಈ ಬಾಗದಲ್ಲಿ ಕುಳಿತಿದ್ದರು ಎಂದು ಕಾಣುತ್ತದೆ. ಹೀಗಾಗಿ ಅವರಿಗೆ ಗೊತ್ತಿದೆ. It is not new thing.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ವ ಅಭಿವೃದ್ಧಿ ಸೂಚ್ಯಂಕ ಮೊದಲು ಶುರುವಾಗಿದ್ದು ನಮ್ಮ ದೇಶದಲ್ಲಿ ರಾಜಸ್ತಾನದಲ್ಲಿ ನಂತರ ಕರ್ನಾಟಕದಲ್ಲಿ.

ಶ್ರೀ ಸಿದ್ದರಾಮಯ್ಯ : ಮಧ್ಯಪ್ರದೇಶ ಮೊದಲನೇ ರಾಜ್ಯ, ನಂತರ ಕರ್ನಾಟಕ.

ಡಾ: ಹೆಚ್.ಸಿ.ಮಹಾದೇವಪ್ಪ : ಮಧ್ಯಪ್ರದೇಶ ಮೊದಲು ನಂತರ ಕರ್ನಾಟಕ ರಾಜ್ಯ.

ಶ್ರೀ ಬಸವರಾಜ ಬೊಮ್ಮಾಯಿ : ಅಲ್ಲಿ ಎರಡೂ ಒಟ್ಟಿಗೆ ಆಗಿದ್ದು ನಂತರ ಕರ್ನಾಟಕ.

ಶ್ರೀ ಸಿದ್ದರಾಮಯ್ಯ : ಆಯಿತು ಸರಿ ಇರಲಿ. ನಿಮ್ಮದು ಸರಿಯಿದ್ದರೆ subject to correction. If my memory is correct Madhya Pradesh Number one, Second one Karnataka.

ಶ್ರೀ ಬಸವರಾಜ ಬೊಮ್ಮಾಯಿ : ರಾಜಸ್ಥಾನದ್ದು ರೆಡಿಯಾಗಿತ್ತು, ಆದರೆ ಮೊದಲು ಡ್ರಾಫ್ಟ್ ಮಧ್ಯಪ್ರದೇಶ ರಾಜ್ಯದ್ದು ರೆಡಿಯಾಗಿತ್ತು.

ಶ್ರೀ ಸಿದ್ದರಾಮಯ್ಯ : ಆಯಿತು ಇರಲಿ ಬಿಡಿ. ನಿಮಗೆ ಮಾರ್ಕ್ಸ್ ಕೊಡೋಣ. ನನಗೆ ಗೊತ್ತಿರುವ ಮಟ್ಟಿಗೆ number one state is Madhya Pradesh, second one is Karnataka. O.K. ಅದರ ಬಗ್ಗೆ no dispute. ಎರಡನೇ ರಾಜ್ಯ ಕರ್ನಾಟಕ. ಆದುದರಿಂದ 1998ನೇ ಇಸವಿಯಲ್ಲಿ ನಮ್ಮ ದೇಶದ ಪರಿಸ್ಥಿತಿ Human Development Index ನಲ್ಲಿ ಏನು ಇದೆ ಎಂದು ಗೊತ್ತಿತ್ತು. ಈ ಇಂಡೆಕ್ಸ್‌ಗಳ ಜೊತೆಗೆ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ

ಕೃಷಿಯ ಬಗ್ಗೆ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಅನೇಕ ಚರ್ಚೆಗಳಾಗಿವೆ. ಏಕೆಂದರೆ, ಗ್ರಾಮೀಣಾಭಿವೃದ್ಧಿ ಎಂದರೆ, ಗ್ರಾಮೀಣಾಭಿವೃದ್ಧಿ ಆಗಬೇಕಾದರೆ, ಮಹಾತ್ಮ ಗಾಂಧೀಜಿಯವರು ಏನು ಹೇಳೀದರು, ಮಾನ್ಯ ಮುಖ್ಯಮಂತ್ರಿಗಳು ಅವರು ಹೇಳಿರುವುದನ್ನು ಬಳಸಿದ್ದಾರೆ. ಗ್ರಾಮ ಸ್ವರಾಜ್ಯ, ರಾಮ ರಾಜ್ಯ ಅಲ್ಲ, ಗ್ರಾಮ ಸ್ವರಾಜ್ಯ. ಮಹಾತ್ಮ ಗಾಂಧೀಜಿಯವರು ಹೇಳಿದ್ದು ಸ್ವರಾಜ್ಯ, ರಾಮರಾಜ್ಯ, ಸ್ವರಾಜ್ಯ, ಇದು ಆಗಬೇಕು, ಇದು ಆಗಬೇಕಾದರೆ ಹಳ್ಳಿಗಳು ಸ್ವಾವಲಂಬನೆ ಆಗಬೇಕು. ಹಳ್ಳಿಗಳು ಸ್ವಾವಲಂಬನೆ ಆದರೆ ದೇಶ ಸ್ವಾವಲಂಬನೆಯಾಗುತ್ತದೆ. ಅದನ್ನೇ ಲೋಹಿಯಾರವರು ಏನು ಹೇಳಿದರು ಎಂದರೆ, ನಮ್ಮ ದೇಶದಲ್ಲಿ ದೇಶ ಅಭಿವೃದ್ಧಿಯಾಗಬೇಕಾದರೆ, ಗ್ರಾಮೀಣಾಭಿ ವೃದ್ಧಿಯಾಗಬೇಕಾದರೆ, ನಮ್ಮ ಆಡಳಿತದಲ್ಲಿ ವಿಕೇಂದ್ರಕರಣವಾಗಬೇಕು ಎಂದು ಹೇಳಿದರು. ಅದಕ್ಕೆ ಅವರು ಏನು ಪ್ರತಿಪಾದನೆ ಮಾಡಿದರು ಎಂದರೆ ಚೌಸ್ತಂಭದ ಅಧಿಕಾರ ಆಗಬೇಕೆಂದರು. ಚೌಸ್ತಂಭದ ಅಧಿಕಾರ ಎಂದರೆ, ಅಧಿಕಾರ ದೆಹಲಿಯಲ್ಲಿಬಾರದು ಅಥವಾ ರಾಜ್ಯದಲ್ಲಿರಬಾರದು. ನಮ್ಮ ಸಂವಿಧಾನದಲ್ಲಿ ತಿದ್ದುಪಡಿಯಾಗಿ ನಾಲ್ಕು ಹಂತದಲ್ಲಿ ಅಧಿಕಾರ ವಿಭಜನೆ ಯಾಗಬೇಕು, ಒಂದು ರಾಷ್ಟ್ರ, ಒಂದು ರಾಜ್ಯ, ಒಂದು ಜಿಲ್ಲೆ, ಒಂದು ಹಳ್ಳಿ, ಈ ನಾಲ್ಕು ಹಂತದಲ್ಲಿ ಚೌಸ್ತಂಭದ ಅಧಿಕಾರದ ವಿಕೇಂದ್ರೀಕರಣವಾಗಬೇಕು, ಹಾಗಾದಾಗ ಮಾತ್ರ ಹಳ್ಳಿಗಳು ಅಭಿವೃದ್ಧಿಯಾಗುತ್ತವೆ. ಹಳ್ಳಿಗಳು ಸ್ವಾವಲಂಬನೆಯಾಗಬೇಕಾದಾಗ, ಹಳ್ಳಿಗಳಿಗೆ ಅಧಿಕಾರ ಇರಬೇಕು, ಹಳ್ಳಿಗಳಿಗೆ ರಿಸೋರ್ಸ್‌ಸ್ ಇರಬೇಕು. ಹಣ ಇರಬೇಕು, ಅಧಿಕಾರ ಇರಬೇಕು. ಇವೆರಡೂ ಇದ್ದರೆ ಮಾತ್ರ ಗ್ರಾಮಗಳ ಸ್ವಾವಲಂಬನೆಯಾಗಲಿಕ್ಕೆ ಸಾಧ್ಯವಾ ಗುತ್ತದೆ. ಇನ್ನು ಗಾಂಧೀಜಿಯವರು ಎಲ್ಲಿಯವರೆಗೆ, ಯೋಚಿಸಿದ್ದರು ಎಂದರೆ ಲೋಹಿಯಾರವರು ಎಲ್ಲಿಯವರೆಗೆ ಯೋಚಿಸಿದ್ದರು ಎಂದರೆ, ಪೋಲಿಸ್ ನವರೇ ಇರಬಾರದು ಎನ್ನುತ್ತಿದ್ದರು. ಈ ದೇಶದಲ್ಲಿ ಇಷ್ಟೊಂದು ಕಳ್ಳರುಗಳು, ರೌಡಿಗಳು, ಭೂಮಿ ನುಂಗುವವರು, ಭ್ರಷ್ಟಾಚಾರ ಮಾಡುವವರು, ಏನೇನು ತರತರಹದ ಬಹಳ ಜನಗಳು ಎಲ್ಲಾ ಇದ್ದಾರೆ, ಕ್ರಿಮಿನಲ್ಸ್ ತುಂಬಿಕೊಂಡಿದ್ದಾರೆ. ಈ ದೇಶಕ್ಕೆ ಆ ರೀತಿ ಆಗಬೇಕೆಂದು ಯಾವ ಪ್ರತಿಪಾದನೆ ಮಾಡಿದರೋ, ಇವತ್ತು ಬರೀ ಪೋಲಿಸ್‌ನವರಿಗೆ 1500 ದಿಂದ 1600 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, if I am correct? 1500 ದಿಂದ 1600 ಕೋಟಿ ರೂಪಾಯಿಗಳನ್ನು ಖರ್ಚು

ಮಾಡುತ್ತಿದ್ದೇವೆ, ಇನ್ನೂ ಅದಕ್ಕಿಂತಲೂ ಜಾಸ್ತಿಯೇ ಖರ್ಚು ಮಾಡುತ್ತಿದ್ದೇವೆ. ಆ ಮಟ್ಟಕ್ಕೆ ಬಂದಿದ್ದೇವೆ. ಅದು ಏನೇ ಇರಲಿ, ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಆಗಬೇಕಾದರೆ, ಅಧಿಕಾರ ವಿಕೇಂದ್ರೀಕರಣ ಆಗದೇ ರಿಸೋರ್ಸ್‌ಸ್ ಹಳ್ಳಿಗಳಿಗೆ ಹೋಗದೆ, ಹಳ್ಳಿಗಳಿಗೆ ರಿಸೋರ್ಸ್‌ಸ್ ವರ್ಗಾವಣೆಯಾಗದೇ ಹಳ್ಳಿಗಳು ಅಭಿವೃದ್ಧಿ ಯಾಗಲಿಕ್ಕೆ ಸಾಧ್ಯವಿಲ್ಲ. ಮೊದಲನೆಯದಾಗಿ ನಾವು ಗ್ರಾಮೀಣಾಭಿವೃದ್ಧಿಯ ಬಗ್ಗೆ ಚಿಂತನೆ ಮಾಡಬೇಕಾಗಿದೆ. Resource mobilization and de-centralization of power. ಅದಕ್ಕೆ ನಮ್ಮ ಸಂವಿಧಾನದಲ್ಲಿ Article 40 of Constitution ನಲ್ಲಿ ಏನು ಹೇಳುತ್ತಾರೆ ಎಂದರೆ, ಪಂಚಾಯಿತಿಗಳನ್ನು ಆರ್ಗನೈಸ್ ಮಾಡಬೇಕು ಎಂದು Article 40 of directive principles of state policy. ಇದರಲ್ಲಿ ಹೇಳುತ್ತಾರೆ. ಅದರ ಮೂಲಕ ಸ್ವಾತಂತ್ರ್ಯ ಬಂದ ಮೇಲೆ ಪಂಚಾಯಿತಿ institution ಗಳನ್ನು ಮಾಡಲಿಕ್ಕೆ ಸಾಧ್ಯವಾಯಿತು. ಅದರ ಹಿಂದೆಯೂ ಇತ್ತು. Traditional ಆಗಿ ಹಳ್ಳಿಗಳಲ್ಲಿ ಪಂಚಾಯಿತಿ ಗಳೆಂದು ಇರುತ್ತಿದ್ದವು. But ಕಾನೂನಿನ ಚೌಕಟ್ಟಿನೊಳಗೆ ಬಂದಿರಲಿಲ್ಲ. ಕಾನೂನು ಇಲ್ಲದೇ ಪಂಚಾಯಿತಿಗಳು ಇದ್ದವು. ನಂತರ 1957ನೇ ಇಸವಿಯಲ್ಲಿ ಬಲವಂತರಾಯ್ ಮೆಹ್ತಾರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ರಚಿಸಿದರು. ಅವರು 1958 ರಲ್ಲಿ ಒಂದು ವರದಿ ಕೊಟ್ಟರು. ಆ ವರದಿಯನ್ನು ಇಟ್ಟುಕೊಂಡು ನಂತರ ಅನೇಕ ರಾಜ್ಯಗಳಲ್ಲಿ ಪಂಚಾಯಿತಿ institution ಗಳು ರಚನೆಯಾಗಲಿಕ್ಕೆ ಸಾಧ್ಯವಾದವು. ಅದಕ್ಕಿಂತ ಮೊದಲು ಕಾನೂನು ಪ್ರಕಾರ ಮಾಡುವುದಕ್ಕಿಂತ ಮುಂಚಿತವಾಗಿ Community development center ಗಳೆಂದು ಮಾಡಿಕೊಂಡಿದ್ದರು. National extension services center ಗಳೆಂದು ಮಾಡಿಕೊಂಡಿದ್ದರು. National extension services center and community development center ಗಳೆಂದು ಮಾಡಿಕೊಂಡಿದ್ದರು. ಇದಾದ ನಂತರ ಕೆಲವು ರಾಜ್ಯಗಳಲ್ಲಿ ಕಾನೂನು ರಚಿಸಿ ಪಂಚಾಯಿತಿ institutionsಗಳು ಜಾರಿಗೆ ಬಂದವು. ಮೊದಲಿಗೆ ಗ್ರಾಮ ಪಂಚಾಯಿತಿ ಗಳಾಗಿದ್ದವು, ನಂತರ ತಾಲ್ಲೂಕು ಪಂಚಾಯಿತಿಗಳು, ಜಿಲ್ಲಾ ಪಂಚಾಯಿತಿ ಗಳು ಎಂದು ಆದವು. ಆದರೆ ಅವುಗಳಿಗೆ ಸಂವಿಧಾನದ ಚೌಕಟ್ಟು ಇರಲಿಲ್ಲ. 1977 ನಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಅಶೋಕ್ ಮೆಹ್ತಾರವರ

ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯಾಯಿತು. ಅವರು ಒಂದು ಸಮಿತಿ ವರದಿಯನ್ನು 1978 ರಲ್ಲಿ ಕೊಟ್ಟರು. ಆ ಕಮಿಟಿಯ ವರದಿಯನ್ನಾಧರಿಸಿ ಕೆಲವು ರಾಜ್ಯಗಳಲ್ಲಿ ಮತ್ತೆ ಚರ್ಚೆಗಳಾಗಿ, ಕೊನೆಗೆ ಹಿಂದೆ ಇರುವಂಥವು ಗಳನ್ನು ಬದಲಾಯಿಸಿ ಹೊಸದಾಗಿ ಮಾಡಬೇಕೆಂದು ಮಾಡಿದರು, ಕೆಲವು ಎಲ್ಲಾ ಆದವು. ಆಂಧ್ರ, ರಾಜಸ್ತಾನ, ಪಶ್ಚಿಮ ಬಂಗಾಳ, ಕರ್ನಾಟಕ, ಹೀಗೆ ಕೆಲವು ಕಡೆ ಆದವು. 1983 ಮತ್ತು 1986ನಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿರುವಾಗ, ನಜೀರ್‌ಸಾಬ್‌ರವರು ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಿರುವಾಗ, ಅಶೋಕ್ ಮೆಹ್ತಾರವರ ಕಮಿಟಿಯಾಧಾರದ ಮೇಲೆ S.K.Dey ಕೇಂದ್ರದಲ್ಲಿದ್ದವರು ಅವರೆಲ್ಲರೂ ಸೇರಿ ಆಗ ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ತಾಲ್ಲೂಕು ಸಮಿತಿ, ತಾವು ಕೂಡ ಇದ್ದಿರಿ, ತಮಗೆ ಇದು ಗೊತ್ತಿದೆ. ಜಿಲ್ಲಾ ಪಂಚಾಯಿತಿ, ನ್ಯಾಯ ಪಂಚಾಯತಿ ಕಾಯಿದೆ, ಆಗ ನಜೀರ್ ಸಾಬ್ ರವರನ್ನು 'ನೀರ್ ಸಾಹೇಬ್ರು' ಎಂದು ಕರೆಯುತ್ತಿದ್ದರು. 1986 ರಲ್ಲಿ ಆ ಕಾಯಿದೆ ಬಂತು. ಅದು ಬಂದ ನಂತರ ಈ ವ್ಯವಸ್ಥೆಯಲ್ಲೂ ಕೂಡ ಏನು ಮಾಡಬೇಕೆಂದು ಒಂದು ರಿವ್ಯೂ ಆಯಿತು. ಆಮೇಲೆ ಈ ದೇಶದಲ್ಲಿ ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿರುವಾಗ ಮತ್ತೆ ಇದನ್ನು ಚರ್ಚೆ ಮಾಡಿ ಮಾಡಿ ಇದಕ್ಕೆ ಸಂವಿಧಾನ ಬದ್ಧವಾಗಿ ಮಾನ್ಯತೆ ಕೊಡಬೇಕೆಂದು ಚರ್ಚೆಯಾಯಿತು. ಇದು ಸಂವಿಧಾನದ ಚೌಕಟ್ಟಿನಲ್ಲಿ ಬಂದಿಲ್ಲ Article 40 of directive principles ಎಂಬುದು ಬಿಟ್ಟರೆ ಅದಕ್ಕೋಸ್ಕರವಾಗಿ ಇದಕ್ಕೆ ಸಂವಿಧಾನದ ಚೌಕಟ್ಟಿನಲ್ಲಿ ತರಬೇಕೆಂದು 64th amendment ರಾಜೀವ್ ಗಾಂಧಿ ಕಾಲದಲ್ಲಿ ಈ ಬಗ್ಗೆ ಬಿಲ್ ಎಲ್ಲಾ ತಯಾರಾಗಿ ಲೋಕಸಭೆಯಲ್ಲಿ ಪಾಸಾಗಿ ರಾಜ್ಯ ಸಭೆಯಲ್ಲಿ ಮೇಜಾರಿಟಿಯಿಲ್ಲದೆ ಆಗಲಿಲ್ಲ. ನಂತರ ನರಸಿಂಹರಾವ್‌ರವರ ಕಾಲದಲ್ಲಿ 73rd amendment ಆಯಿತು. ಆ 64th renamed as 73rd amendment. ಅವರು ಇರುವಾಗ ಅದು ಆಗಲಿಲ್ಲ. ನಂತರ ವಿ.ಪಿ.ಸಿಂಗ್‌ರವರು ಬಂದರು, ಅವರ ಕಾಲದಲ್ಲಿ ಇದೆಲ್ಲಾ ಚರ್ಚೆಯಾಗಿ ಆಗಲಿಲ್ಲ. ಮೊದಲು Two Tier System ಎಂದು ಇತ್ತು. ಇದನ್ನು 73rd amendment ಮೂಲಕ ಸಂವಿಧಾನ ಚೌಕಟ್ಟಿನೊಳಗೆ ತಂದು, 11th Schedule to the Constitution create ಆಗಿ ನಾವು ಈಗ Three Tier System ಪಂಚಾಯತ್ ವ್ಯವಸ್ಥೆ ನೋಡುತ್ತಿದ್ದೇವೆ. ಇದರ ಬಗ್ಗೆ ಕೂಡ ಪರ ವಿರೋಧ ಚರ್ಚೆಗಳು ಬಂದಿವೆ. ಹಿಂದೆ ಇದ್ದಂಥ

Two Tier System ಚೆನ್ನಾಗಿತ್ತು ಎನ್ನತಕ್ಕಂಥ ಅಭಿಪ್ರಾಯ ಕೂಡ ಬಂದಿದೆ. ಮತ್ತೆ ಈಗ ಇರತಕ್ಕಂಥ ಸಿಸ್ಟಮ್ ಬಗ್ಗೆ ಕೂಡ ಚೆನ್ನಾಗಿದೆ ಎಂದು ಕೆಲವರ ಅಭಿಪ್ರಾಯ ಇದೆ. 73rd amendment ಮೂಲಕ ಮಹಿಳೆಯರಿಗೆ ಮೀಸಲಾತಿ ಬಂತು ಮತ್ತೆ ಪರಿಶಿಷ್ಟ ಜಾತಿಯ ಜನರಿಗೆ ಅವರ ಜನಸಂಖ್ಯೆಯ ಅನುಗುಣವಾಗಿ ಮೀಸಲಾತಿ ನೀಡಲಾಯಿತು. ಮತ್ತೆ ಹಿಂದುಳಿದ ವರ್ಗದವರಿಗೂ ಕೂಡ ಮೀಸಲಾತಿ ಕೊಡಬೇಕೆಂದು 73rd ಅಮೆಂಡ್ ಮೆಂಟ್‌ನಲ್ಲಿಯೇ ಆಗಿತ್ತು. ಅಲ್ಲಿಯವರೆಗೆ ಮಹಿಳೆಯರಿಗೆ ಮೀಸಲಾತಿ ಇರಲಿಲ್ಲ ಮತ್ತು ಪರಿಶಿಷ್ಟ ಜಾತಿಯವರಿಗೆ ಅವರ ಜನಸಂಖ್ಯೆಯ ಅನುಗುಣವಾಗಿ ಮೀಸಲಾತಿ ಇರಲಿಲ್ಲ. ಹಾಗೆಯೇ ಹಿಂದುಳಿದ ವರ್ಗದವರಿಗೂ ಕೂಡ ಮೀಸಲಾತಿ ಇರಲಿಲ್ಲ. 73rd ಅಮೆಂಡ್‌ಮೆಂಟ್ ಮಾಡಿದಾಗ ಹಿಂದುಳಿದ ವರ್ಗದವರಿಗೆ ಎಷ್ಟು ಮಾಡಬೇಕೆಂದು ಮತ್ತು ಹೇಗೆ ಮಾಡಬೇಕೆಂದು ಹಾಗೂ ಅಲ್ಪಸಂಖ್ಯಾತರಿಗೆ ಯಾವ ರೀತಿಯಾಗಿ ಎಷ್ಟು ಮಾಡಬೇಕೆಂಬುದನ್ನು ಆಯಾ ರಾಜ್ಯದವರು ಮಾಡಲೆಂದು ಹಾಗೆಯೇ ಬಿಟ್ಟರು. 73rd ಅಮೆಂಡ್‌ಮೆಂಟ್ ಅನುಗುಣವಾಗಿ 1993ನೇ ಇಸವಿಯಲ್ಲಿ ಮಾನ್ಯ ವೀರಪ್ಪಮೊಯಿಲಿಯವರು ಇಲ್ಲಿ ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ Three Tier System ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂತು. ಅಲ್ಲಿಂದ ಇವತ್ತಿನವರೆಗೆ ಅದೇ ಸಿಸ್ಟಮ್ ಜಾರಿಯಲ್ಲಿದೆ. 1994–95ರಲ್ಲಿ ತಾಲ್ಲೂಕು ಮತ್ತು ಜಿಲ್ಲಾಪಂಚಾಯತ್ ಬಂದಾಗ ಅವತ್ತು ಇದ್ದಂಥ ಜನತಾದಳ ಸರ್ಕಾರ ಹಿಂದುಳಿದವರಿಗೆ ಯಾವ ರೀತಿ ಮೀಸಲಾತಿ ಕೊಡಬೇಕೆಂಬುದರ ಬಗ್ಗೆ ಚರ್ಚೆ ಮಾಡಿ 26.4% ಬಿ.ಸಿ.ಎಂ.(ಎ)ನವರಿಗೆ ಕೊಡಬೇಕು ಮತ್ತು ಇದರಲ್ಲಿ ಅಲ್ಪಸಂಖ್ಯಾತರು ಕೂಡ ಸೇರಬೇಕೆಂದು ಮತ್ತೆ ಬಿ.ಸಿ.ಎಂ.(ಬಿ) ಮಾಡಿ 6.6.% ನಷ್ಟು ಅವರಿಗೆ ಕೊಟ್ಟು ಒಟ್ಟು 33% ನಷ್ಟು ಬಿಸಿಎಂ(ಎ) ಮತ್ತು ಬಿಸಿಎಂ(ಬಿ) ಮೀಸಲಾತಿ ಮಾಡಿದರು. ಮಾನ್ಯ ಸುರೇಶ್ ಕುಮಾರ್‌ರವರ ಗಮನಕ್ಕೆ ತರುವುದೇನೆಂದರೆ, ನಿಮ್ಮ ರಾಮಾಜೋಯಿಸ್‌ರವರು ಇದನ್ನು ಕೊಡಬೇಡಿ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಆರ್ಗ್ಯುಮೆಂಟ್ ಮಾಡುತ್ತಿರುವುದು. ಅವರ ಮೇಲೆ ನಾನು ಆಪಾದನೆ ಮಾಡುತ್ತಿಲ್ಲ. I am not making allegations against him, but fact is that he belongs to your party. He is also an Advocate by profession. It is also an admitted fact.

Sri S. SURESH KUMAR : Like your Kapil Sibal.

ಶ್ರೀ ಸಿದ್ದರಾಮಯ್ಯ : Ok, all right. He is like our Kapil Sibal. ಆದರೆ, ಮಾನ್ಯ ರಾಮಾಜೋಯಿಸ್‌ರವರು ರಾಜ್ಯಸಭಾ ಮೆಂಬರ್ ಕೂಡ ಆಗಿದ್ದಾರೆ. He is in your party and Rajya Sabha Members also. ನಾನು ಏನು ಹೇಳುತ್ತಿದ್ದೇನೆಂದರೆ, ಹಿಂದುಳಿದವರಿಗೆ ನೀಡಿರುವ ಮೀಸಲಾತಿ ಸರಿ ಇಲ್ಲವೆಂದು ಅವರು ಅಲ್ಲಿ ಆರ್ಗ್ಯುಮೆಂಟ್ ಮಾಡಿದ್ದಾರೆ. ಮತ್ತೆ ಇದರಲ್ಲಿ ಅಲ್ಪಸಂಖ್ಯಾತರಿಗೆ ಸೇರಿಸಿಕೊಂಡಿರತಕ್ಕಂಥದ್ದು ಸರಿಯಿಲ್ಲ. ಆದ್ದರಿಂದ ಈ ಮೀಸಲಾತಿಯನ್ನು ರದ್ದು ಮಾಡಬೇಕೆಂದು ಅಲ್ಲಿ ಆರ್ಗ್ಯುಮೆಂಟ್ ಆಗಿದೆ. The case is posted for Judgement. ಇನ್ನು judgement deliver ಆಗಿಲ್ಲ. ನಾನು ಹೇಳುವುದೇನೆಂದರೆ, ಹಿಂದುಳಿದ ವರ್ಗದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ರಾಜಕೀಯದಲ್ಲಿ ಪಾಲು ಇರಬೇಕೆಂಬ ಕಾರಣಕ್ಕೋಸ್ಕರ ಮತ್ತು ಅಧಿಕಾರದಲ್ಲಿ ಎಲ್ಲರೂ ಪಾಲುದಾರರಾಗಬೇಕೆಂಬ ಕಾರಣಕ್ಕೋಸ್ಕರ ಅಂದರೆ ಸಾಮಾಜಿಕ ನ್ಯಾಯ ಎಲ್ಲರಿಗೂ ಸಿಗಬೇಕಲ್ಲವೆ? ಮತ್ತೆ inclusive growth ಆಗಬೇಕಲ್ಲವೆ? ಹಳ್ಳಿ ಮತ್ತು ಪಟ್ಟಣಗಳೆರಡೂ ಸಮಾನಕ್ಕೆ ಬರಬೇಕಾದರೆ ಅಂದರೆ, ಪುರ ಕಲ್ಪನೆ ಆಗಬೇಕಾದರೆ ಎಲ್ಲರಿಗೂ ಸಮಾನ ಅವಕಾಶಗಳು ಮತ್ತು ಸಮಾನವಾಗಿ ಅಧಿಕಾರದ ಹಂಚಿಕೆ ಹಾಗೂ ಸಂಪತ್ತಿನ ಹಂಚಿಕೆಗಳು ಆಗಬೇಕಲ್ಲವೆ? ಇದೆಲ್ಲ ಆಗದೇ ಸಮಾನತೆ ಹೇಗೆ ಬರುತ್ತದೆ? Inclusive growth ಹೇಗೆ ಆಗುತ್ತದೆ? There can't be inclusive growth unless wealth is distributed among all members of the society, unless all are involved in the power. ಇದು ಇಲ್ಲದೆ ಹೋದರೆ ಏನೂ ಆಗುವುದಿಲ್ಲ. ಆದ್ದರಿಂದ, ಇದು ಆಗಲೇ ಬೇಕು. ಇವತ್ತಿನ ದಿವಸ De-centralization of power ಮಾಡಿ ಮಹಿಳೆಯರು, ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು ಅಧಿಕಾರದಲ್ಲಿ ಎಲ್ಲರೂ ಪಾಲುಗೊಳ್ಳುವುದಕ್ಕೆ ಮಾಡಿದ್ದಾರೆ. ಇದು ಕೇವಲ not in Assembly and Parliament, It is confined to only Panchayath Institutions and Local Bodies, but not in the Assembly. ಅಸೆಂಬ್ಲಿ ಮತ್ತು ಪಾರ್ಲಿಮೆಂಟ್‌ನಲ್ಲಿ ಮಹಿಳೆಯರಿಗೆ 33% ನಷ್ಟು ಕೊಡಬೇಕೆಂಬುದು ಇನ್ನು ಪೆಂಡಿಂಗ್‌ನಲ್ಲಿದೆ. ಮತ್ತು ಇದರ ಬಗ್ಗೆ ಇನ್ನು ಪಾರ್ಲಿಮೆಂಟ್‌ನಲ್ಲಿ ಚರ್ಚೆಯಲ್ಲಿದೆ. ಆದ್ದರಿಂದ, ಅದರ ಬಗ್ಗೆ ನಾನು

ಮಾತನಾಡುವುದಕ್ಕೆ ಹೋಗುವುದಿಲ್ಲ. ಪಾರ್ಲಿಮೆಂಟ್‌ನಲ್ಲಿರುವವರು ಇದರ ಬಗ್ಗೆ ಮಾತನಾಡುತ್ತಾರೆ. ನಾನು ಏತಕ್ಕಾಗಿ ಇದೆಲ್ಲಾ ಹೇಳುತ್ತೇನೆಂದರೆ, ಗ್ರಾಮೀಣಾಭಿವೃದ್ಧಿ ಕಲ್ಪನೆ ಇಟ್ಟುಕೊಂಡು ನಾವು ಚರ್ಚೆ ಮಾಡುವಾಗ ಮತ್ತು ಗ್ರಾಮೀಣಾಭಿವೃದ್ಧಿಯಾಗಬೇದರೆ ಸಮಾಜದಲ್ಲಿ ಎಲ್ಲ ಅವಕಾಶದಿಂದ ವಂಚಿತರಾಗಿರುವ ಜನರಿಗೆಲ್ಲರಿಗೂ Participate ಮಾಡುವಂತಹ ಅವಕಾಶ ಸಿಕ್ಕಿದಾಗ ಮಾತ್ರ ಸಾಧ್ಯವೇ ಹೊರತು ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. This is my point. ಈಗ ಮಾನ್ಯ ಯಡಿಯೂರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾರೆ. He is also committed to Rural Development. ಮಾನ್ಯ ರಾಮಾಜೋಯಿಸ್‌ರವರು as a Lawyer ಆಗಿ ಅಲ್ಲಿ appear ಆಗಿದ್ದರೂ ಕೂಡ, ಇದಕ್ಕೆ ತಾವು appear ಆಗಬಾರದೆಂದು ತಾವು ಅವರಿಗೆ ಹೇಳಬಹುದಿತ್ತು, if really the Government is committed to social justice. ನೀವು ನಮ್ಮ ಪಕ್ಷದಲ್ಲಿರುವುದರಿಂದ ತಾವು ಆರ್ಗ್ಯು ಮಾಡುವುದಕ್ಕೆ ಹೋಗಬೇಡಿ. ಬೇಕಾದರೆ ಬೇರೆ ಯಾರಾದರೂ ಲಾಯರ್ ಆಗಿರುವಂಥವರು argue ಮಾಡಲಿ ಎಂದು ತಾವು ಹೇಳಬಹುದಾಗಿತ್ತು. But, that has not been done. ಈ ಮಾತನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ನಾವು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುವಾಗ ಮತ್ತು ಅದರ ಬಗ್ಗೆ ಕಳಕಳಿ ಇರುವಾಗ ಇವೆಲ್ಲವನ್ನೂ ಕೂಡ ನಾವು ನೋಡಬೇಕಾಗುತ್ತದೆ. ಕೇವಲ ಇಷ್ಟಕ್ಕೆ ಗ್ರಾಮೀಣಾಭಿವೃದ್ಧಿ ಎಂದರೆ ಆಗುವುದಿಲ್ಲ. ಅಂದರೆ, ಈಗ ಇರತಕ್ಕಂಥದ್ದಕ್ಕೆ ಇನ್ನು ಸ್ವಲ್ಪ ಹೆಚ್ಚು ಹಣ ಕೊಡತಕ್ಕಂಥದ್ದು ಅಲ್ಲ. ನಾನು ಹೇಳಿರತಕ್ಕಂಥ ಅಂಶಗಳೆಲ್ಲವೂ ಆದಾಗ ಮಾತ್ರ ಗ್ರಾಮೀಣಾಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತದೆ. ಈ ಸದನದಲ್ಲಿ 1995 ರಲ್ಲಿ ನಾನು Asembly Member ಆಗಿ ಮಂತ್ರಿಯಾಗಿದ್ದಾಗ ಮಾನ್ಯ ಬೈರೇಗೌಡರು ಕೃಷಿ ಮಂತ್ರಿಯಾಗಿದ್ದರು. ಭಾರತ ಮತ್ತು ಕರ್ನಾಟಕ ರಾಜ್ಯದ ಕೃಷಿ ಬಗ್ಗೆ ಆ ಸಂದರ್ಭದಲ್ಲಿ ಒಂದು ಕೃಷಿ ನೀತಿ ಆಗಿತ್ತು. ಇದರ ಬಗ್ಗೆ ಚರ್ಚೆ ಕೂಡ ಆಗಿದೆ. ಮತ್ತೆ 2006ರಲ್ಲಿ ಮಾನ್ಯ ಬಂಡೆಪ್ಪ ಕಾಶಂಪೂರ್ ಕೃಷಿ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಒಂದು ಕೃಷಿ ನೀತಿ ಬಂತು. ಸುವರ್ಣ ಕರ್ನಾಟಕ ಸಮಯದಲ್ಲಿ ಅಂದರೆ, ನಮ್ಮ ರಾಜ್ಯ ಏಕೀಕರಣವಾಗಿ 50 ವರ್ಷಗಳಾದಂಥ ಸಂದರ್ಭದಲ್ಲಿ ಮಾನ್ಯ ಅಬ್ದುಲ್ ಕಲಾಂನವರು 20ನೇ ಸೆಪ್ಟೆಂಬರ್ 2005ರಲ್ಲಿ ಜಂಟಿ ಸದನ

ಉದ್ದೇಶಿಸಿ ಭಾಷಣ ಮಾಡಿದರು. ಆಗ ಮಾನ್ಯ ಯಡಿಯೂರಪ್ಪನವರು ಕೂಡ ಹಣಕಾಸಿನ ಮಂತ್ರಿಗಳಾಗಿದ್ದರು. ಈಗ ಅವರು ಮುಖ್ಯಮಂತ್ರಿಯಾಗಿದ್ದಾರೆ. 1996 ರಲ್ಲಿ ಕೃಷಿ ನೀತಿಯಾದಾಗ ಅವತ್ತೂ ಕೂಡ ಇವರು ಉಪ ಮುಖ್ಯಮಂತ್ರಿಯಾಗಿದ್ದುಕೊಂಡು ಹಣಕಾಸಿನ ಮಂತ್ರಿಯಾಗಿದ್ದರು. 1983 ರಲ್ಲಿ ಸತೀಶ್ ಚಂದ್ರನ್ ಎಂಬುವವರು Chief Secretary ಆಗಿದ್ದರು.

ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಆಗಿ ಕೃಷಿಗೆ ಸಂಬಂಧಪಟ್ಟಂತೆ ಗುಣಮಟ್ಟದ ಬೀಜಗಳ ಬಗ್ಗೆ ಸಂಬಂಧಪಟ್ಟಂತೆ ಬೇರೆ ಬೇರೆ ವಿಚಾರಗಳಿಗೆ ಸಂಬಂಧಪಟ್ಟಂತೆ ಒಂದು ಸಮಿತಿಯಾಗಿ ಕರ್ನಾಟಕದಲ್ಲಿ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. That is in the year 1983. ಆಮೇಲೆ Mr. Arora, Chief Secretary and Development Commissioner ಆಗಿದ್ದರು. ಅವರು ಒಂದು report ನ್ನು ಕೊಟ್ಟಿದ್ದಾರೆ. ಅದೂ ಕೃಷಿಗೆ ಸಂಬಂಧಪಟ್ಟಂತೆ ಇದೆ. ಇದು ರಾಜ್ಯಮಟ್ಟದಲ್ಲಿ ನಾನು ಬಂದಮೇಲೆ, ಈ ಸದನದಲ್ಲಿ ನನಗೆ ಗೊತ್ತಿರುವಂಥ ಮಾಹಿತಿ ಮತ್ತು ಅನುಭವ. ರಾಷ್ಟ್ರಮಟ್ಟದಲ್ಲಿ ಎರಡು ಕೃಷಿ ನೀತಿಗಳು ಆಗಿವೆ. 2002 ರಲ್ಲಿ ಮತ್ತು ಮೊನ್ನೆ 2007 ರಲ್ಲಿ ಒಂದು ಕೃಷಿ ನೀತಿ ಮಾಡಿದ್ದಾರೆ. 2006 ರಲ್ಲಿ ಕೇಂದ್ರದಲ್ಲಿರುವಂಥ UPA ಸರ್ಕಾರ ಡಾ: ಸ್ವಾಮಿನಾಥನ್‌ರವರ ಅಧ್ಯಕ್ಷತೆಯಲ್ಲಿ ನಮಗೆಲ್ಲರಿಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಇಡೀ ದೇಶಕ್ಕೆ ಗೊತ್ತಿದೆ. ಡಾ: ಸ್ವಾಮಿನಾಥನ್‌ರವರು ಕೃಷಿ ತಜ್ಞರು. ನಾವು ಅವರನ್ನು ಇದರ ಬಗ್ಗೆ ಬಹಳ ಸಮರ್ಥವಾದಂಥ ಜ್ಞಾನ ಇರುವಂಥವರು, Authority ಎಂದು ಹೇಳಿ ನಾವು ಅಂದುಕೊಂಡಿದ್ದೇವೆ. ಅವರ ಅಧ್ಯಕ್ಷತೆಯಲ್ಲಿ ಇವತ್ತಿನ ಕೃಷಿ ಸಚಿವರಾಗಿದ್ದಂಥ ಮಾನ್ಯ ಶರದ್‌ಪವಾರ್‌ವರು ಒಂದು ಕಮಿಟಿಯನ್ನು ಮಾಡಿ National Commission on Farmers ಎಂದು ಕರೆಯುತ್ತಾರೆ. ಅವರ ಅಧ್ಯಕ್ಷತೆಯಲ್ಲಿ ಇದನ್ನು ಮಾಡುತ್ತಾರೆ. ಅನೇಕ ಜನ ತಜ್ಞರು ಇದರಲ್ಲಿ ಸದಸ್ಯರಾಗಿ ಅನೇಕ ಕ್ಷೇತ್ರದಲ್ಲಿ ಕೆಲಸ ಮಾಡಿದವರು ಇರುತ್ತಾರೆ. Soil ದಲ್ಲಿ ಕೆಲಸ ಮಾಡಿರತಕ್ಕಂಥವರು, marketing ನಲ್ಲಿ ಕೆಲಸ ಮಾಡಿರತಕ್ಕಂಥವರು, Technology ಯಲ್ಲಿ ಕೆಲಸ ಮಾಡಿರತಕ್ಕಂಥವರು, Seeds ನಲ್ಲಿ ಕೆಲಸ ಮಾಡಿರತಕ್ಕಂಥವರು ಬೇರೆ ಬೇರೆ Industry ಯಲ್ಲಿ ಕೆಲಸ ಮಾಡಿರತಕ್ಕಂಥವರು ಇರುತ್ತಾರೆ. They submitted a report under the

Chairmanship of Dr.Swaminathan. That report was discussed at length in the National Development Council. National Development of Councilನಲ್ಲಿ it was discussed in which our Chief Minister is also a member. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಈ draft ಅದು ಚರ್ಚೆಯಾಗಿದೆ. ಮಾನ್ಯ ಯಡಿಯೂರಪ್ಪ ನವರು ಅಲ್ಲಿಗೆ ಹೋಗಿದ್ದರೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ Chief Minister, Development Council ಗೆ ಹೋಗಿರುತ್ತಾರೆ. ಆಮೇಲೆ 2007 ರಲ್ಲಿ ರಾಷ್ಟ್ರೀಯ ಕೃಷಿ ನೀತಿ ಎಂದು ಮಾಡಿದ್ದಾರೆ. ಬಹುಶಃ ಅವೆಲ್ಲಾ ಈ ಸರ್ಕಾರದಲ್ಲಿ ಇವೆ ಎಂದು ನಾನು ಅಂದು ಕೊಂಡಿದ್ದೇನೆ. ನಾನು ಇದನ್ನೆಲ್ಲಾ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನಾನು ಇವರಿಗೆ ಪ್ರಾಮಾಣಿಕ ಕಳಕಳಿ ಇದೆ ಎಂದು ಅಂದುಕೊಂಡಿದ್ದೇನೆ. ಏಕೆಂದರೆ ಆವತ್ತು ಅವರು ಮಾತನಾಡುವುದಕ್ಕೆ ಎದ್ದ ತಕ್ಷಣವೇ ಅವರು ಗದ್ಗದಿತರಾಗಿ ಬಿಟ್ಟಿದ್ದರು. ಎಲ್ಲಾ ಸದಸ್ಯರಿಗೆ ಇದರ ಬಗ್ಗೆ ಒಂದು background paper ಕೊಡಬಹುದಾಗಿತ್ತು. ಒಂದು action plan, ಒಂದು background paper ಕೊಡಬಹುದಾಗಿತ್ತು. ಏಕೆಂದರೆ it is not a new thing. ಇಲ್ಲಿ ಬೇಕಾದಷ್ಟು ಇದ್ದವು. ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು background paper ನ್ನು ಎಲ್ಲರಿಗೂ ಕೊಟ್ಟಿದ್ದರೆ.. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದರು, ಅರ್ಥಪೂರ್ಣ ವಾದಂಥ, ಅತ್ಯಂತ ಉಪಯುಕ್ತವಾದಂಥ, ಅತ್ಯಂತ ಯೋಗ್ಯವಾದಂಥ, ಬಹಳ ದೂರದೃಷ್ಟಿ ಇಟ್ಟುಕೊಂಡಿರತಕ್ಕಂಥ ಅನುಕೂಲವಾಗುವಂಥ ಒಂದು ಚರ್ಚೆಯಾಗುತ್ತಿತ್ತು ಎನ್ನುವಂಥದ್ದು ನನ್ನ ಅಭಿಪ್ರಾಯ. ಆದರೆ ಅದನ್ನು ಇವರು ಮಾಡಲಿಲ್ಲ. ಈಗ ನಾವು ಮೂರು ದಿವಸದಿಂದ ಚರ್ಚೆ ಮಾಡಿದ್ದು ಏನೆಂದರೆ, ಡಿಮಾಂಡ್ಸ್‌ಗಳ ಮೇಲೆ ಹೇಗೆ ಚರ್ಚೆ ಮಾಡುತ್ತೇವೆ, ಆ ರೀತಿ ಚರ್ಚೆ ಮಾಡಿರುತ್ತೇವೆ. ಅಗ್ರಿಕಲ್ಚರ್ ಮೇಲೆ ಹೇಗೆ ಡಿಮಾಂಡ್ಸ್ ಮೇಲೆ ಚರ್ಚೆ ಮಾಡುತ್ತಿದ್ದೆವು, rural development ಮೇಲೆ ಹೇಗೆ ಚರ್ಚೆ ಮಾಡುತ್ತಿದ್ದೆವು, ಆ ತರಹ ಆಗಿದೆ. ಒಂದು concrete ಆಗಿ, This is our concept, this is our perception. In the background of all these reports and experience, ಕೃಷಿ ಅಧಾರಿತವಾದ ಈ ಕರ್ನಾಟಕ ರಾಜ್ಯವನ್ನು ನಾವು ಏನು ಮಾಡಬೇಕು? ಇವತ್ತು ಆಹಾರ ಉತ್ಪಾದನೆ 10 ವರ್ಷಗಳಿಂದ stagnant

ಆಗಿದೆ. It is not a new thing. Everybody knows. ಮಾನ್ಯ ಯಡಿಯೂರಪ್ಪನವರಿಗೂ ಗೊತ್ತು, food production is stagnant not only in Karnataka in the entire Country. ನಾವು ಖುಷಿ ಪಟ್ಟುಕೊಳ್ಳಬಹುದು. ಏಕೆಂದರೆ, ಸ್ವಾತಂತ್ರ್ಯ ಬಂದಾಗ ನಮ್ಮ ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ನಮ್ಮ ದೇಶದ ಆಹಾರದ ಉತ್ಪಾದನೆ 1950–51 ರಲ್ಲಿ 50 ಮಿಲಿಯನ್ ಟನ್ ಇತ್ತು. 2001 ಅಷ್ಟೊತ್ತಿಗೆ more than 200 ಮಿಲಿಯನ್ ಟನ್ ರೀಚ್ ಆಗಿದ್ದೇವೆಂದು ಬೆನ್ನು ತಟ್ಟಿಕೊಳ್ಳಬಹುದು. 1951 ರಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆ ಪ್ರಾರಂಭವಾಯಿತು. ಆದರೆ ಸ್ವಾತಂತ್ರ್ಯ ಬಂದಾಗ ನಮಗೆ ಆಗ ನಮ್ಮ ಜನಸಂಖ್ಯೆ ಇದ್ದದ್ದು 35 ರಿಂದ 36 ಕೋಟಿ ಮಾತ್ರ, ಇವತ್ತು ಒಂದು ಬಿಲಿಯನ್‌ಗಿಂತ ಹೆಚ್ಚು ಜನಸಂಖ್ಯೆ ಇದೆ. 2020 ಕ್ಕೆ ನಮ್ಮ ಜನಸಂಖ್ಯೆ 130 ಕೋಟಿ ಆಗುತ್ತದೆಂದು ಅಂದಾಜು ಇದೆ. 10ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ದೇಶದಲ್ಲಿ ಆಹಾರದ ಬೆಳವಣಿಗೆ percentage of growth 2.8%. But whereas in Karnataka 10ನೇ ಪಂಚವಾರ್ಷಿಕ ಯೋಜನೆಯಲ್ಲಿ 1.1%. ಕರ್ನಾಟಕದಲ್ಲಿ, ಭಾರತದ ಮಟ್ಟದಲ್ಲಿ ಆಹಾರದ ಉತ್ಪಾದನೆಯಲ್ಲಿ ಏನು ಆಗಿತ್ತು, ಅದರಲ್ಲಿ ನಾವು ಅರ್ಧಕ್ಕಿಂತ ಕಡಿಮೆ ಇದ್ದೇವೆ. 1.1%. ನಾವು ನಮ್ಮ ಎಲ್ಲಾ documentನಲ್ಲಿ ಹೇಳಿಕೊಂಡಿದ್ದೇವೆ. ಆಹಾರ ಉತ್ಪಾದನೆಯಲ್ಲಿ ಕನಿಷ್ಠ 4% to 4.5% growth ಇರಬೇಕು. ಅದು ಆದಾಗ ಮಾತ್ರ ಆಹಾರದಲ್ಲಿ ಭದ್ರತೆ ಆಗಿದ್ದೇವೆಂದು ಹೇಳಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

(5-30 PM)

1966–67ರ ಎರಡು ವರ್ಷಗಳಲ್ಲಿ ನಮ್ಮದೇಶ ಆಹಾರ ಉತ್ಪಾದನೆಯಲ್ಲಿ ಕಷ್ಟದಲ್ಲಿದ್ದೆವು. ಬಹಳ problem ನಲ್ಲಿದ್ದೆವು. ನಾವು ಏನು stock ಮಾಡಿಕೊಳ್ಳುತ್ತೇವಲ್ಲ, ಅದು ಒಂದು ವಾರಕ್ಕೆ ಆಗುವಷ್ಟು ಆಹಾರ ಇರಲಿಲ್ಲ. ಇಂಡಿಯಾದಲ್ಲಿ that was the condition. ಅಮೇರಿಕಾದಿಂದ ಗೋಧಿಯನ್ನು ತೆಗೆದುಕೊಂಡು ಬಂದು ಅವರ ಹತ್ತಿರ ಹೋಗಿ ಭಿಕ್ಷೆಯನ್ನು ಬೇಡಬೇಕಾದಂತಹ ಪರಿಸ್ಥಿತಿಯಲ್ಲಿ ಒಂದು ಕಾಲದಲ್ಲಿ ನಾವು ಇದ್ದೆವು. ಅವತ್ತಿನ ದಿವಸ ಶ್ರೀ ಸುಬ್ರಹ್ಮಣ್ಯಂರವರು ಕೃಷಿ ಮಂತ್ರಿಗಳಾಗಿದ್ದವರು. ಅವರು

ಈ ಕೃಷಿಯಲ್ಲಿ ಅವರ ಕಾಲದಲ್ಲಿ ಒಂದು break through ಆಗುತ್ತದೆ. ಆಗತಾನೇ week ನಲ್ಲಿ ಹೊಸ ತಳಿಗಳು ಅಕ್ಕಿಯಲ್ಲಿ ಬರುತ್ತವೆ, ಆವತ್ತು ನಮ್ಮ ದೇಶದ ಉತ್ಪಾದನೆ ಹೆಚ್ಚಾಗುತ್ತದೆ. ಗೋಧಿಯಲ್ಲಿ ಬಹಳ ದೊಡ್ಡ Productivity ಹೆಚ್ಚಾಗಿಬಿಡುತ್ತದೆ. ಅಕ್ಕಿಯ ಉತ್ಪಾದನೆಯು ಹೆಚ್ಚಾಗುತ್ತದೆ. ಆಗಲೇ 1968ನೇ ಇಸವಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಆವತ್ತು ಪ್ರಧಾನಮಂತ್ರಿಯಾಗಿ ಅದನ್ನು ಘೋಷಣೆ ಮಾಡಿದರು. ಇದನ್ನು ಮಾಡಿದ ಮೇಲೆ ನಾವು ಅದನ್ನೇ "Green Revolution" ಎಂದು ನಾವು ಕರೆಯುವುದು. Green Revolution ಆಯಿತು. ನಾವು ಆಹಾರದಲ್ಲಿ ಸ್ವಾವಲಂಬನೆ ದಾರಿಗೆ ಬಂದೆವು. ಅಕ್ಕಿ, ಗೋಧಿ ಪಲ್ಸಸ್, ಎಣ್ಣೆಕಾಳುಗಳು ಇವೆಲ್ಲಾ ಬಂದವು. ಅಲ್ಲಿಂದ ನಾವು ಸುಮಾರು 2000ರದವರೆಗೂ ಕೂಡ ನಮಗೆ ಅಷ್ಟೊಂದು Food Production ನಾವು ಸ್ವಾವಲಂಬಿಗಳಾಗಿದ್ದೇವೆ. ಇವತ್ತು ನಮಗೆ ಒಂದು ವರ್ಷಕ್ಕೆ ಆಗುವಷ್ಟು ಆಹಾರವು stock ಇದೆ, ಅದು ಬೇರೆ ವಿಚಾರ. ಆದರೆ Population growth ಪ್ರತಿ ವರ್ಷ 2% ನಿಂದ 2.5% ಬೆಳವಣಿಗೆಯಾಗುತ್ತಿದೆ. ಪ್ರತಿ ವರ್ಷ Population growth is 2% to 205% to All India level ನಲ್ಲಿ. ನಮ್ಮ ಕರ್ನಾಟಕ ರಾಜ್ಯದಲ್ಲಿ 1.9 arround 2% ಆಯಿತು. 1.9 may be 1.2% ಬೆಳವಣಿಗೆಯಾಗುತ್ತದೆ. ನಾವು ಇದಕ್ಕೆ next ಜನಗಣತಿ 6 ಕೋಟಿ ಮೇಲಾಗಿದೆ. ನಮ್ಮ ಕಳೆದ 2001ರ ಜನಗಣತಿಯ ಪ್ರಕಾರ 5 ಕೋಟಿ 28 ಲಕ್ಷ ಇತ್ತು. 2% growth ಅಂದರೆ ಅದು he may cross. ಜನಸಂಖ್ಯೆಯು 6 ಕೋಟಿಗಿಂತ ಹೆಚ್ಚಾಯಿತು. 2011 ಕ್ಕೆ 6 ಕೋಟಿ ಜನಸಂಖ್ಯೆಯು ಆಗುತ್ತಿದೆ. ಅದನ್ನು ಕೂಡ ನಾವು ಆಹಾರ ಉತ್ಪಾದನೆಯಲ್ಲಿ ದೂರದೃಷ್ಟಿಯನ್ನು ಇಟ್ಟುಕೊಳ್ಳಬೇಕು. ಅಲ್ಲಿಂದ ಇನ್ನು 10 ಮತ್ತು 20 ವರ್ಷಕ್ಕೆ ಜನಸಂಖ್ಯೆಯು ಆಗುತ್ತದೆ. ಅದಕ್ಕೆ ನಮ್ಮ Food Production ಏನಾಗಬೇಕು. ಅದಕ್ಕೋಸ್ಕರವೇ ಭಾರತದಲ್ಲಿ 2020ನೇ ಇಸವಿಗೆ ಕನಿಷ್ಟ ನಾವು 340 ಮಿಲಿಯನ್ ಟನ್ ಆಹಾರ ಉತ್ಪಾದನೆಯನ್ನು ಮಾಡಬೇಕು. ನಾವು ಕೂಡ ಈಗ ಇರುವುದನ್ನು ಕನಿಷ್ಟ 200 ಲಕ್ಷ ಟನ್ ಕರ್ನಾಟಕದಲ್ಲಿ 2020 ರೊಳಗಡೆ ಆಹಾರದ ಉತ್ಪಾದನೆಯನ್ನು ನಾವು ಡಬಲ್ ಮಾಡಬೇಕು. Youwere double hour production. ಮತ್ತೆ, ನಮ್ಮ

ಕರ್ನಾಟಕದ ಎಕಾನಮಿ not the food production economy should grow at the rate of 3% every year till we reach more than 10% of GDP. ನಮ್ಮ GDP ಇದೆಯಲ್ಲಾ, ನಾವು ರಾಷ್ಟ್ರಮಟ್ಟದ average ಇಲ್ಲ, ನಮ್ಮ GDP ದು ಕರ್ನಾಟಕದಲ್ಲಿ ಇಲ್ಲ. ಭಾರತದಲ್ಲಿ 10ನೇ ಪಂಚವಾರ್ಷಿಕ ಯೋಜನೆಯಲ್ಲಿ GDP around 8% ಇದ್ದರೆ gross domestic product ನಮ್ಮದು We are around 7%. Little less about. 8%. Is not asmall thing? 1% ಅಂದರೆ GDP ಯಲ್ಲಿ it is very big defference ಅಷ್ಟು ನಮ್ಮದು ಇದೆ. ಈ ಹಿನ್ನೆಲೆಯನ್ನು ಇಟ್ಟುಕೊಂಡು ನಾವು ಚರ್ಚೆಯನ್ನು ಮಾಡಬೇಕಾಗಿದೆ. Food Production, ನಮ್ಮದು ಏನಾಗಿದೆ ಎಂದರೆ ಕಳೆದ 10 ವರ್ಷಗಳಿಂದ employment generation ಹಳ್ಳಿಗಾಡಿನಲ್ಲಿ ಆಗುತ್ತಿಲ್ಲ. There is absolutely zero ಅಂಕಿಅಂಶಗಳ ಪ್ರಕಾರ. 2% It is the growth since 10 years. Employment generation growth. How to meet the unemployment problem? ಇಂತಹದು ನಮ್ಮ ಮುಂದಿರುವಂತಹ ಪ್ರಶ್ನೆಯಾಗಿದೆ. ಹಳ್ಳಿಗಾಡಿನಿಂದ ಪಟ್ಟಣ ಪ್ರದೇಶಕ್ಕೆ ಏತಕ್ಕಾಗಿ ಹೋಗುತ್ತಿದ್ದಾರೆಂದರೆ, ಯುವಕರು ಏತಕ್ಕಾಗಿ ಹಳ್ಳಿಗಾಡಿನಲ್ಲಿ ಉಳಿದುಕೊಳ್ಳುತ್ತಿಲ್ಲವೆಂದರೆ Job opportunities ಗಳು ಹಳ್ಳಿಗಾಡಿನಲ್ಲಿ ಕಡಿಮೆಯಾಗಿದೆ. ಗುಡಿಕೈಗಾರಿಕೆಗಳೆಲ್ಲವೂ ಮುಚ್ಚಿಹೋದವು. ಈಗ ಯಾರು ಹಳ್ಳಿಗಳಲ್ಲಿ ಕುಂಬಾರಿಕೆಯನ್ನು ಮಾಡುತ್ತಿಲ್ಲ. ಈಗ ನಾನು ನಾಡಹೆಂಚುಗಳು ಇರುವ ಮನೆಯನ್ನು ನೋಡಿಯೇ ಇಲ್ಲ. ಎಲ್ಲವೂ ಹೊರಡು ಹೋದವು. ನಾನು ನಮ್ಮ ಊರಿಗೆ ಹೋದಾಗ ಯಾರು ಕೂಡ ಹೆಂಚನ್ನು ತಯಾರು ಮಾಡುವವರು ಇಲ್ಲ. ಮಡಿಕೆಗಳನ್ನು ಕೂಡ ತಯಾರು ಮಾಡುವವರು ಇಲ್ಲ. ಎಲ್ಲವೂ ಮುಚ್ಚಿಹೋದವು. ನಾವುಗಳು ಸಣ್ಣ ಹುಡುಗರು ಆಗಿದ್ದಾಗ ನಾವುಗಳು ಮಡಿಕೆಯಲ್ಲಿ ಅಡಿಗೆಯನ್ನು ಮಾಡುತ್ತಿದ್ದೆವು. ಮಡಿಕೆಗಳಲ್ಲಿಯೇ ನೀರನ್ನು ಕುಡಿಯುತ್ತಿದ್ದೆವು. ಎಲ್ಲವನ್ನು ಅದರಲ್ಲಿಯೇ ಮಾಡುತ್ತಿದ್ದೆವು. ನೀರು ಬಹಳ ಚೆನ್ನಾಗಿಯೂ ಸಹ ಇರುತ್ತಿತ್ತು. ನೀವು refrigerator ನಲ್ಲಿ ಇಡುತ್ತಿರಲ್ಲಾ, ಆ ಮಣ್ಣಿನಲ್ಲಿ ಇಟ್ಟ ಹಾಗೆ ಅದರಲ್ಲಿ ಇಟ್ಟಹಾಗೆ ಇರುತ್ತಿತ್ತು. ಒಂದು ಹಳ್ಳಿಗೆ ಹೋದರೆ ಕುಂಬಾರರೇ ಸಿಕ್ಕುವುದಿಲ್ಲ, ಮಾನ್ಯ ಅಧ್ಯಕ್ಷರೆ, ನೀವು ನೋಡಿದ್ದೀರಾ ನಿಮ್ಮ ಹಳ್ಳಿಯಲ್ಲಿ? ನಿಮ್ಮ ಧಾರವಾಡದಲ್ಲಿ ಇತ್ತು, ಈಗ

ಅದನ್ನು ಬದಲಾಯಿಸಿಬಿಟ್ಟಿರಬೇಕು. ಇಲ್ಲ ಎಲ್ಲವೂ ಹೋಗಿಬಿಟ್ಟಿದೆ. ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ನಾವು ಎಲ್ಲಿ ಎಡವಿದ್ದೆವು, ಯಾವಾಗ ಎಡವಿದ್ದೇವೆ ಎನ್ನುವುದೆಲ್ಲವೂ ಮುಖ್ಯವಾಯಿತು. ನಾವು ಹಿಂದಿನದೆಲ್ಲವನ್ನೂ ಮರೆತುಬಿಡೋಣ. ಈಗ ಮಾನ್ಯ ಯಡಿಯೂರಪ್ಪನವರು ಈಗ ಆಸಕ್ತಿಯನ್ನು ತೆಗೆದುಕೊಂಡಿದ್ದಾರೆ. ಇವರಿಗೆ ಯಾವಾಗ appreciation ಕೊಡುತ್ತಿದ್ದರೆಂದರೆ, ಇಂತಹ ಸಭೆಯನ್ನು ಇವರು ಬಜೆಟ್‌ನ್ನು ಮುಂಚಿತವಾಗಿಯಾದರೂ ಕರೆಯಬೇಕಾಗಿತ್ತು. ನಾವು ಈ ಬಜೆಟ್‌ನಲ್ಲಿ ಏನೇನು ಮಾಡಬೇಕು. ಕೃಷಿಯ ಬಗ್ಗೆ ಏನೇನು ಮಾಡಬೇಕು. Rural Development ಬಗ್ಗೆ ಏನೇನು ಮಾಡಬೇಕು, ನಮ್ಮಲ್ಲಿರತಕ್ಕಂತಹ ಸಂಪನ್ಮೂಲಗಳನ್ನು ಇತಿಮಿತಿಯೊಳಗಡೆ ನಾವು ಏನೇನು ಕಾರ್ಯಕ್ರಮಗಳನ್ನು ಮಾಡಿಕೊಳ್ಳಬಹುದು. ಹಳ್ಳಿಗಾಡಿನಲ್ಲಿ ರತಕ್ಕಂತಹ ಅವನ ಜೀವನ ಮಟ್ಟದ ಸುಧಾರಣೆಯನ್ನು ಹೇಗೆ ಮಾಡಬಹುದು? ಮಾಜಿ ರಾಷ್ಟ್ರಪತಿಗಳಾದಂತಹ ಶ್ರೀ ಅಬ್ದುಲ್ ಕಲಾಂರವರು ಹೇಳಿದ್ದಾರೆ. ಅವರು ಭಾಷಣವನ್ನು 2005ರಲ್ಲಿ ಮಾಡುವಾಗ ಒಂದು ಮಾತನ್ನು ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ, ಇವತ್ತು 2004–05ರ ಪ್ರಕಾರ The average percapita income is Rs.26,000. Average percapita income is 26,000. 2009 ಕ್ಕೆ ನಾವು You have enhanced it to 75,000 ರೂಪಾಯಿಗಳಿಗೆ ನಾವು ಹೋದಾಗ ಮಾತ್ರ ಹಳ್ಳಿಗಾಡಿನ ಜನರ ಜೀವನಮಟ್ಟ ಸುಧಾರಣೆಯಾಗುತ್ತದೆ.

ಅವತ್ತಿನಿಂದ ನೀವು ಸರ್ಕಾರ ಏಕೆ ಪ್ರಯತ್ನ ಮಾಡದೇ ಹೋದಿರಿ. ಅವತ್ತು ಭಾಷಣ ಕೇಳುವಾಗ ನೀವು ಇದ್ದಿರಿ, ನಾವೆಲ್ಲಾ ಕೇಳಿದೆವು ಅಲ್ಲವೇ, ನೀವು Finance Minister ಆಗಿದ್ದರಲ್ಲವೇ, Deputy Chief Minister ಆಗಿದ್ದಿರಲ್ಲಾ. ಪ್ರತಿಯೊಬ್ಬನ ವಾರ್ಷಿಕ ತಲಾ ಆದಾಯ ರೂ. 26,000 ರಿಂದ 75,000 ಮಾಡಲಿಕ್ಕೆ ನಮಗೆ ಇರತಕ್ಕ ಇತಿಮಿತಿಯೊಳಗೆ ಎಷ್ಟು ಪ್ರಯತ್ನ ಮಾಡಿದ್ದೇವೆಂದು ನಮ್ಮ ಮುಂದೆ ಇವತ್ತು ಇರಬೇಕಾಗಿತ್ತು. ಒಂದು Status paper ಇರಬೇಕಾಗಿತ್ತು, ಯಾವುದೂ ಇಲ್ಲ. ಪಾಪ! ಅವರು ಬಂದು ಇಲ್ಲಿ ಭಾಷಣವನ್ನು ಮಾಡಿದರು. ಏನು ಮಾಡಬಹುದು ಎಂದು ಅವರ ಹನ್ನೊಂದು ವಿಷನ್ ಅನ್ನು ಇಲ್ಲಿ ಹೇಳಿಬಿಟ್ಟು ಹೋದರು. “Vision for Karnataka’s Prosperity”. ಈ ಕರ್ನಾಟಕದ Prosperity ಯ

ಹನ್ನೊಂದು ವಿಷನ್‌ಗಳಲ್ಲಿ now, I want to know from Yediyurappaji as to how many of them have been put into action? ಅದರಲ್ಲಿ ಯಾವ ಕಾರ್ಯಕ್ರಮಗಳನ್ನು ರೂಪಿಸಿದ್ದೀರಿ? It is because ನೀವು ಬಹಳ ಕಳಕಳಿಯನ್ನು ವ್ಯಕ್ತಮಾಡಿದ್ದೀರಿ, ಹಳ್ಳಿಗಾಡಿನವರು, ಬಡವರು, ಪಾಪ ನಿಮ್ಮ ಊರನ್ನು ಜ್ಞಾಪಕ ಮಾಡಿಕೊಂಡು ಬಿಡಿ. ಕೆ.ಆರ್.ಪೇಟೆ ತಾಲ್ಲೂಕು ಬೂಕನಕೆರೆಯಲ್ಲಿ ನಾನು ಅಲ್ಲಿ ಹುಟ್ಟಿದ್ದೆ. ನಾವು ಹಳ್ಳಿಗಳಲ್ಲೇ ಹುಟ್ಟಿದ್ದು, ಬೆಳೆದಿದ್ದು. ಅವರು ಹೇಳಿರುವ ಪ್ರಕಾರ ನಮ್ಮೂರಲ್ಲೂ ಕೂಡ ಎಲ್ಲರಿಗೂ ಶೌಚಾಲಯವನ್ನು ಕಟ್ಟಿಸಿಕೊಡುವುದಕ್ಕೆ ಆಗಿಲ್ಲ. Chief Minister ಆಗಿದ್ದರೂ ಸಹ ಅವರೂ ಕಟ್ಟಿಸುವುದಕ್ಕೆ ಆಗಿಲ್ಲ. ಬರೀ 14% ಮಾತ್ರ ಶೌಚಾಲಯಗಳನ್ನು ಮಾಡಿಕೊಟ್ಟಿದ್ದೇವೆ. ನಮ್ಮೂರಿಗೆ ಸಿಕ್ಕಿರುವುದು ಅಷ್ಟೇ. ಇನ್ನು ಒಂದು ನೂರು ಜನಕ್ಕೆ ಮನೆ ಇಲ್ಲ. ಸೈಟ್ ಇಲ್ಲ. ಉದಾಹರಣೆಗೆ ಕೊಟ್ಟಿರುವುದು. ಇನ್ನು ನಾಲ್ಕು ಕೊಠಡಿಗಳು ಇಲ್ಲ, ಕೇವಲ ಒಂಭತ್ತೇ ಕೊಠಡಿಗಳು ಇರುವುದು. ಹುಟ್ಟೂರನ್ನು ಜ್ಞಾಪಕ ಮಾಡಿಕೊಂಡಿದ್ದೀರಿ ಬಹಳ ಸಂತೋಷ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಾವು ಕೂಡ ಹಳ್ಳಿಗಳಿಂದ ಬಂದಿದ್ದೇವೆ. ವ್ಯವಸಾಯವನ್ನು ಮಾಡಿಕೊಂಡು ಬಂದಿದ್ದೇವೆ. ಎಲ್ಲಾ ಮಾಡಿದ್ದೇವೆ. ನಿಮಗೆ ಜ್ಞಾಪಕವಿರಬೇಕು ನಾವೆಲ್ಲಾ ಹಳ್ಳಿಯಲ್ಲಿದ್ದಾಗ ವಾರಕ್ಕೆ ಒಂದು ದಿವಸ ಸ್ನಾನ ಮಾಡುತ್ತಿದ್ದೆವು. ಆಗ ನೀರೆಲ್ಲಿ ಸಿಗುತ್ತಿತ್ತು ನಮಗೆ. ಬಾವಿಯಿಂದ ನೀರು ಹೊತ್ತುಕೊಂಡು ಬರಬೇಕು, ಕಾಯಿಸಬೇಕು, ನಾವೇ ಕಷ್ಟ ಪಡಬೇಕಾಗಿತ್ತು. ವಾರಕ್ಕೊಂದು ದಿವಸ ನೀರು. ಬಸವರಾಜ್‌ರವರೇ, ನಿಮಗೆ ಆ ಪರಿಸ್ಥಿತಿ ಬಂದಿಲ್ಲ. ಏಕೆಂದರೆ ನಮಗೆ ಆ ಪರಿಸ್ಥಿತಿ ಇತ್ತು. ನಾನು ಶನಿವಾರ ಸ್ಕೂಲ್‌ಗೆ ಹೋಗಿ ಬಂದು, ಎಮ್ಮೆ ಮೇಯಿಸಿಕೊಂಡು ಬಂದು, ನೀರೆಲ್ಲಾ ತುಂಬಿಕೊಂಡು ನಾವೇ ಕಡಾಯಿಯಲ್ಲಿ ತುಂಬಿಕೊಂಡು, ಕಾಯಿಸಿಕೊಂಡು ವಾರಕ್ಕೆ ಒಂದು ದಿವಸ ಸ್ನಾನ ಮಾಡುತ್ತಿದ್ದೆವು. ಆ ಪರಿಸ್ಥಿತಿ ಇತ್ತು. ಅಂದರೆ ಕಟ್ಟಿಗೆಯನ್ನೆಲ್ಲಾ ನಾವೇ ತೆಗೆದುಕೊಂಡು ಬರಬೇಕಾಗಿತ್ತು, ಇಲ್ಲದಿದ್ದರೆ ನಮ್ಮ ತಾಯಿ ಬಯ್ಯುತ್ತಿದ್ದರು, ಕಟ್ಟಿಗೆ ತರದಿದ್ದರೆ ಇನ್ನೊಂದು ವಾರ ಸ್ನಾನ ಮಾಡಿಕೊ ಹೋಗು ಎಂದು ಹೇಳುತ್ತಿದ್ದರು. ತಮಾಷೆಯಲ್ಲ. I am not joking, ಆಗಿನ ಗಂಭೀರ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೇನೆ. ಈಗಲೂ ನಾನು ಹೇಳುತ್ತೇನೆ, ಹಳ್ಳಿಗಾಡಿನಲ್ಲಿ ನಮ್ಮಲ್ಲಿ

ಕೂಲಿ ಮಾಡುವ ಜನ ಇವತ್ತಿಗೂ ಒಂದು ವಾರಕ್ಕೊಮ್ಮೆ ಸ್ನಾನ ಮಾಡಿದರೆ ಹೆಚ್ಚು ಸುರೇಶ್‌ಕುಮಾರ್‌ರವರೇ. ಹಳ್ಳಿಗಾಡಿನಲ್ಲಿ ನೀರು ಸಿಗುವ ಕಡೆ ಕೆಲವರು ಮಾಡುತ್ತಾರೆ. ಬಹಳ ಜನ ಅಂದು ಕೆಲಸಕ್ಕೆ ಹೋಗದೆ ಒಂದು ದಿನ ಸ್ನಾನ ಮಾಡುತ್ತಾರೆ. ಹಿಂದೆ ಸೋಮವಾರ ಮಾತ್ರ ಏಕೆ ಸ್ನಾನ ಮಾಡುತ್ತಿದ್ದರೆಂದರೆ ಕೆಲವರು ಎತ್ತುಗಳಿಗೆ ವಿಶ್ರಾಂತಿ ಕೊಡಬೇಕೆಂದು ಹೇಳಿ ಉಳುಮೆ ಮಾಡಬಾರದೆಂದು ಹೇಳಿ ಸೋಮವಾರ ಏರ್ ಕಟ್ಟುತ್ತಿರಲಿಲ್ಲ. ನಾವು ಅಂದು ಎತ್ತುಗಳನ್ನೆಲ್ಲಾ ತೊಳೆದು ಅವುಗಳಿಗೂ ಕೂಡ ರೆಸ್ಟ್ ಸಿಗಲಿ ಎಂದು ಹೇಳಿ ಆ ಒಂದು ದಿನ ಬಿಟ್ಟು, ಹಳ್ಳಿಯವರು ಊರಿನ ಕೆಲಸ ಮಾಡುತ್ತಿದ್ದರು, ಅವರವರ ಮನೆಯ ಮುಂದೆ ಹಳ್ಳ ಬಿದ್ದಿದ್ದರೆ ಅಲ್ಲಿ ಮಣ್ಣು ತುಂಬುವುದು. ಬಚ್ಚಲು ನೀರು ಬೀದಿಗೆ ಬರುತ್ತಿದ್ದರೆ ಅದನ್ನು ಮುಚ್ಚಿಕೊಂಡು ಸರಿ ಮಾಡುವುದು, ನಾನು ನೋಡುತ್ತಿದ್ದೆ, ಮೈಸೂರಿನಲ್ಲಿ ನಾನು ಓದುವಾಗ ನಮ್ಮದು ಒಂದು ತೆಂಗಿನ ತೋಟವಿದೆ, ನಮ್ಮ ತೋಟಗಳಲ್ಲಿ ತೆಂಗಿನಕಾಯಿ ಅಷ್ಟು ಸರಿಯಾಗಿ ಬರುವುದಿಲ್ಲ, ಈ ಮನೆ ಮುಂದೆ ಮೈಸೂರು, ಬೆಂಗಳೂರು ಮನೆಗಳಲ್ಲಿ ಗಿಡ ಹಾಕಿರುತ್ತಾರೆ, 200-300 ಕಾಯಿ ಬಿಡುತ್ತವೆ. ಮನೆ ಮುಂದೆ ಅಷ್ಟು ಕಾಯಿಗಳು ಬಿಡುತ್ತವೆ. ತೋಟದಲ್ಲಿ ಅಷ್ಟು ಬಿಡುವುದಿಲ್ಲ, ಏಕೆಂದರೆ ಅಲ್ಲೆಲ್ಲಾ ಆ ನೀರು ಸಾವಯವ ನೀರು, ಎಂಜಲು, ಕೊಳಕು ನೀರು, ಎಲ್ಲಾ ಸೇರಿ ಅಲ್ಲಿಗೆ ಸೇರುತ್ತದೆ. ಹಾಗಾಗಿ ಅಷ್ಟು ಫಲ ಬಿಡುತ್ತದೆ, ಅದನ್ನೇ ಸಾವಯವ ಕೃಷಿ ಎಂದು ಕರೆಯುವುದು. ನಾವೆಲ್ಲಾ ಹಳ್ಳಿಯಲ್ಲಿದ್ದಾಗ ಹಾಗೆ ಇದ್ದುದು. ಆಹಾರದ ಅಭಾವ ಆದಾಗ ರಸಗೊಬ್ಬರಗಳು ಹಾಗೂ ಹೊಸ technology ಮಾಡಲಿಕ್ಕೆ ಪ್ರಾರಂಭ ಮಾಡಿ ಜನರು ನಮ್ಮ traditional ಪದ್ಧತಿಯಿಂದ ಬದಲಾವಣೆ ಆಗಿಬಿಟ್ಟರು. ನಮ್ಮ ರೈತರು ಸಹ ನಮಗಿಂತ ಬುದ್ಧಿವಂತರು. ಅವರು ಯಾವುದನ್ನು ಬೇಕಾದರೂ ತಯಾರಿ ಮಾಡಬಿಡುತ್ತಾರೆ. ಆದರೆ ನಾವು fail ಆಗಿಬಿಟ್ಟೆವು.

ರೈತರಿಗೆ ನಾವೇನು ತಯಾರು ಮಾಡಿಕೊಡಬೇಕಾಗಿತ್ತು, ಅದನ್ನು ಮಾಡದೆ ಹಾಗೆ ಬಿಟ್ಟುಬಿಟ್ಟೆವು. ಹಾಗಾಗಿ ಪರಿಸ್ಥಿತಿ ಸರಿ ಇಲ್ಲ.

ಅಧ್ಯಕ್ಷರೇ, ನಾನು ಈಗ ಎಷ್ಟೊತ್ತಿನವರೆಗೆ ಮಾತನಾಡಲಿ, ಮುಖ್ಯಮಂತ್ರಿಯವರು ಇರುತ್ತಾರೆಯೇ, ಇರುವುದಿಲ್ಲವೆ?

ಅಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರಿಗೆ time restriction ಇಲ್ಲ, ಮಾತನಾಡಿ,

ಶ್ರೀ ಸಿದ್ದರಾಮಯ್ಯ : ನನಗೆ ಇನ್ನೂ ಮಾತನಾಡುವುದಿದೆ. ಎಷ್ಟೊತ್ತಾದರೂ ಮಾತನಾಡಲೇ? ಜನ ಇರುತ್ತಾರೋ ಇಲ್ಲವೋ ಗೊತ್ತಿಲ್ಲ, ಮಾತನಾಡಲೇ? ಮುಖ್ಯಮಂತ್ರಿಗಳವರು 8.00 ಗಂಟೆಯವರೆಗೂ ಇರುತ್ತೀರಾ? ಪರವಾಗಿಲ್ಲವೇ?

ಅಧ್ಯಕ್ಷರು : ನೀವು ಮಾತನಾಡಿ, ಏಕೆಂದರೆ ಸೋಮವಾರದಂದು ಉತ್ತರ ನೀಡಬೇಕೆಂದು ಅವಧಿ ಫಿಕ್ಸ್ ಮಾಡಿದ್ದೇವೆ. ನೀವು ಇವತ್ತು ಮಾತನಾಡಿ ಮುಗಿಸಿ.

ಶ್ರೀ ಸಿದ್ಧರಾಮಯ್ಯ : ನಾನಿನ್ನು introduction ನಲ್ಲೇ ಇದ್ದೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ಅವರು ಏನೇನು ಪ್ರಸ್ತಾಪ ಮಾಡಿದ್ದಾರೆ, ಆ ಪ್ರಸ್ತಾಪಗಳೆಲ್ಲಾ ಪ್ರಾಮಾಣಿಕವಾಗಿ ಕೃತಿಗೆ ಇಳಿಯಬೇಕು. ಮಾತಿನಲ್ಲಿ ಕಳಕಳಿ ಇದ್ದರೆ ಸಾಲದು, ನಮ್ಮ ಕೃತಿಯಲ್ಲಿ ಕೂಡ ಪ್ರಾಮಾಣಿಕತೆ, ಕಳಕಳಿ ಇರಬೇಕು. ಅದು ನಿಮ್ಮ ಸರ್ಕಾರದಲ್ಲಿ ಕಾಣಿಸುತ್ತಿಲ್ಲವೆನ್ನುವುದು ನನಗೆ ಗೋಚರವಾಗಿದೆ, ನನ್ನ ಗಮನಕ್ಕೆ ಬಂದಿದೆ. ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂಥ ಅನೇಕ ಕಾರ್ಯಕ್ರಮಗಳನ್ನು ನೀವು ಪ್ರಾಮಾಣಿಕವಾಗಿ ಜಾರಿಗೊಳಿಸಲಿಕ್ಕೆ ಆಗಿಲ್ಲ. ಇಷ್ಟೊತ್ತಿನವರೆಗೆ ನಾವು ಚರ್ಚೆ ಮಾಡುತ್ತಿದ್ದೆವು. ಇದು ಬಹಳ ಮಹತ್ತರವಾದ ಒಂದು ಕಾರ್ಯಕ್ರಮ. ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆ, ಉದ್ಯೋಗ ಖಾತ್ರಿ ಯೋಜನೆ ಕಾಯ್ದೆ ಮಾಡಿದ್ದಾರೆ. ಇದು ಆ ಪಾರ್ಲಿಮೆಂಟ್‌ನಲ್ಲಿ Act ಆಗಿದೆ. ಏಕೆ ಅದನ್ನು ನೀವು ಪ್ರಾಮಾಣಿಕವಾಗಿ ಜಾರಿ ಮಾಡಲಿಲ್ಲ? If you are really committed to Rural Development, ಏಕೆ ಮಾಡಲಿಲ್ಲ? what one could draw the inference? ನಮಗೆ ಗ್ರಾಮೀಣ ಬದುಕಿನ ಕಳಕಳಿ ಇದೆ. ನಮಗೆ ನಿಮ್ಮ ಸಲಹೆಗಳು ಬೇಕು, ಎಲ್ಲಾ ಸಲಹೆಗಳನ್ನು ಕೊಡಿ. ನಾವು ಇರತಕ್ಕಂಥ ಸಂಪನ್ಮೂಲಗಳ ಇತಿಮಿತಿಯೊಳಗೆ ಅವನ್ನೆಲ್ಲಾ ಜಾರಿಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ನೀವು ಏಕೆ ಅದನ್ನೆಲ್ಲಾ implement ಮಾಡಲಿಲ್ಲ? ಬಂದಿರುವ ಹಣವನ್ನು ಏಕೆ ಖರ್ಚು ಮಾಡಲಿಲ್ಲ? ನೆರೆ ರಾಜ್ಯವಾದ ಆಂಧ್ರ ಪ್ರದೇಶದವರು ಮೂರು ಸಾವಿರ ಕೋಟಿಯವರೆಗೆ ಅವರು ಖರ್ಚು ಮಾಡಲಿಕ್ಕೆ ಸಾಧ್ಯವಾದರೆ Why not for Karnataka? That means to say that either you have lack of political will, or you are not interested in the development of rural area.

ಏಕೆ ಮಾಡಲಿಲ್ಲ? ತೊಂದರೆ ಏನು ಇತ್ತು? ಯಾರು ನಿಮ್ಮ ಕೈಹಿಡಿದುಕೊಂಡಿದ್ದರು? ನಾನು ಈಗ ಅಂಕಿ-ಅಂಶಗಳನ್ನು ನೋಡಿ ಹೇಳಬೇಕು ಎಂದರೆ ನನ್ನ ಹತ್ತಿರ ಸರ್ಕಾರ ಕೊಟ್ಟಿರುವ ಅಂಕಿ-ಅಂಶಗಳು ಇವೆ, ನಿಮ್ಮ ನಿರ್ದೇಶಕರು, ಗ್ರಾಮೀಣ ಅಭಿವೃದ್ಧಿ ಇಲಾಖೆಯವರು ಕೊಟಿರುವ ಅಂಕಿ-ಅಂಶಗಳಿವೆ. ಎಲ್ಲಾ ಇವೆ. ಆದರೆ, ನಾನು ಎರಡು ವರ್ಷದ್ದನ್ನು ಮಾತ್ರ ಹೇಳುತ್ತೇನೆ. 2007-08ರಲ್ಲಿ ಒಟ್ಟು 11 ಜಿಲ್ಲೆಗಳಲ್ಲಿ ಲಭ್ಯವಿರುವ ಮೊತ್ತ 490 ಕೋಟಿ ರೂಪಾಯಿಗಳು. ಆದರೆ ಖರ್ಚು ಮಾಡಿರುವುದು 236 ಕೋಟಿ ರೂಪಾಯಿಗಳು.

ಶ್ರೀ ಬಸವರಾಜ ಬೊಮ್ಮಾಯಿ : ಎಷ್ಟೆಷ್ಟು ಖರ್ಚು ಆಯಿತು ಎನ್ನುವುದು ಎಲ್ಲರಿಗೂ ಗೊತ್ತಾಗಲಿ. ತೊಂದರೆಯಿಲ್ಲ. ಹಿಂದಿನ ಎರಡು ವರ್ಷಗಳದ್ದನ್ನೂ ಸಹ ಈಗ ಹೇಳಿ.

ಶ್ರೀ ಸಿದ್ದರಾಮಯ್ಯ : ಆಮೇಲೆ ಅವರದ್ದನ್ನೂ ಹೇಳೋಣ. ನನ್ನ ಹತ್ತಿರವಿದೆ. ಅದನ್ನೂ ಹುಡುಕಿ ಹೇಳಬೇಕಾಗುತ್ತದೆ. ಉತ್ತರ ಕೊಡುವಾಗ ನೀವೇ ಹೇಳಿಬಿಡಿ. ನಾನು ಅದನ್ನು ಹುಡುಕಬೇಕು. ಇಲ್ಲಿ ಎಲ್ಲೋ ಇದೆ. ನಾನು ಹುಡುಕುತ್ತಿದ್ದೇನೆ, ಹೇಳುತ್ತೇನೆ ಸ್ವಲ್ಪ ಸಮಯ ಬೇಕು. ನೀವು ಕೇಳಿದ್ದು ಒಳ್ಳೆಯದು ಆಯಿತು. ನನ್ನ ಹತ್ತಿರ ಮಾಹಿತಿಯಿದೆ, ಹೇಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ : ಹೀಗಾಗಿ ಅದು ಸಿಕ್ಕಿ ಹಾಕಿಕೊಂಡು ಎರಡು ವರ್ಷಗಳಿಂದ ಹಾಗೆಯೇ ಇದೆ. ಇನ್ನು ಮುಂದಿನ ಎರಡು ವರ್ಷದ್ದನ್ನು ಹೇಳಿ.

ಶ್ರೀ ಸಿದ್ದರಾಮಯ್ಯ : ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ಇದು ಬಂದೇ ಇರಲಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ಸ್ವಾಮಿ ತಾವು ಇದ್ದಿದ್ದನ್ನು ನಾನು ಹೇಳುತ್ತಿಲ್ಲ. ಈ ಯೋಜನೆ ಬಹಳ ವರ್ಷಗಳಿಂದ ಇದೆ. ಆದರೆ, ಹೆಸರು ಬದಲಾವಣೆಯಾಗುತ್ತಿದೆ. ಕೂಲಿಗಾಗಿ ಕಾಳು ಯೋಜನೆ ಹಾಗೂ ಅದಕ್ಕಿಂತ ಮುಂಚೆ ಬೇರೆ ಹೆಸರಿನಲ್ಲಿತ್ತು. ಎಲ್ಲಾ ಹೆಸರುಗಳು ಬದಲಾವಣೆಯಾಗಿದೆ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ಕಾಯ್ದೆ ಮಾಡಿ ಸಂವಿಧಾನದಲ್ಲಿ ಅಡಕ ಮಾಡಿರುವುದು ಈಗ.

ಶ್ರೀ ಬಸವರಾಜ ಬೊಮ್ಮಾಯಿ : ಈ ಯೋಜನೆ ಸುಮಾರು 15-20 ವರ್ಷಗಳಿಂದ ಇದೆ. ಇದು ಬೇರೆ ಬೇರೆ ಹೆಸರಿನಲ್ಲಿದ್ದು ಇದಕ್ಕೆ ಒಂದು

ರೂಪವನ್ನು ಕೊಟ್ಟು, ಕೆಲವು ತಿದ್ದುಪಡಿಯನ್ನು ತಂದು, ಕಾನೂನನ್ನು ತಂದಿದ್ದಾರೆ. ಅದರಿಂದ ಈಗ ಕಾನೂನಿನ ಪ್ರಕಾರವಾಗಿ ಇದನ್ನು ಅನುಕರಣೆ ಮಾಡುವಂಥ ಪರಿಸ್ಥಿತಿ ಬಂದಿದೆ. ಇದು fact. ಇದನ್ನು ನೀವು ಒಪ್ಪ ಬಹುದು ಅಥವಾ ಬಿಡಬಹುದು.

ಶ್ರೀ ದಿನೇಶ್ ಆರ್. ಗುಂಡೂರಾವ್ : ಇದು ಸರ್ಕಾರದಿಂದ ಕಾಯ್ದೆ ಮುಖಾಂತರ ಬಂದಿರುವುದು. ಕಾನೂನಿನ ಪ್ರಕಾರ ಉದ್ಯೋಗವನ್ನು ಕೊಡಲೇಬೇಕು. ಹಿಂದೆಯೆಲ್ಲಾ ಉದ್ಯೋಗದ ಭರವಸೆಯಿತ್ತು. ಆದರೆ, ಇದು ಖಾತ್ರಿ ಯೋಜನೆ. ಬಹಳ ವ್ಯತ್ಯಾಸವಿದೆ. ಕಾನೂನಿನ ಪ್ರಕಾರ ನೀವು ಅವರಿಗೆ ಉದ್ಯೋಗವನ್ನು ಕೊಡಲೇ ಬೇಕು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಯಾರು ಉದ್ಯೋಗವನ್ನು ಅರಸಿ ಬರುತ್ತಾರೋ ಅವರಿಗೆ ನೋಂದಣಿ ಮಾಡಿಕೊಂಡು ಉದ್ಯೋಗವನ್ನು ಕೊಡಬೇಕು. ಆಗಿನಿಂದಲೂ ಅದೇ ಇದೆ. "ಅಳಿಯ ಅಲ್ಲ ಮಗಳ ಗಂಡ" ಅಷ್ಟೆ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಬಸವರಾಜ ಸಾಹೇಬರೇ ಬಹಳ ವ್ಯತ್ಯಾಸವಿದೆ. ನೀವು ಅರ್ಥ ಮಾಡಿಕೊಳ್ಳಿ. ಕಾನೂನು ಬೇರೆ . . . .

(ಗೊಂದಲ)

ಅಧ್ಯಕ್ಷರು : ಮಾನ್ಯ ಶರಣ ಪ್ರಕಾಶ್‌ರವರೇ ಕುಳಿತುಕೊಳ್ಳಿ. ಮಾನ್ಯ ರುದ್ರೇಶ್‌ಗೌಡರೇ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಬಸವರಾಜುರವರು ಹೇಳಿದ್ದು correct. ಆವತ್ತು ಕೂಡ food for work ಎಂದು ಇತ್ತು, ಕೂಲಿಗಾಗಿ ಕಾಳು ಎಂದು ಇತ್ತು.

ಡಾ: ಹೆಚ್.ಸಿ.ಮಹದೇವಪ್ಪ : ಈ ಹಿಂದೆ ಇವೆಲ್ಲಾ ಇದ್ದವು. food for work, NREP, RLEGP ಇವೆಲ್ಲಾ ಈ ಹಿಂದೆ ಇದ್ದವು. ಅದನ್ನು close ಮಾಡಿದ್ದಾರೆ. ಕೇಂದ್ರ ಸರ್ಕಾರದಿಂದ ಈ ಯೋಜನೆಗಳಿದ್ದವು. ಯಾರಿಗೆ ಉದ್ಯೋಗವಿಲ್ಲ, ಅವರಿಗೆ ಉದ್ಯೋಗ ಕೊಡುವ ಈ ಯೋಜನೆಗಳಿದ್ದವು.

ಆದರೆ, ಇದನ್ನು ಪಾರ್ಲಿಮೆಂಟ್‌ನಲ್ಲಿ ತಂದು ಶಾಸನಬದ್ಧವಾಗಿ ಮಾಡಿ ಉದ್ಯೋಗದ ಗ್ಯಾರಂಟಿ ಕೊಡಬೇಕು. ಒಂದು ಕುಟುಂಬಕ್ಕೆ ಒಂದು ವರ್ಷದಲ್ಲಿ ಒಬ್ಬರಿಗೆ 100 ದಿನ ಕಡ್ಡಾಯವಾಗಿ ಉದ್ಯೋಗ ಕೊಡಬೇಕೆಂದು ಹೇಳಿ ಈ ರೀತಿ ಮಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಬಸವರಾಜ್‌ರವರೆ, ನೀವು ಹೇಳುತ್ತಿರುವುದು ಸರಿ ಇದೆ ಬಿಡಿ.

ಡಾ|| ಹೆಚ್.ಸಿ.ಮಹದೇವಪ್ಪ : ಈ ಒಂದು ವ್ಯವಸ್ಥೆ ಮೊದಲು ಇತ್ತು. ಆದರೆ, ಈ ರೀತಿ ಇರಲಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ಮೊದಲೂ ಇದೇ ರೀತಿ ಇತ್ತು. ಯಾರು ಉದ್ಯೋಗವನ್ನರಸಿ ಬರುತ್ತಾರೆ, ಅವರಿಗೆ ಉದ್ಯೋಗ ಕೊಡಬೇಕೆಂದು ಇತ್ತು. ಈ ಮೊದಲೂ ಇತ್ತು. ಈಗಲೂ ಇದೆ.

ಡಾ: ಹೆಚ್.ಸಿ.ಮಹದೇವಪ್ಪ : ಇತ್ತು. ಆದರೆ ಈ ರೀತಿ ಇರಲಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಈಗಲೂ ಸಹ 100 ದಿವಸಗಳು ಮಾತ್ರ ಇದೆ. ಇದೇನೂ ಹೊಸದಲ್ಲ. ಏನೋ ಹೊಸದಾಗಿ ಸಂಶೋಧನೆ ಮಾಡಿ ಮಾಡಿರುವಂತಹದ್ದು ಏನೂ ಇಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಬೊಮ್ಮಾಯಿಯವರೆ, ಅವರು ಮೊದಲು ಮುಗಿಸಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ಮೊದಲು ಇಷ್ಟು ದೊಡ್ಡ ಮೊತ್ತದ ಹಣ ಇರಲಿಲ್ಲ. ಕಾರ್ಯಕ್ರಮವನ್ನು ಗೌಣ ಮಾಡಿ ಮಾತನಾಡತಕ್ಕಂತಹ ರೀತಿಯಲ್ಲಿ ಇವರು ಮಾತನಾಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ರಮಾನಾಥರೈರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಉತ್ತರ ಕೊಡುವಂತಹ ಸಮಯದಲ್ಲಿ ಅವರು ಹೇಳಲಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಯಾರು ಒಳ್ಳೆಯದನ್ನು ಮಾಡಿದರೂ ಅವರನ್ನು ಗೌರವಿಸಬೇಕಾಗುತ್ತದೆ. ಅದಕ್ಕೆ ನಾನು ಹೇಳಿದ್ದನ್ನು ನೀವು ಕೇಳಿಸಿಕೊಳ್ಳಲಿಲ್ಲ.

(ಗೊಂದಲ)

ಇದಕ್ಕೆ ಕಾನೂನಿನ ಸ್ವರೂಪವನ್ನು ತಂದು, ತಿದ್ದುಪಡಿಯನ್ನು ತಂದು ಮಾಡಿದ್ದೀರಿ, ಇದನ್ನು ಕಾನೂನಿನ ಪ್ರಕಾರ ಅನುಷ್ಠಾನ ಮಾಡಬೇಕಾಗುತ್ತದೆ ಎಂದು ಹೇಳಿದ್ದೇನೆ. ನೀವು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ. ಅದಕ್ಕೆ ನಾನು ಏನು ಮಾಡುವುದಕ್ಕಾಗುತ್ತದೆ? ಇದಕ್ಕೆ ಸರಿಯಾದ ಕಾನೂನಿನ ಸ್ವರೂಪವನ್ನು ಕೊಟ್ಟು ಅನುಷ್ಠಾನ ಮಾಡುವುದಕ್ಕೆ ತಂದಿದ್ದೀರಿ ಎಂದು ನಾನು ಹೇಳಿದ್ದೇನೆ. ನಾನು ಗೌರವ ಕೊಟ್ಟು ಹೇಳಿದ್ದೇನೆ. ನೀವು ಮಾಡಿದ ಕಾರ್ಯಕ್ರಮಕ್ಕೆ ಗೌರವ ಕೊಡಬೇಕು ಆದರೆ, ನಾವು ಮಾಡಿದ ಕಾರ್ಯಕ್ರಮಕ್ಕೆ ಗೌರವ ಇಲ್ಲವೇ? ನಾವು ಮಾಡಿದ ಕಾರ್ಯಕ್ರಮಕ್ಕೆ ನೀವು ಟೀಕೆ ಮಾಡುವುದಿಲ್ಲವೇ? ಟೀಕೆ ಎರಡೂ ಕಡೆಗಳಲ್ಲಿಯೂ ಇರುತ್ತದೆ. ನಾವು ಏನು ಸ್ವೀಕಾರ ಮಾಡಿದ್ದೇವೆ, ನೀವು ಸಹ ಅದನ್ನು ಸ್ವೀಕಾರ ಮಾಡಿ. ಕೇಂದ್ರ ಸರ್ಕಾರ ಎಂದ ಕೂಡಲೇ ಎಲ್ಲರೂ ಎದ್ದು ನಿಲ್ಲುವಂತಹ ಪ್ರಶ್ನೆಯಿಲ್ಲ. ಕೇಂದ್ರದಲ್ಲಿರುವ ನಾಯಕರು ಕರ್ನಾಟಕವನ್ನೇನೂ ನೋಡುವುದಿಲ್ಲ. ಏನೂ ಚಿಂತೆ ಮಾಡಬೇಡಿ. ನೀವು ಇಲ್ಲಿ ಏನು ಮಾಡಿದರೂ ಸಹ ಕೇಂದ್ರದ ನಾಯಕರು ನಿಮ್ಮನ್ನು ಅಳತೆ ಮಾಡಿ ಇಟ್ಟಿದ್ದಾರೆ. ಚಿಂತೆ ಮಾಡುವುದಕ್ಕೆ ಹೋಗಬೇಡಿ. ಕೇಂದ್ರ ಸರ್ಕಾರ ಎಂದ ಕೂಡಲೇ ಎದ್ದು ನಿಲ್ಲುವ ಅವಶ್ಯಕತೆ ಇಲ್ಲ. ನಿಮಗೆ ಸತ್ಯಾಂಶವನ್ನು ಹೇಳಲೇ ಬಾರದೇ? ನೀವೂ ಸ್ವೀಕಾರ ಮಾಡುವುದನ್ನು ಕಲಿಯಿರಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವರಾಜ್ ಬೊಮ್ಮಾಯಿಯವರು ಹೇಳುತ್ತಿರುವುದು ನಿಜ. ಅವೆಲ್ಲವನ್ನೂ merge ಮಾಡಿ, 2006ನೇ ಇಸವಿಯಲ್ಲಿ ಕಾನೂನು ಮಾಡಿ, ಕನಿಷ್ಠ ಕೂಲಿ ಬೇಕಾದವನಿಗೆ ಕನಿಷ್ಟ 100 ದಿನಗಳು ಕೊಡಬೇಕು, 82 ರೂಪಾಯಿಗಳ ಕೂಲಿಯನ್ನು ಅವನಿಗೆ ಕೊಡಬೇಕು. ಈಗ 100 ರೂಪಾಯಿಗಳನ್ನು ಮಾಡಬೇಕೆಂದು ತೀರ್ಮಾನವಾಗಿದೆ. ಈ ಮೊದಲು 82 ರೂಪಾಯಿಗಳನ್ನು ಮಾಡಲಾಗಿತ್ತು. ಇದಕ್ಕೊಂದು ಕಾಯಿದೆಯನ್ನು ಮಾಡಿ, ಈ ಹಿಂದೆ ಇದ್ದಂತಹ ಕಾರ್ಯಕ್ರಮಗಳಿಗೆ ಇವತ್ತು ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ 29,100 ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಆ ಕಾಲದಲ್ಲಿ ಇಷ್ಟೊಂದು ಹಣವನ್ನು

ಇಡಲಾಗಿತ್ತೇ? 29,100 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಈ ವರ್ಷ allocation ಮಾಡಲಾಗಿದೆ. ಹೀಗಾಗಿ ಪಕ್ಕದ ರಾಜ್ಯಗಳನ್ನೆಲ್ಲಾ 3000 ಕೋಟಿ, 4,000 ಕೋಟಿ ಹಾಗೂ 5000 ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿದ್ದಾರೆ. ಆದರೆ, ಇದರಲ್ಲಿ ಎಲ್ಲಾ relax ಮಾಡಿದ್ದಾರೆ. Employment Generation ಗೆ 60%, materials ಗೆ 40%. ಜೊತೆಗೆ ಇನ್ನು ಒಂದು ಆದೇಶವನ್ನು ಹೊರಡಿಸಿ 20% machineries ಮೂಲಕ ಮಾಡಬಹುದೆಂದು ಮಾಡಿದ್ದಾರೆ. ಇದರಲ್ಲಿ ಕೇವಲ ಉದ್ಯೋಗವನ್ನು ಸೃಷ್ಟಿ ಮಾಡಬೇಕು, 100 ದಿನಗಳ ಕಾಲ ಕೂಲಿ ಕೊಡಬೇಕೆನ್ನುವುದಷ್ಟೇ ಅಲ್ಲ, ಯಾರಿಗೆ 5 ಎಕರೆಯವರೆಗೆ ಜಮೀನು ಇದೆ, ಅಂದರೆ, ಸಣ್ಣ ರೈತರು ಮತ್ತು ಅತೀ ಸಣ್ಣ ರೈತರಿದ್ದಾರೆ, ಅವರ ಜಮೀನುಗಳ ಗುಣಮಟ್ಟವನ್ನು ಅಭಿವೃದ್ಧಿ ಪಡಿಸುವುದಕ್ಕೆ, ಗುಂಡಿಗಳನ್ನು ತೆಗೆಸುವುದಕ್ಕೆ, ಗಿಡಗಳನ್ನು ನೆಡುವುದಕ್ಕೆ, ಮರಗಳನ್ನು ಬೆಳೆಸುವುದಕ್ಕೆ, ಇವೆಲ್ಲಕ್ಕೂ ಕೂಡ ಅವರಿಗೆ relax ಮಾಡಿ, ಅದರ ಪ್ರತಿಫಲ ಸಣ್ಣ ಕುಟುಂಬದವರಿಗೂ ಸಿಗುವಂತೆ ಮಾಡುತ್ತಿದ್ದಾರೆ. ಇದರ ಜೊತೆಗೆ ದೊಡ್ಡ ರೈತರೂ ಕೂಡ 5 ಎಕರೆಯವರೆಗೂ ಇದನ್ನು ಉಪಯೋಗಿಸಿಕೊಳ್ಳಬಹುದೆಂದು ಮಾಡಿದ್ದಾರೆ. It is not only giving employment to the agricultural labourers, ಹಳ್ಳಿಗಾಡಿನಲ್ಲಿ asset create ಆಗಬೇಕೆನ್ನುವ ಕಾರಣಕ್ಕೆ ಮಾಡಿದ್ದಾರೆ. ಹಳ್ಳಿಗಾಡಿನಲ್ಲಿ ಆಸ್ತಿ ನಿರ್ಮಾಣವಾಗಬೇಕು. Water shed area ದಲ್ಲಿ ನೀವು ಬೇಕಾದಷ್ಟು ಹಣವನ್ನು ಖರ್ಚು ಮಾಡಬಹುದು, ಅರಣ್ಯ ಇಲಾಖೆಯಲ್ಲಿ ಬೇಕಾದಷ್ಟು ಹಣವನ್ನು ಖರ್ಚು ಮಾಡಬಹುದು, ಕೃಷಿ ಇಲಾಖೆಯಲ್ಲಿ ಬೇಕಾದಷ್ಟು ಹಣವನ್ನು ಖರ್ಚು ಮಾಡಬಹುದು, ಪಶು ಸಂಗೋಪನಾ ಇಲಾಖೆಯಲ್ಲಿ ಬೇಕಾದಷ್ಟು ಹಣವನ್ನು ಖರ್ಚು ಮಾಡಬಹುದು, ರೇಷ್ಮೆ ಇಲಾಖೆಯಲ್ಲಿ ನೀವು ಬೇಕಾದಷ್ಟು ಹಣವನ್ನು ಖರ್ಚು ಮಾಡಬಹುದು, ತೋಟಗಾರಿಕೆ ಇಲಾಖೆಯಲ್ಲಿ ಬೇಕಾದಷ್ಟು ಹಣವನ್ನು ಖರ್ಚು ಮಾಡಬಹುದು, Water shed ನಲ್ಲಿ ಮಾಡಬಹುದು, ಇಷ್ಟೊಂದು ವ್ಯಾಪಕವಾಗಿ ಅವಕಾಶ ಇರತಕ್ಕಂತಹ ಕಾರ್ಯಕ್ರಮ ಯಾವ ಕಾಲದಲ್ಲಿಯೂ ಕೂಡ ಇರಲಿಲ್ಲ. ನನ್ನ ಪ್ರಕಾರ ಹೇಳುವುದಾದರೆ, ನಾನು ಸಹ ಹಳ್ಳಿಗಾಡಿನಿಂದ ಬಂದವನಾಗಿದ್ದು, 1978 ರಿಂದ 1983 ರವರೆಗೆ ತಾಲ್ಲೂಕು ಬೋರ್ಡ್ ಸದಸ್ಯರಾಗಿ ಕೆಲಸ ಮಾಡಿದ್ದೇನೆ. ಅಂದೇ ನಾನು ತಾಲ್ಲೂಕು

ಅಭಿವೃದ್ಧಿ ಮಂಡಳಿಯಲ್ಲಿ ಐದು ವರ್ಷಗಳ ಕಾಲ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಅಂದೂ ಸಹ ನಾನು ನೋಡಿದ್ದೇನೆ, ಈಗಲೂ ನೋಡುತ್ತಿದ್ದೇನೆ. ಈ ಕಾರ್ಯಕ್ರಮ ಹಳ್ಳಿಗಾಡಿನ ಅಭಿವೃದ್ಧಿಗೆ ಅತ್ಯಂತ ಮಹತ್ತರವಾದ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ಯಾವುದೇ ಸರ್ಕಾರ ಸದುಪಯೋಗ ಮಾಡಿಕೊಳ್ಳದೇ ಹೋದರೆ, ನಾವು ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಗ್ರಾಮೀಣಾಭಿವೃದ್ಧಿಗೆ ಅನ್ಯಾಯ ಮಾಡಿದ ರೀತಿ ಆಗುತ್ತದೆ. This is my point.

(6-00 PM)

2006–07ರಲ್ಲಿ ಆರಂಭ ಶಿಲ್ಕ 78 ಕೋಟಿ. ಕೇಂದ್ರ ಸರ್ಕಾರ 242, ರಾಜ್ಯ ಸರ್ಕಾರ 20, ಒಟ್ಟು ಲಭ್ಯತೆ 341 ಕೋಟಿ ರೂಪಾಯಿ. 2007–08 ರಲ್ಲಿ ಒಟ್ಟು ಲಭ್ಯತೆ 419 ಕೋಟಿ. 2008–09ರಲ್ಲಿ ಒಟ್ಟು ಲಭ್ಯತೆ 642 ಕೋಟಿ. 2009–10ರಲ್ಲಿ ಅಂದರೆ, ಈ ವರ್ಷಕ್ಕೆ ಒಟ್ಟು ಲಭ್ಯತೆ 540 ಕೋಟಿ. ನಾನು ಕೇವಲ ಇದರದ್ದು ಮಾತ್ರ ಏಕೆ ಹೇಳಿದೆನೆಂದರೆ, ಎರಡು ವರ್ಷದ್ದು ಮಾತ್ರ ಬರೆದುಕೊಂಡಿದ್ದೆ. 2007–08ಕ್ಕೆ the available fund is 419 ಕೋಟಿ. ಬಿಡುಗಡೆಯಾದ ಹಣದಲ್ಲಿ ವೆಚ್ಚವಾದ ಹಣ 236 ಕೋಟಿ. ಖರ್ಚು ಮಾಡದೇ ಉಳಿದುಕೊಂಡಿರುವ ಹಣ 182 ಕೋಟಿ. ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲೇ ಇದ್ದಾರೆ. 2008–09ಕ್ಕೆ ಖರ್ಚು ಮಾಡಲು ಇದ್ದಂಥ ಹಣ 642 ಕೋಟಿ. ಮಾನ್ಯ ಉದಾಸಿಯವರೆ, ಇದು ನಿಮ್ಮ ತರಹ LOC ಸಿಕ್ಕದೇ ಕೆಲಸ ಆಗದೇ ಇರುವುದಲ್ಲ. 3054 ನಲ್ಲಿ ನಿಮಗೆ LOC ಬರದೇ ನೀವು ಕಷ್ಟಪಡುತ್ತಿದ್ದೀರಲ್ಲಾ, ಆ ತರಹ ಅಲ್ಲ. ಇಲ್ಲವೇ ಇಲ್ಲ. ಅದನ್ನು ನಿಲ್ಲಿಸಿಬಿಟ್ಟಿದ್ದಾರೆ. ಬರುತ್ತದೆಯೇ?

ಶ್ರೀ ಆರ್.ಅಶೋಕ್ : ಬರುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಶೋಕ್‌ರವರೆ, ಎಲ್ಲಿಂದ ಬರುತ್ತದೆ? 3054 ಬಂದ್, 5054 ಬಂದ್. ಮೂರ್‍ನಾಲ್ಕು ವರ್ಷಗಳಿಂದ contractor ಗಳು 3054ನಲ್ಲಿ ಕೆಲಸ ಮಾಡಿ, ಅಲೆದಾಡುತ್ತಿದ್ದಾರೆ. ಬಿಟ್ಟುಕೊಟ್ಟರೆ ಸಂತೋಷ, ಯಾರೋ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರು ಅವರು ಬದುಕಿಕೊಳ್ಳಲಿ. 462 ಕೋಟಿಗಳಲ್ಲಿ ಖರ್ಚು ಮಾಡಿದ್ದು 357 ಕೋಟಿ, ಉಳಿದದ್ದು 284 ಕೋಟಿ. ಕೇವಲ ಈ ಎರಡು ವರ್ಷಗಳಲ್ಲೇ 467 ಕೋಟಿ

31 ಲಕ್ಷ ಖರ್ಚು ಮಾಡಲಿಲ್ಲ. Can you call it as a commitment to the rural development?

ಕುಮಾರಿ ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ..

ಶ್ರೀ ಸಿದ್ದರಾಮಯ್ಯ : ತಾವು ಆ ನಂತರ ಉತ್ತರ ಕೊಡಿ. I am not going to yield. ತಾವು ಉತ್ತರ ಕೊಡುವಾಗ ಎಲ್ಲವನ್ನೂ ಹೇಳಿ. ನಿಮ್ಮ Chief Minister ಕೊಡುತ್ತಾರೆ. Can you call it as a commitment? ಬಾಯಲ್ಲಿ ಗದ್ಗದಿತರಾಗಿ ಹೋದರೆ commitment ಎಂದು ಕರೆಯಬೇಕೆ?

ಕುಮಾರಿ ಶೋಭಾ ಕರಂದ್ಲಾಜೆ : ಮಾನ್ಯ ಅಧ್ಯಕ್ಷರೆ, ಇವರಿಗೆ ನಾನು ಯಾವುದೇ ಉತ್ತರವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆದರೆ, ಬೆಳಗಾಂ ಅಧಿವೇಶನದ ಸಂದರ್ಭದಲ್ಲಿ ಎಲ್ಲಾ ಶಾಸಕರ ಕೈಯಲ್ಲಿ ಒಂದು ಪತ್ರವನ್ನು ನಾನು ಕೊಟ್ಟಿದ್ದೆ. Including ಸಿದ್ದರಾಮಣ್ಣ ಮತ್ತು ಎಲ್ಲಾ ಸದಸ್ಯರು ಇಲ್ಲಿದ್ದಾರೆ. ಯಾವ್ಯಾವ ಉದ್ಯೋಗ ಖಾತ್ರಿ ಯೋಜನೆಯಲ್ಲಿ ನಾವು ಸಡಿಲತೆಯನ್ನು ಮಾಡಿದ್ದೇವೆ, ಹೆಚ್ಚು ಖರ್ಚು ಮಾಡುವುದಕ್ಕೆ ಯಾವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ ಎನ್ನುವುದರ ಬಗ್ಗೆ. ನನ್ನ ಒಂದೇ ಒಂದು ಪ್ರಶ್ನೆ, ಯಾರು ಎನ್‌ಆರ್‌ಇಜಿ ಅನ್ನು ಹೆಚ್ಚು ಮಾಡಿದ್ದಾರೆ ಮತ್ತು ಇವರದ್ದು commitment ಇಲ್ಲಿ ಏನಿದೆ ಎನ್ನುವುದು ಇಲ್ಲಿ ಗೊತ್ತಾಗಬೇಕು. ಎರಡನೆಯದಾಗಿ, ದೇಶದಲ್ಲಿ ಮೊನ್ನೆಗೆ 428 ಕೋಟಿ ರೂಪಾಯಿ ಈ ವರ್ಷದಲ್ಲಿ ನಾವು ಖರ್ಚು ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅವರು ಉತ್ತರ ಹೇಳುವುದಕ್ಕೆ ಶುರು ಮಾಡಿದ್ದಾರೆ. ನಾನು ನಮಸ್ಕಾರ ಮಾಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. ನಾನು ಇದರಲ್ಲಿ yield ಆಗಿಲ್ಲ.

ಅಧ್ಯಕ್ಷರು : ಅವರು yield ಆಗಿಲ್ಲ.

ಕುಮಾರಿ ಶೋಭಾ ಕರಂದ್ಲಾಜೆ : ನಾವು 428 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಆದರೂ ಏನೂ ಆಗಿಲ್ಲ, ಏನೂ ಮಾಡಿಲ್ಲ, ಏನೂ ಮಾಡುತ್ತಿಲ್ಲವೆಂದು ಕೈಯಾಡಿಸಿ ಹೇಳಿದರೆ, ಉದ್ಯೋಗ ಖಾತ್ರಿ ಯೋಜನೆಗೆ ಇವರೆಲ್ಲರ Commitment ಇದೆ.

ಶ್ರೀ ಸಿದ್ದರಾಮಯ್ಯ : ನೀವು ಉತ್ತರವನ್ನು ಆನಂತರ ಹೇಳಿ. ಮಾನ್ಯ ಅಧ್ಯಕ್ಷರೆ, it is a total failure on the part of the Rural Development. It is your responsibility. You are responsible to this House Madam.

ಕುಮಾರಿ ಶೋಭಾ ಕರಂದ್ಲಾಜೆ : ನನ್ನ responsibility ಇದೆ. ಅದಕ್ಕೆ ನಾನು ಮಾಡುತ್ತಿದ್ದೇನೆ. ಅದಕ್ಕಾಗಿ ಸಡಿಲತೆ ಮಾಡಿ ಹೆಚ್ಚು ಖರ್ಚು ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ.

ಅಧ್ಯಕ್ಷರು : ಆನಂತರ ತಾವು ಉತ್ತರವನ್ನು ಕೊಡಿ.

ಶ್ರೀ ಸಿದ್ದರಾಮಯ್ಯ : I am not responsible. Executive is responsible to this House.

ಕುಮಾರಿ ಶೋಭಾ ಕರಂದ್ಲಾಜೆ : ಅದನ್ನೇ ನಾವು ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ: ಮಾಡಿ. ಮಾಡಿಲ್ಲವೆಂದು ನಾವು ಹೇಳುತ್ತಿದ್ದೇವೆ.

ಕುಮಾರಿ ಶೋಭಾ ಕರಂದ್ಲಾಜೆ : ಈ ವರ್ಷ 450 ಕೋಟಿ ರೂಪಾಯಿ ಕೆಲಸ ಐದು ತಿಂಗಳಿನಲ್ಲಾಗಿದೆ.

ಶ್ರೀ ಸಿದ್ದರಾಮಯ್ಯ : ಮಾಡಿ ತಾಯಿ, ಬೇಡ ಎಂದು ಯಾರು ಹೇಳಿದರು? ಎಲ್ಲವನ್ನು ಈ ವರ್ಷಕ್ಕೆ ಮುಗಿಸಿ. ನಾವು ಬೇಡವೆಂದು ಹೇಳುವುದಿಲ್ಲ. ನೀವು ಇಲ್ಲಿಯವರೆಗೂ ಮಾಡಿಲ್ಲ. That is my point. ನೀವು ಎಲ್ಲವನ್ನೂ note ಮಾಡಿಕೊಂಡು ಹೇಳಿ. ನೀವು ಮಾಡಿಲ್ಲವೆನ್ನುವುದು ಮುಖ್ಯ. I am not making allegations against you. The question is the Government has not done it. Can you change this fact? ನೀವು facts ಅನ್ನು change ಮಾಡುವುದಕ್ಕಾಗುತ್ತದೆಯೇ? ನಿಮ್ಮ ನಿರ್ದೇಶಕರು ಕೊಟ್ಟಿರುವ ಅಂಕಿ-ಅಂಶಗಳನ್ನು ಬದಲಾಯಿಸಲು ಆಗುತ್ತದೆಯೇ? ನಾನು ಬರೆದುಕೊಂಡು ಬಂದಿದ್ದೇನೆಯೇ?

ಕುಮಾರಿ ಶೋಭಾ ಕರಂದ್ಲಾಜೆ : ಬದಲಾಯಿಸಿ ಎಂದು ಹೇಳಿಲ್ಲವಲ್ಲ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಕುಳಿತುಕೊಳ್ಳಿ. ನಾನು ಸತ್ಯವನ್ನೇ ಹೇಳುತ್ತಿದ್ದರೆ ನಿಮಗೆ ಕೋಪವೇಕೆ?

ಕುಮಾರಿ ಶೋಭಾ ಕರಂದ್ಲಾಜೆ : ನಾನೂ ಸತ್ಯವನ್ನೇ ಹೇಳುತ್ತಿದ್ದೇನೆ. ಕೋಪ ಇಲ್ಲ ಸಾರ್, ಎಲ್ಲರ commitment ಇದೆ. ನಮ್ಮ commitment ಇದೆ.

ಶ್ರೀ ಸಿದ್ದರಾಮಯ್ಯ : ಆಯಿತು, ನಮ್ಮದೂ commitment ಇದೆ.

ಕುಮಾರಿ ಶೋಭಾ ಕರಂದ್ಲಾಜೆ : ಬರೀ ಆರೋಪ ಮಾಡುತ್ತಿದ್ದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ನಾನು ಆರೋಪ ಮಾಡುತ್ತಿಲ್ಲ. facts ಅನ್ನು ಹೇಳುತ್ತಿದ್ದೇನೆ ಅಷ್ಟೆ. ನಾನು ಅಲ್ಲಿ ಭ್ರಷ್ಟಾಚಾರ ಮಾಡಿದ್ದೀರಿ ಎಂದು ಹೇಳಿದ್ದೇನಾ?

(ಗೊಂದಲ)

ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇರುವ ವಿಚಾರವನ್ನು ಹೇಳುತ್ತಿದ್ದಾರೆ. .

ಅಧ್ಯಕ್ಷರು : ಮಾನ್ಯ ಶರಣ ಪ್ರಕಾಶ್‌ರವರೆ, ರುದ್ರೇಶ್‌ಗೌಡರೆ ಕುಳಿತುಕೊಳ್ಳಿ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಗ್ರಾಮೀಣಾಭಿವೃದ್ಧಿ ಬಗ್ಗೆ ಜನರಿಗೆ ಗೊತ್ತಾಗಬೇಕಲ್ಲವೇ?

ಕುಮಾರಿ ಶೋಭಾ ಕರಂದ್ಲಾಜೆ : ಭ್ರಷ್ಟ ಅಧಿಕಾರಿಗಳು ನಮ್ಮ ಕಾಲಕ್ಕೇ ಬಂದಿದ್ದಾರೆಯೇ? ನಾವು ಅಧಿಕಾರಿಗಳನ್ನು ರಿಪೋರ್ಟ್ ಮಾಡಿ ಕೊಂಡಿದ್ದೇವಾ? ಇಲ್ಲಿ ಇಲಾಖೆಯಲ್ಲಿರುವ ಅಧಿಕಾರಿಗಳನ್ನೇ ಎಲ್ಲಾ ಕಡೆ ಹಾಕುತ್ತಿದ್ದೇವೆ. ಭ್ರಷ್ಟ ಅಧಿಕಾರಿಗಳನ್ನು ಬೇರೆ ಕಡೆಯಿಂದ import ಮಾಡಿಕೊಳ್ಳುತ್ತಿದ್ದೇವೆಯೇ?

ಶ್ರೀ ಹೆಚ್.ಸಿ.ಮಹದೇವ್ ಪ್ರಸಾದ್ : ಜೆ.ಹೆಚ್.ಪಟೇಲರು ಏನು ಹೇಳುತ್ತಿದ್ದರೆಂದರೆ, ಕುದುರೆ ಇರುತ್ತದೆ, ಲಗಾಮು ಹಿಡಿಯುವನು ಹೇಗೆ ಓಡಿಸುತ್ತಾನೋ ಅದರ ಮೇಲೆ ಕುದುರೆ ಓಡುತ್ತದೆ.

(ಗೊಂದಲ)

ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಎಂಥೆಂಥ ಯೋಜನೆಗಳನ್ನು ಹಾಕಿದ್ದೀರಿ, ಅವರಿಗೇನೂ ಗೊತ್ತಿಲ್ಲ. ಅದಕ್ಕಾಗಿ ಕೆಲಸವಾಗುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಶರಣ ಪ್ರಕಾಶ್‌ರವರೆ, ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಾವು ಹೇಳುತ್ತಿರುವುದನ್ನು ಅವರು ಕೇಳಿಕೊಂಡು ನಂತರ ಉತ್ತರ ಹೇಳಲಿ. ಏನಾದರೂ ತಪ್ಪು ಹೇಳಿದ್ದರೆ, ಸರಿಯಾಗಿ ಹೇಳದೇ ಹೋಗಿದ್ದರೆ, ನಿಮಗೆ ಆರೋಪ ಎನಿಸಿದ್ದರೆ, ಆನಂತರ ಏನು ಬೇಕಾದರೂ ಹೇಳಿ. ನಾನು ಯಾರಿಗೂ ಆರೋಪವೇ ಮಾಡಿಲ್ಲ. Facts ಹೇಳುತ್ತಿದ್ದೇನೆ. ಏಕೆ ಮಾಡಲಿಲ್ಲ, ಯಾರು ಮಾಡಲಿಲ್ಲ, ಅಧಿಕಾರಿಗಳು ಜವಾಬ್ದಾರರೇ, ಯಾರು ಜವಾಬ್ದಾರು ಎಂದು ಈಗ ನಾನು ಹೇಳಿದೆನೇ?

ಕುಮಾರಿ ಶೋಭಾ ಕರಂದ್ಲಾಜೆ : ನಾವು ಕೇಳಿದ್ದೇವಾ?

ಶ್ರೀ ಸಿದ್ದರಾಮಯ್ಯ : ಅದಕ್ಕೆ ನೀವೇಕೆ ಎದ್ದೇಳುತ್ತಿದ್ದೀರಿ? ಸ್ವಲ್ಪ ತಾಳ್ಮೆಯಿಂದ ಕೇಳಬೇಕು.

ಕುಮಾರಿ ಶೋಭಾ ಕರಂದ್ಲಾಜೆ : ಕೇಳುತ್ತಿದ್ದೇನೆ ಸಾರ್.

ಒಬ್ಬ ಮಾನ್ಯ ಸದಸ್ಯರು : ಕುಂಬಳ ಕಾಯಿ ಕಳ್ಳ ಎಂದರೆ, ಹೆಗಲು ಮುಟ್ಟಿಕೊಂಡು ನೋಡಿದನಂತೆ," ಹಾಗೆ ಆಯಿತು.

ಶ್ರೀ ಹೆಚ್.ಸಿ.ಮಹದೇವ ಪ್ರಸಾದ್ : ಗ್ರಾಮೀಣಾಭಿವೃದ್ಧಿ ಖಾತೆಯನ್ನು ಹೊಂದಿರುವವರು calm ಆಗಿ ಇರಬೇಕು.

ಶ್ರೀ ಸಿದ್ದರಾಮಯ್ಯ : ಮಾನ್ಯ ಮಹದೇವಪ್ಪನವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. Calm ಆಗಿ ಇರಬೇಕು.

ಕುಮಾರಿ ಶೋಭಾ ಕರಂದ್ಲಾಜೆ : ಅದಕ್ಕೆ ಆಗ ಅವರು ಏನು ಮಾತನಾಡುತ್ತಿರಲಿಲ್ಲ.

ಶ್ರೀ ಸಿದ್ದರಾಮಯ್ಯ : ಆಗ ನೀವ್ಯಾರು ಅವರನ್ನು ಏನೂ ಕೇಳಲೇ ಇಲ್ಲ. ಇಲ್ಲ, ಇಲ್ಲ, ಅವರ ಕಾಲದಲ್ಲಿಯೇ as per the 11th schedule when Sri Mahadevappa was incharge Minister for Rural Development 29 subject ಗಳು ಬೇಲೂರು ಘೋಷಣೆಗನುಗುಣವಾಗಿ transfer ಆದವು. 165 state subjects, state sector ನಿಂದ district sector ಗೆ ಹೋದವು.

(ಗೊಂದಲ)

ಅಧ್ಯಕ್ಷರು : ಮಾನ್ಯ ಶಿವಲಿಂಗೇಗೌಡರೆ ಕುಳಿತುಕೊಳ್ಳಿ. ನೀವೆಲ್ಲಾ ಮಾತನಾಡಿದ್ದೀರಿ. ಮತ್ತೆ ಮತ್ತೆ ಎದ್ದು ನಿಂತುಕೊಳ್ಳಬೇಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇವೆಲ್ಲದಕ್ಕೂ ಸಮಯ ಬೇಕಾಗುತ್ತದೆ ಎಂದು ಹೇಳಿದರೆ, ಸಮಯ ತೆಗೆದುಕೊಳ್ಳಿ. ನಮ್ಮ commitment ಇದ್ದರೆ ನಮಗೆ ಕೊಡಿ.

ಶ್ರೀ ವೆಂಕಟರಾವ್ ನಾಡಗೌಡ : Madam ಅವರು ನಮ್ಮದು commitment ಇದೆ ಎಂದು ಹೇಳುತ್ತಾರೆ. ಅಲ್ಲಿ ಮಾಡಲು ಅಧಿಕಾರಿಗಳೇ ಇಲ್ಲ. ಸೆಕ್ರೆಟರಿಗಳು ಇಲ್ಲ, ನಾವು letter ಬರೆದಿದ್ದೇವೆ, House ನಲ್ಲಿ ವಾದ ಮಾಡಿದ್ದೇವೆ. ನಿಮ್ಮದೂ commitment ಇದೆ ಅದಕ್ಕೆ ನಾವೇನು ಮಾಡಬೇಕಾಗುತ್ತದೆ? ನಾವು ಹಿಡಿದುಕೊಳ್ಳುವುದಕ್ಕಾಗುತ್ತದೆಯೇ?

ಶ್ರೀ ಕೆ.ಎಂ.ಶಿವಲಿಂಗೇಗೌಡ : ನಮ್ಮ commitment ಇದ್ದರೆ ಕೊಟಿ. ಆ ಸೆಕ್ರಟರಿಯವರಿಗೆ ಕೊಡಿ. ಗ್ರಾಮೀಣ ಪ್ರದೇಶಗಳಲ್ಲಿ ಅವರನ್ನು ವಾಸ ಮಾಡಿಸಿ. ಬಿಲ್ ಪಾವತಿ ಜಾರಿ ಮಾಡುವುದು ಸೆಕ್ರೆಟರಿ ಕೆಲಸ. ಗ್ರಾಮ ಪಂಚಾಯತಿಗಳಲ್ಲಿ ಒಬ್ಬರೇ ಒಬ್ಬರು ಸೆಕ್ರೆಟರಿಯವರು ಇರುವುದಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ : ಗ್ರಾಮ ಪಂಚಾಯತಿಗಳಲ್ಲಿ ಸೆಕ್ರೆಟರಿಗಳನ್ನು ಯಾರು ತುಂಬಬೇಕು? ಸರ್ಕಾರ ತುಂಬಬೇಕಲ್ಲವೇ? ನಾವು ತುಂಬುವುದಕ್ಕಾಗುತ್ತದೆಯೇ? ಹಾಗಾದರೆ ನಮಗೆ ಅಧಿಕಾರವನ್ನು ಕೊಟ್ಟುಬಿಡಿ. ನಾವು ತುಂಬುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಗ್ರಾಮ ಪಂಚಾಯತಿ headquater ನಲ್ಲಿ ಸೆಕ್ರೆಟರಿ ಅವರು ಇದ್ದಾರೆಯೇ? ಉದ್ಯೋಗ ಖಾತ್ರಿ ಯೋಜನೆಯಡಿ ಯಲ್ಲಿ ಹಣ ಹೇಗೆ ಖರ್ಚಾಗುತ್ತದೆ? ಎಲ್ಲಾ NRM ಹಾಕಬೇಕು. ಹೇಗೆ ಹಾಕುತ್ತಾರೆ?

ಅಧ್ಯಕ್ಷರು : ಈ ರೀತಿ ಮಾತನಾಡುವುದು ಸರಿಯಿಲ್ಲ. ಮಾನ್ಯ ಶಿವಲಿಂಗೇಗೌಡರೆ, ಮಾನ್ಯ ನಾಡಗೌಡರೆ ಕುಳಿತುಕೊಳ್ಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಸಲಹೆ ಕೇಳುವುದಕ್ಕೆ ಕೇಳಿದ್ದೀರಿ. ನಾವು ನೀಡಿರುವ ಸಲಹೆಯನ್ನು ಸರ್ಕಾರ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈ ವಿಷಯವನ್ನು ಇಲಲಿಗೇ ಬಿಡಿ.

(ಗೊಂದಲ)

ಶ್ರೀ ಆರ್.ಅಶೋಕ್ : ನೀವೂ ಸರ್ಕಾರವನ್ನು ನಡೆಸಿದ್ದೀರಿ. ನಾವು ಬಂದು ಒಂದು ವರ್ಷವಾಯಿತು.

ಶ್ರೀ ಕೆ.ಎಂ.ಶೀವಲಿಂಗೇಗೌಡ : ನಾವು ಕೇಳುತ್ತಿರುವುದು ಈ ವರ್ಷದ್ದು, ಹಿಂದಿನ ವರ್ಷದ್ದು ಕೇಳುತ್ತಿಲ್ಲ.

(ಗೊಂದಲ)

ಶ್ರೀ ಆರ್.ಅಶೋಕ್ : ಎಷ್ಟು ಗ್ರಾಮ ಪಂಚಾಯತಿಯಲ್ಲಿ ಎಷ್ಟು ಸೆಕ್ರೆಟರಿಗಳು ಇದ್ದರು ಎನ್ನುವುದನ್ನು ಹೇಳಿ ನಮಗೆ ಜ್ಞಾನೋದಯವಾಗುತ್ತದೆ. ಎಲ್ಲಿ ತಪ್ಪು ಮಾಡಿದ್ದೀರಿ, ಅಧಿಕಾರಿಗಳು ಯಾರ್‍ಯಾರು ಇದ್ದರು, ಯಾರು ಭ್ರಷ್ಟರು ಇವೆಲ್ಲಾ ಗೊತ್ತಾಗುತ್ತದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇಲ್ಲ. ಭ್ರಷ್ಟಚಾರ ಎನ್ನುವುದು ಸ್ವಲ್ಪ ತೆರೆಮರೆಯಲ್ಲಿ ನಡೆಯುತ್ತಿತ್ತು. ಈಗ ನಡೆಯುತ್ತಿದೆ ಏನು ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು : ನೋಡಿ ನೀವೆಲ್ಲಾ ಈಗ ಮಾತನಾಡಿದ್ದೀರಿ. ಪದೇ ಪದೇ ಅದನ್ನೇ ಹೇಳುವುದು ಬೇಡ.

ಶ್ರೀ ಸಿದ್ದರಾಮಯ್ಯ : ಭ್ರಷ್ಟಾಚಾರ ಎಲ್ಲಾ ಕಾಲದಲ್ಲಿಯೂ ಇತ್ತು. ನಿಮ್ಮ ಕಾಲದಲ್ಲಿಯೂ ಇದೆ. ಅವರ ಕಾಲದಲ್ಲಿಯೂ ಇತ್ತು. ನಮ್ಮ ಕಾಲದಲ್ಲಿಯೂ ಇತ್ತು.

ಶ್ರೀ ಆರ್.ಅಶೋಕ್ : ಸೆಕ್ರೆಟರಿಗಳೂ ಇಲ್ಲವೆಂದು ಹೇಳಿದರು.

ಶ್ರೀ ಸಿದ್ದರಾಮಯ್ಯ : ಸೆಕ್ರೆಟರಿಗಳು ಹಿಂದೆಯೂ ಭ್ರಷ್ಟರು, ಈಗಲೂ ಭ್ರಷ್ಟರು, ಮುಂದೆಯೂ ಭ್ರಷ್ಟರು.

ಅಧ್ಯಕ್ಷರು : ನೋಡಿ ವಿರೋಧ ಪಕ್ಷದ ನಾಯಕರು Yield ಆಗಿಲ್ಲ. ನೀವು ಪದೇ ಪದೇ ಎದ್ದು ನಿಂತು ಎಲ್ಲರೂ ಮಾತನಾಡಬೇಡಿ.

ಸುಭಾಷ್ ಗುತ್ತೇದಾರ್ : ಇದು ಕೇಂದ್ರ ಸರ್ಕಾರದ ಯೋಜನೆ.

ಶ್ರೀ ಸಿದ್ದರಾಮಯ್ಯ : ಹೌದು, ಇದು ಕೇಂದ್ರ ಸರ್ಕಾರದ ಯೋಜನೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ನಮಗೆ ಅನುಮಾನ ಬರುತ್ತಿದೆ ಅಷ್ಟೆ. ಇದು ಕೇಂದ್ರ ಸರ್ಕಾರದ ಯೋಜನೆ. ಗ್ರಾಮೀಣ ಜನರಿಗೆ ಆರ್ಥಿಕ ಶಕ್ತಿ ಕೊಡುವ ಯೋಜನೆಯಾಗಿದ್ದು, ಹಳ್ಳಿಗಾಡಿನಲ್ಲಿ....

ಶ್ರೀ ಆರ್.ಅಶೋಕ್ : ರೈರವರೆ, ಕೇಂದ್ರ ಸರ್ಕಾರಕ್ಕೂ ನಮ್ಮಿಂದಲೇ ದುಡ್ಡು ಹೋಗುವುದು. ಸೇಲ್ಸ್ ಟ್ಯಾಕ್ಸ್ ಮತ್ತು ಇನ್‌ಕಮ್ ಟ್ಯಾಕ್ಸ್ ಕಟ್ಟುವವರೂ ನಾವೇ.

ಒಬ್ಬ ಮಾನ್ಯ ಸದಸ್ಯರು : ಇವೆಲ್ಲವೂ ನಮಗೆ ಗೊತ್ತಿರಲಿಲ್ಲ ನೋಡಿ.

ಶ್ರೀ ಸಿದ್ದರಾಮಯ್ಯ : ಅಶೋಕ, ರೇವಣ್ಣ ಮಾತನಾಡುವಾಗ ನೀನು ನಗುತ್ತಾ ಕುಳಿತಿದ್ದಿ. ಆದರೆ, ನಾನು ಮಾತನಾಡುವಾಗ ಎದ್ದು ನಿಂತುಕೊಳ್ಳುತ್ತೀಯಲ್ಲ ಏಕೆ?

ಶ್ರೀ ಆರ್.ಅಶೋಕ್ : ರೇವಣ್ಣನವರು ಈಗ ಸದನದಲ್ಲಿಲ್ಲ. ಅವರು ಇದ್ದಿದ್ದರೆ ಹೇಳುತ್ತಿದ್ದೆ. ಅವರು ನಮ್ಮ ಬಂಧುಗಳು. ಬೆಳಿಗ್ಗೆಯೇ ಅವರು ಮಂತ್ರ ಮಾಡಿಸಿಕೊಂಡು, ಜೇಬಿನಲ್ಲಿ ನಿಂಬೇಕಾಯಿ ಇಟ್ಟುಕೊಂಡು ಬಂದಿದ್ದರು. ಅದರಿಂದ ನಾವೂ ಸ್ವಲ್ಪ ಮಂಕಾಗಿ ಕುಳಿತಿದ್ದೆವು. ನೀವೇನೂ ಮಂತ್ರ ಮಾಡಿಸುವುದಿಲ್ಲ. ನಿಮ್ಮ ಹತ್ತಿರ ನಿಂಬೇಕಾಯಿ ಇಲ್ಲ.

ಅಧ್ಯಕ್ಷರು : ಸಿದ್ದರಾಮಯ್ಯನವರೆ, ರೇವಣ್ಣನವರು hypnotism ಮಾಡಿಸಿದ್ದಾರೆಂದು ಕಾಣಿಸುತ್ತದೆ.

ಶ್ರೀ ಸಿದ್ದರಾಮಯ್ಯ : ಅವರು ಏನೇನು ಮಾಡಿಸಿದ್ದಾರೋ ನನಗೆ ಗೊತ್ತಿಲ್ಲ. ಅವರವರಿಗೇ ಗೊತ್ತಿರಬೇಕು, ಕೇಳಿ.

ಶ್ರೀ ಆರ್.ಅಶೋಕ್ : ಅವರು ನಮ್ಮ ಬಂಧುಗಳು, ಅವರ ಮೇಲೆ ಪ್ರೀತಿ. ಅದಕ್ಕೋಸ್ಕರ, 'ರೇವಣ್ಣನವರೆ, ಮಾತನಾಡಿ ಮಾತನಾಡಿ' ಎಂದು ಹೇಳುವುದು. ಬೇರೇನೂ ಇಲ್ಲ.

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರೆ, ನನಗೆ ಈಗ ಗೊತ್ತಾಯಿತು. ರೇವಣ್ಣನವರು ಅದ್ಯಾವುದೋ ವಿಚಾರವೊಂದನ್ನು ಪ್ರಸ್ತಾಪಿಸಿದಾಗ ಆಗ ಅಶೋಕ್‌ರವರು ಏಕೆ ಅಳಲು ಶುರು ಮಾಡಿದರು ಎಂಬ ಈ ಸಂಬಂಧ ನನಗೆ ಗೊತ್ತಿರಲಿಲ್ಲ. ಮನಸ್ಸಿಗೆ ಬಹಳ ನೋವಾಗಿ ಆವತ್ತು ಅತ್ತುಬಿಟ್ಟಿದ್ದರು.

ಶ್ರೀ ಆರ್.ಅಶೋಕ್ : ರೇವಣ್ಣನವರು ಇಷ್ಟೊಂದು ತಯರಾಗಿ ಬಂದಿದ್ದಾರಲ್ಲ ಎಂದು ಆನಂದಭಾಷ್ಪ ಸುರಿಸಿದೆ ಅಷ್ಟೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಏಕೆ ಪ್ರಸ್ತಾಪಿಸುತ್ತಿದ್ದೇನೆಂದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳ ಗಮನವನ್ನು ಏಕೆ ಸೆಳೆಯುತ್ತಿದ್ದೇನೆಂದರೆ, this is avery very important programme. ಈಗ ಬರಗಾಲ ಇದೆ. ಕೆಲಸ ಬೇಕು. ಕೆಲಸ ಮಾಡಿಸಿ ಇದರ ಮೂಲಕವೇ ನೀವು ದುಡ್ಡು ಕೊಡಬೇಕು, ಬೇರೆ ಎಲ್ಲಿಯೂ ನಿಮ್ಮಲ್ಲಿ ದುಡ್ಡಿಲ್ಲ. This is the only grants. ಇವತ್ತು ಬರಗಾಲದಲ್ಲಿ ಏನಾದರೂ ಕೆಲಸ ನಡೆಯುತ್ತಿದ್ದರೆ only with this programme. ಬೇರೆ ಯಾವುದೂ ಇಲ್ಲ. ಈ ವರ್ಷ 115 ಕೋಟಿ ರೂ. ಬಿಡುಗಡೆ

ಮಾಡಿದ್ದೇವೆಂದು ಇವತ್ತು ನಮಗೆ ಲೆಕ್ಕ ಕೊಟ್ಟಿದ್ದೀರಿ. ಆ 115 ಕೋಟಿ ರೂ.ಗಳು ಸಹ ಹಳ್ಳಿಗಾಡಿನಲ್ಲಿ ಕೆಲಸ ಬೇಕಾದವರಿಗೆ ಕೊಡುವ ದುಡ್ಡಲ್ಲ. Not a single paise. ಇವತ್ತು ಹಳ್ಳಿಗಾಡಿನಲ್ಲಿ ಬರಗಾಲದಲ್ಲಿ ಕೆಲಸ ಬೇಕು ಎನ್ನುವುದಾದರೆ, ಅವರೆಲ್ಲರಿಗೂ ಕೆಲಸ ಒದಗಿಸಿ NREGSನಲ್ಲಿ ಹಣ ಕೊಡಬೇಕು. ಇದರ ವಿನಾ ನಿಮ್ಮ ಸರ್ಕಾರದಿಂದ ಒಂದು ರೂಪಾಯಿ ಸಹ ಕೊಟ್ಟಿಲ್ಲ. ಒಂದು ಸಲ 52 ಕೋಟಿ ರೂ. ಕೊಟ್ಟಿದ್ದೀರಿ, ಮತ್ತೊಂದು ಸಲ 45 ಕೋಟಿ ರೂ. ಕೊಟ್ಟಿದ್ದೀರಿ. ಕೇಂದ್ರ ಸರ್ಕಾರದಿಂದ 153 ಕೋಟಿ ರೂ. ಬಂದಿದೆ. ನೀವು ಬಿಡುಗಡೆ ಮಾಡಿರುವುದು 115 ಕೋಟಿ ರೂ. ಅದು ಬಿಟ್ಟರೆ ಒಂದೇ ಒಂದು ಕೆಲಸ ತೆಗೆದುಕೊಂಡಿಲ್ಲ. ಹಾಗಾದರೆ, ನೀವು ರೈತರಿಗೆ ಎಲ್ಲಿ ಉದ್ಯೋಗ ಕೊಟ್ಟಿರಿ? Only from this programme. ನಾನು ಇದನ್ನು ಏಕೆ ಒತ್ತಿ ಹೇಳುತ್ತಿದ್ದೇನೆಂದರೆ, ಈ ಕಾರ್ಯಕ್ರಮ ಯಾವುದೇ ಕಾರಣಕ್ಕೂ ಹಿಂದೆ ಬೀಳಬಾರದು. I can understand. ಏಕೆಂದರೆ, ನಾನು ಇತ್ತೀಚೆಗೆ ನಂಜನಗೂಡಿನಲ್ಲಿ ರಿವ್ಯೂ ಮಾಡಿದೆ. ಇರುವ 39 ಪಂಚಾಯತಿಗಳ ಪೈಕಿ 14 ಪಂಚಾಯಿತಿಗಳಲ್ಲಿ ಸೆಕ್ರೆಟರಿಗಳಿಲ್ಲ. ಮೊದಲು ಪಂಚಾಯತಿಗಳಲ್ಲಿ ಸೆಕ್ರೆಟರಿಗಳ ಹುದ್ದೆಗಳನ್ನು ಭರ್ತಿಗೊಳಿಸಿ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕುರಿತಂತೆ ಚರ್ಚಿಸುವ ಮುನ್ನ you fill-up all these vacant posts. ಇಲಲ್ಲಿದ್ದರೆ, ಈ ಹಣವನ್ನು ನೀವು ಖರ್ಚು ಮಾಡುವುದಕ್ಕಾಗುವುದಿಲ್ಲ. Action Plan ಮಾಡಬೇಕಾಗಿರುವವರು ಅವರೇ ತಾನೇ? ಹಣ ಪಾವತಿಸುವವರು ಮತ್ತು MMR Book ನಿರ್ವಹಿಸುವವರು ಅವರೇ ತಾನೇ? ಅವರೇ ಮುಖ್ಯ.

ಶ್ರೀ ಆರ್. ಅಶೋಕ್ : ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳಿಗೆ ಸಂಬಂಧಿಸಿದಂತೆ ಇಂಟರ್‌ವ್ಯೂ ಎಲ್ಲವೂ ಆಗಿದೆ.

ಶ್ರೀ ಸಿದ್ದರಾಮಯ್ಯ : ಆ ಹುದ್ದೆಗಳನ್ನು ತುಂಬಬೇಕೆಂದು ಹೇಳುತ್ತಿದ್ದೇನಲ್ಲ. Yes, go ahead. ಅವರೆಲ್ಲರನ್ನೂ ನೇಮಕ ಮಾಡಿದ ಮೇಲೆ ನಿಮಗೆ ಥ್ಯಾಂಕ್ಸ್ ಹೇಳುತ್ತೇವೆ. ನೇಮಕ ಮಾಡಿದ್ದೀರಾ?

ಶ್ರೀ ಆರ್.ಅಶೋಕ್ : ಮಾಡಿದ್ದೇವೆ.

ಶರ್ರೀ ಸಿದ್ದರಾಮಯ್ಯ : ಪೋಸ್ಟಿಂಗ್ಸ್ ಆಗಿದೆಯೇ?

ಶ್ರೀ ಸಿ.ಟಿ.ರವಿ : ಅವೆಲ್ಲವೂ ಮುಗಿಯುವುದಕ್ಕೆ ಇನ್ನೂ ಒಂದು ವರ್ಷ ಬೇಕಾಗುತ್ತದೆ.

Sri Siddaramaiah : I don't know the information.

ಶ್ರೀ ಆರ್.ಅಶೋಕ್ : ಕೆಪಿಎಸ್‌ಸಿಯವರು ಕೊಟ್ಟ ಬಳಿಕವೇ ತಾನೇ ಪೋಸ್ಟಿಂಗ್ಸ್ ಮಾಡುವುದು. ನಮ್ಮ ಮಂತ್ರಿಗಳು ಪ್ರಯತ್ನ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : Ok, Ok. ಪ್ರಯತ್ನ ಬೇರೆ ಮತ್ತು ಅಲ್ಲಿ ಕೆಲಸ ಆಗುವುದು ಬೇರೆ.

ಶ್ರೀ ಆರ್.ಅಶೋಕ್ : ಕೆಲಸ ಆಗಿದೆಯಲ್ಲ.

ಶ್ರೀ ಸಿದ್ದರಾಮಯ್ಯ ; ಎಲ್ರಿ ಕೆಲಸ ಆಗಿದೆ? ಆಗಿಲ್ಲವೆಂದು ತಾನೇ ನಾವು ಹೇಳುತ್ತಿರುವುದು.

ಡಾ: ಹೆಚ್.ಸಿ.ಮಹದೇವಪ್ಪ : ಇನ್ನೂ ಆಗಿಲ್ಲ. ಸುಮಾರು 2,500 PDO(Panchayat Development Officer) ಹುದ್ದೆಗಳನ್ನು ನೇರ ನೇಮಕಾತಿ ಮಾಡಬೇಕೆಂದು ಹಿಂದೆ ನಾವು ಇದ್ದಾಗ ಕ್ರಮ ಕೈಗೊಂಡಿದ್ದೆವು. ಆದರೆ, ಇನ್ನೂ ನೇಮಕವಾಗಿಲ್ಲ.

ಶ್ರೀ ಸಿದ್ದರಾಮಯ್ಯ : ಕೆಪಿಎಸ್‌ಸಿಯಲ್ಲಿ ಯಾವಾಗಲೂ ಬಹಳ ನಿಧಾನವಾಗಿಯೇ ಆಗುವುದು.

ಶ್ರೀ ಹೆಚ್.ಡಿ.ರೇವಣ್ಣ : ಸಿದ್ದರಾಮಣ್ಣನವರೆ, PMGSY ನಲ್ಲಿ ನೂರಕ್ಕೆ ನೂರರಷ್ಟು ಕೆಲಸಗಳಾಗುತ್ತಿವೆ. ಆದರೆ, NREGS ನಲ್ಲಿ ಸಿದ್ದರಾಮಯ್ಯನವರು ಹೇಳುವಂತೆ ಕೆಪಿಎಸ್‌ಸಿ ಮೂಲಕ ಗ್ರಾಮ ಪಂಚಾಯತಿಯ ಸುಮಾರು 400 ಕಾರ್ಯದರ್ಶಿಗಳನ್ನು ಭರ್ತಿಗೊಳಿಸುತ್ತಿದ್ದಾರೆ. ಇವರ ಜೊತೆಗೆ ಇಂಜಿನಿಯರ್ ಗಳನ್ನೂ ನೇಮಕ ಮಾಡಿಕೊಳ್ಳಬೇಕು. ಏಕೆಂದರೆ, ಎಸ್ಟಿಮೇಟ್‌ಗಳೆಲ್ಲವನ್ನೂ ಅವರೇ ಮಾಡುವುದರಿಂದ ಆಂಧ್ರಪ್ರದೇಶದಲ್ಲಿ ಇಂಜಿನಿಯರ್‌ಗಳನ್ನು ನೇಮಿಸಿಕೊಂಡಿದ್ದಾರೆ. ದಯಮಾಡಿ ಅಲ್ಲಿಂದ ನೀವು ಮಾಹಿತಿ ತರಿಸಿಕೊಳ್ಳ ಬೇಕು. ಅಲ್ಲಿ 2,000 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ಅದೇ ಮಾದರಿಯಲ್ಲಿ ನಮ್ಮಲ್ಲೂ ಹಣ ಖರ್ಚು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : 2,000 ಕೋಟಿ ರೂ.ಗಳನ್ನು ಖರ್ಚು ಮಾಡಿರುವುದು ನಿಜ. ನಾನು ಅಂಕಿ-ಅಂಶಗಳನ್ನು ತರಿಸಿಕೊಂಡಿದ್ದೇನೆ. ಅವರು ಹೇಗೆ ಖರ್ಚು ಮಾಡಿದ್ದಾರೆಂಬುದರ ವಿವರಗಳನ್ನು ತರಿಸಿಕೊಳ್ಳಿ. ಯಾವ ತರಹ ಆಗಿದೆ? Where we are lacking? ನಾವೆಲ್ಲರೂ ಬೃಹಸ್ಪತಿಗಳಲ್ಲ. ಯಾರಿಗೂ ಬೃಹಸ್ಪತಿಗಳಾಗಲು ಸಾಧ್ಯವಿಲ್ಲ. ಬೇರೆ ರಾಜ್ಯಗಳಲ್ಲಿ ಹೇಗೆ ಕಾರ್ಯಕ್ರಮಗಳು ಜಾರಿಯಾಗುತ್ತಿದೆ? ಇಲ್ಲಿ ಏಕೆ ಅ ರೀತಿ

ಜಾರಿಯಾಗುತ್ತಿಲ್ಲ? ಇಲ್ಲಿ ತೊಂದರೆಗಳೇನಿವೆ? Hindrances ಏನಿವೆ? ಯಾರಿಂದ ನಿಂತು ಹೋಗಿದೆ? ಅನೇಕ ಕಡೆಗಳಲ್ಲಿ ನಮ್ಮ ಶಾಸಕರುಗಳನ್ನು ಕೇಳಿದ್ದೇನೆ. I don't know. ನೀವು ಉತ್ತರಿಸುವಾಗ ಹೇಳಬೇಕು. ಇದರಲ್ಲಿ ಅನೇಕ ಎಂಎಲ್ಎ ಗಳು ಭಾಗಿಯಾಗಿಲ್ಲ. ಚುನಾಯಿತ ಪ್ರತಿನಿಧಿಗಳು ಇದರಲ್ಲಿ ಭಾಗಿಯಾಗಿಲ್ಲ. Only Panchayat Chairman, Secretary, EO and CEO ಇಷ್ಟೇ ಇರುವುದು. ನಾನು ಮೊನ್ನೆ ಎರಡು ಕಡೆಗಳಲ್ಲಿ ರಿವ್ಯೂ ಮಾಡಿದೆ. ನನ್ನ ಮತಕ್ಷೇತ್ರಕ್ಕೆ ಮೂರು ತಾಲ್ಲೂಕುಗಳು ಬರುತ್ತವೆ. ಮೈಸೂರು, ಟಿ.ನರಸೀಪುರ ಮತ್ತು ನಂಜನಗೂಡು ತಾಲ್ಲೂಕುಗಳು. ರಿವ್ಯೂ ಮಾಡಿದ ಬಳಿಕ ನನಗೆ ಇದರ ಚಿತ್ರಣ ಗೊತ್ತಾಯಿತು. ಅಲ್ಲಿಯವರೆಗೂ ಏನೋ ನಡೆಯುತ್ತಿದೆ ಎಂದು ತಿಳಿದಿದ್ದೆ, ಅಲ್ಲಿಗೆ ಹೋಗಿ ರಿವ್ಯೂ ಮಾಡಿದ ಬಳಿಕವೇ ಗೊತ್ತಾದದ್ದು. ನಮಗೆ ಕೇಂದ್ರ ಸರ್ಕಾರ ದುಡ್ಡು ಕೊಡುತ್ತದೆ. ನಾವೇಕೆ ಹಣ ಖರ್ಚು ಮಾಡಬಾರದು? ಹಣ ಖರ್ಚು ಮಾಡದೇ ನಮ್ಮ ರಾಜ್ಯವೇಕೆ ಹಿಂದೆ ಬೀಳಬೇಕು? You should have that commitment. This is a verey very important programme.

From the point of view, Rural Development ಇವತ್ತು ಬರಗಾಲ ಬೇರೆ ಇದೆ. ಇಂತಹ ಸನ್ನಿವೇಶದಲ್ಲಿ ಯುದ್ಧದೋಪಾದಿಯಲ್ಲಿ ಈ ಕಾರ್ಯಕ್ರಮ ಜಾರಿಯಾಗಬೇಕು. ಇವರ (ಜಯಚಂದ್ರ) ಮತಕ್ಷೇತ್ರದಲ್ಲಿ ಕೇಳಿದೆ. ಇವರು ಸ್ವತಃ ಆಸಕ್ತಿ ತೆಗೆದುಕೊಂಡಿದ್ದಾರೆ. ಒಂದೇ ತಿಂಗಳಿನಲ್ಲಿ ಐದು ಕೋಟಿ ರೂ.ಗಳಷ್ಟು ಹಣ ಖರ್ಚು ಮಾಡಿಸಿದ್ದಾರೆ. Because, he has taken personal interest. How it is possible in sira Taluk? Why not in other taluks? Since he has taken interest, ಹಣ ಖರ್ಚಾಗಿದೆ. ಅದೇ ರೀತಿ ಬೇರೆ ತಾಲ್ಲೂಕುಗಳಲ್ಲೂ ಹಣ ಖರ್ಚು ಮಾಡಲು ಸಾಧ್ಯವಾಗುತ್ತದೆ. You call all MLAs, CEOs, EOs, Grama Panchayat Secretaries, ಇವರೆಲ್ಲರಿಗೂ ಟಾರ್ಗೆಟ್ ನಿಗದಿಪಡಿಸಿ. ಟಾರ್ಗೆಟ್ ಪೂರ್ತಿಗೊಳಿಸಲಿಲ್ಲವೆಂದರೆ ಸಸ್ಪೆಂಡ್ ಮಾಡುತ್ತೇವೆಂದು, ಮನೆಗೆ ಕಳುಹಿಸುತ್ತೇವೆಂದು ಹೇಳಿ. ಏಕೆ ಇದನ್ನು ನೀವು ಮಾಡುವುದಿಲ್ಲ? You are the Government. Chief Minister is interested in this programme. ಇದನ್ನು ಮಾಡಿ. ಇದನ್ನು ಮಾಡದೇ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ನಮಗೆ ಕಳಕಳಿ ಇದೆ, ಚರ್ಚೆ ಮಾಡಬೇಕೆಂದರೆ

ಅದಕ್ಕೆ ಅಷ್ಟು ಮಹತ್ವ ಬರುವುದಿಲ್ಲ. This is my point. ಆಗ ಜನರು ಇದನ್ನು ಅನುಮಾನಾಸ್ಪದವಾಗಿ ನೋಡಲು ಶುರು ಮಾಡುತ್ತಾರೆ. ನಮ್ಮ bonafides ಅಷ್ಟೇ ಇಲ್ಲಿ ಚರ್ಚೆ ಮಾಡಬಹುದಾಗಿದೆ.

ಈ ರೀತಿ ಕುಡಿಯುವ ನೀರಿನ ವಿಚಾರದಲ್ಲಿ rural development ನಲ್ಲೂ ಅದೇ ರೀತಿಯಾಗಿ ಆಗಿದೆ. ಅನೇಕ central government, State Government Programme ಗಳು Centrally sponsored programme, Centrally assisted programme ನಲ್ಲೂ ಹೀಗೆ ಆಗುತ್ತಿವೆ. 2008–09ನೇ ಸಾಲಿನ ಆಯವ್ಯಯದಲ್ಲಿ ಹಣ 173 ಕೋಟಿ ರೂಪಾಯಿಗಳು 12th finance commission ನಲ್ಲಿ ಬಂದಿದೆ. ಈ ದುಡ್ಡು ಕೂಡ 2007–08ರ ಕಾಮಗಾರಿಗಳಿಗೆ ಖರ್ಚು ಮಾಡಿದ್ದೀರಿ. 2008–09ನೇ ಸಾಲಿಗೆ ಒಂದು ರೂಪಾಯಿಯೂ ಬಿಡುಗಡೆ ಆಗಿಲ್ಲ. ಈಗ ಬಿಡುಗಡೆ ಮಾಡುತ್ತಾರೇನೋ ಗೊತ್ತಿಲ್ಲ. 2008–09ನೇ ಸಾಲಿಗೆ no work, ಒಂದು ರೂ. ಬಿಡುಗಡೆ ಆಗಿಲ್ಲ. 2008–09ಮೇ ಸಾಲಿನ ಜಿಲ್ಲಾ ಪಂಚಾಯತ್ ನ ಕಾಮಗಾರಿಗಳಿಗೆ ಆರ್ಥಿಕ ಇಲಾಖೆ ಇನ್ನೂ ಹಣ ಬಿಡುಗಡೆ ಮಾಡಿಲ್ಲ. 2009–10ನೇ ಸಾಲಿಗೆ ಇನ್ನು ಮಾರ್ಗಸೂಚಿ ಆದೇಶವನ್ನು ಹೊರಡಿಸಬೇಕಾಗಿದೆ. 2008–09ನೇ ಸಾಲಿಗೆ ಹಣ ಬಿಡುಗಡೆ ಆಗಿಲ್ಲ, 2009–10ನೇ ಸಾಲಿಗೆ ಇನ್ನೂ ಮಾರ್ಗಸೂಚಿ ಆದೇಶವನ್ನು ಹೊರಡಿಸಬೇಕಾಗಿದೆ. ಇನ್ನು ವಿದರ್ಭ ಪ್ಯಾಕೇಜ್‌ನಲ್ಲಿ ಕೇಂದ್ರ ಸರ್ಕಾರ ಆರು ಜಿಲ್ಲೆಗಳಿಗೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದು, ಸುಮಾರು 31 ಜಿಲ್ಲೆಗಳಿಗೆ 16,978 ಕೋಟಿ 69 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಅದರಲ್ಲಿ ನಮ್ಮ ರಾಜ್ಯಕ್ಕೆ 2,689 ಕೋಟಿ ರೂಪಾಯಿಗಳು ಕೊಟ್ಟಿದ್ದು, ಅದರಲ್ಲಿ 1,568 ಕೋಟಿ ರೂಪಾಯಿಗಳು ಸಬ್ಸಿಡಿ, 1,120 ಕೋಟಿ ಕಡಿಮೆ ದರದಲ್ಲಿ ಸಾಲ ಕೊಡಲು ಕೊಟ್ಟಿದ್ದು. ಈ ಹಣವನ್ನು ಮೂರು ವರ್ಷಗಳಲ್ಲಿ ಖರ್ಚು ಮಾಡಬೇಕಾಗಿತ್ತು. ಇದಕ್ಕೆ Indira Gandhi Institute of Development Researchನ ಡೈರೆಕ್ಟರ್ ಆದ ಶ್ರೀ ಆರ್. ರಾಧಾಕೃಷ್ಣ ರವರು ಒಂದು observation ಮಾಡಿದ್ದಾರೆ. The observation is ಈ ಯೋಜನೆಯ ಪ್ರಗತಿಯನ್ನು ನೋಡಿ mid-term evalution ಮಾಡಿದ ಮೇಲೆ The Karnataka's performance is poor and credit needs of farmers not met ಎಂದು certificate ಕೊಟ್ಟಿದ್ದಾರೆ. ಇನ್ನು ತೋಟಗಾರಿಕೆ

ಮಿಷನ್ ಇದಕ್ಕೆ 100% Government of India ದ assistance ಇದೆ. ನಾನು ಹೇಳುತ್ತಿರುವಂಥ ತೋಟಗಾರಿಕೆ ಮಿಷನ್ programme ಏನು ಇದೆ, ಇದು national programme ಆಗಿದೆ. ಕೇಂದ್ರ ಸರ್ಕಾರವು Horticulture mission ಗೂ ಕೂಡ ಏಳು ವರ್ಷಗಳವರೆಗೂ 100 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದೆ. ಅದು ಏಕೆಂದರೆ ಹಣ್ಣು, ಹಂಪಲು, ಹೂವು ಇವೆಲ್ಲವನ್ನು ಬೆಳೆದು ಅದನ್ನು food processing ಮಾಡಿ, ವಿದೇಶಗಳಿಗೆ ಅದನ್ನು export ಮಾಡಿ, ನೀವು value add ಮಾಡಬೇಕು. ಇದನ್ನು ಬೆಳೆದ ರೈತನಿಗೆ ಉಪಯೋಗವಾಗಬೇಕು. ಅವರಿಗೆ ಹೆಚ್ಚು ಆದಾಯ ಬರಬೇಕೆಂದು ಈ programme ಅನ್ನು ಮಾಡಿದ್ದಾರೆ. ಈ programme ನಲ್ಲೂ ಕೂಡ ನೀವು serious ಆಗಿ implement ಮಾಡದೇ ಹೋದರೆ ಏನೆಂದು ಕರೆಯಬೇಕು? 100% centrally sponsored scheme. ಮತ್ತೆ ಗ್ರಾಮೀಣಾಭಿವೃದ್ಧಿಯಾಗಬೇಕೆಂದರೆ ಹೇಗೆ ಆಗುತ್ತದೆ? ಈಗ ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಆಗಬೇಕೆಂದು ನಾವು ಹೇಳುತ್ತೇವೆ, ನೀವು ಎಲ್ಲಾ ಹೇಳಿದ್ದೀರಿ. ನಾವು ಡಾ: ಡಿ.ಎಂ.ನಂಜುಂಡಪ್ಪನವರ ವರದಿ ಬಗ್ಗೆ ವಿಧಾನಸಭೆಯಲ್ಲಿ, ಹೊರಗಡೆ ಎಲ್ಲಾ ಕಡೆಗಳಲ್ಲೂ ಮಾತನಾಡಿದ್ದೇವೆ. What is your sincerity in this? What is your commitment? ನಾನು ಎರಡ್ಮೂರು ಬಾರಿ ಬಜೆಟ್‌ನಲ್ಲೂ ಹೇಳಿದ್ದೇನೆ. ಇವರ ಪ್ರಾಸ್ತಾವಿಕ ನುಡಿಯಲ್ಲಿ ಡಾ: ನಂಜುಂಡಪ್ಪನವರ ವರದಿಯಂತೆ 116 ತಾಲ್ಲೂಕುಗಳಿಗೆ ಪ್ರಸ್ತಾಪ ಮಾಡಿದ್ದಾರೆ. ನಾವು Regional imbalance ತೆಗೆದು ಹಾಕಬೇಕು, ಅದಕ್ಕೋಸ್ಕರ ಡಾ: ನಂಜುಂಡಪ್ಪನವರ ವರದಿಯನ್ನು ಜಾರಿ ಮಾಡುವುದಕ್ಕೆ ನಾವು ಬದ್ಧರಾಗಿದ್ದೇವೆಂದು, ಅದಕ್ಕೆ ಮಾನ್ಯ ಶಶಿಲ್ ನಮೋಶಿ, ಎಂ.ಎಲ್.ಸಿ. ಅವರನ್ನು ಛೇರ್ಮನ್ ಮಾಡಿದ್ದಾರೆ. But, why it has not implemented properly? ನೀವು 2007–08, 2008–09 ರಲ್ಲಿ ಹೈದರಾಬಾದ್ ಅಭಿವೃದ್ಧಿ ಮಂಡಳಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಹಿಂದೆ ವರ್ಷಕ್ಕೆ ಅದಕ್ಕೆ 60 ರಿಂದ 80 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇವರು ಈಗ ಈ ವರ್ಷಕ್ಕೆ 21 ಕೋಟಿ ರೂಪಾಯಿಗಳನ್ನು ಕೊಟ್ಟಿರಬಹುದು.

ಶ್ರೀ ವೆಂಕಟರಾವ್ ನಾಡಗೌಡ : ಇಲ್ಲಾ 13 ಕೋಟಿ ರೂಪಾಯಿಗಳಷ್ಟೇ ಕೊಟ್ಟಿರುವುದು.

ಶ್ರೀ ಸಿದ್ದರಾಮಯ್ಯ : ಇದರ ಜೊತೆಗೆ ಪುನಃ additional grants ಕೊಟ್ಟಿದ್ದಾರಂತೆ.. ..

ಶ್ರೀ ವೆಂಕಟರಾವ್ ನಾಡಗೌಡ : ಯಾವುದೇ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳಬಾರದೆಂದು ಹೇಳಿದ್ದಾರೆ. ನಾವು ಅಲ್ಲಿಗೆ ಹೋಗಿ ಚಹಾ ಕುಡಿದು ವಾಪಸ್ಸು ಬರುವುದಾಗಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇದೇ ರೀತಿ ಸುವರ್ಣ ಗ್ರಾಮವೆಂದು ಪ್ರಾರಂಭ ಮಾಡಿದರು. 1,204 ಹಳ್ಳಿಗಳು 2006–07, 2007–08, 2008–09 ಮತ್ತು 2009–2010 ಅಂದರೆ ಈಗ ಅರ್ಧ ವರ್ಷದಲ್ಲಿ ಇದ್ದೇವೆ. ಇನ್ನೂ ಈ 1,204 ಹಳ್ಳಿಗಳೇ ಮುಗಿದಿಲ್ಲ. ಅದಕ್ಕೂ ಅರ್ಧಂಬರ್ಧ ಹಣವನ್ನು ನೀಡಿರುವುದು. ಒಂದು ಊರಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಘೋಷಣೆ ಮಾಡಿದರು. ಅಂದರೆ ಕನಿಷ್ಠ 1,204 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಅದರಲ್ಲಿ 700 ಚಿಲ್ಲರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ 600 ಕೋಟಿ ರೂಪಾಯಿಗಳನ್ನಷ್ಟೇ ಖರ್ಚು ಮಾಡಿರುವುದು. ಇನ್ನು ಅನೇಕ ಊರುಗಳಿಗೆ ಹಣವನ್ನು ಕೊಟ್ಟಿಲ್ಲ. 2008–09ರಲ್ಲಿ ಒಂದೂ ಹಳ್ಳಿಯನ್ನು ತೆಗೆದುಕೊಂಡಿಲ್ಲ. ಇವರು 222 ಹಳ್ಳಿಗಳನ್ನು ತೆಗೆದುಕೊಳ್ಳುತ್ತೇವೆಂದು ಕಳೆದ ವರ್ಷ ಗುಲ್ಬರ್ಗಾದಲ್ಲಿ ಘೋಷಣೆ ಮಾಡಿದರು. ಅದಕ್ಕೆ ಒಂದು ರೂಪಾಯಿಯನ್ನು ಕೊಟ್ಟಿಲ್ಲ. ಈಗ ಮತ್ತೆ 200 ಹಳ್ಳಿಗಳನ್ನು ಸೇರಿಸಿಕೊಳ್ಳುತ್ತೇವೆಂದು ಈ ವರ್ಷ ಗುಲ್ಬರ್ಗಾದಲ್ಲಿ ಸಚಿವ ಸಂಪುಟ ಸಭೆಯನ್ನು ನಡೆಸಿ ಹೇಳಿದರು. ಅದಕ್ಕೂ ಒಂದೂ ರೂಪಾಯಿಯನ್ನು ಕೊಟ್ಟಿಲ್ಲ. ಈ ವರ್ಷ ಮತ್ತೆ 1,400 ಚಿಲ್ಲರೆ ಹಳ್ಳಿಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ನಾವೆಲ್ಲರೂ ಪತ್ರವನ್ನು ಕೊಟ್ಟಿದ್ದೇವೆ. ಅದಕ್ಕೆ ಇನ್ನೂ ಒಂದು ರೂಪಾಯಿಯನ್ನು ಕೊಟ್ಟಿಲ್ಲ. ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಯಾವ ಹಳ್ಳಿಗಳಿಗೂ ಕೆಲಸ ಮಾಡಬೇಡಿಯೆಂದು ಆದೇಶ ಹೋಗಿದೆ. It is a fact. ನೀವು ಜಿಲ್ಲಾ ಪಂಚಾಯತ್‌ನವರನ್ನು ಕೇಳಿ, ನಮ್ಮ ಜಿಲ್ಲಾ ಪಂಚಾಯತಿಯ ಮೆಂಬರ್‌ಗಳು ಆ ರೀತಿ ಹೇಳಿದರು. ಅದಕ್ಕೆ ಏನೂ ಕೊಟ್ಟಿಲ್ಲ. ಈ ರೀತಿಯಾಗಿ ಆಗಿರುವಂಥದ್ದನ್ನು ನಾನು ಸಾಕಷ್ಟು ಹೇಳಬಹುದು. ಆ ರೀತಿ ಹೇಳಿದರೆ ಟೀಕೆ ಮಾಡುತ್ತೀರಾ ಎಂದು ಹೇಳುತ್ತೀರಿ. ನಾನು ಈ ಸಂದರ್ಭದಲ್ಲಿ ಏಕೆ ಪ್ರಸ್ತಾಪ ಮಾಡುತ್ತೇನೆಂದರೆ,

ನಮಗೆ ರಾಜಕೀಯ ಇಚ್ಛಾಸಕ್ತಿ ಇಲ್ಲದೇ ಹೋದರೆ ಗ್ರಾಮೀಣಾಭಿವೃದ್ಧಿಯೂ ಆಗುವುದಿಲ್ಲ, ವ್ಯವಸಾಯವೂ ಅಭಿವೃದ್ಧಿಯಾಗುವುದಿಲ್ಲ. ನಮಗೆ ಮೊದಲು ರಾಜಕೀಯ ಇಚ್ಛಾಸಕ್ತಿ ಬೇಕು, ಬದ್ಧತೆ ಬೇಕು, ಪ್ರಾಮಾಣಿಕತೆ ಬೇಕು, ಪ್ರಾಮಾಣಿಕವಾದಂಥ ಕಳಕಳಿ ಬೇಕು. ಅದು ಇಲ್ಲದೇ ಹೋದರೆ All this exercise will be a futile exercise. So that is my point. ಅಲ್ಲದೇ ಹೋದರೆ ನಾನು ಇದರ ಬಗ್ಗೆ ಇನ್ನೂ ದೀರ್ಘವಾಗಿ ಹೇಳಬೇಕೆಂದರೆ ಬೇಕಾದಷ್ಟು ವಿಷಯಗಳು ಇವೆ. ಇನ್ನು Rural Development, ಬೇರೆ ಬೇರೆ ಇಲಾಖೆಗಳದ್ದು ಇವೆ. ನಾನು ಅದೆಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ sample ಗೆ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ.

(2-30 PM)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನೀರಾವರಿ ಇಲಾಖೆ ಬಗ್ಗೆ ಹೇಳುವುದಾದರೆ, ಆ ಬಗ್ಗೆ ಮಾನ್ಯ ಕೃಷ್ಣ ಬೈರೇಗೌಡರವರು ಪ್ರಸ್ತಾಪಿಸಿದರು. ನಾವು food production double ಮಾಡಬೇಕು. ನೀರಾವರಿ ಪ್ರದೇಶ ಹೆಚ್ಚು ಮಾಡದೇ, Irrigation potential ಹೆಚ್ಚು ಮಾಡದೇ, How can we double the food production? ಅಂತರ್ಜಲ ಬಳಸಿಕೊಳ್ಳತಕ್ಕಂಥ ಪ್ರಯತ್ನ, canal ನೀರು ಬಳಸಿಕೊಳ್ಳತಕ್ಕಂಥ ಪ್ರಯತ್ನ, ಕೆರೆಗಳ ನೀರನ್ನು ಉಪಯೋಗಿಸಿಕೊಳ್ಳತಕ್ಕಂಥ ಪ್ರಯತ್ನ ಮಾಡಬೇಕಾಗುತ್ತದೆ. ಅವುಗಳಿಗೆ ಬೇಕಾದಂತಹ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಿಕೊಂಡು, ಅವನ್ನು ಮಾಡದೇ ಹೋದರೆ ಕಷ್ಟವಾಗುತ್ತದೆ. Since First Five Year Plan, ನಮ್ಮ ರಾಜ್ಯದಲ್ಲಿ ಸುಮಾರು 116 projectಗಳಿವೆ. ಎಷ್ಟೋ ವರ್ಷಗಳ ಹಿಂದೆ ಪ್ರಾರಂಭವಾದ projectಗಳೂ ಸಹ ಅದರಲ್ಲಿ ಸೇರಿವೆ. 116 projectಗಳಲ್ಲಿ ಇವತ್ತಿನವರೆಗೆ 42 projects ಮಾತ್ರ Complete ಆಗಿವೆ. ಬೇರೆ ಬೇರೆ ಹಂತಗಳಲ್ಲಿ ಇರತಕ್ಕ 55 projectಗಳಿವೆ. 19 ಹೊಸ projectಗಳಿವೆ. ಇಲ್ಲಿಯವರೆಗೆ ನೀರಾವರಿಗೆ ನಾವು ಖರ್ಚು ಮಾಡಿರುವ ಹಣ ಬಹಳ ಕಡಿಮೆ. Minor, Medium and Major irrigationನಿಂದ ಒಟ್ಟು ಸುಮಾರು 45 ಲಕ್ಷ ಹೆಕ್ಟೇರ್‌ಗಳಷ್ಟು ನೀರಾವರಿ ಮಾಡಬಹುದೆಂದು ನಾವು ಅಂದಾಜು ಮಾಡಿಕೊಂಡಿದ್ದೇವೆ. ಆದರೆ Minor, Medium and Major irrigation ಎಲ್ಲವನ್ನೂ ಸೇರಿಸಿ ಇವತ್ತಿನವರೆಗೆ ಸುಮಾರು 31 ಲಕ್ಷ ಹೆಕ್ಟೇರ್‌ಗಳಷ್ಟು ಮಾತ್ರ

ನೀರಾವರಿಯಾಗಿದೆ. ಈ Minor, Medium and Major irrigationಗಾಗಿ ಇಲ್ಲಿಯವರೆಗೆ ನಾವು ಖರ್ಚು ಮಾಡಿರತಕ್ಕ ಹಣ 30 ಸಾವಿರ ಕೋಟಿ ರೂ.ಗಳಾಗಿದೆ. ಈಗಿರುವ on going projects complete ಮಾಡಲು ಕನಿಷ್ಠ 40–50 ಸಾವಿರ ಕೋಟಿ ರೂ.ಗಳಾದರೂ ನಮಗೆ ಬೇಕಾಗುತ್ತದೆ. ಇವತ್ತು ವಿಶೇಷ ಚರ್ಚೆಗೆ ಪ್ರಸ್ತಾಪಿಸಿದ್ದೀರಲ್ಲಾ, ಈಗ ನೀವು irrigationಗೆ ಹೆಚ್ಚು ದುಡ್ಡು ಕೊಟ್ಟುಬಿಡುತ್ತೀರಾ? Where is the money? Supplementary estimatesನಲ್ಲಿ ಸೇರಿಸುತ್ತೇವೆಂದು ನೀವು ಹೇಳಬಹುದು. Supplementary estimates ನಲ್ಲಿ ಸೇರಿಸಿದರೂ ಕೂಡ, either additional resources ಆಗಬೇಕು, ARM ಇರಬೇಕು, ಇಲ್ಲವೇ surplus ನೀವು savings ಮಾಡಬೇಕು. ಇಲ್ಲವೇ ಈಗಿರತಕ್ಕಂಥ on going grants ಗಳನ್ನು cut ಮಾಡಬೇಕು. ಅದನ್ನು ಬಿಟ್ಟರೆ ಬೇರೇನು ಮಾಡುವುದಕ್ಕಾ ಗುತ್ತದೆ? ಎಲ್ಲಿಂದ ದುಡ್ಡು ತೆಗೆದುಕೊಂಡು ಬರುತ್ತೀರಿ? ಇದ್ಯಾವುದೂ ಆಗದಿದ್ದರೆ ಸಾಲ ತೆಗೆದುಕೊಂಡು ಬರಬೇಕು. ಹೀಗಿರುವಾಗ ಈಗ ಏಕೆ ಈ ರೀತಿಯ ಚರ್ಚೆ? ನಿಮ್ಮಲ್ಲಿ ದುಡ್ಡು ಎಲ್ಲಿದೆ? ದುಡ್ಡೇ ಇಲ್ಲ, ಇನ್ನು ನೀವು ಮಾಡುವುದು ಹೇಗೆ? Irrigationಗೆ ನೀವು ಬಜೆಟ್‌ನಲ್ಲಿ ಎಷ್ಟು ಕೊಟ್ಟಿದ್ದೀರಿ? 2002–03 ರಲ್ಲಿ allocation for Irrigation out of plan size was 34%. ಆಮೇಲೆ ಅದು 31% ಗೆ ಬಂತು. 2004–05ರಲ್ಲಿ ಅದು 24%ಗೆ ಬಂತು. ತದನಂತರ ಅದು 29%ಕ್ಕೆ ಬಂತು. ನೀವು ಬಂದ ಮೇಲೆ, ಅದು ಎಲ್ಲಿಗೆ ಇಳಿದಿದೆ ಎಂದರೆ, 2007–08ರಲ್ಲಿ ಅದು 17%ಗೆ ಬಂದಿದೆ. 2008–09ನೇ ಸಾಲಿಗೆ 13.4%, 2009–10ನೇ ಸಾಲಿಗೆ 13.5%ಗೆ ಬಂದಿದೆ. How do you manage? ಅವತ್ತಿನ plan size ಬೇರೆ, ಇವತ್ತಿನ plan size ಬೇರೆ. ಇವತ್ತಿನ plan size 29,500 ಸಾವಿರ ಕೋಟಿ ರೂ.ಗಳು. 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಈಗಾಗಲೇ ಮೂರನೇ ವರ್ಷದಲ್ಲಿ ನಾವಿದ್ದೇವೆ. ಈ ಮೂರು ವರ್ಷಗಳಲ್ಲಿ ನಾವು ಎಷ್ಟು ಖರ್ಚು ಮಾಡಿದ್ದೇವೆಂದು ನೋಡಬೇಕು. Actually Planning Commissionನವರು ಕನಿಷ್ಠ 26,000 ಸಾವಿರ ಕೋಟಿ ರೂ.ಗಳನ್ನು 11th plan ನಲ್ಲಿ ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಆದರೆ ನೀವು 3 ಸಾವಿರ ಕೋಟಿ ರೂ.ಗಳನ್ನು ಇಡುತ್ತೀರಿ, ಅದರಲ್ಲಿ ಕೇವಲ 2 ಸಾವಿರ ಕೋಟಿ ರೂ.ಗಳನ್ನು ಮಾತ್ರ ಖರ್ಚು

ಮಾಡುತ್ತೀರಿ. ಹೋದ ವರ್ಷ ಒಂದು ಸಾವಿರ ಕೋಟಿ ರೂ.ಗಳನ್ನು ನೀವು ಖರ್ಚು ಮಾಡಲಿಕ್ಕೆ ಆಗಲೇ ಇಲ್ಲ. ನಾನು ಏಕೆ ಹೇಳುತ್ತಿದ್ದೇನೆ ಎಂದರೆ, irrigation potential ಅನ್ನು ನೀವು ಹೆಚ್ಚು ಮಾಡಿಕೊಳ್ಳದೇ ಹೋದರೆ, How can you grow more rice, wheat and Sugar cane,? ರಾಗಿ, ಶೇಂಗಾ, ಸೋಯಾಬೀನ್, ಜೋಳ ಇವುಗಳನ್ನೆಲ್ಲಾ ನೀವು ಹೇಗೆ ಹೆಚ್ಚಾಗಿ ಬೆಳೆಯುತ್ತೀರಿ? ಇವೆಲ್ಲಾ food grains ಹೆಚ್ಚಾಗುವುದು ಹೇಗೆ? ಇವೆಲ್ಲಾ ಎಲ್ಲಿ ಹೆಚ್ಚು ಆಗುತ್ತದೆ? ನಾನು ಅವತ್ತೂ ಸಹ ಬಜೆಟ್ ಮೇಲೆ ಭಾಷಣ ಮಾಡುವಾಗ ಇದನ್ನು ಹೇಳಿದ್ದೆ. ಐದು ವರ್ಷಗಳಲ್ಲಿ ಇದಕ್ಕೆ time bound programme ಹಾಕಿಕೊಂಡು ಜಾರಿಗೊಳಿಸಬೇಕೆಂದು ಹೇಳಿದ್ದೆ. ಒಂದು ವರ್ಷಕ್ಕೆ 5 ಸಾವಿರ ಕೋಟಿ ರೂ.ಗಳಾಗಲಿ ಅಥವಾ 6 ಸಾವಿರ ಕೋಟಿ ರೂ.ಗಳಾಗಲಿ ಅಥವಾ 7 ಸಾವಿರ ಕೋಟಿ ರೂ.ಗಳನ್ನಾಗಲಿ ಮೀಸಲಾಗಿಟ್ಟು ನೀವು ಇದನ್ನು ಮುಗಿಸಿದರೆ ಮಾತ್ರ ನಿಮಗೆ ಕೃಷಿ ಬಗ್ಗೆ ಬದ್ಧತೆ ಇದೆ ಎಂದು ಅರ್ಥವಾಗುತ್ತದೆ. ಈಗ ನಮಗಿಂತ ದೊಡ್ಡ ರಾಜ್ಯವಾದ ಆಂಧ್ರದವರು ಒಂದು ವರ್ಷಕ್ಕೆ both plan and non plan ಸೇರಿಸಿ ಒಟ್ಟು 20–21 ಸಾವಿರ ಕೋಟಿ ರೂ.ಗಳನ್ನು ಮೀಸಲಾಗಿಟ್ಟಿದ್ದಾರೆ. ನಮ್ಮಲ್ಲಿ non plan ನಲ್ಲೇನು ಬಹಳ ಜಾಸ್ತಿ ದುಡ್ಡಿಲ್ಲ. planನಲ್ಲೇ ಎಲ್ಲಾ ಆಗಬೇಕು. ಅದೊಂದರಲ್ಲೇ ಎಲ್ಲಾ ಆಗಬೇಕು. ಅದನ್ನು ಬಿಟ್ಟರೆ ಬೇರೇನೂ ಇಲ್ಲ. ನೀವು ಹೆಚ್ಚಾಗಿ plan ನಲ್ಲಿ ದುಡ್ಡಿಡಬೇಕು. 29,500 ಕೋಟಿ ರೂ.ಗಳಲ್ಲಿ ನೀವು 13% ಇಟ್ಟರೆ, how can you complete on going projects? How long you will take time? How long they would go? ಅದು ಆಗಲಿಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿಯೇ ನಾನು ಹೇಳಿದೆ. ನೀವು ಇದನ್ನು ಮಾಡದೇ ಹೋದರೆ, ಕೃಷಿ ಅಭಿವೃದ್ಧಿ ಆಗುವುದಿಲ್ಲ, foor production ಹೆಚ್ಚಾಗುವುದಿಲ್ಲ. ನಮ್ಮಲ್ಲಿ ಏನಾಗಿದೆ ಎಂದರೆ, ಅದು ನಿಮಗೂ ಗೊತ್ತಿರಬೇಕು. ನಮ್ಮ irrigation system ನಲ್ಲಿ water management is very bad. Not that, other States ಎಲ್ಲಾ ಬಹಳ ಚೆನ್ನಾಗಿವೆ ಎಂದು ನಾನು ಹೇಳುವುದಿಲ್ಲ. Water management is very bad. ಒಂದು ಅಂದಾಜಿನ ಪ್ರಕಾರ irrigation efficiency in Karnataka is 38-40%. Ground water ನಲ್ಲಿ ಇದು 60% ಇದೆ. ನಿಮ್ಮ canal irrigation ನಲ್ಲಿ irrigation efficiency 38-40%

ಮಾತ್ರ ಇದೆ. 40 ಯಿಂದ 60% ಗೆ, 60% ಯಿಂದ 70% ಗೆ irrigation efficiency ಯನ್ನು ನೀವು improve ಮಾಡದೇ ಹೋದರೆ ಕಷ್ಟವಾಗುತ್ತದೆ. ನಮಗೆ ಇರತಕ್ಕ ಜಮೀನು ಹೆಚ್ಚೇನೂ ಆಗುವುದಿಲ್ಲ, ಇನ್ನೂ ಕಡಿಮೆಯಾಗುತ್ತಿದೆ, as a matter of fact. ಅದಕ್ಕಾಗಿಯೇ ಎಲ್ಲಾ agricultural policies ನಲ್ಲಿ ಯಾವ ಕಾರಣಕ್ಕೂ ಕೂಡ ವ್ಯವಸಾಯಕ್ಕೆ ಯೋಗ್ಯವಾದಂತಹ fertile land ಅನ್ನು Special Economic Zone ಗಾಗಲಿ ಅಥವಾ Industries ಗಳಿಗಾಗಲಿ ಕೊಡಬಾರದು ಎಂದು ಮಾಡಿದ್ದಾರೆ. ಏಕೆಂದರೆ, ನಮಗೆ ವ್ಯವಸಾಯಕ್ಕೆ ಯೋಗ್ಯವಾದಂತಹ ಜಮೀನು ಕಳೆದುಕೊಳ್ಳಬಾರದು. ಬೇರೆ ಬಂಜರು ಭೂಮಿ ಇದ್ದರೆ ಕೊಡಿ. ವ್ಯವಸಾಯಕ್ಕೆ ಯೋಗ್ಯವಿಲ್ಲದೇ ಇರತಕ್ಕ ಭೂಮಿ ಇದ್ದರೆ ಕೊಡಿ. Water conservation ಇದೆಯಲ್ಲಾ, ಅದನ್ನು ನಾವು utmost care ನಿಂದ ಮಾಡಬೇಕೆಂದು ಶಿಫಾರಸ್ಸುಗಳಿವೆ. ನಮ್ಮಲ್ಲಿ re-cycling ಇಲ್ಲವೇ ಇಲ್ಲ. ನೀರೆಲ್ಲಾ ಹರಿದು ಹೋಗುತ್ತಿದೆ. ಅದಕ್ಕೆ you are responsible ಎಂದು ನಾನು ಹೇಳುವುದಿಲ್ಲ. The system is continuing like this only. ನೀರು ಬಳಕೆಯಲ್ಲಿ ನಾವು ಬಹಳ poor. We are very very poor in water management. ಇದಕ್ಕೆಲ್ಲಾ alternative ಆಗಿ ಯೋಚನೆ ಮಾಡತಕ್ಕಂಥ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ (ಭಾರಿ ನೀರಾವರಿ ಮಂತ್ರಿಗಳು) : ಬಹಳಷ್ಟು ಉಪಯುಕ್ತವಾದಂಥ ಕೆಲವು ವಿಚಾರಗಳನ್ನು ನೀವು ಹೇಳುತ್ತಿದ್ದೀರಿ. ನ್ಯಾಷನಲ್ ಪ್ಲಾನಿಂಗ್ ಕಮೀಷನ್ ಒಂದು ಸರ್ವೇ ಪ್ರಕಾರ ಯಾವರೀತಿ electricity losses ಇದೆ, ಆ ರೀತಿ ನಮ್ಮ canal losses, transportation losses, ಕೆಲವು ರಾಜ್ಯಗಳಲ್ಲಿ 60%, 62%, 58% ಇದೆ, of course ನಮ್ಮ ರಾಜ್ಯದಲ್ಲಿ 30–35% ಎಂದರೂ ಜಾಸ್ತಿಯೇ. ಅದನ್ನು ಕಡಿಮೆ ಮಾಡಿ efficiency ಹೆಚ್ಚಿಗೆ ಮಾಡಬೇಕಾಗಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಎರಡು ವಿಚಾರಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಒಂದು, ಈ ಲಾಸಸ್ ಕಡಿಮೆ ಮಾಡಬೇಕಾದರೆ *water* management ಮಾಡಬೇಕು, ಎರಡನೆಯದು, water conservation

ಮಾಡಬೇಕು, ಎರಡನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಈಗಾಗಲೇ ಈ ಬಗ್ಗೆ ಚಿಂತನೆ ಮಾಡಿ, ಏನಾಗುತ್ತಿದೆ ಎಂದರೆ, ಈ ಡ್ಯಾಂನಿಂದ ಬಿಟ್ಟಂಥ ನೀರು ರಾತ್ರಿಯೆಲ್ಲಾ ಪೂರ್ತಿ ಖಾಲಿ ಮಾಡುತ್ತೇವೆ, ಮತ್ತೆ ಬೆಳಿಗ್ಗೆ ಡ್ಯಾಂನಿಂದಲೇ ಬಿಡಬೇಕು. ಈಗ ಆ ಸಿಸ್ಟಂ ಅನ್ನು ಸ್ವಲ್ಪ ಬದಲಾವಣೆ ಮಾಡಿ ಫ್ರೀ ಬೋರ್ಡ್ ಏನಿದೆ ಕೆನಾಲ್‌ಗಳಲ್ಲೂ ಅಲ್ಲಲ್ಲಿ Free Boardಗಳನ್ನಿಟ್ಟು ರೆಗ್ಯುಲೇಟರ್ ವಾಲ್ವ್ಸ್ ಎಂದು ಮಾಡಿ, ಯಾವಾಗ ರೈತನಿಗೆ ಉಪಯೋಗ ವಾಗುತ್ತದೆ, ಆಮೇಲೆ ನೀರನ್ನು ಆ ಕೆನಾಲ್‌ನಲ್ಲಿಟ್ಟುಕೊಂಡು ಮತ್ತೆ ಮುಂದಿನ ದಿವಸ ಬೇಕಾದರೆ ಬಿಡುವುದು, ಅಂದರೆ ಅಷ್ಟು ನೀರನ್ನು save ಆಗುತ್ತದೆ. ಎರಡನೆಯದು, ಟೇಲ್ ಆಫ್ ವಾಟರ್ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ಮಾಡಿ, ರೀಸೈಕಲಿಂಗ್‌ಗೆ ಎಲ್ಲೆಲ್ಲಿ ನಾವು ಬಂದರನ್ನು ಕಟ್ಟಬೇಕು, ಏನು ಮಾಡಬೇಕೆನ್ನುವುದಕ್ಕೆ ರಾಜ್ಯದಲ್ಲಿರುವ ಎಲ್ಲಾ ಪ್ರಮುಖ ನೀರಾವರಿ ಯೋಜನೆಗಳು ವಿಶೇಷವಾಗಿ ಮೆಯಿನ್ ಕೆನಾಲ್, ಮೆಯಿನ್ ಡಿಸ್ಟ್ರಿಬ್ಯೂಟರಿಯಲ್ಲಿ ಏನು ಟೇಲ್‌ಆಫ್ ಆಗುತ್ತಿದೆ, ಆ ಬಗ್ಗೆ ಸೂಕ್ತ ಯೋಜನೆ ಮಾಡುವುದಕ್ಕೆ ಅತೀ ಶೀಘ್ರದಲ್ಲಿ ಒಂದು ಯೋಜನೆಯನ್ನು ತರುತ್ತೇವೆ.

ಶ್ರೀ ಸಿದ್ದರಾಮಯ್ಯ : ನನ್ನ ಸಲಹೆ, ವಾಟರ್ ಅನ್ನು ನಾವು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಲು ವ್ಯವಸ್ಥೆ ಮಾಡಿಕೊಳ್ಳದೆ ಹೋದರೆ ಮುಂದಿನ ವರ್ಷಗಳಲ್ಲಿ ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳಬೇಕಾ ಗುತ್ತದೆ, ಒಂದು water allocation double ಆಗಬೇಕು. ನಾವು ಈಗ ಕೃಷಿ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ, ಒಂದು, ನಿಮ್ಮ ಅಲೊಕೇಷನ್ ಡಬಲ್ ಆಗಬೇಕು, ಮತ್ತು 5 ವರ್ಷದಲ್ಲಿ ಮುಗಿಸಬೇಕು. ಹೇಗೂ ಮುಖ್ಯಮಂತ್ರಿಗಳು ಕೃಷಿ ಬಗ್ಗೆ ಚರ್ಚೆ ಮಾಡಲು ತಂದಿದ್ದಾರೆ, ನೀವು ಅವರನ್ನು ಬಿಡದೆ, ಅವರಿಗೆ ಪಟ್ಟುಹಿಡಿದು ಇರಿಗೇಷನ್‌ಗೆ ಮಾಡಬೇಕು, ಆಗ ಇದನ್ನು ಚರ್ಚೆ ಮಾಡುವುದಕ್ಕೆ ತಂದಿದ್ದಕ್ಕೂ ಸಾರ್ಥಕವಾಗುತ್ತದೆ. ಅವರಿಗೆ ವರ್ಷಕ್ಕೆ ನೀವು 5–6 ಸಾವಿರ ಕೋಟಿಯನ್ನು ನೀರಾವರಿಗೆ ವರ್ಷಕ್ಕೆ ಕೊಡಬೇಕು ಮತ್ತು ನೀರಾವರಿ ಮಂತ್ರಿಗಳು ಅಲ್ಲಿ ಸೋರಿ ಹೋಗುವುದನ್ನು ತಪ್ಪಿಸಬೇಕು. ಮಾನ್ಯ ಮಂತ್ರಿಗಳಾದ ಅಶೋಕ್ ಅವರು ಬೆಂಗಳೂರಿನಲ್ಲಿರುತ್ತಾರೆ, ಹಾಗಾಗಿ ಬೆಂಗಳೂರಿನ ಬಗ್ಗೆ ಮಾತನಾಡುತ್ತಾರೆ. ಈಗ ಬಸ್ ಎಲ್ಲಾ ಕಡೆ ಬಿಡುತ್ತಿರುವುದರಿಂದ, ಬೆಂಗಳೂರಿನ ಬಗ್ಗೆ ಮೊದಲೇ ಮಾತನಾಡುತ್ತಿದ್ದಾರೆ.

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) : ಮಾನ್ಯ ರೇವಣ್ಣನವರು ಎಲ್ಲಾ ಇಲಾಖೆಗಳನ್ನು ನೋಡಿಕೊಳ್ಳುತ್ತಿದ್ದರು, ನಿಮ್ಮನ್ನು ಬೆಂಗಳೂರಿಗೆ ಸೀಮಿತಗೊಳಿಸಿದ್ದೇವೆಂದು ಹೇಳುತ್ತಿದ್ದಾರೆ, ಇಲ್ಲಪ್ಪ, ಇಡೀ ರಾಜ್ಯಕ್ಕೆ ನಾನು ಸಾರಿಗೆ ಸಚಿವನೆಂದು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಅಶೋಕ್ ರೇವಣ್ಣನಾಗುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಆರ್.ಅಶೋಕ್ : ನಾನು ಆಗುವುದಿಲ್ಲ, ದಯವಿಟ್ಟು ಬೇಡ, ನನಗೆ ಆ ಪಾತ್ರವೇ ಬೇಡ.

ಶ್ರೀ ಸಿದ್ದರಾಮಯ್ಯ : Oh! You are different from him. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ಇವತ್ತು ಈ rain harvesting, waste ಆಗುವ ನೀರನ್ನು ಹೇಗೆ ಪುನರ್ಬಳಕೆ ಮಾಡಿಕೊಳ್ಳುವುದಕ್ಕೆ ಏನು ಮಾಡಬೇಕೆನ್ನುವುದು. ಈ ಬಗ್ಗೆ ನಾವು ಗಂಭೀರವಾಗಿ ಚಿಂತನೆ ಮಾಡದೇ ಹೋದರೆ, since a decade our food production is stagnant and it is continued to be stagnant. ಕಷ್ಟವಾಗುತ್ತದೆ. On the otherhand, population growth ಈಗಾಗಲೇ 2 ರಿಂದ 2.2% ಗೆ ಏರುತ್ತಿದೆ, ನಾವು 1966–67ನೇ ಪರಿಸ್ಥಿತಿಗೆ ಹೋಗದಂತೆ ನೋಡಿಕೊಳ್ಳಬೇಕು. ಅದರ ಬಗ್ಗೆ ಇವತ್ತು ಗಂಭೀರವಾಗಿ ಚರ್ಚೆಯಾಗಬೇಕೆಂಬುದು ನನ್ನ ಸಲಹೆ. ಕೆರೆಗಳಿಗೆ ಸಂಬಂಧಿಸಿದಂತೆ ವಾಟರ್‌ಶೆಡ್‌ಗೆ NREGA ನಲ್ಲಿ ದುಡ್ಡು ಬಂತು. ಆಮೇಲೆ ನೀವು ಬಹಳಷ್ಟು ಪ್ರವಾಹ ಬಂದಾಗ, ಮಳೆಗಾಲ ಬಂದಾಗ ಈಗ ಮಾಡುತ್ತಿದ್ದೀರಿ. ನಿಮ್ಮ ರಿಸರ್ವಾಯರ್‌ನಲ್ಲಿ ನೀರು ಇರುವಾಗ, ಪ್ರವಾಹ ಬಂದಾಗ wherever it is possible ಎಲ್ಲಾ ಕೆರೆಗಳನ್ನು ತುಂಬಿಸಬೇಕು. ಇಲ್ಲದಿದ್ದರೆ, ನಾವು ಬೋರ್ ವೆಲ್‌ಗಳನ್ನು ಹಾಕುತ್ತಿದ್ದೇವೆ, ಅದು ಒಂದು ವರ್ಷ ಅಥವಾ ಎರಡು ವರ್ಷ ಸರಿಯಾಗಿರುತ್ತದೆ. ಆಮೇಲೆ ಇದೇ dry up ಆಗುತ್ತದೆ, ಏನೂ ಆಗುವುದಿಲ್ಲ. ಹಾಗೆ ಕುಡಿಯುವ ನೀರಿನದು ಅಷ್ಟೆ, ಸರ್ಫೇಸ್ ವಾಟರ್ ಅನ್ನು on priority basis ಅದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಬೇಕು. ಅಲ್ಲೂ ಕೂಡ ಸರಿಯಾಗಿ ಹಣ ಖರ್ಚಾಗಿಲ್ಲ. ಮಳೆಯಿಂದ, ನದಿಗಳಿಂದ, ಕೆರೆಗಳಿಂದ ಪರ್ಮನೆಂಟ್‌ವಾಟರ್ ಸೋರ್ಸ್ ಕ್ರಿಯೇಟ್ ಮಾಡುವುದನ್ನು ಮಾಡಬೇಕು. ಇಲ್ಲದಿದ್ದರೆ, ಇವತ್ತು ನಾವು ಇರುತ್ತೇವೆ, ನೀವು ಇರುತ್ತೀರಿ, ನಾಳೆ ಇನ್ಯಾರೊ ಇರುತ್ತಾರೆ, ಭವಿಷ್ಯದಲ್ಲಿ ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ, ಈಗಿನಿಂದಲೇ ಆ ಬಗ್ಗೆ ಪ್ಲಾನ್

ಹಾಕಬೇಕು. ಆಮೇಲೆ ರೂರಲ್ ರೋಡ್ಸ್ ಇಲ್ಲದೆ ನಿಮಗೆ ರೂರಲ್ ಎಕಾನಮಿ ಬೆಳೆಯುವುದು ಹೇಗಾಗುತ್ತದೆ, ಕಮ್ಯುನಿಕೇಷನ್ ಇಲ್ಲದೆ ಹೇಗಾಗುತ್ತದೆ? Connectivity ಇರಬೇಕಾಗುತ್ತದೆ. ಇವತ್ತು ರೈತರಿಗೆ ಎಲ್ಲಾ ಮಾಹಿತಿಗಳು ಸಿಗುತ್ತಲೇ ಇಲ್ಲ. ನಾವೆಲ್ಲಾ ಸಣ್ಣ ಹುಡುಗರಾಗಿದ್ದಾಗ ಒಂದು ಕಾಲದಲ್ಲಿ ಆ ಗ್ರಾಮಸೇವಕರು ನಮ್ಮ ಊರಿನಲ್ಲೇ ಇರುತ್ತಿದ್ದರು, ಮನೆ ಮನೆಗೆ ಬಂದು ಮಾತನಾಡಿಕೊಂಡು ಹೋಗುತ್ತಿದ್ದರು. ಈಗ ಒಬ್ಬ ಗ್ರಾಮಸೇವಕ ಹಳ್ಳಿಯಲ್ಲಿರುವುದಿಲ್ಲ, extension work is very poor. ಇಲ್ಲವೇ ಇಲ್ಲ. Very very poor. ನಮ್ಮ ಕೃಷಿ ಮಂತ್ರಿಗಳಿದ್ದಾರೆ. ಅವರನ್ನೆಲ್ಲ fill up ಮಾಡಿ ಅವರೆಲ್ಲಾ ಹಳ್ಳಿಗಳಿಗೆ ಕಳುಹಿಸಿ ಹೋಗಲಿ.

ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು) : 1995ರಲ್ಲಿ ಭೈರೇಗೌಡರು ಗ್ರಾಮಸೇವಕರನ್ನು ತೆಗೆದುಹಾಕಿದರು.

ಶ್ರೀ ಸಿದ್ದರಾಮಯ್ಯ : ನೀವು ಸೇರಿಸಿಕೊಳ್ಳಿ, ಚರ್ಚೆಗೆ ಕರೆದಿರುವವರು ನೀವು, ಭೈರೇಗೌಡರು ಕರೆದಿದ್ದಾರೆಯೇ? ಅವರು ಈಗ ಸ್ವರ್ಗದಲ್ಲಿದ್ದಾರೆ ನಾನು ಹೇಗೆ ಅವರನ್ನು ಹುಡುಕಿಕೊಂಡು ಹೋಗಲಿ, ನೀವು ನಮ್ಮ ಎದುರುಗಡೆ ಇದ್ದೀರಿ ಅದಕ್ಕೆ ನಿಮಗೆ ಹೇಳುತ್ತಿದ್ದೇನೆ. ಕೃಷಿ ಬಗ್ಗೆ ಮಾತನಾಡುವುದಕ್ಕೆ ಕರೆದಿರುವುದು, ಪರ್ಯಾಯ ಏನಾದರೂ ಮಾಡಬೇಕಲ್ಲ? ನಿಮಗೂ ಬಜೆಟ್ ಕಡಿಮೆ ಕೊಟ್ಟಿದ್ದಾರೆ, ನಿಮ್ಮದು ಹೇಳಿಬಿಡಲೇ? ಇವರು ಏನು ಹೇಳುತ್ತಾರೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಸೇರಿದಂತೆ 10 ಕಾರ್ಯಕ್ರಮಗಳಿದ್ದಾವೆ, ಬೇಕಾದಷ್ಟು ಹಣವಿದೆ, ಅಲ್ಲೂ ಕೂಡ ಖರ್ಚು ಮಾಡಿಲ್ಲ, ಯಾವುದನ್ನು ಹೇಳಲಿ, ಯಾವುದನ್ನು ಬಿಡಲಿ? ಒಂದನ್ನು ಮಾತ್ರ ಹೇಳಬಹುದು, ಲಂಚ ಪಡೆಯುವುದು ಮಾತ್ರ ನಿರಂತರವಾಗಿ ನಡೆಯುತ್ತಿದೆ, ಅದನ್ನು ನೀವು ಮಾಡಿದ್ದೀರಿ, ನಾವು ಮಾಡಿದ್ದೇವೆಂದಲ್ಲ, ಅದೊಂದು ಮಾತ್ರ ಆಗುತ್ತಿದೆ, ಅದು ಬಿಟ್ಟರೆ ಬೇರೇನೂ ಆಗುತ್ತಿಲ್ಲ. ಬಸವರಾಜ್, ನಿಮ್ಮದೇ ಅದ್ಯಾವುದೋ ಬಳ್ಳಾರಿ ನಾಲಾ, ಅಂದಾಜು ಸಮಿತಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. 16 ಕೋಟಿ 64 ಲಕ್ಷ ಹೋಗಿದೆ, ವಿಜಿಲೆನ್ಸ್ ಕಮಿಟಿಯವರು ಹೋಗಿದ್ದಾರೆ, ಕೆಲವರನ್ನೆಲ್ಲಾ ಅಮಾನತ್ತು ಮಾಡಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ : ನೀರಾವರಿ ಇಲಾಖೆಯಲ್ಲಿ ಇಂಥ ಹಲವಾರು ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ನಾನು ಅಂದಾಜು ಸಮಿತಿಯ ಸದಸ್ಯನಾಗಿದ್ದೇನೆ, ನಾವು ಎಷ್ಟು ಅಪಾದನೆಗಳನ್ನು ಹೊತ್ತು ಕೊಂಡಿದ್ದೇವೆಂದು ಹೇಳುತ್ತೇವೆ.

ಶ್ರೀ ಬಸವರಾಜ ಬೊಮ್ಮಾಯಿ : ನಿಮ್ಮ ಮೇಲೆ ಯಾರೂ ಆಪಾದನೆ ಮಾಡಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇವತ್ತು ಕೂಡ ಫೋನ್ ಮಾಡಿ 50 ಲಕ್ಷ ರೊಕ್ಕ ಒಯ್ದಿದ್ದೀರಿ ನೀವು, ಎಲ್ರಿ ಆ ಕೆಲಸ ಎನ್ನುತ್ತಾರೆ, ಅದನ್ನು ಹಗರಣವೆಂದು ಪರಿಗಣಿಸಿ ದಯಮಾಡಿ ಆ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅದನ್ನು ವಿಶೇಷ ಸಮಿತಿಗೆ ಕೊಡಬೇಕು.

50 ಲಕ್ಷ ರೂ. ತೆಗೆದುಕೊಂಡಿದ್ದಾರೆಂದು ಅವರ ಮೇಲೆ ಆಪಾದನೆ ಮಾಡಿದ್ದಾರೆ. ನಾನು ಆಪಾದನೆ ಮಾಡಿಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಏನು ಬದ್ಧತೆ ಇದೆ ನಿಮಗೆ? ಮಾನ್ಯ ಸಚಿವರೇ ನಿಮಗೆ ಗೊತ್ತಿಲ್ಲ, ನಾವು ಆ ಸಮಿತಿಯಲ್ಲಿದ್ದವರು. ಅಧ್ಯಕ್ಷರ ಅನುಮತಿ ಮೇಲೆ ಈ ಸಮಿತಿಯವರು ಹೋಗಿ ಡ್ಯಾಂ inspection ಮಾಡಿಕೊಂಡು ಬಂದೆವು. ಡ್ಯಾಂ inspection ಮಾಡಿದಂತಹ ಸಂದರ್ಭದಲ್ಲಿ ಯಾರೋ ಮಧ್ಯದಲ್ಲಿ ದುಡ್ಡು ಹೊಡೆದಿದ್ದಾರೆಂದು ಹೇಳಿದರು ಅದು ನಮಗೆ ಗೊತ್ತಿಲ್ಲ. ಆ ಸಮಿತಿಯಲ್ಲಿರತಕ್ಕಂತಹವರೆಲ್ಲಾ ನಾವು ಮಾನ್ಯ ಕರಡಿ ಸಂಗಣ್ಣರವರು, ಮಾನ್ಯ ರೋಷನ್‌ಬೇಗ್‌ರವರು ಮತ್ತು ಮಾನ್ಯ ಜಯಚಂದ್ರ ರವರು ಇದ್ದಾರೆ. ಯಾರು ದುಡ್ಡು ಹೊಡೆದಿದ್ದಾರೆ ಗೊತ್ತಿಲ್ಲ. ಆ ಜನ ದಿನವೂ ದೂರವಾಣಿ ಮಾಡಿ ಚೀಫ್ ಇಂಜಿನಿಯರ್ ಹತ್ತಿರ 50 ಲಕ್ಷ ರೂ. ಹಣ ತೆಗೆದುಕೊಂಡಿದ್ದೀರಾ ನೀವು, ಇವತ್ತಿನವರೆಗೂ ಕೆಲಸ ಪ್ರಾರಂಭ ಮಾಡಿಲ್ಲ, ನಿಮ್ಮಿಂದ ಆ ಕೆಲಸ ನಿಂತಿತು ಎಂದು ಇವತ್ತಿಗೂ ನಮಗೆ ಹೇಳುತ್ತಿದ್ದಾರೆ. ಎಲ್ಲರನ್ನೂ ಸಸ್ಪೆಂಡ್ ಮಾಡಿ ಚೀಫ್ ಇಂಜಿನಿಯರ್ ಒಬ್ಬರನ್ನು ಸರ್ಕಾರ ಒಳಗೆ ಹಾಕಿಕೊಂಡಿತು. ನೀರಾವರಿಗೆ ಬಹಳ ಪ್ರಾಧಾನ್ಯತೆ ಕೊಡುತ್ತೇವೆಂದು ಹೇಳುತ್ತಾರೆ, ಯಾವ ಕಾರಣಕ್ಕೋಸ್ಕರ ನೀವು ಚೀಫ್ ಇಂಜಿನಿಯರ್‌ಗಳನ್ನು ಸಸ್ಪೆಂಡ್ ಮಾಡಲಿಲ್ಲ? ನೀವು ಇಂತಹ ಭ್ರಷ್ಟ ಅಧಿಕಾರಿಗಳನ್ನು ಒಳಗೆ ಹಾಕಿಕೊಂಡಿರುವುದರಿಂದ ನೀರಾವರಿ ಇಲಾಖೆಯಲ್ಲಿ 100% ಭ್ರಷ್ಟಾಚಾರ ನಡೆಯುತ್ತಿದೆ. ನೀರಾವರಿ ಇಲಾಖೆ ಎಲ್ಲಿಂದ ಉದ್ಧಾರವಾಗುತ್ತದೆ. ಎಲ್ಲಿಂದ ಹಣ ವಿನಿಯೋಗ ಆಗುತ್ತದೆ? ನಾವು ಮಾನ್ಯ ಸಚಿವರ ಮೇಲೆ ಆಪಾದನೆ

ಮಾಡುತ್ತಿಲ್ಲ. ಆದರೆ ಅಲ್ಲಿ ನಡೆದಿರತಕ್ಕಂತಹ ರೀತಿ ನೀತಿಗಳ ಬಗ್ಗೆ ಅಂದಾಜು ಸಮಿತಿಯಲ್ಲಿರುವಂತಹ ಎಲ್ಲಾ ಸದಸ್ಯರುಗಳನ್ನು ನೀವು ಆಪಾದಿತರನ್ನಾಗಿ ಮಾಡಿದ್ದೀರಿ. ಇದು ವಿಮುಕ್ತಿ ಆಗಬೇಕಾಗುತ್ತದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ, ಏನು ಸೋಮವಾರ ದಿಂದ ಹಗರಣಗಳ ಬಗ್ಗೆ ಚರ್ಚೆ ಆಗುತ್ತದೆ, ದಯಮಾಡಿ ಸದಸ್ಯರಿಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ನಾವೆಲ್ಲಾ ಆಪಾದಿತರಾಗ ಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ : ನೀವು ದುಡ್ಡು ತೆಗೆದುಕೊಳ್ಳುತ್ತೀರಿ ಎಂದು ಅವರ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಜನ ನೀವು ದುಡ್ಡು ತೆಗೆದುಕೊಂಡಿದ್ದೀರಿ ಎಂದು ಆಪಾದನೆ ಮಾಡಿದರೆ ನಾನೇನು ಮಾಡಲಿ? ಅಂದಾಜು ಸಮಿತಿ ವರದಿ ಕೊಡುವುದಕ್ಕಿಂತ ಮುಂಚೆಯೇ ಇಂಜಿನಿಯರ್‌ರನ್ನು ಸಸ್ಪೆಂಡ್ ಮಾಡಿದ್ದೇನೆ, ಕ್ರಿಮಿನಲ್ ಕೇಸ್ ಹಾಕಿದ್ದೇವೆ, ವಿಜಿಲೆನ್ಸ್ ರಿಪೋರ್ಟ್ ಮಾಡಿದ್ದೇವೆ, ನೀರಾವರಿ ಇಲಾಖೆಯಲ್ಲಿ ಈ ತರಹ ಹಲವಾರು ಪ್ರಕರಣಗಳಲ್ಲಿ ಎಕ್ಸೆಸ್ ದುಡ್ಡು ಕೊಟ್ಟಿರುವುದು ಒಂದು ನಯಾಪೈಸ ವಸೂಲಾಗಿರಲಿಲ್ಲ. ಪ್ರಥಮ ಬಾರಿಗೆ 14 ಕೋಟಿ ರೂಪಾಯಿ ಗಳನ್ನು ಒಂದು ವಾರದಲ್ಲಿ ವಸೂಲು ಮಾಡಿದ್ದೇವೆ. ಎಲ್ಲರನ್ನೂ ಸಸ್ಪೆಂಡ್ ಮಾಡಿ ಕ್ರಿಮಿನಲ್ ಕೇಸ್ ಹಾಕಿದ್ದೇವೆ. ಅದರ ಬಗ್ಗೆ ಪೂರ್ತಿ ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಎಲ್ಲಾ ತೆಗೆದುಕೊಳ್ಳುತ್ತೇವೆ. ಯಾರು ನೇರವಾಗಿ ಜವಾಬ್ದಾರರಿದ್ದಾರೆ, ಅವರ ಮೇಲೆ ಎಲ್ಲಾ ಕ್ರಮವನ್ನೂ ತೆಗೆದುಕೊಂಡಿದ್ದೇವೆ. who is directly responsible ಎಲ್ಲರ ಮೇಲೆಯೂ ಕ್ರಮ ತೆಗೆದುಕೊಂಡಿದ್ದೇವೆ. ಸಸ್ಪೆಂಡ್ ಮಾಡಿ ಕ್ರಿಮಿನಲ್ ಕೇಸ್ ಹಾಕಿದ್ದೇವೆ. ವಿಜಿಲೆನ್ಸ್ ಕಮಿಟಿ ಮಾಡಿದ್ದೇವೆ, ಅದರ ವರದಿ ಬಂದಿದೆ, ಅದನ್ನು ಅನುಷ್ಠಾನ ಮಾಡಿದ್ದೇವೆ. ನೀರಾವರಿ ಇಲಾಖೆಯಲ್ಲಿ ಹತ್ತು ಹಲವಾರು ಆಪಾದನೆ ಆಗಿ ವಿಜಿಲೆನ್ಸ್ ರಿಪೋರ್ಟ್ ಬಂದು 10,15 ರಿಂದ 20 ವರ್ಷಗಳಿಂದ ಕುಳಿತಿವೆ. ನಿಮ್ಮಂತಹ ಅಂದಾಜು ಸಮಿತಿ ಹಾಗೂ ಇತರೆ ಸಮಿತಿಗಳ ವರದಿಗಳು ಧೂಳು ತಿನ್ನುತ್ತಿವೆ. ಯಾರಾದರೂ ನೀರಾವರಿ ಮಂತ್ರಿ ಅಂದಾಜುಗಳ ಸಮಿತಿಯ ವರದಿಯನ್ನು ಸಂಪೂರ್ಣವಾಗಿ ಅನುಷ್ಠಾನ ಮಾಡಿದ್ದರೆ ಅದು ಈ ಸರ್ಕಾರದ ಬಸವರಾಜ ಬೊಮ್ಮಾಯಿ ಎಂದು ಹೆಮ್ಮೆಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಯಾರನ್ನೂ ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ ಇಲ್ಲಿ. ಚೀಫ್ ಇಂಜಿನಿಯರ್‌ಗೆ ಸಸ್ಪೆಂಡ್ ಮಾಡಿ ನೋಟಿಸ್ ಕೊಟ್ಟಿದ್ದೇವೆ. ಇಲಾಖಾ ತನಿಖೆ ಮಾಡುತ್ತಿದ್ದೇವೆ. ಇಬ್ಬರನ್ನೂ ಸಸ್ಪೆಂಡ್ ಮಾಡುತ್ತೇವೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಬರೀ ವಿಷಯ ಜಾರಿಸುವುದಕ್ಕೆ ಪ್ರಯತ್ನ ಮಾಡಬೇಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಚೀಫ್ ಇಂಜಿನಿಯರ್ ಮೇಲೆ ಏನು ಕ್ರಮ ತೆಗೆದುಕೊಂಡರು ಎಂದು ಇವರು ಹೇಳಲಿ.

ಶ್ರೀ ಬಸವರಾಜ ಬೊಮ್ಮಾಯಿ : ಯಾರ‍್ಯಾರು ಏನೇನು ಮಾಡಿದ್ದಾರೆಂದು ಎಲ್ಲಾ ಗೊತ್ತಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಯಾರಾದರೂ ಏನಾದರೂ ಮಾಡಿಕೊಂಡು ಹೋಗಲಿ, ನಾವು ಸರಿ ಇದ್ದರೆ ಆಯಿತು. ನಾವೇಕೆ ಕಳ್ಳರಾಗಬೇಕು?

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಯಾರ‍್ಯಾರು ಏನೇನು ಮಾಡಿದ್ದಾರೆಂದು ಹೇಳಲಿ, ನಮಗೆ ಅದೆಲ್ಲಾ ಬೇಡ. ಇವರು ಮಾಡಿರುವುದು ನಾವು ಕೇಳುತ್ತಿದ್ದೇವೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಅಂದಾಜುಗಳ ಸಮಿತಿಯ ವರದಿ ಈ ಸದನದ ಆಸ್ತಿ ಆಗಿದೆ. ಯಾವ ಸಂದರ್ಭದಲ್ಲಿ ಬೇಕಾದರೂ ಇಲ್ಲಿ ಚರ್ಚೆ ಮಾಡಬಹುದು.

ಶ್ರೀ ಬಸವರಾಜ ಬೊಮ್ಮಾಯಿ : ಹಿಂದಿನ ಸರ್ಕಾರದಲ್ಲಿ ರೂ.200 ಚಿಲ್ಲರೆ ಕೋಟಿ ಯೋಜನೆಯನ್ನು ಟೆಂಡರ್ ಕರೆಯದೆ ಎಂಟ್ರಸ್ಟ್ ಮಾಡಿ ಮಾಡಿದ್ದಾರೆ. ಯಾರು ಮಾಡಿದ್ದಾರೆ.?

ಶ್ರೀ ಹೆಚ್.ಸಿ.ಬಾಲಕೃಷ್ಣ : ಯಾರು ಮಾಡಿದ್ದಾರೆ, ಅವರನ್ನು ಜೈಲಿಗೆ ಕಳುಹಿಸಿ.

ಶ್ರೀ ಬಸವರಾಜ ಬೊಮ್ಮಾಯಿ : ಹಿಂದಿನ ಸರ್ಕಾರದಲ್ಲಿ ಕಾಮಗಾರಿ ಆಗದೆ ದುಡ್ಡು ಕೊಟ್ಟಿದ್ದಾರೆ. ಅದನ್ನು ನಾವು ವಸೂಲು ಮಾಡಿದ್ದೇವೆ. ಚೀಫ್ ಇಂಜಿನಿಯರ್‌ಗೆ ನೋಟಿಸ್ ಕೊಟ್ಟಿದ್ದೇವೆ, ತನಿಖೆ ಆಗುತ್ತಿದೆ, ತಪ್ಪಿತಸ್ಥರು ಯಾರಿದ್ದಾರೆ ಅವರನ್ನು ಸಸ್ಪೆಂಡ್ ಮಾಡುತ್ತೇವೆ. ನಮಗೇನು ಯಾರ ಮುಲಾಜೂ ಇಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಸಚಿವರೇ ನಾವು ಅದು ಯಾವುದೂ ಕೇಳುತ್ತಿಲ್ಲ. ನಮ್ಮ ಅಂದಾಜು ಸಮಿತಿಯ ಸದಸ್ಯರ ಮೇಲೆ ಆಪಾದನೆ ಬಂದಿದೆ . . .

ಶ್ರೀ ಬಸವರಾಜ ಬೊಮ್ಮಾಯಿ : ಯಾರು ತಪ್ಪಿತಸ್ಥರು ಇದ್ದಾರೆ ಅವರನ್ನು ಸಸ್ಪೆಂಡ್ ಮಾಡೇ ಮಾಡುತ್ತೇವೆ. ಇದರ ಹಿಂದೆ ಇದ್ದವರನ್ನೂ ಸಸ್ಪೆಂಡ್ ಮಾಡುತ್ತೇವೆ. 22 ಜನರಿಗೆ ಸಸ್ಪೆಂಡ್ ಮಾಡಿದ್ದೇವೆ, 16 ಜನ ಅಕೌಂಟೆಂಟ್‌ಗಳನ್ನು ಸಸ್ಪೆಂಡ್ ಮಾಡಿದ್ದೇವೆ, PWD code ಪ್ರಕಾರ ಯಾರು ನೇರವಾಗಿ ಜವಾಬ್ದಾರರಿದ್ದಾರೆ, ಅವರಿಗೆ ಸಸ್ಪೆಂಡ್ ಮಾಡಿದ್ದೇವೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : Secretaty MD ಯವರು ಸಸ್ಪೆಂಡ್ ಮಾಡಿ ಎಂದು ರೆಕಮಂಡೇಷನ್ ಮಾಡಿದರೂ ಮಾಡಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ಯಾರು ನೇರವಾಗಿ ಜವಾಬ್ದಾರರಿದ್ದಾರೆ, ಅವರನ್ನು ಸಸ್ಪೆಂಡ್ ಮಾಡಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಸಚಿವರೇ, ಎಲ್ಲಾ ಹೊರಗಡೆ ಬರಬೇಕೆಂದರೆ ದಯಮಾಡಿ ತನಿಖೆಗೆ ಅವಕಾಶ ಕೊಡಿ. ಇಲ್ಲವೆಂದರೆ ಅಂದಾಜು ಸಮಿತಿಯ ಕೆಲವು ಜನ ಸದಸ್ಯರು ಯಾರ್‍ಯಾರಿದ್ದಾರೋ ನಾವೆಲ್ಲಾ ಇವತ್ತು ಭ್ರಷ್ಟರಾಗಿದ್ದೇವೆ. ನೀವು ದಯಮಾಡಿ ಚರ್ಚೆಗೆ ಅವಕಾಶ ಮಾಡಿ ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ : ನೀವೇ ತಪ್ಪಿತಸ್ಥರು ಎಂದು ಏಕೆ ಹೇಳಿಕೊಳ್ಳುತ್ತೀರಿ? ದಯವಿಟ್ಟು ಆ ಮಾತನ್ನು ಹಿಂತೆಗೆದುಕೊಳ್ಳಿ. ಈ ಸದನದಲ್ಲಿ ಯಾರೂ ನೀವು ಭ್ರಷ್ಟರು ಎಂದು ಹೇಳಲಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಸದನದಲ್ಲಿ ಅಲ್ಲಿ ನಾವು ಜನಗಳ ದೃಷ್ಟಿಯಲ್ಲಿ ಭ್ರಷ್ಟರಾಗಿದ್ದೇವೆ. ಸದನದಲ್ಲಿ ಹೇಳಿದ್ದಾರೆಂದು ನಾವು ಹೇಳುತ್ತಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ಈ ಸದನದಲ್ಲಿ ಯಾರೂ ನಿಮಗೆ ಭ್ರಷ್ಟರು ಎಂದು ಹೇಳಲಿಲ್ಲ. ಆ ಮಾತನ್ನು ಹಿಂತೆಗೆದುಕೊಳ್ಳಿ. ನಿಮ್ಮಷ್ಟಕ್ಕೆ ನೀವು ಭ್ರಷ್ಟರು ಎಂದು ಏಕೆ ಹೇಳಿಕೊಳ್ಳುತ್ತೀರಿ?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರದಲ್ಲಿ ಟೆಂಡರ್ ಬೆಲೆ 200 ಕೋಟಿ ರೂ. ಕೊಟ್ಟಿದ್ದಾರೆಂದು ವರದಿಯನ್ನು ಸದನದ ಮುಂದಿಟ್ಟಿದ್ದಾರೆ. . . .ಮಾನ್ಯ ಈಶ್ವರಪ್ಪನವರು ಇದ್ದರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇವರಿಬ್ಬರೇ ಇದ್ದುದು. ಯಾರ ಕಾಲದಲ್ಲಿ

ಆಯಿತು ಎಂದು ದಯಮಾಡಿ ಹೇಳಬೇಕು. 200 ಕೋಟಿ ರೂ. ವಿಷಯ ಯಾರದು ಇದೆ, ಅದನ್ನು ಸದನದ ಮುಂದೆ ಇಡಲಿ. ಇಲ್ಲದಿದ್ದರೆ ತಪ್ಪಾಗಿದೆ ಎಂದು ಸದನವನ್ನು ತಪ್ಪು ದಾರಿಗೆ ಎಳೆಯುವುದು ಬೇಡ. ಈ ಮಾತನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ : ಬಳ್ಳಾರಿ ನಾಲಾದ ಎಲ್ಲಾ ವಿಷಯಗಳನ್ನು ಸದನದ ಮುಂದಿಡುವುದಕ್ಕೆ ನಾನು ಸಿದ್ಧನಿದ್ದೇನೆ. ನಾನು ಯಾವ ಮಾತನ್ನೂ ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಎಲ್ಲಾ ವಿಷಯಗಳ ಪೈಲನ್ನು ನಿಮ್ಮ ಕೊಠಡಿಯಲ್ಲಿಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಸದಸ್ಯರು ಎಲ್ಲರೂ ನೋಡಲಿ. ಯಾವ ಎನ್‌ಕ್ವೈರಿಗೆ ಬೇಕಾದರೂ ಶಿಫಾರಸ್ಸು ಮಾಡಲಿ, ನಾನು ಸಿದ್ಧನಿದ್ದೇನೆ. ಎಲ್ಲದಕ್ಕೂ ಸಿದ್ಧನಿದ್ದೇನೆ. ಪ್ರತಿಯೊಂದು ಫೈಲ್‌ನ ಪೇಜನ್ನು ಅಂದಾಜು ಸಮಿತಿಯ ವರದಿ ಸಮೇತ ಸದನದ ಮುಂದೆ ಇಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ : 200 ಕೋಟಿ ರೂ. ಬಗ್ಗೆ ರೆಕಾರ್ಡ್‌ಗೆ ಹೋಗಿದೆ ಅದು ಯಾರೆಂದು ಹೇಳಲಿ. 200 ಕೋಟಿ ರೂ. ತಿಂದವರು ಯಾರು? ಈ ರಾಜ್ಯದ 500 ಕೋಟಿ ಜನರ ಮನವಿಗಳನ್ನು ಮುಂದಿಟ್ಟು ಕೊಂಡು ಚರ್ಚೆ ಮಾಡಲಿ.

ಛೇರ್ಮನ್ : ಸೋಮವಾರ ನಂತರ ಹಗರಣಗಳ ಬಗ್ಗೆ ಚರ್ಚೆ ಇದೆ. ಆಗ ಇದನ್ನು ತೆಗೆದುಕೊಳ್ಳಬಹುದು.

ಶ್ರೀ ಆರ್.ಅಶೋಕ್ : ರೂಲಿಂಗ್ ಕೊಡುವುದು ಬಹಳ ಕಷ್ಟ ಇದೆ. ದಯವಿಟ್ಟು ನಿಮ್ಮನ್ನು ಸಂಕಷ್ಟಕ್ಕೆ ಸಿಕ್ಕಿಸುವುದು ಬೇಡ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಯಾವ ಕಷ್ಟವೂ ಇಲ್ಲ ಹೇಳಿ. ಓಪನ್ ಆಗಿ ಹೇಳಿ. ಯಾರು ಬೇಕಾದರೂ ಹೇಳಬಹುದು. ಮಾನ್ಯ ರೇವಣ್ಣರವರು ಮಾಡಿದ್ದಾರಾ, ಮಾನ್ಯ ರೇವಣ್ಣರವರು ಮಾಡಿದ್ದರೆ ಹೇಳಿ.

ಶ್ರೀ ಸಿದ್ದರಾಮಯ್ಯ : ಇಷ್ಟೊಂದು ವಾಸ್ಟ್ ಸಬ್ಜೆಕ್ಟ್ ಕೊಟ್ಟು ಇಲ್ಲಿಗೇ ಮುಗಿಸಿ ಎಂದರೆ ಹೇಗಾಗುತ್ತದೆ?

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(7-00 PM)

ನಾನು ಇವತ್ತಿಗೂ ಕೂಡ ಒಂದೊಂದು ದಿನ ಕುಡಿಯುತ್ತೇನೆ. ನಾನು Hippocrate ಆಗಲೂ ತಯಾರಿಲ್ಲ. ನಾನೂ ಯಾವಾಗಲಾದರೂ ಅಕೇಶನಲಿ ಕುಡಿಯುತ್ತೇನೆ. ನಾನು ನಿನ್ನೆ ರಾತ್ರಿ ಕುಡಿದಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇಂದು ಕೃಷಿ ಏಕೆ ಲಾಭದಾಯಕವಾಗುತ್ತಿಲ್ಲವೆಂದರೆ, ಕ್ರಾಪ್ ಪ್ಯಾಟ್ರನ್ ಸರಿ ಇಲ್ಲ. ಎಲ್ಲೆಲ್ಲಿ ಬರಗಾಲ ಪೀಡಿತ ಪ್ರದೇಶವಿದೆ, ಆ ಭಾಗದಲ್ಲಿ ಮಳೆ ಕಡಿಮೆಯಾದಾಗ ಪರ್ಯಾಯ ಬೆಳೆಗಳನ್ನು ಹೇಗೆ ಬೆಳೆಯಬೇಕು ಎಂಬ ಬಗ್ಗೆ ಕೃಷಿ ಇಲಾಖೆಯವರು ಹೇಳಬೇಕು. ಏಕೆಂದರೆ ಇಂದು ಇಷ್ಟೊಂದು ಟೆಕ್ನಾಲಜಿಗಳಿವೆ, ಕೃಷಿ ವಿಶ್ವವಿದ್ಯಾಲಯಗಳು ಕೆಲಸ ಮಾಡುತ್ತಿವೆ, ಕೃಷಿ ಇಲಾಖೆ ಕೆಲಸ ಮಾಡುತ್ತಿದೆ. ಇದಕ್ಕಿಂತ ಹೆಚ್ಚಾಗಿ ನಮ್ಮ ಯುನಿವರ್ಸಿಟಿಗಳಲ್ಲಿ ಇಂದು ಯಾವ ಪ್ರಮಾಣದಲ್ಲಿ ಕೃಷಿ ಬಗ್ಗೆ ರೀಸರ್ಚ್ ಮತ್ತು ಎಕ್ಸ್‌ಟೆನ್‌ಶನ್ ವರ್ಕ್ ಆಗಬೇಕಾಗಿತ್ತೋ ಅದು ಆಗುತ್ತಿಲ್ಲ. ಹೊಸ ಹೊಸ ತಳಿಗಳು ಬರಬೇಕು. ಉದಾಹರಣೆಗೆ ಹೇಳಬೇಕೆಂದರೆ ನಮ್ಮ ದೇಶದಲ್ಲಿಯೇ ಗೋಧಿ ಉತ್ಪಾದನೆ ಎಷ್ಟಿದೆ, ಪಂಜಾಬ್‌ನಲ್ಲಿ ಭತ್ತದ ಉತ್ಪಾದನೆ ಎಷ್ಟಿದೆ ಹಾಗೂ ನಮ್ಮ ರಾಜ್ಯದಲ್ಲಿ ಇವುಗಳ ಉತ್ಪಾದನೆ ಎಷ್ಟಿದೆ.? ಈಗಾಗಲೇ ಎಷ್ಟು ಜನರು ಚೈನಾ ದೇಶಕ್ಕೆ ಹೋಗಿ ನೋಡಿಕೊಂಡು ಬಂದಿದ್ದಾರೆ.? ಚೈನಾ ದೇಶದಲ್ಲಿ ಇವುಗಳ ಉತ್ಪಾದನೆ ನಮ್ಮ ದೇಶಕ್ಕಿಂತ ಎರಡರಷ್ಟು ಇದೆ. ಈಗ ಮೂರರಷ್ಟು ಆಗಿದೆಯಂತೆ. ನಾನು ಚೈನಾ ದೇಶಕ್ಕೆ ಹೋಗಿದ್ದಾಗ ಎರಡರಷ್ಟು ಇದೆ ಎಂದು ಹೇಳಿದ್ದರು. ಇಂದು technology is available, high yielding varieties are available, there is no much difference between China and India. ಅಷ್ಟೊಂದು ವ್ಯತ್ಯಾಸ ನಮ್ಮ ಈ ಎರಡು ದೇಶಗಳಲ್ಲಿ ಇಲ್ಲ. ಆದರೂ ಏಕೆ ಅವರಲ್ಲಿ ಆದಂತೆ ಆಗುತ್ತಿಲ್ಲ? ಎಲ್ಲಿ ನಾವು ಎಡವಿದ್ದೇವೆ? ನಮ್ಮ ಯೂನಿವರ್ಸಿಟಿಗಳು ಏನು ಮಾಡುತ್ತಿವೆ? ಈಗಾಗಲೇ ಮೂರನೇ ಅಗ್ರಿಕಲ್ಚರ್ ಯೂನಿವರ್ಸಿಟಿ ಮಾಡಲು ಹೊರಟಿದ್ದೇವೆ. ಅನಿಮಲ್ ಹಸ್ಬೆಂಡರಿ ಎಂದು ಹಿಂದೆ ಎಲ್ಲವೂ ಒಂದೇ ಇರುತ್ತಿತ್ತು. ವೆಟರ್ನರಿ ಸೈನ್ಸ್ ಎಂದು ಕೂಡ ಮಾಡಿದ್ದೇವೆ. ಈಗ ಹಾರ್ಟಿಕಲ್ಚರ್‌ಗೆ ಒಂದು ಯೂನಿವರ್ಸಿಟಿಯಾಗಿದೆ. ಬಾಗಲಕೋಟೆಯಲ್ಲಿ ಆಗಿದೆ. ರಾಯಚೂ ರಿನಲ್ಲಿ ಅಗ್ರಿಕಲ್ಚರ್ ಯೂನಿವರ್ಸಿಟಿಯಾಗಿದೆ. ಇವೆಲ್ಲವೂ

ಆದಮೇಲೆ ಫುಡ್ ಪ್ರೊಡಕ್ಷನ್ ಹೆಚ್ಚು ಮಾಡುವುದಕ್ಕೆ ಗಂಭೀರವಾದ ಚಿಂತನೆಯಾಗಬೇಕಲ್ಲ. ರೈತರಿಗೆ ಹೆಚ್ಚು ಆದಾಯ ಬರತಕ್ಕಂಥ ರೀತಿಯಲ್ಲಿ ನೋಡಿಕೊಳ್ಳಬೇಕಲ್ಲ. 50% ಯುವಕರು ಇದ್ದಾರೆ. ನಮ್ಮ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ 50% ಯುವಕರು ಇದ್ದಾರೆ. ಅವರಿಗೆ ಅಗ್ರಿಕಲ್ಚರ್ ಅಟ್ರ್ಯಾಕ್ಟೀವ್ ಎನ್ನುವ ರೀತಿಯಲ್ಲಿ ಮಾಡಬೇಕಲ್ಲ. ನಾವು ಇದರಲ್ಲಿಯೇ ಬದುಕಬಹುದಪ್ಪಾ, ಹಳ್ಳಿಯಲ್ಲಿಯೇ ಉಳಿದುಕೊಳ್ಳಬಹುದಪ್ಪಾ, ಎನ್ನುವ ರೀತಿ ಮಾಡಬೇಕಲ್ಲ. ಹೀಗೆ ಅಗ್ರಿಕಲ್ಚರ್‌ನ್ನು ಲಾಭದಾಯಕವನ್ನಾಗಿ ಮಾಡತಕ್ಕಂಥ ಎಲ್ಲಾ ಪ್ರಯತ್ನಗಳನ್ನು ಕೂಡ ನಾವು ಮಾಡದೇ ಹೋದರೆ ಹೇಗೆ.? ಈಗ ನಾವು ಭತ್ತ ಬೆಳೆಯುತ್ತೇವೆ, ರಾಗಿ ಬೆಳೆಯುತ್ತೇವೆ, ಜೋಳ ಬೆಳೆಯುತ್ತೇವೆ, ಕಡ್ಲೆಕಾಯಿ ಬೆಳೆಯುತ್ತೇವೆ, ಉದ್ದು ಬೆಳೆಯುತ್ತೇವೆ, ಅವರೆ ಬೇಳೆ ಬೆಳೆಯುತ್ತೇವೆ ಮತ್ತು ತೊಗರಿ ಬೆಳೆಯುತ್ತೇವೆ. ಈಗ ನೋಡಿ ತೊಗರಿಯನ್ನು ಹೊರದೇಶಕ್ಕೆ ರಫ್ತು ಮಾಡುವಷ್ಟು ಬೆಳೆಯುತ್ತಿದ್ದೆವು. ಈ ಸಾರಿ ಮಳೆಯೇ ಇಲ್ಲದೇ ಬೆಳೆ ಹಾಳಾಗಿ ಹೋಯಿತು. ಈ ರೀತಿ ಆದುದರಿಂದ ರೈತರು ಗುಳೆ ಹೊರಟರು. ಈ ರೀತಿಯಾದರೆ ಪಾಪ, ಆ ರೈತರು ಹಳ್ಳಿಗಾಡಿನಲ್ಲಿ ಏನು ಮಾಡುತ್ತಾರೆ ಹೇಳಿ. ಸಾಲವನ್ನೂ ಮಾಡಿಕೊಳ್ಳಬೇಕಾಗುತ್ತದೆ, ಅದನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಯೂ ಇಂಥ ಕಾರಣಗಳಿ ಗೋಸ್ಕರ ಆಗುವ ಸಂಭವ ಇರುತ್ತದೆ. ಪಾಪ, ಆ ರೈತರು ಲೇವಾದೇವಿಗಾರರ ಹತ್ತಿರ ಸಾಲವನ್ನು ಮಾಡಿಬಿಟ್ಟಿರುತ್ತಾರೆ. ನಮ್ಮ ಬೆಳೆ ವಿಮೆ ಪದ್ಧತಿ ಏನಿದೆಯಲ್ಲಾ, ಆ ಬೆಳೆ ವಿಮೆಯಿಂದ ಇಂಥ ರೈತರಿಗೆ ಸರಿಯಾಗಿ ಹಣ ಸಿಗುತ್ತಿಲ್ಲ. ನಾನು ಅಲ್ಲಿಗೆ ಹೋಗಿದ್ದಾಗ ಕೆಲವು ರೈತರನ್ನು ನಾನು ಕೇಳಿದೆ. ಅವರು ಎಷ್ಟು ಪ್ರೀಮಿಯಂ ಅನ್ನು ಕಟ್ಟಿರುತ್ತಾರೆ ಉದಾಸಿಯವರೆ, ನಿಮಗೆ ಗೊತ್ತಿರಬೇಕಲ್ಲ, ಅದಕ್ಕಿಂತ ಕಡಿಮೆ ಇನ್‌ಸೂರೆನ್ಸ್ ಹಣ ಬಂದಿದೆ. ಭಾಲ್ಕಿಯಲ್ಲಿ ಆ ರೀತಿ ಕಡಿಮೆ ಹಣ ಬಂದಿದೆಯಂತೆ. ಕೆಲವು ಕಡೆ ಹೆಚ್ಚಿಗೆ ಬಂದಿದೆಯಂತೆ. ಆದರೆ ಭಾಲ್ಕಿಯಲ್ಲಿ ಆ ರೀತಿ ಕಡಿಮೆ ಹಣ ಬಂದಿರುವ ಬಗ್ಗೆ ಹೇಳಿದರು. ರವೀಂದ್ರನಾಥ್‌ರವರೆ, ನಮ್ಮ ಸಿಸ್ಟಂ ಏನಿದೆಯಲ್ಲಾ, ಈ ಟೆಲಿಮೆಟ್ರಿಕ್ ರೇನ್‌ಗೇಜ್‌ಗಳನ್ನು 300 Sq. K.M. ಗೆ ಒಂದೊಂದು ಇಟ್ಟಿದ್ದಾರೆ. ಕನಿಷ್ಟ ಅದು 40 ಕಿಲೋ ಮೀಟರ್‌ಗೆ ಒಂದೊಂದು ಇರಬೇಕು. ಆಗಲೇ ನಿಮಗೆ ಸರಿಯಾದ ಮಾಹಿತಿ ದೊರೆಯುವುದು. ಬೇಕಾದರೆ ನೀವು ಅನೇಕ ತಾಲ್ಲೂಕುಗಳದ್ದನ್ನು ತೆಗೆದು ನೋಡಿ, ತಾಲ್ಲೂಕಿನಲ್ಲಿ ವಾಡಿಕೆ ಮಳೆಗಿಂತ ಮಳೆ ಜಾಸ್ತಿ ಬಿದ್ದಿರುತ್ತದೆ, ಆದರೆ ಆ ಇಡೀ ತಾಲ್ಲೂಕಿನಲ್ಲಿ

ಬರಗಾಲವಿರುತ್ತದೆ. ನೆಲಮಂಗಲದ್ದನ್ನು ತೆಗೆದು ನೋಡಿ, ಕೋಲಾರದ ಒಂದು ತಾಲ್ಲೂಕಿನಲ್ಲಿ ತೆಗೆದು ನೋಡಿ, ಮಳೆ ಮಾತ್ರ ವಾಡಿಕೆ ಮಳೆಗಿಂತ ಜಾಸ್ತಿ ಬಿದ್ದಿರುತ್ತದೆ, because of the wrong assessment of the rain, ಆ ಟೆಲಿಮೆಟ್ರಿಕ್ ರೇನ್‌ಗೇಜ್‌ಗಳೇನು ಇವೆಯಲ್ಲಾ, ಅದನ್ನು 300 Sq. K.M. ಗೆ ಒಂದೊಂದನ್ನು ಇಟ್ಟಿದ್ದಾರೆ. ಇದನ್ನು 40 ಕಿಲೋ ಮೀಟರ್‌ಗೆ ಒಂದೊಂದನ್ನು ಇಟ್ಟರೆ ಮಾತ್ರ ಎಲ್ಲಾ ಭಾಗದ ರೈತರಿಗೆ ಇದರಿಂದ ಸಹಾಯವಾಗುತ್ತದೆ. ಇನ್‌ಸೂರೆನ್ಸ್ ಕೂಡ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಕನಿಷ್ಟ ಒಂದು ಪಂಚಾಯತಿಗೆ ಒಂದನ್ನು ಇಡಬೇಕು. ಈ ಟೆಲಿಮೆಟ್ರಿಕ್ ರೇನ್‌ಗೇಜ್‌ನ್ನು ಪಂಚಾಯತಿಗೆ ಒಂದೊಂದನ್ನು ಇಡದೇ ಇದ್ದರೆ ನೀವು ಹೇಗೆ ರೈತರನ್ನು ಉಳಿಸುತ್ತೀರಿ, ಹೇಗೆ ನೀವು ರೈತರನ್ನು ಉದ್ಧಾರ ಮಾಡುತ್ತೀರಿ, ಬರಗಾಲದಿಂದ ತುತ್ತಾದ ರೈತರಿಗೆ ಸಹಾಯ ಮಾಡುವುದು ಹೇಗೆ? ಈಗ ಇವೆಲ್ಲವನ್ನೂ ಮಾಡದೇ ಇರುವುದರಿಂದ ಎಲ್ಲ ಕಡೆ ರೈತರಿಗೆ ಸರಿಯಾದ ರೀತಿಯಲ್ಲಿ ಬೆಳೆ ವಿಮೆಯ ಪರಿಹಾರದ ಹಣ ಸಿಗುತ್ತಿಲ್ಲ. ಎರಡು ಇನ್‌ಸೂರೆನ್ಸ್ ಸ್ಕೀಂಗಳಿವೆ. ಒಂದು National Insurance Scheme, ಇನ್ನೊಂದು Weather based Insurance Scheme 2007-08 ರಿಂದ ಬಂದಿದೆ. ಇನ್ನೊಂದು 2000 ದಿಂದ National Insurance Scheme ಇದೆ. 2007–08 ರಿಂದ ಬಂದಂಥದ್ದು ಕೇಂದ್ರ ಸರ್ಕಾರದವರು ಹೊಸ Agriculture Policy ಯನ್ನು ಮಾಡಿದ ಮೇಲೆ ಬಂದಿದೆ. ಅದು Weather based Insurance Scheme. ನಾನು ಒಂದು ಮಾತನ್ನು ಅಗ್ರಿಕಲ್ಚರ್ ಮಿನಿಸ್ಟರ್‌ರವರಿಗೆ ಹೇಳುತ್ತಿದ್ದೇನೆ, ನೀವು ರೈತರು ಅಪ್ಲಿಕೇಶನ್ ಕೊಡುವ Cut of date ಅನ್ನು ಆಗಸ್ಟ್ 31 ನೇ ತಾರೀಖು ಅಂತಿಮ ದಿನವೆಂದು ಮಾಡಿದ್ದೀರಂತಲ್ಲಾ, ಅದು ಸರಿಯಲ್ಲ. ಏಕೆಂದರೆ ಬಹಳ ರೈತರು ಇನ್ನೂ ಅಪ್ಲಿಕೇಶನ್ ಅನ್ನು ಹಾಕಿಲ್ಲದವರು ಇದ್ದಾರೆ. ಬಹಳ ಜನರಿಗೆ ಸಿಕ್ಕದೇ ಹೋಗುತ್ತದೆ. ಬರಗಾಲವಿದೆ, Please extend that time till October end. ಮಿನಿಸ್ಟರ್ ಈ ಬಗ್ಗೆ ಯಾರಿಗೆ ಬರೆಯಬೇಕೋ ಅವರಿಗೆ ಬರೆಯಲಿ. ನಾನು ಹೇಳುವುದೇನೆಂದರೆ Government of India ದವರಿಗೆ ಈ ಬಗ್ಗೆ ಬರೆಯಲಿ. ಮಂತ್ರಿಗಳು ಅಲ್ಲಿಗೆ ಹೋಗಿ ಈ ಬಗ್ಗೆ ಒತ್ತಾಯ ಮಾಡಲಿ. ಈಗಲೂ ಕೂಡ time extend ಮಾಡುವುದಕ್ಕೆ ಅವಕಾಶ ಕೊಡುತ್ತಾರೆ.

ಆದರೆ ಇವರು ಅಲ್ಲಿಗೆ ಹೋಗಿ ಒತ್ತಾಯ ಮಾಡಲಿ. ದಯವಿಟ್ಟು ನೀವು ಆ ರೀತಿ ಮಾಡಿ. ಇಲ್ಲದಿದ್ದರೆ ಬಹಳ ಜನ ರೈತರು ಇದರಿಂದ ವಂಚಿತರಾಗಿ ಬಿಡುತ್ತಾರೆ. ಪಾಪ, ಆ ರೈತರುಗಳೇ ಕೇಂದ್ರ ಸರ್ಕಾರಕ್ಕೆ ಹೋಗುವುದಕ್ಕೆ ಆಗುತ್ತದೆಯೇ? The Government of Karnataka should approach the Government of India. ಆದುದರಿಂದ ಕೂಡಲೇ ಈ ಬಗ್ಗೆ ಬರೆಯಿರಿ. ಅಕ್ಟೋಬರ್ ಅಂತ್ಯದವರೆಗೆ ದಯಮಾಡಿ ಈ ಟೈಂ ಎಕ್ಸ್‌ಟೆಂಡ್ ಮಾಡಿಕೊಡಬೇಕು ಎಂದು ಬರೆಯಬೇಕು. ಈ ರೀತಿ ನೀವು ಮಾಡದಿದ್ದರೆ ಸಾವಿರಾರು ಜನ ರೈತರಿಗೆ ಬೆಳೆ ವಿಮೆಯ ಹಣ ಸಿಗದೇ ತೊಂದರೆಯಾಗುತ್ತದೆ. ಲಕ್ಷಾಂತರ ಎಕರೆಗಳಲ್ಲಿ ಇಂದು ಬೆಳೆ ಬರದೇ ರೈತರಿಗೆ ಬಹಳ ತೊಂದರೆಯಾಗಿದೆ. ಫುಡ್ ಪ್ರೊಡಕ್ಷನ್ ಈ ವರ್ಷ more than 25% ಕಡಿಮೆಯಾಗುತ್ತದೆ.

Both Pulses, ದ್ವಿದಳ ಧಾನ್ಯ, Oil seeds ಎಲ್ಲವೂ ಕಡಿಮೆಯಾಗುತ್ತದೆ. ಹೋದವರ್ಷ oil seeds ಬಹಳ ಕಡಿಮೆಯಾಯಿತು. ನಾನು ಏಕೆ ಇವೆಲ್ಲವನ್ನು ಕೂಡ ಹೇಳುತ್ತಿದ್ದೇನೆಂದರೆ ಕೃಷಿ ಬದುಕಬೇಕಾದರೆ, ಕೃಷಿ ಮೇಲೆ ಜನ ಬದುಕಿ ಉಳಿದುಕೊಳ್ಳಬೇಕಾದರೆ, ಹಳ್ಳಿಗಾಡಿನ ಯುವಕರು ಹಳ್ಳಿ ಬಿಟ್ಟು ಹೋಗದಿರಬೇಕಾದರೆ, ಕೂಲಿ ಕಾರ್ಮಿಕರು ಗುಳೆ ಹೋಗದಿರ ಬೇಕಾದರೆ, ಕೆಲಸ ಹುಡುಕಿಕೊಂಡು ಪಟ್ಟಣಗಳಿಗೆ ಬರದಿರಬೇಕಾದರೆ, ಪಟ್ಟಣಗಳಲ್ಲಿ ಸ್ಲಮ್ ಗಳು ಹೆಚ್ಚಾಗದಿರಬೇಕಾದರೆ ನಾವು ರೈತರಿಗೆ ಕೂಡಲೇ ಎಲ್ಲಾ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕಾಗುತ್ತದೆ. ಮೊದಲು ರೋಡ್ ಕೆಲಸ ಎಲ್ಲಾ ಒಂದು ಕಾಲದಲ್ಲಿ ತಮಿಳುನಾಡು, ಆಂಧ್ರಪ್ರದೇಶದವರು ಮಾಡುತ್ತಿದ್ದರು. ಆದರೆ ಈಗ ಬಿಜಾಪುರ, ಗುಲ್ಬರ್ಗಾದವರು ಮೈಸೂರು, ಬೆಂಗಳೂರಿನಲ್ಲಿ ಇದ್ದಾರೆ. ನಾವು ಓಟು ಕೇಳುವುದಕ್ಕೆ ಹೋಗಿದ್ದೆವು. ಅಲ್ಲಿ ಎಲ್ಲಾ ಬಿಜಾಪುರದವರು ಇದ್ದರು. ನಾವು ಕೇಳಿದಾಗ ನಾವು ಬಿಜಾಪುರದಿಂದ ಬಂದಿದ್ದೇವೆಂದು ಹೇಳಿದರು. ಅವರು ಒಂದು ಗುಡಿಸಲು ಹಾಕಿಕೊಂಡು ಇದ್ದಾರೆ. ಗುಲ್ಬರ್ಗಾ, ಬಿಜಾಪುರದವರು ಹಾಗೆ ಬಂದು ಪಟ್ಟಣ ಸೇರಿಕೊಳ್ಳುತ್ತಾರೆ. ಹಾಗಾದಾಗ ಪಟ್ಟಣ ಬೆಳೆಯುತ್ತದೆ. ಕೃಷಿಗೆ ಆದ್ಯತೆ ಮೇಲೆ ಕೃಷಿ ರಕ್ಷಣೆ ಮಾಡುವಂತಹ ಕೆಲಸ ಮಾಡದೇ ಹೋದರೆ ಹೇಗೆ? We are very poor. ರೈತರಿಗೆ value added income ಸರಿಯಾಗಿ ಸಿಗುತ್ತಿಲ್ಲ, food processing ಬಹಳ ಕಡಿಮೆ ಇದೆ, ಗೋಡೌನ್‌ಗಳು, Cold storage ಗಳು

ಬಹಳ ಕಡಿಮೆ ಇವೆ. ಮಾರುಕಟ್ಟೆ ಇಲ್ಲ. ಇವತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ರೈತರು ಉಳಿದುಕೊಳ್ಳಬೇಕಾದರೆ Liberalization, Globalization ಆಗಿರುವಾಗ quality food production ಇಲ್ಲದೆ ಹೋದರೇ we can't survice in International Market. ಬಹಳ ಕಷ್ಟವಾಗಿಬಿಡುತ್ತದೆ. That is why ನಾವು ಕಷ್ಟದಲ್ಲಿ ಸಿಕ್ಕಿಹಾಕಿಕೊಳ್ಳು ತ್ತಿರುವುದು. ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. Post harvesting, floriculture, fruits, grapes, other food produces ಏನು ಮಾಡಬೇಕು? ಇದರ ಬಗ್ಗೆ, ಅದರ Value ಹೆಚ್ಚು ಮಾಡುವುದಕ್ಕೆ ರೈತರಿಗೆ ಹೆಚ್ಚು ಆದಾಯ ಬರುವುದಕ್ಕೆ ಏನು ಮಾಡಬೇಕು ಎನ್ನುವುದನ್ನು ನೋಡಿ ನಾವು ಮಾಡಬೇಕಾಗುತ್ತದೆ. ಆಮೇಲೆ ಎಲ್ಲಾ ಬೆಳೆಗಳಿಗೂ ಕೂಡ minimum support price ಇರಬೇಕು, on the basis of the cost of cultivation. ನನ್ನ ಪ್ರಕಾರ ಇಂತಿಂತಹ ಬೆಳೆಗಳಿಗೆ ರೈತರಿಗೆ support price ಕೊಡುತ್ತೇವೆಂದು ಮಾಡಬಹುದು. ಕಳೆದ ಸಾರಿ ಕಬ್ಬು ಬೆಳೆದು ಅದನ್ನು ಕೊಂಡುಕೊಳ್ಳುವವರೇ ಇರಲಿಲ್ಲ. ಆಗ ಅನೇಕ ಜನ ಅದಕ್ಕೆ ಬೆಂಕಿ ಹಾಕಿದರು. ಈ ಸಾರಿ ಕಬ್ಬು ಇಲ್ಲ, production ಕಡಿಮೆಯಾಯಿತು, ಸಕ್ಕರೆ ಬೆಲೆ ಜಾಸ್ತಿಯಾಯಿತು. ಇನ್ನು post harvesting programmes, food processing programmes, marketing, export, ಇದಕ್ಕೆ ಏನು ಕಾರ್ಯಕ್ರಮಗಳನ್ನು ಮಾಡಬೇಕು? ಯಾವ್ಯಾವ ಪ್ರದೇಶದಲ್ಲಿ ಏನೇನು ಬೆಳೆಗಳನ್ನು ಬೆಳೆಯಬಹುದು. ನಮ್ಮಲ್ಲಿ ಅನೇಕ ನಡೆಗಳಲ್ಲಿ ಬೆಳೆದಂತಹ ಪದಾರ್ಥಗಳು ಕೋಲಾರದಿಂದ ಹಿಡಿದು ಏರ್‌ಪೋರ್ಟ್‌ವರೆಗೆ ಬರಬೇಕಾದರೆ ಅವುಗಳನ್ನು ಹೊರದೇಶಕ್ಕೆ ಕಳುಹಿಸಬೇಕಾದರೆ transport system ಇರಬೇಕು. Cold storage ಇರಬೇಕು. ಈ ರೀತಿ ಕೃಷಿ ಬಗ್ಗೆ ನಾವು ಗಂಭೀರವಾಗಿ ಚರ್ಚೆ ಮಾಡುವಾಗ ರೈತನನ್ನು ಉಳಿಸುವುದಕ್ಕೆ, ರೈತರಿಗೆ ಹೆಚ್ಚು ಆದಾಯ ಬರುವಂತೆ ಮಾಡುವುದಕ್ಕೆ, ಹಳ್ಳಿಗಾಡಿನಲ್ಲಿ ಅವರ quality life ಹೆಚ್ಚು ಮಾಡುವುದಕ್ಕೆ ಎಲ್ಲಾ ವ್ಯವಸ್ಥೆ ಮಾಡದೇ ಹೋದರೆ ಕೃಷಿ ಉಳಿಯುವುದಿಲ್ಲ, ಆಹಾರ ಪದಾರ್ಥ ಕೂಡ ಉಳಿಯುವುದಿಲ್ಲ. ಕೇಂದ್ರ ಸರ್ಕಾರ 20 ಕೆಜಿ ಅಕ್ಕಿಯನ್ನು ಮೂರು ರೂಪಾಯಿಯಂತೆ ಕೊಡಬೇಕೆಂದು ಮಾಡಿದೆ. ಆದರೆ ನೀವು unit system ಎಂದು ಮಾಡಿ 20 ಕೊಡಿ. ಇನ್ನು

ಹತ್ತು ವರ್ಷದ ಮಕ್ಕಳು ಅನ್ನ ಉಣ್ಣುವುದಿಲ್ಲವೇ? ಅವರು ಚಪಾತಿ ತಿನ್ನುವುದಿಲ್ಲವೇ? ಅವರಿಗೆ ಏಕೆ ಇಲ್ಲ?

ಶ್ರೀ ಹೆಚ್. ಹಾಲಪ್ಪ : Photo ತೆಗೆದುಕೊಳ್ಳುವುದಿಲ್ಲ, ಕಾರ್ಡಿನಲ್ಲಿ ಅವರ ಹೆಸರು ಬರುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಇದು ನನಗೆ ಅರ್ಥವಾಗುವುದಿಲ್ಲ. Unit System ಮಾಡುವುದಕ್ಕೆ ನೀವು ಏನೆಲ್ಲಾ confuse ಮಾಡುತ್ತಿದ್ದೀರಿ. ಒಂದು family ಎಂದರೆ ಗಂಡಹೆಂಡತಿ ಇಬ್ಬರೇನಾ? ಅಲ್ಲಿ ಮಕ್ಕಳ ಪ್ರಶ್ನೆಯೇ ಬರುವುದಿಲ್ಲ. ನಮಗೆ family ಎಂದರೆ BPL ಎಂದರೆ ಏನು ಎಂಬ ಬಗ್ಗೆ correct ಆಗಿ define ಮಾಡಿ ಹೇಳಿ.

ಶ್ರೀ ಸಿದ್ಧರಾಮಯ್ಯ : ನಾನು ಉತ್ತರವನ್ನು ಈಗಲೇ ಕೇಳಲಿಲ್ಲ, ನೀವು ನಾಳೆ ಕೊಡಿ. ನನಗೆ ಇರುವ ಮಾಹಿತಿ ಪ್ರಕಾರ 12 ವರ್ಷದೊಳಗೆ ಇರುವ ಮಕ್ಕಳಿಗೆ ಆಹಾರ ಕೊಡುತ್ತಿಲ್ಲ. ನೆಮ್ಮದಿ ಕೇಂದ್ರ ಎಂದು ಮಾಡಿದಿರಿ, ನೀವು ನಿಮ್ಮ ಕಾಲದಲ್ಲಿ ಈ ರೀತಿ ಮಾಡುವುದೇ? ನೀವು ಮೀಟಿಂಗ್ ಮಾಡಿ 29 ಲಕ್ಷ ಕುಟುಂಬಗಳು 20 ರೂಪಾಯಿ ಛಾಪಾ ಕಾಗದದ ಮೇಲೆ affidavit ಕೊಟ್ಟು ಎಲ್ಲಾ ಆದಮೇಲೆ 80% ಕಿತ್ತು ಹಾಕಿ ಬಿಡಿ ಎಂದು ಹೇಳಿದ್ದೀರಲ್ಲ, ಏನಿದು? ಹಾಲಪ್ಪನವರೇ, ನಾನು ತುಮಕೂರು ಜಿಲ್ಲೆಯಲ್ಲಿ ಏನಾಗಿದೆ ಎಂದು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : 80% ರದ್ದು ಮಾಡಿದ್ದಾರಲ್ಲ, ಅದು ಇಲ್ಲಿ refer ಆಗಿದೆ, ಅದು ನಿನ್ನೆ ಇಲ್ಲಿ refer ಆಗಿದೆ.

ಶ್ರೀ ಸಿದ್ಧರಾಮಯ್ಯ : 28 ರಿಂದ 29 ಲಕ್ಷ ಕುಟುಂಬಗಳಿಂದ affidavit ತೆಗೆದುಕೊಂಡು 80% Cancel ಮಾಡಬೇಕೆಂದು direction ಕೊಟ್ಟರೆ ನೀವು ಬಡವರ ಪರವಾಗಿ ಇದ್ದೀರಿ ಎಂದು ಹೇಳಬೇಕೇ? ನೀವು individual ತೆಗೆದುಹಾಕಿ, We have no objection. ಆದರೆ ಸಾರಾಸಗಟಾಗಿ 80% remove ಮಾಡಿಬಿಡಿ ಎಂದು ಹೇಳಿದರೆ can we call your Government a pro-poor and pro-rural Government? ಇದಕ್ಕೆ ಏನೆಂದು ಹೇಳಬೇಕು? ಕೇಂದ್ರ ಸರ್ಕಾರದವರು ಸುಮಾರು 37 ಲಕ್ಷ ಕುಟುಂಬಗಳಿಗೆ ಅವರೇ ಕೊಡುತ್ತಾರೆ. ಹಾಲಪ್ಪನವರೇ, 31 ಲಕ್ಷ ಕುಟುಂಬಗಳು ಅಲ್ಲವೇ?

ಶ್ರೀ ಹೆಚ್. ಹಾಲಪ್ಪ : 28 ಲಕ್ಷ ಕುಟುಂಬಗಳಿಗೆ.

ಶ್ರೀ ಸಿದ್ಧರಾಮಯ್ಯ : ನೀವು ಉತ್ತರ ಕೊಡುವಾಗ ಹೇಳುವಿರಂತೆ.

ಶ್ರೀ ಹೆಚ್. ಹಾಲಪ್ಪ : ಮಾನ್ಯ ಅಧ್ಯಕ್ಷರೇ, 28,38,000 ಕುಟುಂಬಗಳಿಗೆ ನೆಮ್ಮದಿ ಕಾರ್ಡುಗಳನ್ನು ಕೊಟ್ಟಿದ್ದೇವೆ. ಅವರಿಗೆ ಅಕ್ಕಿಯನ್ನು ಕೊಡುತ್ತಿದ್ದೇವೆ. ನಾವು 21 ರೂಪಾಯಿಯಂತೆ purchase ಮಾಡಿ ಮೂರು ರೂಪಾಯಿಯಂತೆ ಕೊಡುತ್ತಿದ್ದೇವೆ.

ಆದರೆ ಈ ತಿಂಗಳು ಅದನ್ನೂ ತಡ ಮಾಡಿದ್ದಾರೆ, ಒಂದು ತಿಂಗಳು ತೊಂದರೆಯಾಗಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಶರದ್ ಪವಾರ್‌ರವರಿಗೆ ತಡವಾಗುತ್ತಿದೆ, ಕೂಡಲೇ ಕೊಡಿಯೆಂದು ಪತ್ರವನ್ನು ಬರೆದಿದ್ದಾರೆ. ಕೇಂದ್ರ ಸರ್ಕಾರವೂ ಪುಕ್ಕಟೆಯಾಗಿ ಕೊಡುವುದಿಲ್ಲ ಮತ್ತು ಕಡಿಮೆ ಬೆಲೆಗೂ ಕೊಡುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನೀವು ಪುಕ್ಕಟೆಯಾಗಿ ಕೊಡುತ್ತೇವೆಂದು ಹೇಳಿದ್ದೀರಲ್ಲಾ ಕೊಡಿ.

ಶ್ರೀ ಸಿದ್ದರಾಮಯ್ಯ : ಇವರು ಕೇಂದ್ರ ಸರ್ಕಾರ ಸರಿಯಾಗಿ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಇವರು Economic Survey ಯಲ್ಲಿ ಹೇಳಿದ್ದಾರೆ. ಇದು ದೊಡ್ಡ ಪುಸ್ತಕ ಓದುವುದಕ್ಕೆ ಆಗುವುದಿಲ್ಲ. ಈಗ ಓದಿ ಎಂದರೆ ಓದುತ್ತೇನೆ.

ಶ್ರೀ ಹೆಚ್.ಹಾಲಪ್ಪ : ಈಗ ಅಷ್ಟು ದೊಡ್ಡ ಪುಸ್ತಕವನ್ನು ಎಲ್ಲಿ ಓದುವುದಕ್ಕೆ ಆಗುತ್ತದೆ? ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನೀವೇ 2008–09ನೇ ಸಾಲಿನ Economic Survey ಯಲ್ಲಿ ಹೇಳಿದ್ದೀರಿ. ಅಲ್ಲಿ ನೀವು ಏನು ಹೇಳಿದ್ದೀರೆಂದರೆ 31 ಲಕ್ಷ ಕಾರ್ಡ್‌ಗಳಿಗೆ ಕೇಂದ್ರ ಸರ್ಕಾರದವರು ಕೊಡುತ್ತಾರೆ. ಇನ್ನು ಉಳಿದ ಕಾರ್ಡ್‌ಗಳಿಗೆ ಸರ್ಕಾರವೇ ಜವಾಬ್ದಾರಿಯಾಗಿದೆ. ನಿಮಗೆ ಕೇಂದ್ರ ಸರ್ಕಾರದವರು affidavit ತೆಗೆದುಕೊಳ್ಳಿಯೆಂದು ಹೇಳಿದ್ದರಾ? ನೀವು 29 ಲಕ್ಷ ಕಾರ್ಡ್‌ಗಳಿಗೆ affidavit ತೆಗೆದುಕೊಳ್ಳಿ, ಲೋಕಸಭಾ ಚುನಾವಣೆ ಬಂದಿದೆಯೆಂದು ನಿಮಗೆ ಹೇಳಿದ್ದರಾ? ನೀವು ಏಕೆ affidavit ತೆಗೆದುಕೊಂಡಿದ್ದೀರಿ? ನಿಮಗೆ affidavit ತೆಗೆದುಕೊಳ್ಳಿ ಎಂದು ಯಾರು ಹೇಳಿದರು? ನಾನು ಏಕೆ ಹೇಳುತ್ತಿದ್ದೇನೆಂದರೆ, you see the magnitude of

the problem. ಕೇಂದ್ರ ಸರ್ಕಾರದವರು ನಿಮಗೆ 28 ಲಕ್ಷ 41 ಸಾವಿರ ಜನರಿಂದ affidavit ತೆಗೆದುಕೊಂಡು ಕಾರ್ಡ್ ಕೊಡಿ ಎಂದು ಹೇಳಿದ್ದರಾ? ಏಕೆ ಹೀಗೆ ಮಾಡಿದ್ದೀರಿ?

ಶ್ರೀ ಹೆಚ್. ಹಾಲಪ್ಪ : ಅಷ್ಟು ಬೇಡಿಕೆ ಇತ್ತು.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಎಲ್ಲರಿಗೂ ಕೊಡಿ.

ಶ್ರೀ ಹೆಚ್. ಹಾಲಪ್ಪ : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧ ಪಟ್ಟಂತೆ ಒಂದೇ ಒಂದು sample ಕೊಡುತ್ತೇನೆ. ಇದನ್ನು ಮಾನ್ಯ ಜಯಚಂದ್ರರವರಿಗೆ ನಿನ್ನೆ ತೋರಿಸಿದೆ. ನಾನು ಬಳ್ಳಾರಿ ಜಿಲ್ಲೆ ಒಂದನ್ನು ಉದಾಹರಣೆಯಾಗಿ ಕೊಟ್ಟು ಹೇಳುತ್ತೇನೆ. ಇಲ್ಲಿ 18,732 ಜನರು double card ಅನ್ನು ತೆಗೆದುಕೊಂಡಿದ್ದಾರೆ. ನಾವು ಇಡೀ ರಾಜ್ಯದಲ್ಲಿ ಆ ರೀತಿ ಎರಡು ಕಾರ್ಡ್‌ಗಳನ್ನು ಇಟ್ಟುಕೊಂಡಿರುವಂಥದ್ದನ್ನು ತೆಗೆಯಬೇಕೆಂದು ಅಧಿಕಾರಿಗಳಿಗೆ circular ಕೊಟ್ಟಿದ್ದೇವೆ. ಈ ಬಗ್ಗೆ ಉದಾಹರಣೆಗೆ ಹೇಳುವುದಾದರೆ, ಬಳ್ಳಾರಿಯಲ್ಲಿ ವಾರ್ಡ್ ನಂಬರ್ 26 ನಲ್ಲಿ ಒಂದು ಹೆಂಗಸು ಶಕೀಲ ಎಂಬ ಹೆಸರಿನಲ್ಲಿ ಕಾರ್ಡ್ ತೆಗೆದುಕೊಂಡಿದ್ದಾರೆ, ಅದೇ ಹೆಂಗಸು ಗೌಸಿಯಾ ಎಂಬ ಹೆಸರಿನಲ್ಲಿ 25ನೇ ವಾರ್ಡ್‌ನಲ್ಲಿ ತೆಗೆದುಕೊಂಡಿದ್ದಾಳೆ. ಅದೇ ರೀತಿ ರಾಜಶೇಖರ್ ಎಂಬುವವನು ವಾರ್ಡ್ ನಂಬರ್ 26 ರಲ್ಲಿ ಕಾರ್ಡ್ ತೆಗೆದುಕೊಂಡಿದ್ದಾನೆ, ಅದೇ ವ್ಯಕ್ತಿ ವಾರ್ಡ್ ನಂ:25 ರಲ್ಲಿ ಚಾಂದ್ ಪಾಷ ಎಂಬ ಹೆಸರಿನಲ್ಲಿ ತೆಗೆದುಕೊಂಡಿದ್ದಾನೆ. ಇಲ್ಲಿ ಹೆಬ್ಬೆಟ್ಟಿನ ಗುರುತು ಇರುವುದರಿಂದ ಇವರು ಸಿಕ್ಕಿ ಹಾಕಿಕೊಂಡಿದ್ದಾರೆ. ನಾನು ಎಲ್ಲಾ ಡೀಟೈಲ್ಸ್ ಕೊಡುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಈ ರೀತಿ ಎರಡು ಕಾರ್ಡ್‌ಗಳು ಇರುವಂಥದ್ದನ್ನು ತೆಗೆಯುವುದಕ್ಕೆ ಯಾರದೂ ತಕರಾರು ಇಲ್ಲ.

ಶ್ರೀ ಹೆಚ್. ಹಾಲಪ್ಪ : ನಾವು ಅದನ್ನು ಮಾಡುತ್ತಿದ್ದೇವೆ. ಇಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಆಗಿದೆ ಎಂದಾಗ ಸರ್ಕಾರ ಇದರ ಬಗ್ಗೆ ವಿಶೇಷ ಗಮನ ಹರಿಸಬೇಕು. ಇಲ್ಲಿ ಸರ್ಕಾರಕ್ಕೆ ಭದ್ರ ಬುನಾದಿ ಇರುವಂಥದ್ದು. ಅಂಥ ಜಿಲ್ಲೆಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ದುರುಪಯೋಗವಾಗುತ್ತಿದೆ ಎಂದಾಗ ಇನ್ನೂ ನಾವು ಬೇರೆ ಕಡೆಗಳಲ್ಲಿ ಯಾವ ರೀತಿಯಾಗಿ ನಿರೀಕ್ಷೆ ಮಾಡಬೇಕು?

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಮುಖ್ಯಮಂತ್ರಿಯವರು ಬೆಳಗಾವಿ ಅಧಿವೇಶನದಲ್ಲಿ affidavit ಕೊಟ್ಟವರಿಗೆಲ್ಲಾ ಕಾರ್ಡ್ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಹೆಚ್.ಹಾಲಪ್ಪ : ಮಾನ್ಯ ಸದಸ್ಯರು ಸದನಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಅದು ರೆಕಾರ್ಡ್ ಆಗಿದೆ, ಅದನ್ನು ತೆಗೆಯಿರಿ. ರಾಜ್ಯದ ಮುಖ್ಯಮಂತ್ರಿಯಾಗಿದ್ದು, ಈ ಸದನದ ನಾಯಕರು, ಯಾರು ಬೇಕಾದರೂ ಬಂದು ಅಕ್ಕಿಯನ್ನು ತೆಗೆದುಕೊಂಡು ಹೋಗಿ ಎಂದು ಹೇಳಿದರು. ಅವರು ಮೂರು ಬಾರಿ ಫೋಟೋಗಳನ್ನು ತೆಗೆಸಿಕೊಂಡರು. ನೀವು ಏಕೆ ಅಷ್ಟು ಆತುರ ಮಾಡಿದ್ದೀರಿ. ನೀವು ಅದಕ್ಕೆ ಏನಾದರೂ ಒಂದು ಮಾನದಂಡವನ್ನು ಇಟ್ಟು ಮಾಡಬೇಕಾಗಿತ್ತು. ನೀವು ಮಾನದಂಡವನ್ನು ಏಕೆ ಗಾಳಿಗೆ ತೂರಿದಿರಿ? ನೀವು ಇಂತಿಂಥವರು ಬರಬಾರದೆಂದು ಮಾನದಂಡ ಇಡಬೇಕಾಗಿತ್ತು. ಒಂದು ಕಾರ್ಡ್ ಮಾಡಿಸಿ, ಇನ್ನೊಂದು ಕಾರ್ಡ್ ಮಾಡಿಸಿರುವವರನ್ನು ಜೈಲಿಗೆ ಹಾಕುತ್ತೇವೆಂದು ಹೇಳಬೇಕಾಗಿತ್ತು. ನಿಮಗೆ ಓಟು ಬೇಕಾಗಿತ್ತು, ಓಟಿಗೋಸ್ಕರ 34 ಲಕ್ಷ ಜನರಿಂದ ಫೋಟೋಗಳನ್ನು ತೆಗೆಸಿದ್ದೀರಿ. ಈಗ ಅವೆಲ್ಲವನ್ನೂ reject ಮಾಡುತ್ತಿದ್ದೀರಿ.

ಶ್ರೀ ಹೆಚ್. ಹಾಲಪ್ಪ : ಮಾನ್ಯ ಶಿವಲಿಂಗೇಗೌಡರು ಸದನಕ್ಕೆ ತಪ್ಪು ಮಾಹಿತಿ ಹೇಳುವುದು ಬೇಡ. ಮಾನ್ಯ ಮುಖ್ಯಮಂತ್ರಿಯವರು ಬೆಳಗಾವಿ ಅಧಿವೇಶನದಲ್ಲಿ ಏನು ಹೇಳಿದ್ದಾರೆಂದರೆ, ನಾನು ಬಡವನೆಂದು ಯಾರು affidavit ಕೊಡುತ್ತಾರೆ. ಅವರಿಗೆ ಕಾರ್ಡ್ ಕೊಡುತ್ತೇವೆಂದು ಹೇಳಿದ್ದು, affidavit ಕೊಟ್ಟವರಿಗೆಲ್ಲಾ ಕೊಡುತ್ತೇವೆಂದು ಹೇಳಿಲ್ಲ. ಇದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಆ ರೀತಿಯಾಗಿ ಯಾರು ಎರಡೆರಡು ಕಾರ್ಡ್‌ಗಳನ್ನು ತೆಗೆದುಕೊಂಡಿದ್ದಾರೆ, ಬಳ್ಳಾರಿ ಜಿಲ್ಲೆಯಲ್ಲಿ ರಾಜಶೇಖರ ಮತ್ತು ಚಾಂದ್ ಪಾಷ ಎಂದು ಎರಡೆರಡು ವಾರ್ಡ್‌ನಲ್ಲಿ, ಎರಡೆರಡು ಹೆಸರಿನಲ್ಲಿ, ಎರಡೆರಡು ಕಾರ್ಡ್‌ಗಳನ್ನು ತೆಗೆದುಕೊಂಡಿದ್ದಾರೆ, ಇಂಥವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆ. ಇದಕ್ಕೆ ತಾವು ಸಹಕರಿಸಬೇಕು.

ಶ್ರೀ ಕೆ.ಎಂ. ಶೀವಲಿಂಗೇಗೌಡ : ನೀವು ಮೊದಲೇ ಹೇಳಬೇಕಾಗಿತ್ತು, ಅದನ್ನು ನೀವು ಮೊದಲೇ ಹೇಳಲಿಲ್ಲ. ನೀವು ಫೋಟೋ ತೆಗೆಸುವುದಕ್ಕೆ ಮೊದಲೇ verify ಮಾಡಿ ಕಾರ್ಡ್‌ಗಳನ್ನು ಕೊಡಬೇಕಾಗಿತ್ತು. ನೀವು

ಅಧಿಕಾರಿಗಳಿಂದ ಮೇದಲೇ verify ಮಾಡಿಸಿ, ಅರ್ಹ ಫಲಾನುಭವಿಗಳಿಗೆ ಕಾರ್ಡ್‌ಗಳನ್ನು ಕೊಡಬೇಕಾಗಿತ್ತು.

ಅಧ್ಯಕ್ಷರು : BPL Card ವಿಷಯ ಪ್ರಸ್ತಾಪವಾದರೆ ಅದರ ಚರ್ಚೆಗೆ ಅಂತ್ಯವೇ ಇಲ್ಲ.

ಶ್ರೀ ವೆಂಟಕರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಈಗ ಪ್ರಶ್ನೆ ಇರುವಂಥದ್ದು ಕಾರ್ಡ್‌ಗೆ ಸಂಬಂಧಪಟ್ಟದಲ್ಲ. ಶೇ. 80 ರಷ್ಟು cut ಮಾಡಬೇಕೆಂದು ಆದೇಶ ಕೊಟ್ಟಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಈ 80% ಅನ್ನು ಕಟ್ ಮಾಡುತ್ತೀರಿ? ಎರಡು ಕಾರ್ಡ್‌ಗಳು ಆಗಿರುವಂಥದ್ದು, ಸರಿ ಇಲ್ಲದ ಕಾರ್ಡ್‌ಗಳನ್ನು ತೆಗೆಯುವುದಕ್ಕೆ ನಮ್ಮದು ಯಾರದು objection ಇಲ್ಲ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಮುಂದುವರೆಸಲಿ...

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ವಾರ್ಡ್‌ಗಳನ್ನು, ಹೆಸರುಗಳನ್ನು, duplicate ಮಾಡಿ ಮನೆಗೆ ನಾಲ್ಕು ಕಾರ್ಡ್‌ಗಳನ್ನು ಇಟ್ಟುಕೊಂಡಿರುವವರ ಮೇಲೆ ಕೇಸ್ ಹಾಕಬೇಡಿ ಎಂದು ನಾವು ಹೇಳುವುದಿಲ್ಲ. ನಾವು ಈ ವಿಷಯದಲ್ಲಿ ನಿಮಗೆ ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆ. ಆದರೆ ನಮ್ಮಲ್ಲೇ ಆಗಿರುವಂಥದ್ದು, ನಾನೇ ಕಣ್ಣಾರೆ ನೋಡಿರುವಂಥದ್ದು ಹೇಳುತ್ತೇನೆ. ಸುಮಾರು 9,000 ಕಾರ್ಡ್‌ಗಳನ್ನು delete ಮಾಡಿದ್ದಾರೆ. ಈ ಬಗ್ಗೆ ನಾನು ಮತ್ತು ತಹಶೀಲ್ದಾರರು ಕುಳಿತು ಯೋಚನೆ ಮಾಡಿದೆವು. ನಾನು ಮತ್ತು ಅವರು ಕೆಲವು ಹಳ್ಳಿಗಳಿಗೂ ಹೋಗಿ ಬಂದೆವು. ನಾವು ಸುಮಾರು 150 ಜನರನ್ನು identify ಮಾಡಿದ್ದೇವೆ. ಇವರು ನಿಜವಾಗಿಯೂ eligible ಇದ್ದಾರಾ, ineligible ಇದ್ದಾರಾ ಎಂದು ನೋಡಿದೆವು. ನಾನು ಏನು ಹೇಳುತ್ತೇನೆಂದರೆ ನಾವೇ ಸುಮಾರು 150 ಜನರನ್ನು ಪರೀಕ್ಷೆ ಮಾಡಿರುವುದರಲ್ಲಿ ಇವರು delete ಮಾಡುವುದಕ್ಕೆಂದು ಏನು ಹೆಸರುಗಳನ್ನು ಇಟ್ಟುಕೊಂಡಿದ್ದಾರೆ, ಇದು ತಪ್ಪಾಗಿದೆ. ಅದಕ್ಕೆ ನಾನು ಹೇಳುವುದೇನೆಂದರೆ ಇದಕ್ಕೆ ಯಾರೇ ಮಂತ್ರಿಗಳಾಗಿ ಬಂದರೂ ಇದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ನೀವು ಇದಕ್ಕೆ ಮೊದಲು computerized card ಗಳನ್ನು ಕೊಡಿ, ನೀವು ಕೊಮ್ಯಾಟ್ ಸಂಸ್ಥೆಯನ್ನು ನಂಬಿಕೊಂಡು

ಮಾಡುತ್ತೇವೆಂದು ಅಂದುಕೊಂಡರೆ ಅದು ಆಗುವುದಿಲ್ಲ. ಅದರಿಂದ ಯಾರು ಉದ್ಧಾರವಾಗುವುದಕ್ಕೆ ಆಗುವುದಿಲ್ಲ. ನೀವು computerized card ಗಳನ್ನು ಬೇಗ ಕೊಡುವ ಕೆಲಸವನ್ನು ಮಾಡಿದರೆ duplication ಆಗುವಂಥದ್ದು ತಪ್ಪುತ್ತದೆ. ದಯಮಾಡಿ ತಾವು ಅದನ್ನು ಬೇಗ ಮಾಡುವಂಥ ಕೆಲಸವನ್ನು ಮಾಡಿ. ನೀವು unit ಗೆ 4. ಕೆ.ಜಿ. ಎಂದು ಮಾಡಿದರೆ, ಎರಡು, ಮೂರು ಕಾರ್ಡ್‌ಗಳನ್ನು ಮಾಡಿಸುತ್ತಾರೆ. ನೀವು ಈ unit system ತೆಗೆದುಹಾಕಿ ಮಕ್ಕಳಿಗೂ food ಕೊಡುವ ಹಾಗೆ ಮಾಡಿ. ಕನಿಷ್ಠ 15 ಕೆ.ಜಿ, 20 ಕೆ.ಜಿ. ಎಂದು ಮಾಡಿದರೆ ಆಗ ಈ ರೀತಿ duplicate card ಗಳು ಆಗುವಂಥದ್ದು ತಪ್ಪುತ್ತದೆ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಮಾತನಾಡುವಾಗ ಯಾರು ಅರ್ಹರಲ್ಲ, ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಹೇಳಿದರು. ಅಧಿಕಾರಿಗಳು ಎಲ್ಲೋ ಕುಳಿತು ಅರ್ಹರೆಂದು ಹೇಳುತ್ತಾರಲ್ಲಾ, ಅಂಥವರ ಮೇಲೆ ಕೇಸ್ ಹಾಕುತ್ತೀರಾ? ಇವರು ಶೇ. 80ರಷ್ಟು ತೆಗೆದು ಹಾಕಿ ಎಂದು ಹೇಳಿದರೆ, ಅವರು ಅರ್ಹರಾಗಿರುವವರನ್ನೆಲ್ಲಾ ತೆಗೆದಿದ್ದಾರೆ. ಇಂಥ ಅಧಿಕಾರಿಗಳ ಮೇಲೂ ಕೇಸ್ ಹಾಕುತ್ತೀರಾ?

ಅಧ್ಯಕ್ಷರು : ಆಯಿತು, ಮಾನ್ಯ ಮಂತ್ರಿಗಳೇ ಹೇಳಿ.

ಶ್ರೀ ಹೆಚ್.ಹಾಲಪ್ಪ : ಮಾನ್ಯ ಅಧ್ಯಕ್ಷರೆ, ಯಾರು ಅರ್ಹರಾಗಿದ್ದಾರೆ, ಅವರಿಗೆ ಕಾರ್ಡ್ ಕೊಡಬೇಕೆಂದು ಆಗಿದೆ. ಯಾರು ಅನರ್ಹರೆಂದು ಗೊತ್ತಾಗಿದೆ, ಅಂಥವರನ್ನು ತೆಗೆದು ಹಾಕಿದ್ದೇವೆ. ಇಲ್ಲಿ ಯಾರು ಉದ್ದೇಶ ಪೂರ್ವಕವಾಗಿ ತಿಳಿದು ತಿಳಿದೂ ಮಾಡಿದ್ದಾರೆ, ಅಂಥವರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದೇವೆ.

ಶ್ರೀ ಸಿದ್ದರಾಮಯ್ಯ : 29 ಲಕ್ಷ ಕಾರ್ಡ್‌ಗಳನ್ನು issue ಮಾಡಿ ಎಂದು ಹೇಳಿದವರು ಯಾರು? ನೀವು ಏಕಾಏಕಿ ಶೇ. 80 ಕಾರ್ಡ್‌ಗಳನ್ನು ತೆಗೆಯುತ್ತೇವೆಂದು ಹೇಳಿದರೆ ಸರ್ಕಾರದ ಯಾವ ಬುದ್ಧಿವಂತಿಕೆ ಇದು?

(7-30 PM)

ಪಾರ್ಲಿಮೆಂಟ್ ಎಲೆಕ್ಷನ್‌ಗೋಸ್ಕರ ಮಾಡಿರುವಂಥ ಕೆಲಸವದು. ಎಲೆಕ್ಷನ್ ಆಯಿತು. ಈಗ ಸಾರಾಸಗಟಾಗಿ 80% ಕಾರ್ಡ್‌ಗಳನ್ನು ತೆಗೆದು ಹಾಕುತ್ತೇವೆ ಎಂದು ಹೇಳುತ್ತಿದ್ದಾರೆ. Affidavit ತೆಗೆದುಕೊಂಡು ಮಾಡಿ ಎಂದು ಕೇಂದ್ರ ಸರ್ಕಾರ ನಿಮಗೆ ಹೇಳಿತ್ತೇ? ಅಂತ್ಯೋದಯ ಕಾರ್ಯಕ್ರಮದಲ್ಲಿ 12 ಲಕ್ಷ ಕಾರ್ಡುಗಳಿದ್ದು ಇವುಗಳಿಗೆ ಪಡಿತರನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಎಲ್ಲ ರೀತಿಯ ಕಾರ್ಡುಗಳು ಸೇರಿ ರಾಜ್ಯದಲ್ಲಿ ಒಟ್ಟು 78 ಲಕ್ಷ ಇತ್ತು. ನಮ್ಮ ಕಡೆ ಒಂದು ಗಾದೆ ಹೇಳುತ್ತಾರೆ. "ಸುಮ್ಮನೆ ಇರಲಾರದೆ ಇರುವೆ ಬಿಟ್ಟುಕೊಂಡರು" ಎಂದು. ಆ ರೀತಿ ಇವರು Affidavit ಮೂಲಕ ಕಾರ್ಡುಗಳನ್ನು ಕೊಟ್ಟು ಈಗ ತೆಗೆದು ಹಾಕುತ್ತೇವೆ ಎಂದು ಹೇಳುತ್ತಿದ್ದಾರೆ. Political intention is also there. ಎಲ್ಲರಿಗೂ ಆಹಾರ ಕೊಡಬೇಕು ಎಂದೇ Food Security Act ಅನ್ನು ತೆಗೆದುಕೊಂಡು ಬಂದಿರುವುದು.

(ಈ ಹಂತದಲ್ಲಿ ಶ್ರೀ ಚಂದ್ರಕಾಂತ ಬೆಲ್ಲದ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನೀವು ಮಾಡುತ್ತಿರುವುದು Food Security Actಗೆ ವಿರುದ್ಧವಾಗುತ್ತದೆ, ಬಡವರಿಗೆ ವಿರುದ್ಧವಾಗುತ್ತದೆ. ಇವತ್ತು Rural Development ಬಗ್ಗೆ ಚರ್ಚೆ ಮಾಡುವಾಗ you must keep this in mind. Eligible ಇದ್ದವರಿಗೆ ನೀವು ಕೊಡಲೇಬೇಕು, ಅದೇ ರೀತಿ ಎಲ್ಲರಿಗೂ ಆಹಾರ ಕೊಡಬೇಕು. 80% ಕಾರ್ಡುಗಳನ್ನು ತೆಗೆದುಹಾಕುತ್ತೇವೆ ಎಂದರೆ, ಅದು ಹಳ್ಳಿಗಾಡಿನಲ್ಲಿ it is going to be a heartburn.

ಶ್ರೀ ಹೆಚ್.ಸಿ.ಬಾಲಕೃಷ್ಣ : ಈಗ corporation limit ನಲ್ಲೂ ಕೊಡಲು ಶುರು ಮಾಡಿದ್ದಾರೆ. Corporation election ಆದಮೇಲೆ ಅದನ್ನು ತೆಗೆದು ಹಾಕುತ್ತಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಅದೇ ರೀತಿ, Corporation election ಆಗುವವರೆಗೆ ಬೆಂಗಳೂರಿನಲ್ಲಿ ಅಕ್ಕಿ ಸಂತೆ ನಡೆಯುತ್ತದೆ.

ಶ್ರೀ ಆರ್.ಅಶೋಕ್ : ಸುಮ್ಮಸುಮ್ಮನೆ allegation ಮಾಡಬೇಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ರಾಜರಾಜೇಶ್ವರಿನಗರದಲ್ಲಿ ಮೊನ್ನೆಯಿಂದ ಕೊಡುತ್ತಿದ್ದಾರೆ. Corporation election ದೃಷ್ಟಿಯಿಂದಲೇ ಅದನ್ನು ಕೊಡುತ್ತಿರುವುದು. ನೀವು ಕೊಡುತ್ತಿರುವುದೆಲ್ಲ temporary cards. Permanent ಆಗಿ ಕೊಡುತ್ತಿದ್ದೀರಾ? Corporation election ಆದಮೇಲೆ ಮತ್ತೆ ಅದನ್ನು ಕಿತ್ತು ಹಾಕುತ್ತೀರಿ.

ಶ್ರೀ ಆರ್.ಅಶೋಕ್ : ನೀವು ಇದ್ದಾಗ ಹಾಗೆ ಕೊಟ್ಟಿರಬಹುದು, ನಾವು ಹಾಗೆ ಮಾಡಲು ಹೋಗುವುದಿಲ್ಲ.

ಶ್ರೀ ಎ.ಮಂಜು : ಅದನ್ನು ನೀವು ಇಲ್ಲ ಎಂದು ಹೇಳಿಬಿಡಿ ಹಾಲಪ್ಪನವರೇ.

ಛೇರ್ಮನ್ : ನೀವು ಮುಂದುವರೆಸಿ ಸಿದ್ದರಾಮಯ್ಯನವರೇ, ನೀವು ಯೀಲ್ಡ್ ಆಗಬೇಡಿ.

ಶ್ರೀ ಸಿದ್ದರಾಮಯ್ಯ : ದಯವಿಟ್ಟು ಯಾರೂ intervene ಆಗಬೇಡಿ.

ಶ್ರೀ ಆರ್.ಅಶೋಕ್ : Suggestions ಕೊಡಿ. ನೀವು allegations ಮಾಡದೇ ಹೋದರೆ ನಾವು intervene ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : You are running the Government. ಈ ಸಬ್ಜೆಕ್ಟನ್ನು ತೆಗೆದುಕೊಂಡು ಬಂದಿರುವುದು ನೀವೇ. ಬಡವರಿಗೆ ಆಹಾರ ಕೊಡುವುದನ್ನು ನೀವು ನಿಲ್ಲಿಸಬಾರದು. ದಯವಿಟ್ಟು unit system ಅನ್ನು ತೆಗೆದುಹಾಕಿ. ಕೇಂದ್ರ ಸರ್ಕಾರ unit system ಮಾಡಿಲ್ಲ. ಇದರಲ್ಲಿ ನೀವು ಹೇಗೆ ಎರಡು ಕಾರ್ಯಕ್ರಮಗಳನ್ನು ಇಟ್ಟುಕೊಳ್ಳುತ್ತೀರಿ. 31 ಲಕ್ಷ ಕಾರ್ಡು ದಾರರಿಗೆ ಒಂದು ತರಹ ಕೊಡುವುದು, ಉಳಿದವರಿಗೆ ಒಂದು ತರಹ ಕೊಡಲಾಗುತ್ತದೆಯೇ? ನೀವು ಹಾಗೆ ಮಾಡಲು ಬರುವುದಿಲ್ಲ. ಕೇಂದ್ರದವರು 25 ಕೆ.ಜಿ. ಅಕ್ಕಿಯನ್ನು ಕೊಟ್ಟರೆ, ನೀವು ಅದನ್ನು unit ಪ್ರಕಾರ ಕೊಡಲು ಬರುವುದಿಲ್ಲ. ಒಬ್ಬರು ಇದ್ದರೆ 4 ಕೆ.ಜಿ., ಇಬ್ಬರು ಇದ್ದರೆ 8 ಕೆ.ಜಿ. ಎಂದು ಮಾಡಿದ್ದೀರಿ. ಹಿಂದೆ ನಾವು ಇದ್ದಾಗ ಒಂದು ಕಾರ್ಡಿಗೆ 20 ಕೆ.ಜಿ. ಕೊಡುತ್ತಿದ್ದೆವು. ನನಗೆ ಜ್ಞಾಪಕವಿದ್ದ ಹಾಗೆ ಆಗ ಸುಮಾರು 67 ಲಕ್ಷ ಕಾರ್ಡುಗಳಿದ್ದವು. I don't know why they have changed that system? ಅದನ್ನು unit system ಎಂದು ಇವರು ಮಾಡಿಕೊಂಡರು. ಆ

ರೀತಿ ಮಾಡಿರುವುದರಿಂದ ಸಾರಾಸಗಟಾಗಿ ಎಲ್ಲ ಕಾರ್ಡುದಾರರಿಗೆ 20 ಕೆ.ಜಿ. ಬರುವುದಿಲ್ಲ. ಕೇಂದ್ರ ಸರ್ಕಾರ ಮಾಡಿರುವುದನ್ನು ನೀವು ಹೇಗೆ unit system ಎಂದು ಮಾಡಿದಿರಿ? you can't do. ಉಳಿದ ಕಾರ್ಡುದಾರರಿಗೆ ಕೂಡ unit system ಎಂದು ಇರುವುದನ್ನು ನೀವು ತೆಗೆಯಲೇಬೇಕು. You are forced to do it. ಒಂದು ಕಾರ್ಡಿಗೆ ಇಷ್ಟೆಂದು ಕೊಡಲೇಬೇಕಾಗುತ್ತದೆ.

ಇನ್ನು ಮನೆಗಳ ಬಗ್ಗೆ ಹೇಳಬೇಕೆಂದರೆ, 2007–08 ರಲ್ಲಿ ಒಂದು ಮನೆಯನ್ನೂ ಕೊಟ್ಟಿಲ್ಲ. ಹಳೆಯ ಬಾಕಿ ಒಂದು ಲಕ್ಷ ಮನೆಗಳನ್ನು ಕಟ್ಟಿಸಿದ್ದೀರಿ ಅಷ್ಟೇ. 2008–09ರಲ್ಲಿ ಒಂದು ಪಂಚಾಯಿತಿಗೆ 25 ಮನೆಗಳು ಎಂದು ಕೊಟ್ಟಿದ್ದಾರೆ. 2009–10ರಲ್ಲಿ ಒಂದು ಮನೆಯನ್ನೂ ಕೊಟ್ಟಿಲ್ಲ. ಬಡವರಿಗೆ ಸೂರು ಇಲ್ಲ ಎಂದು economic survey ಯಲ್ಲಿದೆ. ಪಟ್ಟಣ ಪ್ರದೇಶಗಳಲ್ಲಿ ಒಂದೇ ಒಂದು ಸೈಟ್ ಮಾಡಲು ಆಗಲಿಲ್ಲ. ಬಡವರಿಗೆ ಜಮೀನು ತೆಗೆದುಕೊಡಬೇಕು ಎನ್ನುವ ಒಂದು ಕಾರ್ಯಕ್ರಮವಿದ್ದು, ಅದರ ಪ್ರಕಾರ ಎಲ್ಲಾದರೂ ಒಂದು ಎಕರೆ ಜಮೀನನ್ನು ತೆಗೆದು ಕೊಟ್ಟಿದ್ದಾರೆಯೇ? "ಆಶ್ರಯ" ಕಮಿಟಿಗಳನ್ನು ಮಾಡಲು ಆಗಿಲ್ಲ, "ಆರಾಧನ" ಕಮಿಟಿಗಳನ್ನು ಮಾಡಲು ಆಗಿಲ್ಲ. ಅಕ್ರಮ–ಸಕ್ರಮ ಕಮಿಟಿಗಳನ್ನು ಮಾಡಿಲ್ಲ. ನೀವು ಅಧಿಕಾರಕ್ಕೆ ಬಂದು ಒಂದು ವರ್ಷ ಮೂರು ತಿಂಗಳಾಗುತ್ತಾ ಬಂತು. ಅದಕ್ಕಿಂತ ಹಿಂದೆಯೂ 20 ತಿಂಗಳು ಇದ್ದಿರಿ. ಯಾವುದೇ tribunal ಗಳಾಗಲಿಲ್ಲ. ಮತ್ತೆ ಹೇಗೆ rural development ಆಗುತ್ತದೆ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಅದು ಇಲ್ಲೇ ಗೊತ್ತಾಗುತ್ತದಲ್ಲ. ವಿರೋಧ ಪಕ್ಷದ ನಾಯಕರಾದ ತಾವು ಮಾತನಾಡುತ್ತಿದ್ದೀರಿ. ಮುಖ್ಯಮಂತ್ರಿಗಳು 9 ಗಂಟೆಯವರೆಗೆ ಇರುವುದಿಲ್ಲ ಎಂದು ಹೇಳಿದ್ದರು. ಆದರೆ, ಗ್ರಾಮೀಣಾಭಿವೃದ್ಧಿ ಸಚಿವರೂ ಇಲ್ಲ, ಕೃಷಿ ಸಚಿವರೂ ಇಲ್ಲ. ಈ ಎರಡು ಇಲಾಖೆಗಳ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿದೆ. ಸದಸ್ಯರಾದ ನಾವು ಮಾತನಾಡುವುದಾದರೆ ಒಂದು ತರಹ. ಆದರೆ ವಿರೋಧ ಪಕ್ಷದ ನಾಯಕರು ಮಾತನಾಡುವಾಗಲೂ ಇಲ್ಲವೆಂದರೆ ನಿಮ್ಮ ಬದ್ಧತೆ ಎಷ್ಟರಮಟ್ಟಿಗೆ ಇದೆ, ನೀವು ಎಷ್ಟು ಕಳಕಳಿಯಿಂದ ಇದನ್ನು ಮಂಡಿಸಿದ್ದೀರಿ ಎನ್ನುವುದು ಗೊತ್ತಾಗುತ್ತದೆ. ನಿಮ್ಮ ಸದಸ್ಯರುಗಳು ಎಷ್ಟು ಜನರಿದ್ದೀರಿ ಎಂದು ಒಂದು ಸಲ ಹಿಂದಕ್ಕೆ ತಿರುಗಿ ನೋಡಿ.

ಶ್ರೀ ಸಿದ್ದರಾಮಯ್ಯ : ನಿಮ್ಮ ಮಂತ್ರಿಗಳು ಏನು ಮಾಡುತ್ತಿದ್ದಾರೆ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಂತ್ರಿಗಳನ್ನು ಬಿಟ್ಟರೆ ಒಬ್ಬರು M.L.A. ಮಾತ್ರ ಕುಳಿತಿದ್ದಾರೆ. ಒಬ್ಬರು ಶಾಸಕರನ್ನು ಬಿಟ್ಟರೆ ಇಲ್ಲಿ ಕುಳಿತಿರುವವರೆಲ್ಲ ಮಂತ್ರಿಗಳೇ.

ಶ್ರೀ ಸಿದ್ದರಾಮಯ್ಯ : ಕೋರಂ ಇದೆಯೇ?

ಒಬ್ಬ ಮಾನ್ಯ ಸದಸ್ಯರು : ಕೋರಂ ಇಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಂತ್ರಿಗಳು 5–6 ಜನರು ಮಾತ್ರ ಇದ್ದಾರೆ.

ಶ್ರೀ ಉಮೇಶ್ ಕತ್ತಿ : ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್‌ರವರು ನಾಳೆ ಬೆಳಿಗ್ಗೆ ಹೋಗಬಹುದು.

ಛೇರ್ಮನ್ : ಕೋರಂ ಇದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ನಿಮ್ಮ ಕಾಳಜಿ ಎಷ್ಟರ ಮಟ್ಟಿಗೆ ಇದೆ ಎನ್ನುವುದು ಇದರಲ್ಲೇ ಅರ್ಥವಾಗುತ್ತದೆ. ಆಡಳಿತ ಪಕ್ಷದ only single M.L.A. is sitting in the House.

ಶ್ರೀ ಸಿದ್ದರಾಮಯ್ಯ : ಮಂತ್ರಿಗಳನ್ನು ಕರೆಸಿ. Agriculture ಮೇಲೆ ಚರ್ಚೆ ನಡೆಯುತ್ತಿದೆ. ಅವರು ಎಲ್ಲರ ಅಭಿಪ್ರಾಯಗಳನ್ನು ಕೇಳಬೇಕು.

ಶ್ರೀ ಡಿ.ಎನ್. ಜೀವರಾಜ್ : ಏನಾಗಿದೆ ಎಂದರೆ, ಶುಕ್ರವಾರದಂದು ಸದನ ಸಾಮಾನ್ಯವಾಗಿ ಎರಡು ಗಂಟೆಗೆ ಮುಗಿಯುತ್ತದೆ. ಆದರೆ ಇವತ್ತು ಹತ್ತು ಗಂಟೆಗೆ ಕರೆದಿದ್ದೀರಿ, ಇಷ್ಟು ಹೊತ್ತಾದರೂ ಸದಸ್ಯರು ಹೇಗೆ ಇರುತ್ತಾರೆ? ಬಸ್ಸು ಟಿಕೆಟ್ ಮಾಡಿಸಿದ್ದವರೆಲ್ಲ ಹೋದರು.

ಶ್ರೀ ರಮಾನಾಥ ರೈ : ಒಬ್ಬರು Chief Whip, ಮಂತ್ರಿಗಳು ಮತ್ತು ಒಬ್ಬ ಶಾಸಕರು ಮಾತ್ರ ಇದ್ದಾರೆ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಸಿದ್ದರಾಮಯ್ಯ ಸಾಹೇಬರಿಗೆ ಗೊತ್ತಿದೆ, ಪ್ರತಿ ಶುಕ್ರವಾರ ಸದನ ಮಧ್ಯಾಹ್ನಕ್ಕೆ ಮುಗಿಯುತ್ತದೆ.

ಶ್ರೀ ಸಿದ್ದರಾಮಯ್ಯ : ಹಾಗಿದ್ದರೆ ಈಗ ನಾನು ಮಾತನಾಡುವುದು ಬೇಡ ಎಂದು ಹೇಳಬೇಕಾಗಿತ್ತು, ಸೋಮವಾರ ಮಾತನಾಡಿ ಎಂದು ನನಗೆ ಹೇಳಬೇಕಾಗಿತ್ತು.

ಶ್ರೀ ಹೆಚ್.ಡಿ.ರೇವಣ್ಣ : ಸಿದ್ದರಾಮಯ್ಯನವರೇ, ನೀವು ಸೋಮವಾರ ಮಾತನಾಡಿ.

ಛೇರ್ಮನ್ : ನೀವು ಈಗ ಮುಗಿಸಿ. ಈಗಾಗಲೇ ಕೊಡಬೇಕಾದ ಸಲಹೆಗಳನ್ನೆಲ್ಲ ಕೊಟ್ಟಿದ್ದೀರಿ.

ಶ್ರೀ ಸಿದ್ದರಾಮಯ್ಯ : Rural development minister ಇಲ್ಲ, agriculture minister ಇಲ್ಲ, Chief Minister ಇಲ್ಲ.

ನಾನು ಇನ್ನೂ ಕೂಡ Agriculture ಮೇಲೆ ಮಾತನಾಡುತ್ತಿದ್ದೇನೆ. ಆಮೇಲೆ sericulture ಮೇಲೆ ಮಾತನಾಡಬೇಕು. ನಿಮಗೆ ಅದರ ಮೇಲೆ ಸಲಹೆಗಳು ಬೇಡವೇ? ನಂತರ Animal Husbandry Department ಮೇಲೆ ಮಾತನಾಡಬೇಕು. ಆಮೇಲೆ Horticulture ಬಗ್ಗೆ ಮಾತನಾಡಬೇಕು.

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) : ತಾವು ಮಾತನಾಡಿ ಸರ್, ನಾವು ಕೇಳುವುದಕ್ಕೆ ರೆಡಿ ಇದ್ದೇವೆ. ಅದಕ್ಕೋಸ್ಕರ ನಾವಿಲ್ಲಿ ಕುಳಿತಿದ್ದೇವೆ.

(ಈ ಹಂತದಲ್ಲಿ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಸಿದ್ದರಾಮಯ್ಯ : ಎಲ್ಲಿ ಕುಳಿತಿದ್ದೀರಿ? ನಿಮ್ಮ MLA ಗಳನ್ನೇ ನೀವು ಕೂರಿಸಿಕೊಂಡಿಲ್ಲ.

ಶ್ರೀ ಆರ್. ಅಶೋಕ್ : ಕಳೆದ 10–15 ವರ್ಷಗಳಿಂದ ಶುಕ್ರವಾರ ಬಂತೆಂದರೆ ಸಾಮಾನ್ಯವಾಗಿ ಬಹಳಷ್ಟು ಸದಸ್ಯರು ಮಧ್ಯಾಹ್ನ 2 ಗಂಟೆಗೆ ಊರಿಗೆ ಹೋಗುವ ಪದ್ಧತಿ ಇದೆ. ಅದು ನಮ್ಮ ಪಾರ್ಟಿಯಿಂದಲೂ ಇದೆ, ನಿಮ್ಮ ಪಾರ್ಟಿಯಿಂದಲೂ ಇದೆ.

ಶ್ರೀ ಸಿದ್ದರಾಮಯ್ಯ : I don't find fault with that. ಮೂರು ದಿನ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಬಹಳ ಕಾಳಜಿಯಿಂದ ಚರ್ಚೆ ಮಾಡುವುದಕ್ಕೆ ನೀವು ಕರೆದಿರುವುದಲ್ಲವೇ? ಅದು ಇಲ್ಲವಲ್ಲ. Prima facie you are lacking. ಆ ತರಹ ನಿಮ್ಮಲ್ಲಿ ಕಾಣುವುದಿಲ್ಲವಲ್ಲ. commitment ಎಲ್ಲಿದೆ? ಈಗ ಗ್ರಾಮೀಣಾಭಿವೃದ್ಧಿ ಮಂತ್ರಿ ಎಲ್ಲಿ ಹೋದರು? ಅವರ ಇಲಾಖೆ ಮೇಲೆ ಅಲ್ಲವೇ ನಾವು ಚರ್ಚೆ ಮಾಡುತ್ತಿರುವುದು. ಇಲ್ಲಿ Animal Husbandry Minister ಎಲ್ಲಿದ್ದಾರೆ? Horticulture Minister ಎಲ್ಲಿದ್ದಾರೆ? Sericulture Minister ಎಲ್ಲಿದ್ದಾರೆ? ಸರಿ, Horticulture Minister

ಸದನದಲ್ಲಿದ್ದಾರೆ. ಮೀನುಗಾರಿಕೆ ಸಚಿವರು ಎಲ್ಲಿದ್ದಾರೆ? ಇವೆಲ್ಲ Rural ಗೆ agriculture improve ಮಾಡಬೇಕಾದರೆ, Development Programmes ನಲ್ಲಿ, ಅಭಿವೃದ್ಧಿ ಖರ್ಚಿನಲ್ಲಿ ಕನಿಷ್ಠ 10% agriculture ಗೆ allotment ಮಾಡಬೇಕು, Non developmentನಲ್ಲಿ ಕನಿಷ್ಠ 20% ಮಾಡಬೇಕು ಎಂದು ಡಾ: ಅಬ್ದುಲ್ ಕಲಾಂರವರು ಹೇಳಿದ್ದಾರೆ. ಇದನ್ನು ಬರೆದುಕೊಳ್ಳಿ. Agriculture ಅಭಿವೃದ್ಧಿಯಾಗಬೇಕು. Food production ಜಾಸ್ತಿಯಾ ಗಬೇಕು. Irrigation ನಲ್ಲಿ minimum 25% of the total plan ಮಾಡಬೇಕು. ನೀವು ಏನೂ ಮಾಡದಿದ್ದರೆ improve ಆಗುವುದಿಲ್ಲ. Agriculture Minister ರವರೆ, ನಿಮ್ಮಲ್ಲಿ ಎಷ್ಟು ಹಣ ಇಟ್ಟಿದ್ದಾರೆಂದು ಗೊತ್ತಿದೆಯೇ? 2007–08ರ plan ನಲ್ಲಿ 7% ಇಟ್ಟಿದ್ದಾರೆ. 2008–09ರಲ್ಲಿ 9% again 2009–10ರಲ್ಲಿ 7% ಇಟ್ಟಿದ್ದಾರೆ. Planನಲ್ಲಿ ಕನಿಷ್ಠ 10% agricultureಗೆ allocation ಇಡಬೇಕು ಮತ್ತು Non Planನಲ್ಲಿ ಕನಿಷ್ಠ 22% ಹಣ ಇಡಬೇಕೆಂದು ಡಾ: ಅಬ್ದುಲ್‌ಕಲಾಂರವರು ಇಲ್ಲಿ ಬಂದು ನಮಗೆ ಭಾಷಣ ಮಾಡಿದರು. ನೀವು agricultureನಲ್ಲಿ ಏನಾದರೂ ಚೆನ್ನಾಗಿ ಬೆಳೆಯಬೇಕಾ ಗಿದ್ದರೆ, ನೀವು GDPಯಲ್ಲಿ 10%ಗೆ ಹೋಗಬೇಕಾದರೆ, ಕೃಷಿಯಲ್ಲಿ 4–4.5% ಬೆಳೆಯಬೇಕಾದರೆ, food production double ಆಗಬೇಕಾದರೆ ಇವೆಲ್ಲ ಮಾಡಿ ಎಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ 50% ಬಂಜರು ಭೂಮಿ ಇದೆ. 50% of existing ಬಂಜರು ಭೂಮಿಯಲ್ಲಿ 50% ನೀವು bio-fuel plants ಬೆಳೆಸಿ ಎಂದು ಹೇಳುತ್ತಾರೆ. ಜತ್ರೋಪ, ಹೊಂಗೆ ಈ ತರಹದ ಗಿಡಗಳನ್ನು ಬೆಳೆಸಿ ಎಂದು ಹೇಳಿದ್ದಾರೆ. ಕೃಷಿ ಸಚಿವರು ಇದನ್ನೆಲ್ಲ ಎಲ್ಲಾದರೂ ಹಾಕಿಸಿದ್ದೀರಾ? ಹೊಂಗೆ ಎಷ್ಟು ಎಕರೆ ಪ್ರದೇಶದಲ್ಲಿ ಮಾಡಿಸಿದ್ದೀರಿ?

ಶ್ರೀ ಎಸ್. ಎ. ರವಿಂದ್ರನಾಥ್ (ಕೃಷಿ ಸಚಿವರು) : 3 ಲಕ್ಷ ಸಸಿಗಳನ್ನು 7–8 ಹಳ್ಳಿಗಳಲ್ಲಿ ಹಾಕಿಸಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅದರಿಂದ ವಾರ್ಷಿಕ ಎಷ್ಟು income ಬರುತ್ತಿದೆ?

ಶ್ರೀ ಎಸ್.ಎ. ರವೀಂದ್ರನಾಥ್ : ಆ ಗಿಡಗಳನ್ನು ಹಾಕಿ ಇನ್ನೂ ವರ್ಷ ಪೂರ್ಣಗೊಂಡಿಲ್ಲ. ಈಗ ಹಾಕುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಆಯಿತು, ಅದಕ್ಕೆ processing unit ಎಲ್ಲಿದೆ?

ಶ್ರೀ ಟಿ.ಬಿ.ಜಯಚಂದ್ರ : ಜತ್ರೋಪ ಹಾಕಿಸಿದ್ದೀರಲ್ಲಾ, ಅದಕ್ಕೆ Processing unit ಇದೆಯೇ?

ಶ್ರೀ ಎಸ್.ಎ. ರವೀಂದ್ರನಾಥ್ : ಅದು ಆ ವರ್ಷವಾದ ಮೇಲೆ ಬರುತ್ತದೆ. ಆಗ ಏನೇನು ಮಾಡಬೇಕೋ ಅದೆಲ್ಲವನ್ನು ಮಾಡಲಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಆಯಿತು, ನೀವೇನು ಮಾಡಿದ್ದೀರಿ? Oil palm ನದು ಸರ್ಕಾರದವರು ಇದೇ ರೀತಿ ಮಾಡಿ ದಾವಣಗೆರೆಯಲ್ಲಿ ಏನಾಯಿತು? ಎಲ್ಲಾ uproot ಮಾಡಿ ಹಾಕಿದರು.

ಶ್ರೀ ಎಸ್.ಎ. ರವೀಂದ್ರನಾಥ್ : ಆ Oil palm ಅನ್ನು ಸರಿಯಾದ ರೀತಿಯಲ್ಲಿ ನಡೆಯುವ ಹಾಗೆ ನೀವು ಕೃಷಿ ಸಚಿವರಾಗಿದ್ದಾಗ ನೋಡಿದ್ದರೆ ಆ ನೀಲಗಿರಿ ದಿವಾಳಿಯಾಗುತ್ತಿರಲಿಲ್ಲ. ಅದಕ್ಕೆ ಒಳ್ಳೆಯ ರೇಟ್ ಸಿಗುತ್ತಿತ್ತು. ನೀವು ಆಗ ಮಾಡಲಿಲ್ಲ.

ಶ್ರೀ ಆರ್.ಅಶೋಕ್ : ಮಾನ್ಯ ಜಯಚಂದ್ರರವರೆ, "ಕೂಸು ಹುಟ್ಟಿದ ಮೇಲೆ ಕುಲಾವಿ." ಕೂಸು ಹುಟ್ಟುವುದಕ್ಕೆ ಮುಂಚೆ ಏಕೆ ಅರ್ಜೆಂಟ್ ಮಾಡುತ್ತಿದ್ದೀರಿ?

ಶ್ರೀ ಟಿ.ಬಿ. ಜಯಚಂದ್ರ : ಅಲ್ಲಿ ಏನು ಮಾಡಿದ್ದೀರೆಂದರೆ, Farm ಗೆ ಪ್ರೋತ್ಸಾಹ ಕೊಟ್ಟು ಬೆಳೆಸಿದ್ದೀರಿ. Processing unit ಬಂತು. Processing Unit function ಮಾಡಲಿಲ್ಲ. ಈಗ ತಮಿಳುನಾಡಿಗೆ ಹೋಗುವುದಕ್ಕೆ ಪ್ರಾರಂಭವಾಯಿತು. ಈಗ ಎಲ್ಲ uproot ಮಾಡುವುದಕ್ಕೆ ಪ್ರಾರಂಭ ಮಾಡಿದ್ದೀರಿ. ನೀವು ರೈತರಿಗೆ ಹೇಳಿ ಜತ್ರೋಪ ಬೆಳೆಸುತ್ತೀರಲ್ಲಾ, processing unit ಯಾವುದು? ಸರ್ಕಾರದವರು ಮಾಡುತ್ತೀರಾ? ಮಾಡಿ. ಇದನ್ನು ಹೇಳಬೇಕು.

ಶ್ರೀ ಎಸ್.ಎ. ರವೀಂದ್ರನಾಥ್ : ಸಣ್ಣ ಸಣ್ಣ Unit ಗಳನ್ನು ಮನೆಯಲ್ಲಿಯೇ ಒಂದು ದಿನಕ್ಕೆ 40 ಲೀಟರ್ ತೆಗೆಯುವ ಹಾಗೆ ಮಾಡುವಂಥ ವ್ಯವಸ್ಥೆಯನ್ನು ಕಂಡುಹಿಡಿದಿದ್ದೇವೆ.

ಶ್ರೀ ಆರ್. ಅಶೋಕ್ : ಜಯಚಂದ್ರರವರೆ, ನಾನೇ ಸುತ್ತೂರು ಮಠಕ್ಕೆ ಹೋಗಿದ್ದೇನೆ. ಅವರು ಈಗಾಗಲೇ unit ಮಾಡಿದ್ದಾರೆ. Engineering collegeನಲ್ಲಿ ಅದರ unit ಮಾಡಿದ್ದಾರೆ. ಅದರ 4–5

modles ಮಾಡಿರುವುದನ್ನು ನಾನು ನೋಡಿದ್ದೇನೆ. ಈಗ ನಾವು ಅದನ್ನು ಮೈಸೂರು ಸಾರಿಗೆ ವ್ಯವಸ್ಥೆಗೆ 10% Use ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕಾಗಿ ನಮಗೆ ಕೇಂದ್ರ ಸರ್ಕಾರ 21 ಕೋಟಿ ರೂಪಾಯಿಗಳನ್ನು ಕೊಡುತ್ತಿದೆ. ಕೇಂದ್ರ ಸರ್ಕಾರ ಈ ಬಗ್ಗೆ project ಕೊಟ್ಟಿದೆ. ಅದರ rate fix ಮಾಡಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : Delhi surrounding ಬಿಟ್ಟರೆ ಬೇರೆ ಎಲ್ಲೂ processing unit ಬಂದಿಲ್ಲ. ಈ Processing unit ಅನ್ನು ಮಾಡುವುದಕ್ಕೆ ಸರ್ಕಾರ ತೀರ್ಮಾನ ಮಾಡಿ ರೈತರಿಗೆ ಹೇಳಿ ಬೆಳೆಸಿ. ಅದು harvesting ಗೆ ಬಂದಾಗ ಮಾತ್ರ waste ಆಗಬಾರದು.

ಶ್ರೀ ಆರ್. ಅಶೋಕ್ : "ಕೂಸು ಹುಟ್ಟಿದ ಮೇಲೆ ಕುಲಾವಿ" ಹೊಲಿಸಿಯೇ ಹೊಲಿಸುತ್ತೇವೆ. ಅದರಲ್ಲಿ ಬೇರೆ ಮಾತೇ ಇಲ್ಲ. ದಾವಣಗೆರೆ farms ನಲ್ಲಿ ಏನಾಗಿದೆ ಎನ್ನುವುದನ್ನು ಕೇಳಿ. ಮಂತ್ರಿಗಳು ಇರುವ ಕ್ಷೇತ್ರದಲ್ಲಿ ಏನಾಗಿದೆ ಎನ್ನುವ ಕಥೆ ಕೇಳಿ.

ಶ್ರೀ ಎಸ್.ಎ. ರವೀಂದ್ರನಾಥ್ : ಆ ಬೆಳೆ ಇನ್ನೂ ಬಂದಿಲ್ಲ. ಹಾಗಾಗಿ ಈಗಲೇ machine ತಯಾರು ಮಾಡಿ ಏನು ಮಾಡುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ : Processing unit ಇಲ್ಲದೆ ಇವುಗಳನ್ನೆಲ್ಲ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಸಿದ್ದರಾಮಯ್ಯ : ಬಂಜರು ಭೂಮಿಯನ್ನು ಬಳಸಿಕೊಳ್ಳುವುದಕ್ಕೆ ಏನು ಮಾಡಬೇಕೆಂಬ ಬಗ್ಗೆ ಯೋಚನೆ ಮಾಡಬೇಕು. ಅದಕ್ಕೆ invest ಮಾಡಬೇಕು, Processing unit ಹಾಕಬೇಕು, ಅದರಿಂದ returns ಬರುವ ಹಾಗೆ ಮಾಡಬೇಕು. ಡಾ: ಅಬ್ದುಲ್‌ಕಲಾಂ ರವರ ಭಾಷಣವನ್ನು ನಾನು ಓದಿದೆ. ಕೇವಲ ಎಥೆನಾಲ್‌ನಿಂದಲೇ ಕರ್ನಾಟಕದಲ್ಲಿ ಸುಮಾರು 875 ಕೋಟಿ ರೂಪಾಯಿಗಳಷ್ಟು ಆದಾಯ ಬರುವ ಸಾಧ್ಯತೆ ಇದೆಯೆಂದು ಹೇಳಿದ್ದಾರೆ. ಇನ್ನು, ನಮ್ಮ ಕರ್ನಾಟಕದಲ್ಲಿ ಬೇಕಾದಷ್ಟು fruits ಅನ್ನು ಬೆಳೆಯುತ್ತಾರೆ. Grapes, ಪರಂಗಿ ಹಣ್ಣು, ಮಾವಿನ ಹಣ್ಣು, ತೆಂಗು, ಬಾಳೆ ಮುಂತಾದವನ್ನು ಬೇಕಾದಷ್ಟು ಬೆಳೆಯುತ್ತೇವೆ. ಟೊಮೊಟೋವನ್ನು ರೈತರು ಬೇಕಾದಷ್ಟು ಬೆಳೆಯುತ್ತಾರೆ. ಅದಕ್ಕೆ ಒಂದೊಂದು ಸಲ ಒಳ್ಳೆಯ ಬೆಲೆ ಬರುತ್ತದೆ, ಕೆಲವು ಸಲ ಬೆಲೆ ತೀರಾ ಕಡಿಮೆಯಾಗುವುದರಿಂದ

ಟೊಮೊಟೋವನ್ನು ತೆಗೆದುಕೊಂಡು ಹೋಗಿ ರಸ್ತೆಗೆ ಎಸೆಯುತ್ತಾರೆ. ಅದು waste ಆಗದ ರೀತಿಯಲ್ಲಿ ತೋಟಗಾರಿಕೆ ಇಲಾಖೆಯವರು ನೋಡಿಕೊಳ್ಳ ಬೇಕು. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕು. ಡಾ: ಅಬ್ದುಲ್ ಕಲಾಂರವರು ಸುಮಾರು 10 ಸಾವಿರ ಕೋಟಿ ರೂಪಾಯಿ ಗಳಷ್ಟು horticulture ಒಂದರಿಂದಲೇ ಬರುತ್ತದೆಂದು ಹೇಳಿದ್ದಾರೆ. Agriculture ನಲ್ಲಿ food processing unit ಇವುಗಳನ್ನೆಲ್ಲ ಇಟ್ಟುಕೊಂಡರೆ ಸುಮಾರು 50 ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತದೆಂದು ಹೇಳಿದ್ದಾರೆ. ಕೆಲವು economistಗಳ ಜೊತೆ ಚರ್ಚೆ ಮಾಡಿ ಈ ಮಾಹಿತಿಗಳನ್ನೆಲ್ಲ ಅವರು ತಯಾರು ಮಾಡಿರುವಂಥದ್ದು. ಏಕೆಂದರೆ ಆ economist ಗಳು ಬರೆದಿರುವ ಪುಸ್ತಕವನ್ನು ನಾನು ಓದಿದ್ದೇನೆ. ಅದಕ್ಕೂ ಆ ಭಾಷಣಕ್ಕೂ ಒಂದಕ್ಕೊಂದು ತಾಳೆ ಇದೆ. Better quality in Rural Life ಎಂದು essay ಗಳನ್ನು ಕೆಲವು 4-5 ಜನ economist ಗಳು ಬರೆದಿದ್ದಾರೆ. ಕೃಷಿಯಲ್ಲಿ ಏನೇನು ಮಾಡಬೇಕೆಂಬ ಬಗ್ಗೆ ಅವರು ಐದು ಅಂಶಗಳನ್ನು ಹೇಳಿದ್ದಾರೆ. ಕೃಷಿ ಲಾಭದಾಯಕವಾಗಬೇಕಾದರೆ agriculture and food processing ಇದನ್ನು ಮಾಡಬೇಕು. ಆಮೇಲೆ reliable and quality power, no power with you. ಹೀಗಾದರೆ, agriculture ಹೇಗೆ ಉದ್ಧಾರವಾಗುತ್ತದೆ. ನಿಮ್ಮ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಒಂದೇ ಒಂದು M.W. ವಿದ್ಯುತ್ ಉತ್ಪಾದನೆ ಮಾಡಲಿಲ್ಲ. 500 M.W. ಬಳ್ಳಾರಿ ಶಾಖಾ ಉತ್ಪಾದನಾ Unit ಏನಿದೆ, ಅದು 8 ವರ್ಷದ ಹಿಂದಿನಿಂದ ಇದೆ.

ಶ್ರೀ ಹೆಚ್.ಡಿ.ರೇವಣ್ಣ : ಅದನ್ನು inauguration ಮಾಡಿರುವುದು ಬಿಟ್ಟರೆ ಇನ್ನೇನೂ ಇಲ್ಲ.

ಶ್ರೀ ಸಿದ್ದರಾಮಯ್ಯ : ಅದು ಬಿಟ್ಟು ಬೇರೇನೂ ಮಾಡಲಿಲ್ಲ. ನಿಮ್ಮ Economic Survey ಯನ್ನು ನಾನು ನೋಡಿದ್ದೇನೆ. ಅದರಲ್ಲಿ ಒಂದೇ ಒಂದು ಯೂನಿಟ್ ವಿದ್ಯುತ್ ಸಹ ಹೆಚ್ಚಿಗೆ ಮಾಡಿಲ್ಲ. ಇವತ್ತು hydelpower generate ಮಾಡುವ ಎಲ್ಲಾ reservoirಗಳು ತುಂಬಿವೆ. ಆದರೂ ಈಗ ಪವರ್ ಏಕಿಲ್ಲ? ಹಳ್ಳಿಯಲ್ಲಿ ಪವರ್ ಇಲ್ಲ. ನಾನೊಂದು ಹಳ್ಳಿಗೆ ಹೋಗಿದ್ದೆ. ಅಲ್ಲಿ ದಿವಸಕ್ಕೆ ಮೂರು ಗಂಟೆ ಸಹ ಪವರ್ ಸಿಕ್ಕುತ್ತಿಲ್ಲವೆಂದು ಹೇಳುತ್ತಾರೆ. ಬೇಕಾದರೆ ನನ್ನ ಜೊತೆ ಬನ್ನಿ, ಆ ಊರಿಗೆ ಹೋಗೋಣ. Quality power,

reliable power ಎಲ್ಲಿದೆ? Infrastructure development ಇಲ್ಲವೇ ಇಲ್ಲ. Education, Health Care is very poor. ಹಳ್ಳಿಗಾಡುಗಳಿಗೆ High School ಗಳನ್ನು ಮಂಜೂರು ಮಾಡಿದ್ದೀರಿ. ಆದರೆ, ಕೇಂದ್ರ ಸರ್ಕಾರದ ಸರ್ವ ಶಿಕ್ಷಣ ಅಭಿಯಾನ ಯೋಜನೆಯಲ್ಲಿ ಬಿಟ್ಟರೆ ಅಲ್ಲಿಗೆ ರೂಂ ಕಟ್ಟಿಸಲಿಕ್ಕೆ ಈ ವರ್ಷ ಮತ್ತು ಕಳೆದ ವರ್ಷ ಸ್ವಲ್ಪವೂ ಹಣ ಕೊಟ್ಟಿಲ್ಲ. ಇವತ್ತು ಹಳ್ಳಿಗಾಡಿನಲ್ಲಿ High School, PUC ಮಕ್ಕಳು ಕೊಠಡಿ ವ್ಯವಸ್ಥೆಯಲ್ಲಿ ನೆಲದ ಮೇಲೆ ಕುಳಿತು ಕೊಳ್ಳಬೇಕಾದ ಪರಿಸ್ಥಿತಿ ಇದೆ. ಹೀಗಾದರೆ, Quality education ಹೇಗೆ ಬರುತ್ತದೆ? ಅದನ್ನು ಮಾಡಲಿಲ್ಲ. You have to find resources. ಇವುಗಳಿಗೆಲ್ಲ ನೀವು resources ಹುಡುಕಬೇಕು. ಇದನ್ನು ಮಾಡದೆ ಕೇವಲ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಚರ್ಚೆ ಮಾಡಿ ಎಂದು ಹೇಳಿದರೆ ಏನು ಚರ್ಚೆ ಮಾಡುವುದು? Technology ಹಳ್ಳಿಗಳಿಗೆ ವರ್ಗಾವಣೆಯಾಗಿಲ್ಲ. Animal Husbandry ಯಲ್ಲಿ ಏನೂ ಬೆಳವಣಿಗೆಯಾಗಿಲ್ಲ. ಹಳ್ಳಿಯಲ್ಲಿ 25–30 ವರ್ಷಗಳ ಹಿಂದೆ ಟಗರು, ಕುರಿ ತೂಕ 10–15 ಕೆ.ಜಿ. ಇತ್ತು. ಇವತ್ತೂ ಕೂಡ ಅಷ್ಟೇ ಇದೆ. ಒಂದು ಕೆ.ಜಿ. ಕೂಡ ಹೆಚ್ಚಾಗಿಲ್ಲ. ಅದರ ತುಪ್ಪಟ ತಲೆ ಕೂದಲು ತರಹ ಇದೆ. ಇನ್ನೂ ರ್‍ಯಾಂಬೊಲೊ ಕುರಿ ತರಹ ತುಪ್ಪಟ ಬರುವುದಕ್ಕೆ ಸಾಧ್ಯವೇ ಆಗಿಲ್ಲ. ಅದಕ್ಕೆ ಜಯಚಂದ್ರರವರು ಒಂದು Suggestion ಕೊಟ್ಟಿದ್ದಾರೆ. ದಯವಿಟ್ಟು Agriculture Minister ರವರು ಇದನ್ನು ತಿಳಿದುಕೊಳ್ಳಿ, ಏನೆಂದರೆ, ಹಾಲು ಉತ್ಪಾದಕರ ಸಹಕಾರ ಸಂಘದ ರೀತಿಯಲ್ಲಿ ಕುರಿಗಾರರಿಗೂ ಸಹ ಮಾಡಬೇಕು. Animal Husbandry activities ಇದೆ. ಅದರಲ್ಲಿರುವ ಉಣ್ಣೆ ನೇಕಾರರ ಸಂಘದವರು, ಕುರಿ ಉತ್ಪನ್ನದ ನೇಕಾರ ಸಂಘದವರು, ಮೇಕೆ ಉತ್ಪನ್ನದ ನೇಕಾರ ಸಂಘದವರು ಇದ್ದಾರೆ. ಒಂದು ವರದಿಯ ಪ್ರಕಾರ, ಒಂದು ಕುರಿ ಅಥವಾ ಮೇಕೆ ಅದರ ಜೀವಿತ ಕಾಲದಲ್ಲಿ 16000 ರೂಪಾಯಿ ಇನ್ ಕಂ ತರುತ್ತದೆ. ಆದರೆ, ನಾವು totally neglect ಮಾಡಿದ್ದೇವೆ. ಆಸ್ಪತ್ರೆಗಳಲ್ಲಿ ಔಷಧಿಯೇ ಸಿಗುತ್ತಿಲ್ಲ. ಅವುಗಳಿಗೆ ರೋಗ ಬಂದು ಸಾಯುತ್ತವೆ. ನಾನು ಅಧಿಕಾರದಲ್ಲಿದ್ದಾಗ 'ಜನಶ್ರೀ' ಎಂಬ ಕಾರ್ಯಕ್ರಮ ರೂಪಿಸಿದ್ದೆ. ಎಲ್ಲಾ ಕುರಿಗಳಿಗೆ, ಕುರಿಗಾರರಿಗೆ insurance ಮಾಡಬೇಕು. ಜಾಸ್ತಿ ಮಳೆ ಬಂದಾಗ ಕುರಿಗಳು ಸಾಯುತ್ತವೆ. ಅವುಗಳಿಗೆ blue tongue ರೋಗ ಬರುತ್ತದೆ, ಇನ್ಯಾವುದೋ ರೋಗ ಬಂದು

ಸತ್ತು ಹೋಗುತ್ತವೆ. ಅದಕ್ಕೆ ಈಗಲೂ ಕೂಡ ಅವರು Suggest ಮಾಡಿದರು. ಅದಕ್ಕೊಂದು Federation ಮಾಡಿ ಎಂದು ನಾನು ಹೇಳುತ್ತೇನೆ. ಒಂದೂ ಸಹ Slaughter House ಇಲ್ಲ. Hampshire ಎನ್ನುವ ಹಂದಿ ತಳಿಗಳಿದ್ದವು. ಆ ತಳಿಗಳು ಇವೆಯೇ? ಅವೂ ಕೂಡ ನಾಶವಾಗಿವೆ. ಇವತ್ತು ಕರ್ನಾಟಕದಲ್ಲಿ ಕೇವಲ ಬೀದಿಯಲ್ಲಿ ಓಡಾಡುವ ಹಂದಿಗಳೇ ಇವೆ. ಅದು ಅಭಿವೃದ್ಧಿ ಯಾಗಲೇ ಇಲ್ಲ. ಹಂದಿ ಸಾಕಣೆಯನ್ನು ಸರಿಯಾಗಿ ಮಾಡಿದರೆ ಬಹಳಷ್ಟು ಯುವಕರಿಗೆ ಉದ್ಯೋಗ ಲಭಿಸುತ್ತದೆ. ಎರಡು ತರಹದ ಮೀನುಗಳನ್ನು ಬಿಟ್ಟರೆ ಹೊಸ ತಳಿಗಳೇ ಇಲ್ಲ. Inland fresh pond ಗಳನ್ನು ಮಾಡುವುದಿಲ್ಲ, ಹೊಸ ತಳಿಗಳನ್ನು ಮಾಡುವುದಿಲ್ಲ, ಅಭಿವೃದ್ಧಿಪಡಿಸುವ ಕೆಲಸವಾಗುತ್ತಿಲ್ಲ, ಏನೂ ಇಲ್ಲ. Prawns ಇಲ್ಲ, ಸೀಗಡಿ ಇಲ್ಲ, ಮೀನುಗಳಿಲ್ಲ. ಕುರಿಗಾರರು, ನೇಕಾರರು, ಮೀನುಗಾರರು ಬಹಳ ಕಷ್ಟದಲ್ಲಿದ್ದಾರೆ. ರೇಷ್ಮೆ ಹಾಳಾಗಿ ಹೋಗುತ್ತಿದೆ. 1981 ರಲ್ಲಿ World Bank ನಿಂದ ಹಣ ತೆಗೆದುಕೊಂಡು ಬಂದರು. ಇಡೀ ರಾಜ್ಯದಲ್ಲಿ bivoltine ಬೆಳೆಯುತ್ತೇವೆಂದು ಹೇಳಿ buildings, Markets ಕಟ್ಟಿಸಿದ್ದೇ ಕಟ್ಟಿಸಿದ್ದು. ಯಾವುದಾದರೊಂದನ್ನು ಮಾರ್ಕೆಟ್ ಮಾಡಬೇಕಾದರೆ, drainage ಮಾಡಬೇಕಾದರೆ, sericulture ಮಾಡಬೇಕಾದರೆ ಇವತ್ತು traditional area ದಲ್ಲಿರುವ ಹಿಪ್ಪುನೇರಳೆ ಕಡ್ಡಿಗಳನ್ನು ಕಿತ್ತುಹಾಕಿಬಿಟ್ಟರು. ಈಗ ಒಂದೂ ಉಳಿದುಕೊಂಡಿಲ್ಲ. ರೇಷ್ಮೆ ಇಲಾಖೆ ಮುಗಿದು ಹೋಯಿತು. ಇಡೀ ದೇಶದಲ್ಲಿ ರೇಷ್ಮೆ ಉತ್ಪಾದನೆ ಮಾಡುವುದರಲ್ಲಿ ಕರ್ನಾಟಕ ನಂ.1 ಸ್ಟೇಟ್ ಇತ್ತು. ರೈತರು ಈಗ ಕಷ್ಟಕ್ಕೊಳಗಾಗಿ ರೇಷ್ಮೆ ಬೆಳೆಯುವುದನ್ನು ನಿಲ್ಲಿಸಿಯೇ ಬಿಟ್ಟರು. ನಮ್ಮ ಊರಿನಲ್ಲಿ ಒಬ್ಬರೂ ಈಗ ರೇಷ್ಮೆ ಬೆಳೆಯುತ್ತಿಲ್ಲ, ನಮ್ಮ ಊರಿನಲ್ಲಿ ಹಿಪ್ಪುನೇರಳೆ ಕಡ್ಡಿಯೇ ಇಲ್ಲ. ಇದನ್ನು ತೆಗೆದುಕೊಂಡು ಬೀದರ್‌ನಲ್ಲಿ bivoltine ಬೆಳೆಯುತ್ತೇವೆ, ಗುಲಬರ್ಗಾದಲ್ಲಿ bivoltine ಬೆಳೆಯುತ್ತೇವೆ, ಜೇವರ್ಗಿಯಲ್ಲಿ ಮಾರ್ಕೆಟ್ ಮಾಡುತ್ತೇವೆಂದು ಹೇಳುತ್ತೀರಿ. ಒಂದು market sustain ಆಗಬೇಕಾದರೆ Sericulture ಉಳಿದುಕೊಳ್ಳಬೇಕಾದರೆ ಅಲ್ಲಿ ಗೂಡು ತೆಗೆದುಕೊಳ್ಳುವವರಿರಬೇಕು. Reeling ಮಾಡುವವರಿರಬೇಕು, ಒಳ್ಳೆಯ ರೋಗರಹಿತವಾದ seeds ಸಿಗಬೇಕು ಮತ್ತು ಹತ್ತಿರದಲ್ಲಿ ಮಾರುಕಟ್ಟೆ ಇರಬೇಕು. ಆದರೆ, Reelers ಇಲ್ಲ. ಅಲ್ಲಿಗೆ World Bank ನಿಂದ ತಂದ

ಹಣವನ್ನು ತೆಗೆದುಕೊಂಡು ಹಾಕಿದರು. ಅದಕ್ಕಾಗಿ ಕಟ್ಟಿಸಿದ ಎಲ್ಲಾ buildings ಇವತ್ತು ಉಪಯೋಗಕ್ಕೆ ಬಾರದ ರೀತಿಯಲ್ಲಿವೆ. Sericulture ಹಾಳಾಗಿ ಹೋಗಿದೆ. ಅದರ ಬಗ್ಗೆ ನೀವೇನೂ ಯೋಚನೆ ಮಾಡಲಿಲ್ಲ. Animal Husbandry ಬಗ್ಗೆ ಏನೂ ಯೋಚನೆ ಮಾಡಲಿಲ್ಲ. ಆದರೆ, Rural Development ಬಗ್ಗೆ ಚರ್ಚೆ ಮಾಡಬೇಕೆಂದು ಹೇಳುತ್ತೀರಿ. ನಮಗೆ ಅವರ ಕಷ್ಟ ನೋಡಿ ಕಣ್ಣೀರು ಬರುತ್ತಿದೆ. ಕೇಂದ್ರ ಸರ್ಕಾರದವರು ಕುರಿಗಳಿಗೆ ಭೀಮಾ ಯೋಜನೆ ಎನ್ನುವ ಒಂದು insurance ಜಾರಿಗೆ ತಂದಿದ್ದಾರೆ. ಕುರಿ, ಕುರಿಗಾರರಿಗೆ, ಆ ತರಹ ನೀವು ಇಲ್ಲಿಯೂ ಮಾಡಿ. ಇವತ್ತು ಇಲ್ಲಿ ಇಷ್ಟೆಲ್ಲಾ ಆದರೂ ಕೂಡ ಕರ್ನಾಟಕದಲ್ಲಿ varieties of ಕುರಿಗಳು, ಕುರಿ ಮಾಂಸ ಅಲ್ಲಿ ಬಂಡೂರು variety ಇದೆ, it is the best available meat in the country. ನಿಮ್ಮ ಅಮೃತಮಹಲ್ ಕಾಮಲ್‌ಗಳನ್ನೆಲ್ಲ ಒತ್ತುವರಿ ಮಾಡಿ ಕೊಂಡಿದ್ದಾರೆ. ಅವೆಲ್ಲ ಇಂದು ಉಳಿದುಕೊಂಡಿಲ್ಲ. ನಾನು ಮೊನ್ನೆ ಅಜ್ಜಂಪುರದ ಹತ್ತಿರ ಹೋಗಿದ್ದೆ. ನೀವು ಅದನ್ನು ಖಾಸಗಿಯವರಿಗೆ ಪರಭಾರೆ ಮಾಡುವುದಕ್ಕೆ ಹೊರಟಿದ್ದೀರಿ. ಇವತ್ತು ನಮ್ಮಲ್ಲಿರುವ buffalos ಗೆ, cattle ಗೆ ಇವತ್ತಿಗೂ Brazil, Latin America, ಬೇರೆ ಬೇರೆ Country ಗಳಲ್ಲಿ ಇವುಗಳಿಗೆ ಬಹಳ demand ಇದೆ. ಆದರೆ, ನೀವೇನೂ ಮಾಡುವುದಿಲ್ಲ. ಹೀಗಾದರೆ, ಗ್ರಾಮೀಣಾಭಿವೃದ್ಧಿ ಹೇಗಾಗುತ್ತದೆ? ನೀವು ಇದರ ಬಗ್ಗೆ ಯೋಚನೆ ಸಹ ಮಾಡಿಲ್ಲ. ಇದನ್ನೆಲ್ಲ Animal Husbandry Department ನವರು ಮಾಡಿದ್ದಾರೆಯೇ ಹೇಳಲಿ? ನಾನೂ ಸಹ ಎರಡು ವರ್ಷಗಳ ಕಾಲ Animal Husbandryಯ Minister ಆಗಿದ್ದೆ. ಚಳ್ಳಕೆರೆಯಲ್ಲಿ ಒಂದು Farm ಇತ್ತು. ಅಲ್ಲಿ ಕುರಿಗಳಿವೆಯೇ? ಅದು ಬಂದ್ ಆಗಿಹೋಯಿತು. 14 ಸಾವಿರ ಎಕರೆಯಷ್ಟಿರುವ ಅಮೃತಮಹಲ್ ಕಾವಲ್‌ನಲ್ಲಿ ನೀವು ಎಷ್ಟು ಮೇವು ಬೆಳೆಯಬಹುದು, Farm ಗಳಲ್ಲಿ ನೀವು ನಮ್ಮ ಇಡೀ cattle ಗಳಿಗಾಗುವಷ್ಟು ಮೇವು ಬೆಳೆಯಬಹುದು. ನೀವು ಮೇವು ಬೆಳೆಸಿದ್ದೀರಾ? ಅದನ್ನು ಉಳಿಸಿ ಕೊಂಡಿದ್ದೀರಾ? Fence ಹಾಕಲಿಲ್ಲ. ಯಾರ್ಯಾರೋ ಒತ್ತುವರಿ ಮಾಡಿಕೊಂಡು ಹೊರಟುಹೋದರು.

(8-00 PM)

ಈ ತರಹ ನೀವು ಘೋಷಣೆ ಮಾಡದೇ ಇಷ್ಟೊಂದು ವಿಶಾಲವಾಗಿ ಇವನ್ನೆಲ್ಲಾ ಮಾಡದೇ ಹೋದರೆ ಹಳ್ಳಿಗಾಡಿನಲ್ಲಿ ಜನರು ಏಕೆ ಉಳಿಯುತ್ತಾರೆ? ಹಳ್ಳಿಗಾಡಿನ ಜನರ ಬದುಕು ಹೇಗೆ ಹಸನಾಗುತ್ತದೆ? ಇದೊಂದೇ ಅಲ್ಲ, ಸಿರಿಕಲ್ಚರ್, ಅಗ್ರಿಲ್ಚರ್, ಅನಿಮಲ್‌ಹಸ್ ಬೆಂಡ್ರಿ, ಫಿಷರೀಸ್, ಆರ್ಟಿಕಲ್ಚರ್, ಫ್ಲೋರಿಕಲ್ಚರ್, ಇವೆಲ್ಲವೂ ಒಂದಕ್ಕೊಂದು ಸಂಬಂಧವಿರ ತಕ್ಕಂಥವುಗಳು. ಇವತ್ತು ನಮ್ಮ ಸ್ನೇಹಿತರೊಬ್ಬರು ಈಗ ಮಣ್ಣು ಟೆಸ್ಟ್ ಮಾಡುವುದನ್ನು ಬಿಟ್ಟು ಬಿಟ್ಟಿದ್ದಾರೆಂದು ಹೇಳುತ್ತಿದ್ದರು. ಅದು actually ಪ್ರತಿಯೊಬ್ಬ ರೈತನ ಹತ್ತಿರ ಇರಬೇಕು, ಅವನ ಹತ್ತಿರ Soil halth card ಎಂದು ಕೊಡಬೇಕು. ಅದನ್ನು ಪ್ರತಿಯೊಬ್ಬ ರೈತರಿಗೂ ಕಡ್ಡಾಯವಾಗಿ ಕೊಡಬೇಕು. ನನ್ನ ಭೂಮಿಯಲ್ಲಿ ಯಾವ ಮಣ್ಣು ಇದೆ ಎಂದು ಗೊತ್ತಾಗಬೇಕು. ಈ ಮಣ್ಣಿಗೆ ಯಾವ ಯಾವ ಬೀಜ ಯೋಗ್ಯ, ಯಾವ ಬೆಳೆ ಯೋಗ್ಯ ಎಂದು ಅವನಿಗೆ ಗೊತ್ತಿರಬೇಕು. ಆದರೆ ರೈತನ ಹತ್ತಿರ ಏನೂ ಇಲ್ಲ. ಯೂನಿವರ್ಸಿಟಿಗಳಲ್ಲಿ ರೀಸರ್ಚ್ ಆಗಿ ಮೂರು ವರ್ಷದ ನಂತರ ಹೋಗುತ್ತದೆ. Lab to land ಎಂದು Programme ಬಗ್ಗೆ ಹೇಳಿದ್ದೇ ಹೇಳಿದ್ದು. Lab ನಲ್ಲಿ lab, land ನಲ್ಲಿ land. No lab, no land. Extension work is very poor. ಕೃಷಿ ಅಭಿವೃದ್ಧಿಯಾಗುವುದು ಹೇಗೆ? ಇದಕ್ಕೆಲ್ಲಾ ರಾಜಕೀಯ ಇಚ್ಛಾಶಕ್ತಿ ಇಲ್ಲದೇ ಹೋದರೆ, ಬದ್ಧತೆಯಿಲ್ಲದೇ ಹೋದರೆ, ಇದಕ್ಕೆ ಬೇಕಾದಂಥ ರೀಸೋರ್ಸಸ್ ಇಲ್ಲದೇ ಹೋದರೆ, ಹೇಗೆ ಅಭಿವೃದ್ಧಿ ಯಾಗುತ್ತದೆ? ನಿಮ್ಮ ಹತ್ತಿರ ರೀಸೋರ್ಸಸ್ ಎಲ್ಲಿದೆ? ಇರುವಂಥ ಕಾರ್ಯ ಕ್ರಮಗಳಿಗೆ ನಿಮ್ಮ ಕೈಯಲ್ಲಿ ದುಡ್ಡು ಕೊಡುವುದಕ್ಕಾಗುತ್ತಿಲ್ಲ. ಸಾಲ ತೆಗೆದುಕೊಂಡು ಬರುವ ಸ್ಥಿತಿಗೆ ಬಂದಿದ್ದೀರಿ. ಹಣಕಾಸಿನ ಪರಿಸ್ಥಿತಿ ಎಲ್ಲಾ ಕೆಟ್ಟು ಹೋಗಿದೆ. ಏನು ಮಾಡುತ್ತೀರಿ? ಏನು ಸುಮ್ಮನೆ ಇಲ್ಲಿ ಬಂದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡಿದೆವು ಎಂದರೆ ಅಭಿವೃದ್ಧಿ ಯಾಗುತ್ತದೆಯೆ?

ಶ್ರೀ ಆರ್.ಅಶೋಕ : ಬರೀ ನೀವು ನಮ್ಮ ಯೋಜನೆಗಳೇನು ಮಾಡುತ್ತಿಲ್ಲವೆಂದು ಹೇಳುತ್ತೀರಿ.

ಶ್ರೀ ಸಿದ್ದರಾಮಯ್ಯ : ನಾನು ಹಾಗೆ ಹೇಳಿದನೆ? ನಾನು ಆ ರೀತಿ ಹೇಳಲಿಲ್ಲ.

ಶ್ರೀ ಆರ್. ಅಶೋಕ : ನಿಮ್ಮ ಭಾವನೆ ಆ ರೀತಿ ಇದೆ.

ಶ್ರೀ ಸಿದ್ದರಾಮಯ್ಯ : ನೀವು ಹಾಗೆ ಅಂದುಕೊಂಡರೆ ಹೇಗೆ? "ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡರೆ ಹೇಗೆ?" ನಾನೇನು ಆ ರೀತಿ ಹೇಳಿದನೆ? ನಾನು ನಿಮ್ಮ ಯೋಜನೆಗಳಲ್ಲ ಈ ಯೋಜನೆಗಳನ್ನು ಮಾಡಿ ಎಂದು ಹೇಳುತ್ತಿರುವುದು. ನೀವು ಏನೇನು ಮಾಡಿದಿರಿ ಅವುಗಳನ್ನು ಮಾಡಿಕೊಳ್ಳಿ, ನಾವು ಏನು ಹೇಳುತ್ತೇವೆ, ಅವುಗಳನ್ನು ಮಾಡಿ. ಊರಿಗೆ ಹೋಗುವಾಗ ಇವುಗಳನ್ನು ಸ್ವಲ್ಪ ತಲೆಯಲ್ಲಿಟ್ಟು ಕೊಂಡು ಹೋಗಿ.

ಶ್ರೀ ಹೆಚ್.ಹಾಲಪ್ಪ : ಇವತ್ತು ಶುಕ್ರವಾರ, ನಾನು ಎರಡು ಸಾರಿ ಶಾಸಕನಾಗಿದ್ದೇನೆ. ನಿಮ್ಮ ಭಾಷಣ ಕೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಹಾಲಪ್ಪನವರೆ, ನೀವು ನಾಳೆ ಬೆಳಿಗ್ಗೆ ಊರಿಗೆ ಹೋದಾಗ ಜನ ಕೇಳುತ್ತಾರೆ. ಜನ ನಿಮ್ಮನ್ನು ನೋಡುತ್ತಿದ್ದಾರೆ. ಮಾನ್ಯ ಮಂತ್ರಿಗಳಿಗೆ ಎಷ್ಟರ ಮಟ್ಟಿಗೆ ಕಳಕಳಿಯಿದೆ ಎಂದು ನೋಡುತ್ತಿದ್ದಾರೆ.

ಶ್ರೀ ಹೆಚ್.ಹಾಲಪ್ಪ : ನಾನೇನು ಹೇಳಿದೆ, ಈಗ ಎಂಟು ಗಂಟೆಯಾಯಿತು. ಇವತ್ತು ಶುಕ್ರವಾರ ಎಂದು ಹೇಳಿದೆ.

ಶ್ರೀ ಸಿದ್ದರಾಮಯ್ಯ : ಬೆಳಿಗ್ಗೆಯವರೆವಿಗೂ ಕುಳಿತುಕೊಳ್ಳಬೇಕು.

ಶ್ರೀ ಹೆಚ್.ಹಾಲಪ್ಪ : ನಿಮ್ಮ ಭಾಷಣ ಕೇಳುವುದಕ್ಕೆ ಕುಳಿತಿದ್ದೇನೆ.

SRI. SIDDARAMAIAH : If you are really interested, if you are really sincere and committed, ನಿಮಗೆ Political will ಇದ್ದರೆ ಕುಳಿತುಕೊಳ್ಳಬೇಕು. ಇಲ್ಲದೇ ಹೋದರೆ ಆತ್ಮವಂಚನೆಯಾಗುತ್ತದೆ.

ಶ್ರೀ ಆರ್. ಅಶೋಕ್ : ಸಾರ್, ನಾವು ಕುಳಿತುಕೊಳ್ಳುವುದಕ್ಕೆ ರೆಡಿ ಇದ್ದೇವೆ. ನಿಮ್ಮ ಮಾತು ಕೇಳುವುದಕ್ಕೆ ರೆಡಿ ಇದ್ದೇವೆ. ನೀವು ಸರಿಯಾಗಿ ಮಾತನಾಡಿದಿರಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ, ಸೋಮವಾರ ಅವರು ತಮ್ಮ ಭಾಷಣ ಮುಂದುವರಿಸಲಿ. ಅವರು ಕುಳಿತು ಕೊಳ್ಳಲಿಕ್ಕೆ ರೆಡಿಯಿಲ್ಲ, ಸೋಮವಾರ ಕಂಟಿನ್ಯೂ ಮಾಡಲಿಕ್ಕೆ ರೆಡಿಯಿಲ್ಲ ಎಂದರೆ ನಾವು ಏನು ಮಾಡುವುದು?

ಶ್ರೀ ಆರ್.ಅಶೋಕ : ನೀವು ಚೆನ್ನಾಗಿ ಮಾತನಾಡಿದಿರಿ. ಆದರೆ one side ಹೇಳಿದಿರಿ.

ಶ್ರೀ ಸಿದ್ದರಾಮಯ್ಯ : ನಿಮ್ಮ ಸೈಡ್‌ನಿಂದ ಏನು ಮಾತನಾಡಬೇಕೆಂದು ಕೊಟ್ಟರೆ ಅದನ್ನು ಹೇಳುತ್ತೇನೆ. ಕರ್ನಾಟಕದ ಪ್ರಜೆಯಾಗಿ ವಿರೋಧ ಪಕ್ಷದ ನಾಯಕನಾಗಿ ಹಳ್ಳಿಯವನ್ನಾಗಿ ಹಳ್ಳಿಯಿಂದ ಬಂದವನಾಗಿ ನೀವು ಏನು ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಸೋಮವಾರ ಮುಂದುವರಿಸಲಿ. ವಿಷಯ ಚೆನ್ನಾಗಿದೆ. ಸೋಮವಾರ ಮಾಡಲಿ.

ಶ್ರೀ ಆರ್.ಅಶೋಕ : ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ನಮ್ಮ ಸರ್ಕಾರ ಏನು ಮಾಡುತ್ತಿದೆ ಎನ್ನುವುದರ ಬಗ್ಗೆ ನೀವು ಹೇಳಿ. ನಾವು ಎಲ್ಲಿ ಫೇಲೂರ್ ಆಗಿದ್ದೇವೆ ಎನ್ನುವುದರ ಬಗ್ಗೆಯೂ ಬೆಳಕು ಚೆಲ್ಲುತ್ತಿದ್ದೀರಿ. ಅದೇ ರೀತಿಯಾಗಿ ಈ ರೂರಲ್ ಡೆವಲಪ್‌ಮೆಂಟ್ ಬಗ್ಗೆ ಕೃಷಿಯ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಏನೇನು ವಿಷಯಗಳಿವೆ, ಇಮ್ಮ ವಿಷನ್ ಏನು ಎಂಬುದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬುದನ್ನೂ ಕೂಡ ನಮ್ಮ ಗಮನಕ್ಕೆ ತರುತ್ತಿದ್ದೀರಿ. ನನಗೆ ಅನಿಸಿರುವುದು, ನೀವು ಅದರ ಬಗ್ಗೆ ಬಹಳವಾಗಿ ಓದಿ, ವರ್ಕ್ ಮಾಡಿ ಎಲ್ಲಾ ರೆಡಿಯಾಗಿ ಬಂದಿದ್ದೀರಿ. ಪುಸ್ತಕ ಕೊಟ್ಟಿರುವುದನ್ನು ನೀವು ಏನೂ ತಂದಿಲ್ಲ. ನೀವೇ ರೆಡಿ ಮಾಡಿಕೊಂಡು ತಂದಿದ್ದೀರಿ. ಆದರೆ ನನಗೆ ಅನಿಸುವುದು, ಕೇಂದ್ರ ಸರ್ಕಾರವು ಕೂಡ ಕೆಲವು ಯೋಜನೆಗಳಲ್ಲಿ ನಮ್ಮ ರಾಜ್ಯ ದೇಶದಲ್ಲಿ ನಂಬರ್ ಒನ್–ಟೂ ಸ್ಥಾನಕ್ಕೆ ಬಂದಿದ್ದೇವೆ. PMGSY ಯಲ್ಲಿ ಇಡೀ ದೇಶದಲ್ಲಿ ಎರಡನೇ ಸ್ಥಾನದಲ್ಲಿ ನಾವು ಇದ್ದೇವೆ. ನೀವು ಆಗಲೇ ರಿಲೀಸ್ ಆಗಿರುವ ಅಮೌಂಟ್‌ನಲ್ಲಿ ಯೂಸ್ ಮಾಡಿಲ್ಲವೆಂದು ಹೇಳಿದಿರಿ. ನಾನು ಏನು ಹೇಳುತ್ತೇನೆಂದರೆ, ಕೇಂದ್ರ ಸರ್ಕಾರದ ಯೋಜನೆಗಳನ್ನು ನಾವು ಇಲ್ಲ ಎನ್ನುವುದಕ್ಕೆ ಸಾಧ್ಯವೇ ಇಲ್ಲ. ಎಲ್ಲಾ on the record. ಇವತ್ತು ನಮ್ಮ ಕರ್ನಾಟಕದಲ್ಲಿ ಬಹಳಷ್ಟು ಯೋಜನೆಗಳು ನಮ್ಮ ಸಾರಿಗೆ ಇಲಾಖೆಗೂ ಬರುತ್ತಿವೆ. ಕೇಂದ್ರ ಸರ್ಕಾರ ನಮ್ಮ ಇಲಾಖೆಗೂ ಹಣ ಕೊಟ್ಟಿದೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ನಾನು ಇದನ್ನು ಬಹಳ ಗೌರವದಿಂದ ಹೇಳುತ್ತೇನೆ. ನಾನು ಇದೇ ಸದನದಲ್ಲಿ ಅಭಿನಂದಿಸಿದೆ. ಕೇಂದ್ರ ಸರ್ಕಾರ ನರ್ಮ್ಸ್‌ನಲ್ಲಿ ಸಾರಿಗೆ ಇಲಾಖೆಗೆ ಇಡೀ ದೇಶದಲ್ಲಿ ಹೈಯೆಸ್ಟ್ ಕೊಟ್ಟಿರುವುದು ನಮಗೇ. ಇಡೀ ದೇಶದಲ್ಲಿ ನಾವೇ ನಂಬರ್ ಒನ್ ಮಾಡೆಲ್ ಎಂದು ಕೇಂದ್ರ ಸರ್ಕಾರ ಹೇಳಿದೆ. ಅದೇ ರೀತಿಯಾಗಿ 1896 ಕೋಟಿ ಹಣ ರಿಲೀಸ್ ಆಗಿದ್ದರೆ 1856 ಕೋಟಿ ಖರ್ಚು

ಆಗಿದೆ. ಇಡೀ ದೇಶದಲ್ಲಿ ನಾವು ಎರಡನೇ ಸ್ಥಾನದಲ್ಲಿದ್ದೇವೆ. ಅದೇ ರೀತಿ NREG ಸ್ಕೀಂ ನಲ್ಲಿ 540 ಕೋಟಿ ಅವೈಲಬಲ್ ಇರುವಂಥದ್ದು. ಅದರಲ್ಲಿ 436 ಕೋಟಿ ಖರ್ಚು ಮಾಡಿದ್ದೇವೆ. ಉಳಿದ ಅಮೌಂಟ್‌ನ್ನು ಪಂಚಾಯಿತಿಗಳಿಗೆ ಆಲ್ ರೆಡಿ ಕೊಟ್ಟು ಡೆಪಾಸಿಟ್ ಮಾಡಿದ್ದೇವೆ. ಕೆಲವು ಇಲಾಖೆಗಳಲ್ಲಿ ನ್ಯೂನತೆಗಳಿರಬಹುದು. ತಾವು ಹೇಳಿದ ಹಾಗೆ ಎಲ್ಲಾ ಶಾಸಕರು ಭಾಗವಹಿಸಿದರೆ, ಜಯಚಂದ್ರರವರು ಮಾಡೆಲ್ ಎಂದು ನೀವು ಹೇಳಿದಿರಿ, ನಾವು ಅದನ್ನು ಒಪ್ಪಿಕೊಂಡೆವು. ಜಯಚಂದ್ರರವರ ಮಾಡೆಲ್ ಎಂದು ನೀವು ಹೇಳಿದಿರಿ, ನಾವು ಅದನ್ನು ಒಪ್ಪಿಕೊಂಡೆವು. ಜಯಚಂದ್ರರವರು ಮಾಡೆಲ್ ಅನ್ನು ನನ್ನಿಂದ ಹಿಡಿದು ಎಲ್ಲಾ ಶಾಸಕರು ಫಾಲೋ ಮಾಡಬಹುದು. ಅದನ್ನು ಮಾಡಿದರೆ ಕೇಂದ್ರ ಸರ್ಕಾರದ ಯೋಜನೆಗಳನ್ನು ನಾವು ಜಾರಿಗೊಳಿಸಬಹುದು. ಆದುದರಿಂದ, ಈ ಸರ್ಕಾರವು ಸಹ ಕೃಷಿಗೆ ಸಂಬಂಧಪಟ್ಟಂತೆ ಸನ್ಮಾನ್ಯ ಯಡಿಯುರಪ್ಪನವರಿಗೆ ಏನು ಕಳಕಳಿಯಿದೆ, ಅದನ್ನು ನೇರವೇರಿಸುತ್ತೇವೆ ಎನ್ನುವ ಮಾತನ್ನು ನಾವು ಹೇಳುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಶೋಕ್‌ರವರ ಇಲಾಖೆಗೆ ಸಂಬಂಧಪಟ್ಟಂತೆ ಬೇಕಾದರೆ ಒಂದು ದಿವಸ ಸೆಪರೇಟಾಗಿ ಇಟ್ಟು ಚರ್ಚೆ ಮಾಡೋಣ. ನಾವು ಇವತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ಬಗ್ಗೆ ಚರ್ಚಿಸುತ್ತಿದ್ದೇವೆ. ಪಶುಸಂಗೋಪನಾ ಇಲಾಖೆಯಲ್ಲಿ ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನು 100% ಅಲ್ಲ 5% ಕೂಡಾ ಖರ್ಚು ಮಾಡುವುದಕ್ಕಾಗಿಲ್ಲ. ತಾವು ಬೇಕಾದರೆ ಇಲ್ಲ ಎಂಧು ಬಿಟ್ಟರೆ ನೀವು ಹೇಳಿದ್ದಕ್ಕೆ ನಾನು ಭಾಗಿಯಾಗುತ್ತೇನೆ. ಕೇಂದ್ರ ಸರ್ಕಾರ ಕೊಟ್ಟಿರುವ ಹಣ, ರಾಷ್ಟ್ರೀಯ ಕಿಸಾನ್ ಯೋಜನೆಯಲ್ಲಿ ಸುಮಾರು ಎರಡು ಸಾವಿರ ಕೋಟಿ ರೂಪಾಯಿ ಕೊಟ್ಟಿದೆ. ಇವತ್ತಿನವರೆವಿಗೂ ನೀವು ಮೀಟಿಂಗ್ ಮಾಡಿದಿರಾ? ನಿಮಗೇನು ಬದ್ಧತೆಯಿಲ್ಲವೆ? ಎರಡು ಸಾವಿರ ಕೋಟಿ ಕೊಟ್ಟಿರುವ ಹಣವನ್ನು ಉಳಿಸಿಕೊಳ್ಳಲಿಕ್ಕೆ ಆಗಿಲ್ಲವಲ್ಲ? ಬರೀ ಡೈರಿ ಸೆಕ್ಟಾರ್‌ಗೆ 250 ಕೋಟಿ ಕೊಟ್ಟಿದ್ದಾರೆ. ಅದರಲ್ಲಿ 10 ರೂಪಾಯಿ ಖರ್ಚು ಮಾಡುವುದಕ್ಕೆ ನಿಮಗಾಗಿದೆಯೇ? ಬೇಕಾದರೆ ಹೇಳಲಿ. ಸಾರಿಗೆ ಸಚಿವರು 100% ಎಲ್ಲಾ ಕರೆಕ್ಟ್ ಆಗಿ ಇದ್ದೀರಿ. ಆದರೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ಇಲ್ಲ ಎಂದು ಹೇಳಿಬಿಟ್ಟರೆ ಹೇಗೆ?. ಸಲಹೆ ಹೇಳಿದರೆ ಅವರು ಕೇಳುವುದಿಲ್ಲವಲ್ಲ?

ಶ್ರೀ ಸಿದ್ದರಾಮಯ್ಯ : ನೋಡಿ, ನಿಮ್ಮನ್ನು ಟೀಕೆ ಮಾಡಬೇಕೆನ್ನುವ ಉದ್ದೇಶ ನನಗೇನೂ ಇಲ್ಲ. ನಾನು ಏನು ಹೇಳುತ್ತೇನೆಂದರೆ, ನಿಮಗೆ ಬದ್ಧತೆ ಕಾಣಿಸುತ್ತಿಲ್ಲ, ಕಳಕಳಿ ಕಾಣಿಸುತ್ತಿಲ್ಲ, ಅದನ್ನು ಮಾಡದೇ ಹೋದರೆ ಕೃಷಿಯೂ, ಗ್ರಾಮೀಣಾಭಿವೃದ್ಧಿಯೂ ಆಗುವುದಿಲ್ಲ. ಬರಿ ಬಾಯಿಯಲ್ಲಿ ಕಳಕಳಿ ಇದ್ದರೆ ಸಾಲದು. ತಮ್ಮ ಕೃತಿಯಲ್ಲಿ ಇರಬೇಕು. ನಾವು ಕಾರ್ಯಕ್ರಮ ಗಳನ್ನು ಅನುಷ್ಠಾನಗೊಳಿಸುವುದರಲ್ಲಿರಬೇಕು. ಜನರಿಗೆ ತಲುಪಿಸುವುದರಲ್ಲಿ ರಬೇಕು. ಈ ಭ್ರಷ್ಟಾಚಾರ ಬಹಳ ವ್ಯಾಪಕವಾಗಿದೆ. ಇದನ್ನು ಕಡಿಮೆ ಮಾಡದೇ ಹೋದರೆ ಹೇಗೆ? ಈಗೇನು ಪೊಲೀಸ್ ಕಮಿಷನ್ ಮಾಡಿರುವ ಬಗ್ಗೆ ಆದೇಶ ನೋಡಿದೆ. ಈಗ ವರ್ಗಾವಣೆಗಳು ಡಿವೈಎಸ್‌ಪಿಯಿಂದ ಕೆಳಗಡೆ ಯವರನ್ನು ಡಿಜಿಪಿಯವರು ಮಾಡಬಹುದು.. ಅಂದರೆ ಎಲ್ಲಾ ಮಾಡಿಯಾದ ಮೇಲೆ ಈಗ ಮಾಡಿದ್ದಾರೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದೇನೆ. ನನ್ನ ಮೈಸೂರು ಪೊಲೀಸ್ ಸ್ಟೇಷನ್‌ಗೆ ಒಂದು ವರ್ಷದ ಮೂರು ತಿಂಗಳಲ್ಲಿ ಎಷ್ಟು ಇನ್ಸ್‌ಪೆಕ್ಟರನ್ನು ಬದಲಾಯಿಸಿದಿರಿ ಗೊತ್ತಿದೆಯೆ? ನಾಲ್ಕು ಜನರು ಬಂದು ಹೋದರು. ಹೀಗಿರುವಾಗ ಅವರು ಹೇಗೆ ಲಾ ಅಂಡ್ ಆರ್ಡರ್ ಮೆಯಿನ್‌ಟೈನ್ ಮಾಡುತ್ತಾರೆ? ನಾಲ್ಕು ಜನ ಇನ್ಸ್‌ಪೆಕ್ಟರ್‌ಗಳು ಏಕೆ ಬದಲಾವಣೆಯಾದರು? ಬೇಕಾದರೆ ತಾವು ತೆಗೆಸಿ ನೋಡಲಿ. ನಮ್ಮಲ್ಲಿ ಕಾರ್ಪೋರೇಷನ್‌ನಲ್ಲಿ ಮೂರು ಜನ ಕಮೀಷನರ್‌ಗಳು ಬದಲಾವಣೆ ಯಾದರು. ಮೂಡಾದಲ್ಲಿ ಮೂರು ಜನ ಬದಲಾವಣೆಯಾದರು. ಸಿಇಒಗಳು ಈ ವರ್ಷ ನೀವು ಅಧಿಕಾರಕ್ಕೆ ಬಂದ ಮೇಲೆ ನಾಲ್ಕು ಜನ ಬದಲಾವಣೆ ಯಾದರು. ನೀವು ಮಾಡಿ ನಮ್ಮನ್ನು ಏಕೆ ಚೇಂಜ್ ಮಾಡಿದಿರಿ?

ಶ್ರೀ ಬಸವರಾಜ್ ಬೊಮ್ಮಾಯಿ : ನೀವು ಹಾಕಿರುವಂಥ ಅಧಿಕಾರಿ ಗಳನ್ನು ನಾವು ಬದಲಾಯಿಸಿಲ್ಲ. ಕೇಳಿದವರನ್ನು ಮಾತ್ರ ಹಾಕಿದ್ದೇವೆ.

ಶ್ರೀ ಸಿದ್ದರಾಮಯ್ಯ : ನಾವು ಕೇಳಿಲ್ಲ. ನಾವು ಹಾಕಿದ ಅಧಿಕಾರಿಗಳು ಎಂದಲ್ಲ, ಬಸವರಾಜ್‌ರವರೆ, ಸ್ವಲ್ಪ ಇಲ್ಲಿ ಕೇಳಿ. ನಮ್ಮಲ್ಲಿ ನಾಲ್ಕು ಜನ ಯಾರ್‍ಯಾರು ಅಂದರೆ, ಶಂಕರ್ ಬಂದರು ಹೋದರು, ಹೀಗೆ ನಾಲ್ಕು ಜನ ಅಧಿಕಾರಿಗಳು ಬಂದು ಹೋದರು. ದಿನಾಲೂ ಚೇಂಜ್ ಆದರೆ ಹೇಗೆ?

ಡಾ: ಹೆಚ್.ಸಿ.ಮಹಾದೇವಪ್ಪ : ಆಡಳಿತದಲ್ಲಿ ವರ್ಗಾವಣೆಯಲ್ಲಿ ಒಂದು ನೀತಿ ಇಲ್ಲದೇ ಹೋದರೆ ಏನಾಗುತ್ತದೆ, ಆಡಳಿತದ ಮೇಲೆ ಮತ್ತು ಅಭಿವೃದ್ಧಿಯ ಮೇಲೆ ದುಷ್ಪರಿಣಾಮವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ನಾನು ಏಕೆ ಹೇಳುತ್ತಿದ್ದೇನೆಂದರೆ, ಈ ರೀತಿ ಮಾಡುವುದರಿಂದ, ನಿಮ್ಮ ಕಾರ್ಯಕ್ರಮಗಳು ಇಂಪ್ಲಿಮೆಂಟೇಷನ್ ಆಗುವುದಿಲ್ಲ. ಅವರು ಯಾರೋ ಸಿಇಓರವರು ಬಂದರು, ಅವರು ಒಂದು ಮೂರು ತಿಂಗಳು ಇದ್ದು ಹೋದರು. ಇನ್ನೊಬ್ಬ ಸಿಇಓರವರು ಬಂದರು, ಅವರು ಮೂರು ತಿಂಗಳಿದ್ದು ಹೋದರು. ಹೀಗಿರುವಾಗ NREG ವರ್ಕ್ ಹೇಗೆ ಇಂಪ್ಲಿಮೆಂಟ್ ಆಗುತ್ತದೆ? ಆದ್ದರಿಂದ ಹಣ ಖರ್ಚು ಮಾಡದೇ ಇರುವುದು.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಮಹದೇವಪ್ಪನವರೆ, ಈ ಕಡೆ ಇದ್ದಾಗಲೂ ಅದೇ ನೀತಿ ಇರಬೇಕು ಮತ್ತೆ ಆ ಕಡೆ ಹೋದ ಮೇಲೆ ನೀತಿ ಬದಲಾವಣೆಯಾಗಬಾರದು. Governor period ಇದ್ದಾಗಲೂ ಹಾಗೆಯೇ ಇರಬೇಕು, ಮತ್ತೆ ಬೇರೆ ಪಕ್ಷ ಬಂದಾಗಲೂ ಕೂಡ ಹಾಗೆಯೇ ಇರಬೇಕು. ಹಿಂದೆ ನಿಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಹಾಕಿರತಕ್ಕಂಥ ಅಧಿಕಾರಿಗಳನ್ನು ನಾವು ಬದಲಾವಣೆ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : ಪರ್ಟಿಕ್ಯುಲರ್ ಆಗಿ ಪೋಲೀಸ್ ಇಲಾಖೆಯಲ್ಲಿ ಸಾಕಷ್ಟು ಬದಲಾವಣೆ ಮಾಡಲಾಗಿದೆ. ಒಂದು ವರ್ಷದಲ್ಲಿ 3–4 ಜನ ಇನ್ಸ್‌ಪೆಕ್ಟರ್‌ಗಳನ್ನು ಬದಲಾವಣೆ ಮಾಡುವುದೆ? ಈ ರೀತಿ ಮಾಡಿದರೆ ಅವರು ಹೇಗೆ ಕೆಲಸ ಮಾಡುತ್ತಾರೆ? ಮತ್ತೆ ನಾಲ್ಕು ಜನ ಸಿಇಓ ಗಳನ್ನು ಬದಲಾವಣೆ ಮಾಡಿದ್ದೀರಿ. ಈ ರೀತಿ ಮಾಡಿದಾಗ ಅವರು ಯಾವ ಕೆಲಸವನ್ನು ಅನುಷ್ಠಾನ ಮಾಡುವುದಕ್ಕೆ ಆಗುತ್ತದೆ? ಈಗ ಏನೋ ಕಮಿಷನ್ ಎಂದು ಮಾಡಿ ಅಧಿಕಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆಮೇಲೆ ನೋಡೋಣ.

ಶ್ರೀ ಬಸವರಾಜ ಬೊಮ್ಮಾಯಿ : ಪೊಲೀಸ್ ಇಲಾಖೆಯಲ್ಲಿ ಕಾನ್ ಸ್ಟೇಬಲ್‌ನಿಂದ ಹಿಡಿದು ಹಿರಿಯ ಅಧಿಕಾರಿಗಳವರೆಗೆ ಹಿಂದಿನ ಸರ್ಕಾರಗಳು ಏನೇನು ಮಾಡಿದ್ದಾರೆಂದು ಗೊತ್ತಿದೆ. ಆದ್ದರಿಂದಲೇ ನಾನು ಹೇಳುವುದೇ ನೆಂದರೆ, ಆ ಕಡೆ ಇದ್ದಾಗಲೂ ಒಂದೇ ನೀತಿ ಇರಬೇಕು, ಈ ಕಡೆ ಇದ್ದಾಗಲೂ ಅದೇ ನೀತಿ ಇರಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ : ಪೊಲೀಸ್ ಕಾನ್‌ಸ್ಟೇಬಲ್ ವರ್ಗಾವಣೆ ಕೂಡ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಬರುತ್ತಿದೆ.

ಶ್ರೀ ಆರ್.ಅಶೋಕ್ : ಯಾವ್ಯಾವ ಸರ್ಕಾರದಲ್ಲಿ ಪೋಲೀಸ್ ಕಾನ್‌ಸ್ಟೇಬಲ್‌ಗಳ ವರ್ಗಾವಣೆ ಮಾಡಿದ್ದಾರೆಂಬುದು ನಮಗೂ ಕೂಡ ಗೊತ್ತಿದೆ.

(**ಗೊಂದಲ**)

ಶ್ರೀ ಹೆಚ್.ಸಿ.ಬಾಲಕೃಷ್ಣ : ವರ್ಗಾವಣೆ ಮಾಡಿ ಎಂದು ನಾವು ಒಂದು ಪತ್ರವನ್ನು ಸಹ ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಶೋಕ್ ಮತ್ತು ಮಾನ್ಯ ರೇವಣ್ಣನವರ ನಡುವಿನ ಪ್ರೀತಿ ಹೇಗಿದೆ ಎಂಬುದು ನನಗೆ ಗೊತ್ತಿಲ್ಲ.

ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಅಧ್ಯಕ್ಷರೆ, ಯಾರನ್ನು ಬದಲಾವಣೆ ಮಾಡಿದರೂ ಕೂಡ ಅದನ್ನು ನಿರ್ವಹಣೆ ಮಾಡಲು ಮಾನ್ಯ ರೇವಣ್ಣನವರು ಕೇಪಬಲ್ ಇದ್ದಾರೆ. ಯಾರು ಬಂದರೂ handle ಮಾಡುವ ಕೆಪಾಸಿಟಿ ಅವರಿಗೆ ಇದೆ. ಆದ್ದರಿಂದ, ಅವರಿಗೆ ಏನೂ ತೊಂದರೆ ಇಲ್ಲ.

ಶ್ರೀ ಸಿದ್ದರಾಮಯ್ಯ ; ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ, ಮಾನ್ಯ ಲಿಂಬಾವಳಿಯವರು ಆ ಕಡೆ ಹೋಗುವುದಿಲ್ಲವಂತೆ, ಆದ್ದರಿಂದ ಅವರೇ ಮಾಡಿಕೊಳ್ಳುತ್ತಾರೆ, ಅಷ್ಟೇ, ಈ ಮಾತನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಈ ರೀತಿ ವರ್ಗಾವಣೆ ಮಾಡುತ್ತಿದ್ದರೆ ಕಾರ್ಯಕ್ರಮಗಳು ಹೇಗೆ ಅನುಷ್ಠಾನವಾಗುತ್ತದೆ? ಮತ್ತೆ ಅದು ಹೇಗೆ growth ಆಗುತ್ತದೆ, ಹಾಗೆಯೇ ಕಾರ್ಯಕ್ರಮಗಳು ಹೇಗೆ ಜಾರಿಯಾಗುತ್ತವೆ? ಸರ್ಕಾರದಿಂದ ಬರುವ ಹಣ ನೇರವಾಗಿ ಅದರ ಫಲ ಕೆಳಗಡೆಯವರೆಗೆ ಹೇಗೆ ಅದು perculate ಆಗುತ್ತದೆ? ಈ ರೀತಿಯಾದಾಗ ಅದು ಖಂಡಿತಾ ಆಗುವುದಿಲ್ಲ. ಇವೆಲ್ಲಾ ನಿಮ್ಮ ಹತ್ತಿರ ಇರುವ ದೋಷಗಳು, ಇವುಗಳನ್ನು ತಿದ್ದಿಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ. ಇದನ್ನೆಲ್ಲಾ ತಾವು ಮಾಡಬೇಕು. ನಾನು ಅಧಿಕಾರದಲ್ಲಿದ್ದು ಈ ರೀತಿ ಮಾಡಿದ್ದರೆ ಅದು ಕೂಡ ತಪ್ಪು. ನಾನು ಹಣಕಾಸಿನ ಇಲಾಖೆ ಸಚಿವನಾಗಿದ್ದಾಗ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆ ನನ್ನ ನಿಯಂತ್ರಣದಲ್ಲಿತ್ತು. 5 ವರ್ಷ ಒಂದು ಸಾರಿ ಆನಂತರ ಮತ್ತೆ ಒಂದು ವರ್ಷ ಒಟ್ಟು 6 ವರ್ಷಗಳ ಕಾಲ ಆ ಇಲಾಖೆ ನನ್ನ ನಿಯಂತ್ರಣದಲ್ಲಿತ್ತು. ಆ ಇಲಾಖೆಯ ವರ್ಗಾವಣೆಯನ್ನು ಯಾವ ರೀತಿ ಮಾಡಿದ್ದೇನೆಂಬ ಲಿಸ್ಟ್ ತಂದು ನೋಡಿ. ಈ ಮಾತನ್ನು ನನ್ನ ಅನುಭವದಿಂದ ಹೇಳುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ : ಖಂಡಿತವಾಗಿ ಒಂದು ಮಾದರಿಯಾಗಿ ಆ ಇಲಾಖೆಯನ್ನು ತಾವು ನಡೆಸಿದ್ದೀರಿ.

ಶ್ರೀ ಸಿದ್ದರಾಮಯ್ಯ : ತಿಂಗಳಿಗೊಬ್ಬ ಅಧಿಕಾರಿಯನ್ನು ನಾನು ಬದಲಾಯಿಸಿಲ್ಲ. Executive ನಲ್ಲಿರತಕ್ಕಂಥವರನ್ನು non-executiveಗೆ ಮತ್ತು non-executive ನಲ್ಲಿರುವಂಥವರನ್ನು executiveಗೆ ಮಾತ್ರ ವರ್ಗಾವಣೆ ಮಾಡುತ್ತಿದ್ದೆ. That is why the revenue growth was 29%.

ಶ್ರೀ ಬಸವರಾಜ ಬೊಮ್ಮಾಯಿ : ನೀವು ಇಲಾಖೆಯನ್ನು ಬಹಳ ಮಾದರಿಯಾಗಿ ನಡೆಸಿದ್ದೀರಿ. You wanted only results. ಆ ಮಾದರಿಯಲ್ಲಿ ತಾವು ನಡೆಸಿದ್ದೀರಿ. ಈಗಲೂ ಕೂಡ ಕಮರ್ಷಿಯಲ್ ಇಲಾಖೆಯಲ್ಲಿ interfere ಆಗುತ್ತಿಲ್ಲ. ಆದ್ದರಿಂದ, revenue growth ಇದೆ.

SRI. SIDDARAMAIAH : It is not that I am accusing you. ಸಣ್ಣ ನೀರಾವರಿ ಇಲಾಖೆಯಲ್ಲಿ ಹೊಸ ಕೆಲಸಕ್ಕೆ 53 ಕೋಟಿ ರೂಪಾಯಿ ಕೊಡಲಾಗಿದೆ. ಆದರೆ, ಪೆಂಡಿಂಗ್ ಬಿಲ್‌ಗೆ 125 ಕೋಟಿ ರೂಪಾಯಿ ಇದೆ. ಈ ರೀತಿಯಾದರೆ ಹೇಗೆ ಕೆಲಸ ಮಾಡುವುದಕ್ಕೆ ಆಗುತ್ತದೆ? ನಮಗೆ ಹೆಚ್ಚುವರಿಯಾಗಿ ಒಂದು ಕೆಲಸ ಕೊಡಿ ಎಂದು ಹೇಳಿದರೆ ಅವರು ಎಲ್ಲಿಂದ ಕೊಡುವುದಕ್ಕೆ ಆಗುತ್ತದೆ?

ಶ್ರೀ ಬಸವರಾಜ ಬೊಮ್ಮಾಯಿ : ಹಿಂದೆ ಮಾಡಿರುವ ಸಾಲ ಸಾಕಷ್ಟು ಇದೆ.

ಶ್ರೀ ಸಿದ್ದರಾಮಯ್ಯ : ನಮ್ಮ ಸಾಲ ಎಲ್ಲಿದೆ? ನಿಮ್ಮಲ್ಲಿ ಅಲೊಕೇಷನ್ ಇಲ್ಲ. ಕಳೆದ ವರ್ಷ 750 ಕೋಟಿ ರೂಪಾಯಿ ಎಂದು ಬಜೆಟ್‌ನಲ್ಲಿ ಹೇಳಿದ್ದೀರಿ. ಇದರಲ್ಲಿ ಎಷ್ಟು ಖರ್ಚು ಮಾಡಲಾಗಿದೆ ಹೇಳಿ? ಹಾಗೆಯೇ, 2008–09ನೇ ಸಾಲಿನಲ್ಲಿ ಸಣ್ಣ ನೀರಾವರಿಗೆ ಎಷ್ಟು ಖರ್ಚು ಮಾಡಿದ್ದೀರಿ ಹೇಳಿ? ಸುಮ್ಮನೆ ಎಲ್ಲವನ್ನು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಬಸರವಾಜ ಬೊಮ್ಮಾಯಿ : ಸಣ್ಣ ನೀರಾವರಿ ಇಲಾಖೆಯ ಬಹಳಷ್ಟು ಕೆಲಸಗಳಿಗೆ ಹಣ ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ : ಏನೊ ಒಂದು ಹೇಳಿ, ನಮಗೇನು ಆಗಬೇಕು?

ಶ್ರೀ ಬಸವರಾಜ ಬೊಮ್ಮಾಯಿ : ಬೇರೇನು ನಾವು ಹೇಳುತ್ತಿಲ್ಲ.

SRI. SIDDARAMAIAH : It is the attitude of the Government.

ಶ್ರೀ ಬಸವರಾಜ ಬೊಮ್ಮಾಯಿ : ಬೇರೆ ಏನು ಹೇಳುತ್ತಿಲ್ಲ. This is the fact.

SRI. SIDDARAMAIH : You are not committd for rural development and for development of agriculture.

ಶ್ರೀ ಬಸವರಾಜ ಬೊಮ್ಮಾಯಿ : ತಾವು ಸಣ್ಣ ನೀರಾವರಿ ಇಲಾಖೆಯ ಇತಿಹಾಸ ತೆಗೆದು ನೋಡಿ.

ಶ್ರೀ ಸಿದ್ದರಾಮಯ್ಯ : ನನಗೆ ಗೊತ್ತಿರುವುದಕ್ಕೆ ನಾನು ಹೇಳುತ್ತಿದ್ದೇನೆ. ನನ್ನ ಸಲಹೆ ಬೇಡವೆಂದರೆ ನಾನು ಕುಳಿತುಕೊಳ್ಳುತ್ತೇನೆ. ನನಗೇನು ಆಗಬೇಕು?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : Excess work .. ಅಲೊಕೇಷನ್ ಕಡಿಮೆ ಆಗಿದೆ... ಆಯಿತು ಸಾರ್, ತಾವು ಮಾತನಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಹೇಳುವುದು, ನೀವು ಹೇಳುವುದು ಸರಿ ಹೋಗುವುದಿಲ್ಲ. ತಾವು ಆಮೇಲೆ ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ನಬಾರ್ಡ್‌ನಿಂದ 150 ಕೋಟಿ ರೂಪಾಯಿ ಬಂದಿದೆ. ಈ ವಿಷಯ ಹೇಳದೆ ಎಲ್ಲಾ ಬಂದಿದೆ ಎಂದು ಹೇಳುತ್ತಿದ್ದೀರಿ. ತಾವು ವಿಷಯ ತಿಳಿದುಕೊಂಡು ಮಾತನಾಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ : ನಬಾರ್ಡ್‌ನಿಂದ ಬಂದಿರುವ ಹಣದಲ್ಲಿ ಈಗಾಗಲೇ 80 ಕೋಟಿ ರೂಪಾಯಿಗಳಷ್ಟು ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗೆ ಹಾಕಿಕೊಂಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಅವರಿಗೆ ಹೇಳುವುದೇನೆಂದರೆ, ಈ ಪುಸ್ತಕ 2006ರ ಕೃಷಿ ನೀತಿ ಮತ್ತು ಈ ಪುಸ್ತಕ 2007ರ ಕೇಂದ್ರ ಸರ್ಕಾರದ ಕೃಷಿ ನೀತಿ. ಮತ್ತೆ ಈ ಪುಸ್ತಕ ಮಾನ್ಯ ಅಬ್ದುಲ್ ಕಲಾಂನವರು ಇಲ್ಲಿ ಬಂದು ಭಾಷಣ ಮಾಡಿದ ಪುಸ್ತಕ. ತಾವು ಈ ಪುಸ್ತಕಗಳೆಲ್ಲವನ್ನು ಸ್ವಲ್ಪ ಅಧ್ಯಯನ ಮಾಡಿ ಏನು ಮಾಡಬೇಕೆಂಬುದರ ಬಗ್ಗೆ ಒಂದು action plan ತೆಗೆದುಕೊಂಡು ಬನ್ನಿ. ಹಾಗೆಯೇ, ಅದಕ್ಕೆ What is your resource? ಎನ್ನತಕ್ಕಂಥದ್ದನ್ನು ಸಹ ತೆಗದುಕೊಂಡು ಬನ್ನಿ.

Resource ಎಲ್ಲಿ ಸಿಗುತ್ತದೆಂಬುದನ್ನು ಸಹ ಹುಡುಕಿ. ಈ ಕೆಲಸವನ್ನು ತಾವು ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ, It will be a futile exercise ಆಗುತ್ತದೆ. ನಾವು ಅಸೆಂಬ್ಲಿ ಕರೆದು ಚರ್ಚೆ ಮಾಡಿದೆವು ಎನ್ನುವ ರೀತಿಯಲ್ಲಿ ಸಾರ್ವಜನಿಕರಿಗೆ ಮೆಸೇಜ್ ಹೋಗುತ್ತದೆ. ಆದ್ದರಿಂದ, This is my sincere opinion. ಬೇಕಾದಷ್ಟು ಸಲಹೆಗಳನ್ನು ನಾವು ಕೊಡಬಹುದಾಗಿದೆ. ಆದರೆ, ಸಮಯ ಇಲ್ಲ. ಇನ್ನೊಂದು ದಿನ ಚರ್ಚೆಗೆ ಅವಕಾಶ ಕೊಡಿ. ಮತ್ತೆ ಅಷ್ಟೊರೊಳಗೆ ನೀವೊಂದು action plan ಮಾಡಿಕೊಂಡು ಬನ್ನಿ. ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಬಗ್ಗೆ ಒಂದು road map ಮಾಡಿಕೊಂಡು ತೆಗೆದುಕೊಂಡು ಬನ್ನಿ. Let us discuss. ಇದನ್ನು ಮಾಡದೆ ಹೋದರೆ, ಇದು ಸುಮ್ಮನೆ ತೋರಿಕೆಗೆ ಮಾಡಿದಂತೆ ಆಗುತ್ತದೆ. We are all coming from rural background. ನಾವೆಲ್ಲ ಹಳ್ಳಿಗಳಿಂದ ಬಂದಿದ್ದೇವೆ. ಹಳ್ಳಿಯಲ್ಲಿ ಕಷ್ಟಗಳು ಏನೆಂಬುದು ನಮಗೆ ಗೊತ್ತಿದೆ. ಹಳ್ಳಿಯಲ್ಲಿ ಸೊಳ್ಳೆಗಳಿಂದ ಕಚ್ಚಿಸಿಕೊಂಡು ಬೀದಿಯಲ್ಲಿ ಮಲಗಿಕೊಳ್ಳುತ್ತಿದ್ದೆವು. ರಾತ್ರಿ ಸಮಯದಲ್ಲಿ ನಿದ್ದೆ ಬಂದಾಗ ಒದ್ದು ಬಿಡುತ್ತಿದ್ದೆವು. ಬೆಳಿಗ್ಗೆ ನೋಡಿದಾಗ ಸೊಳ್ಳೆ ಕಚ್ಚಿಸಿಕೊಂಡಿರುವ ಜಾಗದಲ್ಲಿ ಗುಳ್ಳೆಗಳಾಗುತ್ತಿದ್ದವು. ಮತ್ತೆ ಜಗಲಿ ಮೇಲೆ ಮಲಗಿಕೊಂಡಾಗ ತಿಗಣೆಗಳ ಕಡೆಯಿಂದಲೂ ಸಹ ಕಚ್ಚಿಸಿಕೊಂಡಿದ್ದೇವೆ. ಹಳ್ಳಿಗಳಲ್ಲಿ ಹುಡುಗರ ಹತ್ತಿರ ಕೂರೆ ಎಂಬ ಹುಳುಗಳು ಕೂಡ ಇರುತ್ತಿದ್ದವು. ಇವೆಲ್ಲಾ ಸೇರಿಕೊಂಡು ನಮ್ಮನ್ನು ಕಚ್ಚುತ್ತಿದ್ದವು. ಆಗ ನಾವು ಅಂಗಿ, ಚಡ್ಡಿಯನ್ನು ಬಿಸಿನೀರಿನಲ್ಲಿ ಹಾಕಿ ಒಗೆದು ಆನಂತರ ಹಾಕಿಕೊಳ್ಳತಕ್ಕಂಥ ಪರಿಸ್ಥಿತಿ ಇತ್ತು. ಈ ಪರಿಸ್ಥಿತಿ ಹಳ್ಳಿಗಾಡಿನಲ್ಲಿ ಇವತ್ತೂ ಕೂಡ ಇದೆ. ಈಗ ಕೂರೆ ಹುಳುಗಳು ಇಲ್ಲವೆಂದು ಕಾಣುತ್ತದೆ. ಏಕೆಂದರೆ, ಈಗ ಸ್ನಾನವನ್ನು ಬೇಗ ಮಾಡಿ ಬಟ್ಟೆಗಳನ್ನು ಬದಲಾವಣೆ ಮಾಡಿಕೊಳ್ಳುವುದರಿಂದ ಕೂರೆಗಳು ಹೋಗಿವೆ. ಹಿಂದೆ ತಿಂಗಳುಗಟ್ಟಲೆ ಬಟ್ಟೆಗಳನ್ನು ಬಿಚ್ಚುತ್ತಿರಲಿಲ್ಲ. ನಾವುಗಳು ಹಳ್ಳಿಗಳಲ್ಲಿ ಹಬ್ಬದ ಸಂದರ್ಭದಲ್ಲಿ ಮಾತ್ರ ಅನ್ನ ಊಟ ಮಾಡುತ್ತಿದ್ದೆವು. ನಮ್ಮ ಮನೆಯಲ್ಲಿ ಏನು ಹೇಳುತ್ತಿದ್ದರೆಂದರೆ, 'ಹೊಟ್ಟೆ ತುಂಬಾ ಹಿಟ್ಟು, ಬಾಯಿ ತುಂಬಾ ಅನ್ನ' ಎಂದು ಹೇಳುತ್ತಿದ್ದರು. It was the situation. ಈಗ ನಾವೆಲ್ಲ 3 ರೂಪಾಯಿಗೆ ಅಕ್ಕಿ ಕೊಡುತ್ತಿದ್ದೇವೆ ಮತ್ತು ಬಡವರಿಗೆ ಕೂಲಿ ಸಿಗುವುದರಿಂದ ಊಟ ಮಾಡುತ್ತಿದ್ದಾರೆ. ಮತ್ತೆ ಕೇಂದ್ರ ಸರ್ಕಾರ ಜಾರಿಗೆ

ತಂದಿರುವ Food Security Act, Right to Education and Right to Work ನ್ನು ಜಾರಿಗೆ ತಂದಿದ್ದಾರೆ. ಇವೆಲ್ಲಾ ಬಹಳ ಮುಖ್ಯವಾದಂಥವುಗಳು. ನೀವೂ ಕೂಡ ಇಂಥವುಗಳನ್ನು ಮಾಡಿ. ನಾವು ಸ್ವಾಗತ ಮಾಡುತ್ತೇವೆ. ಗ್ರಾಮೀಣ ಭಾಗದ ಜನರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಿ ಅವರ quality of life improve ಆಗಬೇಕು. ಮಾನ್ಯ ಅಬ್ದುಲ್ ಕಲಾಂನವರು ಪುರ ಬಗ್ಗೆ ಹೇಳಿದ್ದಾರೆ. ಅಂದರೆ, ಕೋಸ್ಟಲ್ ಏರಿಯಾದಲ್ಲಿ 13 ಪುರಗಳನ್ನು ಮಾಡಿ ಎಂದು ಹೇಳಿದ್ದಾರೆ. ಆದರೆ, ತಾವು ಇಲ್ಲಿಯವರೆಗೆ ಒಂದು ಪುರವನ್ನಾದರೂ ಮಾಡಿದ್ದೀರಾ? ಇಡೀ ರಾಜ್ಯದಲ್ಲಿ ಒಟ್ಟು 200 ಪುರಗಳನ್ನು ಮಾಡಿ ಎಂದು ಹೇಳಿದ್ದಾರೆ. ಆದರೆ, ತಾವು ಒಂದನ್ನಾದರೂ ಮಾಡಿದ್ದೀರಾ?

ಶ್ರೀ ಹೆಚ್.ಡಿ.ರೇವಣ್ಣ : ಈಗ ಬೂಕನಕೆರೆಯಲ್ಲಿ ಮಾಡುತ್ತಿದ್ದಾರೆ. 39 ಕೋಟಿ ರೂಪಾಯಿ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ರೇವಣ್ಣನವರೆ, ಕೊನೇಪಕ್ಷ ಹೊಳೇನರಸೀಪುರದಲ್ಲಿಯಾದರೂ ಮಾಡಬೇಕಾಗಿತ್ತು. ಬೂಕನಕೆರೆಯಲ್ಲಿ ಮಾಡಲು ನಾನು ಶಿಫಾರಸ್ಸು ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬೂಕನಕೆರೆಯಲ್ಲಿಯಾದರೂ ಶಾಲಾ ಕಟ್ಟಡ ಮತ್ತು ಶೌಚಾಲಯವನ್ನಾದರೂ ಕಟ್ಟಿಸಲಿ. ಸುವರ್ಣಗ್ರಾಮವನ್ನಾದರೂ ಮೊದಲು ಮಾಡಿ. ಇದಕ್ಕೆ ಮೊದಲ ಕಂತಿನ ಹಣ ಕೊಟ್ಟಿರುವುದನ್ನು ಬಿಟ್ಟರೆ ಆನಂತರ ಕೊಟ್ಟಿಲ್ಲ. ಮೊದಲು 1204 ಹಳ್ಳಿಗಳನ್ನು ಆಯ್ಕೆ ಮಾಡಿದ್ದೀರಿ. ಆನಂತರ ನಮ್ಮ ಹತ್ತಿರ ಪತ್ರ ತೆಗೆದು ಕೊಂಡು ಎರಡು-ಮೂರು ಸಲ ಮಾಡುತ್ತೇವೆಂದು ಹೇಳಿದರೇ ಹೊರತು ಯಾವುದೇ ಕಾರ್ಯಕ್ರಮವನ್ನು ಇದುವರೆಗೂ ತೆಗೆದುಕೊಂಡಿಲ್ಲ. ಶಾಸಕರ ನಿಧಿಯನ್ನು 1.5 ಕೋಟಿ ರೂಪಾಯಿಗೆ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಹೇಳಿದರು. ಆದರೆ, ಕಳೆದ ವರ್ಷ ಕೇವಲ 50 ಲಕ್ಷ ರೂಪಾಯಿ ಮಾತ್ರ ಬಂತು. ಈ ವರ್ಷ 22.5 ಲಕ್ಷ ರೂಪಾಯಿ ಬಂದಿದೆ. ಈ ರೀತಿಯಾದರೆ ನಾವು ಜನರಿಗೆ ಏನು ಹೇಳಬೇಕು? ನಂಜುಂಡಪ್ಪನವರ ವರದಿಯಲ್ಲಿ ಏನು ಹೇಳಿದ್ದಾರೆ?

ಶ್ರೀ ಹೆಚ್.ಡಿ.ರೇವಣ್ಣ : ಕೆಲಸ ನಿಲ್ಲಿಸಿ ಎಂದು ಡೈರೆಕ್ಷನ್ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ರೆಗ್ಯುಲರ್ ಪ್ರೋಗ್ರಾಮ್ ಜೊತೆಗೆ..

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರು ತುಂಬಾ ಚೆನ್ನಾಗಿ ಮಾತನಾಡುವ ಶಕ್ತಿ ಇದೆ ಎಂದು ಶ್ರೀಮತಿ ಸೋನಿಯಾ

ಗಾಂಧಿಯವರು ಅವರನ್ನು ಅಲ್ಲಿ ಕೂರಿಸಿದ್ದಾರೆ. ಆದರೆ, ನೀವೇಕೆ ಮಾನ್ಯ ದೇವೇಗೌಡರ ಸಪೋರ್ಟ್ ತೆಗೆದುಕೊಂಡು ಮತ್ತೆ ಮತ್ತೆ ಅವರಿಗೆ ಸಪೋರ್ಟ್ ಮಾಡುವುದಕ್ಕೆ ಹೋಗುತ್ತಿದ್ದೀರಿ? ಈಗಾಗಲೇ ಒಂದು ಕಡೆ ಅವರನ್ನು ತೆಗೆದು ಹಾಕಿದ್ದೀರಿ. ಆದರೆ, ಈಗ ಮತ್ತೆ ಸಪೋರ್ಟ್ ಮಾಡುವುದಕ್ಕೆ ಹೋಗುತ್ತಿದ್ದೀರಿ. ಆಗ ಅವರಿಗೆ ನೀವು ಸಪೋರ್ಟ್ ಮಾಡದೆ ತೊಂದರೆ ಕೊಟ್ಟು ಈಗ ಸಪೋರ್ಟ್ ಮಾಡುವುದಕ್ಕೆ ಹೋದರೆ ಯಾವ ನ್ಯಾಯ?

ಶ್ರೀ ಸಿದ್ದರಾಮಯ್ಯ : ಅವರ ಸಪೋರ್ಟ್ ನನಗೇನು ಬೇಡ.

ಶ್ರೀ ಕೆ.ಎಸ್.ಈಶ್ವರಪ್ಪ : ನಿಮಗೆ ಅವರ ಸಪೋರ್ಟ್ ಬೇಡ. ಆದರೆ, ಅವರು ಬಿಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಅವರು ಬಿಡುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ : ಈಗ ಅವರಿಗೆ ನೀವು ಬೇಕು.

ಶ್ರೀ ಸಿದ್ದರಾಮಯ್ಯ : ಸದ್ಯಕ್ಕೆ ನಾನು ಅವರ ಸಹವಾಸಕ್ಕೆ ಹೋಗುವುದಿಲ್ಲ.

ನಂಜುಂಡಪ್ಪ ವರದಿ establish ಆಗಬೇಕು, Political Will ನ್ನು ತೋರಿಸಬೇಕು. ಇದನ್ನೆಲ್ಲಾ ಒಂದು action plan ಮಾಡಿ ತೆಗೆದುಕೊಂಡು ಬನ್ನಿ. ಒಂದು road map ಮಾಡಿ ತೆಗೆದುಕೊಂಡು ಬನ್ನಿ, ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡೋಣ. We will all co-operate. ಇನ್ನು ಮಾತನಾಡುವುದು ಇತ್ತು.

ಅಧ್ಯಕ್ಷರು : ಏನು ಮಾಡುವುದಕ್ಕಾಗುತ್ತದೆ.? 4.20 ಕ್ಕೆ ಪ್ರಾರಂಭ ಮಾಡಿ 4 ತಾಸು ತೆಗೆದುಕೊಂಡಿರುತ್ತೀರಿ.

ಶ್ರೀ ಸಿದ್ದರಾಮಯ್ಯ : ಇನ್ನು ಮಾನ್ಯ ಶಾಸಕರುಗಳು ಮಾತನಾಡಬೇಕಂತೆ, ಅವರಿಗೂ 5 ನಿಮಿಷ ಅವಕಾಶ ಕೊಡಬೇಕು. ದಯಮಾಡಿ ಈ ಸರ್ಕಾರ ನಾವು ಕೊಟ್ಟಿರತಕ್ಕಂಥ ಸಲಹೆಗಳನ್ನು ನಾವು ಹೇಳಿರತಕ್ಕಂಥ ಅಭಿಪ್ರಾಯಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಬಹಳ ಜನ ಒಳ್ಳೊಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ಒಳ್ಳೆಯ ಅನುಭವಗಳನ್ನು ಹೇಳಿದ್ದಾರೆ. ಇದೆಲ್ಲವನ್ನು ಕ್ರೋಢೀಕರಣ ಮಾಡಿ ಒಂದು action plan ತರಬೇಕು. ಅದಕ್ಕೆ ಬೇಕಾದಂಥ ಸಂಪನ್ಮೂಲ ಇನ್ನು 20 ವರ್ಷದಲ್ಲಿ ನಿಮ್ಮ vision ಏನು? ಇನ್ನು 10 ವರ್ಷದಲ್ಲಿ ನಮ್ಮ vision ಏನು? ಇದನ್ನು

ಮಾಡಿಕೊಂಡು ತೆಗೆದುಕೊಂಡು ಬನ್ನಿ, ಇನ್ನೊಂದು ಸಲ ಇದನ್ನು ಚರ್ಚೆ ಮಾಡೋಣ. ಅದೆಲ್ಲಾ ಮಾಡಿದರೆ ಇದನ್ನು ತಂದಿರುವುದಕ್ಕೂ ಚರ್ಚೆ ಮಾಡಿರುವುದಕ್ಕೂ ಒಂದು ಸಾರ್ಥಕವಾಗುತ್ತದೆ. ಇಷ್ಟನ್ನು ಹೇಳಿ ಇಷ್ಟೊಂದು ದೀರ್ಘಕಾಲ ಸಮಯವನ್ನು ಕೊಟ್ಟಿದ್ದೀರಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ 8.20 ಸಮಯವಾಯಿತು.

ಶ್ರೀ ಬಂಡೆಪ್ಪ ಕಾಶೆಂಪೂರ : ಮಾನ್ಯ ಅಧ್ಯಕ್ಷರೆ, ನನಗೆ ಕೇವಲ 5 ನಿಮಿಷ ಅವಕಾಶ ಕೊಡಿ, ಸಾಕು.

ಅಧ್ಯಕ್ಷರು : ಇದನ್ನು ಸದನಕ್ಕೆ ಬಿಡುತ್ತೇನೆ. ಎಲ್ಲಾ ಸದಸ್ಯರು ಯಾವ ರೀತಿ ಹೇಳುತ್ತಾರೆ, ಅದನ್ನು ಕೇಳೋಣ. ಬಹಳ ಜನ ಬಸ್ಸಿಗೆ, ಟ್ರೈನ್‌ಗೆ ಹೋಗಬೇಕೆಂದು ಹೇಳುತ್ತಿದ್ದಾರೆ.

ಶ್ರೀ ನೆ.ಲ. ನರೇಂದ್ರ ಬಾಬು : ಐದೇ ಐದು ನಿಮಿಷ ಜಾಸ್ತಿ ಇಲ್ಲ.

ಅಧ್ಯಕ್ಷರು : ನೋಡಿ, ನಾನು ಸದನಕ್ಕೆ ಬಿಟ್ಟು ಬಿಡುತ್ತೇನೆ. ನೀವು ನಡೆಸೋಣವೆಂದರೆ ನಡೆಸೋಣ. ನಂತರ ಒಬ್ಬರು ಸಮಯವಾಯಿತು ಎನ್ನುತ್ತಾರೆ, ಕೆಲವೊಬ್ಬರು ಬಸ್ಸಿಗೆ ಹೋಗಬೇಕು ಎನ್ನುತ್ತಾರೆ. ಆಗ ನಾನು ಏನು ಮಾಡಬೇಕು.? ನಾನು ತಯಾರಾಗಿದ್ದೇನೆ, ಎಲ್ಲಾ ಸದಸ್ಯರುಗಳ ಅಭಿಪ್ರಾಯವನ್ನು ಕೇಳಿ.

ಶ್ರೀ ಬಂಡೆಪ್ಪ ಕಾಶೆಂಪೂರ : ಎಲ್ಲರನ್ನು ಕರೆಸಿ ನಾವು ಮಾತನಾಡಬೇಕು.

ಅಧ್ಯಕ್ಷರು : ಎಲ್ಲರೂ ಇದರಲ್ಲಿಯೇ ಮಾತನಾಡಬೇಕೆಂದು ಏನೂ ಇಲ್ಲ. ನೋಡಿ 7.30 ರಿಂದ 8.00 ಗಂಟೆಗೆ ನಾನು ಮುಗಿಸುತ್ತಿದ್ದೆ. ಇಲ್ಲಾ, ಈಗ ಮುಗಿಸಿ ಬಿಡೋಣ. ಜೆಡಿಎಸ್ ಪಕ್ಷದಿಂದ 5 ತಾಸು ಮಾತನಾಡಿದ್ದೀರಿ. I have given 5 hours for JDS party.

ಶ್ರೀ ಬಂಡೆಪ್ಪ ಕಾಶೆಂಪೂರ : ನೀವು 5 ನಿಮಿಷ ನಮಗೆ ಟೈಮ್ ಹಚ್ಚಿಕೊಡಿ, ನಾವು ಜಾಸ್ತಿ ಕೇಳುವುದಿಲ್ಲ.

ಅಧ್ಯಕ್ಷರು : ಮಾನ್ಯ ನರೇಂದ್ರಬಾಬು ಮತ್ತು ನೀವು ಇಬ್ಬರು ಐದೈದು ನಿಮಿಷ ಮಾತನಾಡಿ ಬಿಡಿ. ಮಾನ್ಯ ನರೇಂದ್ರ ಬಾಬುರವರಿಗೆ ನೀವು ಮೊದಲು ಮಾತನಾಡಿ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ನಾವು ಕಾಯುತ್ತಿದ್ದೇವೆ.

ಅಧ್ಯಕ್ಷರು : ಮೊದಲು ಅವರದ್ದು ಮುಗಿಯಲಿ ತಡೆಯಿರಿ, ಆಮೇಲೆ ಪರಿಸ್ಥಿತಿ ನೋಡೋಣ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ವಿಶೇಷವಾದ ಅಧಿವೇಶನದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಕರೆದಂಥ ಅಧೀವೇಶನದಲ್ಲಿ ಭಾಗವಹಿಸಬೇಕು. ಮತ್ತು ನನ್ನ ಅಮೂಲ್ಯವಾದ ಸಲಹೆಯನ್ನು ಕೊಡಬೇಕೆಂದು ಬಹಳ ಕುತೂಹಲದಿಂದ ನಾನು ಭಾಗವಹಿಸಬೇಕೆಂದು ವಿನಂತಿಯನ್ನು ಮಾಡಿ ಕೊಂಡಿರುತ್ತೇನೆ.

ಶ್ರೀ ಹೆಚ್.ಹಾಲಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು) : ಬೆಂಗಳೂರಿನವರಿಗೆ ಗ್ರಾಮೀಣಾಭಿವೃದ್ಧಿ ಬಗ್ಗೆ ಏನು ಸಂಬಂಧ.?

ಶ್ರೀ ನೆ.ಲ. ನರೇಂದ್ರಬಾಬು : ಬೆಂಗಳೂರು ಸಿಟಿಯಲ್ಲಿರುವವರೆಲ್ಲರೂ ಬೆಂಗಳೂರಿನವರು ಎಂದು ಅಂದುಕೊಂಡು ಬಿಡುತ್ತಾರೆ. ಮಾನ್ಯ ಅಧ್ಯಕ್ಷರೆ, ಈ ಗ್ರಾಮೀಣ ಭಾರತ ಅಂದರೆ, ಬಹುಶಃ ಗ್ರಾಮೀಣ ಭಾರತವೇ ನಿಜವಾದ ಭಾರತವೆಂದು ಹೇಳಿದರೆ ತಪ್ಪಾಗಲಾರದು. Rural India is Real India. ಇವತ್ತು ಬಹಳ ಮುಖ್ಯ ಅಂತ ಹೇಳಿದರೆ, ಕೃಷಿ ಮತ್ತು ಕೃಷಿ ಆಧಾರಿತವಾ ಗಿರತಕ್ಕಂಥ ಗ್ರಾಮೀಣಾಭಿವೃದ್ಧಿಗೆ ಪರಸ್ಪರ ಅವಲಂಬಿತವಾಗಿರುವಂಥದ್ದು. ಅದಕ್ಕೋಸ್ಕರ ಅಂದು ಸರ್ವಜ್ಞ ಹೇಳಿರುವಂಥದ್ದು ಕೃಷಿ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಬಹುಶಃ ಕೃಷಿಯನ್ನು ಸರಿಯಾಗಿ ನೋಡಿಕೊಳ್ಳದೆ ಹೋದರೆ, ಈ ದೇಶ ಸರಿಯಾಗಿ ನಡೆಯುವುದಿಲ್ಲವೆಂದು ಆವತ್ತೇ ಸರ್ವಜ್ಞ ಹೇಳಿದ್ದಾನೆ. 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಲೇಸು, ಮೇಟಿಯಿಂ ರಾಟಿ ನಡೆದುದಲ್ಲದೆ, ದೇಶ ದಾಟುವೆ ಕೆಡುವು ಸರ್ವಜ್ಞ' ಇವತ್ತು ದೇಶ ಕೆಡಬೇಕಾದರೆ ಕಾರಣ ಇವತ್ತು ನಾವು ಸರಿಯಾಗಿ ದೇಶದಲ್ಲಿ ಮೂಲಭೂತ ವಾಗಿರತಕ್ಕಂಥ 'ದೇಶದ ಬೆನ್ನುಲುಬು ರೈತ' ಎನ್ನುವುದನ್ನು ನಾವು ಮನವರಿಕೆ ಮಾಡಿಕೊಳ್ಳದೆ ರೈತನ ಹಿತಾಸಕ್ತಿಯನ್ನು ಕಾಪಾಡದೆ ಇರುವುದರಿಂದ ಇವತ್ತು ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ಇವತ್ತು ವಲಸೆ ಬರತಕ್ಕಂಥದ್ದು, ಇವತ್ತು 85% ಭಾಗ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥವರು ಅದರಲ್ಲಿ 35 ಭಾಗ ನಗರ ಪ್ರದೇಶಕ್ಕೆ ವಲಸೆ ಬಂದಿರುವುದನ್ನು ನಾವು ಮನದಟ್ಟು ಮಾಡಬೇಕಾಗಿದೆ. ಬಹಳ ಮುಖ್ಯ ಇವತ್ತು ಗ್ರಾಮೀಣ ಯುವಕರ ಚಿತ್ತ ಯಾವ ಕಡೆ ಇದೆ ಎಂದರೆ ನಗರದತ್ತ. ಗ್ರಾಮೀಣ ಯುವಕನ ಚಿತ್ತ

ನಗರದತ್ತ, ನಗರದ ಜನರ ಚಿತ್ತ ಈ ದೇಶದತ್ತ. ನಗರ ಜನರ ಚಿತ್ತ ನಿವೇಶನದತ್ತ, ಈ ರಾಜಕೀಯ ಪಕ್ಷಗಳ ಚಿತ್ತ ಕೇವಲ ಚುನಾವಣೆ ಮತ್ತು ಮತದತ್ತ ಆಗಬಾರದು. ಈ ಒಂದು ವಿಚಾರ ಮಂಥನಕ್ಕೆ ಕರೆದಿರತ್ತಕಂಥ ಈ ಗ್ರಾಮೀಣ ಮತ್ತು ಕೃಷಿಯ ಬಗ್ಗೆ ವಿಶೇಷ ಸದನದಲ್ಲಿ ಇವತ್ತು ಚರ್ಚೆಯಾಗುತ್ತಿರುವಂಥದ್ದು ಬಹಳ ಮುಖ್ಯ. ಈ ಒಂದು ಅಧಿವೇಶನ ಕರೆದಿರತಕ್ಕಂಥದ್ದರ ಬಗ್ಗೆ ಇಲ್ಲಿ ಏನೇನು ಚರ್ಚೆಯಾಗುತ್ತವೆ, ಅದರ ನುಡಿ ಮತ್ತು ನಡೆ ಎರಡು ಸಹಕಾರವಾಗುವುದಕ್ಕೆ ಒಂದು Political Will and Bureaucratic Skill. ಇವೆರಡು ಇವತ್ತು ಸಂಯೋಜನೆ ಆಗುವುದು ಬಹಳ ಮುಖ್ಯ ಇದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಗಲೇ ನನ್ನ ಪಕ್ಕದಲ್ಲಿ ಒಬ್ಬರು ಹಿರಿಯರು ಕುಳಿತು ಕೊಂಡಿದ್ದರು, ನಾನು ಅವರಿಗೆ ಹೇಳಿದೆ, ಕೆರೆಗಳನ್ನು ಕಟ್ಟುವುದಕ್ಕೆ ನಾವು ಹೆಚ್ಚು ಒತ್ತನ್ನು ಕೊಡುತ್ತಿಲ್ಲ. ಕೆರೆಗಳು ನಾಶವಾಗುತ್ತಿರುವುದನ್ನು ನಾವು ಪದೇ ಪದೇ ನೋಡುತ್ತಿದ್ದೇವೆ. ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. STP ಯನ್ನು ಬೆಂಗಳೂರು ನಗರದಲ್ಲಿ ಹೇಗೆ Sewage treatment plant ಗಳನ್ನು ಮಾಡುತ್ತೇವೆ, ದಯವಿಟ್ಟು ಗ್ರಾಮೀಣ ಪ್ರದೇಶದಲ್ಲಿಯೂ ಸಹ ಕೆರೆಗಳಿಗೆ ಬಿಡತಕ್ಕಂಥ ಗ್ರಾಮಸಾರವನ್ನು ಆ ಗಲೀಜು ನೀರನ್ನು ಬಿಡುತ್ತೇವೆ, ಅದನ್ನು ನಿಲ್ಲಿಸಬೇಕು. ನನ್ನ ಜನ್ಮಸ್ಥಳವಾದ ನೆಲಮಂಗಲದಲ್ಲಿ ನಾನು ಕಂಡಂಥ ದೃಶ್ಯವನ್ನು, ನಾವು ಪ್ರತಿ ಬೇಸಿಗೆ ರಜೆಯಲ್ಲಿ ಕೆರೆಗಳಲ್ಲಿ ಕಳೆಯುತ್ತಿರುವಂಥ ದಿನಗಳಲ್ಲಿ ಇವತ್ತು ಈಜಾಡುವುದಕ್ಕೂ ಆಗುವುದಿಲ್ಲ. ಸಣ್ಣ ಮೀನುಗಳನ್ನು ಅಲ್ಲಿ ಕಾಣುವುದಕ್ಕಾಗುವುದಿಲ್ಲ. ಸುತ್ತಮುತ್ತಲೂ ತೋಟದಲ್ಲಿರತಕ್ಕಂಥ ಬಾವಿಗಳು ಎಲ್ಲಾ ಬತ್ತಿ ಹೋಗಿರತಕ್ಕಂಥದ್ದಾಗಿದೆ. ಇಡೀ ಗ್ರಾಮದ ಸಾರವೇ ಹೋಗಿ ಇವತ್ತು ಅಲ್ಲಿ ಬಸ್‌ಸ್ಟ್ಯಾಂಡ್ ಮಾಡುತ್ತಾರೆನ್ನುವುದನ್ನು ನಾನು ನೆಲಮಂಗಲದಲ್ಲಿ ಕೇಳಿದಾಗ ಮನಸ್ಸಿಗೆ ನೋವಾಗುತ್ತದೆ. ನಮಗೆ ಒಂದು ಕೆರೆಯನ್ನು ಕಟ್ಟುವುದಕ್ಕೂ ಸಾಮರ್ಥ್ಯವಿಲ್ಲ. ಆ ಒಂದು ಶಕ್ತಿ ಇವತ್ತು ಇಲ್ಲದೆ ಇರತಕ್ಕಂಥದ್ದರಲ್ಲಿ ಮಾನ್ಯ ಕಟ್ಟಾಸುಬ್ರಹ್ಮಣ್ಯ ನಾಯ್ಡುರವರು ಕೆರೆಗಳನ್ನು ಪುನಶ್ಚೇತನ ಮಾಡತಕ್ಕಂಥ ಒಂದು ಮಹತ್ವವಾದ ಒಂದು ಕಾರ್ಯವನ್ನು ಕೈಗೆತ್ತಿಕೊಂಡಿದ್ದಾರೆ. ಆದರೆ ಇವತ್ತು ಹಳ್ಳಿಗಳಲ್ಲಿ ಕೆರೆಗಳು ನಾಶವಾಗುತ್ತಿರುವಂಥದ್ದಕ್ಕೆ ನಾವು ಗಮನವನ್ನು ಹರಿಸಬೇಕು. ನಾವು ಹಿಂದೆ ಏನು ಹೇಳಿದ್ದೆವು, "ಊರಿಗೊಂಡು ಕೆರೆ, ಕೆರೆಗೆ ನದಿಯ ನೀರು" ಎನ್ನತಕ್ಕಂಥ ಏನೊಂದು concept ಇದೆ, ಅದರ

ಬಗ್ಗೆಯೂ ಸಹ ಹೆಚ್ಚು ಗಮನವನ್ನು ಹರಿಸತಕ್ಕಂಥದ್ದು ಅವಶ್ಯಕತೆ ಇದೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಕೃಷಿಯಲ್ಲಿ ಸಂಘಟಿತ ಮತ್ತು ಅಸಂಘಟಿತ ರೈತರು ಎಂದು ಇದ್ದಾರೆ. ಅಂದರೆ ಕೆಲವು ಬೆಳೆಗಳಿಗೆ ಬೆಲೆಗಳನ್ನು ನಿಗದಿ ಮಾಡತಕ್ಕಂಥ ಸಂಘಟಿತ ರೈತರುಗಳು ಇದ್ದಾರೆ. ಅದು ಕಬ್ಬು ಬೆಳೆಗಾರರು ಇರಬಹುದು, ಕಾಫಿ ಬೆಳೆಗಾರರು ಇರಬಹುದು ಅಥವಾ ಮತ್ತೊಂದು ಬೆಳೆಗಾರರು ಇರಬಹುದು. ಆದರೆ ಸಣ್ಣಪುಟ್ಟ ಅರ್ಧ ಎಕರೆ, 20, 30, 40 ಗುಂಟೆ ಜಮೀನು ಇಟ್ಟುಕೊಂಡಿರುವವರ ಪಾಡು ಹೇಳತೀರದು. ಒಂದೇ ಒಂದು ಸಣ್ಣ ಉದಾಹರಣೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಇವತ್ತು ಬೆಂಗಳೂರು ನಗರದಿಂದ ಸಾತನೂರು, ಚನ್ನಪಟ್ಟಣದ ಕಡೆಗೆ ತುಳಸಿಯನ್ನು ಬೆಳೆಯುತ್ತಾರೆ. ತುಳಸಿ ನಿಮಗೆ ಗೊತ್ತಿರಬಹುದು. ಇದನ್ನು ಬೆಂಗಳೂರಿನ SKR market ಹತ್ತಿರ ಮಾರುತ್ತಾರೆ ಸ್ವಾಮಿ. ಇದು ಇವತ್ತಿನದಲ್ಲ, ಇದನ್ನು ಮೂರು–ನಾಲ್ಕು ತಲೆಮಾರಿನಿಂದ ರೈತರು ಆ ಒಂದು ತುಳಸಿಯನ್ನು ಬೆಳೆಯುತ್ತಾರೆ. ಇವತ್ತಿನ ವರೆಗೂ ಅವರಿಗೊಂದು ಮಾರುಕಟ್ಟೆಯನ್ನು ಸೃಷ್ಟಿಮಾಡಿ ಕೊಡುವುದಕ್ಕಾಗಿಲ್ಲ. ಬೆಳಗಿನ ಜಾವ ಆ ತುಳಸಿಯನ್ನು ತರುತ್ತಾರೆ, ಫುಟ್‌ಪಾತ್‌ನಲ್ಲಿಟ್ಟುಕೊಳ್ಳುತ್ತಾರೆ, ಮಾರಾಟ ಮಾಡಿ ಊರಿಗೆ ಹೋಗುತ್ತಾರೆ. ಕನಿಷ್ಠ ಅಲ್ಲಿ ತುಳಸಿ ಬೆಳೆಯುತ್ತಿರುವಂಥ ರೈತರಿಗೆ, ನಮ್ಮ ವಿಶ್ವವಿದ್ಯಾನಿಲಯಗಳು ಇವೆ. ಆ ವಿಶ್ವ ವಿದ್ಯಾನಿಲಯಗಳ ಮುಖೇನ ಆ ಒಂದು ತುಳಸಿಯಲ್ಲಿ Oil content ಜಾಸ್ತಿ ಇರತಕ್ಕಂಥ ಒಂದು ತಳಿಯನ್ನು ಕೊಟ್ಟು ಅಲ್ಲಿಯೇ ಒಂದು ತುಳಸಿ ಆಯಿಲ್‌ನ್ನು ಮಾಡಿದರೆ, ಬಹುಶಃ ತುಳಸಿ ಬೆಳೆದ ರೈತ ಎಷ್ಟೊ ಉದ್ಧಾರವಾಗುತ್ತಾನೆ. ಬಹುಶಃ ಈ ಸಣ್ಣಪುಟ್ಟ ರೈತರ ಬಗ್ಗೆ ಎಲೆಹಂಬು ಅಥವಾ ತುಳಸಿ ಬೆಳೆಯತಕ್ಕಂಥವರು ಇರಬಹುದು. ನಾನು ಇನ್ನೊಂದು ಮಾತನ್ನು ಮಾರುಕಟ್ಟೆ ಬಗ್ಗೆ ಹೇಳುತ್ತೇನೆ. ಇದರ ಬಗ್ಗೆ ಹಲವಾರು ಜನರು ಮಾತನಾಡಿದ್ದಾರೆ. ನಾವು ಒಂದು ಸಲ ಸೇವಂತಿಗೆ ಹೂ ಅನ್ನು ಬೆಳೆದಿದ್ದೆವು, ಗೌರಿ ಹಬ್ಬಕ್ಕೆ ನೆಲಮಂಗಲದಿಂದ ತೆಗೆದುಕೊಂಡು ಬಂದಾಗ ಆಗಿರುವ ಅನುಭವವೆಂದರೆ, ಕೇವಲ 50 ಪೈಸೆ ಕೆ.ಜಿ. ಮಾರತಕ್ಕಂಥ ಪರಿಸ್ಥಿತಿ ಬಂತು. ಅದನ್ನು ನೋಡಲಾರದೆ ಮನಸ್ಸಿಗೆ ನೋವಾಗಿ ಕಾರ್ಡ್ ರೋಡಿನಲ್ಲಿರುವ ಎಲ್ಲಾ ಮನೆಗಳಿಗೆ ಹಂಚಿ ಬಿಟ್ಟೆವು. ಇವತ್ತು ಏಕೆ ಹೇಳುತ್ತಿದ್ದೇನೆಂದರೆ, ರೈತ ತಾನು ಬೆಳೆದಂಥ ಬೆಳೆಗೆ ತಾನು ಖರ್ಚು ಮಾಡಿರತಕ್ಕಂಥದ್ದನ್ನು ಕನಿಷ್ಟ

ಲಾಭ ಬೇಡ, ನಷ್ಟವಿಲ್ಲದೆ ಮಾರತಕ್ಕಂಥ ಒಂದು ಮಾರುಕಟ್ಟೆ ಇಲ್ಲ. ಬೆಂಗಳೂರು ನಗರದಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರು ಇದ್ದಂಥ ಕಾಲದಲ್ಲಿ ಬ್ಯಾಟರಾಯನಪುರದ ಹತ್ತಿರ ಒಂದು ಮಾರುಕಟ್ಟೆಯನ್ನು ಕಟ್ಟಬೇಕು ಎನ್ನುವುದರ ಬಗ್ಗೆ ಒಂದು ಶಂಕುಸ್ಥಾಪನೆ ಆಗಿತ್ತು. ಜಮೀನು acquire ಆಗಿತ್ತು. ಇವತ್ತು ಯಾವ ಸ್ಥಿತಿಯಲ್ಲಿದೆ ಎಂದು ಹೇಳಿದರೆ, ಬೇಕಾದಂಥ ಮಾರುಕಟ್ಟೆಯನ್ನು ನಾವು ನಿರ್ಮಾಣ ಮಾಡುತ್ತಿಲ್ಲ. APMC ಯಾರ್ಡ್ ನನ್ನ ಮತಕ್ಷೇತ್ರದ ವ್ಯಾಪ್ತಿಯಲ್ಲಿಯೇ ಬರುತ್ತದೆ. ಒಂದು ಈರುಳ್ಳಿ, ಆಲೂಗಡ್ಡೆ ಬ್ಯಾಗಿಗೆ ಒಬ್ಬ ರೈತ 12 ರೂ. ಗಳ ಕೂಲಿ ಕೊಡಬೇಕು. ಆರಿ ಲೋಡ್ ಮತ್ತು ಅನ್ ಲೋಡ್ ಮಾಡುವುದಕ್ಕೆ ಸಂಪೂರ್ಣವಾಗಿ ಹೇಗೆ ರೈತನ ಶೋಷಣೆ ಯಾಗುತ್ತದೆ. ಇದನ್ನು ಮಾಡತಕ್ಕಂಥದ್ದು ಬಹಳ ಮುಖ್ಯವಾಗಿದೆ. ಇವತ್ತು ನಮ್ಮ ಚಿಂತನೆ ಇದೆ, ಮೇಲ್ನೋಟಕ್ಕೆ ಕೃಷಿಯಾಗಿದ್ದರೂ ಸಹ ಒಳನೋಟಕ್ಕೆ ಅದು ರಾಜಕಿಯ ಕೃಷಿ ಆಗಿರಬಾರದು. ಇದು ಬಹಳ ದೂರದೃಷ್ಟಿಯಿಂದ ಈ ಪ್ರಯತ್ನ ಗ್ರಾಮೀಣ ಬದುಕನ್ನು ಹಸನು ಮಾಡಿ ಬಹುಶಃ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರತ್ಕಕಂಥ ರೈತಾಪಿ ವರ್ಗ, ಇವತ್ತು ರೈತವರ್ಗ ವ್ಯವಸಾಯ ಮಾಡುವುದರ ಬಗ್ಗೆ ಒಂದು ನುಡಿ ಇದೆ, "ವ್ಯವಸಾಯ ಮನೆ ಮಂದಿಯೆಲ್ಲಾ ಸಾಯ" ಎಂದು. ಇವತ್ತು ವ್ಯವಸಾಯ ಮಾಡುವುದಕ್ಕೆ ಜನ ಹೆದರತಕ್ಕಂಥ ಸ್ಥಿತಿ ಇದೆ. ಹೇಗಾದರೂ ಮಾಡಿ ನಮ್ಮ ಮಗ ಕ್ಲರ್ಕ್ ಆಗಿಯಾದರೂ ಇರಲಿ. ಇಲ್ಲಾ ಗಾರ್ಮೆಂಟ್ಸ್‌ನಲ್ಲಿಯಾದರೂ ಇರಲಿ, 3,000 ರೂ. definite income ಬರುತ್ತದೆ ಎನ್ನತಕ್ಕಂಥದ್ದು ಇದೆ.

(8-30 PM)

ರೈತ ಅವಲಂಬಿತವಾಗಿರತಕ್ಕಂಥ ಕುಟುಂಬಕ್ಕೆ ಒಂದು ನಿರ್ದಿಷ್ಟವಾದ ವರಮಾನ ಬರತಕ್ಕಂಥ ಸ್ಥಿತಿಯಲ್ಲಿ ಇಲ್ಲ. ನಾವು confidence create ಮಾಡಬೇಕೆಂದು ಹೇಳಿದರೆ ಅವರು ಬೆಳೆಯುವ ಬೆಳೆ ಅದಕ್ಕೆ ಸೂಕ್ತವಾಗಿರತ್ಕಕಂಥ ಮಾರುಕಟ್ಟೆ ಮಾಡುವ ನಮ್ಮ ಆಧುನಿಕ ತಂತ್ರಜ್ಞಾನ ಏನಿದೆ, IT, BT ಬಗ್ಗೆ ನಾವು ಮಾತನಾಡುತ್ತೇವೆ. ಇವರೆಲ್ಲರಿಗೂ ನಾವು ರಿಯಾಯಿತಿಯನ್ನು ಕೊಡುತ್ತೇವೆ. ಜಮೀನುಗಳನ್ನು ಅವರಿಗೆ ಕೊಡುತ್ತೇವೆ. ಆದರೆ ಮಾರುಕಟ್ಟೆಗೆ ಬೇಕಾದ ಜಮೀನು acquire ಮಾಡಿಕೊಡುವ ಕ್ರಿಯೆ ಆಗುವುದಿಲ್ಲ. ನಾನು ಈ ಸಮಯದಲ್ಲಿ ಸ್ಮರಣೆ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ. ಇವತ್ತು ಮೂಲಭೂತವಾಗಿ ಹೇಳುತ್ತೇನೆ. ಹಿಂದಿನ

ಸರ್ಕಾರಗಳಲ್ಲಿ ಮಾಡಿರತ್ತಕಂಥ ಒಂದು ಯಶಸ್ವಿನಿ ಯೋಜನೆ, ಆ ಯೋಜನೆಯಿಂದ ಬಹಳಷ್ಟು ರೈತಾಪಿ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ವಿಮೆ ಎಷ್ಟು ಕವರೇಜ್ ಆಗಿದೆ ಎನ್ನುವಂಥದ್ದು ಬಹಳ ಮುಖ್ಯ. ಗ್ರಾಮೀಣ ಪ್ರದೇಶದಲ್ಲಿ "ಭೂಮಿ" ಯೋಜನೆ ಇರಬಹುದು, ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮ ಇರಬಹುದು, ಸ್ತ್ರೀಶಕ್ತಿ ಸಂಘಗಳು ಇರಬಹುದು. ನಾನು ಹೇಳುತ್ತೇನೆ, ಗ್ರಾಮೀಣ ಬದುಕು ನಗರಕ್ಕೆ ವಲಸೆ ಬರುವುದನ್ನು ತಡೆಗಟ್ಟಲಿಕ್ಕೆ ಅದಕ್ಕೆ ಬೇಕಾಗಿರತ್ತಕಂಥ ಬೇರೆ ಬೇರೆ ಯೋಜನೆಗಳನ್ನು ಮಾಡಿಕೊಡುವಂಥದ್ದು ಬಹಳ ತೀರಾ ಅವಶ್ಯಕವಾಗಿದೆ. ಒಬ್ಬೊಬ್ಬರು ಅಂದರೂ ಬಹಳ ಮುಖ್ಯವಾಗಿ ನಾವು tackle ಮಾಡಬೇಕಾಗಿರುವುದು ನಮ್ಮ ರಾಜ್ಯದಲ್ಲಿ. ಈ ಪಂಚವಾರ್ಷಿಕ ಯೋಜನೆಯನ್ನು ಹೇಗೆ 1951 ರಲ್ಲಿ ಏನು **National Planning Commission constitute** ಆಯಿತು. ಅದರಲ್ಲಿ **emphasis** ಮಾಡಿದಂಥದ್ದರಲ್ಲಿ ಕೃಷಿ ಇರಬಹುದು. ತದನಂತರ **Growth of Industries** ಗೆ **emphasis** ಮಾಡಿದರು. ಹಾಗೇ ನಮ್ಮ ರಾಜ್ಯದಲ್ಲಿಯೂ ಸಹ ಕೇವಲ ಒಂದು ವರದಿಗಳನ್ನು ತೆಗೆದುಕೊಂಡು ಅದನ್ನು ದಮನ ಮಾಡತಕ್ಕಂಥದ್ದಲ್ಲ ಅಥವಾ ದಫನ್ ಮಾಡತಕ್ಕಂಥದ್ದು ಅಲ್ಲ, ಅದಕ್ಕೆ ಜೀವ ಕೊಡತಕ್ಕಂಥ long term vision ಇರಬೇಕು. ಇವೆಲ್ಲಾ ಆಗಬೇಕೆಂದರೆ, political consistency ಬಹಳ ಮುಖ್ಯ. ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡಿ ಹೇಳುತ್ತೇನೆ. ಮುಂದಿನ ದಿನಗಳಲ್ಲಾದರೂ ಈ ರಾಜ್ಯದಲ್ಲಿ ಒಬ್ಬ ಮುಖ್ಯಮಂತ್ರಿಯನ್ನು ನೇರವಾಗಿ ಆಯ್ಕೆ ಮಾಡುವಂಥ ಒಂದು ವ್ಯವಸ್ಥೆ ಬರಬೇಕು. ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳುತ್ತಿದ್ದರು. ಮುಖ್ಯಮಂತ್ರಿಯಾಗಲಿ ಅಥವಾ ಪ್ರಧಾನ ಮಂತ್ರಿಯಾಗಲಿ 5 ವರ್ಷದವರೆಗೆ political stability ಇದ್ದರೆ ಮಾತ್ರ ಅದು ಸ್ಥಿರವಾಗಿ ಇರುತ್ತದೆ. ಇಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಈ Presidential form of Government ಬರತಕ್ಕಂಥದ್ದು ಈ ದೇಶಕ್ಕೆ ಅವಶ್ಯಕತೆ ಇದೆ. 60 ವರ್ಷಗಳ ಕಾಲ ಈ ಒಂದು Parliamentary System of Democracy ಎನ್ನುವುದನ್ನು ನಾವು ಇವತ್ತು ಕಂಡಿದ್ದೇವೆ. ಇದು ಬದಲಾವಣೆ ಆಗಬೇಕು. ಇಲ್ಲದಿದ್ದರೆ ಸ್ಥಿರತೆ ಎಲ್ಲಿ ಇರುವುದಿಲ್ಲ, ಅಲ್ಲಿ ಒಂದು study growth ಇರುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

1991 ರ ನಂತರ ಆಗಿರುವಂಥ New Economic Policy ಆಗಲಿ, ಅಥವಾ ಇತ್ತೀಚೆಗೆ ಬಂದಿರುವಂಥ ಪಾಲಿಸಿಗಳು ಕೇವಲ ಪುಸ್ತಕದ ಬದನೆಕಾಯಿ ಆಗದೇ ಅದು ಕಾರ್ಯಾನುಷ್ಠಾನ ಆಗತಕ್ಕಂಥ ದಿಕ್ಕಿನಲ್ಲಿ ಚಿಂತನೆ ಆಗಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. 70,000 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಸಾಲವನ್ನು ಏನು ಮನ್ನಾ ಮಾಡಿತು, ಕೇವಲ ಸಾಲವನ್ನು ಮನ್ನಾ ಮಾಡುವುದರ ಜೊತೆಗೆ ಆ ರೈತನಿಗೆ ತನ್ನ ಕಾಲ ಮೇಲೆ ನಿಂತುಕೊಳ್ಳ ತಕ್ಕಂಥದ್ದು ಮತ್ತು ಇವತ್ತು ಏನಾಗುತ್ತದೆಂದರೆ, ಗ್ರಾಮೀಣ ಯುವಕರ ಬಗ್ಗೆ ನಾನು ಒಂದು ಮಾತನ್ನು ಹೇಳಿದೆ. ಗ್ರಾಮೀಣ ಪ್ರದೇಶದ ಯುವಕರ ಚಿತ್ತ ನಗರದತ್ತ, ಅವರು ಟೆಲಿವಿಷನ್ ಇನ್ನೊಂದನ್ನು ನೋಡುತ್ತಾರೆ. ಸಾಕಪ್ಪ ಇನ್ನು ಬೆಂಗಳೂರು ನಗರದಲ್ಲಿ ಬದುಕೋಣ. ಮಾನ್ಯ ಅಬ್ದುಲ್ ಕಲಾಂರವರು ಈ ಅಧಿವೇಶನದಲ್ಲಿ ಮಾತನಾಡುತ್ತಾ ಹೇಳಿದರು. ಗ್ರಾಮೀಣ ಬದುಕು ನಗರಕ್ಕೂ ಗ್ರಾಮೀಣ ಪ್ರದೇಶಕ್ಕೆ ಏನು ವ್ಯತ್ಯಾಸ ಇರಬಾರದು. ಇವತ್ತು ನಾವು ಗ್ರಾಮೀಣ ರೋಡ್‌ಗಳನ್ನು ನೋಡುತ್ತೇವೆ. ಅಲ್ಲಿರತಕ್ಕಂಥ ಕುಡಿಯುವ ನೀರಿನ ವ್ಯವಸ್ಥೆ ಇರಬಹುದು. ಶೌಚಾಲಯದ ವ್ಯವಸ್ಥೆಯ ಬಗ್ಗೆ ಶ್ರೀಮತಿ ಅನಿತಾ ಕುಮಾರಸ್ವಾಮಿಯವರು ಮಾತನಾಡುತ್ತಾ ಹೇಳಿದರು. ಇವತ್ತು ಶೇಕಡ 75 ರಷ್ಟು ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ಶೌಚಾಲಯದ ಒಂದು ವ್ಯವಸ್ಥೆ ಇಲ್ಲ. ಇವತ್ತು ನಾವು ಸುಧಾರಿತ ಸಮಾಜದಲ್ಲಿ ತಲೆಯನ್ನು ತಗ್ಗಿಸುವಂಥ ಸ್ಥಿತಿಯಲ್ಲಿದ್ದೇವೆ. ಒಂದು ಚಾಲೆಂಜಾಗಿ ಇಟ್ಟುಕೊಳ್ಳೋಣ. ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲ. ನಾನು ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. 224 ಜನ ಶಾಸಕರುಗಳು ಇದ್ದಾರೆ, ಕನಿಷ್ಟಪಕ್ಷ ಪಕ್ಷಾತೀತವಾಗಿ cutting across the party barriers ಒಂದು ಇಚ್ಛಾಶಕ್ತಿಯನ್ನು ವ್ಯಕ್ತಪಡಿಸಿ ಆ ಕ್ಷೇತ್ರಗಳಲ್ಲಿ ಈ ಒಂದು ಟಾರ್ಗೆಟ್ ಅನ್ನು reach ಮಾಡುತ್ತೇವೆನ್ನುವ ಒಂದು ಗುರಿಯನ್ನು ಇಟ್ಟುಕೊಳ್ಳಿ. ಆಗ ಮಾತ್ರ ಸಾಧಿಸುವುದಕ್ಕಾಗುತ್ತದೆ. ಇಲ್ಲಾ, ನೀವು ಒಂದು biased ಆಗಿ ಆಡಳಿತವನ್ನು ನಡೆಸುವಾಗ ಎಲ್ಲೋ ಒಂದು ಕಡೆಗೆ imbalanced growth ಆಗುತ್ತದೆ. ಆಗ there will not be total development, ಇದರ ಬಗ್ಗೆ ಚಿಂತನೆ ಮಾಡಬೇಕು. ದಯವಿಟ್ಟು ನಾನು ಚೀಫ್‌ವಿಪ್‌ರವರಿಗೆ ಹೇಳುತ್ತೇನೆ. ಶೃಂಗೇರಿ ದೂರ ಇಲ್ಲ, ದಯವಿಟ್ಟು ಈ ಒಂದು ಸಂದರ್ಭದಲ್ಲಿ ನಾವು ತಾಳ್ಮೆಯಿಂದ ಈ ಒಂದು ವಿಷಯದ ಬಗ್ಗೆ ಚರ್ಚೆಯಾಗುತ್ತಿದೆ. ಬಹುಶಃ ಅದರ ಬಗ್ಗೆ ನಾನು ಈ ಒಂದು ವಿಶೇಷವಾದ

ಸದನದಲ್ಲಿ ನನ್ನ ಅಮೂಲ್ಯವಾದ ಸಲಹೆಯನ್ನು ಕೊಡಬೇಕು. ಮಾನ್ಯ Transport Minister ಗೆ ಹೇಳುತ್ತೇನೆ. ನೀವು ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿ ಖರೀದಿ ಮಾಡಿರುವ ಅಂತಹ ಬಸ್ಸುಗಳು ಬೇಕಾಗಿಲ್ಲ. ಇನ್ನು ಮುಂದೆ ಸಾಮಾನ್ಯ ಜನಗಳು ಓಡಾಡತಕ್ಕಂಥ ಬಸ್ಸುಗಳಿಗೆ ಹೆಚ್ಚು ಒತ್ತನ್ನು ಕೊಡಿ. ಇವತ್ತಿನ ದಿವಸ ನನಗೆ ಹಲವಾರು ಪತ್ರಗಳು ಬಂದಿವೆ. ಏನು ಹೇಳುತ್ತಾರೆಂದರೆ, ಖಾಲಿ ಬಸ್ಸುಗಳು ಹೋಗುತ್ತಿರುತ್ತವೆ, ನಾವು ವಿದ್ಯಾರ್ಥಿಗಳು ಹಾಗೆ ನಿಂತಿರಬೇಕಾಗುತ್ತದೆಂದು ಹೇಳಿದರು. ಮಾನ್ಯ ಸಚಿವರಿಗೆ ಒಂದು ಮಾತನ್ನು ಹೇಳುತ್ತೇನೆ. ಖಾಲಿ ಬಸ್ಸುಗಳು ಓಡಾಡತಕ್ಕಂಥದ್ದನ್ನು ನಿಲ್ಲಿಸಿ, ತಮಿಳುನಾಡಿನಲ್ಲಿದೆ, ದೆಹಲಿಯಲ್ಲಿದೆ. ಸಾಮಾನ್ಯ ಜನರು ಓಡಾಡುವುದಕ್ಕಾಗದಿರುವ ಈ ದುಬಾರಿ ಬಸ್ಸುಗಳನ್ನು ಕಡಿಮೆ ಮಾಡಿ ಎನ್ನತಕ್ಕಂಥದ್ದನ್ನು ಹೇಳುತ್ತೇನೆ. ಇವತ್ತು ನಾನು ಒಂದು ಹೇಳುತ್ತೇನೆ.

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) : ನೀವು ನಾಳೆಯಿಂದ ಸಾಮಾನ್ಯರ ತರಹ ಡ್ರೆಸ್ ಮಾಡಿಕೊಂಡು ಬನ್ನಿ.

ಶ್ರೀ ನೆ.ಲ.ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ನಾಳೆ ಅವಶ್ಯಕತೆ ಬಂದಾಗ ನಾನು ಕಚ್ಚೆಪಂಚೆ ಹಾಕಿಕೊಂಡು ಬರುತ್ತೇನೆ. ಖಂಡಿತವಾಗಿ ನಾಳೆಯಿಂದ ಹಾಗೆ ಮಾಡೋಣ. ಗ್ರಾಮೀಣ ರೈತರಿಗೆ ಅವರ ಸಾಮಗ್ರಿಗಳನ್ನು ಮತ್ತು ಉತ್ಪನ್ನಗಳನ್ನು ತರುವುದಕ್ಕೆ ಉಚಿತವಾದ transport ಕೊಡುತ್ತೇವೆನ್ನುವ ಒಂದು ಸಂಕಲ್ಪವನ್ನು ಮಾಡಿ. ರೈತ ಇವತ್ತು ತಾನು ಬೆಳೆದ ತರಕಾರಿಯನ್ನು ಕೋಲಾರ ಕಡೆಯಿಂದ ಅಥವಾ ತುಮಕೂರು ಕಡೆಯಿಂದ ತರಬೇಕಾದರೆ ಎಷ್ಟು ಕಷ್ಟ ಇದೆ ಎಂದರೆ, ಅದು ಬಹಳ ಕಷ್ಟವಿದೆ. ಬೇರೆ ಬೇರೆ ತರಕಾರಿಗಳನ್ನು ತೆಗೆದುಕೊಂಡು ಬರುತ್ತಾರೆ, ಅವರಿಗೆ free transport ಸೌಲಭ್ಯವನ್ನು ಕೊಡತಕ್ಕಂಥದ್ದು ಆಗಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ಈ ಒಂದು ಸಂದರ್ಭದಲ್ಲಿ ಒಂದು ಹಳ್ಳಿ ಎಂದರೆ, ನನಗೆ ಗೊತ್ತಿರುವಂತೆ ಆ ಹಳ್ಳಿಗಳಿಗೆ ಸಂಪೂರ್ಣ ಸಂಪನ್ಮೂಲಗಳು ಇರುತ್ತಿದ್ದವು. ಒಂದು ಗೋಮಾಳ, ಸ್ಮಶಾನ, ಗುಂಡುತೋಪು, ದೇವರವನ, ಒಂದು ಕೆರೆ, ಕಲ್ಯಾಣಿ ಇರುತ್ತಿದ್ದವು. ಆದರೆ ಇವತ್ತು ಇವೆಲ್ಲವನ್ನು ನಾಶ ಮಾಡಿಬಿಟ್ಟು ಜಾನುವಾರುಗಳನ್ನು ಸಾಕಿದರೆ ಅವುಗಳು ಮೇಯುವುದಕ್ಕೆ ಒಂದು ಜಾಗವಿಲ್ಲ.

ಶ್ರೀ ಎನ್. ಜೀವರಾಜ್ (ಸರ್ಕಾರಿ ಮುಖ್ಯ ಸಂಚೇತಕರು) : ಮಾನ್ಯ ಅಧ್ಯಕ್ಷರೆ, ನೀವು ಕೇಳಿದ್ದು 5 ನಿಮಿಷ, 15 ನಿಮಿಷವಾಯಿತು. ಏಕೆಂದರೆ ಸಂಖ್ಯಾಬಲ ಕಡಿಮೆ ಇರುವುದರಿಂದ ಯೋಚನೆ ಮಾಡಿ ಮಾತನಾಡಿ.

ಶ್ರೀ ನೆ.ಲ.ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ನಾನು ಒಂದು ಸಲಹೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ರೈತರಿಗೆ ಉಚಿತವಾಗಿ ವಿದ್ಯುತ್ ಕೊಡುವಂಥದ್ದು ಆಗಬೇಕು. ಇದು ಆಗಬೇಕಾದರೆ, ಕನಿಷ್ಟಪಕ್ಷ ಗ್ರಾಮೀಣ ಪ್ರೇಶದಲ್ಲಿ ಇವತ್ತು ರೈತರ ಮಕ್ಕಳು ಇನ್ನಿತರರು ವಿದ್ಯಾಭ್ಯಾಸ ಮಾಡಬೇಕೆಂದರೆ ಆಗುತ್ತಿಲ್ಲ. ನಾನು ಮಾನ್ಯ ವಿಲಾಸ್‌ರಾವ್ ದೇಶಮುಖ್‌ಜೀ ಯವರ ಜೊತೆಯಲ್ಲಿ BHEL ಗೆ ಹೋಗಿದ್ದೆ. ಈ ಸೋಲಾರ್ ಕಾನ್ಸೆಪ್ಟ್‌ನ್ನು ನಮ್ಮ ಉಷ್ಣವಲಯದಲ್ಲಿರತಕ್ಕಂಥ ಪ್ರದೇಶದಲ್ಲಿ exploit ಮಾಡಿ, ಅದನ್ನು ಉಪಯೋಗಿಸಿಕೊಂಡು ಕನಿಷ್ಟ ವಿದ್ಯಾಭ್ಯಾಸ ಮಾಡಲಿಕ್ಕೆ ಆಗುತ್ತದೆ. ನೀರಿನ ಸಲುವಾಗಿ ಇವತ್ತು 200–300 ಅಡಿ ಬೋರ್‌ವೆಲ್‌ನ್ನು ತೆಗೆಯಬೇಕಾಗುತ್ತದೆ. ಈ ದಿಕ್ಕಿನಲ್ಲಿ ಪವರ್ ನ್ನು ಕೂಡ ಉಚಿತವಾಗಿ ಕೊಡಬೇಕೆಂದು ಹೇಳುತ್ತಾ, ಬೆಂಗಳೂರಿನವರಿಗೆ ಇಂಗ್ಲೀಷ್ ಮೀಡಿಯಂ ಶಿಕ್ಷಣ ಕೊಟ್ಟರೆ ಆಗುವುದಿಲ್ಲ. ಇವತ್ತು ಇಂಗ್ಲೀಷ್ ಮೀಡಿಯಂ ಸಲುವಾಗಿ ಹೆಸರಘಟ್ಟ ಮತ್ತು ನರಸಿಂಹರಾಜ ನಗರ ಕಡೆಗೆ ಹೋದರೆ ಅವರ ಮಕ್ಕಳನ್ನೆಲ್ಲಾ ಬೆಂಗಳೂರು ಕಡೆಗೆ ಕಳುಹಿಸಿರುತ್ತಾರೆ. ಅಲ್ಲಿ ಕೂಡ ನಮ್ಮ ಬೆಂಗಳೂರು ನಗರದ ಮಕ್ಕಳಿಗೆ ಸಿಗುವಂಥ ಶಿಕ್ಷಣವನ್ನು ಕೊಡಬೇಕು ಎನ್ನುವಂಥದ್ದನ್ನು ಕೇಳುತ್ತೇನೆ. ನನಗೆ ಈ ಒಂಧು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಕೊಟ್ಟ ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನನ್ನ ಮನಸ್ಸಿನಲ್ಲಿ ಇನ್ನು ಎಷ್ಟೊ ಸಲಹೆ ಗಳನ್ನು ಕೊಡಬೇಕೆಂದು ಇತ್ತು, ಆದರೆ ಸಮಯವನ್ನು ನಿಗದಿ ಮಾಡಿ ಕೊಂಡು ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ನಿಮಗೆ ಮತ್ತು ಸಹನೆಯಿಂದ ಕೇಳಿದ ಎಲ್ಲಾ ಹಿರಿಯ ಸದಸ್ಯರಿಗೆ ನನ್ನ ಕೃತಜ್ಞತೆಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ (ಬೀದರ ದಕ್ಷಿಣ) : ಮಾನ್ಯ ಅಧ್ಯಕ್ಷರೆ, ತಮಗೆ ತುಂಬಾ ಧನ್ಯವಾದಗಳು. ಏಕೆಂದರೆ, ಮಾನ್ಯ ಸದಸ್ಯರುಗಳ request ಮೇಲೆ ತಾವು ಇಷ್ಟು patience ನಿಂದ ಊರಿಗೆ ಹೋಗುವವರು ಇದ್ದರೂ ಕೂಡ ಇಲ್ಲಿ ಕುಳಿತಿದ್ದೀರಿ. ಆದರೆ ಇವತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಒಳ್ಳೆಯ ವಿಷಯ. ನಮ್ಮ ಕಡೆ ಅನ್ನುತ್ತಾರೆ, ದೇರ್ ಆಯಾ ದುರಸ್ಥ ಆಯಾ,

ಅಂದರೆ ಲೇಟಾದರೂ ಅವಕಾಶ ಸಿಕ್ಕಿದೆ. ಮಾನ್ಯ ಮುಖ್ಯಮಂತ್ರಿಗಳು ರೈತರ ಹೆಸರಿನ ಮೇಲೆ ಪ್ರಮಾಣ ವಚನವನ್ನು ಮಾಡಿ ಇವತ್ತು ರೈತರ ಸಲುವಾಗಿ ಒಂದು ವಿಶೇಷವಾದ ಅಧಿವೇಶನವನ್ನು ಕರೆದಿದ್ದಾರೆ. ಆ ನಿಟ್ಟಿನಲ್ಲಿ ಒಂದು ಸಂತೋಷ, ಆದರೆ ಒಂದೂವರೆ ವರ್ಷವಾದ ಮೇಲೆ. ನಾವು ಸಲಹೆಯನ್ನು ಕೊಡುವುದಕ್ಕೆ ಮುಂಚೆ ಒಂದು ಸಲಹೆಯನ್ನು ನಾವು ಕೇಳಬೇಕಾಗುತ್ತದೆ. ಒಂದೂವರೆ ವರ್ಷದಲ್ಲಿ ಈ ಸರ್ಕಾರ ಎಷ್ಟರಮಟ್ಟಿಗೆ ರೈತರ ಬಗ್ಗೆ ಚಿಂತನೆ ಮಾಡಿದೆ? ಏಕೆಂದರೆ, ಇವತ್ತು ಸಲಹೆಯನ್ನು ಕೇಳುತ್ತಿದ್ದಾರೆ, ಆ ಮಾತು ಬೇರೆ. ಆದರೆ ಕೆಲವು ಸಂದರ್ಭದಲ್ಲಿ ಗೊಬ್ಬರ ಸಿಗದಿರುವುದರಿಂದ ಗೋಲಿಬಾರ್ ಆಯಿತು. ನಮ್ಮ ಕಡೆ ಬರಗಾಲ, ಮಳೆಯಿಲ್ಲ, ಸರಣಿ ರೈತರ ಆತ್ಮಹತ್ಯೆ ಆಯಿತು. ಎಷ್ಟು ಜನ ಮಂತ್ರಿಗಳು ರೈತರು ಆತ್ಮಹತ್ಯೆ ಮಾಡಿಕೊಂಡಿರುವವರ ಮನೆಗಳ ಹತ್ತಿರ ಹೋಗಿ ಭೇಟಿಯಾಗಿದ್ದಾರೆ ಎನ್ನುವುದು ತಿಳಿಸಬೇಕು. ಎಲೆಕ್ಷನ್‌ನಲ್ಲಿ busy ಇದ್ದರೆ ವಿನಹ, ಬರಗಾಲ ಪ್ರದೇಶದಲ್ಲಿ ಎಲ್ಲಿ ಮೇವು ಬೇಕಾಗಿತ್ತು, ಅಲ್ಲಿಗೆ ಹೋಗಿ ಒಂದು review ಮಾಡಲಿಲ್ಲ, ಅಷ್ಟರಮಟ್ಟಿಗೆ ಯಾರು ಆಸಕ್ತಿಯನ್ನು ತೋರಿಸಲಿಲ್ಲ. ರೈತರ ಬಗ್ಗೆ ಚಿಂತನೆ ಮಾಡಿ ಸಲಹೆಗಳನ್ನು ಕೇಳುವುದಕ್ಕೆ ಸದನವನ್ನು ಕರೆದಿರುವುದಕ್ಕೆ ತಮಗೆ ಧನ್ಯವಾದಗಳು.

ಇವತ್ತು ಒಂದು ಮಾತನ್ನು ಹೇಳಬಯಸುತ್ತೇನೆ. ಸನ್ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಿದ್ದಾಗ ಗ್ರಾಮ ವಾಸ್ತವ್ಯ ಏಕೆ ಮಾಡಿದರು? ಅಲ್ಲಿ ರೈತರ ಮನೆಯಲ್ಲಿ ಮಲಗಿ ರೈತರ ಸಂಕಷ್ಟಗಳನ್ನು ರಾತ್ರಿ ಹಗಲು ಎಲ್ಲಾ ಕೇಳಿ ಕೆಲವು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಂಥ ಪ್ರಯತ್ನವನ್ನು ಅವರು ಮಾಡಿದರು. ಆಗ ತಾವೂ ಇದ್ದಿರಿ, ಇಲ್ಲವೆಂದಲ್ಲ, ನಿಮ್ಮ ರಾಷ್ಟ್ರಾಧ್ಯಕ್ಷರಾದ ಶ್ರೀ ರಾಜನಾಥ್‌ಸಿಂಗ್‌ರವರು ಕೂಡ ಬಂದು ಒಂದು ಕಿವಿ ಮಾತು ಹೇಳಿ ಹೋಗಿದ್ದಾರೆ. ನೀವು ನಿಜವಾಗಲೂ ಗ್ರಾಮಾಂತರ ಪ್ರದೇಶದ ಜನರಿಗೆ ಏನಾದರೂ ಕೆಲಸ ಮಾಡಬೇಕಾದರೆ ಗ್ರಾಮ ವಾಸ್ತವ್ಯ ಮಾಡಿ ಎಂದು ಹೇಳಿದ್ದನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಅದಕ್ಕೆ ನೀವು ದಯವಿಟ್ಟು ಮೊದಲು ಮುಖ್ಯಮಂತ್ರಿಗಳು ನೀವೆಲ್ಲಾ ಗ್ರಾಮ ವಾಸ್ತವ್ಯವನ್ನು ಮತ್ತೆ ಪ್ರಾರಂಭ ಮಾಡಿ ಅಲ್ಲಿ ನಿಜವಾದ ಪರಿಸ್ಥಿತಿ ಏನಿದೆ ಎಂಬುದನ್ನು ಕಂಡು ಹಿಡಿಯುವಂಥ ಪ್ರಯತ್ನವನ್ನು ನೀವು ಮಾಡಬೇಕು. ಆಮೇಲೆ ಈಗ ತಮಗೆ ಹೇಳಬೇಕಾದರೆ ಇವತ್ತು ಎರಡೆರಡು, ಏಕೆಂದರೆ ನಾನು ಕೂಡ ಆ

ಇಲಾಖೆಯಲ್ಲಿ ಕೆಲಸ ಮಾಡಿದ್ದೇನೆ. ಇವತ್ತು ರೈತ ಬೆಳೆದಂಥ ಬೆಳೆಗೆ ಒಳ್ಳೆಯ ರೀತಿಯಿಂದ ಬೆಲೆ ಸಿಗಬೇಕು, ಅದಕ್ಕೆ ನಾವು ಏನು ಮಾಡಬೇಕು? inward and forward ಎರಡರ ಬಗ್ಗೆ ನಾವು ಪ್ರಯತ್ನ ಮಾಡಿ ಯಾವ ರೀತಿ ಅದಕ್ಕೆ ಸಪೋರ್ಟ್ ಕೊಡಬೇಕೆಂಬ ನಿಟ್ಟಿನಲ್ಲಿ ನಾವು ಇಂದು ಚಿಂತನೆ ಮಾಡಬೇಕು. 2006 ರಲ್ಲಿ ಕರ್ನಾಟಕದ ಇತಿಹಾಸದಲ್ಲಿ ಕೇವಲ ಎರಡು ಬಾರಿ ಕೃಷಿ ನೀತಿ ತಂದಿರುವುದು. ಒಂದು ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಆಗ ಬೈರೇಗೌಡರು ಕೃಷಿ ಮಂತ್ರಿಯಾಗಿದ್ದರು. ಕುಮಾರಸ್ವಾಮಿಯವರ ಸಮಯದಲ್ಲಿ ನಾನು ಕೃಷಿ ಸಚಿವನಾಗಿದ್ದೆ. ಅಂದರೆ ಇಲ್ಲಿ ವಾಸ್ತವಾಂಶ ಹೇಳುತ್ತಿದ್ದೇನೆ, ಇದರಲ್ಲೇನು ಸುಳ್ಳು ಹೇಳುತ್ತಿಲ್ಲ. ಎರಡೂ ಸರ್ಕಾರದಲ್ಲಿ ಯಾರು ಮುಖ್ಯಮಂತ್ರಿಗಳು ಇದ್ದರು, ರೈತರ ಬಗ್ಗೆ ಎಷ್ಟು ಚಿಂತನೆ ಇದೆ ಎಂದು ಇವತ್ತು ಕಾಣಿಸುತ್ತದೆ. ಚಿಂತೆ ಮಾಡಿ, ಇವತ್ತು ನೀವು appreciate ಮಾಡಬೇಕು. ಇಡೀ ರಾಷ್ಟ್ರದಲ್ಲಿ 2006 ರಲ್ಲಿ ನಿಮ್ಮ ಸಹಕಾರ ಇತ್ತು, ನೀವು ಸಹ ಉಪ ಮುಖ್ಯಮಂತ್ರಿಯಾಗಿದ್ದಿರಿ, ನೀವು ಕೆಲವರು ಸಚಿವರಾಗಿದ್ದಿರಿ, ಇಲ್ಲವೆಂದು ಹೇಳುವುದಿಲ್ಲ. ಆದರೆ ಲೀಡರ್ ಕುಮಾರಸ್ವಾಮಿಯವರು ಆಗಿದ್ದರು. ಅವರ ನಾಯಕತ್ವದಲ್ಲಿ, 2006 ರಲ್ಲಿ ಸುಮಾರು ಆರು ತಿಂಗಳು ನಾನು ಕೃಷಿ ಸಚಿವನಾಗಿದ್ದೆ. ಸುಮಾರು ಆರು ತಿಂಗಳು ಎಲ್ಲಾ ಅಧಿಕಾರಿಗಳು, ಐದು ಕಮಿಟಿಗಳು ಆ ಸಮಿತಿಯ ತಜ್ಞರು, ನಾನು ಸ್ವತಃ ನಮ್ಮ ಕೃಷಿಕ ಸಮಾಜದ ಎಲ್ಲಾ ಅಧ್ಯಕ್ಷರೊಂದಿಗೆ ಸಭೆ, ಆಮೇಲೆ ಎಲ್ಲಾ ರೈತ ಸಂಘಗಳ ಮುಖಂಡರು, ಪುಟ್ಟಣ್ಣರವರು ಇರಬಹುದು, ಕೋಡಿಹಳ್ಳಿ ಚಂದ್ರಶೇಖರ್ ಇರಬಹುದು, ಶಾಂತಕುಮಾರ್ ಇರಬಹುದು, ಅವರೆಲ್ಲರನ್ನೂ ಕರೆಸಿ ರಾತ್ರಿ ಒಂದು ಗಂಟೆಯವರೆಗೆ ನಾವು ಇಲಾಖೆಯ ಕಛೇರಿಯಲ್ಲಿ ಸಭೆ ನಡೆಸಿದ್ದೇವೆ. ಇವತ್ತು ಸುಮಾರು ಅಧಿಕಾರಿಗಳು ಅದಕ್ಕೆ ಶ್ರಮವಹಿಸಿ ಒಂದು ಕೃಷಿ ನೀತಿಯನ್ನು 2006ರಲ್ಲಿ ಅಕ್ಟೋಬರ್‌ನಲ್ಲಿ ನಡೆದಿದೆ. ಅದನ್ನು ಸನ್ಮಾನ್ಯ ಮುಖ್ಯಮಂತ್ರಿಗಳವರಿಂದ ಬಿಡುಗಡೆ ಮಾಡಿಸಿದೆವು. ಆಗ ಸನ್ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಿದ್ದರು. ಇದೇ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬಿಡುಗಡೆ ಮಾಡಲಾಯಿತು, In India Karnataka is the first State to bring the comprehensive Agriculture policy. ಇದಕ್ಕೆ ತಮ್ಮ support ಕೂಡ ಇತ್ತು, ಬ್ಯಾಂಕ್ವೆಟ್ ಹಾಲ್‌ನಲ್ಲಿ ನಾವು ದೊಡ್ಡ ಪ್ರಮಾಣದಲ್ಲಿ ನಾವು ಬಿಡುಗಡೆ ಮಾಡಿದ್ದೇವೆ. ಮೊದಲನೇ ವರ್ಷವೇ ಆ ಒಂದು

ಪಾಲಿಸಿಯನ್ನು implement ಮಾಡುವಂಥ ಪ್ರಯತ್ನ ನಾವು ಮಾಡಿದ್ದೇವೆ. ಎರಡನೇ ವರ್ಷ ತಾವು ಬಂದಿರಿ, ಸರಣಿ ಆತ್ಮಹತ್ಯೆ ಆಯಿತು, ಆಗ ಕುಮಾರಸ್ವಾಮಿಯವರು ಎಲ್ಲಾ ಕಡೆ ಹೋಗಿ ರೈತರಿಗೆ ಧೈರ್ಯ ಕೊಟ್ಟರು, ಅಂಜಬೇಡಿ, ಸರ್ಕಾರವಿದೆ, ನಾವಿದ್ದೇವೆ, ನಿಮಗೆ ಸಹಾಯ ಮಾಡುತ್ತೇವೆಂದು ಹೇಳಿದರು. ಸ್ವಲ್ಪ ಕೇಳಿ, ನೀವು ಒಂದೂವರೆ ವರ್ಷ ಏನು ಕಡೆದಿದ್ದೀರಲ್ಲಾ, ಕಥೆ ಕೇಳಬೇಕಾಗುತ್ತದೆ. ಪ್ರಮಾಣ ವಚನ ತೆಗೆದುಕೊಂಡ ಮರುದಿವಸವೇ ಕರೆದಿದ್ದರೆ ನಾವು ಈಗ ಮಾತನಾಡುತ್ತಿರಲಿಲ್ಲ, ಕೇಳಿ. ಅಂದು ರೈತರು ಆತ್ಮಹತ್ಯೆ ಮಾಡಿಕೊಂಡವರ ಮನೆಗೆ ಹೋಗಿ ಅವರನ್ನು ವಿಚಾರಿಸಿ, ರೈತರು ಸಂಕಷ್ಟದಲ್ಲಿದ್ದಾರೆಂದು 25,000–00 ರೂ.ಗಳ ಸಾಲ ಮನ್ನಾ ಆಯಿತು. ಮೊನ್ನೆ ಬೀದರ್, ಗುಲಬರ್ಗಾದಲ್ಲಿ ಸುಮಾರು ಜನ ರೈತರು ಆತ್ಮಹತ್ಯೆ ಮಾಡಿಕೊಂಡರು, ಅವತ್ತಿನ ದಿವಸ ಯಾರೂ ಚಕಾರ ಎತ್ತಲಿಲ್ಲ, ನಾವು ಟಿ.ವಿ. ಮೀಡಿಯಾದಲ್ಲಿ ಹೇಳಿದ್ದೇವೆ, ಈ ಸರ್ಕಾರಕ್ಕೆ ಬದ್ಧತೆ ಇದ್ದರೆ ರೈತರ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಲಿ ಎಂದು. ಅದು ಆಗಲಿಲ್ಲ. ಆದರೆ ಇವತ್ತು ತಮಗೆ ಒಂದು ಮಾತನ್ನು ಹೇಳುತ್ತೇನೆ, ಅವತ್ತು ಅಷ್ಟೆಲ್ಲಾ ನೋಡಿಕೊಂಡು ಇವತ್ತು ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾಗಿರುವ ಶ್ರೀನಿವಾಸಮೂರ್ತಿಯವರೇನಿದ್ದಾರೆ, ಅವರ ನೇತೃತ್ವದಲ್ಲಿ 2007 ರಲ್ಲಿ ಒಂದು ಕಮಿಟಿ ಮಾಡಿ, ಆ ಕಮಿಟಿ ಮುಖಾಂತರ ಆ ಅಧಿಕಾರಿಗಳಿಗೆ 8 ದಿವಸಕ್ಕೊಂದು ಸಲ ಮೀಟಿಂಗ್ ಕರೆಸಿ ಸುಮಾರು 25 ಸಭೆಗಳು ಆಗಿ 2007 ರಲ್ಲಿ ಅಧಿಕಾರಿಗಳು ಒಂದು ಶಿಫಾರಸ್ಸು ಮಾಡಿದರು. ರೈತರ ಪರಿಸ್ಥಿತಿ ಯಾವ ರೀತಿ ಸುಧಾರಿಸುತ್ತದೆ, ಅದಕ್ಕೇನೇನು implement ಮಾಡಬೇಕು ಎಂದು. ಅದಕ್ಕೆ ಯಡಿಯೂರಪ್ಪನವರು ಉಪಮುಖ್ಯಮಂತ್ರಿಗಳಾಗಿದ್ದರು. ಹಾಗಾಗಿ ಇವತ್ತು 2006ರ Agricultural policy ಇವರ ಕೈಯಲ್ಲಿದೆ. ಅದು National Agricultural policy ಅನ್ನು ಆಧಾರವಾಗಿಟ್ಟುಕೊಂಡು ಮಾಡಿದ್ದೇವೆ. ಬಹಳಷ್ಟು ಕೇಂದ್ರ ಸರ್ಕಾರ ಸಹ ಇದುವರೆಗೆ National Agricultural policy ಅನ್ನು ಇದುವರೆಗೆ implement ಮಾಡಿಲ್ಲ. ಆದರೆ ಕರ್ನಾಟಕ ರಾಜ್ಯ ಡಾ: ಸ್ವಾಮಿನಾಥನ್‌ರವರ ಶಿಫಾರಸ್ಸು ಏನಿದೆ, ಅದು ಮೊದಲನೆಯದು, ನಮ್ಮ ರಾಜ್ಯದಲ್ಲಿ ನಾವು ಸುಮಾರು ಪಾಲಿಸಿಗಳನ್ನು implement ಮಾಡಿ agricultural policy ತಂದು Cabinet Approval ತೆಗೆದುಕೊಂಡಿದ್ದೇವೆ. ನೀವು ಆ ಪಾಲಿಸಿಯಲ್ಲಿ ಏನಾದರೂ implement

ಮಾಡಬೇಕಾದರೆ, ನಿಮಗೆ ಏನೂ ತಕರಾರು ಇಲ್ಲ, ಏಕೆಂದರೆ Already it is approved by the Cabinet. ಹಾಗಾಗಿ ಇವತ್ತು ನೀವು ಆ ಶಿಫಾರಸ್ಸನ್ನು ಓದಿ. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಸುತ್ತೇನೆ, ನೀವು ಉತ್ತರ ಕೊಡುವ ಮುಂದೆ ಆ ಮೂರು ಶಿಫಾರಸ್ಸುಗಳನ್ನು ಓದಿ ಉತ್ತರ ಕೊಡುವ ಸಮಯದಲ್ಲಿ ಹೇಳಿದರೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ಗ್ರಾಮ ಪಂಚಾಯತಿ ಲೆವೆಲ್‌ನಲ್ಲಿ ಗ್ರಾಮ ಪಂಚಾಯತ್ ಡೆವಲಪ್‌ಮೆಂಟ್ ಆಫೀಸರ್ಸ್ ಅನ್ನು ನೇಮಕ ಮಾಡುತ್ತಿದ್ದೀರಿ ಅದು ಬಹಳ ಸಂತೋಷ, ಆದರೆ ಇದಕ್ಕೆ ನನ್ನದೊಂದು ಸಲಹೆ ಇದೆ, ನಾವು ನಮ್ಮ ಅವಧಿಯಲ್ಲಿ ಒಂದು ಮಾತನ್ನು ಹೇಳಿದ್ದೇವೆ.

ಶ್ರೀ ಡಿ.ಎನ್. ಜೀವರಾಜ್ : ಬೇರೇನಿಲ್ಲ, ಬಂಡೆಪ್ಪನವರೇ, ಒಂದು ನಿಮಿಷ, ತಾವು ಎಲ್ಲವನ್ನು ಹೇಳಿ, ನಮಗೇನೂ ಬೇಸರವಿಲ್ಲ, ಆದರೆ ದಯಮಾಡಿ ಸ್ವಲ್ಪ ಸಮಯದ ಕಡೆ ನೋಡಿಕೊಂಡು ಮಾತನಾಡಿ.

ಶ್ರೀ ಬಂಡೆಪ್ಪ ಕಾಶಂಪೂರ್ : ಆಯಿತು, ಅಧ್ಯಕ್ಷರೆ, ಈ ರೈತರ ಸಮಸ್ಯೆಗಳೇನಿವೆ, ಅವರು ಯಾವ ರೀತಿ ಬೆಳೆಯುತ್ತಿದ್ದಾರೆ, ಅವರಿಗೆ ಏನೇನು ಸವಲತ್ತುಗಳು ಬೇಕು, ಇಂಥವೆಲ್ಲಾ Agricultural policy ಯಲ್ಲಿ ಸಾಕಷ್ಟಿವೆ, ನಾನು ಅವನ್ನೆಲ್ಲಾ ಹೇಳಿಕೊಂಡು ಹೋದರೆ ಎರಡು ಗಂಟೆಯವರೆಗೆ ಆಗುತ್ತದೆ. ಅದು ಬೇಡ, ಆದರೆ ಇವತ್ತು ಬೇಸಿಕ್ ಅಗ್ರಿಕಲ್ಚರ್ ಆಫೀಸರ್ ಅಂದರೆ consultant ಎಂದು ನೇಮಕ ಮಾಡಬೇಕೆಂದು ಮೊದಲು ನಾವು ಹೇಳಿದ್ದೆವು. ಇದಕ್ಕೆ Development Officer ಬದಲಿಗೆ ಅಲ್ಲಿ ಅದೇ ಪೋಸ್ಟ್‌ನಲ್ಲಿ agricultural graduates ಅನ್ನು ತಾವು ನೇಮಕ ಮಾಡಿದರೆ dual purpose serve ಆಗುತ್ತದೆ. ಏಕೆಂದರೆ ಇಲ್ಲವಾದರೆ ಮೊದಲನೇ ಕೆಲಸ ನಾವು ಮಾಡಬೇಕಾಗಿರುವುದು, ನಮ್ಮ ಆಫೀಸರ್ಸ್, ನಮ್ಮ ವಿಜ್ಞಾನಿಗಳು, ನಮ್ಮ ಅಧಿಕಾರಿಗಳು ಆ ರೈತರ ಹೊಲಗಳ ಮೇಲೆ ನಿಂತು ಅವರಿಗೆ ಸಲಹೆ ಕೊಡುವಂಥದ್ದಾಗಬೇಕು. ಹಾಗಾದರೆ ಇದು improve ಆಗುತ್ತದೆ. ಹಾಗಾಗಿ ದಯವಿಟ್ಟು ಮುಖ್ಯಮಂತ್ರಿಗಳು ಇವೆಲ್ಲಾ ಪಾಲಿಸಿಗಳ ಮೇಲೆ ಬೆಳಕು ಚೆಲ್ಲಿದರೆ ಒಳ್ಳೆಯದು ಎಂದು ಹೇಳಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಇನ್ನೊಂದು ವಿಷಯ, ಎಲ್ಲದಕ್ಕಿಂತ ಬೇಸಿಕ್, ನಾವು ಒಂದು ಕೆಲಸ ಮಾಡಿದ್ದೆವು, ಈ ತಾಲ್ಲೂಕು ಹಾಗೂ ಜಿಲ್ಲಾ ಪ್ಲಾನ್ ಅವೆರಡೂ ಬಹಳ ಮುಖ್ಯವಾದುದು, ಇವತ್ತು ಯಾವುದೇ ಒಂದು

ತಾಲ್ಲೂಕುಗಳಲ್ಲಿ ಅಲ್ಲಿಂದ agriculture ಯಾವ ರೀತಿ scenario complete ತೆಗೆದುಕೊಂಡು ಅದು India ದಲ್ಲಿಯೂ ಯಾರೂ ಮಾಡಿರಲಿಲ್ಲ, ಅದು ಆಫೀಸರ್ಸ್ ಬಳಿ ಕೊಳಕಾಗಿ ಬಿದ್ದಿದೆ. ಏಕೆಂದರೆ ಯಾವುದೇ ಅಗ್ರಿಕಲ್ಚರ್ ಬಗ್ಗೆ ನೀವು ಪ್ಲಾನ್ ಮಾಡಬೇಕಾದರೆ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯದ ಪ್ಲಾನ್ ಬೇಕಾಗುತ್ತದೆ, ಅದಕ್ಕೆ ಅದನ್ನು ಗಮನದಲ್ಲಿ ತೆಗೆದುಕೊಂಡು ಮುಂದಿನ ದಿನಗಳಲ್ಲಿ ಕೆಲಸ ಮಾಡಬೇಕೆಂದು ಹೇಳಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

ಡಾ: ಎಂ.ಸಿ.ಸುಧಾಕರ್(ಚಿಂತಾಮಣಿ) : ಅಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮೂಲವಾಗಿ ಈಗಾಗಲೇ ಬಹಳಷ್ಟು ವಿಚಾರಗಳನ್ನು ಎಲ್ಲಾ ಹಿರಿಯ ಶಾಸಕರು ಮತ್ತು ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ, ಆದರೆ ಮುಖ್ಯವಾಗಿರುವುದು ನಮ್ಮ ಬಂಡೆಪ್ಪ ಕಾಶಂಪೂರ್‌ರವರು ಹೇಳಿದ ಹಾಗೆ Agricultural policyಗಳನ್ನು ಹಲವಾರು ಬಾರಿ ತಂದಿದ್ದಾರೆ. ಇತ್ತೀಚೆಗೆ 2007 ರಲ್ಲಿ "Report of the Official Group of Government of Karnataka" ಎಂದು "Improving the economic condition of farmers" ಎಂಬ ಒಂದು ಪುಸ್ತಕವನ್ನು ಸಹ ತಂದಿದ್ದಾರೆ. ಇದಕ್ಕೆ ಹಲವಾರು ಸಲಹೆಗಳನ್ನು ಬಹಳಷ್ಟು ಹಿರಿಯ IAS ಅಧಿಕಾರಿಗಳು, ವೈಸ್ ಚಾನ್ಸಲರ್ಸ್ ಎಲ್ಲಾ ಸೇರಿ ಇದನ್ನು ತಂದಿದ್ದಾರೆ. ಗ್ರಾಮೀಣ ರೈತರ ಸಮಸ್ಯೆಗಳು ಯಾರಿಗೂ ಸಹ ಗೊತ್ತಿಲ್ಲದೇ ಇರುವಂಥ ಪರಿಸ್ಥಿತಿ ಏನೂ ಇಲ್ಲ. ಆದರೆ ಎಲ್ಲೋ ಒಂದು ಕಡೆ ರಾಜಕೀಯ ಇಚ್ಛಾಶಕ್ತಿ ಮತ್ತು ಅಧಿಕಾರಿಶಾಯಿಗಳಲ್ಲಿ ನಮ್ಮೆಲ್ಲರಿಗೂ ಬದ್ಧತೆ ಇಲ್ಲ ಎನ್ನುವುದನ್ನು ನಾವು ಇಲ್ಲಿ ಗಮನಿಸ ಬೇಕಾಗುತ್ತದೆ. ಸುಮಾರು ಇಷ್ಟು ವರ್ಷಗಳು ಕಳೆದರೂ ಇವತ್ತಿನವರೆಗೂ ನಾವು ಏನು ಪ್ರಗತಿಯನ್ನು ಸಾಧಿಸಬೇಕಾಗಿತ್ತು ಅದನ್ನು ಸಾಧಿಸಿಲ್ಲವೆಂದು ಕಾಣುತ್ತದೆ ಎಂದರೆ ಇದು ನಮ್ಮೆಲ್ಲರ ವೈಫಲ್ಯ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಿಮ್ಮ ಕಣ್ಮುಂದೆ ಅಂತರ್ಜಲ ಕುಸಿಯುತ್ತಿದೆ. 30 ವರ್ಷಗಳಿಂದ ಅಂದರೆ ನಾವು ಸಣ್ಣ ಮಕ್ಕಳಾಗಿದ್ದಾಗ ಬಾವಿಗಳಲ್ಲಿ ಸುಮಾರು 15–20 ಅಡಿಯಲ್ಲಿ ನೀರಿತ್ತು. ನಾನಾ ಕಾರಣಗಳಿಂದ ಆವತ್ತು ನಾವು ಎಚ್ಚೆತ್ತುಕೊಳ್ಳಲಿಲ್ಲ. ನಾವು ಬೋರ್‌ವೆಲ್ ವಿಷಯ ಮಾತನಾಡುವುದಾದರೆ ಇವತ್ತು ಒಂದು ಗ್ರಾಮದಲ್ಲಿ ಸುಮಾರು 50 ಬೋರ್‌ವೆಲ್‌ಗಳು ಇರತಕ್ಕಂಥ

ಉದಾಹರಣೆಗಳಿವೆ. ಯಾರೂ ಸಹ ತಿಳುವಳಿಕೆ ಇಲ್ಲದೇ ಹಾಗೂ ಇದನ್ನು ಗಮನಿಸದಿರತಕ್ಕಂಥ ಪರಿಸ್ಥಿತಿ ಏನೂ ಇಲ್ಲ. ನಮ್ಮ ಕಣ್ಮುಂದೆ ನಾವು ನೋಡುತ್ತಾ ನೋಡುತ್ತಾ ಇವತ್ತು ಸುಮಾರು ಸಾವಿರ ಅಡಿಗಳಿಗೆ ಅಂತರ್ಜಲ ಕುಸಿದಿದೆ ಎಂದರೆ ಇದು ನಮ್ಮೆಲ್ಲರ ಒಂದು ವೈಫಲ್ಯ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಇಷ್ಟಾದರೂ ಸಹ ಇವತ್ತಿನವರೆಗೂ ನಾವು ಯರೂ ಸಹ ಎಚ್ಚೆತ್ತುಕೊಂಡಿಲ್ಲ. ಹಲವಾರು ಕಾರ್ಯಕ್ರಮಗಳನ್ನು ನಾವು ರೂಪಿಸು ತ್ತಿದ್ದೇವೆ. ಆದರೆ ನಿರ್ದಿಷ್ಟವಾಗಿ asset creation ಮಾದರಿಯಲ್ಲಿ ಆ ಕಾರ್ಯಕ್ರಮಗಳನ್ನು ಮಾಡುವುದರಲ್ಲಿ ನಾವು ವಿಫಲರಾಗುತ್ತಿದ್ದೇವೆ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಉದಾಹರಣೆಗೆ, ಅಂತರ್ಜಲ ವೃದ್ಧಿ ಮಾಡುವಂಥದ್ದರಲ್ಲಿ medium terms, long terms programme ಗಳನ್ನು ನಾವು ಮಾಡಿಕೊಂಡಿದ್ದೇವೆ. ಉದಾಹರಣೆಗೆ, ನಮ್ಮ ಕೋಲಾರ ಮತ್ತು ಚಿಕ್ಕಬಳ್ಳಾಪುರ ಭಾಗ ಅಥವಾ ಬಯಲು ಸೀಮೆ ಭಾಗದ ಬಗ್ಗೆ ಹೇಳುವುದಾದರೆ ಬಹಳಷ್ಟು ಸಲ ವೇದಿಕೆಗಳಲ್ಲಿ ನಮ್ಮ ಮುಖಂಡರು ನೇತ್ರಾವತಿ, ಅಪ್ಪರ್ ಭದ್ರಾ ಎಂದು ಹೇಳಿ ಭಾಷಣ ಮಾಡುತ್ತಾರೆ. ಆದರೆ ಅದೆಲ್ಲಾ ಆಗುವಂಥ ಕಾಲ ಯಾವಾಗ? ಅದನ್ನು ಮಾಡುವುದಕ್ಕೆ ಇರುವಂಥ ಅಡಚಣೆಗಳೇನು ಎನ್ನುವುದರ ಬಗ್ಗೆ ನಾವು ಯಾರೂ ಯೋಚನೆ ಮಾಡುತ್ತಿಲ್ಲ. ಆದರೆ, ಮುಂದೆ ಇದರ ಜೊತೆಗೆ ನಾವು medium terms ಹಾಗೂ short terms programme ಗಳೆಂದು ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ನಾವು ನೇತ್ರಾವತಿ ಹಾಗೂ ಭದ್ರಾ ಯೋಜನೆಗಳೆಂದು ನೋಡುತ್ತಾ ಇದ್ದರೆ ಎಷ್ಟೋ ವರ್ಷಗಳಾಗತಕ್ಕಂಥ ಅವಕಾಶ ಇರುತ್ತದೆ. ಅದು ಆಗುವಷ್ಟರಲ್ಲಿ ನಾವು ಈಗ ಇರತಕ್ಕಂಥ ಸಮಯವನ್ನು ವ್ಯರ್ಥ ಮಾಡಿದ ಹಾಗೆ ಆಗುತ್ತದೆ. ಅದಕ್ಕಾಗಿ ಇವತ್ತು ಸಣ್ಣ ನೀರಾವರಿ ಇಲಾಖೆಯಿರಬಹುದು, Watershed ಇಲಾಖೆಯಿರಬಹುದು, ಅಲ್ಲಿ ಹಲವಾರು ಕಾರ್ಯಕ್ರಮಗಳಿವೆ. ಆದರೆ, ಅದನ್ನು ವ್ಯವಸ್ಥಿತವಾಗಿ ಯಾವ್ಯಾವ ಭಾಗದಲ್ಲಿ ಅಂತರ್ಜಲ ಕುಸಿಯುತ್ತಿದೆ, rock rolled areas ನಲ್ಲಿ ಎಷ್ಟು ಆದ್ಯತೆ ಕೊಡಬೇಕು ಎನ್ನುವುದರ ಬಗ್ಗೆ ಸರ್ಕಾರ ಆದ್ಯತೆ ಕೊಡುತ್ತಿಲ್ಲ. ಅದರ ಕಡೆಗೆ ನಾವು ಹೆಚ್ಚು ಗಮನ ಕೊಡಬೇಕಾಗುತ್ತದೆ. ಇದನ್ನು ನಾವು ಮಾಡದೇ ಹೋದರೆ ಇವತ್ತು ಏನು ಚರ್ಚೆ ಮಾಡಿದ್ದೇವೆ, ಅದಕ್ಕೆ ಯಾವುದೇ ರೀತಿಯಾದ ಫಲ ಸಿಗುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇವತ್ತು rain water harvesting ಎಂದು ಬಹಳಷ್ಟು ಕಡೆಗಳಲ್ಲಿ ನಾವು ಚರ್ಚೆ ಮಾಡುತ್ತೇವೆ. ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ rain water harvesting ಅನ್ನು ನಾವು ಮಾಡಬೇಕಾಗುತ್ತದೆ. ಇವತ್ತು ನಮ್ಮ ಭಾಗದಲ್ಲಿ ಬೋರ್‌ವೆಲ್ ಆಧಾರಿತವಾಗಿ ಕುಡಿಯುವ ನೀರನ್ನು ಉಪಯೋಗಿಸುತ್ತೇವೆ. ಗ್ರಾಮ ಪಂಚಾಯತಿಗಳಲ್ಲಿ ಏನು ವ್ಯವಸ್ಥೆ ಇದೆ ಎಂದರೆ automatic starter ಗಳನ್ನು ಹಾಕುತ್ತಾರೆ, ಕರೆಂಟ್ ಬಂದಾಗ ಆ ಮೋಟಾರ್‌ಗಳು ಚಾಲನೆಯಲ್ಲಿರುತ್ತವೆ, ಆ system ನಲ್ಲಿ ನೀರು ತುಂಬಿ ಹರಿಯುತ್ತಾ ವ್ಯರ್ಥವಾಗುತ್ತಿದ್ದರೂ ಜನರು ನೋಡಿಕೊಂಡು ಸುಮ್ಮನೆ ಇರುವ ಪರಿಸ್ಥಿತಿ ಇದೆ. ಅದೇ ನೀರು ಇಲ್ಲವೆಂದರೆ ಬಾಯಿ ಬಡಿದುಕೊಳ್ಳುತ್ತಾರೆ. ನೀರು ಇರುವಂಥ ಸಂದರ್ಭದಲ್ಲಿ ಅದನ್ನು ಮಿತವಾಗಿ ಬಳಸುವ ತಿಳುವಳಿಕೆ ಇದ್ದರೂ ಸಹ ಇವತ್ತು ಜನ ಬೇಜವಾಬ್ದಾರಿಯಿಂದ ಇದಕ್ಕೆ ಕಾರಣಕರ್ತರಾಗುತ್ತಿದ್ದಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಾಗಲೇ ನಾವು ಸಾರಿಗೆ ಸಚಿವರ ಜೊತೆ ಚರ್ಚೆ ಮಾಡಿದೆವು. ಅಂತರ್ಜಲ ಕುಸಿಯುವುದಕ್ಕೆ ಮುಖ್ಯವಾದ ಕಾರಣವೇನೆಂದರೆ ಮರಳು. ಯಥೇಚ್ಚವಾಗಿ ಮರಳನ್ನು ತೆಗೆಯುತ್ತಿರುವುದರಿಂದ ಇವತ್ತು ಅಂತರ್ಜಲ ನಮ್ಮ ಭಾಗದಲ್ಲಿ ಕುಸಿದಿದೆ. ಆದರೆ, ಇತ್ತೀಚಿನ 2–3 ದಿವಸಗಳಲ್ಲಿ ಲಾರಿ ಮಾಲೀಕರ ಒತ್ತಡಕ್ಕೆ ಸರ್ಕಾರ ಮಣಿದು ಇವತ್ತು ಅವರಿಗೆ ಮರಳನ್ನು ತೆಗೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಈಗಾಗಲೇ ಗೌರಿಬಿದನೂರು ಆಗಿರಬಹುದು ಅಥವಾ ನಮ್ಮ ತಾಲ್ಲೂಕಿನಲ್ಲಿರಬಹುದು ದಿನಕ್ಕೆ 200 ಲಾರಿಗಳು ಇವತ್ತು ಮರಳನ್ನು ತೆಗೆಯುವಂಥ ಒಂದು ಕೆಲಸ ಪ್ರಾರಂಭವಾಗಿದೆ. ಸರ್ಕಾರ ಇವತ್ತು ಏನು ಗ್ರಾಮೀಣಾಭಿವೃದ್ಧಿ ಹಾಗೂ ಕೃಷಿ ಬಗ್ಗೆ ಅಧಿವೇಶನ ಕರೆದಿರುವಂಥ ಸಂದರ್ಭದಲ್ಲಿ ಈ ರೀತಿಯ ತೀರ್ಮಾನ ಮಾಡಿದೆ ಎಂದರೆ ಸರ್ಕಾರಕ್ಕೆ ನಿಜವಾಗಲೂ ಪ್ರಾಮಾಣಿಕವಾದಂಥ ಕಳಕಳಿ ಇದೆಯೋ ಅಥವಾ ಇಲ್ಲವೋ ಎಂಬ ಸಂಶಯ ನಮ್ಮೆಲ್ಲರಿಗೂ ಮೂಡುತ್ತದೆ. ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರದಲ್ಲಿ ವಿನಂತಿ ಮಾಡುವುದು ಏನೆಂದರೆ ನಮ್ಮ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮರಳನ್ನು ತೆಗೆಯುವುದಕ್ಕೆ ಲಾರಿ ಮಾಲೀಕರ ಒತ್ತಡಕ್ಕೆ ಏನು ತಾವು ಮಣಿದಿದ್ದೀರಿ, ಆ ರೀತಿಯ ಒತ್ತಡಕ್ಕೆ ದಯವಿಟ್ಟು ತಾವು ಮಣಿಯಬಾರದು. ಲಾರಿ ಮಾಲೀಕರು ಕೇವಲ ಬೆರಳಣಿಕೆಯಷ್ಟು ಮಾತ್ರ ಇದ್ದಾರೆ. ಕೃಷಿ ಹಾಗೂ ಕುಡಿಯುವುದಕ್ಕೆ ನೀರು ಇಲ್ಲದೇ ಇರತಕ್ಕಂಥ ಲಕ್ಷಾಂತರ ಜನರಿದ್ದಾರೆ, ದಯವಿಟ್ಟು ಈ

ವಿಚಾರವನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮ ಇಂಧನ ಸಚಿವರು ಇಲ್ಲಿ ಇದ್ದಾರೆ. ವಿದ್ಯುತ್ ಕ್ಷಾಮ ಪರಿಸ್ಥಿತಿ ನಮಗೆಲ್ಲರಿಗೂ ಅರ್ಥವಾಗಿದೆ. ಆದರೆ, ಇವತ್ತು ನಮ್ಮ ಜಿಲ್ಲೆಯಲ್ಲಿರುವ ಸಮಸ್ಯೆ ಏನೆಂದರೆ, ಇವತ್ತು ನೀವು ಉಚಿತ ವಿದ್ಯುತ್ ಎಂದು ಮಾಡಿದ್ದೀರಿ, ನಮ್ಮ ಭಾಗದಲ್ಲಿ ಸಾವಿರ ಅಡಿಗಳಿಗೆ ನೀರನ್ನು ತೆಗೆಯುವ ಪರಿಸ್ಥಿತಿಯಲ್ಲಿ transformers ಮೇಲೆ ಇವತ್ತು ಹೆಚ್ಚು ಒತ್ತಡವಾಗುತ್ತಿದೆ. ಹೆಚ್ಚಿನ ಒತ್ತಡ transformers ಮೇಲೆ ಆಗುತ್ತಿರುವುದರಿಂದ transformers ವಿಫಲವಾಗುತ್ತಿವೆ. ಆದರೆ, ಎಷ್ಟು ವೇಗದಲ್ಲಿ ವಿಫಲವಾಗುತ್ತಿವೆ, ಅಷ್ಟೇ ವೇಗದಲಿ ರಿಪೇರಿ ಮಾಡಿಕೊಡುತ್ತಿರುವಂಥ ವ್ಯವಸ್ಥೆ ಇಲ್ಲ. ಆದ್ದರಿಂದ ಇವತ್ತು ನೀವು three phase ವಿದ್ಯುತ್ ಕೊಡುತ್ತಿರುವುದು ಕೇವಲ 6 ಗಂಟೆ. ಬೆಳಗಿನ ಜಾವ 3 ಗಂಟೆ ವಿದ್ಯುತ್ ಕೊಡುತ್ತೀರಿ ಹಾಗೂ ರಾತ್ರಿ ವೇಳೆಯಲ್ಲಿ 3 ಗಂಟೆ ವಿದ್ಯುತ್ ಕೊಡುತ್ತೀರಿ. ಆದರೂ ಸಹ ರೈತರು ಇವತ್ತು ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. transformers ಅನ್ನು ನೀವು ಇವತ್ತು ಸರಿಯಾದ ರೀತಿಯಲ್ಲಿ ಸರಬರಾಜು ಮಾಡುತ್ತಿಲ್ಲವಾದ್ದರಿಂದ ವಿದ್ಯುತ್ತಿನ ಸರಿಯಾದ ಬಳಕೆಯಾಗದೇ ಇವತ್ತು ರೈತರು ಸಂಕಷ್ಟದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಇವೆಲ್ಲವನ್ನು ನಾವು ಏನಾದರೂ ಸರಿಪಡಿಸುವುದಕ್ಕೆ ಆದರೆ ಖಂಡಿತ ತಾವು ಏನು ಇವತ್ತು ಪ್ರಯತ್ನಕ್ಕೆ ಕೈ ಹಾಕಿದ್ದೀರಿ, ಅದನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಒಂದು ಮುಖ್ಯವಾದ ವಿಚಾರವೇನೆಂದರೆ, ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟ ಹಾಗೆ ಸನ್ಮಾನ್ಯ ಕುಮಾರಸ್ವಾಮಿ ಯವರು ಮುಖ್ಯಮಂತ್ರಿಗಳಾಗಿದ್ದಾಗ ಟೊಮೊಟೊಗಳಿಗೆ ಬೆಂಬಲ ಬೆಲೆ ಘೋಷಣೆ ಮಾಡಿದರು. ನಾನು ಆ ಸಂದರ್ಭದಲ್ಲಿ ಹೇಳಿದೆ. ತಾವು ಬಹಳ ಅವೈಜ್ಞಾನಿಕವಾಗಿ ಘೋಷಣೆ ಮಾಡಿದ್ದೀರಿ. ದಂಧೆ ಮಾಡುವವರು ಇದಕ್ಕೆ ಕೈ ಹಾಕುತ್ತಾರೆ. ಸರ್ಕಾರಕ್ಕೆ ಬಹಳ ನಷ್ಟವಾಗುತ್ತದೆ ಎಂದು ನಾನು ಹೇಳಿದಾಗ ಅವರು ನಾನು ಈಗಾಗಲೇ ಘೋಷಣೆ ಮಾಡಿದ್ದೇನೆ, ಏನು ಮಾಡುವುದು ಎಂದು ಹೇಳಿದರು. ಅಂದು ನಮ್ಮ ಚಿಂತಾಮಣಿ APMC ಯಲ್ಲಿ ಸುಮಾರು ಎರಡೂವರೆ–ಮೂರು ಕೋಟಿ ರೂಪಾಯಿಗಳಿಗೆ ಬಿಲ್ ಮಾಡಿದರು. ಆದರೆ, ಮತ್ತೆ ಮೊನ್ನೆ ಹೊಸ ಸರ್ಕಾರ ಬಂದಾಗ ಘೋಷಣೆ ಮಾಡುತ್ತಾರೆ ಎನ್ನುವ

ಸುದ್ದಿ ಬಂದಾಗ ಸಂಬಂಧಿಸಿದ ಅಧಿಕಾರಿಗಳ ಹತ್ತಿರ ಹೋಗಿ ನಾನು ಚರ್ಚೆ ಮಾಡಿದೆ. ದಯವಿಟ್ಟು ಎಲ್ಲೆಲ್ಲಿ ಟೊಮೊಟೊ ಬೆಳೆದಿದ್ದಾರೆ ಎನ್ನುವುದನ್ನು imagine ಮಾಡಿಕೊಂಡು satellite ಮುಖಾಂತರ ಸಮೀಕ್ಷೆ ಮಾಡಿದರೆ ಸರ್ವೆ ನಂಬರ್‌ಗಳನ್ನು ಅದರ ಮೇಲೆ overlap ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದೆ. ಅದನ್ನು ಮಾಡಿ ಅದರ ಆಧಾರದ ಮೇಲೆ ಒಂದು ಎಕರೆಗೆ ಇಂತಿಷ್ಟು ಎಂದು fix ಮಾಡಿ ನೇರವಾಗಿ ಕೊಡಿ ಎನ್ನುವ ಮಾತನ್ನು ನಾನು ಹೇಳಿದೆ. ನಾವು ಮಾಡಿದ ಒಂದು ಗಂಟೆಗಳ ಚರ್ಚೆ ಸಮಯದಲ್ಲಿ ಅಧಿಕಾರಿಗಳು ಅವರದೇ ಆದಂಥ ವಾದವನ್ನು ಮಾಡಿದರು. ದಯವಿಟ್ಟು ಇದರಿಂದ ಕಷ್ಟವಾಗುತ್ತದೆ, ತೊಂದರೆಯಾಗುತ್ತದೆ ಹಾಗೂ ದುರುಪಯೋಗವಾಗುತ್ತದೆ, ನಿಜವಾಗಿ ಬೆಳೆದಂಥ ರೈತರಿಗೆ ಸಿಗುವುದಿಲ್ಲ ಎಂದು ಹೇಳಿದೆ. ಅಂದು ಅವರು ನನ್ನ ಮಾತಿಗೆ ಬೆಲೆ ಕೊಡಲಿಲ್ಲ. ಅವರದೇ ಆದಂಥ ರೀತಿಯಲ್ಲಿ ಹೇಳಿದರು. ನಾವು ಅಲ್ಲಿ entry check post ಮಾಡುತ್ತೇವೆ, ಸ್ಲಿಪ್ ಕೊಡುತ್ತೇವೆ ಎಂದು ಹೇಳಿದರು. ಇವತ್ತು ನನ್ನ ಚಿಂತಾಮಣಿ ತಾಲ್ಲೂಕಿನ APMC ಯಲ್ಲಿ 18 ಕೋಟಿ ರೂಪಾಯಿಗಳ ಬಿಲ್ ಮಾಡಿದರು. ನಮಗೆ ಹಣವನ್ನು ಕೊಡಿಸಿ ಎಂದು ಕೇಳಿದರು. ನಾನು ಇದರಲ್ಲಿ ಭಾಗಿಯಾಗುವುದಿಲ್ಲ ಎಂದು ಹೇಳಿದೆ. ಇದರಲ್ಲಿ ಮೋಸ ಮಾಡಿದ್ದಾರೆ, ಇದರಲ್ಲಿ ದಂಧೆ ಮಾಡತಕ್ಕಂಥವರು ಭಾಗಿಯಾಗಿದ್ದಾರೆ ಎಂದು ಹೇಳಿದೆ. ಕಡೆಗೆ ಇದನ್ನು ಎರಡೂವರೆ–ಮೂರು ಕೋಟಿಗಳಿಗೆ ಇಳಿಸುತ್ತಿದ್ದಾರೆ. ಇನ್ನೂ ಇವತ್ತಿಗೂ ಸಮಸ್ಯೆ ಬಗೆಹರಿದಿಲ್ಲ. ನಾವು ಏನಾದರೂ ಒಳ್ಳೆಯ ಸಲಹೆಗಳನ್ನು ಕೊಟ್ಟರೆ ಅದನ್ನು ತೆಗೆದುಕೊಳ್ಳಬೇಕಾದಂಥ ಜವಾಬ್ದಾರಿ ಅಧಿಕಾರಿಗಳ ಮೇಲೆ ಇರಬೇಕು. ನಾವು ಏಕೆ ಹೇಳುತ್ತೇವೆ ಎಂದರೆ, ಅನುಭವದಿಂದ ಈ ಮಾತುಗಳನ್ನು ಹೇಳುತ್ತೇವೆ. ಈ ರೀತಿಯಾದರೆ ನಾಳೆ ಬೆಂಬಲ ಬೆಲೆ ಕೊಡುವುದಕ್ಕೂ ಸರ್ಕಾರ ಮುಂದೆ ಬರುವುದಿಲ್ಲ. ಒಂದು ಕಡೆ ನಿಜವಾದ ರೈತರು ನಷ್ಟವನ್ನು ಅನುಭವಿಸುತ್ತಿದ್ದರೆ, ಮತ್ತೊಂದು ಕಡೆ ಈ ಅವಕಾಶವನ್ನು ಕಾಯ್ದು ಕುಳಿತಿರುವಂಥ ವ್ಯಕ್ತಿಗಳು ಇರುತ್ತಾರೆ. ಕಳೆದ ಬಾರಿ ಇದರ ಬಗ್ಗೆ ನಾನು ಬಹಳಷ್ಟು ಹೇಳಿದೆ. ದಯವಿಟ್ಟು ಇದರ ಬಗ್ಗೆ ಸರ್ಕಾರ ನಿರ್ದಿಷ್ಟವಾಗಿ ಗಮನ ಕೊಡಬೇಕಾಗುತ್ತದೆ. ಕೊನೆಯದಾಗಿ ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆ ಮತ್ತು ರಸ್ತೆಗಳ ಬಗ್ಗೆ ಹೇಳಬೇಕಾದರೆ ಇವತ್ತು ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆಯಲ್ಲಿ ಒಂದು ಕಿಲೋ ಮೀಟರ್‌ಗೆ

estimate ಮಾಡುವುದಕ್ಕೆ 25 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಆದರೆ, ಅದರಲ್ಲಿ ಹೆಚ್ಚಾಗಿ ಅರ್ಧ ಕಾಂಪೌಂಡ್ ಇಟ್ಟಿಗೆ ಮಣ್ಣು ಕೆಲಸ ಮಾಡುವುದಕ್ಕೆ ಹೆಚ್ಚಿನ ಅವಕಾಶವನ್ನು ಅದಕ್ಕೆ ಮಾಡಿಕೊಟ್ಟಿದ್ದಾರೆಯೇ ವಿನಃ asphalt surface thickness ಏನಿದೆ, ಅದಕ್ಕೆ ಮಾತ್ರ thickness ಹೆಚ್ಚಿಗೆ ಮಾಡಿಲ್ಲ. ಇದರ ಮೇಲೆ ಟನೇಜ್ ಓಡುವುದಿಲ್ಲ. 9 ಟನ್‌ಗಿಂತ ಜಾಸ್ತಿ ಹೋಗುವುದಿಲ್ಲ ಎಂದು ಹೇಳುತ್ತಾರೆ. ಅದನ್ನು favour ಇಟ್ಟುಕೊಂಡು ಮಾಡಬೇಕು. ಇದನ್ನು recommend ಮಾಡಬೇಕಾಗುತ್ತದೆ. ನಾವು ಹೇಳಬೇಕಾಗುತ್ತದೆ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಸುಧಾಕರ್‌ರವರೇ, ನೀನಾದರೂ ಸಮಯ ಓಡುತ್ತಿರುವುದನ್ನು ಅರ್ಥ ಮಾಡಿಕೊಳ್ಳಿ.

ಡಾ: ಎಂ.ಸಿ.ಸುಧಾಕರ್ : ಮೀಡಿಯಾದವರು ಇಲ್ಲವೆಂದು ನೀವು ಹೇಳಿದ್ದೀರಲ್ಲಾ. ನನ್ನದು ಒಂದು ಪೋಟೋ ತೆಗೆಯಲಿ ಎಂದು ಮಾತನಾಡುತ್ತಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನಿಮಗೆ ಸಲಹೆ ಕೊಡುತ್ತಿದ್ದಾರೆ ಕೇಳಿ. ಹೇಳುವುದನ್ನು ಕೇಳಿ.

(ಗೊಂದಲ)

ಡಾ: ಎಂ.ಸಿ.ಸುಧಾಕರ್ : ಸಣ್ಣ ನೀರಾವರಿ ಇಲಾಖೆಯಲ್ಲಿ SCP-TSP ಎನ್ನುವ ಯೋಜನೆಯಿದೆ. ಈ ಯೋಜನೆಯಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಬಹಳ ಅನುಕೂಲವಾಗುತ್ತದೆ. ಬಹುಶಃ ಅದರ ಕಡೆಗೆ ನಾವು ಇನ್ನೂ ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡತಕ್ಕಂಥ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರಿಗೆ ಏನಾದರೂ ಅವರು ಆರ್ಥಿಕವಾಗಿ ಮುಂದೆ ಬರುವುದಕ್ಕೆ, ವ್ಯವಸಾಯ ಮಾಡುವುದಕ್ಕೆ ಅವಕಾಶ ಮಾಡಿಕೊಡುವ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚಿನದಾಗಿ ಮಾಡಬೇಕು ಎಂದು ಹೇಳಿ, ಈಗಾಗಲೇ ಬಹಳಷ್ಟು ಮಾನ್ಯ ಸದಸ್ಯರುಗಳ ಒತ್ತಡ ಜಾಸ್ತಿಯಾಗುತ್ತಿದೆ. ನನಗೆ ಮಾತನಾಡುವುದಕ್ಕೆ ಸೋಮವಾರ ಅಥವಾ ಮಂಗಳವಾರ ಅವಕಾಶ ಮಾಡಿಕೊಡಿ ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸೇರುವುದು.

(ಸದನವು ಸಂಜೆ 9 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ: 14–09–2009ರ ಸೋಮವಾರ ಬೆಳಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

* * * * * *